ದೀಪಾವಳಿ ಸಂಚಿಕೆ

೧೯೬೬

ರೂ. ೨.೫೦

ಕರ್ಮವೀರ





ನೂತನ ದೀಪಾವಳಿ ಸರ್ವರಿಗೂ

ಲಾಭದಾಯಕವಾಗಲಿ






ಕೆಲಸ ಯಾವುದೇ ಇರಲಿ,

ಅದಕ್ಕೆ ಯೋಗ್ಯವಾದ

ಡಾಜ್ ಮತ್ತು ಫಾರ್ಗೋ

ಚಾಸೀಸ್ ಇವೆ



ದೀಪಾವಳಿಯ
ನಾಡಿಗೆ ಶುಭಾಶಯಗಳು

ನಿಮ್ಮ ದೈನಂದಿನ ಜೀವನದಲ್ಲಿ ಪ್ರತ್ಯೇಕ ಕ್ಷಣವೂ ಒಂದಲ್ಲ ಒಂದು ರೀತಿಯಲ್ಲಿ ಮೋಟರ್ ವಾಹನಗಳನ್ನು ಅವಲಂಬಿಸಿಕೊಂಡಿರುತ್ತದೆ; ಮತ್ತು ನಿತ್ಯದ ವ್ಯವಹಾರವೇ ಇರಲಿ, ಅಥವಾ ಬೇರೆ ಯಾವುದೇ ಕೆಲಸವಿರಲಿ, ಅದರಲ್ಲಿ ಡಾಜ್ ಇಲ್ಲವೇ ಫಾರ್ಗೋ ಟ್ರಕ್ ಕಾರ್ಯರತವಾಗಿರುತ್ತದೆ. ಅನಂತ ವೈಚಿತ್ರ್ಯಗಳಿಂದ ತುಂಬಿರುವ ಮಾನವ ಜೀವನದಲ್ಲಿ ನಾನಾ ಪ್ರಕಾರದ ಅವಶ್ಯಕತೆಗಳು ಎಷ್ಟೋ ಪಾಲು ಹೆಚ್ಚಿರುವುದರಿಂದ ಭಿನ್ನ ಭಿನ್ನ ಕೆಲಸಗಳಿಗೆ ಭಿನ್ನ ಭಿನ್ನ ವಾಹನಗಳು ಬೇಕಾಗುತ್ತವೆ. ಸಾಗಣೆಯ ನಮೂನೆ ಎಂತಹದೇ ಇರಲಿ ಅದಕ್ಕೆ ಯೋಗ್ಯವಾದ ಡಾಜ್ ಮತ್ತು ಫಾರ್ಗೋ ಚಾಸೀಸ್ ದೊರೆಯುವುದರಿಂದ ಈ ಬಹುವಿಧ ಅವಶ್ಯಕತೆಗಳನ್ನು ಪೂರೈಸುವ ಕೀರ್ತಿ ಅವುಗಳಿಗೆವೇ ಸಿಗುತ್ತದೆ.

PAL

ದಿ ಪ್ರೀಮಿಯರ್ ಆಟೋಮೊಬೈಲ್ಸ್ ಲಿಮಿಟೆಡ್, ಬೊಂಬಾಯಿ-70

SISTA'S-PAL-515 K

— ನಿಮ್ಮ ಸಮೀಪದ ಡೀಲರರೊಡನೆ ಸಂಪರ್ಕ ಬೆಳೆಸಿರಿ! —

ದಿ ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ ಲಿಮಿಟೆಡ್ ಧಾರವಾಡ

ದೀಪಾವಳಿಯ ಶುಭಾಶಯಗಳು

ಸಹಕಾರಿ ಸಾಹಿತ್ಯ ಸಂಘವು ಈವರೆಗೆ ಹೆಚ್ಚಿಸಿರುವ ಜ್ಞಾನಜ್ಯೋತಿಗಳು

೧	ಜನಪದ ಜೀವನ	... ಲೇಖಕರು :	ಶ್ರೀ ಬೆಟಗೇರಿ ಕೃಷ್ಣಶರ್ಮ
೨	ಬಾಳಬಟ್ಟೆ	... ,,	ಸಿಂಪಿ ಲಿಂಗಣ್ಣ
೩.	ಜನತಾ ಗೀತೆಗಳು	... ,,	ದಿ. ಡಾ. ಬಿ. ಎಸ್. ಗದ್ದಗೀಮಠ
೪.	ನಾಲ್ದೆಸೆಯ ನೋಟ	... ,,	ಡಾ. ಡಿ. ಎಸ್. ಕರ್ಕಿ
೫	ರಂಗ ರಂಜನ	... ,,	ಪಂಡಿತ ಸಿ. ವಾಯ್. ಕವಲಿ
೬.	ಕಾವ್ಯ ಮತ್ತು ಜೀವನ ಚಿತ್ರಣ	... ,,	ಪ್ರಿ. ಸ. ಸ. ಮಾಳವಾಡ
೭.	ರಾಜಕಾರಣದ ಮೂಲ ಸೂತ್ರಗಳು	... ,,	ಪ್ರೊ. ಗ. ಸ. ಹಾಲಪ್ಪ
೮.	ಸಹಕಾರಿ ಪ್ರಜಾಪ್ರಭುತ್ವ	... ,,	ಪ್ರೊ. ಎಸ್. ಎಲ್. ಶಿರೋಡಕರ
೯.	ಸಮುದ್ರದೀಚೆಯಿಂದ	... ,,	ಪದ್ಮಶ್ರೀ. ವ್ಹಿ. ಕೆ. ಗೋಕಾಕ
೧೦	ಒಂಟಿ ನಕ್ಷತ್ರ ನಕ್ಕಿತು	... ,,	ಶ್ರೀ. ನಿರಂಜನ್
೧೧	ಮಹಿಳಾ ಜೀವನದ ಸಮಸ್ಯೆಗಳು ಮತ್ತು ಪರಿಹಾರ	,,	ಶ್ರೀಮತಿ ಸರಸ್ವತಿದೇವಿ ಗೌಡರ
೧೨	ಸೊಬಗಿನ ಮನೆ	... ,,	ಶಾಂತಾದೇವಿ ಮಾಳವಾಡ
೧೩.	ರಜತ ರೇಖೆ (ಭಾಗ ೧)	... ,,	ಶ್ರೀ ಸಿದ್ದಯ್ಯ ಪುರಾಣಿಕ
೧೪.	ಭಾರತ ಸ್ವಾತಂತ್ರ್ಯದ ಬೆಳ್ಳಿಚುಕ್ಕಿ	... ,,	ಪ್ರೊ. ಗ. ಸ. ಹಾಲಪ್ಪ
೧೫.	ಸಮರ ದುಂದುಭಿ	... ,,	ಡಾ. ಆರ್. ಸಿ. ಹಿರೇಮಠ ಮತ್ತು ಎಂ. ಎಸ್. ಸುಂಕಾಪೂರ
೧೬.	ಯುಗ ಪ್ರವರ್ತಕ ಬಸವಣ್ಣ	... ,,	ಶ್ರೀ ಹಳಪೇಟಿ ಚಿಂತಾಮಣಿ
೧೭.	ಮಾಲಿನಿ	... ,,	ಪ್ರೊ. ಪಶುಪತಿ ರೆಡ್ಡಿ
೧೮	ರಜತ ರೇಖೆ ಭಾಗ ೨ (ಅಚ್ಚಿನಲ್ಲಿ)	... ,,	ಶ್ರೀ ಸಿದ್ಧಯ್ಯ ಪುರಾಣಿಕ
೧೯.	ಸದ್ಧರ್ಮಸಾರ	... ,,	ಶ್ರೀ ಕೆ. ಎಮ್. ದಾನಪ್ಪಗೌಡರ
೨೦.	ಮೊಳಿಗೆಯ ಮಾರಯ್ಯ	... ,,	ಶ್ರೀಮತಿ ಸರಸ್ವತಿದೇವಿ ಗೌಡರ

ಈ ಎಲ್ಲ ಪ್ರಕಾಶನದ ಪ್ರತಿಯೊಂದು ಹೊತ್ತಿಗೆಯ ಬೆಲೆ ರೂ ೧—೫೦ ಪೈಸೆ

೨೧.	ಕನ್ನಡ ಕವಿತ್ರಿಯರು	ಬೆಲೆ : ರೂ. ೧೦-೦೦ ... ಲೇಖಕರು :	ಡಾ. ಸರೋಜಿನಿ ಮಹಿಷಿ
೨೨.	ಚೆಲ್ವ ಕೋಗಿಲೆ	,, ,, ೩-೦೦ ... ,,	ಪ್ರೊ. ದೇವೇಂದ್ರಕುಮಾರ ಹಜಾರಿ

ನಮ್ಮಲ್ಲಿ ಸಹಕಾರಿ ಸಂಘಗಳಿಗೆ ಬೇಕಾಗುವ ಕೀರ್ದಿ ಮತ್ತು ಎಲ್ಲ ನಮೂನೆಯ ರಜಿಸ್ಟರ ಹಾಗೂ ಫಾರ್ಮುಗಳು ಯೋಗ್ಯ ಬೆಲೆಗೆ ಸಿಗುತ್ತವೆ. ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮೀಷನ್ ಕೊಡಲಾಗುವದು.

ಸಂಘದಿಂದ ಪ್ರತಿವರುಷ ನಾಲ್ಕು ಪುಸ್ತಕಗಳನ್ನು ಪ್ರಕಟಿಸುವೆವು. ಶೇರುದಾರರಿಗೆ ವಾರ್ಷಿಕ ಚಂದಾ ರೂ ೫—೦೦. ಶೇರುದಾರರಲ್ಲದವರಿಗೆ ವಾರ್ಷಿಕ ಚಂದಾ ರೂ ೬—೦೦

ಶೇರುದಾರರಾಗಬಯಸುವವರು ರೂ. ೨೫/– ಶೇರು ಹಣವೆಂದೂ, ರೂ. ೧/–ನ್ನು ಪ್ರವೇಶ ಧನವೆಂದು ತುಂಬಬೇಕಾಗುವದು. ಶೇರುದಾರರಾಗಲು ಮತ್ತು ಚಂದಾದಾರರಾಗಲು ತ್ವರೆಮಾಡಿರಿ.

ವ್ಹಿ. ಎಸ್. ಬಸವನಾಳ ಬಿ. ಎ. ಎಲ್ಎಲ್. ಬಿ.
ಚೇರಮನ್



ಪರಾಭವ ಸಂವತ್ಸರದ

ದೀಪಾವಳಿಯು

ನಾಡಿಗೆ ಹರುಷವನ್ನು ಹರಡಲಿ

ಭದ್ರಾವತಿ ಶಿವಮೊಗ್ಗಾ ಕೇಂದ್ರಸಗಟು ಸಹಕಾರ ಸಂಘ

ಲಿಮಿಟೆಡ್, ಭದ್ರಾವತಿ

ಶಾಖೆ: ಶಿವನೊಗ್ಗಾ   ಸ್ಥಾಪನೆ: ೨೮–೬–೧೯೬೩   ಪ್ರಧಾನ ಕಚೇರಿ: ಭದ್ರಾವತಿ

ಅಧಿಕೃತ ಬಂಡವಾಳ ರೂ. ೫,೦೦,೦೦೦   ಪಾವ್ತಿಯಾದ ಬಂಡವಾಳ ರೂ. ೧೪೬ ೧೦೦

ಸದಸ್ಯರು: ೫೧ ಸಹಕಾರಿ ಸಂಸ್ಥೆಗಳು ಮತ್ತು ಮೈಸೂರು ರಾಜ್ಯ ಸರ್ಕಾರ

	೧೯೬೩-೬೪	೧೯೬೪-೬೫	೧೯೬೫-೬೬
ವ್ಯಾಪಾರ	೯೨೩೮೩೨	೫೦೩೪೬೨೮	೬೦೯೫೦೨೬
ನಿವಳ ಲಾಭ	೬೯೮೧	೬೦೧೧೫	೧೨೮೮೧೦

ಬಳಕೆದಾರರಿಗೆ ಬೇಕಾದ ಎಲ್ಲಾ ತರಹೆ ನಿತ್ಯೋಪಯೋಗಿ ವಸ್ತುಗಳನ್ನೂ, ಆಹಾರ ಸಾಮಗ್ರಿಗಳನ್ನೂ ಸುಲಭ ಬೆಲೆಯಲ್ಲಿ ತನ್ನ ಸದಸ್ಯ ಸಹಕಾರ ಸಂಸ್ಥೆಗಳ ಮೂಲಕ ಜನತೆಗೆ ಒದಗಿಸುವುದರಲ್ಲಿ ಈ ಸಂಸ್ಥೆಯು ತನ್ನ ಹಿರಿಮೆಯನ್ನು ಗಳಿಸಿಕೊಂಡಿದೆ. ಕಾರ್ಯಕ್ಷೇತ್ರವು ಇದೀಗ ಪೂರ್ತಾ ಶಿವಮೊಗ್ಗಾ ಜಿಲ್ಲೆಗೆ ವಿಸ್ತರಿಸಲ್ಪಟ್ಟಿದ್ದು, ಸಹಕಾರಿ ಸಂಸ್ಥೆಗಳ ಮೂಲಕ ಜಿಲ್ಲೆಯ ಮೂಲೆ ಮೂಲೆಗೂ ತನ್ನ ಸೇವೆಯನ್ನು ವಿಸ್ತರಿಸಿ ಸಹಕಾರಿ ತತ್ವ ಮತ್ತು ಮನೋಭಾವನೆಗಳನ್ನು ಜನತೆಯಲ್ಲಿ ಮೂಡಿಸುವುದೇ ಈ ಸಂಸ್ಥೆಯ ಮಹೋದ್ದೇಶವಾಗಿರುತ್ತದೆ. ಪ್ರಾಥಮಿಕ ಬಳಕೆದಾರರ ಸಹಕಾರ ಸಂಸ್ಥೆಗಳ ಸದಸ್ಯರಾಗಿ ನಮ್ಮ ಸೇವೆಯನ್ನು ಹೆಚ್ಚು ಹೆಚ್ಚು ಪಡೆಯುವುದರ ಮೂಲಕ ಜನತೆಯ ಪ್ರೋತ್ಸಾಹವನ್ನು ಕೋರಲಾಗಿದೆ.

ಕಾರ್ಯನಿರ್ವಾಹಕ ಮಂಡಳಿ :

ಸದಸ್ಯರು: ಶ್ರೀ ಹೆಚ್. ವಿ. ರಾಜಗೋಪಾಲ್   ಶ್ರೀ ಸಿ. ಆರ್. ಈಶ್ವರಪ್ಪ

ಶ್ರೀ ಎಸ್. ಎಲ್. ಕೃಷ್ಣ   ಶ್ರೀ ಜಿ. ಡಿ. ದೇವೇಂದ್ರಪ್ಪ

ಶ್ರೀ ಪಿ. ಎನ್. ವೀರಪ್ಪ   ಅಸಿಸ್ಟೆಂಟ್ ರಿಜಿಸ್ಟ್ರಾರ, ಶಿವಮೊಗ್ಗ

ಟಿ. ಬಿ. ರಾಜಶೇಖರ
ಅಧ್ಯಕ್ಷರು

ಕೆ. ಅನಂತರಾಜಮಲ್ಲ
ಜನರಲ್ ಮ್ಯಾನೇಜರ್


ದೀಪಾವಳಿಯ

ಹಬ್ಬದ ಸಮಯಕ್ಕೆ ಸರಿಯಾದ

ಒಂದು ಉತ್ಕೃಷ್ಟ

ಕೊಡುಗೆ

ಉಷಾ ಹೊಲಿಗೆ ಯಂತ್ರಗಳು ಉತ್ತಮ ಸಂತೋಷಪ್ರದ ಕೊಡುಗೆಗಳಾಗಿವೆ. ಆಕೆಗೊಂದನ್ನು ಕೊಡಿರಿ; ಈ ಕೊಡುಗೆಗಿಂತ ಮಿಗಿಲಾದುದು ಬೇರೊಂದಿಲ್ಲವೆನ್ನುವುದನ್ನು ನೀವೇ ಮನಗಾಣುವಿರಿ. ಆಕರ್ಷಕ ಉಷಾ ಹೊಲಿಗೆ ಯಂತ್ರಗಳು ರಚನೆಯಲ್ಲಿ ಬಹು ಗಟ್ಟಿಮುಟ್ಟಾಗಿವೆ. ಉಷಾದಲ್ಲಿ ಹೊಲಿಯುವುದೆಂದರೆ ಅದೊಂದು ಉಲ್ಲಾಸ! ಅಂತೆಯೇ ಸಂಸಾರಕ್ಕೆಲ್ಲ ಅದು ಮಿತವ್ಯಯಕರವೂ ಅಹುದು. ನಿಮಗೊಪ್ಪಿದುದನ್ನು ಆರಿಸಿಕೊಳ್ಳಲು ವಿಶಾಲವಾದ ನಮೂನೆಗಳ ಹಾಗೂ ಬೆಲೆಗಳ ಶ್ರೇಣಿಯಿದೆ. ಉಷಾ ಹೊಲಿಗೆ ಯಂತ್ರಗಳು ಪ್ರಪಂಚದ 50 ಕ್ಕೂ ಮಿಕ್ಕ ದೇಶಗಳಲ್ಲಿ ಮಹಿಳೆಯರಲ್ಲಿ ಜನಪ್ರಿಯವಾಗಿವೆ. ಇಡೀ ದೇಶದಲ್ಲೆಲ್ಲ 2400 ಕ್ಕೂ ಜಾಸ್ತಿ ಮಾರಾಟ ಮತ್ತು ಸೇವಾ ಕೇಂದ್ರಗಳನ್ನು ಉಷಾ ಹೊಂದಿದೆ.



ಹಾಯಾಗಿ ಹೊಲಿಯಿರಿ
— ಹೊಲಿಯಿರಿ

ಉಷಾ

ಹೊಲಿಗೆ ಯಂತ್ರಗಳಿಂದ

ಒಂದು JAY ಜೇ ಉತ್ಪನ್ನ

ಜೇ ಇಂಜಿನಿಯರಿಂಗ್ ವರ್ಕ್ಸ್ ಲಿಮಿಟೆಡ್, ಕಲ್ಕತ್ತಾ-31

JESM/G/727

ಶುಭಾಶಯಗಳು

ದೀಪಾವಳಿಯು ನಮ್ಮೆಲ್ಲ ಗ್ರಾಹಕರಿಗೂ ಹಿತೈಷಿಗಳಿಗೂ ಶುಭದಾಯಕವಾಗಲಿ!!

ನಂಬಲರ್ಹವಾದ ಕಾರಖಾನೆ



ಬಾಬಾ ಆಟೋ ವರ್ಕ್ಸ

ಕೊಪ್ಪಿಕರ ರೋಡ (ಸಿಟಿ ಮೋಟರ ಸ್ಟೋರ್ಸಿನ ಹಿಂದೆ)
ಹುಬ್ಬಳ್ಳಿ ಫೋನ: C/o 3140

ಓವ್ಹರಾಲಿಂಗಿನಲ್ಲಿ ಪ್ರವೀಣರು:

• ಟಾಟಾ-ಮರ್ಸಿಡಿಸ್-ಬೆಂಝು • ಲೇಲ್ಯಾಂಡ್ • ಬೆಡ್‌ಫೋರ್ಡ • ಫಾರ್ಗೊ ಟ್ರಕ್ಕಗಳು ಮತ್ತು ಪಾರ್ಕಿನ್ಸ ಡಿಜಲ್ ಇಂಜಿನ್ ಮತ್ತು ಕಾರುಗಳನ್ನು ಖಾತ್ರಿಪೂರ್ವಕ ದುರುಸ್ತಿ ಮಾಡುತ್ತೇವೆ,

* ವಿನಯಶೀಲತೆ * ಕ್ಷಿಪ್ರವಾಗಿ ಗಮನ ಕೊಡುವಿಕೆ * ಮತ್ತು * ಡಿಲೆವ್ಹರಿ ಕೊಡುವದು ನಮ್ಮ ಮುಖ್ಯ ಧ್ಯೇಯ

ಸೂಚನೆ: ನಾವು ಎಲ್ಲ ತರದ ವಾಹನಗಳ ದುರುಸ್ತಿ ಕೆಲಸಗಳನ್ನು ಮಾಲಕರಿಗೆ ಸಮಾಧಾನವಾಗುವಂತೆ ವೇಳೆಗೆ ಸರಿಯಾಗಿ ಮಾಡಿ ಕೊಡುತ್ತೇವೆ.

ಮಾಲಕರು: **ಡಿ. ಜಿ. ಪೈ** (ಬಾಬಾ ಮೇಸ್ತ್ರಿ)

- ದೀಪಾವಳಿಯ ಶುಭಾಶಯಗಳು -

ಯಾವಾಗಲೂ **'ಪ್ರಭಾತ'** ಬ್ರ್ಯಾಂಡಿನ

ಮಾಲನ್ನೇ ಉಪಯೋಗಿಸಿರಿ

ಎಲ್ಲ ತರದ ಅವಲಕ್ಕಿ. ಗೋದಿ ರವಾ. ಮತ್ತು ಹಿಟ್ಟು, ಗೋವಿನ ಜೋಳದ ರವಾ ಮತ್ತು ಹಿಟ್ಟು, ಇಡ್ಲಿ ಮತ್ತು ಚಪಾತಿ ಸಲುವಾಗಿ ಸ್ಪೆಶಲ್ ಗೋವಿನಜೋಳದಲ್ಲಿ ತಯಾರ ಮಾಡಿದ ಹಿಟ್ಟು, ಬೇಸನ್ ಮತ್ತು ಶುದ್ಧ ಕಡ್ಲೆ ಹಿಟ್ಟು ಇವುಗಳಿಗಾಗಿ ಬರೆಯಿರಿ.

— ತಯಾರಕರು: —

ಶಾ ಫೇಲಾಭಾಯಿ ದೇವಜಿ ಮತ್ತು ಕಂಪನಿ

ನ್ಯೂ ಕಾಟನ್ ಮಾರ್ಕೇಟ್, ಹುಬ್ಬಳ್ಳಿ ಫೋನ್: 3267 ದಲಾಲ ಮಾರ್ಕೆಟ, ಧಾರವಾಡ ನಂ. ೧

ಆಫೀಸ ಫೋನ: 8476 * ಜಿನಿಂಗ ಫ್ಯಾಕ್ಟರಿ: 8182 * ರಾಯಿಸ್ ಮಿಲ್: 8368

ನಾಲಿಗಿಗೆ ರುಚಿ
ಮತ್ತು
ಮನಸ್ಸಿಗೆ ಆನಂದ!!



ನಿಮಗೆ
ಆನಂದದಾಯಕ ದೀಪಾವಳಿ
ಮತ್ತು
ಸುಖಮಯವಾದ
ಹೊಸ ವರ್ಷದ
ಲಾಭವಾಗಲಿ




ಎ. ಕಲ್ವರ್ಟ ಆ್ಯಂಡ ಕಂ
ಮುಂಬಯಿ-೧೦

ನಮ್ಮ ಗ್ರಾಹಕರಿಗೆ ದೀಪಾವಳಿಯ ಶುಭಾಶಯಗಳು

"ಸಿದ್ಧೇಶ್ವರ"
ಅಂದರ ಭದ್ರತೆಯ ಹೆಗ್ಗುರುತು

ನಮ್ಮಲ್ಲಿ



ಉಕ್ಕಿನ ತಿಜೋರಿ, ಕಪಾಟು, ಕ್ಯಾಶಬಾಕ್ಸ, ಸ್ಟ್ರಾಂಗ ರೂಮ ಡೋರ್ಸ, ಸೇಫ ಡಿಪಾಜಿಟ್ ಲಾಕರ್ಸ ಫಾಯಲಿಂಗ ಕ್ಯಾಬಿನೆಟ್ಸ ಟ್ಯುನೆಕ್ ಕ್ಯಾಬಿನೆಟ್ಸ. ರ್ಯಾಕ್ಸ, ಸ್ಟೀಲ್ ಪಾಯಿಪಿನ ತೊಟ್ಟಿಲ, ಖುರ್ಚಿ. ಪಲಂಗ, ಹಾಸ್ಪಿಟಲ್ ಫರ್ನಿಚರ ಹಾಗೂ ರೋಲಿಂಗ ಶಟರ್ಸ ಮುಂತಾದವುಗಳ ತಯಾರಕರು.

Siddheshwar & Co.
HUBLI (REGD)

ಸಿದ್ಧೇಶ್ವರ & ಕಂಪನಿ (ಹುಬ್ಬಳ್ಳಿ)
ಪ್ರಾವೇಟ ಲಿ.. ಹುಬ್ಬಳ್ಳಿ

ಶೋರೂಮ:
ಸಿದ್ಧೇಶ್ವರ ಮಹಲ
ಸ್ಟೇಶನ್ ರೋಡ. ಹುಬ್ಬಳ್ಳಿ
ಫೋನ: 3079

ಹೆಡ್ ಆಫೀಸ ಮತ್ತು ಕಾರಖಾನೆ:
ಸಿದ್ಧೇಶ್ವರ ನಗರ
ಹುಬ್ಬಳ್ಳಿ-ಬೆಂಗಳೂರು ರೋಡ,
ಹುಬ್ಬಳ್ಳಿ
ಫೋನ: 3078

INDEX TO ADVERTISERS

ಪರಿವಿಡಿ

ಚುಟುಕುಗಳು: ದಿನಕರ ದೇಸಾಯಿ ಮತ್ತು ಎಸ್. ದಿವಾಕರ **ಚಿತ್ರಗಳು :** ಬಿ. ಕೆ. ರಾವ್ ಮತ್ತು ಕೆ. ಬಿ. ಕುಲಕರ್ಣಿ

ವ್ಯಂಗ್ಯಚಿತ್ರಗಳು : ಎಂ. ರಂಗರಾವ್, ಶ್ರೀಕಾಂತ, ಕೆ. ಆರ್. ಸ್ವಾಮಿ ಮತ್ತು ನಾಡಿಗ

ಮುಖಚಿತ್ರ : ಧನುಭಾಯಿ ಎಂ. ಮೆಹತಾ

ಕರ್ಮವೀರ

ದೀಪಾವಳಿ ಸಂಚಿಕೆ ೧೯೬೬

ಸಂಪಾದಕರು :
ರಂಗನಾಥ ದಿವಾಕರ

ಸಹಾಯಕ ಸಂಪಾದಕರು :
ಎಸ್. ವಿ. ಪಾಟೀಲ

ನಮ್ಮ ನುಡಿ

ನಮ್ಮ ಪ್ರಿಯ ಓದುಗರಿಗೆ ಈ ಹತ್ತೊಂಭತ್ತನೆಯ ದೀಪಾವಳಿ ಸಂಚಿಕೆಯನ್ನು ದೀಪಾವಳಿಯ ಈ ಶುಭ ಸಂದರ್ಭದಲ್ಲಿ ಅರ್ಪಿಸಲು ತುಂಬ ಹರುಷವೆನಿಸುತ್ತದೆ.

ದೀಪಾವಳಿ ಅಥವಾ ದೀವಳಿಗೆ ನಮ್ಮ ಮೂರು-ನಾಲ್ಕು ರಾಷ್ಟ್ರೀಯ ಸ್ವರೂಪದ ಹಬ್ಬಗಳಲ್ಲಿ ಒಂದು. ಭಾರತೀಯರೆಲ್ಲರೂ ತುಂಬ ಸಂಭ್ರಮದಿಂದ ಈ ಹಬ್ಬವನ್ನು ಆಚರಿಸುವರು. ಭಾರತದ ವಿವಿಧ ಭಾಗಗಳಲ್ಲಿ ಈ ಹಬ್ಬವನ್ನು ಭಿನ್ನ ಭಿನ್ನ ರೀತಿಯಲ್ಲಿ ಆಚರಿಸುವರು. ಅಷ್ಟೇಕೆ ನಮ್ಮ ನೆರಹೊರೆಯ ನಾಡುಗಳಲ್ಲೂ ಈ ಹಬ್ಬವನ್ನು ಒಂದಿಲ್ಲೊಂದು ರೀತಿಯಲ್ಲಿ ಆಚರಿಸುವರು. ಜೊತೆಗೆ ದೀಪಗಳ ಈ ಹಬ್ಬವು ತುಂಬ ಪ್ರಾಚೀನವಾದುದು. ನಮ್ಮ ಹಳೆಯ ಗ್ರಂಥಗಳು ಇದರ ವೈಭವವನ್ನು ಸಾರುತ್ತಿವೆ. ಅದರ ಪೂರ್ವಾಪರಗಳನ್ನು ಸಾದ್ಯಂತವಾಗಿ ತಿಳಿಸುತ್ತಿವೆ.

ಭಾರತೀಯರಿಗೆ ಈ ಹಬ್ಬವು ಜಾತಿ ಮತ ಪಂಥವೆಂಬ ಭೇದವಿಲ್ಲದೇ ಬಹಳ ಮಹತ್ವದ್ದಾಗಿದೆ. ಈಗ ಮೊದಲಿನಷ್ಟು ಗೆಲುವು ಹುಮ್ಮಸ್ಸುಗಳಿಂದಲ್ಲದಿದ್ದರೂ ವೈಶಿಷ್ಟ್ಯಪೂರ್ಣವಾಗಿ ಆಚರಿಸುವ ಹಬ್ಬ ಇದೊಂದೇ.


ಈ ಅಂಶವನ್ನು ಗಮನದಲ್ಲಿರಿಸಿ ನಾವು ನಮ್ಮ ಓದುಗರಿಗೆ ಪ್ರತಿ ವರುಷವೂ ವೈಶಿಷ್ಟ್ಯಪೂರ್ಣವಾದ ಸಾಹಿತ್ಯ ರಸದೂಟವನ್ನು ದೀಪಾವಳಿ ಸಂಚಿಕೆಯ ಮುಖಾಂತರ ನೀಡುತ್ತಲೇ ಬಂದಿದ್ದೇವೆ. ಈ ವರುಷವೂ ಅದಕ್ಕೆ ಹೊರತಾಗಿಲ್ಲ. ಸರಸ ಸಾಮಾಜಿಕ ಕಾದಂಬರಿ, ರಂಜನೀಯ ಚಾರಿತ್ರಿಕ-ಸಾಮಾಜಿಕ ಕಥೆಗಳು, ಕವನಗಳು, ನಕ್ಕು ನಗಿಸುವ ಹರಟೆಗಳು, ಎಳೆಯರಿಗಾಗಿ ವಿಶೇಷ ಲೇಖನಗಳು, ಚಲಚ್ಚಿತ್ರ ಪ್ರಿಯರಿಗಾಗಿ ನಮ್ಮ ತಾರೆಯರ ಅನುಭವಪೂರ್ಣ ಲೇಖನಗಳು ಹೀಗೆ ವಿವಿಧ ರೀತಿಯಲ್ಲಿ ವಾಚನೀಯ ಸಾಹಿತ್ಯವನ್ನು ಇಲ್ಲಿ ನೀಡಿದ್ದೇವೆ. ಆಧುನಿಕ ಚಂಪೂ ಕಾವ್ಯವೊಂದು ಈ ಸಲದ ಇನ್ನೊಂದು ವಿಶೇಷವಾಗಿರುವುದು. ಎಂದಿನಂತೆ ಈ ಸಂಚಿಕೆಯನ್ನು ಓದುಗರು ಸಹೃದಯತೆಯಿಂದ ಬರಮಾಡಿಕೊಳ್ಳುವರೆಂಬ ಪೂರ್ಣ ಭರವಸೆ ನಮಗಿದೆ.



ಈ ಸಂಚಿಕೆಗಾಗಿ ಸಕಾಲಕ್ಕೆ ಲೇಖನಗಳನ್ನು ಒದಗಿಸಿದ ನಮ್ಮ ಲೇಖಕ ಬಳಗಕ್ಕೂ ಈ ಸಂಚಿಕೆಯನ್ನು ಸರ್ವಾಂಗ ಸುಂದರವಾಗುವಂತೆ ಮಾಡಲು ಸಹಾಯ-ಸಹಕಾರ ನೀಡಿದವರಿಗೂ ಅದೇ ರೀತಿ ಜಾಹೀರಾತುಗಳನ್ನು ಕೊಟ್ಟು ಸಹಕರಿಸಿದ ಜಾಹೀರಾತುದಾರರಿಗೂ ನಮ್ಮ ಅನಂತ ಕೃತಜ್ಞತೆಗಳು.

ದೀಪಾವಳಿಯ ಈ ಶುಭ ಸಂದರ್ಭವು ನಮ್ಮ ಓದುಗರಿಗೂ-ಇನ್ನಿತರರಿಗೂ ಮಂಗಳದಾಯಕವಾಗಿ ಪರಿಣಮಿಸಲಿ.

—ಸಂಪಾದಕ



ಧಾರ್ಮಿಕ ಹಾಗೂ ತಾತ್ವಿಕ ವಿಚಾರಗಳು

ಶಂಕರನಾಥ ದಿವಾಕರ

ಮಾನವನ ಆಂತರಿಕ ಹಾಗೂ ಬಾಹ್ಯ ಜೀವನಕ್ಕೆ ಸಂಬಂಧಿಸಿದ ಅನೇಕಾನೇಕ ವಿಷಯಗಳನ್ನು ಕುರಿತು ಗಾಂಧಿಯವರು ಹೇರಳವಾಗಿ ಬರೆದಿದ್ದಾರೆ. ಆದರೆ, ಇದು ನನ್ನ ಧರ್ಮ, ಇದು ನನ್ನ ತತ್ತ್ವಜ್ಞಾನ, ಎಂದು ನಿರ್ದಿಷ್ಟವಾಗಿ ಇಲ್ಲವೆ ವಿವರಣಾತ್ಮಕವಾಗಿ, ವಿವೇಚನಾತ್ಮಕವಾಗಿ ಎಂದೂ ಏನೂ ಬರೆದಿಲ್ಲ. ಆದುದರಿಂದ ಅವರು ರಾಶಿ ರಾಶಿಯಾಗಿ ಬರೆದ ಹಾಗೂ ಬಾಯಿಂದ ಹೇಳಿದ ಮಾತುಗಳಿಂದ ಆಯ್ದು ಅವರ ಧರ್ಮವಿಚಾರಗಳನ್ನು ತತ್ತ್ವವಿಚಾರಗಳನ್ನು ತಿಳಿದುಕೊಳ್ಳಬೇಕಾಗುವದು.

ಧರ್ಮ ಎಂಬುದಕ್ಕೆ ಅವರು ಅತ್ಯಂತ ವ್ಯಾಪಕ ಅರ್ಥವನ್ನು ಕಲ್ಪಿಸಿದಾರೆ. ಹಿಂದು, ಮುಸಲ್ಮಾನ್, ಕ್ರಿಶ್ಚನ್ ಮುಂತಾದ ಹೆಸರುಗಳಿಂದ ಪ್ರಚಲಿತವಿರುವ ಧರ್ಮಗಳಿಗೆಲ್ಲ ಮೂಲಾಧಾರವಾದ, ಮನುಷ್ಯಮಾತ್ರನ ಆತ್ಮೋನ್ನತಿ- ಆತ್ಮೋದ್ಧಾರಗಳಿಗೆ ತಳಹದಿಯಾದ ವಿಶ್ವನಿಯಮಗಳೇ ಧರ್ಮ (ರಿಲಿಜನ್ ಆಫ್ ಆಲ್ ರಿಲಿಜನ್ಸ್) ಎಂದು ಗಾಂಧಿ ಹೇಳಿರುವರು. ಸ್ವಯಂಮನ್ಯವಾದ ಅಥವಾ ಅಹಂಮನ್ಯವಾದ ಹಲವು ವಾಕ್ಯಗಳು, ಪೂಜೆ ಪ್ರಾರ್ಥನೆಗಾಗಿ ರೂಢವಾದ ಹಲವು ಆಚಾರಗಳು ಇವೇ ಧರ್ಮವಲ್ಲ. ಇವು ಆಯಾ ಧರ್ಮಗಳ ಬಾಹ್ಯ ಶರೀರ ಮಾತ್ರ; ಆಯಾ ಧರ್ಮಗಳ ಆತ್ಮವೇ ಮೂಲ ಮಾನವ ಧರ್ಮ, ಅದೇ ಸಕಲ ಮಾನವರಿಗೂ ಒಂದೇ ಧರ್ಮವಾಗಿ ಪರಿಣಮಿಸಬಲ್ಲದು, ಎಂಬುದೇ ಅವರ ಪ್ರತಿಪಾದನೆಯ ತಾತ್ಪರ್ಯ. ಧರ್ಮದ ಈ ಅಂತಃಸ್ವರೂಪವೇ ಶ್ರೋತವ್ಯವು ಮಂತವ್ಯವು ನಿದಿಧ್ಯಾಸಿತವ್ಯವು; ಅದೇ ಆತ್ಯಂತಿಕ ಸತ್ಯವು. ಅದನ್ನು ಶೋಧಿಸುವದು-ಸಾಧಿಸುವದು ಇದೇ ಎಲ್ಲ ಪ್ರಚಲಿತ ಧರ್ಮಗಳ ಗುರಿಯು; ಅವೆಲ್ಲವೂ ಸಾಧಕವರ್ಗಕ್ಕೇ ಸೇರಿದವುಗಳು ಈ ವಿಚಾರದ ಮೂಲಕವೇ ಅವರು 'ಸರ್ವಧರ್ಮ ಸಮಭಾವ'ದ ವ್ರತವನ್ನು ಹೇಳಿದರು. ಆಯಾ ಧರ್ಮವಾಕ್ಯಗಳೇ ಕೊನೆಯ ಸತ್ಯವನ್ನು ಹೇಳುವವು, ಆಯಾ ಧರ್ಮಾಚಾರವೇ ಎಲ್ಲಕ್ಕೂ ಶ್ರೇಷ್ಠ ಎಂದು ಯಾವ ಧರ್ಮವಾದರೂ ಹೇಳುವದು ಗಾಂಧಿಯವರಿಗೆ ಇಷ್ಟವಿರಲಿಲ್ಲ. ಧರ್ಮಾಂತರವನ್ನು ಅವರು ಸಮರ್ಥಿಸುತ್ತಿರಲಿಲ್ಲ. ಎಲ್ಲ ಧರ್ಮಗಳಲ್ಲಿಯೂ ಆಯಾ ಜನರಿಗೆ ಸಾಕಷ್ಟು ಸತ್ಯವಿದೆ, ಹೆಚ್ಚಿಗೆ ಬೇಕಾದುದನ್ನು ಇತರರಿಂದ ಪಡೆಯಬಹುದು, ಆದರೆ ಧರ್ಮಾಂತರ ಇಷ್ಟವಲ್ಲ, ಎಂಬುದು ಅವರ ಹೇಳಿಕೆ. ಇದೇ ಸತ್ಯದ ಕೊನೆ, ಇದೇ ಕೊನೆಯ ಸತ್ಯ ಎಂದು ಹೇಳುವದಾಗಲಿ, ಇದೇ ಶ್ರೇಷ್ಠ ಸತ್ಯ ಎಂದು ಅದನ್ನು ಬಲಾತ್ಕಾರದಿಂದ ಇತರರ ಮೇಲೆ ಹೇರಲೆತ್ನಿಸುವದಾಗಲಿ ಸತ್ಯಕ್ಕೆ ಸಾವನ್ನು ಬಗೆದಂತೆ ಎಂದು ಅವರು ನಂಬಿದ್ದರು. ಬಾಹ್ಯ ಸೃಷ್ಟಿನಿಯಮಗಳ ಶೋಧನೆಯಲ್ಲಿ ವಿಜ್ಞಾನವು ಯಾವ ವ್ಯಕ್ತಿ-ದೃಷ್ಟಿಯನ್ನಿಟ್ಟುಕೊಂಡಿದೆಯೋ ಅದೇ ವ್ಯಕ್ತಿದೃಷ್ಟಿಯನ್ನು ಅಂತಃಸೃಷ್ಟಿಯ ನಿಯಮಗಳ ಶೋಧನೆಯಲ್ಲಿಟ್ಟುಕೊಳ್ಳಬೇಕೆಂಬುದೇ ಇದರ ಅರ್ಥ. ಸತ್ಯಶೋಧನೆಗೆ ನಮ್ರಭಾವವೆಂಬುದೊಂದು ಅವಶ್ಯವಾದ ಅನುಪಾನ.

ಧರ್ಮ ಎಂಬುದಕ್ಕೆ ಗಾಂಧಿ ಇಷ್ಟೊಂದು ವ್ಯಾಪಕವಾದ ಅರ್ಥವನ್ನು ಕಲ್ಪಿಸಿದ್ದರಿಂದ ಧರ್ಮದ ಉದ್ದೇಶ, ಪ್ರಯೋಜನ ಇವಾದರೂ ಅತ್ಯಂತ ವ್ಯಾಪಕವೇ ಇರುವದು ಕ್ರಮಪ್ರಾಪ್ತ. ಧರ್ಮ ಎನಿಸಿಕೊಳ್ಳುವ ವಿಶ್ವನಿಯಮಗಳು ವಿಶ್ವಕಲ್ಯಾಣವನ್ನೆ ಸಾಧಿಸುವ ಸಾಧನಗಳು. ವಿಶ್ವಕ್ಕೆ ವಿಶ್ವದಲ್ಲಿರುವ ಚರಾಚರ ಸೃಷ್ಟಿಗೆ ಧರ್ಮವೇ ಆಧಾರ. ಆದುದರಿಂದಲೇ, 'ಧಾರಣಾ ಧರ್ಮಾತ್' ಅಥವಾ 'ಧ್ರಿಯತೇ ಅನೇನ' ಎಂಬುದು ಧರ್ಮ ಇದರ ವ್ಯಾಖ್ಯೆ ಎನಿಸುವದು. ಇನ್ನು ವಿಶ್ವಕಲ್ಯಾಣದಲ್ಲಿ ಮಾನವಕುಲದ ಕಲ್ಯಾಣವೂ ಅಡಕವಾಗಿದೆ ಎಂಬುದನ್ನು ಪ್ರತ್ಯೇಕವಾಗಿ ಹೇಳುವದು ಅವಶ್ಯವಿಲ್ಲ.

ಮಾನವಕಲ್ಯಾಣ ಎಂದರೇನು? ಅವನ ದೇಹದ ಕಲ್ಯಾಣವೇ ಇಂದ್ರಿಯಗಳ ತೃಪ್ತಿಯೆ? ಮನಸ್ಸಿನ ರಂಜನೆಯೆ? ಬುದ್ಧಿಯ ವಿಕಾಸವೆ? ಸೌಂದರ್ಯೋಪಾಸನೆಯೆ? ನೀತಿಯ ಉನ್ನತಿಯೆ? ಅಥವಾ ಆತ್ಮನ ಸತ್ಯಸಾಕ್ಷಾತ್ಕಾರದ ಮೂಲಕ ಅವನ ಆತ್ಯಂತಿಕ ಉದ್ಧಾರವೆ? ಮಾನವ ಎಂಬ ವ್ಯಕ್ತಿಯಲ್ಲಿ ದೇಹೇಂದ್ರಿಯಾದಿಗಳು, ಬುದ್ಧಿಭಾವನಾದಿಗಳು ಇವೆ. ಆದರೆ ಇವೆಲ್ಲಕ್ಕೂ ಆಧಾರವಾದ ಹಾಗೂ ಇವುಗಳ ಶಕ್ತಿಸರ್ವಸ್ವವನ್ನು ಒಳಗೊಂಡ ಚಿದ್ರೂಪಿಯಾದ ಆತ್ಮವೇ ಮುಖ್ಯ. ಆತ್ಮನ ಗುರುತು, ಆತ್ಮನ ಶುದ್ಧಿ, ಆತ್ಮನ ಉನ್ನತಿ ಈ ದೇಹಾದಿ ಸಾಧನಗಳ ಮೂಲಕ ಪರಮಾತ್ಮನಲ್ಲಿ ಸರ್ವಸಮರ್ಪಣ. ತದನಂತರ ಪರಮಾತ್ಮನ ನಿಮಿತ್ತಮಾತ್ರನಾಗಿ ಅವನ ಸಂಕಲ್ಪದ ಪರಿಪೂರ್ತಿ ಇದೇ ಮಾನವನ, ಮಾನವಕುಲದ ಪರಮಕಲ್ಯಾಣ ಎಂದು ಗಾಂಧಿ ನಂಬಿದ್ದರು. ಆದರೆ ಈ ವಿಶ್ವಕ್ಕೆ ಆಧಾರಭೂತವಾಗಿ ಒಂದು ಪರಾತ್ಪರ ಶಕ್ತಿಯಿದೆ ಎಂದು ನಂಬಿದರೂ ಆ ಶಕ್ತಿಯ ಸಂಕಲ್ಪವನ್ನು ತಿಳಿದುಕೊಳ್ಳುವದು ಹೇಗೆ? ಅಲ್ಪಶಕ್ತಿಯಾದ ಮಾನವನಿಗೆ ಅದು ಹೇಗೆ ಸಾಧ್ಯ? ಸ್ವಾರ್ಥರಹಿತವಾದ ಪರಿಶುದ್ಧವಾದ ಅನಾಸಕ್ತವಾದ ಅಂತಃಕರಣವು ಸದಸದ್ವಿವೇಕವನ್ನು ಹೇಳಬಲ್ಲದು; ಅದೇ ರೀತಿ ಸತ್ಯಾಸತ್ಯ ವಿಮರ್ಶೆಯನ್ನು ಮಾಡಬಲ್ಲದು. ಅಂಥ ಅಂತಃಕರಣವು ಪರಮಾತ್ಮಸಂಕಲ್ಪವನ್ನು ಪ್ರತಿಬಿಂಬಿಸಬಲ್ಲದು. ಸತ್ಯಾಸತ್ಯವನ್ನು ವಿಮರ್ಶಿಸಲು ಸದಸದ್ವಿವೇಕವನ್ನು ಹೇಳಲು ಮನುಷ್ಯನ ಬಳಿ ಅದೊಂದೇ ಸಾಧನವಿರುವದು. ಆದುದರಿಂದಲೆ ಗಾಂಧಿ ಯಾವಾಗಲೂ ತಮ್ಮೆದುರಿಗೆ ಬರುವ ಪ್ರಚಲಿತ ಧರ್ಮತತ್ತ್ವಗಳನ್ನು ಸಹ ಸತ್ಯಾಸತ್ಯ-ವಿಮರ್ಶಕ ಬುದ್ಧಿಯಿಂದ ಸದಸದ್ವಿವೇಕ ಬುದ್ಧಿಯಿಂದ ನೋಡುವದು ಅವಶ್ಯ ಎನ್ನುತ್ತಿದ್ದರು. ಅಂಧವಿಶ್ವಾಸವನ್ನು ಅವರು ಪೂರ್ಣ ಅಲ್ಲಗಳೆಯುತ್ತಿದ್ದರು. ರೀಝನ್ (ಸತ್ಯಾಸತ್ಯ ವಿಮರ್ಶಕಶಕ್ತಿ) ಮತ್ತು ಮೊರ್ಯಾಲಿಟಿ (ಸದಸದ್ವಿವೇಕಶಕ್ತಿ) ಇವುಗಳ ಒರೆಗಲ್ಲಿಗೆ ಹಚ್ಚಿಯೇ ನಾವು ಧರ್ಮಾಧರ್ಮಗಳನ್ನು, ಪುಣ್ಯಪಾಪಗಳನ್ನು, ಕರ್ಮಾಕರ್ಮಗಳನ್ನು ನಿರ್ಣಯಿಸುವದು ಅವಶ್ಯ ಎಂಬುದೇ ಅವರ ವಿಚಾರಗಳ ತಾತ್ಪರ್ಯ ಎನ್ನಬಹುದು

ಮೇಲಿನ ಮಾತುಗಳನ್ನು ಓದಿದರೆ ಗಾಂಧಿ ಬರೀ ಬುದ್ಧಿವಾದಿಗಳು ಶುಷ್ಕ ತರ್ಕವಾದಿಗಳು ಎಂದೆನಿಸುವ ಸಂಭವವಿದೆ. ಆದರೆ ಅವರು ಮೂಲತಃ ಅನುಭಾವವಾದಿಗಳೇ; ಅವರು ಶುದ್ಧ ಬುದ್ಧಿಗೆ ಅನಾಸಕ್ತ ಬುದ್ಧಿಗೆ ಸಾಕಷ್ಟು ಮಹತ್ವವನ್ನು



ಶಿಶು ಹರಕೆ

ಬಿಚ್ಚು ನೀಲಿಯಲಿ ಬೀಸು ಗಾಳಿಯಲಿ
    ಚೆಲುವ ಸೆರಗ ಹಿಡಿದು
ಹೆಜ್ಜೆ ಹೆಜ್ಜೆಗೂ ಸುರಿದ ರಕ್ತದಲಿ
    ಹುಚ್ಚನಂತೆ ನಡೆದು

ತೆರೆದ ಬಾಗಿಲಿನ ಪುಳ್ಳು ಮಂಟಪದ
    ದೂಳ ಮೂಲೆಯಲ್ಲಿ
ಹುತ್ತದಂಚಿನಲಿ ಹಳದಿ ಬಳ್ಳಿಗಳ
    ಹೂವ ಹಾಸಿನಲ್ಲಿ

ನಿನ್ನ ಕಂಡೆನೆ ತುಟಿಯನಿಟ್ಟೆನೆ
    ನಿನ್ನ ಬೆಟ್ಟ ಮೊಲೆಗೆ,
ಎಳೆಯ ಹಕ್ಕಿ ನಾನಾಗಿ ಬಿದ್ದೆನೆ
    ನಿನ್ನ ಹರಕೆ–ಬಲೆಗೆ!

ಎಲ್ಲಿಗೆತ್ತಿ ಇನ್ನೆಲ್ಲಿಗೆಸೆಯುವುದೊ
    ನಿನ್ನ ಒಲುಮೆ–ಗಿಡುಗ!
ಯಾರು ಬಂದು ಕನಿಕರಿಸಿ ಕಾಯುವರೊ
    ಅರಿಯೆ ನಾನು ಹುಡುಗ.

ತೊಟ್ಟ ಬಾಣವನು ತೊಡದಿರೆನ್ನುವುದೆ,
    ತಾಯೆ, ನಿನ್ನ ಹರಕೆ?
ತೊಡಲಿ ಯಾವುದನು? ಬರಿದು ಬತ್ತಳಿಕೆ;
    ಬಂದೆ ನಿನ್ನ ಬಳಿಗೆ

—ಕೆ. ಎಸ್. ನ

ಕೊಡುವ ಅನುಭಾವವಾದಿಗಳು ತಮ್ಮ ಜೀವನದಲ್ಲಿ ಅವರು ಎಲ್ಲ ಮಹತ್ವದ ನಿರ್ಣಯಗಳನ್ನು ಅನುಭಾವವನ್ನವಲಂಬಿಸಿಯೇ ಮಾಡಿದರು. ಮರಣಾಂತ ಉಪವಾಸಾದಿಗಳನ್ನು ಕೈಕೊಂಡದ್ದು ಕೂಡ ಅನುಭಾವದ ಆಧಾರದಿಂದಲೇ; ದಿವ್ಯ ಆದೇಶವನ್ನು ಕಿವಿಯಾರೆ ಕೇಳಿಯೇ ಅವರು ಯರವಡಾ ಜೇಲಿನಲ್ಲಿ ಹರಿಜನರನ್ನು ಹಿಂದುಗಳಿಂದ ಪ್ರತ್ಯೇಕಿಸಬಾರದೆಂಬ ಬಗ್ಗೆ ನಿರವಧಿ ಉಪವಾಸವನ್ನು ಕೈಕೊಂಡರು. ಆ ಮಾತನ್ನು ಅವರೇ ಬಣ್ಣಿಸಿದ್ದಾರೆ

ಇಲ್ಲಿ ಅನುಭವ ಹಾಗೂ ಅನುಭಾವ ಅಥವಾ ಸತ್ಯಸಾಕ್ಷಾತ್ಕಾರ ಇವುಗಳಲ್ಲಿಯ ಮಹತ್ವದ ಅಂತರವನ್ನು ಸ್ಪಷ್ಟಗೊಳಿಸದಿದ್ದರೆ ಓದುಗರ ಮನಸ್ಸಿನಲ್ಲಿ ಗೊಂದಲವಾಗುವ ಸಂಭವವಿದೆ. ದೇಹಾತ್ಮಬುದ್ಧಿಯೇ ಮುಖ್ಯವಾಗಿರುವ, ಅಹಂಭಾವ ಅಹಂಕಾರಗಳಿಂದ ಒಡಗೂಡಿದ ಹಾಗು ಪಂಚಜ್ಞಾನೇಂದ್ರಿಯ ಮತ್ತು ಪಂಚಕರ್ಮೇಂದ್ರಿಯ ಇವುಗಳ ಮೂಲಕ ಮನಸ್ಸಿನ ಮೇಲೆ ಮೂಡಿದ ಸಂಸ್ಕಾರಗಳೆಲ್ಲ, ಅವುಗಳನ್ನೆ ಆಧಾರವಾಗಿಟ್ಟುಕೊಂಡಿರುವ ತರ್ಕ-ಅನುಮಾನಾದಿಗಳೆಲ್ಲ 'ಅನುಭವ' ಎನಿಸುವವು. ಇಂದ್ರಿಯ - ಮನ - ಬುದ್ಧಿಗಳಾಚೆಗಿರುವ (ಯೋ ಬುದ್ಧೇಃ ಪರತಸ್ತು ಸಃ) ಅಹಂಭಾವರಹಿತವಾದ ಪರಿಶುದ್ಧ ಆತ್ಮಭೂಮಿಕೆಯಲ್ಲಿ ಕೇವಲ ಸ್ಫೂರ್ತಿಯಿಂದ ಒಡಮೂಡುವ ಸತ್ಯಸಾಕ್ಷಾತ್ಕಾರವೇ 'ಅನುಭಾವ' ಎನಿಸುವದು ಗಾಂಧಿಯವರು ಈ ಬಗೆಯ ಅನುಭಾವದಲ್ಲಿ ನಂಬಿಗೆಯುಳ್ಳ ಮನುಷ್ಯರು. ಅವರು ಆತ್ಮಶುದ್ಧಿಗೆ (ಸೆಲ್ಫ್-ಪ್ಯೂರಿಫಿಕೇಶನ್) ಮಹತ್ವ ಕೊಟ್ಟದ್ದಾದರೂ ಇದಕ್ಕಾಗಿಯೇ. ಬಹಿರಂಗ ಎಷ್ಟೇ ಶುದ್ಧವಾದರೂ ಅದು ಸಾಕಿಲ್ಲ, ಅಂತರಂಗಶುದ್ಧಿ, ಆತ್ಮರಂಗಶುದ್ಧಿಯೇ ಸತ್ಯಾವತರಣಕ್ಕೆ ಅನುಕೂಲ. ಆತ್ಮಪೂತವಾದ ಆಚರಣೆ ಆಮೇಲೆಯೇ ಶಕ್ಯವು

ಪರಿಶುದ್ಧವಾದ ಆತ್ಮರಂಗದಲ್ಲಿ ಸತ್ಯಾವತರಣ, ಸತ್ಯಸ್ಫೂರ್ತಿ ಆಗುವ ವಿಧಗಳು ಹಲವು. ಅನುಭಾವಿಯು ಅನುಸರಿಸಬೇಕಾದ ಮಾರ್ಗವನ್ನು ಕುರಿತು ಆದೇಶವು ದೊರೆಯಬೇಕಿದ್ದರೆ, ಅದು, ದರ್ಶನದಿಂದ ಅಥವಾ ಶಬ್ದದಿಂದ. ಗಾಂಧಿಯವರಿಗೆ ಶ್ರವಣದ ಮುಖಾಂತರ ಅರ್ಥಾತ್ ಶಬ್ದರೂಪದಿಂದ ಆದೇಶವು ಪ್ರಾಪ್ತವಾಗುತ್ತಿತ್ತು ಎನ್ನಬಹುದು. ಸಾಮಾನ್ಯವಾಗಿ ನಾನು ಪರಮಾತ್ಮ-ಸಾಕ್ಷಿಯಾಗಿಯೇ ನಡೆಕೊಳ್ಳುವೆ ಎಂದು ಅವರು ಹೇಳಿರುವರು. ಆದರೆ ಆದೇಶ ದೊರೆತ ಸಂದರ್ಭಗಳಲ್ಲಿ ಅವರು ಶಬ್ದಶ್ರವಣವನ್ನು ಉಲ್ಲೇಖಿಸಿದ್ದಾರೆ

ಧರ್ಮದ ಬಗ್ಗೆ ಇಷ್ಟೊಂದು ವ್ಯಾಪಕ ವಿಚಾರವನ್ನು ಅವರು ಇಟ್ಟುಕೊಂಡಿದ್ದರೂ 'ನಾನು ಸನಾತನಿ ಹಿಂದೂ ಇರುವೆ' ಎಂದು ಹೇಳುವದಲ್ಲದೆ ಶಿಖಾಸೂತ್ರಗಳನ್ನೂ ಜಪಮಾಲೆಯನ್ನೂ ಅವರು ಏಕೆ ಇಟ್ಟುಕೊಂಡಿದರು ಎಂಬ ಪ್ರಶ್ನೆ ಕೇಳಬಹುದು. ಈ ವಿಷಯದಲ್ಲಿ ನಾವು ಎರಡು ಮುಖ್ಯವಾದ ಮಾತುಗಳನ್ನು ಲಕ್ಷದಲ್ಲಿಟ್ಟುಕೊಳ್ಳುವದು ಅವಶ್ಯ. ಆತ್ಮನಿಷ್ಠವಾದ ಹಿಂದುತ್ವವನ್ನು ಪುನರುಜ್ಜೀವಿಸುವದು ಅವರ ಧ್ಯೇಯಗಳಲ್ಲಿ ಒಂದಾಗಿತ್ತು. ನಾವು ಹಿಂದುವಲ್ಲ ಎಂದಿದ್ದರೆ, ಹಿಂದುಗಳ ಬಾಹ್ಯ

ಲಕ್ಷಣಗಳನ್ನು ಅವರು ಕ್ಷಮಿಸಿದ್ದರೆ. ಹಿಂದುಗಳು ಅವರಲ್ಲಿಡಬೇಕಾದ ವಿಶ್ವಾಸವನ್ನೇ ಇಡುತ್ತಿರಲಿಲ್ಲ ಅಲ್ಲದೆ ಶಿಖಾಸೂತ್ರಗಳೇ ಆಗಲಿ, ಜಪಮಾಲೆಯೇ ಆಗಲಿ ಯಾವ ತತ್ತ್ವಕ್ಕೂ ಬಾಧೆ ತರುವಂತಹ ಮಾತುಗಳಲ್ಲ.

ಹೀಗೆ ಹೇಳಿದಾಕ್ಷಣಕ್ಕೆ ಗಾಂಧಿಯವರು ಯಾವ ಪ್ರಚಲಿತ ಧರ್ಮಗಳಲ್ಲಿಯೂ ವಿಶ್ವಾಸವಿಟ್ಟರಲಿಲ್ಲ ಅಥವಾ ಯಾವ ಧರ್ಮಗ್ರಂಥಗಳಲ್ಲಿಯೂ ಶ್ರದ್ಧೆಯುಳ್ಳವರಿರಲಿಲ್ಲ ಎನ್ನುವದು ಸತ್ಯಾಪಲಾಪವಾಗುವದು. ಎಲ್ಲ ಮುಖ್ಯ ಮುಖ್ಯ ಧರ್ಮಗಳ ಗ್ರಂಥಗಳನ್ನು ಅವರು ಸಾಕಷ್ಟು ಅಭ್ಯಸಿಸಿದ್ದರು. ಎಲ್ಲ ಧರ್ಮದ ಜನರೊಡನೆ ಅವರ ಸ್ನೇಹವಿತ್ತು. ಇಷ್ಟೇ ಅಲ್ಲ. ಅವರ ಕ್ರಿಶ್ಚನ್ ಮತ್ತು ಮುಸ್ಲಿಂ ಮಿತ್ರರು ಅವರನ್ನು ತಮ್ಮ ಧರ್ಮಕ್ಕೆ ಪರಿವರ್ತಿಸಬೇಕೆಂದು ಪ್ರಯತ್ನಗಳನ್ನೂ ಮಾಡಿದ್ದುಂಟು. ಆದರೆ ಹಿಂದೂ ಧರ್ಮದಲ್ಲಿ ಹಾಗೂ ಹಿಂದೂ ಧರ್ಮಗ್ರಂಥಗಳಲ್ಲಿ ಸಾಕಷ್ಟು ಸತ್ಯ, ತತ್ತ್ವ, ತೇಜ, ಆತ್ಮೋನ್ನತಿಯ ಚರಮಸೀಮೆಗೆ ಮುಟ್ಟಿಸುವ ಸಾಮರ್ಥ್ಯ ಇದೆ ಎಂಬ ಮನವರಿಕೆಯಾದುದರಿಂದ ಅವರು ಇನ್ನಾವ ಧರ್ಮಕ್ಕೂ ಸೇರುವ ಗೋಜಿಗೆ ಹೋಗಲಿಲ್ಲ. ಇಷ್ಟೇ ಅಲ್ಲ; ಸರ್ವಧರ್ಮಗಳಲ್ಲಿಯೂ ಸಾಕಷ್ಟು ಸತ್ಯವಿದ್ದು ಎಲ್ಲರೂ ತಮ್ಮ ತಮ್ಮ ಧರ್ಮಗಳ ಮುಖಾಂತರವೇ ಅಂತಿಮಗತಿಯನ್ನು ಮುಟ್ಟಲು ಯತ್ನಿಸಬೇಕು ಹಾಗೂ ಎಲ್ಲ ಧರ್ಮಗಳ ಬಗ್ಗೆ ಸಮಾನವಾದ ಆದರವನ್ನಿಟ್ಟುಕೊಳ್ಳಬೇಕು ಎಂದು ಅವರು ಪ್ರತಿಪಾದಿಸಿದರು.

ಗಾಂಧಿಯವರು ಸಾಧಾರಣವಾಗಿ ಎಲ್ಲ ಧರ್ಮಗಳ ಗ್ರಂಥಗಳ ಪರಿಚಯವನ್ನು ಮಾಡಿಕೊಂಡಿದ್ದರೂ ಸ್ವಾಭಾವಿಕವಾಗಿಯೇ ಹಿಂದೂ ಧರ್ಮಗ್ರಂಥಗಳನ್ನು ಹೆಚ್ಚು ಅಭ್ಯಸಿಸಿದ್ದರು. ವೇದಗಳ ಪರಿಚಯ ಅವರಿಗೆ ಸಾಕಷ್ಟು ಇರದಿದ್ದರೂ ಉಪನಿಷತ್ತುಗಳನ್ನು ಅವರು ಚನ್ನಾಗಿ ಓದಿಕೊಂಡಿದ್ದರು. ಈಶಾವಾಸ್ಯವು ಅವರಿಗೆ ಅತ್ಯಂತ ಪ್ರಿಯವಾದ ಹಾಗೂ ಆಧಾರಭೂತವಾದ ಉಪನಿಷತ್ತು. ಹಿಂದೂ ಧರ್ಮದ ಇತರ ಎಲ್ಲ ಗ್ರಂಥಗಳು ನಷ್ಟವಾಗಿ ಹೋದರೂ ಈಶಾವಾಸ್ಯದ ಪ್ರಥಮ ಎರಡು ಮಂತ್ರಗಳು (ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ । ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯಸ್ವಿತ್ ಧನಮ್ ॥ ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಂ ಸಮಾಃ । ಏವಂ ತ್ವಯಿ ನಾನ್ಯಥೋಽಸ್ತಿ ನ ಕರ್ಮ ಲಿಪ್ಯತೇ ನರೇ ॥) ಅಸ್ತಿತ್ವದಲ್ಲಿರುವ ವರೆಗೆ ಹಿಂದೂ ಧರ್ಮಗ್ರಂಥಗಳೆಲ್ಲ ಬದುಕಿದ್ದಂತೆಯೇ ಸೈ ಎಂದು ಅವರು ಒಮ್ಮೆ ಸಾರಿಬಿಟ್ಟರು. ಆದರೆ ಭಗವದ್ಗೀತೆ — ಅವರ ನಿತ್ಯಪಾಠದ ಗ್ರಂಥ ಇದು ದಲ್ಲದೆ ತಮಗೆ ಯಾವದೇ ಸಮಸ್ಯೆ ಎದುರಾದರೂ ಅವರು ಗೀತೆಗೆ ಮೊರೆ ಇಡುತ್ತಿದ್ದರು. ಗೀತೆ ಅವರಿಗೆ ಮಾತೆಯೋಪಾದಿಯಲ್ಲಿ ಆಧ್ಯಾತ್ಮಿಕ ಆಹಾರವನ್ನು ಕೊಡುವ ಗ್ರಂಥವಾಗಿತ್ತು. ಪರಾತ್ಪರ ಶಕ್ತಿಯೊಂದಿದೆ ಎಂಬುದರಲ್ಲಿ ಅಚಲಶ್ರದ್ಧೆ, ಪರಮಾತ್ಮನಲ್ಲಿ ಅಹೇತುಕ ಭಕ್ತಿ, ಸರ್ವಭೂತ ಹಿತದಲ್ಲಿ ಅತೀವ ರತಿ, ಸತ್ಯದಲ್ಲಿ ಆತ್ಯಂತಿಕ ನಿಷ್ಠೆ, ಅನಾಸಕ್ತಿ ಹಾಗೂ ನಿಷ್ಕಾಮ ಕರ್ಮದಲ್ಲಿ ಸಾತತ್ಯ, ಇವೆಲ್ಲ ಗಾಂಧೀಜಿಯವರಿಗೆ ಗೀತೋಪಾಸನೆಯಿಂದ ಬಂದವೆಂದು ಹೇಳಬಹುದು. ಗೀತೆಯ ತರುವಾಯ ಅವರು ತುಲಸೀ ರಾಮಾಯಣಕ್ಕೆ ಬಹಳ ಮಹತ್ವ ಕೊಡುತ್ತಿದ್ದರು ಇತರ ಧರ್ಮಗ್ರಂಥಗಳಲ್ಲಿ ಅವರು ಬಾಯಬಲ್ಲಿಗೆ ಮಹತ್ವ ಕೊಟ್ಟಿದ್ದರು. ಆ ಗ್ರಂಥದಲ್ಲಿಯ 'ಸರ್ಮನ್ ಆನ್ ದಿ ಮೌಂಟ್' ಎಂಬ ಪ್ರಕರಣವು ಅವರಿಗೆ ನೈತಿಕಸ್ಫೂರ್ತಿಯನ್ನು ಕೊಡುವಂತಹುದಾಗಿತ್ತು.

ಸಕಲ ಮಾನವಕುಲವೆಲ್ಲ ಒಂದು, ಅದರ ಮೂಲ ಒಂದು, ಅದರ ಧ್ಯೇಯ ಒಂದು, ಧ್ಯೇಯವನ್ನು ಮುಟ್ಟುವ ಮಾರ್ಗಗಳು ಭಿನ್ನವಾಗಿ ಕಂಡರೂ ತತ್ತ್ವತಃ ಅವೆಲ್ಲವೂ ಒಂದೇ ಎಂಬ ಭಾವನೆಯಿಂದಲೆ ಅವರು ನಡೆದುಕೊಳ್ಳುತ್ತಿದ್ದರು. ಮಾನವಮಾತ್ರರು ಸುಖ ಶಾಂತಿ ಮುಕ್ತಿ ಇವುಗಳನ್ನು

ಪೆನ್ಸಿಲಿನ ಆಟ



ನಾನು ಬರೆಯುವ ಚುಟಕ ಪೆನ್ಸಿಲಿನ ಆಟ.
ಚೂಪಾದ ಮೊನೆ ಎನ್ನುವುದೆ ಅದರ ಸೋಟಾ.
ಪೆನ್ಸಿಲ್ಲು ಸಿಟ್ಟಿಗೆದ್ದರೆ ನಿಮ್ಮ ಗೋಳು.
ಪ್ರತಿಯೊಂದು ಬೆರಳಿಗೂ ಕಡಿಯುವುದು ಚೇಳು.

— ದಿನಕರ ದೇಸಾಯಿ

ಸ್ವಭಾವಸಿದ್ಧವಾಗಿಯೇ ಬಯಸುವರು, ಅವುಗಳನ್ನು ದೊರಕಿಸಲು ಎಲ್ಲರಿಗೂ ಸಾಕಷ್ಟು ಅವಕಾಶ ಕಲ್ಪಿಸುವದೇ ಸಮಾಜಧರ್ಮ. ಹಾಗಾಗದಿದ್ದರೆ ಸಮಾಜ ಎಂಬುದಕ್ಕೆ ಅರ್ಥವೇ ಇಲ್ಲ ಸ್ವಾತಂತ್ರ್ಯ, ಸ್ವಾಭಿಮಾನ, ಸಾಕಷ್ಟು ಅನ್ನವಸ್ತ್ರಾದಿಗಳ ಪೂರೈಕೆ, ದೇಹಮನಗಳ ಆರೋಗ್ಯ, ಇವೆಲ್ಲವುಗಳಿಗೂ ಅವರು ಮಹತ್ವ ಕೊಡುವದು ಮಾನವನ ಆತ್ಯಂತಿಕ ಹಿತದ ದೃಷ್ಟಿಯಿಂದಲೇ. ಇವೆಲ್ಲವು ಸಾಧನಗಳು; ಆತ್ಮನ ಉನ್ನತಿ ಸಕಲ ಶೃಂಖಲೆ-ಬಂಧನಗಳಿಂದಲೂ ಆಸಕ್ತಿಪುಂಜದಿಂದಲೂ ಆತ್ಮನ ಮುಕ್ತಿ. ಇದೇ ಮುಖ್ಯ ಇದೇ ಸಾಧ್ಯ

ವೈಯಕ್ತಿಕ ಮುಕ್ತಿ ಎಂಬ ಸಾಧ್ಯವು ವ್ಯಕ್ತಿ ದೃಷ್ಟಿಯಿಂದಲೂ ಸಮಾಜದ ದೃಷ್ಟಿಯಿಂದಲೂ ಮಾನವಕುಲದ ದೃಷ್ಟಿಯಿಂದಲೂ ಬಹಳ ಮಹತ್ವದ್ದು ಎಂಬುದರಲ್ಲಿ ಸಂಶಯವಿಲ್ಲ ಆದರೆ ಅಷ್ಟರಿಂದ ಸಮಾಧಾನ ಹೊಂದುವುದು ಸರಿಯಲ್ಲ ಅವರು ಸಾಮೂಹಿಕ ಮೋಕ್ಷವನ್ನು, ಇಡೀ ಮಾನವಕುಲದ ಮೋಕ್ಷವನ್ನು ಬಯಸುತ್ತಿದ್ದರು. ಇಷ್ಟೇ ಅಲ್ಲ ಕ್ಷುದ್ರ ಜಂತುಗಳೂ ಸಕಲರಿಗೂ ಮೋಕ್ಷ ದೊರಕಬೇಕೆಂಬ ಪ್ರಯತ್ನವನ್ನು ಸತತವೂ ಮಾಡುತ್ತಿರುವದೇ ಮಾನವಧರ್ಮ ಎನಿಸುವದು ಒಬ್ಬನ ಹೊಟ್ಟೆ ತುಂಬಿದರೆ ಸಾಲದು. ಒಬ್ಬನಿಗೆ ಸುಖವಾದರೆ ಮುಗಿಯಲಿಲ್ಲ ಇಡೀ ಮಾನವಕುಲಕ್ಕೆ, ಅದೇಕೆ, ಸಕಲ ಚರಾಚರ ಪ್ರಾಣಿಕೋಟಿಗೆ ಸುಖವಾಗಬೇಕು ಎಂದು ಬಯಸುತ್ತಿರುವದಲ್ಲದೇ ಆ ಪ್ರಯತ್ನದಲ್ಲಿ ತೊಡಗಿರುವದೇ ಮೇಲು. ಅದೇ ಶ್ರೇಷ್ಠ ಧರ್ಮ. 'ಸರ್ವೋದಯ' ಎಂಬ ಶಬ್ದವನ್ನು ಉಪಯೋಗಿಸುದುದು ಈ ವ್ಯಾಪಕಾರ್ಥದಲ್ಲಿ ಪ್ರತಿ ವ್ಯಕ್ತಿಯ ಸತ್ ಶಕ್ತಿಗಳ ಪೂರ್ಣ ವಿಕಾಸವು ಆಯಾ ವ್ಯಕ್ತಿಯ ಉದಯ ಎಂದೆನಿಸುವದು ಅದೇ ಮೇರೆಗೆ ಸಮಾಜದಲ್ಲಿರುವ ಪ್ರತಿ ವ್ಯಕ್ತಿಯ ಪೂರ್ಣ ಉದಯವಾಗುವದೇ ಸರ್ವೋದಯ ಎನಿಸುವದು. ಸಮಾಜರಚನೆ, ಸಮಾಜದ ನಿಯಮಗಳು, ಸಮಾಜದ ಧ್ಯೇಯ ಧೋರಣೆಗಳು, ಈ ಮಾತುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಮಾಡಲಾಗಬೇಕು ಅಂದರೆ ಮಾತ್ರ ಸರ್ವೋದಯದ ಪರಿಪೂರ್ತಿ ಆದಂತೆ ಆಗುವದು.

ಒಟ್ಟಿಗೆ ನೋಡಲಾಗಿ ಮಾನವನ ಆತ್ಯಂತಿಕ ಧ್ಯೇಯವಾದ ಆತ್ಮಸಾಕ್ಷಾತ್ಕಾರವನ್ನು ಸಾಧಿಸುವದೇ ಮಾನವಧರ್ಮ; ಆ ಬಗ್ಗೆ ವಿಶ್ವನಿಯಮಗಳನ್ನು ಅರಿತುಕೊಂಡು ಅದರಂತೆ ನಡೆಯುವದು ಧರ್ಮ; ಬರೀ ವ್ಯಕ್ತಿಯ ಧ್ಯೇಯವನ್ನಷ್ಟೇ ಸಾಧಿಸದೆ ಸಕಲ ಮಾನವಕುಲದ ಧ್ಯೇಯವನ್ನು ಸಾಧಿಸುವದೇ ನಿಜಧರ್ಮ. ಮಾನವಧರ್ಮವೆಂಬುದು ಒಂದೇ ಒಂದು ಇರಬೇಕಾಗಿದ್ದರೂ ಕಾರಣಾಂತರಗಳಿಂದ ಹಲವಾರು ಧರ್ಮಗಳೆಂಬುವು ಪ್ರಚಲಿತವಾಗಿರುವವು. ಪ್ರತಿ ಧರ್ಮದಲ್ಲಿಯೂ ದೇವರು ಅಥವಾ ಪರಮಾತ್ಮ ಅಥವಾ ಪರಾತ್ಪರಶಕ್ತಿ ಎಂಬುದರ ಬಗ್ಗೆ ಶ್ರದ್ಧೆ, ನಂಬುಗೆ ಇದ್ದುದು ಕಂಡುಬರುವದು. ಆ ದೇವರು ಸಗುಣ–ನಿರ್ಗುಣ, ಸಾಕಾರ–ನಿರಾಕಾರ, ಕರ್ತೃ–ಅಕರ್ತೃ ಇರುವನೊ ಹೇಗೆ ಎಂಬ ಬಗ್ಗೆ ಬೇರೆ ಬೇರೆ ಧರ್ಮಗಳಲ್ಲಿ ಬೇರೆ ಬೇರೆ ನಂಬುಗೆಗಳು ವಿಚಾರಗಳು ರೂಢವಿರುವುವು. ಗಾಂಧಿಯವರು ಉಪಾಸನೆಯ ಮಟ್ಟಿಗೆ ಭಕ್ತಿಯೋಗಕ್ಕಾಗಿ ಸಗುಣ ಪರಮಾತ್ಮನನ್ನು ನಂಬಿದ್ದರು ಹಾಗೂ "ರಾಮ" ಎಂಬ ನಾಮದ ಮೂಲಕ ಅವನನ್ನು ಜಪಿಸುತ್ತಿದ್ದರು ಆರಾಧಿಸುತ್ತಿದ್ದರು ಎನ್ನಲು ಆಧಾರಗಳಿವೆ. ಆದರೆ ದೇವರ ಆತ್ಯಂತಿಕ ಹಾಗೂ ಸೈದ್ಧಾಂತಿಕ ಸ್ವರೂಪದ ಬಗ್ಗೆ ಹೇಳುವುದಾದರೆ ಅವರು "ಸತ್ಯವೇ ದೇವರು" ಎಂದು ಸಾರಿಬಿಟ್ಟರು. ದೇವರು ಅವನ ಸ್ವರೂಪ ಯಾವದೇ ಇರಲಿ– ಇರುವನೊ ಇಲ್ಲವೊ ಎಂಬ ಬಗ್ಗೆ ಅನೇಕ ಬುದ್ಧಿವಾದಿಗಳು. ವಿಜ್ಞಾನಿಗಳು ಸಂಶಯಪಡುವರು ದೇವರೆಂಬ ವಸ್ತುವೆ ಇಲ್ಲ ಎಂದು ನಾಸ್ತಿಕರು ಪ್ರತಿಪಾದಿಸುವರು. ದೇವರಿದ್ದರೂ ಅವನು ಜಡಶಕ್ತಿರೂಪನೇ ಇರುವನೆಂದು ಜಡವಾದಿಗಳು ಅಥವಾ ಅಚೇತನವಾದಿಗಳು ಹೇಳುವರು. ಈ ಗೊಂದಲದೊಳಗಿಂದ ಗಾಂಧಿಯವರು ಒಂದು ಹೊಸ ಮಾರ್ಗವನ್ನೇ ಹುಡುಕಿದರು ಸತ್ಯವನ್ನು, ತಮ್ಮ ಅನುಭವದ ಸತ್ಯವನ್ನು, ತಾವು ಕಿವಿ


ಯಾರೆ ಕೇಳಿದ್ದನ್ನು, ಕಣ್ಣಾರೆ ಕಂಡದ್ದನ್ನು, ಬಾಯಾರೆ ಮಾಟ್ಟದ್ದನ್ನು, ಮನವಾರೆ ಅರಿಕೆಯಾದದನ್ನು ಯಾರೂ ಅಲ್ಲಗಳೆಯಲಾರರು. ದೇವರಿಲ್ಲ ಎಂದು ಅಲ್ಲಗಳೆಯುವವರು ಕೂಡ ಸತ್ಯವನ್ನು, ಸ್ವಂತ ಅನುಭವದ ಸತ್ಯವನ್ನು ಅಲ್ಲಗಳೆಯಲಾರರು ಆದದರಿಂದಲೇ ಅವರು "ಸತ್ಯವೇ ದೇವರು" ಎಂದರು; ಅವರು ಸತ್ಯವಾದಿಗಳು, ಸತ್ಯಸಂಧರು, ಸತ್ಯವ್ರತರು; ನಚಿಕೇತನಂತೆ ಅವರು ಸತ್ಯಧೃತಿಗಳು. ನಾನೊಬ್ಬ ನಮ್ರ ಸತ್ಯಶೋಧಕನು. ಸತ್ಯದ ಪೂಜಾರಿಯು ಎಂದು ಅವರು ಹಲವು ಸಾರೆ ಹೇಳಿದ್ದಾರೆ. ತಮ್ಮ ಆತ್ಮಕಥೆಗೆ ಅವರು "ಸತ್ಯವನ್ನು ಕುರಿತು ನನ್ನ ಪ್ರಯೋಗಗಳು" ಎಂಬ ಹೆಸರನ್ನಿಟ್ಟರು. ವಿಜ್ಞಾನಿಯು ಬಾಹ್ಯಸೃಷ್ಟಿನಿಯಮಗಳನ್ನು ಶೋಧಿಸುತ್ತ ಹೋಗುವಾಗ ವಿಧವಿಧದ ಪ್ರಯೋಗಗಳನ್ನು ಮಾಡಲೆತ್ನಿಸುವಂತೆ—ತಮ್ಮ ಆಂತರಿಕ ಅಥವಾ ಆತ್ಮಜೀವನದ ನಿಯಮಗಳನ್ನು ಶೋಧಿಸುವದಕ್ಕಾಗಿ ಹಾಗೂ ಇತರರೊಡನೆ ಯಾವ ರೀತಿ ವರ್ತಿಸಬೇಕು ಎಂಬುದನ್ನು ಕಂಡುಹಿಡಿಯುವದಕ್ಕಾಗಿ ಗಾಂಧಿ ಸತ್ಯವನ್ನು ಕುರಿತು ಪ್ರಯೋಗಗಳನ್ನು ಮಾಡುತ್ತ ಹೋದರು ಕಾಲಕಾಲಕ್ಕೆ ಆದ ಸತ್ಯದ ಪ್ರತೀತಿಯನ್ನು ಅವಲಿನಲ್ಲಿ ತರುತ್ತ ಮುಂದೆ ಸಾಗಿದರು. ಅದೇ ಅವರ ಜೀವನದ ಚರಿತ್ರೆಯಾಯಿತು. ಅದೇ ಸುಮಾರು ಮೂವತ್ತು ವರುಷ ನಮ್ಮ ದೇಶದ ಇತಿಹಾಸವಾಯಿತು.

ಇನ್ನು ಗಾಂಧಿಯವರು ಸತ್ಯ ಎಂದು ಹೇಳುವ ದೇವರ ಸ್ವರೂಪವೇನು? ವಿಶ್ವಧರ್ಮವಾಗಿ, ನಿಸರ್ಗದ ನಿಯಮಗಳಾಗಿ, ಸರ್ವವ್ಯಾಪಿಯಾದ ಪ್ರೇಮರೂಪವಾಗಿ, ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣೀಭೂತವಾದ ಶಕ್ತಿಸರ್ವಸ್ವವಾಗಿ ಈ ಸತ್ಯದೇವರು ಕಂಗೊಳಿಸುವನು. ಈ ಸತ್ಯವನ್ನು ತಿಳಿದುಕೊಳ್ಳಬೇಕಾದರೆ ಇಂದ್ರಿಯಮನಾದಿಗಳು ಸ್ವಾರ್ಥರಹಿತ ಹಾಗೂ ಶುದ್ಧವಾಗಿರಬೇಕು. ಒಮ್ಮೆ ಸತ್ಯವನ್ನು ಕಂಡ ಬಳಿಕ, ಅದರಂತೆಯೇ ನುಡಿಯಿರಬೇಕು. ಅದೇ ಸತ್ಯವಚನ ಎನಿಸುವುದು. ಆ ಸತ್ಯದಂತೆಯೇ ನಡೆಯಿರಬೇಕು, ಅಂದರೆ ನಡೆನುಡಿಗಳಲ್ಲಿ ಏಕತೆ ಉಂಟಾಗುವದು. ಇತರರೊಡನೆ ಆ ಸತ್ಯವನ್ನೇ ಮೂಲಾಧಾರವಾಗಿಟ್ಟುಕೊಂಡು ವರ್ತಿಸಬೇಕು ಆ ಸತ್ಯವನ್ನೇ ಪ್ರಸ್ಥಾಪಿಸಲಿಕ್ಕೆ ಸತತ ಯತ್ನ ಮಾಡಬೇಕು. ಆ ಪ್ರಸ್ಥಾಪನೆಯನ್ನು ಬಲಪ್ರಯೋಗದಿಂದ, ಬಲಾತ್ಕಾರದಿಂದ, ಮೋಸದಿಂದ, ಹಠಾತ್ತಾಗಿ ಹಿಂಸೆಯಿಂದ ಮಾಡದೆ ಅಹಿಂಸಾವೃತ್ತಿಯಿಂದ, ಸ್ವಂತ ಜೀವವನ್ನು ತ್ಯಜಿಸುವ ಪ್ರಸಂಗ ಬಂದರೆ ಹಾಗೆ ಕೂಡ ಮಾಡಿ ಮತಪರಿವರ್ತನೆಯನ್ನು ಮನಃಪರಿವರ್ತನೆಯನ್ನು ನಡೆಸಿಕೊಂಡು ಹೋಗಬೇಕು ಇದೇ ಸತ್ಯಾಗ್ರಹ ಎನಿಸುವದು.

ಗಾಂಧೀಪ್ರಣೀತ ಸತ್ಯಾಗ್ರಹವು ನೇರವಾಗಿ ಒಂದು ಧರ್ಮ ಇಲ್ಲವೆ ತತ್ತ್ವಜ್ಞಾನ ಎನಿಸದು, ಅದೊಂದು ದರ್ಶನವೂ ಆಗಲಾರದು. ಆದರೆ ಹಲವು ಧಾರ್ಮಿಕ ಹಾಗೂ ತಾತ್ತ್ವಿಕ ಸಿದ್ಧಾಂತಗಳನ್ನವಲಂಬಿಸಿದ ಜೀವನಮಾರ್ಗವದು. ಹೆಚ್ಚಾಗಿ ನೀತಿಶಾಸ್ತ್ರ ಸಮಾಜಶಾಸ್ತ್ರ ಹಾಗೂ ವ್ಯವಹಾರ ಇವುಗಳಿಗೆ ಅದು ಸಂಬಂಧಿಸಿದೆ ವಿಧಿನಿಷೇಧಾತ್ಮಕವಾದ ಸ್ಪಷ್ಟವಾದ ಮಾರ್ಗವು ತಮ್ಮ ಜೀವನದ ಸುಮಾರು ಐವತ್ತು ವರುಷ ಗಾಂಧಿಯವರು ಸತ್ಯಾಗ್ರಹ ಮಾರ್ಗದಿಂದ, ಕಾಯಾವಾಚಾಮನಸಾ ಸತ್ಯಾಗ್ರಹಮಾರ್ಗದಿಂದ ನಡೆಯಲುದ್ಯುಗಿಸಿದರು ಆದುದರಿಂದ ಸತ್ಯಾಗ್ರಹಕ್ಕೆ ಒಂದು ವಿಶಿಷ್ಟವಾದ ರೂಪವು ಬಂದಿರುವದು. ಧಾರ್ಮಿಕ ಹಾಗೂ ದಾರ್ಶನಿಕ ಕ್ಷೇತ್ರಗಳಲ್ಲಿ ಅವರು ಕೊಟ್ಟ ಕೊಡುಗೆ ಅಷ್ಟೊಂದು ಮೌಲಿಕ, ಮೂಲಭೂತ; ಆತ್ಯಂತಿಕ ನವೀನ ಎಂದು ಹೇಳಲಿಕ್ಕೆ ಬರದಿದ್ದರೂ ಸತ್ಯಾಗ್ರಹ ವೃತ್ತಿ ಹಾಗೂ ಮಾರ್ಗ ಇವು ಮಾನವಕುಲಕ್ಕೆ ಅವರು ಕೊಟ್ಟ ಮಹತ್ತರವಾದ ಕೊಡುಗೆಗಳೆಂದು ಹೇಳಿದರೆ ಅನ್ವರ್ಥಕವಾಗಬಲ್ಲದು

ಮನುಷ್ಯನು ತಾನು ಅಲ್ಪಶಕ್ತಿ, ಅಲ್ಪಮತಿ, ಒಂದು ಜೀವ, ಈ ಮಾತನ್ನು ಕಂಡುಹಿಡಿಯುವದು

ಚಿಕ್ಕಪ್ಪ ಹೇಳಿದ್ದು



ನನ್ನ ಕಾಲದಲಿ ಎಲ್ಲಾ ಸಪ್ಪೆ ಧಂದೆ.
ಕಾಲೇಜಿನಲಿ ಹುಡುಗಿ ಇರಲಿಲ್ಲ ಅಂದೆ.
ಈಗ್ಗೆ ನೋಡಿದರೆ ಎಲ್ಲಾ ಬಣ್ಣ ಬೇರೆ.
ಪ್ರತಿಯೊಂದು ಕ್ಲಾಸಿನಲಿ ತರತರದ ಸೀರೆ.

—ದಿನಕರ ದೇಸಾಯಿ

ಮೊದಲನೆ ಹೆಜ್ಜೆ ಅನಂತಶಕ್ತಿಯೊಂದು ವಿಶ್ವದಲ್ಲಿ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿದೆ ಅದೇ ಎಲ್ಲಕ್ಕೂ ಕಾರಣ, ಆಧಾರ, ನಿರ್ದೇಶಕ ಎಂಬುದನ್ನು ಗುರುತಿಸುವದು ಎರಡನೆ ಹೆಜ್ಜೆ. ಆ ಶಕ್ತಿಗೂ ತನ್ನ ಅಲ್ಪ ಶಕ್ತಿಗೂ ಇದ್ದ ಸಂಬಂಧವನ್ನು ತಿಳಿದುಕೊಳ್ಳುವದು ಮೂರನೆ ಹೆಜ್ಜೆ. ಆ ಸಂಬಂಧವನ್ನು ಹೆಚ್ಚೆಚ್ಚು ಬೆಳೆಸಿ ತನ್ನ ಅಲ್ಪಶಕ್ತಿಯನ್ನು ಆ ಮಹಾಶಕ್ತಿಯ ನಿಮಿತ್ತಮಾತ್ರವಾಗಿ ಮಾಡಿಬಿಡುವ ಶಕ್ಯತೆ ಜೀವನದಲ್ಲಿರುವದು ಎಂಬುದನ್ನು ಮನಗಾಣುವದು ನಾಲ್ಕನೆ ಹೆಜ್ಜೆ. ಈ ಎಲ್ಲ ಹೆಜ್ಜೆಗಳು ಧರ್ಮಭಾವನೆಗೆ ಸಂಬಂಧಪಟ್ಟವುಗಳೇ. ಇವೆಲ್ಲ ಗಾಂಧಿಯವರಲ್ಲಿ ಬಲವತ್ತರವಾಗಿದ್ದವು.

ಇದು ಜ್ಞಾನಕ್ಷೇತ್ರವಾಯಿತು. ಹೀಗೆ ಗುರುತಿಸಿದ ಧ್ಯೇಯವನ್ನು ಸಾಧಿಸುವ ಬಗೆ ಯಾವುದು? ಗಾಂಧಿಯವರು ಮುಖ್ಯವಾಗಿ ಭಕ್ತಿ ಹಾಗೂ ಕರ್ಮಯೋಗಗಳನ್ನು ಸಾಧನರೂಪವಾಗಿ ಅವಲಂಬಿಸಿದರು. ಆತ್ಮನಿವೇದನೆ, ಸರ್ವಸಮರ್ಪಣೆ ಮಾಡಿ, ಮಾಡುವವನು, ಮಾಡಿಸುವವನು, ಮಾಡಿಸದೆ ಇರುವವನು ನೀನೇ ಎಂದು, ಭಕ್ತನು ಇಷ್ಟದೇವತೆಗೆ ಸರ್ವಾರ್ಪಣೆ ಮಾಡಿ ತಾನು ಕೇವಲ ನಿಮಿತ್ತಮಾತ್ರನಾದಬೇಕೆನ್ನುವನು ಗಾಂಧಿಯವರು ಆ ವೃತ್ತಿಯನ್ನು ತಾಳಿದರು. ಆದರೆ ಅವರ ಪ್ರಕೃತಿಗೆ, ಮೂಲ ಸ್ವಭಾವಕ್ಕೆ ಅಷ್ಟೇ ಸಾಕಾಗಿರಲಿಲ್ಲ. ತನ್ನೊಬ್ಬನ ಉದ್ಧಾರದಿಂದ ಸಮಾಧಾನ ಹೊಂದುವ ಜೀವ ಅವರದಲ್ಲ. ಅವರು ಪರಮ ಕಾರುಣಿಕರು ಪರದುಃಖವನ್ನು ನೋಡಿ ಅದನ್ನು ಹೋಗಲಾಡಿಸಲು ತಲ್ಲಣಗೊಳ್ಳುವ ಸ್ವಭಾವ ಅವರದು. ಅಲ್ಲದೆ ಅತಂದ್ರಿತನಾಗಿ ಕರ್ಮದಲ್ಲಿ ನಿರತರಿದ್ದು ಕರ್ಮಸಮಾಧಿಯನ್ನು ಸಾಧಿಸುವ ಸ್ವಭಾವ ಅವರದು. ಆದುದರಿಂದ ಅವರು ಮಹಾನ್ ಕರ್ಮಯೋಗಿಗಳಾಗಿಹೋದರು.

ಈ ವಿಶ್ವಕ್ಕೆ, ಅವಿಶ್ರಾಂತವಾಗಿ ನಡೆದ ವಿಶ್ವಕರ್ಮಕ್ಕೆ ತುದಿಮೊದಲುಗಳಿಲ್ಲ ಈ ವಿಶ್ವಕರ್ಮಕ್ಕೆ ಕಾರಣೀಭೂತವಾದ ಅಥವಾ ಈ ವಿಶ್ವಕರ್ಮವನ್ನು ನಡೆಸುವ ಶಕ್ತಿಗೆ ಎರಡು ಮುಖ. ಒಂದು ವಿಧಾಯಕ ಇನ್ನೊಂದು ವಿಧ್ವಂಸಕ. ಜೀವನದೊಡನೆ ಮರಣ, ಬೆಳಕಿನೊಡನೆ ಕತ್ತಲು, ಅಹಿಂಸೆಯೊಡನೆ ಹಿಂಸೆ, ಪ್ರೇಮದೊಡನೆ ದ್ವೇಷ ಇವು ಎಲ್ಲೆಲ್ಲಿಯೂ ಕಂಡ ಬರುವವು. ಪ್ರಾಣಿಮಾತ್ರಗಳಲ್ಲಿ ಮನುಷ್ಯನೊಬ್ಬನೇ ಈ ವಿಮರ್ಶೆ ಮಾಡಬಲ್ಲನು. ಬುದ್ಧಿಪುರಸ್ಸರವಾಗಿ ಪ್ರಯತ್ನಪೂರ್ವಕವಾಗಿ ವಿಧಾಯಕ ಶಕ್ತಿಗಳಿಗೆ ಪುಟಕೊಟ್ಟು, ವಿಧ್ವಂಸಕಶಕ್ತಿಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಯತ್ನಿಸಬಲ್ಲನು. ಒಳಿತು ಕೆಡಕುಗಳನ್ನು – ವಿಧಾಯಕವಾದುದು ಒಳಿತು, ವಿಧ್ವಂಸಕವಾದುದು ಕೆಡಕು–ತಿಳಿದುಕೊಂಡು ವರ್ತಿಸಬಲ್ಲನು. ಈ ಮೂಲ ಮಾತನ್ನರಿತುಕೊಂಡು ಗಾಂಧಿಯವರು : ಮರಣದ ರುದ್ರತಾಂಡವದ ಮಧ್ಯೆ ಜೀವನವು ತಲೆಯೆತ್ತಿ ಬಾಳುವದು : ಕರಾಳಕತ್ತಲೆ ಕವಿದು ಕುಣಿಯುತ್ತಿದ್ದರೂ ಬೆಳಕಿನ ಕಿರಣಗಳು ಸುಳಿದಾಡುತ್ತಲೇ ಇರುವವು; ದ್ವೇಷಾಗ್ನಿಯ ಜ್ವಾಲೆಯು ಧಗಧಗನೆ ಉರಿಯುತ್ತಿದ್ದರೂ ಪ್ರೇಮಜಲದ ಸಿಂಚನೆ ನಡೆಯುತ್ತಲೆ ಇರುವದು. ಪ್ರಳಯದ ಚಂಡಮಾರುತನು ಬೀಸುತ್ತಿದ್ದರೂ ಜೀವನದಾಯಿಯಾದ ತಣ್ಣೆಲರು ಸೂಸುತಲೆ ಇರುವದು; ವಿಧ್ವಂಸಕ ಹಿಂಸೆ ಸರ್ವತೋಪರಿ ನಾಶವನ್ನು ಕಲ್ಪಿಸಿದರೂ ವಿಧಾಯಕ ಅಹಿಂಸೆ ನವನಿರ್ಮಾಣವನ್ನು ಮಾಡುತಲೇ ಹೋಗುವದು ವಿಧಾಯಕ ಶಕ್ತಿಯ ಮೇಲುಗೈ ಇದುದರಿಂದಲೇ ವಿಶ್ವ ನಿಂತಿದೆ, ಬದುಕಿದೆ, ಬಾಳಿದೆ, ಬೆಳೆಯುತ್ತಲೂ ಇದೆ. ಆದುದರಿಂದಲೇ ಉಪನಿಷದೃಷಿಗಳು, 'ಅಸತೋಮಾ ಸದ್ಗಮಯ, ತಮಸೋಮಾ ಜ್ಯೋತಿರ್ಗಮಯ ಮೃತ್ಯೋರ್ಮಾ ಅಮೃತಂ ಗಮಯ' ಎಂಬ ಶಬ್ದಗಳಿಂದ ಮಾನವೀ ಆಶೋತ್ತರಗಳನ್ನು, ಆಂತರಿಕ ಆಕಾಂಕ್ಷೆಗಳನ್ನು ವ್ಯಕ್ತಗೊಳಿಸಿದ್ದಾರೆ.

ಗಾಂಧಿಯವರು ನಿಸರ್ಗದಲ್ಲಿಯ ಶಕ್ತಿಗಳ ಓಘವನ್ನು, ಪ್ರವಾಹವನ್ನು ಅರಿತು, ಮಾನವನ ಉತ್ಕ್ರಾ-

ಮಣವ ಉನ್ನತಿಯು, ಯಾವ ಮಾರ್ಗದಿಂದ ಆಗ ಬಲ್ಲದು ಎಂಬುದನ್ನು ಪರಿಶೀಲಿಸಿ ವಿಧ್ವಂಸಕವಾದ ಹಿಂಸಾಮಾರ್ಗವನ್ನು ತ್ಯಜಿಸಿದರು. ವಿಧಾಯಕವಾದ ಅಹಿಂಸಾಮಾರ್ಗವನ್ನು ಹಿಡಿದರು, ದ್ವೇಷವನು ಅಲ್ಲಗಳೆದು ಪ್ರೇಮವನ್ನು ಅಪ್ಪಿದರು, ಅಸತ್ಯವನು ಹೊರಚಲ್ಲಿ ಸತ್ಯವನ್ನು ಸ್ಥಾಪಿಸಲೆತ್ನಿಸಿದರು ಕೆಡುಕಿನೊಡನೆ, ಅಸತ್ಯದೊಡನೆ ಅನ್ಯಾಯದೊಡನೆ, ಹಿಂಸೆಯೊಡನೆ, ಆಮರಣಾಂತ ಅಹಿಂಸಕ ಹೋರಾಟವನ್ನು ಹೂಡಿದರು ವಿಧಾಯಕ ಕಾರ್ಯಗಳ ಮೂಲಕ ಪ್ರೇಮಶಕ್ತಿಯನ್ನು ಸಂಘಟಿಸಲು ಯತ್ನಿಸಿದರು ದ್ವೇಷದಿಂದ ದ್ವೇಷವನ್ನು, ಕ್ರೋಧದಿಂದ ಕ್ರೋಧವನ್ನು, ಕ್ರೌರ್ಯದಿಂದ ಕ್ರೌರ್ಯವನ್ನು ಗೆಲ್ಲುವದು ಅಸಾಧ್ಯ; ಅವುಗಳನ್ನು ಪ್ರೇಮದಿಂದ, ಶಾಂತಿಯಿಂದ, ಕರುಣೆಯಿಂದಲೇ ಗೆಲ್ಲುವ ಮಾರ್ಗವನು ತೋರಿಸಿಕೊಟರು.

ಬಹಿರಂಗದಲ್ಲಿ, ವ್ಯವಹಾರದಲ್ಲಿ, ಪ್ರಪಂಚದಲ್ಲಿ, ಜೀವನರಂಗದಲ್ಲಿ, ಒಳಿತು ಕೆಡಕು, ನ್ಯಾಯ ಅನ್ಯಾಯ, ರಾಗದ್ವೇಷ ಇತ್ಯಾದಿ ದ್ವಂದ್ವಗಳ ನಡುವೆ ಸತತವಾಗಿ ಘರ್ಷಣೆ ನಡೆಯುತ್ತಲೆ ಇರುವದು. ಅದೇ ಬಗೆಯ ತುಮುಲ ಮನುಷ್ಯನ ಅಂತಃಕರಣದಲ್ಲಿಯೂ ನಡೆಯುತ್ತ ಇರುವದು. ಅಥವಾ ಮನುಷ್ಯನ ಅಂತಃಕರಣದಲ್ಲಿಯ ತುಮುಲದ ಪ್ರತಿಬಿಂಬವೇ ಹೊರಗೆ ತೋರ್ಪಡುವದು ಎಂದು ಹೇಳಿದರೂ ಆದೀತು ಕೆಡಕು ಶಕ್ತಿಗಳ ನಿಗ್ರಹ ಒಳಿತು ಶಕ್ತಿಗಳ ಪರಿಪೋಷ ಇದೇ ಧರ್ಮ ಮಾರ್ಗ. ಗಾಂಧಿಯವರು ಆ ದೃಷ್ಟಿಯಿಂದಲೇ 'ಅಹಿಂಸಾ ಸತ್ಯ ಅಸ್ತೇಯಾದಿ' ವ್ರತಗಳನ್ನು ಪ್ರತಿಪಾದಿಸಿದರು. ಆತ್ಮಶಕ್ತಿಯನ್ನು ಬೆಳೆಸುವ ಮಾರ್ಗವದು ಗೀತೆಯಲ್ಲಿ ಹೇಳಿದ ದೈವೀಸಂಪತ್ತಿನ ಬೆಳವಣಿಗೆ, ಅಸುರೀ ಸಂಪತ್ತಿನ ನಾಶ ಇದೇ ಶ್ರೇಷ್ಠ ಸಾತ್ವಿಕ ಸಾಧನ ಮಾರ್ಗ. ಗಾಂಧಿಯವರು ಈ ಮಾತುಗಳನು ಶಬ್ದಗಳಲ್ಲಿ ಇಲ್ಲವೇ ಲೇಖಗಳಲ್ಲಿ ಹುಗಿದಿಡಲಿಲ್ಲ; ವಿಚಾರ ಸೃಷ್ಟಿಯಲ್ಲಿ ತೇಲಿಬಿಟ್ಟು ಸುಮ್ಮನೆ ನೋಡುತ ಕೂಡಲಿಲ್ಲ; ಅವುಗಳನು ಧೀರೋದಾತ್ತ ವೀರನಂತೆ ಪ್ರತ್ಯಕ್ಷ ಆಚರಣೆಯಲ್ಲಿ ತಂದರು ಆದುದರಿಂದಲೇ ಅವರು ಮಹಾತ್ಮರೆನಿಸಿದರು, ಧರ್ಮಾತ್ಮರೆನಿಸಿದರು

ಈ ವರೆಗೆ ಗಾಂಧಿಯವರ ಧರ್ಮಕಲ್ಪನೆ, ಧರ್ಮಭಾವನೆ, ತತ್ತ್ವಜ್ಞಾನದ ತಿರುಳು, ಇತ್ಯಾದಿಗಳನ್ನು ಹೇಳಿದಾಗಿದೆ. ಇನ್ನು ಪರಂಪರಾಗತವಾದ ಪರಿಭಾಷೆಯಲ್ಲಿ ಹಲವು ಮಾತುಗಳನ್ನು ಹೇಳಬಹುದು ದರ್ಶನ ಅಥವಾ ತತ್ತ್ವಜ್ಞಾನವೆಂದರೆ ಜೀವ-ಜಗತ್ತು ಈಶ್ವರ ಇವುಗಳ ಗುಣಧರ್ಮ ಹಾಗೂ ಪರಸ್ಪರ ಸಂಬಂಧವನ್ನು ಪರಿಶೀಲಿಸುವದು. ಒಂದು ರೀತಿ ನೋಡಿದರ, ಅಪ್ರಮೇಯವಾದ ಪರಮಾತ್ಮಶಕ್ತಿಯೇ ಎಲ್ಲಕ್ಕೂ, ಸೃಷ್ಟಿ-ಸ್ಥಿತಿ-ಲಯಕ್ಕೂ ಕಾರಣ ಆ ಶಕ್ತಿಯ ಅಸ್ತಿತ್ವದಲ್ಲಿ ಗಾಂಧಿ ಅಪಾರ ಶ್ರದ್ಧೆಯುಳ್ಳವರಾಗಿದ್ದರು. ಆ ಶಕ್ತಿಯಿಂದಲೆ ಜಗತ್ತಿನ ಅಸ್ತಿತ್ವಾದಿಗಳು. ಪ್ರಾಣಿಮಾತ್ರರೆಲ್ಲ ಒಂದೇ ಇದ್ದರೂ ಮಾನವನು ಬುದ್ಧಿ-ವಿವೇಕ-ಶಕ್ತಿಗಳ ಮೂಲಕ ಉನ್ನತ ಸ್ಥಿತಿಗೆ ಹೋಗುವ ಸಾಮರ್ಥ್ಯವುಳ್ಳವನು ಜೀವಕ್ಕೆ ಪುನರ್ಜನ್ಮಾದಿಗಳಿರುವವು. ಆದರ ಆತ್ಮ-

ವನ್ನು ಅರಿತುಕೊಂಡು ತನ್ನ ಉದ್ಧಾರ ಮಾಡಿಕೊಳ್ಳುವ ಶಕ್ತಿ ಮಾನವನಲ್ಲಿದೆ. ಆತ್ಮವಸ್ತು ದೇಶ ಕಾಲ ಪರಿಸ್ಥಿತಿಗಾಚೆಗಿನದು, ಪರಮಾತ್ಮನ ಅಂಶಭೂತವಾದದ್ದು, ಸರ್ವರಲ್ಲಿಯೂ ಏಕರೂಪವಾಗಿರತಕ್ಕಂತಹದು, ಏಕತ್ವದ ಅನುಭವ, ಪರಮಾತ್ಮೈಕ್ಯದ ಅನುಭವ ಪಡೆಯುವ ಶಕ್ತಿಯುಳ್ಳದ್ದು. ದೇಹಾತ್ಮಬುದ್ಧಿಯ ಮೂಲಕ ಕರ್ಮವು ಬಂಧನಕಾರಿಯಾಗುವದು. ಆದರೆ ಅನಾಸಕ್ತಿಯಿಂದ ಆ ಬಂಧನವನ್ನು ಕಳೆದುಕೊಳ್ಳುವ ಶಕ್ತಿ ಆತ್ಮನಿಗಿದೆ.

ಅವರು ದ್ವೈತಿಗಳೊ ಅದ್ವೈತಿಗಳೊ ಎಂಬ ಪ್ರಶ್ನೆ ಉದ್ಭವಿಸಬಹುದು. ತತ್ತ್ವತಃ ಅದ್ವೈತವನ್ನು ನಂಬಿದ್ದರೂ ಅವರು ಭಕ್ತಾಗ್ರಣಿಗಳಿದ್ದುದರಿಂದ ವ್ಯವಹಾರತಃ ದ್ವೈತರು ಎಂದು ಹೇಳಬಹುದು. ಜ್ಞಾನಮೂಲಕ- ಭಕ್ತಿಪ್ರಧಾನ- ಕರ್ಮಯೋಗ ಅವರದು ಪರಮಾತ್ಮನಲ್ಲಿ ಎಷ್ಟು ದೃಢ ಶ್ರದ್ಧೆಯೊ ಅಷ್ಟೇ ಮಾನವನ ಆಧ್ಯಾತ್ಮಿಕ ಇತ್ಯಾದಿ ಉನ್ನತಿಯ ಬಗ್ಗೆ ಅವರಲ್ಲಿ ಹವಣುಹವ್ಯಾಸಗಳು. ವ್ಯಕ್ತಿಯ ಮೋಕ್ಷದ ಬಗ್ಗೆ ಎಷ್ಟು ಆತುರವೊ ಅಷ್ಟೇ ಸಕಲ ಮಾನವಕುಲದ ಉದ್ಧಾರದ ಬಗ್ಗೆ ಅವರ ಪ್ರಯತ್ನ. ಆತ್ಮನ ಉದ್ಧಾರಕ್ಕಾಗಿ ಎಷ್ಟು ಅವರ ತವಕವೊ ಅಷ್ಟೇ ದೇಹಮನಾದಿಗಳ ಸ್ವಾಸ್ಥ್ಯ ಆರೋಗ್ಯಕ್ಕಾಗಿ ಅವರ ಚಿಂತೆ. ಇಡೀ ಮಾನವ ಕುಲ ಮಾನವಕುಟುಂಬ ಒಂದೇ ವರ್ಗಕ್ಕೆ ಸೇರಿದ ಪ್ರಾಣಿಕೋಟಿ, ಅದರ ಸರ್ವಾಂಗೀನ ಉದ್ಧಾರದ ಪ್ರಯತ್ನವು ಆಧ್ಯಾತ್ಮಿಕ ಸಾಧನವರ್ಗಕ್ಕೆ ಸೇರಿದುದು ಕರ್ಮಭೂಮಿಯಲ್ಲಿ ಹುಟ್ಟಿ, ಬೆಳೆದು ಕರ್ಮಬಂಧನದಿಂದ ಮುಕ್ತವಾಗಲಿಚ್ಛಿಸುವ ಮಾನವ ಮಾತ್ರನು ಕರ್ಮಯೋಗವನ್ನು ಅರ್ಥಾತ್ ಕೃಷ್ಣಾರ್ಪಣಪೂರ್ವಕವಾದ ಅನಾಸಕ್ತ ಕರ್ಮವನ್ನು ಮಾಡುತ್ತ ಇರುವದೇ ಶ್ರೇಷ್ಠ ಸಾಧನ ಸಂಪತ್ತು. ಆದರೆ ವಿಧಾಯಕ ಹಾಗೂ ಅಹಿಂಸಾತ್ಮಕ ಕರ್ಮವೇ ಅವನ ಕರ್ತವ್ಯ. ಒಂದು ಹುಲ್ಲುಕಡ್ಡಿಯನ್ನು ಕೂಡ ನಿರ್ಮಾಣ ಮಾಡುವ ಶಕ್ತಿ ಇಲ್ಲದ ಮಾನವ ಪ್ರಾಣಿಯು ವಸ್ತುನಾಶವನ್ನು ಅಥವಾ ಪ್ರಾಣಿಕ್ಕೆ ಯಾವುದೇ ಬಗೆಯ ಅಪಾಯವನ್ನು ಮಾಡಲ ಅನಧಿಕೃತನು. ಆದರೆ ಅಹಿಂಸೆ ಇದರ ಅರ್ಥ ಹೇಡಿತನವಲ್ಲ, ಕರ್ತವ್ಯವಿಮುಖತೆಯಲ್ಲ, ಕೆಡಕು, ಅನ್ಯಾಯಾದಿಗಳಿಗೆ ತಲೆ ಬಾಗುವದಲ್ಲ. ಕೆಡಕು-ಅನ್ಯಾಯಾದಿಗಳೊಡನೆ ಸತತ ಹೋರಾಟವೇ ವೀರನ ಲಕ್ಷಣ, ಧೀರನ ಬಿರುದು, ಶೂರನ ಕರ್ತವ್ಯ. ಆದರೆ ಶೌರ್ಯ ವೀರ್ಯ ಧೀರತೆಗಳು ಬರೀ ಹಿಂಸಾಕರ್ಮದಲ್ಲಿಯೇ ಅಡಗಿವೆಯೆಂದು ತಿಳಿಯುವದು ತಪ್ಪು. ಅಹಿಂಸಾತ್ಮಕ ಹೋರಾಟದಲ್ಲಿಯೂ ಈ ಎಲ್ಲ ಗುಣಗಳು ಅವಶ್ಯ. ಮೇಲಾಗಿ ಸತ್ಯದಲ್ಲಿ ಶ್ರದ್ಧೆ, ಪರಮಾತ್ಮನಲ್ಲಿ ವಿಶ್ವಾಸ, ಹೃದಯದಲ್ಲಿ ಶತ್ರುಗಳ ಬಗ್ಗೆಯೂ ಪ್ರೇಮ, ಈ ಮುಂತಾದ ಹೆಚ್ಚಿನ ದೈವೀಗುಣಗಳೂ ಬೇಕಾಗುವವು.

ಗಾಂಧೀ ಪ್ರಣೀತ ಧರ್ಮ, ತತ್ತ್ವಜ್ಞಾನ, ಧ್ಯೇಯ ಧ್ಯಾನಾದಿಗಳು, ಸಾಧನ ಸಾಮಗ್ರಿಗಳು ಈ ಮೇಲಿನಂತೆ ಇವೆ ಅವರ ಅದ್ವಿತೀಯ ಜೀವನ ಚರಿತ್ರವೇ ಇದಕ್ಕೆ ಸಾಕ್ಷಿ.

ಪಂಚವಾರ್ಷಿಕದ ಪೇಯ



ಎಲ್ಲಿ ಹೋಯಿತು ಪಂಚವಾರ್ಷಿಕದ ಪೇಯ ?
ಕೊನೆಗೆ ನೋಡಿದರೆ, ಸಖಿ, ಶುಂಠೀ ಕಷಾಯ.
ಈ ಪರಿಸ್ಥಿತಿಗೆ ಕಾರಣವೇನು ಗೊತ್ತೆ ?
ಕುದುರೆ ಎಂಬುದು ಕೊನೆಗೆ ಆದಂತೆ ಕತ್ತೆ.

—ದಿನಕರ ದೇಸಾಯಿ

ಭಾರತೀಯ ಸಾಂಸ್ಕೃತಿಕ ಪರಂಪರೆ

"ಸಂಸ್ಕೃತಿ" ಎಂಬ ಶಬ್ದವು ರಬ್ಬರಿನಂತೆ; ಹಿಂಜಿದಷ್ಟೂ ಅಗಲ, ಎಳೆದಷ್ಟೂ ಉದ್ದ. ಇದರ ಅರ್ಥ ಬಹುಮುಖವಾದದ್ದು, ವಿಶಾಲವಾದದ್ದು. ಸರಳವಾದ ಅರ್ಥದಲ್ಲಿ ನಮ್ಮ ಜೀವನವನ್ನು 'ಸಾಧು'ವಾಗಿ ಮಾಡಿಕೊಳ್ಳುವ ವಿಧಾನವೇ ಸಂಸ್ಕೃತಿ. ಸಾಮಾನ್ಯರ ದೃಷ್ಟಿಯಲ್ಲಿ ಒಳ್ಳೆಯದನ್ನು ಕಂಡುಕೊಳ್ಳುವುದೇ ಸಂಸ್ಕೃತಿ. ಪಂಡಿತರ ಭಾಷೆಯಲ್ಲಿ ಹೇಳಬೇಕಾದರೆ "ಸಂಸ್ಕೃತಿ ಎಂಬುದು ಬರಿಯ ವಿದ್ಯೆ ಅಲ್ಲ ಅದು ವಿದ್ಯಾಕುಸುಮದ ಪರಾಗ. ಅದು ಸಾಹಿತ್ಯ ಪರಾಮರ್ಶೆಯ ಮತ್ತು ಲೋಕಾನುಭವ ವಿವೇಕದ ದಾಂಪತ್ಯದಿಂದ ಜನಿಸುವ ಒಂದಾನೊಂದು ಸಕಲ ಸಮಾಧಾನಕಾರಕವಾದ ಶೀಲ ಸೌಭಾಗ್ಯ. ಅದು ಜೀವನದ ನಾನಾ ವಿಷಯಗಳ, ನಾನಾಧ್ಯೇಯಗಳ, ನಾನಾತತ್ವಗಳ ನಾನಾ ಧರ್ಮಗಳ— ಮೌಲ್ಯ ತಾರತಮ್ಯಜ್ಞಾನದಿಂದಾದ ಸಮನ್ವಯ ಸ್ವಾರಸ್ಯ" (ಡಿ. ವಿ. ಜಿ.) ಅಂತರಂಗ ಪರಿಷ್ಕರಣ— ನೀತಿ ನಯ ಕುಶಲತೆ— ಸಂಸ್ಕೃತಿ. ಹಾಗಾದರೆ ಸುಸಂಸ್ಕೃತನ ಲಕ್ಷಣಗಳೇನು? ಸುಸಂಸ್ಕೃತನಿಗೆ ಪರೇಂಗಿತ ಪರಿಗ್ರಹಣ ಸ್ವಸ್ಥಾನ ಪರಿಜ್ಞಾನ, ಸ್ವಾರ್ಥನಿಯಮನ. ಸಮನ್ವಯ ದೃಷ್ಟಿ, ಸರಸತೆ— ಎಲ್ಲವೂ ಇರುತ್ತವೆ ಈ ದೃಷ್ಟಿಯಿಂದ ನೋಡಿದರೆ ಭಾರತೀಯ ಸಂಸ್ಕೃತಿಯ ಲಕ್ಷಣಗಳು ಸ್ಪಷ್ಟವಾಗಿ ಗೋಚರವಾಗುತ್ತವೆ

ಒಂದು ಕಾಲಕ್ಕೆ ಹಿಂದೂ ಧರ್ಮ, "ಹಿಂದೂ ಸಂಸ್ಕೃತಿ" ಎಂದು ಹೆಸರು ಪಡೆದಿದ್ದು ಕಾಲಕ್ರಮದಲ್ಲಿ ವಿದೇಶೀ ಜನಜೀವನದ ಪ್ರವಾಹಗಳನ್ನು ತನ್ನ ಗರ್ಭದಲ್ಲಡಗಿಸಿಕೊಂಡು, ತನ್ನತನವನ್ನು ಬಿಟ್ಟುಕೊಡದೆ ದೃಷ್ಟಿ— ಸೃಷ್ಟಿಗಳ ವೈಶಾಲ್ಯವನ್ನು ಮೆರೆಸಿ ನಮ್ಮ ಸಂಸ್ಕೃತಿಯು "ಭಾರತೀಯ ಸಂಸ್ಕೃತಿ"ಯಾಯಿತು. ಇಂದು ಭಾರತಕ್ಕೆ ತನ್ನದೇ ಆದ ಜೀವನ ದೃಷ್ಟಿಯುಂಟು. ಇದನ್ನು ಇತಿಹಾಸ ಬೋಧಿಸುತ್ತದೆ. ಭಾರತೀಯ ಸಂಸ್ಕೃತಿ ಕೇವಲ ಆಧ್ಯಾತ್ಮ ಪ್ರಧಾನವಾದದ್ದು. ಮತೀಯ ದೃಷ್ಟಿಯಿಂದ ಕೂಡಿದ್ದು. 'ಭಾರತೀಯ ಸಂಸ್ಕೃತಿ' ಎಂಬುದೇ ಇಲ್ಲ— ಹೀಗೆಲ್ಲ ತಪ್ಪುಕಲ್ಪನೆಯಿಂದ ಕೂಡಿದವರಿಗೆ 'ಸಂಸ್ಕೃತಿ'ಯು ಮತೀಯ ನಡವಳಿಕೆಯ ಆಧಾರದ ಮೇಲಿದೆ' ಎಂದು ಕವಿ ಟಿ ಎಸ್ ಈಲಿಯಟ್ ಉತ್ತರ ಕೊಟ್ಟಿದ್ದಾನೆ. ಐರೋಪ್ಯಸಂಸ್ಕೃತಿಗೆ ಕ್ರೈಸ್ತ ಮತವೇ ಮೂಲಾಧಾರ; ಅಂತೆಯೇ ಭಾರತೀಯ ಸಂಸ್ಕೃತಿಗೆ ಭಾರತದ ಮತಗಳು ಆಧಾರ. ಭಾರತೀಯ ಸಂಸ್ಕೃತಿಯು ಏಷಿಯಾದ ವೇದಾಂತ ತತ್ವ ಮತ್ತು ಮತಪದ್ಧತಿಗಳ ಮೇಲೆ ತನ್ನ ವರ್ಚಸ್ಸನ್ನು ಬೀರಿದೆ.

ಸಹಿಷ್ಣುತೆ: ಸಹಿಷ್ಣುತೆಗೆ ಭಾರತ ತವರೂರು. ಜಾತೀಯತೆಯ ಆಧಾರದ ಮೇಲೆ ದೇಶ ವಿಭಜನೆಯಾದರೂ, ಭಾರತ ಜಾತ್ಯತೀತ ರಾಷ್ಟ್ರವಾಗಿ ಉಳಿದಿದೆ. ಮತ ಸಹಿಷ್ಣುತೆ ಇದಕ್ಕೆ ಕಾರಣ. ಮಾನವಕಲ್ಯಾಣಕ್ಕಾಗಿ ಪ್ರತಿಜೀವನ ವಿಧಾನವೂ ತನ್ನದೇ ಆದ ಕೊಡುಗೆಯನ್ನೀಯಬಲ್ಲದು ಎಂಬುದರಲ್ಲಿ ಭಾರತೀಯರಿಗೆ ನಂಬುಗೆ ಹೆಚ್ಚು. ಅನ್ಯರ ನಂಬಿಕೆ-ನಡವಳಿಕೆಗಳಿಗೆ ಗೌರವ ಸೂಚಿಸುವುದೂ ಇತರರ ಜೀವನ ವಿಧಾನ ಮಾರ್ಗಗಳನ್ನು ಉದಾರತೆಯಿಂದ ಅರ್ಥಮಾಡಿಕೊಳ್ಳುವುದೂ ಭಾರತೀಯ ವೈಶಿಷ್ಟ್ಯ. ೧೪–೧೫–೧೬ನೆ ಶತಮಾನಗಳಲ್ಲಿ ನಡೆದ ಮತೀಯ ಪುನರುಜ್ಜೀವನವು ಹಿಂದೂಧರ್ಮದ ಮೇಲೆ ಬಹಳಷ್ಟು ಪ್ರಭಾವ ಬೀರಿತು. ಇದರಲ್ಲಿ ಇಸ್ಲಾಂಧರ್ಮದ ಪಾತ್ರವೇನೂ ಕಡಿಮೆಯದಲ್ಲ ಅಂತೆಯೇ ಕ್ರೈಸ್ತಧರ್ಮ ಪ್ರಚಾರದಿಂದ ಆ ಬೆಳಕಿನಲ್ಲಿ ನಮ್ಮ ಧರ್ಮದ ಪುನರ್ವಿಮರ್ಶೆ ನಡೆಯಿತು.

ಸಮರಸ ಭಾವ: ಭಾವನೆಗಳ ಹಾಗು ಸಿದ್ಧಾಂತಗಳ ನಿರಂತರ ಸಮರಸವು ಭಾರತೀಯಸಂಸ್ಕೃತಿಯ ದ್ವಿತೀಯ ಲಕ್ಷಣ. ಆರ್ಯದ್ರಾವಿಡ ಸಮರಸವೇ ಹಿಂದೂ ಸಂಸ್ಕೃತಿ ಮತ್ತು ನಾಗರಿಕತೆಗೆ ಪ್ರಥಮ ಹಂತವಾಯಿತು. ಈ ಸಾಮರಸ್ಯದ ಫಲವೇ ಐಕ್ಯ. ದೇಶದಲ್ಲಿನ ಕುಟುಂಬ, ಗ್ರಾಮ ಮತ್ತು ನ್ಯಾಯನಿರ್ವಹಣೆಗಳಲ್ಲಿ ಕಂಡುಬರುತ್ತಿರುವ ಏಕರೂಪತೆಗೆ ಸಮರಸದೃಷ್ಟಿಯೇ ಕಾರಣ. ಭಾರತೀಯ ಕಲೆಯೂ ಇದೇ ಹಾದಿಯಲ್ಲಿ ಸಾಗಿದೆ. ಪರದೇಶೀಯರ ಶಿಲ್ಪತಂತ್ರಗಳು ನಮ್ಮ ಶಿಲ್ಪಗಳಲ್ಲಿ ಪ್ರತಿಫಲಿಸುತ್ತಿವೆ. ಪರ್ಶಿಯನ್ನರ ಗ್ರೀಕರ ಶಿಲ್ಪಶಾಸ್ತ್ರಗಳ ಪ್ರಭಾವ ಸ್ಪಷ್ಟವಾಗಿದೆ. ಆಂಗ್ಲರ ಆಡಳಿತೆಯು ಪೂರ್ವ-ಪಶ್ಚಿಮಗಳ ಸಾಮರಸ್ಯಕ್ಕೆ ನಾಂದಿಯಾಯಿತು. ಇದಕ್ಕೆ ಮಹಾತ್ಮಾ ಗಾಂಧೀ ಹಾಗು ಜವಾಹರಲಾಲರು ಉದಾಹರಣೆಗಳಾಗಿದ್ದಾರೆ.

ದೃಷ್ಟಿ ವೈಶಾಲ್ಯ: ಭಾರತೀಯ ಸಂಸ್ಕೃತಿಯು ವಿಶ್ವವಿಶಾಲದೃಷ್ಟಿಯುಳ್ಳದ್ದು. ಚರಮಮೌಲ್ಯಗಳ ಸಲುವಾಗಿ ಅದು ಭೌಗೋಲಿಕ, ಮತೀಯ, ಜಾತೀಯ ಭಾವನೆಗಳನ್ನು ಬದಿಗೊತ್ತುತ್ತಾ ನಿಂತಿದೆ. ವಿಶ್ವಕಲ್ಯಾಣವೇ— ಜೈಜಗತ್— ಭಾರತದ ಅಂತಿಮ ಗುರಿ. ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳನ್ನು ಭಾರತದಲ್ಲಿ ಗೌರವಿಸುವಷ್ಟು ಅವುಗಳ ದೇಶದಲ್ಲೇ ಗೌರವಿಸುವರೋ ಇಲ್ಲವೋ ತಿಳಿಯದು ವಿವಿಧ ಧರ್ಮಗಳ ಪ್ರವಾದಿಗಳನ್ನು ಭಾರತೀಯರು ಭಕ್ತಿಯಿಂದ ಕಾಣುತ್ತಾರೆ. ಇದಕ್ಕೆ ಅವರ ದೃಷ್ಟಿವೈಶಾಲ್ಯವೇ ಕಾರಣ.

ತತ್ವಂ ಅಸಿ: ಭಾರತೀಯ ಸಂಸ್ಕೃತಿಯಲ್ಲಿ ಜೀವಾತ್ಮ—ಪರಮಾತ್ಮ ಸಂಬಂಧ ಹಾಗೂ ಆತ್ಮ-ವಿಶ್ವಾತ್ಮ ಸಂಬಂಧವು ಅಂತರ್ಗತವಾಗಿದೆ "ಅದು ಯಾವುದೋ (ವಿಶ್ವಾತ್ಮ) ಅದೇ ನೀನು." ಇದೇ ತತ್ವಂ ಅಸಿಯ ಅರ್ಥ. ಈ ಕಾರಣದಿಂದ ಭಾರತೀಯರದ್ದು ವೇದಾಂತ ದೃಷ್ಟಿ ಎನ್ನುವುದೂ ಉಂಟು.

ವ್ಯಕ್ತಿಗೌರವ: ಹಿಂದೂ ಜೀವನ ದೃಷ್ಟಿಯಲ್ಲಿ ಪ್ರತಿ ವ್ಯಕ್ತಿಯಲ್ಲೂ ದೈವಿಕಪ್ರತಿಭೆ ಇದೆ. ಮನುಷ್ಯನು ತನ್ನ ಸನ್ನಡತೆ ಮತ್ತು ಸುಜ್ಞಾನಗಳಿಂದ

ಕುಣಿಗಲ್ ಶ್ರೀನಿವಾಸ ಶಾಸ್ತ್ರಿ

ದಿವ್ಯಲೋಕವನ್ನು ಹೊಂದುತ್ತಾನೆ. ಇದು ಬೌದ್ಧ ಮತದ ತತ್ವವೂ ಹೌದು.

ವಿಮರ್ಶಾತ್ಮಕ ನೋಟ: ಭಾರತೀಯರು ಸಂನ್ಯಾಸಕ್ಕೆ ಹೆಚ್ಚಿನ ಪ್ರಾಧಾನ್ಯವಿತ್ತಿದ್ದಾರೆ. ಭಾರತೀಯ ಸಂಸ್ಕೃತಿಯು ವಿಜ್ಞಾನ ವಿರೋಧಿ ಭಾರತೀಯ ಸಂಸ್ಕೃತಿ ಎಂಬುದೇ ಇಲ್ಲ ಇದರ ದೃಷ್ಟಿ ಪರಲೋಕ ಕುರಿತಾದ್ದು ಕರ್ಮ ಪ್ರಧಾನವಾದದ್ದು ಸಂಸಾರದಲ್ಲಿ ನಿರಾಶೆಯನ್ನುಂಟುಮಾಡುವಂಥಾದ್ದು. ಧಾರ್ಮಿಕ ದೃಷ್ಟಿಯುಳ್ಳದ್ದು ಇದರಲ್ಲಿ ಸ್ತ್ರೀಯ ಸ್ಥಾನ ಗೌಣ — ಹೀಗೆಲ್ಲ ಟೀಕೆಗಳನ್ನು ನಾವು ನೋಡುತ್ತ ಬಂದಿದ್ದೇವೆ ಇದರಲ್ಲಿ ಸತ್ಯ ಸಂಗತಿ ಎಷ್ಟಿದೆ ಎಂಬುದನ್ನು ಅರಿಯಬೇಕು

ಸಾಮಾಜಿಕವಾಗಿ ಮನುಷ್ಯನು ಹೊತ್ತ ಹೊಣೆಗಳನ್ನು ಪೂರೈಸಿದ ನಂತರವೇ ಸಂನ್ಯಾಸಕ್ಕೆ ಅಪ್ಪಣೆ ಸಿಗುತ್ತಿತ್ತು ಬ್ರಹ್ಮಚರ್ಯ, ಗಾರ್ಹಸ್ತ್ಯಗಳ ನಂತರವೇ ಸಂನ್ಯಾಸಕ್ಕೆ ಕ್ರಮವಾಗಿ ಹಾದಿ ಎಂಬುದನ್ನು ಮರೆಯಬಾರದು ಆರ್ಯಭಟನು ಭೂಮಿಯು ಸೂರ್ಯಪ್ರದಕ್ಷಿಣೆ ಮಾಡುವ ವಿಚಾರವನ್ನು ಎಷ್ಟೋ ವರ್ಷಗಳ ಹಿಂದೆ ತಿಳಿಸಿದ್ದೂ ಯಾರಿಗೆ ಮರೆತಿದೆ? ಭಾರತೀಯದೃಷ್ಟಿ ವಿಜ್ಞಾನದ ವಿಚಾರದಲ್ಲಿ ತೆರೆದ ಮನಸ್ಸಿನಿಂದಿದೆ ವೈಜ್ಞಾನಿಕ ಸಂಶೋಧನೆಗೆ ಉತ್ತೇಜನವಿರಲಿಲ್ಲವಷ್ಟೆ. ಈಗಂತೂ ವೈಜ್ಞಾನಿಕವಾಗಿ ಭಾರತದ ಪ್ರಗತಿ ಅದ್ಭುತರೀತಿಯಲ್ಲಿ ನಡೆದಿದೆ

ಭಾರತೀಯ ಸಂಗೀತ, ಸಾಹಿತ್ಯ, ಶಿಲ್ಪ, ಎಲ್ಲವುಗಳಲ್ಲಿಯೂ ಸಂಸ್ಕೃತಿಯ ಸಂಕೇತಗಳು. ಸಂಸ್ಕೃತ ಭಾಷೆ ಇದಕ್ಕೆ ಪ್ರೇರಕ; ಪ್ರಾಂತೀಯ ಭಾಷೆಗಳು ಪೂರಕ. ಭಾರತೀಯ ಕಲೆಯು ಮಾನವ ಪ್ರಯತ್ನದ ಸುವರ್ಣಾಧ್ಯಾಯವಾಗಿದೆ ಎಲ್ಲೋರದ ದೇವಾಲಯಗಳು, ಅಜಂತದ ವರ್ಣ ಚಿತ್ರಗಳು, ಮಹಾಬಲಿಪುರದ ಶಿಲ್ಪ, ಒರಿಸ್ಸದ ಭುವನೇಶ್ವರ ದೇವಾಲಯ, ತಂಜಾವೂರಿನ ನಟರಾಜ, ಆಗ್ರಾದ ತಾಜ, ಬಿಜಾಪುರದ ಇಬ್ರಾಹಿಂರೌಜ— ಇವೆಲ್ಲ ಭಾರತೀಯ ಸಂಸ್ಕೃತಿಯ ಪ್ರತೀಕಗಳಾಗಿ ಕಂಗೊಳಿಸುತ್ತಿವೆ.

“ಅನಾದಿ ಕಾಲದಿಂದಲೂ ಭಾರತವನ್ನು ಶಕ್ತಿಶಾಲಿಯಾಗಿ ಬೆಳಗಿಸಿ ಮುಂದುವರಿಸುತ್ತಿರುವುದು ಯಾವುದೋ ರಹಸ್ಯತತ್ತ್ವವಲ್ಲ; ಅಲೌಕಿಕ ಜ್ಞಾನವಲ್ಲ. ಅದು ಮೃದು ಮಾನವೀಯ ಗುಣ. ವೈವಿಧ್ಯಮಯವಾದ ಸಹಿಷ್ಣು ಸಂಸ್ಕೃತಿ. ಯುಗದಿಂದ ಯುಗಕ್ಕೆ ಭಾರತದ ಅನಂತಶಕ್ತಿ ಪ್ರವಹಿಸುತ್ತಿರುವುದು ಅದರ ಭವ್ಯ ಸಾಹಿತ್ಯ, ಮತ್ತು ಕಲೆಗಳಿಂದ” ಎಂದು ಹೇಳುತ್ತಾರೆ ಜವಾಹರಲಾಲ್ ನೆಹರೂ ಅವರು

ಭಾರತೀಯ ಸಂಸ್ಕೃತಿಗೆ ಕೆರೆ ಎಳೆಯಲು ಅನೇಕ ವಿದೇಶಿಯರು–ಹೆನ್ರಿ,ನಾರ್ಮನ್, ವಿಲಿಯಂ ಆರ್ಚರ, ಕ್ಯಾಥರೀನ್ ಮೆಯೋ-ಪ್ರಯತ್ನಿಸಿದ್ದುಂಟು. ಆದರೆ ಅದರ ಪರಿಮಳ ದಿಗಂತ ವಿಶ್ರಾಂತವಾಗಿ ಹೊರಸೂಸಿದೆ.

ಹಿಂದೂ ದೃಷ್ಟಿಯಲ್ಲಿ ಮಾಯಾವಾದಕ್ಕೆ ಪ್ರಾಶಸ್ತ್ಯ ಎಂದವರಿಗೆ ವಿಜ್ಞಾನವು ಉತ್ತರ ನೀಡಿದೆ. “ವಸ್ತುಗಳು” ಎಂಬುದೇ ಇಲ್ಲ ಎಂದು ವಿಜ್ಞಾನವು ಸಾಧಿಸಿ ತೋರಿಸಿರುವುದನ್ನು ಬರ್ಟ್ರಾಂಡ್ ರಸೆಲ್ ಅವರು ಪ್ರಸ್ತಾಪಿಸಿದ್ದಾರೆ ಕರ್ಮವು ಒಳ್ಳೆಯ ಹಾಗೂ ಕೆಟ್ಟ ನಡತೆಗಳ ಸಮ್ಮಿಶ್ರ ಫಲ ತಿಳಿವು ಬಂದರೆ ಕರ್ಮದಿಂದ ಮುಕ್ತನಾಗಲು ಸಾಧ್ಯ ಎಂದು ಭಾರತೀಯರ ದೃಷ್ಟಿ. ಭಾರತೀಯರು ಸಂಸಾರವನ್ನು ಸುಖದುಃಖಗಳ ಮಯವೆಂದು ಬಗೆದರೂ ಸಹ ಇದರಲ್ಲಿನ ಸ್ಥಿತಪ್ರಜ್ಞತೆಗೆ ಮಹತ್ವಕೊಟ್ಟಿದ್ದಾರೆ. ನಿಷ್ಕಾಮಕರ್ಮವೇ ನಮ್ಮ ಆದರ್ಶ. ಭಾರತದ ಸಾಹಿತ್ಯ, ಕಲೆ, ಇವುಗಳಲ್ಲಿ ಎಲ್ಲೂ ನಿರಾಶಾವಾದವನ್ನು ಪ್ರತಿಪಾದಿಸಿಲ್ಲ

ಭಾರತೀಯರ ಧಾರ್ಮಿಕ ದೃಷ್ಟಿಗೆ ಧರ್ಮ, ಅರ್ಥ, ಕಾಮ, ಮೋಕ್ಷಗಳೇ ಆಧಾರಸ್ತಂಭಗಳು ಇದರ ಆಧಾರದ ಮೇಲೇ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸಗಳು ನಿಂತಿವೆ. ಮೋಕ್ಷವೆ, ಭಾರತೀಯರ ಚರಮ ಗುರಿ. ಇದನು ಪಡೆಯುವ ವಿಧಾನವನ್ನು ಧರ್ಮಶಾಸ್ತ್ರಗಳು ತಿಳಿಸುತ್ತವೆ. ಆರ್ಥಿಕ ದೃಷ್ಟಿಯಿಂದ ಸ್ತ್ರೀ ಪರಾವಲಂಬಿಯಾಗಿ ಕಾಣುತ್ತಾಳೆ ಆದರೆ ಆಕೆಯ ಸ್ಥಾನ ಗೌಣವಲ್ಲ. ತಾಯಾಗಿ, ಪತ್ನಿಯಾಗಿ, ಸಹೋದರಿಯಾಗಿ ಆಕೆ ಬಹು ಪೂಜನೀಯಳಾಗಿದ್ದಾಳೆ

ಕಡೆಯ ಮಾತು: ದಯ, ದಾನ, ಧರ್ಮಗಳು ಭಾರತೀಯ ಸಂಸ್ಕೃತಿಯಲ್ಲಿ ಸರ್ವದಾ ಬೆಳಗುವ ನಕ್ಷತ್ರಗಳಾಗಿವೆ ಅಹಿಂಸೆ ಇದರ ಬೆನ್ನೆಲುಬು. ಇದು ಪ್ರಕೃತಿಯೊಡನೆ—ನದಿ, ಪರ್ವತ, ವೃಕ್ಷ, ಪುಷ್ಪ-ಸಾಮರಸ್ಯವುಂಟುಮಾಡಿದೆ. ಪುರುಷ ಮತ್ತು ಪ್ರಕೃತಿಯ ಸಾಮರಸ್ಯವೇ ಭಾರತೀಯ ಸಂಸ್ಕೃತಿಯ ಪ್ರಮುಖ ಲಕ್ಷಣ.

ಹೇವ

ಬಿಸಿಲುಗುದುರೆಯನೇರಿ
ಬಯಕೆಯೂರಿಗೆ ಹೊರಟೆ
ದಿಸೆದಿಸೆಗು ಹಬ್ಬಿತ್ತು
ಮನದ ಮೋಡದ ಮುಸುಕು!

ಆಗೊಮ್ಮೆ 'ಈಗೊಮ್ಮೆ
ಅರಿವು ಮಿಂಚಿತೊ ಇಲ್ಲೊ:
ಇರುಳಿನಲಿ ಸಾಗಿಹುದು
ಪಯಣವಂತೂ ಇಂತು!


ಕರುಳ ಮಿಡಿತಕೆ ಒಡಲು
ನಾಚಿಸಿತು ನಾಲಗೆಯು!
ಬೆವರು ಸುರಿಸಿತು ಬೆನ್ನು
ಹೊಟೆ ಕಿಚ್ಚಿಗೆ ಬಾಗಿ

ಮೂಕ ಹಸಿವೆಗೆ ಬಾಯಿ,
ಕಣ್ಣ ಸನ್ನೆಯ ಮಾಡೆ
ನಾಲಗೆಯು ಹೀಚುತಿದೆ
ಹಲ್ಲಿಬಾಲದ ಹಾಗೆ!

• • • • •

ಎಲ್ಲ ಬೆಳ್ಳಗೆ ಎನುವ
ಭರವಸೆಗೆ ಬುಡವಿಲ್ಲ!
ಬೆಳಕನರಸುವ ಹೇವ
ಆರಿ ಕರಕಾಯಿತಲ್ಲ!

—ರಾಘವೇಂದ್ರ



[ವರಕವಿ ಅಂಬಿಕಾತನಯದತ್ತರ ಎಪ್ಪತ್ತೆರಡನೆಯ ಹುಟ್ಟು ಹಬ್ಬದ ಸವಿನೆನಪಿಗಾಗಿ ಮೂಡಿಬಂದ ಕವನ]

— ೧ —

ನಾವು ಹೊರಟೇವ್ಹಿಂಗ
ತೀರ ಕುರುಡರ್ಹಾಂಗ
ಎಲ್ಲಿ ಎಂಬುದ್ಹ್ಯಾಂಗ
ಏನೋ ಎಂತೊ ನಮಗs ಗೊತ್ತಿಲ್ಲ
ನಿಂತು ನೋಡ್ತೈತಿ ಜನ ಸುತ್ತೆಲ್ಲ
ನಿಲ್ಲಲಾರದೆ ಹೊರಟೇವ್ಹಿಂಗ

— ೨ —

ಬಂದದ್ದೆಂತೊ ಯಾಕೊ ಜಗದಾಗ
ಎಂದು ಮನದಾಗ
ತಾನ ಹೊಳೆದಾಗ
ದಂಗಾಗಿ ನಿಂತೀತ ನಮ್ ಬುದ್ದಿ
ದೇಹ ನಡೆದೀತು ಕಳಕೊಂಡು ಶುದ್ಧಿ
ಪರಿವಿಲ್ಲನ ಹೊರಟೇವ್ಹಿಂಗ

— ೩ —

ಹೆಸರೊಂದಾಯ್ತು ನಮ್ದು ನಿಮ್ದು
ಹುಟ್ಟದೂರಾಯ್ತು ಒಂದೇ ಒಂದು
ಗುರುದತ್ತನ ಕೃಪೆಯೆಂದೆಂದು
ಅಂತ ಬಂದೇವು ನಾವು ನಿಮ್ಮಡಿಗೆ
ಗುಟ್ಟು ಒಂದಾಯ್ತು ನಂ ನಿಮ್ಮೊಳಗೆ
ಅದರರಿವಿಲ್ದ ಹೊರಟೇವ್ಹಿಂಗ

— ೪ —

ನೀವು ಹಾರೀರಿ ಗರುಡನ ಹಾಂಗ
ನಾವು ಬೆಂಬತ್ತಿ ಬರಬೇಕು ಹ್ಯಾಂಗ
ಎಂಬೊ ಆಸೀನ ತ್ರಾಣವಾದ್ಹಾಂಗ
ನಿಮ್ಮನ್ ಕಣ್ ಅಳತಿಯೊಳಗನ ಇಟು
ನಾವು ಕಲ್ತೇವ ಹಾರುವ ಗುಟ್ಟು
ಅದಕಂತನ ಹೊರಟೇವ್ಹಿಂಗ

— ೫ —

ಪ್ಹಿಂಗಿರಲು ನಮ್ಮ ಮುಂದ್ಮುಂದ
ಚಿಂತಿಲ್ದ ನಿಮ್ಮ ಹಿಂದ್ಹಿಂದ
ನುಗ್ಗೇವು ತುಂಬ ಹಿಗ್ಗಿಂದ
ನಮಗ್ಯಾರ್ಯಾರ ಹಂಗು ಯಾತಕೆಂದು
ನಿಮ್ಮ ದಾರೀನ ನಮಗ ಸಗ್ಗವೆಂದು
ಹಾರ್ಹಾರ್ತ ಹೊರಟೇವ್ಹಿಂಗ

— ೬ —

ನಮ್ಮ ಹಾರಾಟ ಚೀರಾಟ ಎಲ್ಲ
ಲೋಕದಿಚ್ಛೆಗೆ ಒಪ್ಪಬೇಕಲ್ಲ
ಹಾಂಗ ಅನ್ನುವ ಹಂಬಲವಿಲ್ಲ
ನಿಜದ ದಾರೀನ ನಮ್ಮ ಗತಿಯೆಂದು
ಅಂಥ ದಾರೀಗೆ ದೀಪ ನೀವೆಂದು
ಹುಚ್ಚುಕೆಚ್ಚಿಂದ ಹೊರಟೇವ್ಹಿಂಗ
ಇರಲಿ, ನಂ ನಮಸ್ಕಾರ ನಿಮಗ

—ದ. ಲ. ಕೆರೂರ

ನಾಂದೀ

ದೇಶದ ಆಡಳಿತದ ಹೊಣೆಯನ್ನು ಹೊತ್ತವರು, ಅವರ ಅನುಯಾಯಿಗಳು "ನಾವು ಮತ್ತು ನಮ್ಮ ದೇಶ ಬೇಕಾದಷ್ಟು ಪ್ರಗತಿಯನ್ನು ಸಾಧಿಸಿದೆ" ಎಂದು ಹೇಳುತ್ತಿದ್ದಾರಷ್ಟೆ ? ರಾಜಕಾರಣ ಮತ್ತು ಅರ್ಥಶಾಸ್ತ್ರದ ತಜ್ಞರೂ ಅದನ್ನೇ ಹೇಳುತ್ತಿರುವರಷ್ಟೆ? ಆದರೆ ನಮ್ಮ ಜೀವನ, ನಮ್ಮ ಗಳಿಕೆ, ಅನ್ನ ಅರಿವೆ-ಆಸರೆ ಸಂದರ್ಭದಲ್ಲಿ ನಮಗಿದ್ದ ಕಷ್ಟ—ಬೇಡ ಅನನುಕೂಲತೆ ಎನ್ನೋಣ—ಈ ಅನನುಕೂಲತೆಗಳನ್ನು ನೋಡಿದಾಗ ಮೇಲಿನ ಮಾತು ನಂಬಲು ಕಷ್ಟವೆನಿಸುವುದು. ತಿನ್ನಲು ಆಹಾರ, ತೊಡಲು ಬಟ್ಟೆ, ಇರಲು ಮನೆ—ಸಾಮಾನ್ಯ ಮನುಷ್ಯನಿಗೆ ಜೀವನದಲ್ಲಿ ಇವೇ ಮುಖ್ಯ; ಜೀವಿಸುವುದಾದಲ್ಲಿ ಇವಕ್ಕೇ ಪ್ರಾಶಸ್ತ್ಯ. ಹೀಗಿರುವಾಗಲೂ ನಮ್ಮ ಮುಂದಾಳುಗಳು ನಾವು ಪ್ರಗತಿಯನ್ನು ಸಾಧಿಸಿದ್ದೇವೆ ಎನ್ನುತ್ತಾರಲ್ಲ? ಸುಖದ ದಾರಿಯಲ್ಲಿದ್ದೇವೆಎನ್ನುತ್ತಾರಲ್ಲ ? ಎಂದರೆ ಶಬ್ದಗಳಿಗೆ ಅವರ ದೃಷ್ಟಿಯಲ್ಲಿ ಒಂದು, ನಮ್ಮ ದೃಷ್ಟಿಯಲ್ಲಿ ಬೇರೊಂದು ಅರ್ಥ ಇದೆಯೆ ? ಅಥವಾ, ಜೀವನದ ಅಗತ್ಯಕ್ಕಾಗಿ ಮನುಷ್ಯನು ಶೋಧಿಸಿದ ಭಾಷೆಯಲ್ಲಿ ಜೀವನಕ್ಕೆ ಅನಗತ್ಯವಾದ ವಿಚಾರಗಳಿಗೇ ಅಭಿವ್ಯಕ್ತಿ ಮತ್ತು ಪ್ರಾಶಸ್ತ್ಯ ಇವೆಯೆ ? ವಾಗರ್ಥಾವಿವ ಸಂಪೃಕ್ತೌ ಎಂದನು ಕಾಳಿದಾಸ. ಆ ಸಂಪರ್ಕ ಮೋಸವಾಗಿರಬಹುದೇ ಎಂಬ ಸಂಶಯವನ್ನು ತಿಳಿದುಕೊಳ್ಳುವ ಯತ್ನ ಈ ಚಿಕ್ಕ ದೃಶ್ಯ. 'ಶಬ್ದ ಗುಣಂ ಆಕಾಶಂ'

ಶಬ್ದಗುಣಂ ಆಕಾಶಂ

(ದೃಶ್ಯ)

ಶ್ರೀರಂಗ

[ಅತ್ಯಂತ ರುಕ್ಷವಾದ ಬಯಲು ; ಕಲ್ಲು ಬಂಡೆಗಳಿವೆ, ಮುಳ್ಳಿನ ಕಂಟಿಗಳಿವೆ. ದೂರದಲ್ಲಿ ತುಸು ಎತ್ತರದಲ್ಲಿ ಗ್ರಹದಂತೆ ಆಗಾಗ ಮಿಂಚುವ, ಮಿಂಚಿದಾಗಲೆ ಕಾಣುವ ಒಂದು ವಸ್ತು. ಮೇರೆ ಇಲ್ಲದ ದೂರ, ದಿಕ್ಕುಗಳಿಲ್ಲದ ಬಯಲು, ಭಯಾನಕ ನೀರವತೆ—ಇಂತಹ ದೃಶ್ಯ. ಒಂದು ವ್ಯಕ್ತಿ ತನ್ನ ಹಿಂದಿನಿಂದ ಯಾರೋ ಬರುವುದನ್ನು ಸೂಚಿಸುವಂತೆ ಆಗಾಗ ಕತ್ತನ್ನು ತಿರುಗಿಸಿ ಹಿಂದೆ ನೋಡುತ್ತ, ದಣಿದ ಸಾವಕಾಶದ ಹೆಜ್ಜೆಗಳನ್ನಿಡುತ್ತ ಬರುವುದು. ಹರಿದ ಬಟ್ಟೆ, ಮುಳ್ಳು-ಧೂಳುಗಳಿಂದ ಮುಚ್ಚಿ ಹಣ್ಣಾದ ದೇಹ, ವ್ಯಕ್ತಿ ಅತ್ಯಂತ ದೂರದ ದಾರಿಯನ್ನು ನಡೆದುದನ್ನು ಸೂಚಿಸುತ್ತಿದ್ದರೆ; ಹೆಗಲ ಮೇಲೆ ಕೋಲು, ಕೋಲಿನ ಮುಂತುದಿಗೆ ಚಂಬೂ, ಹಿಂತುದಿಗೆ ಒಂದು ಗಂಟು, ಸೊಂಟಕ್ಕೆ ಬಿಗಿದು ಸಿಕ್ಕಿಸಿದ ಏನೇನೊ ಪದಾರ್ಥಗಳು—ಇವುಗಳಿಂದ ಮುಂದಿನ ದಾರಿ ಇನ್ನೂ ದೂರವಾಗಿದೆ ಎಂದು ಸಂಶಯ ಬರುವುದು.]

ವ್ಯಕ್ತಿ :- [ಹಿಂದಿನವನನ್ನು—ಇನ್ನೂ ಮುಂದೆ ಹೇಳುವವರೆಗೆ ಹಿಂದಿದ್ದ ವ್ಯಕ್ತಿ ಪ್ರೇಕ್ಷಕರಿಗೆ ಕಾಣಿಸುವುದಿಲ್ಲ—ಹಿಂದಿನವನನ್ನು ನೋಡುತ್ತ, ಹೆಜ್ಜೆಗಳನ್ನು ತಡೆದು]

ಬಾರಯ್ಯಾ, ಬಾ...ನಿನ್ನದೂ ಒಳ್ಳೇ ಸ್ವಭಾವ!... ಮನುಷ್ಯರ ಗುಂಪು ಸೇರಿದ್ದನ್ನು ಕಂಡರೆಹಿಂದೆ ಸರಿಯುವೆ!...[ಪ್ರೇಕ್ಷಕರಿಗೆ] ಇಂಥವನನ್ನು ಜೊತೆ ಕಟ್ಟಿಕೊಂಡು ಏನ್ಮಾಡ್ಬೇಕು,ಹೇಳಿರಿ...ನೀವು ಇಲ್ಲಿ ಕೂತೀರಲ್ಲ?ಅದಕ್ಕೆ ಅವನಿಗೆ ಸಂಕೋಚ, ದಾಕ್ಷಿಣ್ಯ! ತ್ರಿಕಾಲದಲ್ಲೂ ಇವ ನನ್ನ ಗೆಳೆಯ ಅನ್ನೋದಕ್ಕೆ ಇವನನ್ನು ಬಿಟ್ಟೋಗ್ಬಾರದು ಅಂತ ನನ್ನ ಹಟ... [ಕಾಣದ ಗೆಳೆಯನತ್ತ ನೋಡುತ್ತ] ಅಷ್ಟ್ಯಾಕೆ ಸಂಕೋಚ? ಇದೇ ಕಡೆಯ ಸಂದರ್ಭ. ಇದನ್ನ ದಾಟಿದಿವಿ ಅಂದರೆಮುಂದೆ ಯಾರೂ ಕಾಣೋದಿಲ್ಲ .... ಕಾಣೋದೆಲ್ಲಿಂದ ಬಂತು, ಯಾರೂ ಇರೋದೇ ಇಲ್ಲ! [ದೂರದಲ್ಲಿ ತೋರಿಸುತ್ತ] ಹಂ—ನೋಡಿದಿಲ್ಲೊ, ಅಲ್ಲಿ ಮಿಂಚಿತು? ನೋಡು, ಎಷ್ಟು ಅದರ ಹತ್ತಿರ ಬಂದೀವಿ! ಇನ್ನು ಸ್ವಲ್ಪ ದಾರಿ ನಡೆದರೆ ಸಾಕು, ತುದಿಯನ್ನು ಮುಟ್ಟಿದಿವಿ ಅ[illegible]—[ಒಮ್ಮೆಲೆ ನೆಲ ನಡುಗಿತೆಂಬುದನ್ನು ನಟನೆಯಿಂದ ಸೂಚಿ[illegible]—[ಅವನತ್ತ ನೋಡಿ ನಗುತ್ತ] ಹಹಹ! ಹೆದರಿದಿಯಲ್ಲ! ಈಗಾದರೂ ವಿಶ್ವಾಸ ಆಗೋದೋ ಇಲ್ಲವೊ ? [ಪ್ರೇಕ್ಷಕರಿಗೆ] ನೀವು ಆದರೂ ಹೇಳಿ ಅವನಿಗೆ. ನನ್ನ ಮಾತಿನಲ್ಲಿ ಅವನ ಮಾತಿನಲ್ಲಿ ವಿಶ್ವಾಸವೆ ಇಲ್ಲ! ನಾನು ಯಾವಾಗಿನಿಂದ ಹೇಳತಾ ಇದ್ದೀನಿ...ಎಲ್ಲರೂ ಹೋಗಿಬಟ್ಟಾರೆ...ನಾವಿಬ್ಬರೇ ಉಳಿದೀವಿ ಭಾರ ಆಗಿ ಅಂತ.ನಾವಿಬ್ಬರೂ ತುದಿ ಮುಟ್ಟಿದಿವಿ ಅಂದ್ರೆ ಸಾಕು, ಭಾರ ಇಲ್ಲದ ಹಾಗೆ ಆಗಿ, ಇಡಿಯ ಭೂನೆಲ ಹಗುರಾಗಿ, ಮೇಲೆ ಹಾರಿಬಿಡೋದು! [ಒಳಗಿನ ಗೆಳೆಯನಿಗೆ] ಇಲ್ಲಿ ಬಂದು ಇವರ್ನಾದ್ರೂ ಕೇಳು, ಅಹುದೊ ಅಲ್ಲೊ ಅಂತೆ... ಕೋಟಿಗಟ್ಟಲೆ ದುಡ್ಡು ಸುರಿದು ಏನೇನೊ ಯಂತ್ರ ಮಾಡಿಕೊಂಡು, ಹಾರಿ ಹೋದವರು ಹೋಗಲಿ. ಅವರು ಹೋದರು [illegible]ದಕೇನೇ ಭೂಮಿ ಹಗುರಾಗಿ ಮೇಲಹಾರಿ, ನಾವಿಬ್ಬರೂ ಅನಾಯಾಸ—ಥೂ ನಿನ! ಕೂತೆಬಿಟ್ಟಯಲ್ಲೋ ? [ನಗೆಯಿಂದ] ಒಳ್ಳೇ ಅಭ್ಯಾಸ ಮಾಡಿಕೊಂಡೀದಿ ಬೇಕಾದಲ್ಲಿ ಕೂಡೋದು—ಏನದು ? ಊಟಕ್ಕೇ ಸುರೂ ಮಾಡ್ತೀಯಾ ? [ಒಂದರೆ ನಿಮಿಷ ದಿಟ್ಟಿಸಿ] ನನ್ನೂ ನಿನ್ನೂ ಗೆಳೆತನ ಯಾಕೆ ಇಷ್ಟು ದೀರ್ಘಕಾಲ ಉಳಿದಿದೆ, ತಿಳೀತಿಲ್ಲೊ? ಕೂಡೋ ಜಾಗ, ತಿನ್ನೋ ಊಟ; ಇಬ್ಬರನೂ ಬೇರೆ-ಬೇರೆ ಅನ್ನೋದೆ ಮುಖ್ಯ ಕಾರಣ. ಇದೇನೊ ?



ಇನ್ನು ಎಷ್ಟೊತ್ತು ಇಲ್ಲಿಯೆ ಕೂಡ್ಬೇಕು? [ಪ್ರೇಕ್ಷಕರಿಗೆ] ಈ ಮಹಾರಾಯನ ಊಟ ಅಂದ್ರೆ ಏನಂತ ತಿಳಿದೀರಿ? ಸ್ವಚ್ಛಂದ ತಿರುಗಾಡ್ತಾ ಸಾವಕಾಶ ಮೆಲಕಾಡಿಸತಾ ತಿನ್ನೋದು? ಕೇಳಿದರೆ ಹೇಳ್ತಾನೆ, ರುಚಿ ಮಾಡಿಕೊಂಡು ತಿನ್ನೋದು ಮುಖ್ಯ, ಹಾಗೆ ತಿಂದ್ರೇನೆ ಪಚನ ಆಗ್ತದೆ, ಅದು-ಇದು ಅಂತ ನನಗೇ ಭಾಷಣಾ ಬಿಗೀತಾನೆ! [ಮತ್ತೆ 'ಗೆಳೆಯ'ನತ್ತ ನೋಡಿ] ಏ,–ಒಂದ್ನಿಮಿಷ ಬಾರೊ ಇಲ್ಲಿ! ನಿನ್ನನ್ನ ನೋಡ್ಲಿ ಈ ಜನ [ಪ್ರೇಕ್ಷಕರಿಗೆ] ಅವನ್ನ ನೋಡಿದಿರಿ ಅಂದರೆ ತಿನ್ನೋದರ ಬಗ್ಗೆ ನೀವು ಅವನ ತತ್ವ ಒಪ್ಪೋದು ಖಂಡಿತ! [ಮತ್ತೆ ಆ ಬದಿಗೆ ನೋಡಿ] ಆಂ? [ಪ್ರೇಕ್ಷಕರಿಗೆ] ನೋಡಿದಿರಾ? ಹುಟ್ಟಿದ ಮೇಲೆ ತಿನ್ನೋದು ಮುಖ್ಯ–ಅನ್ನೋ ಜಾತಿ ಅದು! [ಆಕಳಿಸಿ] ಏ–ನಿನ್ನದು ಮುಗಿದ ಮ್ಯಾಲೆ ನನ್ನ ಎಚ್ಚರ ಮಾಡು. [ಎಲ್ಲಿಂದಲೊ ಸಿಡಿಲಿನಂತಹ ಸದ್ದು] ಏ–ಬೇಗ ಮುಗಿಸು, ಅವನು ಬಾಗಿಲ ಮುಚ್ಚಿದರೊ ಏನೋ? [ಗಟ್ಟಿಯಾಗಿ ಆಕಳಿಸು. ರಂಗಸ್ಥಳದಲ್ಲಿ–ದೃಶ್ಯ ಬದಲಾವಣೆಯ ಸೂಚಕವಾಗಿ ಒಂದು ನಿಮಿಷ ಕತ್ತಲೆ. ಮತ್ತೆ ಬೆಳಕು ಮೂಡುವಾಗ ಮೊದಲಿನ ವ್ಯಕ್ತಿ ನಿದ್ದೆಯಿಂದ ಎಚ್ಚರಾಗುವುದನ್ನು ಸೂಚಿಸುವಂತೆ ಮೈಮುರಿದುಕೊಳ್ಳಲು ಎರಡೂ ಕೈಗಳನ್ನು ಮೇಲೆ ಮಾಡುವಾಗ, ಎದುರಿನಲ್ಲಿ ಜಾದುಗಾರನು ಮಾಡುವ ಮಾಟಗಾರಿಕೆಯಂತೆ ಆತ ಕೈಗಳನ್ನು ಎತ್ತುವಾಗ ಅವುಗಳಿಂದ ಜನ್ಮತಾಳಿ ಎದ್ದು ನಿಲ್ಲುವಂತೆ ಇನ್ನೊಂದು ವ್ಯಕ್ತಿ ಮೂಡುವುದು. ಈ ಎರಡೂ ವ್ಯಕ್ತಿಗಳು ಶಕ್ಯವಾದಷ್ಟರ ಮಟ್ಟಿಗೆ ಒಬ್ಬರನ್ನೊಬ್ಬರು ಹೋಲುವಂತಿರಬೇಕು. ವ್ಯತ್ಯಾಸವೆಂದರೆ ಎರಡನೆಯ ವ್ಯಕ್ತಿಯ ಬಟ್ಟೆಗಳು ಹರಿದಿವೆ, ಕೋಲು ಮುರಿದಿದೆ, ಅದಕ್ಕೆ ತೂಗುವ ಗಂಟೂ ಚೆಂಬುವೂ ಒಡಕಲವಾಗಿವೆ. ಬೆಳಕು ಬಂದೊಡನೆ ನೆಲದ ಮಣ್ಣಿನೊಳಗಿಂದ ಎದ್ದವನಂತೆ ಎರಡನೆಯ ವ್ಯಕ್ತಿಯು ಮೈ-ಕೈಗಳಿಂದ ಧೂಳನ್ನು ಜಾಡಿಸುವನು. ಧೂಳಿನ ದಟ್ಟ ಮೋಡವೇ ಅವನ ಮೈ ಬಟ್ಟೆಗಳಿಂದ ಏಳುವುದು.]

ಒಂದನೆಯ ವ್ಯಕ್ತಿ :– [ಧೂಳಿಗಾಗಿ ಕೆಮ್ಮುತ್ತ, ಕಣ್ಣೊರಸಿಕೊಳ್ಳುತ್ತ] ಥೂ! ಇದೆಲ್ಲಿಂದ ಬಂತು? ಥೂ!

ಎರಡನೆಯ ವ್ಯಕ್ತಿ :– ಕೆಳಗಿನಿಂದ.

ಒಂದನೆಯ ವ್ಯಕ್ತಿ :– [ತಿನೆ.ನನ್ನು ದಿಟ್ಟಿಸಿ] ಓಹೋ! ಆ ಧೂಳಿನ ಕೆಳಗೆ ನೀ ಇದ್ದಿ ಏನು?

ಎರಡನೆಯ ವ್ಯಕ್ತಿ :– ನಾನು ಕೆಳಗೆ ಇದ್ದೆ. ನನ್ನ ಮ್ಯಾಲೆ ಧೂಳ ಇದ್ದಿತು.

ಒಂದನೆಯ ವ್ಯಕ್ತಿ :– [ಚಕಿತನಂತೆ] ನಾನೇನಂದೆ?

ಎರಡನೆಯ ವ್ಯಕ್ತಿ :– ಏನಂದೆ?

ಒಂದನೆಯ ವ್ಯಕ್ತಿ :– ನೀನು ಕೆಳಗೆ, ನಿನ್ನ ಮ್ಯಾಲಿನ ಧೂಳು—?

ಎರಡನೆಯ ವ್ಯಕ್ತಿ :– ಮ್ಯಾಲಿನ ಧೂಳು?

ಒಂದನೆಯ ವ್ಯಕ್ತಿ :– ನನ್ನ ಪ್ರತಿಧ್ವನಿ ಏನು ನೀನು?

ಎರಡನೆಯ ವ್ಯಕ್ತಿ :– ನೀನು?

ಒಂದನೆಯ ವ್ಯಕ್ತಿ :– [ತಟ್ಟನೇ ಎದ್ದು] ಏನಂದೆ? ಯಾರು ನೀನು? ನಿನ್ನ ಹೆಸರೇನು?

ಎರಡನೆಯ ವ್ಯಕ್ತಿ :– ನಾನು. [ಎನ್ನುತ್ತ ಕೂಡ್ರುವನು]

ಒಂದನೆಯ ವ್ಯಕ್ತಿ :– ಯಾ-ಆ-ರು?

ಎರಡನೆಯ ವ್ಯಕ್ತಿ :– ನಾನು–ನನ್ನ ಹೆಸರು ನಾನು. ನಿನ್ನ ಹೆಸರು?

ಒಂದನೆಯ ವ್ಯಕ್ತಿ :– [ಅವನನ್ನು ಅಣಕಿಸುವವನಂತೆ] ನಾನು.

ಎರಡನೆಯ ವ್ಯಕ್ತಿ :– [ಒಮ್ಮೆಲೆ ಎದ್ದು] ಇಬ್ಬರ ಹೆಸರೂ ಒಂದೇ! ಅಂದ್ರೆ ಇಬ್ಬರೂ ಒಂದೇ!

ಒಂದನೆಯ ವ್ಯಕ್ತಿ :– [ಮಾತಿನಲ್ಲಿ ಸೋತು ತಲೆ ಹಿಡಿದುಕೊಂಡು ಕುಳಿತುಕೊಳ್ಳುವನು.]

ಎರಡನೆಯ ವ್ಯಕ್ತಿ :– ಯಾಕೆ? ಮ್ಯಾಲೆ ಯಾಕೆ ಕೂತೀ?

ಒಂದನೆಯ ವ್ಯಕ್ತಿ :– [ಮುಖವೆತ್ತಿ ಅವನನ್ನು ನೋಡಿ] ನೀನು ಕೆಳಗೆ ಯಾಕೆ ನಿಂತೀ?

ಎರಡನೆಯ ವ್ಯಕ್ತಿ :– ಯಾಕಂದ್ರೆ, ನಾನು ಕೆಳಗಿನಿಂದ ಬಂದವ

ಒಂದನೆಯ ವ್ಯಕ್ತಿ :– [ಗಾಬರಿಗೊಂಡವನಂತೆ] ಕೆಳಗಿನಿಂದ? ಅಂದ್ರೆ–ಎಲ್ಲಿ–[ಕೈಯಿಂದ ತೋರಿಸುತ್ತ] ಕೆಳಗಿನ ಈ ನೆಲದಿಂದ ಬಂದೆಯಾ?

ಎರಡನೆಯ ವ್ಯಕ್ತಿ :– ಅದಕ್ಕಿಂತಲೂ ಕೆಳಗಿನಿಂದ.

ಒಂದನೆಯ ವ್ಯಕ್ತಿ :– ಅಂದ್ರೆ–ಈ ಗೋಲ–ಅಂದ್ರೆ ಈ ಭೂ–ಗೋಲ–ಇದರ ತೀರ ಕೆಳಗಿನಿಂದ–ಅಂದ್ರೆ ಗೋಲದ ಒಳಗಿನಿಂದ ಬಂದೆಯಾ?

ಎರಡನೆಯ ವ್ಯಕ್ತಿ :– ಅದಕ್ಕಿಂತಲೂ ಕೆಳಗಿನಿಂದ

ಒಂದನೆಯ ವ್ಯಕ್ತಿ :– ಅದಕ್ಕಿಂತ ಕೆಳಗಿನಿಂದ? ಅಂದ್ರೆ–ಎಲ್ಲಿಂದ? ಅಲ್ಲ–ನೀನು ಇದ್ದದ್ದಾದರೂ ಎಲ್ಲಿ?

ಎರಡನೆಯ ವ್ಯಕ್ತಿ :– [ರಂಗದ ಹಿಂತುದಿಯ ಮೇಲ್ಭಾಗಕ್ಕೆ ಮಿಂಚುವುದನ್ನು ತೋರಿಸುತ್ತ] ಅಲ್ಲಿಂದ.



ಒಂದನೆಯ ವ್ಯಕ್ತಿ :- [ಅದನ್ನು ನೋಡಿ ನಕ್ಕು] ಅಯ್ಯೋ! ಮಹಾರಾಯಾ? ನಾನು ಹೊರಟದ್ದೂ ಅಲ್ಲಿಯೆ. ಆದರೆ ಅದು ಕೆಳಗಿಲ್ಲ, ಮ್ಯಾಲಿದೆ, ಮ್ಯಾಲೆ ನೋಡು [ಎಂದು ಮುಖವನ್ನೆತ್ತುವನು]

ಎರಡನೆಯ ವ್ಯಕ್ತಿ :- ಥೆ! ಥೆ! ಕೆಳಗಿದೆ, ಕೆಳಗು! [ಕೈ ಕೆಳಗೆ ಮಾಡಿ ತೋರಿಸುವನು]

ಒಂದನೆಯ ವ್ಯಕ್ತಿ :- ಅಲ್ಲ, ಮಹಾರಾಯಾ! ಮ್ಯಾಲೆ! [ಎಂದು ಎತ್ತಿದ ಕೈಯಿಂದ ತೋರಿಸುತ್ತ ತಾನೂ ಏಳುವನು.]

ಎರಡನೆಯ ವ್ಯಕ್ತಿ :- [ತಲೆ ಅಲ್ಲಾಡಿಸಿ] ಕೆಳಗೆ-ಕೆಳಗೆ! [ಎಂದು ಕೈಯಿಂದ ನೆಲವನ್ನು ತೋರಿಸುತ್ತ ತಾನೂ ಕೂಡ್ರುವನು]

ಒಂದನೆಯ ವ್ಯಕ್ತಿ :- ಮ್ಯಾಲೆ! } ಮ್ಯಾಲೆ! } ಮ್ಯಾಲೆ! }
ಎರಡನೆಯ ವ್ಯಕ್ತಿ :- ಕೆಳಗೆ! } ಕೆಳಗೆ! } ಕೆಳಗೆ! }

[೧ನೆಯವನು ಪ್ರತಿಯೊಂದು ಸಲ ಕೂತು ಏಳುವನು ೨ನೆಯವನು ಎದ್ದು ಕೂಡ್ರುವನು. ಮೂರು ಸಲ ಹೀಗೆ ಮಾಡುವಾಗ ಕ್ರಮೇಣ ಇಬ್ಬರೂ ಪ್ರೇಕ್ಷಕರನ್ನು ಎದುರಿಸಿ ನಿಲ್ಲುವರು.]

ಒಂದನೆಯುವ :- } [ಪ್ರೇಕ್ಷಕರಿಗೆ] ನೀವಾದರೂ ಇವನಿಗೆ- [ಇಬ್ಬರ
ಎರಡನೆಯುವ :- } ನ್ನೊಬ್ಬರು ನೋಡಿ ಒಮ್ಮೆಲೆ ತಡೆಯುವರು.]

ಒಂದನೆಯುವ :- ಕೇಳು ಕೆಳಗಿನವರನ, ಮ್ಯಾಲೆ ಅದನೊ ಇಲ್ಲೊ?

ಎರಡನೆಯುವ :- ನೀನೇ ಕೇಳಿ ನೋಡು ಮ್ಯಾಲಿನವರನ, ಕೆಳಗೆ ಅದನೊ ಇಲ್ಲೊ?

ಒಂದನೆಯುವ :- ಯಾರನ್ನ ಯಾಕೆ ಕೇಳೋದು? ನಾನೇ ಇಲ್ಲಿ ಕೆಳಗಿನಿಂದ [ದೂರ ಎತ್ತರದಲ್ಲಿ ಮಿಂಚುವುದನ್ನು ತೋರಿಸುತ್ತ] ಅಲ್ಲಿ ಮ್ಯಾಲೆ ಹೊರಟೇನಿ.

ಎರಡನೆಯುವ :- [ನಗುತ್ತ] ಹ ಹ ಹ! ನಾನು ಅಲ್ಲಿಂದಲೆ ಇಲ್ಲಿ ಮ್ಯಾಲೆ ಬಂದೀದಿನಿ! ಹ ಹ ಹ!

ಒಂದನೆಯುವ :- [ಎರಡನೆಯುವನನ್ನು ಪ್ರೇಕ್ಷಕರ ಕಡೆ ಬೆನ್ನು ಮಾಡಿ ನಿಲ್ಲಿಸಿ ಮಿಂಚುವುದನ್ನು ತೋರಿಸುತ್ತ] ನೋಡಲ್ಲಿ ಇಲ್ಲಿಗಿಂತ ಮ್ಯಾಲೆ ಕಾಣ್ತದೊ ಇಲ್ಲೊ?

ಎರಡನೆಯುವ :- [ಪ್ರೇಕ್ಷಕರ ಕಡೆ ತಿರುಗಿ ನಿಂತು] ನಾನು ಅಲ್ಲಿಯೂ ನಿಂತು ನೋಡೀನಿ. ಇದೇ ಮ್ಯಾಲಿದೆ, ಅಂತಲೆ ಇಲ್ಲಿ ಬಂದೀನಿ.

ಒಂದನೆಯುವ :- ಮ್ಯಾಲಿನವನ್ನೂ ಬ್ಯಾಡ, ಕೆಳಗಿನವನ್ನೂ ಬ್ಯಾಡ, ಪಕ್ಕದಲ್ಲಿ ನಿಂತವರ್ನ ಕೇಳೋಣ. [ಬದಿಗೆ ದೂರದಲ್ಲಿ ತನ್ನ 'ಗೆಳೆಯ' ನನ್ನು ನೋಡುವಂತೆ ನಟಿಸಿ] ಏ,-ನಿನ್ನ ತಿನ್ನೋದು ಮುಗಿದಿದ್ರ ಇಲ್ಲಿ ಬಾ, ಈ ವಾದವನ್ನು ಬಗೆಹರಿಸು, ಬಾ

ಎರಡನೆಯುವ :- [ದೂರದಲ್ಲಿದ್ದವನನ್ನು ದಿಟ್ಟಿಸಿದಂತೆ ಮಾಡಿ] ಉಹುಂ,-ಅವನ ಮ್ಯಾಲೆ ವಿಶ್ವಾಸ ಇಲ್ಲ.

ಒಂದನೆಯುವ :- ಯಾಕೆ?

ಎರಡನೆಯುವ :- ಅವನಿಗೆ ಪ್ರಗತಿಯಲ್ಲಿ ವಿಶ್ವಾಸ ಇಲ್ಲ.

ಒಂದನೆಯುವ :- ಎಂಥಾ ಪ್ರಗತಿ?

ಎರಡನೆಯುವ :- ಮ್ಯಾಲೆ ಏರೋದಂದ್ರ ಪ್ರಗತಿ.

ಒಂದನೆಯುವ :- ಮೆಟ್ಟಿಲು ಇದ್ದರೆ ಅವನು ಮ್ಯಾಲೆ ಏರಬಲ್ಲ

ಎರಡನೆಯುವ :- ಮೆಟ್ಟಿಲು ಇದ್ದರೆ ಕೆಳಗೆ ಇಳಿಯೋದು ಸುಲಭ

ಒಂದನೆಯುವ :- ಮೆಟ್ಟಿಲು ಇದ್ದಲ್ಲಿ ಮ್ಯಾಲೆ ಹೋಗೋದು ಶಕ್ಯ

ಎರಡನೆಯುವ :- ಮೆಟ್ಟಿಲು ಇದ್ದಲ್ಲಿ ಕೆಳಗೆ ಇಳಿಯೋದು ಸುಲಭ

ಒಂದನೆಯುವ :- ಪ್ರಗತಿಗೆ ಮೆಟ್ಟಿಲು ಇದ್ದಲ್ಲಿ—

ಎರಡನೆಯುವ :- ಮೆಟ್ಟಿಲು ಇಲ್ಲದಲ್ಲಿಯೆ ನಿಜವಾದ ಪ್ರಗತಿ,... ಮೆಟ್ಟಿಲು ಇದ್ದರೆ ಅಧೋಗತಿಯ ಸಂಭವ.

ಒಂದನೆಯುವ :- ನೀನು ವಿತಂಡವಾದ ಮಾಡಬಲ್ಲೆ

ಎರಡನೆಯುವ :- ನೀನು ಕೆಳಗಿದ್ದದ್ದು ಮ್ಯಾಲೆ ಅಂತ ಹೇಳಬಲ್ಲೆ.

ಒಂದನೆಯುವ :- ತಡೆ...ತಡೆ...ಅಂದೆ. ಈ ಪ್ರಶ್ನೆವನ್ನ ಮುಗಿಸೇಬಿಡ್ತೇನಿ... ಕೂತುಕೋ? ಇಲ್ಲಿ... ಇದು ನೋಡು [ಚೆಂಬುವನ್ನು ಕೈಯಲ್ಲಿ ಹಿಡಿದು] ಈ ಚೆಂಬುವಿಗೆ ಮ್ಯಾಲೆ ಯಾವುದು? ಕೆಳಗೆ ಯಾವುದು?

ಎರಡನೆಯುವ :- [ಕುಳಿತದ್ದಕ್ಕೆ ಮುಖವನ್ನೆತ್ತಿ] ಇದು ಮ್ಯಾಲೆ [ಎಂದು ಅದರ ತಳವನ್ನು ತೋರಿಸುವನು.]

ಒಂದನೆಯುವ :- [ಯೋಚಿಸಿದಂತೆ ಮಾಡಿ] ಹುಂ...ಎದ್ದು ನಿಲ್ಲು. ನೋಡೋಣ ...ಹಂ...ಈಗ ಹೇಳು. ಚೆಂಬುವಿಗೆ ಮ್ಯಾಲೆ ಯಾವುದು? ಕೆಳಗೆ ಯಾವುದು?

ಎರಡನೆಯುವ :- [ನಿಂತದಕ್ಕೆ ಕೆಳಗೆ ನೋಡುತ್ತ] ಇದು ಕೆಳಗೆ [ಎಂದು ಚೆಂಬುವಿನ ಬಾಯಿಯನ್ನು ತೋರಿಸುವನು.]

ಒಂದನೆಯುವ :- [ಒಂದು ನಿಮಿಷ ತಲೆ ತುರಿಸುತ್ತ, ಯೋಚಿಸುತ್ತ] ಥೆ! ಥೆ! ನೀನು ವಿಚಾರ ಗೊಂದಲದಲ್ಲಿ ಸಿಕ್ಕು ಬೀಳ್ತೀ... ನೀನು ಮ್ಯಾಲೆ ಇದ್ದಾಗ ಅದನ್ನ 'ಕೆಳಗೆ' ಅಂತೀ, ನೀನು ಕೆಳಗೆ ಇದ್ದಾಗ ಅದು 'ಮ್ಯಾಲೆ' ಅಂತೀ. ನಿಜವಾಗಿ ನೋಡಿದರೆ ಅದು ಮ್ಯಾಲೆ, ಇದು ಕೆಳಗೆ

ಎರಡನೆಯುವ :- ಅಲ್ಲ. [ಅದನ್ನು ತೆಗೆದುಕೊಂಡು ಬೋರಲಾಗಿ ಹಿಡಿದು] ಇದು ಮ್ಯಾಲೆ, ಇದು ಕೆಳಗೆ

ಒಂದನೆಯುವ :- [೨ನೆಯವನನ್ನು ಪ್ರೇಕ್ಷಕರತ್ತ ಬೆನ್ನು ಮಾಡಿಸಿ ತಿರುಗಿಸಿ, ಹಿಂತುದಿಯ ಎತ್ತರದಲ್ಲಿ ಮಿಂಚುವುದನ್ನು ತೋರಿಸುತ್ತ] ಇಲ್ಲಿ ನೋಡು, ಎದುರಿಗೆ ನೋಡು. ಕಣ್ಣಿಂದ ನೋಡು, ಮ್ಯಾಲೆ ಇದ್ದದ್ದು ಕಾಣಸ್ತದೆ, ಅಹುದಲ್ಲೊ?

ಎರಡನೆಯುವ :- [ಪ್ರೇಕ್ಷಕರತ್ತ ಮುಖ ತಿರುಗಿಸಿ] ನನ್ನ ಕಣ್ಣಿಗೆ ಅದು ಕೆಳಗೇ ಕಾಣಿಸ್ತದೆ.

ಒಂದನೆಯುವ :- [ಒಮ್ಮೆಲೆ ಹೊಳೆದು] ಓಹೊ! ಶಾಸ್ತ್ರದ ಪ್ರಯೋಜನ ಈಗ ತಿಳೀತು!

ಎರಡನೆಯುವ :- ಯಾವ ಶಾಸ್ತ್ರ?

ಒಂದನೆಯುವ :- ಪ್ರತ್ಯಕ್ಷ ಪ್ರಮಾಣ ದುಷ್ಟ, ಆದರೆ ಅನುಮಾನದಿಂದ ತಿಳಿದುಕೊಳ್ಳಬೇಕು ಅಂತ ಶಾಸ್ತ್ರ.

ಎರಡನೆಯುವ :- ಅನುಮಾನ ಮಾಡುವವರು ಯಾರು?

ಒಂದನೆಯುವ :- ನಾನು.

ಎರಡನೆಯುವ :- ನೀನು ಮಾಡೋ ಅನುಮಾನದಿಂದ ನನಗೆ ಹ್ಯಾಗೆ ತಿಳೀಬೇಕು?

ಒಂದನೆಯುವ :- ಮೊದಲು ಕೇಳಿಕೊ, ಆ ಮ್ಯಾಲೆ ಸಂಶಯ ತಂದುಕೊ.

ಎರಡನೆಯುವ :- ಮೊದಲು ಸಂಶಯ, ಆ ಮ್ಯಾಲೆ ತಿಳಿದುಕೊಳ್ಳೋದು

ಒಂದನೆಯುವ :- ನಿನಗೆ ಯಾರು ಹೇಳಿದರು?

ಎರಡನೆಯುವ :- ಪ್ರಗತಿಯ ಇತಿಹಾಸನೇ ಹೇಳ್ತದೆ.

ಒಂದನೆಯುವ:– [ಗೆದ್ದವನಂತೆ] ಹೆಂಹ! ನೀನಾಗಿಯೆ ಸಿಕ್ಕಿ ನನ್ನ ಕೈಯೊಳಗ...ತಡ...ಪ್ರಗತಿ ಅಂದೆಯಲ್ಲ? ಅದರಿಂದಲೆ ಅನಾಯಾಸ ಪ್ರಮಾಣ ಮುಂದೆ ಸಾಗೋದು...ಕೇಳು, ಪೂರ್ತಿ...ಚಂದ್ರಲೋಕಕ್ಕೆ ಹೋಗೋದ್ರು ಪ್ರಗತಿ ಅಂತಾರೆ, ಅಹುದಲ್ಲೊ? ಆದ್ದರಿಂದ [ಮಿಂಚುವುದನು ತೋರಿಸಿ]* ಆದ್ದರಿಂದ ಅದು ಮ್ಯಾಲೇ ಇರಬೇಕು ಕೆಳಗೆ ಹೋಗೋದಕೆ ಪ್ರಗತಿ ಅನ್ನೋದಿಲ್ಲ

ಎರಡನೆಯುವ:– ಹಾಗಿದ್ರೆ ನನ್ಗೂ ಒಂದು ಅನುಮಾನ.

ಒಂದನೆಯುವ:– ಯಾವುದು ?

ಎರಡನೆಯುವ:– [ಮಿಂಚುವುದನ್ನು ತೋರಿಸಿ] ಅದು ಮ್ಯಾಲೆ ಇದೆ ಅಂತ ತಿಳಿ ನೀನು ಅಲ್ಲಿ ಹೊರಟೀದಿ? ಹ್ಯಾಗೆ ಹೋಗುವವ ?

ಒಂದನೆಯುವ:– [ಕೈಗಳನ್ನು ಮೇಲಕ್ಕೆತ್ತಿ, ಹಾರುವ ಹಕ್ಕಿಯನ್ನು ಸೂಚಿಸುತ್ತ] ಹೀಗೇ ಹೋಗುವವ.

ಎರಡನೆಯುವ:– ನಿನಗೆ ತಲೆ ಇಲ್ಲ ಅಂತ ನನ್ನ ಅನುಮಾನ.

ಒಂದನೆಯುವ:– [ಅಪಮಾನಿತ] ಏನಂದೆ ? ನನಗೆ ? ತಲೆ—?

ಎರಡನೆಯುವ:– [ಅವನನ್ನು ತಡೆದು, ಪ್ರೇಕ್ಷಕರಿಗೆ ಇದಿರಾಗಿ ನಿಲ್ಲಿಸಿ] ಕೇಳು ಅವರಿಗೆ, [ಪ್ರೇಕ್ಷಕರಿಗೆ] ನೀವೇ ಹೇಳಿರಿ. ಇವನು [ಅವನ ಮುಂಚಿನ ಹಾವಭಾವವನನುಸರಿಸಿ] ಹೀಗೇ ಹೋಗುವವ ಅಂತ? ಮ್ಯಾಲೆ ಹೋಗುವವ ಅಂತ ? ಮ್ಯಾಲೆ ಹೋಗ್ತಾ ಹೋಗ್ತಾ ಹವೆಯ ಒತ್ತಡ ಕಡಿಮೆಯಾಗಿ ಉಬ್ಬುತಾ ಉಬ್ಬುತಾ ಕೊನೆಗೆ ಒಂದು ಗೋಲಾದ ಮುದ್ದೆ ಆಗುವವ ಇವನು ಅಗಾಸೂ ಇಲ್ಲೊ ಹೇಳಿರಿ?...[ಅವನಿಗೆ] ತಡ...ನಿನ್ನ ಮಾತೇ ಒಪ್ಪೋಣ...ಈ ಲೋಕದ ಪರಿಧಿಯನ್ನು ದಾಟೋದರೊಳಗ—ತಡೆಯೋ ದಾಟಿದೀ ಅಂತಲೇ ಇಟ್ಟುಕೊಳ್ಳೋಣ ಮುಂದೆ, ಚಂದ್ರಲೋಕದ ಪರಿಧಿಯೊಳಗೆ ಹೋದಿ ಅಂತ ತಿಳಿಯೋಣ. ಆ ಮ್ಯಾಲೆ ಅಲ್ಲಿ ನಿನ್ನನ್ನ ಎಳೆದುಕೊಳ್ಳೋ ಗುರುತ್ವಾಕರ್ಷಣ ಶಕ್ತಿ ಇದೆ ಅನ್ನೋಣ, ಹೋದಿ–ಹೋದಿ–ಹೋದಿ–ಚಂದ್ರನ ಸಮೀಪಕ್ಕೇ ಹೋದಿ ಅನ್ನೋಣ ಆಗ ಈಗಿನ ಹಾಗೆ ಕೈಕಾಲು ಆಕಾರ ಬರೋ ಭರವಸೆ ಏನು? ನೀನೇನು ಹಾಸಿಗೆ ಸುರುಳಿ ಅಂತ ತಿಳಿದೀಯಾ ಮುಂಚಿನ ಹಾಗೆ ಬಿಚ್ಚಿ ನಿಲ್ಲಲಿಕ್ಕೆ? ಅದಕ್ಕೇ ಹೇಳೋದು ದೇವರು ದೊಡ್ಡವ ಅಂತ !

ಒಂದನೆಯುವ:– ದೇವರದೇನು ಸಂಬಂಧ ?

ಎರಡನೆಯುವ:– ಮ್ಯಾಲೆ ತಲೆ ಇದೆ ಅನ್ನೋದಕೆ.

ಒಂದನೆಯುವ:– ಎದ್ದು ನಿಂತರೆ ಎಲ್ಲಾ ಪ್ರಾಣಿಗಳ ತಲೇನೂ ಮ್ಯಾಲೇ ಆಗ್ತದೆ ಅದರೊಳಗೇನು ವಿಶೇಷ ?

ಎರಡನೆಯುವ:– ತಲೆ ಮ್ಯಾಲೆ, ಪ್ರಗತಿ ಕೆಳಗೆ. ಅದರೊಳಗಿದೆ ವಿಶೇಷ ಪ್ರತಿಯೊಂದು ಪ್ರಾಣಿಗೆ ಇದೆ ಈ ಪ್ರಗತಿ.

ಒಂದನೆಯುವ:– ಏನಂದೆ ? ಪ್ರಗತಿ ಅಂದೆ, ಕೆಳಗೆ ಹೋಗೋದೆ ?

ಎರಡನೆಯುವ:– ಹೌದು.

ಒಂದನೆಯುವ:– ಪ್ರತಿಯೊಂದು ಪ್ರಾಣಿಗೆ ಈ ಪ್ರಗತಿ ಇದೆಯೆ ?

ಎರಡನೆಯುವ:– ಹೌದು.

ಒಂದನೆಯುವ:– ಅಂದ್ರೆ— ಪ್ರಗತಿ ಅನ್ನೋದು ಮನುಷ್ಯಮಾತ್ರರದು ವಿಶೇಷ ಅಲ್ಲವೆ ?

ಎರಡನೆಯುವ:– ಅಲ್ಲ

ಒಂದನೆಯುವ:– ಅದೆಂಥಾ ಪ್ರಗತಿ ಅದು।

ಎರಡನೆಯುವ:– ಸಾಯೋದು

ಒಂದನೆಯುವ – ಏನದು ? ಏನಂದೆ ?

ಎರಡನೆಯುವ:– ಸಾಯೋದು, ಸತ್ತು ಕೆಳಗೆ ನೆಲದ ಮಣ್ಣು ಸಮ ಆಗೋದು. ಆ ಮ್ಯಾಲೆ ಇನ್ನೊಂದಾಗಿ ಹುಟ್ಟೋದು ಇದು—ಇದು ಪ್ರಗತಿ.

ಒಂದನೆಯುವ– ಅಂದ್ರೆ ಮ್ಯಾಲೆ ಹೋಗೋ ಹಾಗೆ ಇಲ್ಲ ?

ಎರಡನೆಯುವ:– ಮ್ಯಾಲೆ ಅನ್ನೋದೇ ಇಲ್ಲ.

ಒಂದನೆಯುವ : – ಮುಂದೆ ಹೋಗೋ ಹಾಗೇ ಇಲ್ಲ ?

ಎರಡನೆಯುವ : – ಮುಂದೆ ಅನ್ನೋದೇ ಇಲ್ಲ.

ಒಂದನೆಯುವ : – ಅಂದ್ರೇನಿದೆ !

ಎರಡನೆಯುವ : – ದುಂಡಿದೆ, ಗೋಲ ಇದೆ.

ಒಂದನೆಯುವ : – ಅಂದ್ರೆ,— ಮುಂದೆ ಮುಂದೆ ನಡೆದರೆ ನಡೆದಲ್ಲಿಯೇ ಬಂದು ನಿಲ್ಲೋದು ? [ತನ್ನ ತಲೆ ತೋರಿಸಿ] ಪ್ರಗತಿ ಅಂದರೆ—

ಎರಡನೆಯುವ : – ಪ್ರದಕ್ಷಿಣೆ ಹಾಕಿದ ಪರಿಶ್ರಮಕ್ಕೇನೇ ಪ್ರಗತಿ ಅನ್ನೋದು.

ಒಂದನೆಯುವ : – [ಗೊಂದಲಕ್ಕೆ ಸಿಕ್ಕವನಂತೆ] ಅಲ್ಲ–[ಕೈಗಳಿಂದ ಸೋಪಾನವನ್ನು ಸೂಚಿಸುವವನಂತೆ] ಅಂದ್ರೆ–ಇದಕ್ಕಿಂತ ಮ್ಯಾಲೆ–ಅದಕ್ಕಿಂತ ಮ್ಯಾಲೆ–ಎಲ್ಲಕ್ಕಿಂತ ಅಂದ್ರೆ ಎತ್ತರ–ಎತ್ತರ–[ಮುಖ ಮೇಲೆ ಮಾಡುತ್ತ ತಿಳಿಸಲು ಯತ್ನಿಸುವಾಗ]

ಎರಡನೆಯುವ :– ಅದಕ್ಕೆ ಗೋಳು ಒಳಿಯೋದು ಅಂತಾರೆ, ಪ್ರಗತಿ ಅನ್ನೋದಿಲ್ಲ

ಒಂದನೆಯುವ :– [ಹತಾಶನಂತೆ ಎರಡೂ ಕೈಗಳನ್ನು ತಲೆಗಿಟ್ಟು ಕುಕ್ಕರಿಸುವನು.]

ಎರಡನೆಯುವ :–[ಮೇಲಿನಿಂದ ಅವನನ್ನು ಕೆಲ ಹೊತ್ತು ದಿಟ್ಟಿಸಿ] ಈಗ ಸಾಧಿಸಿದೆ ನೀ ಪ್ರಗತಿಯನ್ನ. [ದೂರದಿಂದ ಒಟ್ಟಿಗೆ ಸೂಚಿಸುವ ತಾಳದಲ್ಲಿ ಕತ್ತೆ ಕಿರುಚಿದ ಸದ್ದು]. ನೋಡಿದೆಯಾ ? ನಿನ್ನ ದನಿ ಕೂಡ ಪ್ರಗತಿಯನ್ನು ಹೊಂದಿದೆ ?

[ಒಂದನೆಯುವನು ಆಕಳಿಸುವಾಗ ರಂಗಸ್ಥಲದಲ್ಲಿ ಕತ್ತಲೆ ಬೆಳಕು ಬಂದಾಗ ಎರಡನೆಯ ವ್ಯಕ್ತಿ ಇಲ್ಲ ಒಂದನೆಯವನು ನಿದ್ರೆಯಿಂದ ಎಚ್ಚರಾಗುವವನಂತೆ ಆಕಳಿಸುತ್ತಿದ್ದಾನೆ ಎರಡೂ ಕೈಗಳಿಂದ ತಲೆಯನ್ನು ಹಿಡಿದುಕೊಂಡಿದ್ದಾನೆ ಒಂದು ನಿಮಿಷದಲ್ಲಿ ಪೂರ್ತಿ ಎಚ್ಚರಾದವನಂತೆ. ಸುತ್ತಲೂ ನೋಡುತ್ತಾನೆ.]



ಒಂದನೆಯವ :– ಏನಿದು! ಎಷ್ಟೊತ್ತು ಕೂತೀನಿ? ನಾನು ಬಂದ್ದಾದರೂ ಎಲ್ಲಿ? [ವಿಷಾದದ ನಗೆಯಿಂದ] ಎಷ್ಟೊತ್ತು ಎಲ್ಲಿ? ಹಃ!ಹುಚ್ಚು ಪ್ರಶ್ನೆ! ಎಷ್ಟೊತ್ತಾದ್ರೇನು? ಭೂಮಿ ಸಹಿತ ೨೪ ಘಂಟೆ ಗಿಮಿ ಗಿಮಿ ತಿರಿಗಿದರೂ ಮೊದಲು ಇದ್ದಾಗ ಇರೋದಂತೆ! ೩೬೦ ದಿನ ಸುತ್ತು ನಡದರೂ ಮತೆ ಮೊದಲು ಇದ್ದಲ್ಲಿಯೆ! ಇನ್ನು ಮನುಷ್ಯನ ಪಾಡೇನು? ಅಂತೂ ಈ ಸೃಷ್ಟಿಯೊಳಗೆ ಸರಳ ದಾರಿ ಅನ್ನೋದೇ ಇಲ್ಲ! [ದಣದವನಂತೆ ಏಳುತ್ತ] 'ಸರಳ ದಾರಿ ಹಿಡಿಯೋದು' ಅನ್ನೋದು ಮನುಷ್ಯನ ಭ್ರಾಂತಿ! ಯಾರನ್ನೂ ಸರಳ ಹೋಗಗೊಡಲಾರದ ಮೂಲಶಕ್ತಿ ಸೃಷ್ಟಿಯದು! ಅದಕ್ಕೇ ಮನುಷ್ಯನ ದಾರಿನೇ ಬೇಡ ಅಂತು[ಒಮ್ಮೆಲೆ ತಡದು 'ಗೆಳೆಯ'ನತ ತಿರುಗಿ ನೋಡಿ] ಭಲೇ! ನಿನ ಕೂಡ ಅಂತ ನಾ ಇಲ್ಲಿ ಮಾತಾಡ್ತಾ ಇದ್ದೀನಿ, ಮಲಗಿಯೇ ಬಿಟ್ಟಿಯಾ? ಹುಂ'-ಏಳು-ನಡ! ನೋಡಿದಿಲ್ಲೋ? ಇಷ್ಟರಲ್ಲಿಯೆ ಕನಸು ಬಿದ್ದಿತ್ತೊ, ಏನು ನಿಜವಾಗಿಯೆ ನನ್ನಂಥವನ ಇನ್ನೊಬ್ಬ ಬಂದಿದ್ದನೊ! ಅದಕ್ಕೇ, ಬೇಗ ಹೊರಡೋಣ–ಯಾವ ಲೋಕಕ್ಕೂ ಬ್ಯಾಡ. ಭೂಲೋಕ ಆಯ್ತು, ಚಂದ್ರಲೋಕ ಆಯ್ತು, ಎಲ್ಲಿ ಹೋದರೂ ಕಲ್ಲು-ಮುಳ್ಳು, ಬೆಟ್ಟ-ಮಣ್ಣು ಬಿಟ್ಟಾಗೇ ಕಾಣೋದಿಲ್ಲ;' ದೂರದಿಂದ ನೋಡಿದರೇನೇ ಚಂದ ಏನೊ? ಭೂಲೋಕದೊಳಗೆ ಕಲ್ಲನ್ನೆತ್ತಿದ್ರೆ ಹುಳು ಇದ್ದಾಗ, ಇಂದಿಲ್ಲ ನಾಳೆ ಚಂದ್ರಲೋಕದೊಳಗೆ ಕಲ್ಲನ್ನೆತ್ತಿದಲ್ಲಿ ಮನುಷ್ಯ ಕಾಣಬಹುದು [ಮತ್ತೆ ಗೆಳೆಯನನ್ನು ನೋಡಿ] ಯಾಕೆ? ನಗ್ತೀ ಯಾಕೆ? ಮೊದಲಿಗೇನೇ ನಿನಗೆ ಹೇಳಿದ್ದಿಲ್ವೆ ಮನುಷ್ಯನ ಸಹವಾಸ ಬ್ಯಾಡ, ಅಂತಿಯಾ? ಈಗ ನಾ ಒಪ್ತೀನಿ ನಿನ್ಮಾತಿಗೆ. ಮನುಷ್ಯನ ಸಹವಾಸ ಬ್ಯಾಡ, ಯಾವ ಲೋಕನೂ ಬ್ಯಾಡ ಸರಳ ಹೋಗೋಣ—ಓಹೋ! ಅದೇ ಅಭ್ಯಾಸ ಆಗಿಬಿಟ್ಟಿದೆಯಲ್ಲ 'ಸರಳ ಸರಳ' ಅಂತ? ಹೀಗೆ ಸುತ್ತು ಹೋಗೋಣ, ಅಂತರಾಳದ ಹವೆಯೊಳಗೇ ಇದ್ದುಬಿಡೋಣ. ರಸ್ತೆ–ರಹದಾರಿ–ಮನೆ–ಕಟ್ಟಡ ಇಂಥಾ ಯಾವ ನಿರ್ಬಂಧ– ಸಂಸ್ಕೃತಿ ಅಂತಾರ ನೋಡು ಅದು ಯಾವದೂ ಬ್ಯಾಡೇ ಬ್ಯಾಡ! ಇನ್ನು ನೀನೇ ಹಾದಿ ತೋರಿಸು. ನನಗೆ ಬುದ್ಧಿ ಇದೆ ಅನ್ನೋ ಸೊಕ್ಕಿನಿಂದ ನಾನು ಮುಂದಾಗಿ ಈ ಅವಸ್ಥೆಗೆ ತಂದು ಹಾಕಿದೆ ನಿನ್ನ! ಹಾಳಾಗ್ಲಿ ಈ ಮನುಷ್ಯಬುದ್ಧಿ ಬಾ. [ಎನ್ನುತ್ತ, ರಂಗದಿಂದ ಮರೆಯಾಗಿ, ಒಳಗೆ ಹೋಗಿ ಒಳಗಿನಿಂದಲೇ] ನಡಿಯಪ! ನೀನೇ ಮುಂದಾಗು, ನೀನೇ ಮಾರ್ಗದರ್ಶಕ ಆಗು, ನಡೆ ಹೇಳಿದೆನಲ್ಲ? ನನ್ನ ಬುದ್ಧಿಗೆ ಹೊಳೆಯೋದು 'ಸರಳ ಹಾದಿ ಸರಳ ಹಾದಿ' ಅನ್ನೋದೆ! ಸರಿಯಾದ ಹಾದಿಯನು ನೀನೇ ತೋರಿಸು, ನನ್ನ ಬುದ್ಧಿ ನಿನಗೀಗ ಶರಣಾಗತ ಆಗಿದೆ 'ನಡೆ–ನಡೆ–[ಎನ್ನುತ್ತ ದನಿ ಹತ್ತಿರ ಬರುವಾಗ ಒಳಗಿನಿಂದ ರಂಗಕ್ಕೆ ಮೊದಲು ಬರುವುದು ಒಂದು ಕತ್ತೆ. ಅದರ ಹಿಂದಿನಿಂದ ಒಂದನೆಯ ವ್ಯಕ್ತಿ ನಡದು ಬರುತ್ತ] ದೂರದ ಬಗ್ಗೆ ವಿಚಾರ ಮಾಡತಾ ಎಲ್ಲಿಯೋ ಹೋಗೋದರ ಬದಲು ಮುಂದು ಮುಂದಿನದನ್ನು ಮೂಸಿ ನೋಡ್ತಾ ಹೋಗೋದೆ ಯೋಗ್ಯ

[ಇಬ್ಬರೂ [illegible] ರಂಗದ ಇನ್ನೊಂದು ತುದಿಗೆ ಸಾವಕಾಶವಾ[illegible] ಒಳಗೆ ಹೋದ ಮೇಲೆ ಕತ್ತೆ ಹೇಕರಿಸಿದ ಶಬ್ದ, ಅದಕ್ಕೆ [illegible]]

(ತೆರೆ)

— ಮುಗಿದುದು —

ವಿ. ಸೂ. :—

೧) ಎಲ್ಲ ಹಕ್ಕುಗಳನ್ನೂ ಕಾದಿರಿಸಲಾಗಿದೆ.

೨) ಪ್ರಯೋಗಕ್ಕೆ ಮುಂಚಿತ ರೂ. ೨೫/- ಅಧಿಕಾರಧನವನ್ನು ಕೊಟ್ಟು ಸಮ್ಮತಿಯನ್ನು ಪಡೆಯುವುದು ಅಗತ್ಯ.

ವಿಳಾಸ :—

೩) ಶ್ರೀಮತಿ ಶಾರದಾ ಆದ್ಯ, ೩೪೧, ೬ ನೇ ಮೇನ್ ರೋಡ್ ಮಲ್ಲೇಶ್ವರಂ. ಬೆಂಗಳೂರು-೩.

ಸೂರ್ಯನು ಅಸ್ತಮಿಸಿದ ಮೇಲೆ ಅಳುತ್ತ ಕುಳಿತಲ್ಲಿ ನೀವು ನಕ್ಷತ್ರಗಳನ್ನೂ ನೋಡಲಾರಿರಿ.

—ರವೀಂದ್ರನಾಥ ಠಾಕೂರ

●

ಆಶ್ಚರ್ಯದ ಸಂಗತಿಗಳು ಅನೇಕ; ಆದರೆ ಮಾನವನಷ್ಟು ಹೆಚ್ಚು ಆಶ್ಚರ್ಯಜನಕವಾದುದು ಇನ್ನೊಂದಿಲ್ಲ.

—ಸೊಫೋಕ್ಲಿಸ್

ಮೇಕೆರಾಯನಿಗೆ ಮೊಸರನ್ನ

—ರಾ. ಶ್ರೀ.

ಒಂದಾನೊಂದು ಕಾಲದಲ್ಲಿ ಗುಮಾಸ್ತನೊಬ್ಬನಿದ್ದನಂತೆ. ಊರ ಪೌರಸಭೆಯಲ್ಲಿ. ಅವನಿಗೆ 'ಇಂದಾ-ಗೆ' ಪುಸ್ತಕವನ್ನು ಬರೆದಿಡುವ ಕೆಲಸವಂತೆ. ಗುಮಾಸ್ತೆ ಕೆಲಸ ಮಾಡ್ತಾನಲ್ಲ ಅಂತ ಅವನ ಮುಖದ ಮೇಲಿನ ಕೂದಲುಗಳಿಗೂ ಅವನನ್ನು ಕಂಡರೆ ತಾತ್ಸಾರವಂತೆ. ಹಾಗಾಗಿ ಗಡ್ಡದ ಹತ್ತಿರ ಒಂದಿಷ್ಟು ಪುರುಚಲು ಕೂದಲು, ಮೀಸೆ ಇರಬೇಕಾದಲ್ಲಿ ಒಂದು ಎಂಟು ಹತ್ತು ಕೂದಲುಗಳು, ಕೆನ್ನೆ ಮೇಲೆ ಒಂದೇ ಸಾಲು ಕೂದಲು ಹೀಗೆ ಬೇಕಾಬಟ್ಟೆಗೆ ಬೆಳೆದಿದ್ದುವಂತೆ. ಇಂತಹ ಬೇಜವಾಬ್ದಾರಿ ಕೂದಲುಗಳಿಗೆ ಕಟಾವು ತಾನೆ ಏಕೆ ಎಂದು ಗುಮಾಸ್ತನಿಗೂ ತಾತ್ಸಾರ. ಹಾಗಾಗಿ ಅವ ೨-೩ ತಿಂಗಳಿಗೊಮ್ಮೆ, ಹೆಂಡತಿಯ ಜುಲುಮ್ಮಿಗೆ, ಕೌರ ಮಾಡಿಸಿಕೊಳ್ಳುತ್ತಿದ್ದನಂತೆ. ಹೀಗಾಗಿ ಸುಮಾರು ವರ್ಷಾಕಾಲವೆಲ್ಲ ಅವನ ಮುಖದಲ್ಲಿ ಮೇಕೆಯ ಗಡ್ಡ ಮೆರೆಯುತ್ತಿದ್ದುದನ್ನು ಕಂಡು ಜನರೆಲ್ಲ 'ಮೇಕೆರಾಯ" ಎಂದು ಅಡ್ಡ ಹೆಸರಿಟ್ಟು ಅವನನ್ನು ಕರೆಯಲಾರಂಭಿಸಿದರಂತೆ. ಆದರೆ ಪೌರಸಭಾ ಅಧ್ಯಕ್ಷರಿಗೆ ಇವನನ್ನು ಕಂಡರೆ ಬಲು ಪ್ರೀತಿಯಂತೆ. 'ಹೇಳಿದ ಹಾಗೆ ಕೇಳ್ತಾನೆ, ಮನೆ ಕೆಲಸ ಮಾಡ್ತಾನೆ, ಎಷ್ಟು ದುಡಿಸಿದರೂ ಎದುರು ಬೀಳೊಲ್ಲ" ಎಂದು ಅವರಿಗೆ ಖುಷಿಯಂತೆ.

ಅದೇ ಕಚೇರಿಯಲ್ಲಿ ಲೆಕ್ಕದ ಗುಮಾಸ್ತೆ ಒಬ್ಬನಿದ್ದನಂತೆ. ಬಲು ಘಾಟಿ ಅಂತೆ ಅವ. ಹಾಗೂ ಚೂಟಿಯೂ ಅಂತೆ. ಪಾದರಸ ಹರಿದ ಹಾಗೆ ಅತ್ತ ಇತ್ತ ಸುತ್ತ ಮಣಿ ಮಣಿಯಾಗಿ ಓಡಾಡೋನಂತೆ. ಹೆಸರು ಹನುಮಂತರಾಯ ಅಂತ. ಹೆಸರಿಗೆ ತಕ್ಕಂತೆ ಎಲ್ಲ ಗುಮಾಸ್ತರ ಬಳಿಗೂ ಹೋಗಿ ಕಪಿಚೇಷ್ಟೆ ಮಾಡ್ತಾ ಇದ್ದನಂತೆ. ಹೀಗೆಲ್ಲಾ ಬಾಲ ಆಡಿಸಿದರೂ, ಪೌರಸಭಾ ಅಧ್ಯಕ್ಷರಿಗೆ ಅಚ್ಚುಮೆಚ್ಚಾಗಿದ್ದನಂತೆ. ಯಾಕೆ ಅಂದರೆ, ಯಾವ ಖರ್ಚನ್ನು ಯಾರು ಹೇಗೇ ಮಾಡಿರಲಿ, ಲೆಕ್ಕ ಬರೆದಿಡೋವಾಗ ಸಮಂಜಸವಾಗಿ ಕಾನೂನು ಪ್ರಕಾರ ಬರೆದಿಡುತ್ತಾ ಇದ್ದನಂತೆ. ಎಂತೆಂತ ಆಡಿಟರುಗಳು ಬಂದರೂ ಲೆಕ್ಕ ಪತ್ರ ಸರಿಯಾಗಿದೆ ಅಂತ ಹೊಗಳಿ ಷರಾ ಬರೆದು ಹೋಗುತ್ತಿದ್ದರಂತೆ.

ಇಂದಾ-ಗೆ ಗುಮಾಸ್ತೆಯೂ, ಹನುಮಂತರಾಯನೂ ಅಕ್ಕ ಪಕ್ಕದ ಮನೆಯಲ್ಲಿದ್ದರಂತೆ. ಕಚೇರಿಯಲ್ಲಿ, ಅಧ್ಯಕ್ಷರ ಮನೆಯಲ್ಲಿ, ಹಾಗೂ ಭಜನೆ ಮಂದಿರಗಳಲ್ಲಿ ಒಬ್ಬರನೊಬ್ಬರು ಭೇಟಿಯಾಗುತ್ತಲೇ ಇದ್ದರಂತೆ. ಹಾಗಾಗಿ ಪರಸ್ಪರ ಸ್ನೇಹ ಗಾಢವಾಯಿತಂತೆ. ಎಷ್ಟೋ ದಿವಸ ಇಂದಾ-ಗೆ ಗುಮಾಸ್ತೆ, ಮನೆಯಿಂದ ತಂದಿದ್ದ ಮೊಸರನ್ನದ ಬುತ್ತಿಯಿಂದ ಕಚೇರಿಯ ವಿರಾಮ ಕಾಲದಲ್ಲಿ ಹನುಮಂತರಾಯನಿಗೂ ಎರಡು ತುತ್ತು ಕೊಡುತ್ತಿದ್ದನಂತೆ.

"ಕತ್ತೇಲಿ ಕೋತಿ ಮೊಸರನ್ನ ತಿಂದುಬಿಟ್ಟು, ಮಿಕ್ಕ ಎಂಜಲನ್ನ ಮೇಕೆ ಬಾಯಿಗೆ ಒರಸುತ್ತಿತ್ತು. ಈಗ ಮೇಕೆನೇ ತಿಂದು, ಕೋತಿ ಬಾಯಿಗೆ ಎರಡು ತುತ್ತು ಹಾಕುತ್ತೆ. ಮುಖ್ಯ, ಕಾಲ ಕೆಟ್ಟ



ಹೋಯಿತು" ಎಂದು ಹನುಮಂತರಾಯ ಹಾಸ ಮಾಡುತ್ತಿದ್ದನಂತೆ

ಹನುಮಂತರಾಯ ಸ್ವಲ್ಪ ಖಯಾಲಿ ಮನುಷ್ಯ ಅಂತ ಆಗಲೇ ಸೂಚನೆ ಕೊಟ್ಟದ್ದಾಯ್ತಲ್ಲ. ತ್ರೇತಾ ಯುಗದಲ್ಲಿ ಹನುಮಂತರಾಯ ರಾಮಾಯಣದ ಮುಖ್ಯ ಪಾತ್ರ ಒಂದನ್ನು ವಹಿಸಿದ್ದಿರಬಹುದು ಆದರೆ ಕಲಿಕಾಲದ ಹನುಮಂತರಾಯನಿಗೆ ದ್ವಾಪರದ ಮಹಾಭಾರತದ ಮೇಲೆ ಹೆಚ್ಚು ಪ್ರೀತಿ ಧರ್ಮರಾಯ ಅಂದರೆ ಧೀರ ಗಂಡಸು. ಅವ ನೂಬ ನೇ ಗಂಡು ಕಚ್ಚೆ ಹಾಕುವ ಯೋಗ್ಯತೆ ಪಡೆದಿದ್ದ, ಎಂದು ಹನುಮಂತರಾಯನ ಅಂಬೋಣ "ಗಂಡಸು ಅಂದರೆ ಧರ್ಮರಾಯ! ಮನೆ, ಮಠ, ಮಡದಿ ಎಲ್ಲವನೂ ಬಾಜಿ ಇಟ್ಟು, ಜೂಜಾಡಿಕ್ಕೆ ಕೊಡವಿಕೊಂಡನಲ್ಲ! ಬದುಕಿದರೆ ಹಾಗೆ ಬಾಳಬೇಕು. ಅವನ ಹಾಗೆ ಬಾಜಿ ಕಟ್ಟಲು ನನಗೆ ಸಾಧ್ಯವಿಲ್ಲ. ಏಕೆಂದರೆ ನನ್ನ ಮುಖ ನೋಡಿ ಯಾರೂ ಹೆಣ್ಣು ಕೊಡಲಿಲ್ಲ. ಹೆಂಡತಿ ಇಲ್ಲದವನು ನಾನು. ಆದರೂ ಅದಷ್ಟು ಕುದುರೆ ಬಾಲ ಹಿಡಿದು, ದಾಳ ಉರುಳಿಸಿ, ಇಸ್ಪೀಟ್ ಆಡಿ, ಅದೃಷ್ಟ ಪರೀಕ್ಷೆ ಮಾಡುವೆ" ಎಂದು ಹನುಮಂತರಾಯ ಮಾಟನಲ್ಲಿ ವ್ರತ ಹಿಡಿದ.

ಈ ಖಯಾಲಿ ಶುರುವಾದ ಮೇಲೆ ಯಾವನಿಗೆ ತಾನೆ ಸಾಕಷ್ಟು ಹಣ ಇರುತ್ತೆ? ಪೌರಸಭೆಯಲ್ಲಿ ಲೆಕ್ಕಗಳನು ಸರಿಯಾಗಿ ಬರೆದಿಟ್ಟರೂ ಕೂಡ, ನಗದು ಹಣವನು ಮಾತ್ರ ಹಿಡಿ ಹಿಡಿ ಮುಕ್ಕಿ ಬಿಡ್ತಿದ್ದನಂತೆ, ಮುಕ್ಕಿದ ಹಣವನೆಲ್ಲಾ ತಳವಿಲ್ಲದ ಜೂಜಿನ ಭಾವಿಗೆ ಹಾಕ್ತಾ ಇದ್ದನಂತೆ. ಅಂದ ಮೇಲೆ ಬಡ ಗುಮಾಸ್ತನಂತೆಯೇ ಹರಕಲು ಅಂಗಿ ತೇಪೆ ಷರ್ಟು, ಮಾಸಿದ ಪಂಚೆಯಲ್ಲೇ ಶೋಭಾಯಮಾನವಾಗಿದನಂತೆ.


ವರ್ಷ ಮುಗಿಯುವ ವೇಳೆಗೆ ಯಥಾ ಪ್ರಕಾರ ಆಡಿಟರ್ ಬಂದರಂತೆ. ಆದರೆ ಈ ಸರ್ತಿ ಬಂದ ಆಡಿಟರ್ ಹೊಸಬರಂತೆ. ಹೊಸ ಅಗಸನ ತರಹ ಅವರು ಲೇಖಣಿಯನ್ನು ಎತ್ತಿ ಎತ್ತಿ ಕುಕ್ಕಿ ಕುಕ್ಕಿ 'ಟಿಕ್" ಹಾಕುತ್ತಿದ್ದರಂತೆ. ಪೌರಸಭೆಯ ಲೆಕ್ಕಪತ್ರಗಳ ಪುಸ್ತಕ ಸರಿಯಾಗಿತ್ತಂತೆ ಆದರೆ ಪೌರಸಭೆಗೆ ಪಾವತಿಯಾದ ಕೆಲವು ಬಾಬು ಹಣಕ್ಕೆ ಇಂದ್ರಾ-ಗೆ ಗುಮಾಸ್ತೆ ಸಹಿ ಹಾಕಿದ ರಸೀತಿ ಇದ್ದುದನ್ನು ಆಡಿಟರ್ ಗಮನಿಸಿದರಂತೆ. ಪ್ರಾಯದ ಆಡಿಟರು ಹೊಸದಾಗಿ ಮದುವೆಯಾಗಿದ್ದವರು, ತಮ್ಮ ಊರು ಬಿಟ್ಟು, ಆಡಿಟ್ ಮಾಡುಕ್ಕೆ ಒಂಟಿಯಾಗಿ ಬಂದಿದ್ದರು ಇನ್ನೂ ಬಿಸಿಬಿಸಿಯಾಗಿದ್ದರು ಕೊಂಡಿ ಚುರುಕಾಗಿತ್ತು. ತನಿಖೆ ಬಿಗಿಯಾಗಿತ್ತು.

ಇಂದ್ರಾ-ಗೆ ಗುಮಾಸ್ತೆ ಸಹಿ ಹಾಕಿದ ರಸೀತಿಗಳ ಮೊತ್ತ ಇಪ್ಪತ್ತು ಸಾವಿರಕ್ಕೆ ಮುಟ್ಟಿತು. ಬೊಕ್ಕಸದಲ್ಲಿರಬೇಕಾದ ಆ ಹಣವನ್ನು ಪರೀಕ್ಷಿಸಲು ಆಡಿಟರ್ ಖಜಾನೆಯನ್ನು ತೆರೆಸಿದರು. ಅಲ್ಲೇನಿದೆ? ಎಲ್ಲಾ ಸರಕಾರಿ ಬೊಕ್ಕಸಗಳಲ್ಲಿ ಇರುವಂತೆ ಅಲ್ಲೂ ಮೂರು ಹೆಗ್ಗಣಗಳು!

ಅಧ್ಯಕ್ಷರನ್ನು ಕರೆಸಿ, "ನಿಮ್ಮ ಕಚೇರಿಯಲ್ಲಿ ಹೀಗೆ ಇಪ್ಪತ್ತು ಸಾವಿರದಷ್ಟು ಹಣ ಲಪಾವಣೆ ಆಗಿದೆ, ನೀವು ಹುಷಾರಾಗಿರಬೇಕಾಗಿತ್ತು. ಮುಂದಿನ ಕ್ರಮ ಪೋಲೀಸಿನವರು ನಡೆಸುತ್ತಾರೆ" ಎಂದು ಹೇಳಿ, ವರದಿ ಮುಗಿಸಿ ಮೇಲಕ್ಕೆ ಕಳಿಸಿ ಧಡ ಧಡ ಓಡಿ ತಮ್ಮನೆಗೆ ಹಿಂತಿರುಗಿದರು, ಆಡಿಟರು.

*

"ಏನಯ್ಯಾ! ಹನುಮಂತರಾಯ! ಜಾಣ ನೀನು ಇದ್ದೀ, ಹೀಗೆ, ನನ್ನ ಆಡಳಿತದಲ್ಲಿ ಲಪಾವಣೆ



ಸಿಕ್ಕಿಕೊಳ್ಳೋಹಾಗೆ ಆಯ್ತಲ್ಲಯ್ಯಾ?" ಎಂದು ಅಧ್ಯಕ್ಷರು ಗುರುಗುರಿದರಂತೆ.

"ಲಪಾವಣೆ ಆಗಿಲ್ಲ, ಸ್ವಾಮಿ: ಆಗಿದ್ದರೂ, ಹಣ ಹೋಗಿಲ್ಲ. ಇಂದ್ರಾ-ಗೆ ಗುಮಾಸ್ತೆ ರಸೀತಿಗಳಿಗೆಲ್ಲಾ ಸಹಿ ಹಾಕಿದ್ದಾನೆ. ಅವನಿಂದ ಸರಕಾರ ವಸೂಲು ಮಾಡಿಕೊಳ್ಳಬಹುದು. ಆದರೂ ಆತ ಮೇಕೆ ಹಾಗೆ ಸಾಧು ಪ್ರಾಣಿ, ತಲೆ ಬಗ್ಗಿಸಿಕೊಂಡೇ ನಡೀತಾನೆ. ಆದರೆ ಹೀಗೆ...ಛೆ...ಛೆ...' ಅಂತ ಚಡಪಡಿಸಿದನಂತೆ

ಇಂದ್ರಾ-ಗೆ ಗುಮಾಸ್ತರನ್ನು ಅಧ್ಯಕ್ಷರು ಕೇಳಿದಾಗ, "ನನಗೊಂದೂ ತಿಳಿಯದು, ಸ್ವಾಮಿ. ಆಗಿಂದಾಗ್ಗೆ ಹನುಮಂತರಾಯರು ಬಂದು| ಆ ಗುಮಾಸ್ತೆ ಬರಲಿಲ್ಲ, ಆದುದರಿಂದ ಈ ರಸೀತಿಗೆ ನೀನು ಸಹಿ ಹಾಕು, ಎಂದು ಹೇಳುತ್ತಿದ್ದರು. ನಾನು ಹಾಕುತ್ತಿದ್ದೆ. ಕಚೇರಿ ಅಂದ ಮೇಲೆ ಒಬ್ಬರ ಕೆಲಸ ಇನ್ನೊಬ್ಬರು ಮಾಡಬೇಕಲ್ಲವೇ?" ಎಂದು ಹೇಳಿದನಂತೆ

ದಸ್ತಗಿರಿ ಮಾಡಿದರು ಇಂದ್ರಾ-ಗೆ ಗುಮಾಸ್ತೇನ. ತಿಂಗಳಿಗೆ ಐವತು ರೂಪಾಯಿ ಪಗಾರ ಪಡೆಯುವವನಿಂದ ಎಂದಿಗೆ ಇಪ್ಪತ್ತು ಸಾವಿರ ವಸೂಲ್ ಮಾಡುವುದು? ಸೆರೆಮನೆಗೆ ಸೇರಿಸಿದರು. ಆರು ತಿಂಗಳು ಜೈಲುವಾಸ ಅಂತ ನ್ಯಾಯಾಧೀಶರು ತೀರ್ಪುಕೊಟ್ಟರು

ಆರೂ ತಿಂಗಳು ಹನುಮಂತರಾಯ ನಿಷ್ಠೆಯಿಂದ, ಇಂದ್ರಾ-ಗೆ ಗುಮಾಸ್ತೆಯ ಮನೆಗೆ ಹೋಗಿ, ಆತನ ಹೆಂಡತಿಯಿಂದ ಮೊಸರನ್ನದ ಬುತ್ತಿ ತೆಗೆದುಕೊಂಡು, ಜೈಲಿಗೆ ತಪ್ಪದೆ ಹೋಗಿ ಇಂದ್ರಾ-ಗೆ ಗುಮಾಸ್ತೆಗೆ ಉಣಿಸಿ ಬರುತಿದನಂತೆ

ನೀತಿ:- ಬಂದೀಖಾನೆಗೆ ನೂಕಿದರೂ ಕೂಡ, ಬುತ್ತಿ ಉಣಿಸಲೇಬೇಕು.

ವೇಟಿಂಗ್ ರೂಮಿನ

ಜಿ. ಡಿ. ನಾಡಕರ್ಣಿ

"ಏಳ್ರೀ. ಎಷೊತ್ತು ಸುಮ್ಮನೆ ಕೂಡೋದು? ಇನ್ನೊಮ್ಮೆ ಚಹಾ ಕುಡಿದು ಬರೋಣ ಏಳ್ರಿ."

"ಆಗಳೆ ಇನ್ನೂ ಕುಡಿದೇವಲ್ಲ! ಆ ಕರೇ ಚಹಾ ಕುಡಿದರ ನನಗಂತೂ ವಾಕರಿಕೆ ಬಂದ್ಹಾಂಗ ಆತು ಇನ್ನೇನು ಅರ್ಧಾ ತಾಸಿನೊಳಗss ಗಾಡಿ ಬರ್ತದ ನಿನಗ ಯಾವಾಗಲೂ......'

"ನೀವು ಯಾವಾಗಲೂ ಹೀಂಗ! ಕೂತ ಜಾಗಾ ಬಿಟ್ಟು ಏಳೂದು ಅಂದ್ರ ನಿಮಗ ಜೀವದ ಸುತ್ರ ಬರ್ತದ ಆತು!...ನಾನರ ಸ್ವಲ್ಪ ಹೊರಗ ಪ್ಲ್ಯಾಟ್ ಫಾರಂ ಮ್ಯಾಲ ಅಡ್ಡಾಡಿ ಬರ್ತೇನಿ

ನನ್ನ ಉತ್ತರಕ್ಕೆ ದಾರೀ ಕಾಯದೆ ಅರ್ಧಾಂಗಿಯು ಸಹಜ ಮುನಿಸಿನಿಂದ ಹೊರಗೆ ಹೊರಟೇ ಬಿಟ್ಟಳು. ಮನೆಯಲ್ಲಿ ಇಂಥ ಪ್ರಸಂಗವೇನೋ ನನ್ನ ನಿತ್ಯದ ಅನುಭವ ಆದರೆ ಇಂದು ರೇಲ್ವೆ ವೇಟಿಂಗರೂಮಿನಲ್ಲಿಯೂ ಅದರದೇ ಪುನರಾವೃತ್ತಿ ನಡೆಯಿತು. ನಮ್ಮ ಸಂಭಾಷಣೆಯನ್ನು ಎಷ್ಟು ಜನರು ಕೇಳಿರಬಹುದೆಂದು ತುಸು ಅಂಜಿಕೆಯಿಂದಲೇ ನಾನು ಸುತ್ತಲೂ ನೋಡಿದೆ. ಮೂಲೆಯಲ್ಲಿಯ ಆರಾಮ ಕುರ್ಚಿಯಲ್ಲಿ ವೃದ್ಧರೊಬ್ಬರು ತೂಕಡಿಸುತ್ತಿದ್ದರು. ಇನ್ನೋರ್ವ ಯುವಕ ನಾನು ನೋಡಿದೊಡನೆಯೇ ನನ್ನೆಡೆಗೆ ಚೇಷ್ಟೆಗಣ್ಣುಗಳಿಂದ ನೋಡಿ ಮುಗುಳ್ನಕ್ಕು ಮತ್ತೆ Film-fare ಓದುವುದರಲ್ಲಿ ಮಗ್ನನಾದ ನಾನು ಮನಸಿನಲ್ಲಿ ಅಂದುಕೊಂಡೆ— "ತಮ್ಮಾ, ನೀನಿನ್ನೂ ಬ್ರಹ್ಮಚಾರಿ ಅಂತ ಕಾಣಸ್ತದ; ಆದರೆ ನಾಳೆ ನೀನೂ ಗೃಹಸ್ಥಾಶ್ರಮಿ ಆದಮೇಲೆ ಅದರ ಸರಸ-ವಿರಸ ನಿನ್ನ ಅನುಭವಕ್ಕೂ ಬಂದೀತು!" ಎಂದು. ಪಾಪ! ಇನ್ನೂ ಹುಡುಗ!

ನಾನು ಕೂತ ಸ್ಥಳ ಬಿಟ್ಟು ಏಳುವುದಿಲ್ಲ ಎಂದು ನನ್ನಾಕೆ ಹೇಳಿದಳಷ್ಟೆ: ಆದರೆ ಒಂದು ಮಾತು— ಇದರಿಂದ ದಯವಿಟ್ಟು ನೀವು ಯಾರೂ ನಾನು ಆಲಸಿ ಎಂದು ಮಾತ್ರ ತಪ್ಪು ತಿಳಿಯಬಾರದು. ಅಲ್ಲ— ನಾ ಅಂತೀನಿ— ಸುಳ್ಳೆ ಕೆಲಸವಿಲ್ಲದೆ ಪ್ಲ್ಯಾಟ್‌ಫಾರ್ಮಿನ ಮೇಲೆ ಅಡ್ಡಾಡಿದರೆ ಏನು ಬಂತು? ರೇಲ್ವೆಯವರು ಇಷ್ಟು ಖರ್ಚು ಮಾಡಿ ವೇಟಿಂಗರೂಮು ಕಟ್ಟಿಸಿರುತ್ತಾರೆ; ಸಾಕಷ್ಟು ಕುರ್ಚಿ—ಆರಾಮ ಕುರ್ಚಿ— ಕನಡಿ— ಇಟ್ಟಿರುತ್ತಾರೆ. ಇಂಥಲ್ಲಿ ಒಂದು ಸ್ಥಳ ಹಿಡಿದು ಕೂಡೋದು ಬಿಟ್ಟು ಈ ಈ ಜನ ಸುಮ್ಮನೆ ಯಾಕೆ ಬಿರಬಿರ ತಿರುಗುತ್ತಾರೆ ಎನ್ನುವುದು ನನಗೆ ಒಂದು ಸಮಸ್ಯೆಯಾಗಿ ಬಿಟ್ಟಿದೆ. ಪ್ಲ್ಯಾಟ್‌ಫಾರ್ಮಿನ ಮೇಲೆ ಅಡ್ಡಾಡಿ ಮಾಡುವುದಾದರೂ ಏನು? ಎಷ್ಟು ಸಾರೆ ಆ ಸಿನೇಮಾದ ಜಾಹೀರಾತು ಓದಬೇಕು? ಎಷ್ಟು ಸಲ ಆ ಪುಸ್ತಕದ ಅಂಗಡಿಗೆ ಹೋಗಿ, ಯಾವ ಪುಸ್ತಕ-ಪತ್ರಿಕೆ ಕೊಳ್ಳದೆ ಪುಕ್ಕಟೆ ಅದರೊಳಗಿನ ಚಿತ್ರ ನೋಡುವುದು? ನನ್ನಂಥ ಸಭ್ಯಮನುಷ್ಯನಿಗಂತೂ ಅದು ಬಗ್ಗುವುದಿಲ್ಲ. ನೀವು ನನ್ನನ್ನು ಬೇಕಾದರೆ 'ಆಲಸಿ'ಎಂದು ಬೈದರೂ ಅಡ್ಡಿಯಿಲ್ಲ; ನಾ ಏನು ಕೂತ ಕುರ್ಚಿ ಬಿಟ್ಟೆದ್ದು ವಿನಾಕಾರಣ ಯಾವ ಪುರುಷಾರ್ಥವಿಲ್ಲದೆ ಅಡ್ಡಾಡುವವ ಅಲ್ಲ.

ಹಾಗೆ ನೋಡಿದರೆ ಒಂದು ವೇಳೆಗೆ ಒಂದೇ ಕೆಲಸ ಮಾಡಬೇಕು ಎನ್ನುವ ಮಾತು ನನ್ನ ಜೀವನ ಸಿದ್ಧಾಂತ. ಅಡ್ಡಾಡುವ ವೇಳೆಗೆ ಕೂಡದೆ ಅಡ್ಡಾಡಬೇಕು; ಕೂಡುವ ವೇಳೆಗೆ ನಿಲ್ಲದೆ ಸ್ವಸ್ಥ ಕುಳಿತೇ ಬಿಡಬೇಕು. ನಾನೇನು ಅಡ್ಡಾಡುವುದಿಲ್ಲವೇ? ಮನೆಯಿಂದ ಸಮೀಪದ ಸಿಟಿ ಬಸ್ ಸ್ಟ್ಯಾಂಡಿನವರೆಗೆ ಅಡ್ಡಾಡುವುದಿಲ್ಲವೇ? ಆ ಮೇಲೆ ಕಾಲೇಜಿನಲ್ಲಿ ಕ್ಲಾಸರೂಮಿನವರೆಗೆ ನಡೆದು ಹೋಗುವುದಿಲ್ಲವೇ? ಆಗ ವೇದಿಕೆಯ ಮೇಲಿನ ಕುರ್ಚಿಯನ್ನು ನಾನು ಆಶ್ರಯಿಸಿದರೆ ತಪ್ಪೇನು? ಆದರೆ, ನನ್ನ ಹೆಂಡತಿ ಒಬ್ಬಳೇ ಅಲ್ಲ— ನನ್ನ ಮಿತ್ರರೂ ಸಹ ನನ್ನನ್ನು 'ಆಲಸಿ' ಎಂದು ಕರೆಯುವುದರ ಸರಿಯಾದ ಅರ್ಥ ಇನ್ನೂ ನನಗೆ ತಿಳಿದಿಲ್ಲ

ನಾನು ಕುಳಿತ ವೇಟಿಂಗರೂಮಿನಲ್ಲಿ ಮತ್ತೊಮ್ಮೆ



ಕಣ್ಣು ಹೊರಳಿಸಿದೆ ಅಡ್ಡಿಯಿಲ್ಲ ಎನ್ನಿಸಿತು; ಹಾಗೆ ನೋಡಿದರೆ ಮೂರನೆಯ ವರ್ಗದ—ಅದೇಕೆ? ಎರಡನೆಯ ವರ್ಗದ— ಡಬ್ಬಿಗಿಂತ ಕೂಡ ಈ ರೂಮೇ ಸುಖದಾಯಕ ಎನ್ನಿಸಿತು ಸಹಜವಾಗಿಯೇ ನಾನೊಮ್ಮೆ ಪ್ರಸಿದ್ಧ ದಂತವೈದ್ಯರ ದವಾಖಾನೆಗೆ ಹೋದದ್ದು ನೆನಪಾಯಿತು; ಅಲ್ಲಿಯ ವೇಟಿಂಗ ರೂಮಿನ ನೆನಪೂ ಸುಳಿಯಿತು. ನಿಮ್ಮ ಅನುಭವಕ್ಕೂ ಬಂದಿರಬಹುದಲ್ಲ— ಹಲ್ಲುನೋವೆಂದರೆ ಉಳಿದ ಯಾವುದೇ ನೋವಿಗಿಂತ ಅತ್ಯಧಿಕವೆಂಬುದು? ಯಾವನೋ ಒಬ್ಬ ಅನುಭವಿ ಹೇಳಿಲ್ಲವೆ?— "There never was a philosopher who bore a tooth-ache patiently" ಎಂದು! ಸರಿ; ಅನೇಕ 'ಪೇಶಂಟ್' ವೇಟಿಂಗರೂಮಿನಲ್ಲಿ ಕುಳಿತ, ತಮ್ಮ ಸರತಿಯ ದಾರಿ ನೋಡುತ್ತಿದ್ದರು ಎಷ್ಟೋ ಹೊತ್ತಾಯಿತು; ನನ್ನ ಪಾಳಿ ಇನ್ನೂ ಬರಲಿಲ್ಲ ಆ ವೇಟಿಂಗ್‌ರೂಮ್ ನಿಜವಾಗಿಯೂ ಜನರಿಗೆ *patient* ಆಗಿರಲು ಕಲಿಸುತ್ತದೆ ಅಲ್ಲವೆ? ಅಲ್ಲಿ ಕುಳಿತ ಎಷ್ಟೋ ಜನರು ತಮ್ಮ ಪಾಳಿ ಏಕೆ ಬೇಗ ಬರುವುದಿಲ್ಲವೋ ಎಂಬ ಆತುರದಲ್ಲಿದ್ದರೆ ನನಗೆ ಮಾತ್ರ ಅವಸರವಿಲ್ಲ ಹಾಗೆ ನೋಡಿದರೆ ಯಾವ ಕೆಲಸಕ್ಕೂ ನನಗೆ ಆತುರವಿಲ್ಲ ಇದು ನೋಡಿ. ಯಾವ ಕೆಲಸವಾದರೂ ಸರಿಯಾಗಿ ಆಗಬೇಕಾದರೆ ತನ್ನ ಕಾಲದಲ್ಲಿಯೇ ಅದು ಆಗಬೇಕಷ್ಟೆ? ನಾವು ಅವಸರ ಮಾಡಿದರೆ ಕೆಲಸವೆಂದಾದರೂ ಸರಿಯಾದೀತೆ? ಕಾಯಿಯನ್ನು ಒತ್ತಿ ಎಂದಾದರೂ ಹಣ್ಣು ಮಾಡಿದರೆ ಅದರಲ್ಲಿ ರುಚಿ ಬಂದೀತೆ? ನಾನು ಹೀಗೆಂದೊಡನೆಯೆ ಬಹಳ ಜನರು ಮೂಗು ಮುರಿದು ನನ್ನನ್ನು ಮತ್ತೆ "ಆಲಸಿ" ಎಂದು ಕರೆದುಬಿಡುವರು. ಇದು ನನಗೆ ರೂಢಿಯಾಗಿಯೂ ಬಿಟ್ಟಿದೆ. ಇರಲಿ ಒಳಗಿದ್ದ ಡಾಕ್ಟರರು ಒಮ್ಮೆ ತಮ್ಮ ಕೋಣೆಯ ಬಾಗಿಲನ್ನು ತೆರೆದರು; ಆಗ ಅದೇಕೋ ಅವರು ನನ್ನನ್ನು ಕರೆಯುವುದಿಲ್ಲ–ಬೇರೆ ಯಾರನ್ನೋ ಒಳಗೆ (ಪರೀಕ್ಷೆಗಾಗಿ) ಕರೆಯುತ್ತಾರೆ ಎನಿಸಿತು. ಇದರಿಂದ ನಾನು ಅಂಜುಬುರುಕ,ಹೇಡಿ ಎಂದು ಮಾತ್ರ ಶೀಘ್ರ ನಿರ್ಣಯಕ್ಕೆ ಬರಬೇಡಿರಿ. ಆದರೆ ಅದೇಕೋ, ನನ್ನ ಪಾಳಿ ಬರುವುದಕ್ಕಿಂತ ಮೊದಲೇ ಅಲ್ಲಿಂದ ಜಾರಿಹೋಗೋಣವೇ ಎಂಬ ವಿಚಾರ ನನ್ನ ಮನಸ್ಸಿನಲ್ಲಿ ಸುಳಿಯಿತು. ಇಷ್ಟರಲ್ಲಿಯೇ ನರ್ಸ್ ಒಬ್ಬಳು ದೊಡ್ಡ, ಹದನವಾದ ಒಂದು ಸ್ಟೇನ್‌ಲೆಸ್ ಸ್ಟೀಲಿನ ಇಕ್ಕಳವನ್ನು ತಗೆದುಕೊಂಡು ಹೊರಗಿನಿಂದ ಬಂದು ಡಾಕ್ಟರರ ರೂಮನ್ನು ಪ್ರವೇಶಿಸಿದಳು. ಹೊಳೆಯುವ ಆ ಶಸ್ತ್ರ ನೋಡಿದೊಡನೆಯೆ ಅಲ್ಲಿಂದ ಜಾರಿಹೋಗುವ ನನ್ನ ವಿಚಾರ ಸಂಚಾರಿ ಇದ್ದುದು ಸ್ಥಾಯಿಯಾಯಿತು. ನೀವು ನಂಬಿರಿ, ಬಿಡಿರಿ; ಆದರೆ ಒಮ್ಮೆಲೆ ನನ್ನ ಹಲ್ಲುನೋವು ಕಡಿಮೆಯಾದಂತೆಯೂ ಅನಿಸಿತು ಹಲ್ಲುನೋವೇ ಕಡಿಮೆಯಾದ ಮೇಲೆ ಅಲ್ಲಿ ಕೂಡುವ ಅವಶ್ಯಕತೆಯಾದರೂ ಏನು?


ನನಗೊಮ್ಮೆ...... ಕಚೇರಿಯಲ್ಲಿ ಅಗತ್ಯದ ಕೆಲಸವಿತ್ತು. ಅಧಿಕಾರಿಗಳನ್ನು ಭೆಟ್ಟಿಯಾಗಲು ಹೋದೆ. ಊಟಮಾಡುತ್ತ ಕುಳಿತರೆ ತಡವಾದೀತೆಂದು ಊಟವಿಲ್ಲದೆ ಹಾಗೆಯೇ ಹೋದೆ ಕಚೇರಿಯಲ್ಲಿ ಇನ್ನೂ ಒಬ್ಬಿಬ್ಬ ಕಾರಕೂನರು ಮಾತ್ರ ಬಂದಿದ್ದರು. ಅದೇ ಬರುತ್ತಲಿದ್ದ ಶಿಪಾಯಿ— "ಕೂಡ್ರಿ, ಸಾಹೇಬ್ರು ಇದೇ ಈಗ ಬರ್ತಾರ" ಎಂದು ಆಶೀರ್ವಾದ ಮಾಡಿ ಮತ್ತೆಲ್ಲಿಯೋ ಅದೃಶ್ಯನಾದ. ನಾನು ಕುಳಿತೆ. ತೂಕಡಿಕೆ ಬಂದಂತಾಯಿತು. ಹಾಗೇ ಖುರ್ಚಿಯ ಮೇಲೆ ಒರಗಿದೆ. ಒಮ್ಮೆಲೆ ಮೈಗೆ ಕಡಿಹತ್ತಿದಂತಾಗಿ ಎಚ್ಚರವಾಯಿತು ನೋಡುತ್ತೇನೆ— ಮೈಮೇಲೆ ತಗಣಿಗಳು ಓಡಾಡುತ್ತಿದ್ದವು. ಶಕ್ಯವಿದ್ದಷ್ಟು ಅವುಗಳ ನಾಶ ಮಾಡುವ ಪ್ರಯತ್ನ ಮಾಡಿದೆ. ಬಹಳ ನೀರಡಿಕೆ ಎನಿಸಿತು ಮೂಲೆಯಲ್ಲೊಂದು ನೀರಿನ ಹೂಜಿ ಇತ್ತು. ಧಾವಿಸಿ ಹೋಗಿ ಅದನ್ನು ಬಗ್ಗಿಸಿದೆ. ಆದರೆ ಅದರಲ್ಲಿ ನೀರಿದ್ದರಲ್ಲವೆ? ನಿರಾಶೆಯಿಂದ ತಿರುಗಿ ಬಂದೆ; ಆದರೆ ಮತ್ತೆ ಖುರ್ಚಿಯ ಮೇಲೆ ಕೂಡ್ರುವ ಧೈರ್ಯವಾಗಲಿಲ್ಲ. ಬೇಸರ ಬಂದು ಸಮೀಪದ ಚಹದ ಅಂಗಡಿಗೆ ಹೋಗೋಣವೆಂದು ಹೊರಟೆ ಕಚೇರಿಯ ಮುಕ್ಕಾಲುಪಾಲು ಕಾರಕೂನರು ಅಂಗಡಿಯನ್ನು ವ್ಯಾಪಿಸಿದ್ದರು. "ಸ್ಪೇಶಲ್ ರೂಮಿ"ನಲ್ಲಿ ಹಿರಿಯ ಕಾರಕೂನರು ಯಾರದೋ ಕೂಡ ಗುಟ್ಟಿನ ಮಾತನಾಡುವ ಧ್ವನಿ ಅಸ್ಪಷ್ಟವಾಗಿ ಕೇಳಿಬರುತ್ತಿತ್ತು. ನನಗೆ ಭೆಟ್ಟಿಯಾದ ಶಿಪಾಯಿ ಚುಟ್ಟ ಸೇದುತ್ತ ಮೂಲೆಯಲ್ಲಿ ವಿಶ್ರಮಿಸಿದ್ದ. ನಾನೂ ಉಪಹಾರ ಮುಗಿಸಿ ಮತ್ತೆ ಕಚೇರಿಯ "ಪ್ರತೀಕ್ಷಾಲಯ"ಕ್ಕೆ ಬಂದೆ. ಆಗಲೂ ಅಲ್ಲಿ ಮತ್ತಾರೂ ಪಕ್ಷಕಾರರು ಬಂದಿರಲಿಲ್ಲ, ನನ್ನ ಮಂಕುಬುದ್ಧಿಗೆ ಒಮ್ಮೆಲೆ ಹೊಳೆಯಿತು, (ಟ್ಯೂಬಲೈಟ್ ಪ್ರಕಾಶಮಾನವಾಗಲು ಸ್ವಲ್ಪ ವೇಳೆ ಬೇಕಲ್ಲವೆ?)— ನಿಜವಾದ ವೇಟಿಂಗ್ ರೂಮ್— ಅದೇಕೆ ನಿಜವಾದ ಕಚೇರಿ—ಆ ಚಹದ ಅಂಗಡಿ ಎಂಬುದು! ಎಷ್ಟೋ ವಿಷಯಗಳ ಬಗೆಗೆ ಪಕ್ಷಕಾರರ ಮತ್ತು ಕಾರಕೂನರ ಸಂವಾದ, ಚರ್ಚೆ, ಠರಾವುಗಳು ಆಗುವುದು ಅಲ್ಲಿಯೇ. ಇಷ್ಟು ಹೊತ್ತು ಕಚೇರಿಯ ವೇಟಿಂಗ್ ರೂಮಿನಲ್ಲಿ ಬೆಪ್ಪನಂತೆ ಕುಳಿತ ನನ್ನ ಬಗ್ಗೆ ನನಗೇ ನಗೆ ಬಂದಿತು. ಒಳಗೆ ಹೋಗಿ ಇದ್ದ ಒಬ್ಬ ಮುಗ್ಧ ಕಾರಕೂನನನ್ನು ಕೇಳಿದೆ— "ಸಾಹೇಬರು ಎಷ್ಟು ಹೊತ್ತಿಗೆ ಬರುವರು?" ಎಂದು. ಅವನು ಬರೆಯುವ ಕಾಗದದಿಂದ ಮುಖ ಮೇಲಕ್ಕೆತ್ತದೆ ಹೇಳಿದ: "ಸಾಹೇಬ್ರು ಇದೇ ಈಗ ಜೀಪಿನಲ್ಲಿ ಬಂದು ಹೋದರಲ್ಲರಿ! ಅರ್ಜಂಟ್ ಕೆಲಸದ ಸಲುವಾಗಿ ಟೂರ್ ಮೇಲೆ ಹೋದರು!"

ಮತ್ತೊಂದು ಸಾರೆ ನನಗೆ "ಮುದತು" ಇತ್ತು. ಹೋಗಿ ಮತ್ತೆ "ಪ್ರತೀಕ್ಷಾಲಯ"ದಲ್ಲಿ ಆಸನಾಸೀನನಾದೆ. ಹೀಗೆ ಹೋಗಿ ಕಾಯುತ್ತ ಕೂಡುವುದು ನನ್ನ ಮನೋಧರ್ಮಕ್ಕೆ ಒಗ್ಗಿಹೋಗಿದೆ ಎಲ್ಲದಕ್ಕೂ ತಾಳ್ಮೆಬೇಕು– "ತಾಳಿದವ ಬಾಳಿಯಾನು" ಅಲ್ಲವೇ? "They also serve who stand and wait" ಎಂದು ಕವಿ ಹೇಳಿಲ್ಲವೆ! ಆದರೆ "I sit and wait" (ನಾನು ಕುಳಿತೆ ಕಾಯುವೆ). ಸಹಜವಾಗಿ ನಾನು ಗೋಡೆಯ ಮೇಲೆ ಕಣ್ಣು ಹೊರಳಿಸಿದೆ "Encourage wild life" ಎಂದು ಒಂದು ಭಿತ್ತಿಪತ್ರವಿತ್ತು ಅದರಲ್ಲಿ ಹುಲಿ–ಸಿಂಹ ಇತ್ಯಾದಿಗಳ ಚಿತ್ರಗಳಿದ್ದುವು ಈ ಸಂದೇಶ ನನಗೆ ಮಾತ್ರ ಹೊಸದಾಗಿ ಕೇಳಬೇಕಾಗಿಲ್ಲ. ನಮ್ಮಲ್ಲಿ "Who [illegible]

ಮತ್ತೊಂದೆಡೆಗೆ ಮಿತಸಂತಾನದ ಆವಶ್ಯಕತೆಯನ್ನು ಬಿಂಬಿಸುವ ಚಿತ್ರ. ಇಂಥ ಚಿತ್ರಗಳಿಂದ ಅಪೇಕ್ಷಿತ ಪರಿಣಾಮವಾಗುತ್ತಿದ್ದರೆ ಎಲ್ಲವೂ ಎಷ್ಟು ಸುಲಭ ಎಂಬ ವಿಚಾರ ಮನಸ್ಸಿನಲ್ಲಿ ಸುಳಿದುಹೋಯಿತು. ಅಪರಾಹ್ನದಷ್ಟೊತ್ತಿಗೆ ಸಾಹೇಬರು ಬಂದರು. ಬಂದವರೇ ಹಿರಿಯ ಕಾರಕೂನರನ್ನು ಕರೆಯಿಸಿ ತಮ್ಮ ನಿತ್ಯದ ಕೆಲಸದಲ್ಲಿ ನಿಮಗ್ನರಾದರು. ನಾನು ಹೋಗಿ ವಿನಯದಿಂದ ನನಗೆ ಬಂದ ನೋಟೀಸನ್ನು ತೋರಿಸಿ ಇಂದು ಮುದ್ದತು ಇದ್ದುದನ್ನು ಅರಿಕೆ ಮಾಡಿಕೊಂಡೆ. ಅದಕ್ಕೆ ಅವರು– "ಹೀಗೇನು? ನೋಡೋಣ ತಡೆಯಿರಿ. ಈಗ ಆಫೀಸಿನ ಜರೂರಿಯ ಕೆಲಸವಿದೆ; ಇದು ಮುಗಿಯಲಿ" ಎಂದರು. ಸರಿ; ಮತ್ತೆ ಹೋಗಿ ಕುಳಿತೆ. ನನ್ನ ತಪಸ್ಸಿಗೆ ಫಲ ದೊರೆಯಬಹುದು ಎಂಬ ಆಶೆಯಿಂದ ಎಷ್ಟೋ ಹೊತ್ತು ಯೋಗಸಮಾಧಿಯಲ್ಲಿ ಕುಳಿತೆ. ಸಂಜೆಯಾಗುತ್ತ ಬಂದಿತು; ಮತ್ತೊಮ್ಮೆ ಸಾಹೇಬರ ರೂಮಿಗೆ ಹೋಗಿ ನೋಡಿದರೆ ಅಲ್ಲಿ ಮೀಟಿಂಗ್ ನಡೆದಿತ್ತು. ಕಾರಕೂನನೊಬ್ಬನನ್ನು ಕೇಳಿದರೆ ಅವನು ಹೇಳಿದ: "ಇವತ್ತು ಅರ್ಜಂಟ ಮೀಟಿಂಗ್ ಅದರಿ; ನಿಮ್ಮ ಕೇಸಿನ ಚವಕಶಿ ಮುಂದೆ ಹಾಕಲಾಗಿದೆ; ಎಂದು ಎಂಬುದನ್ನು ಹಿಂದಿನಿಂದ ತಿಳಿಸುತ್ತೇವೆ' ಜೋಲುಮೋರೆ ಹಾಕಿಕೊಂಡು ಮತ್ತೆ ಮನೆಗೆ ನಾನು "ಪುನಶ್ಚ ಹರಿಓಂ" ಮಾಡಿದೆ.

ಆದರೆ ಈ ಬಗೆಯ ಅನುಭವದಿಂದ ಲಾಭವಿರಲಿ, ಹಾನಿಯಿರಲಿ; ಒಂದು ಅಪೂರ್ವ ಸಿದ್ಧಿ ದೊರಕುವುದು ಮಾತ್ರ ನಿಜ; ಇದರಿಂದ ನಿಷ್ಕಾಮಕರ್ಮದ ಪಾಠ ಮರೆಯದಂತೆ ಕಲಿತಿದ್ದೇನೆ. ಜೀವನದ ಒಂದು ಚಿಕ್ಕ ಅನುಭವವನ್ನೇ ತೆಗೆದುಕೊಳ್ಳಿರಿ: ಬಸ್ಸಿಗಾಗಿ ಹನುಮಂತನ ಬಾಲದಂತಹ "ಕ್ಯೂ"ದಲ್ಲಿ ನಿಂತಾಗ ಜೀವನವೆಂದರೆ ತಾಳ್ಮೆಯ ಪರೀಕ್ಷೆ. ಫಲಾಪೇಕ್ಷೆಯ ತ್ಯಾಗ ಎಂದು ಎಷ್ಟು ಜನರಿಗೆ ಅನಿಸುವುದಿಲ್ಲ? ಬಿಸಿಲಿರಲಿ, ಮಳೆಯಿರಲಿ ಕೊಡೆಯನ್ನು ಏರಿಸಿ ಹಿಡಿಯುವಷ್ಟು ಕೂಡ ಸ್ಥಳಾವಕಾಶವಿರುವುದಿಲ್ಲ. ಅಂಥದರಲ್ಲಿ ಎಂತು ತಪಸು ಮಾಡಬೇಕು. ಆದರೆ ಫಲವೋ ಅನಿಶ್ಚಿತ. ಮೂರು–ನಾಲ್ಕು ಬಸ್ಸು ಬಂದರೂ ನಿಮ್ಮ ತನಕ ಇದ್ದ ಜನರಿಗೆ ಸೀಟು ದೊರೆತು ನಿಮಗೆ ಮಾತ್ರ "ಖಂಡಿತ ಸಾಧ್ಯವಿಲ್ಲ" ಎಂದು ಕಂಡಕ್ಟರನು ನಿರ್ದಾಕ್ಷಿಣ್ಯವಾಗಿ ಹೇಳಿದಾಗ ಜೀವನದ ಕಟುಸತ್ಯದ ಅನುಭವವಾಗುವುದಿಲ್ಲವೆ? ಜೀವನದಲ್ಲಿ ಸ್ಪರ್ಧೆ ಎಲ್ಲ ರಂಗದಲ್ಲಿಯೂ ಹೆಚ್ಚುತ್ತಿರುವಾಗ ಈ ತಾಳಿಕೆ ಅತ್ಯಂತ ಅವಶ್ಯ ಎನಿಸುತ್ತದೆ. ಸಿನೇಮಾಕ್ಕೆ ಟಿಕಿಟ್ ತೆಗೆಸುವಾಗ, ರೇಶನ್ ತರುವಾಗ ಅದೇಕೆ? ಆಯುಷ್ಯ ವರ್ಗಶಾಲೆಯಲ್ಲಿ ಕೂಡ ನಿಮ್ಮ ತಾಳ್ಮೆಯ ಪರೀಕ್ಷೆ ನಿತ್ಯವೂ ನಡೆಯುತ್ತಲೇ ಇಲ್ಲವೆ? ನಿಮ್ಮ ಮಗನಿಗೆ ಮೆಡಿಕಲ್ ಅಥವಾ ಇಂಜನಿಯರಿಂಗ ಕಾಲೇಜಿಗೆ ಸೀಟು ದೊರಕುವುದೋ ಇಲ್ಲವೋ ಎಂದಾಗ ನಿಮ್ಮ ಸತ್ವ ಪರೀಕ್ಷೆಯಾಗುವುದಿಲ್ಲವೇ? ಆಗ ಜೀವನವೆಲ್ಲ ಒಂದು ದೊಡ್ಡ "ಪ್ರತೀಕ್ಷಾಲಯ"ವೆಂದೂ, ಅದರಲ್ಲಿರುವ ನಾವೆಲ್ಲ ಪ್ರತೀಕ್ಷಕರೆಂದೂ ತೋರಿದರೆ ಬಹಳ ದೊಡ್ಡ ವೇದಾಂತದ ಮಾತನ್ನು ಹೇಳಿದಂತಾಗಲಿಕ್ಕಿಲ್ಲ.

ಮೊನ್ನೆ ಒಬ್ಬ ವೃದ್ಧರು ಭೆಟ್ಟಿಯಾಗಿದ್ದರು. ಲೋಕಾಭಿರಾಮವಾಗಿ ಮಾತಾಡುತ್ತಿರುವಾಗ ಇಂದಿನ ಕಾಲೇಜ ಶಿಕ್ಷಣದ ವಿಷಯ ಬಂದಿತು. ಒಮ್ಮೆಲೆ ಅವರು– ಈಗ ಆರ್ಟ್ಸ ಕಾಲೇಜುಗಳೆಂದರೆ ವೇಟಿಂಗ್ ರೂಮುಗಳೇ ಸರಿ ಎಂದರು. ನನಗೆ ಒಂದು ಕ್ಷಣ ದಿಗ್ಭ್ರಮೆಯಾಯಿತು. ಆಗ ಅವರೇ ನಕ್ಕು ತಮ್ಮ ಮಾತನ್ನು ವಿವರಿಸಿದರು. "ಅಂದ್ರ ನೋಡ್ರಿ, ಹುಡುಗರು ಎಸ್. ಎಸ್. ಸಿ



ಹಾಗಾಗಿ ಏನು ಮಾಡುವುದಕ್ಕೂ ತಿಳಿಯದೆ ಕಾಲೇಜನ್ನು ಸೇರುತ್ತಾರೆ ಆಗ ಒಳ್ಳೆಯವಾದರೂ ನೌಕರಿ ನೋಡುತ್ತಲೇ ಇರುತ್ತಾರೆ. ನೌಕರಿ ದೊರೆತ ದಿನವೇ ಕಾಲೇಜನ್ನು ಬಿಡುತ್ತಾರೆ ಅಂದಮೇಲೆ ಅವರ ಮಟ್ಟಿಗೆ ಕಾಲೇಜು ವೇಟಿಂಗ್ ರೂಮು ಹೌದೋ ಅಲ್ಲವೋ. ನೀವೇ ಹೇಳಿರಿ" ಎಂದು ನನಗೆ ಸವಾಲು ಹಾಕಿದರು ಅವರ ಯುಕ್ತಿವಾದದಲ್ಲಿ ಹುರುಳಿಲ್ಲದೆ ಇಲ್ಲ ಎಂದು ನನಗನಿಸಿತು "ಹೆಣ್ಣು ಹುಡುಗರಿಗಂತೂ ನೋಡಿ" ಎಂದು ಬಿಡದೆ ಅವರು ಮುಂದುವರಿದು, "ಮದುವೆಯಾಗುವವರೆಗೆ ಕಾಲೇಜು ಮಗಳು ಕಾಲೇಜನ್ನು ಸೇರಿದೊಡನೆಯೆ ತಾಯಿ–ತಂದೆ ಅವಳಿಗಾಗಿ ವರ ಹುಡುಕುವುದನ್ನು ತ್ವರಿತಗೊಳಿಸುತ್ತಾರೆ ಸರಿ. ಯೋಗ್ಯ ವರ ದೊರೆತು ಮದುವೆ ನಿಶ್ಚಯವಾದರೆ ಅಂದೇ ಅವಳ ಕಾಲೇಜು ಮುಕ್ತಾಯ. ಅವಳು ಆ ವೇಟಿಂಗ್ ರೂಮನ್ನು ಬಿಟ್ಟು ಜೀವನದ ಗಾಡಿಯನ್ನೇರುತ್ತಾಳೆ" ಈ ಪಂಡಿತರ ಮಾತು ಕೇವಲ ಅಲಂಕಾರದ ಭಾಷೆಯಲ್ಲವೆಂದು ನನಗೂ ಅನಿಸತೊಡಗಿತು. ಇವರನ್ನು ಹೀಗೆಯೇ ಮಾತನಾಡಲು ಬಿಟ್ಟರೆ ಇವರು ಮುಂದುವರಿದು–" ಇಡಿಯ ಜಗತ್ತೇ ಒಂದು ವೇಟಿಂಗ್ ರೂಮು, ಈಗಾಗಲೇ ನಾವೆ ಎಲ್ಲರೂ ಟಿಕೆಟ್ ತೆಗೆದಿಸಿದ್ದಾಗಿದೆ ಇನ್ನೇನು ಗಾಡಿ ಬರುವದೊಂದೇ ಬಾಕಿ" ಎಂದು ಹೇಳುತ್ತಾರೆಂಬುದು ಖಂಡಿತವೆನಿಸಿ ನಾನಲ್ಲಿಂದ ಕಾಲ್ತೆಗೆದೆ......

"ಇನ್ನೂ ಕೂತೇ ಇದ್ದೀರಲ್ರೀ ! ಇನ್ನಾದ್ರೂ ಏಳ್ರಿ ! ಗಾಡಿ ಬಂದೇಬಿಟ್ಟಿತು !"

ನನ್ನ ಅರ್ಧಾಂಗಿಯು ಕಿಡಿಗೆಡುತ್ತ ಒಮ್ಮೆಲೆ ನನ್ನನ್ನು ಹಗಲುಗನಸಿನಿಂದ ಎಚ್ಚರಿಸಿತು ವೇಟಿಂಗ ರೂಮನ್ನು ಬಿಟ್ಟು ಕರ್ತವ್ಯದಕ್ಷತೆಯಿಂದ ನಾನವಳನ್ನು ಹಿಂಬಾಲಿಸಿದೆ. ❋



ಯಾವ ವ್ಯಕ್ತಿಯು ಸತ್‌ಪರಾಮರ್ಶವನ್ನು ಧೈರ್ಯದಿಂದ ಕೇಳುತ್ತಾನೆ. ಒಪ್ಪಿಕೊಳ್ಳುತ್ತಾನೆಮತ್ತು ದುರಾಗ್ರಹವನ್ನು ಬಿಟ್ಟುಬಿಡುತ್ತಾನೆ. ಆತನನ್ನು ಜಗತ್ತೇ ಅನುಸರಿಸುತ್ತದೆ.

— ಮಹಾಭಾರತ

★

ಮನುಷ್ಯನು ಯಾವಾಗಲೂ ಕಾಲವನ್ನು ನಷ್ಟಗೊಳಿಸಲು ಪ್ರಯತ್ನಿಸುತ್ತಿರುತ್ತಾನೆ ಆದರೆ ಕೊನೆಯಲ್ಲಿ ಕಾಲವೇ ಅವನನ್ನು ನಷ್ಟಗೊಳಿಸುತ್ತದೆ.

— ಹರ್ಬರ್ಟ ಸ್ಪೆನ್ಸರ


Control
Power
with LT-LK
switchgear
You can leave power in the hands of our switchgear engineers. They will study the requirements of your particular industry and design, manufacture and install the controlgear you need—the kind that protects equipment and prevents production loss.
Manufacturers, in leading industries like food, dairy, textiles, chemicals, engineering, cement and steel, pulp and paper, consult us for their switchgear requirements. You'll find it pays to do the same.
LK
Switchgear Division
LARSEN & TOUBRO
LIMITED
P.O. Box 278, Bombay 1.
Type MK1 starter, 15 amps
Iron clad LT-LK switchboard
Type MF1 starter, 15 amps
LT-LK switchfuse unit and cable box

ಶ್ರೀಮಂ ಶ್ರೀಶೈಲೋಪಾಖ್ಯಾನ
ಅಥವಾ ಏಕದಂತೋಪಾಖ್ಯಾನ

ಇದು ಚಂಪೂಕಾವ್ಯ

ಕಂದ ॥ ಪಡುವಣ ತೀರದ ಮಡಿಲೊಳು
ಕಡುಚೆಲ್ವಿನ ನಗರವೊಂದು ಮುಂಬಾ
ಪುರಿಯುಂ ।
ಅಡಕಿಲ ಕೋಣೆಯ ತೆರದಲಿ
ಗಡಬಡಿಗಂಡಾರಗಾಡಿಯೊಳ್
ಮೆರೆದಪುದುಂ ॥

ಚಂ॥ ತತ್ರೋತ್ತರಸ್ಯಾಂ ದಿಶಿ ಕರ್ಣಾಟ ಬಹುಲೋ ಮಲ್ಲಾಡನಾಮಾ ಸದಿರ್ಬಾಧಿಶ್ರೇಷ್ಠಃ ಸರ್ವಗುಣಸಂಪನ್ನಾ ಪೃಥಿವ್ಯಾಂ ಅಪಮಾನದಂಡ ಇವ ಶೋಭತೆ ಖಲು. ಅಲ್ಲಿ ವೀರಶಂಕರರಾಯನೆಂಬೊರ್ವಂ ಉದರನಿಮಿತ್ತಂ ಬಹುಕೃತವೇಷನಪ್ಪ ಕನ್ನಡಿಗಂ ಗಿರಿಜಾಂಬೆಯೆಂಬ ಭಾರ್ಯಾ ಸಮೇತಂ ವಿಪುಲಸಂತಾನಯುಕ್ತಂ ವಾಸಿಸುತಿರ್ಪಂ.

ಶಂಕರರಾಯನ ಪುತ್ರಭ-
ಯಂಕರರುಂ ಮೂರು ಮಂದಿಯವರೋಳ್
ಶ್ರೇಷ್ಠಂ ॥
ಅಂಕಾಶ್ರಯಪ್ರಣಯುಂ
ಕಿಂಕಾರವ ಡೊಂಕುಪತಿಯ ಏಕೋದಂತಂ ॥



ಮಣಾ ಟದಿ ಚತುರಂ ಬಲು
ತಣೀರಲಿ ಮಣ್ಣು ಕಲ್ಲುಸೋಪಂ ಚಿಣ್ಣಂ

ಸೂಚನೆ : ನಾವು ಮುಂಬೈಗೆ ಬಂದ ಹೊಸತಾಗಿ 'ಮಲಾಡ್' ಎಂಬ ಹೆಸರಿನ ಉಪನಗರದಲ್ಲಿ ಎರಡು ವರ್ಷ ಕಳೆದವು. ನಮ್ಮ ನಾಲ್ಕನೆಯ ಮಗು 'ರವಿ' ಆಗ ಚಿಕವನು. ಒಂದೂವರೆ ವರ್ಷದವನಾದರೂ ಅವನಿಗೆ ಮುಂದಿನ ಒಂದೇ ಒಂದೆ ಹಲ್ಲು ಬಿಟ್ಟರೆ ಬೇರೆ ಹಲ್ಲು ಮೂಡಿರಲಿಲ್ಲ. ಎರಡು ಬಾರಿ ರವಿಯ ಹಾಸಿಗೆಯಲ್ಲಿ ಒಂದು ಮೂಗಿಲಿ ಮಲಗಿಕೊಂಡಿತ್ತು. ಈತನೆ ನಮ್ಮ ಕಥಾನಾಯಕ 'ಏಕದಂತ'. ನಾವಿರುವ ಸ್ಥಲ ಮಣಿಭಾಯಿ ಚಾಳದಲ್ಲಿ ಎಲ್ಲ ಜಾತಿ ಭಾಷೆಗಳ ಜನರಿದ್ದರು. ಎಲ್ಲ ಜಾತಿಯ ಹೆಗ್ಗಣಗಳೂ ಇದ್ದವು. ಅವರೆಲ್ಲರಿಗೂ ರವಿಯಲ್ಲಿ

ಚಿಣ್ಣನೊಲ್ಲಂ ಹಾಸೊಳು
ತಣ್ಣಗಾಗೆ ಇರುಳೊಳ್ ಚೀರ್ವಂ
ಚಾಳಿಗೆ ಚಾಳೀ ಅತನ
ಲೀಳಾಂದೋಳವಿಲಾಸದಲ್ಲಿಯೆ ಸ್ವಿದಂ
ಛೀಳಿದನೆಂದೊಡೆ ಪಡೆವರ್
ಬಾಳರ್ ಭಯೆ ಕನವರಂಸಸುಖಮಂ ॥

ಕನ್ನಡದಲಿ ಗಾ ಡೂ ಎನೆ
ಇನ್ನೇತರ ಭಾಷೆಗಳಲಿ "ಹಜ್ಯಾ" "ಹುಂಜಾ"
ಸನ್ನುತ ಸಕ್ಕದದಲಿ "ಬಂ"
ಎನ್ನುತೆ ಪ್ರಭವಿಪಿಹ ಸಕಲಸಾರಸ್ವತಮಂ

ಸಂಜೆಯು ಮುಂಜಾವೊಳು ತಾ
ಅಂಜಿಕೆಯಿಲ್ಲದಲೆ ಸಕಲದೇಶಾಂಗನೆಯರ್
ಪಂಜಾಬಿನಿಯರ ಕರೆವಂ
ತಂಜಾವರಿಯಂ ಮುಜ್ಜನಾಡವಿಪುಲಾಂಗಿಯರಂ ॥

ಖಾರೀ ಹಣ್ಣನು ಕದಿವಂ
ಖಾರಾಬೀಸ್ಕೀಟು ಬುರ್ಬುರೀಪಪಡಮಂ ಕಿ
ವೀರಾವೇಶದೊಳವಲುಂ
ತೀರಿಸುವಂ ಒಸಡಗಿಟ್ಟ ತಿಂಡಾಪೀಡ ॥



ಒಂದೇ ವರುಷವು ಆತಗೆ
ಒಂದೇ ಸುಳಿಪಲ್ಲು ದೀರ್ಘರೂಪಂ ತಾಳ್ದು
ಸಂದೇಕದಂತ ನಾಮಂ
ಕುದರ್ವಾಂಕಿತ ಮೋದಕೇಷು ಸ್ನೇಹಂ

ಇಂತು ದಿಗ್ವಿಜಯಂಗೈದು ಸಕಲದೇಶ ಸೀಮಂತಿನೀ ಗೃಹಂಗಳಮೇಲೆ ಧಾಳಾಧೂಳಿಯಂಗೈಯುತ್ತೆ ಮಾತೃಹೃದಯುಪರಿತಾಪಂ ಪರಿಹರಿಸುತ್ತಿರೆ ಏಕಸ್ಮಿನ್ ಕಾಲೆ ನಳಿನಾಕ್ಷಿಯು ಜಲಕ್ರೀಡೋತ್ಸುಕಳಾಗಿ ಬರ್ಗಲಮಂ ಪೊಗಲೆಂದು ತನ್ನ ಕರ್ಣಕುಂಡಲಂಗಳಂ ಅಡುಗಾಗ ಹದಡ.

ಶಂಕರ ಮೊಕಾಶಿ

ವಿಶ್ವಾಸ ಬಹಳ. ಈ ಸಮಯಕ್ಕೆ ಪತ್ನಿ "ಗಿರಿಜಾಂಬೆ" ತನ್ನ ಬೆಂಡೋಲೆಗಳನು ಕಳೆದುಕೊಂಡಳು. ಆಗ ಆದ ವ್ಯಥೆಯನ್ನು ಸುಕುಮಾರ ಹಾಸ್ಯ, ಸುಕುಮಾರ ಸಹೃದಯತೆಯೊಂದಿಗೆ ಕಾವ್ಯಗೊಳಿಸುವ ಪ್ರಯತ್ನಕ್ಕೆ ಉದ್ಯುಕ್ತನಾದಾಗ ಬಂದ ಈ ಕವನಕ್ಕೆ ನಾನು 'ಅತಿ ನವ್ಯಕಾವ್ಯ'ವೆಂದು ಹೆಸರಿಟ್ಟಿದ್ದೇನೆ. ಇಂಥ ಕೆಲವಾರು ಕವನಗಳನ್ನು ರಚಿಸಿದ್ದೇನೆ. ಅತಿ ನವ್ಯಕಾವ್ಯದ ಬಗ್ಗೆ ಬೇರೆ ಬರೆಯುವೆ.

ಎಚ್ಚರಿಕೆ: ಅಲ್ಲಲ್ಲಿ ಬೇರೆ ಭಾಷೆಯ ಪದಗಳು ಬಂದಿವೆ. ಸಂದರ್ಭದ ಮೇರೆ ಅರ್ಥವಾಗುತ್ತವೆ.

ಜೆಗೆಯುಮೇಲಿರಿಸಿ ಸುಗಂಧದ್ರವ್ಯಂಗಳಂ ತನ್ನ ಕರ್ಣಗುಹಾಪ್ರವಿಷ್ಟಂಕರವಾಣಾ ಮೂಷಕಭೀತಿ ಗ್ರಸ್ತಾ ಕರ್ಣಭಾರಮುಂ ನೆಲಕಿರಿಸಿ ಸ್ನಾನ-ಗೃಹಮಂ ಪೊಕ್ಕಳ್.



ಬಟಿಲುತ್ಕೈಲಂ ತಲೆಯೊಳ್
ತೊಟ್ಟು ತೊಟ್ಟು ಹನಿದಳ್ ಕಿವಿಯೊಳ್
ಇಟ್ಟಿಟ್ಟೇ ಇಂಗಿಸಿ ಥಾಲೀ-
ಪಟ್ಟನವೋಲ್ ಹೊಯು ಸವರಿದಳ್ ಸರ್ವಾಂಗಂ॥

ಥಂಡಾಭಯದಲಿ ಕಾಯಿಸಿ
ಹಂಡಾವಿಪುಲಸುನೀರು ಸುಡುಸುಡುಸುಡುವೋಲ್
ಕಂಡಂಕಂಡಂತಾಡುತ
ಬೆಂಡೋಲೆಯ ಮರೆತುಬಿಟ್ಟಳಾ ಚಪಲಾಂಗಿ ॥

ಸ್ನಾನಗೃಹದೊಳ್ ಹಂಡಾ-
ನೂನೋಷ್ಣಜಲ ನಹಾನ ಸೋಪಾನಂದೇ
ಏಣಾಕ್ಷಿಯು ಮರೆತಿರುವಳ್
ಧ್ಯಾನಾಸಕ್ತಳ್ ದೇಶಕಾಲದಾ ತರತಮಮಂ ॥

ಅಭ್ಯಂಜನ ಸಂತಸದೋಳ್
ಬುಬ್ಬುರಿ-ಚಕ್ಕುಲಿಯ ಕರಿವ ಅಬ್ಬರದೊಳಗೆ
ಮಬ್ಬಿನ ಮಧ್ಯಾಹ್ನದ ಒಳ್
ಇಬ್ಬದಿ ಗೆಳತಿಯರ ಸರಸಸಲ್ಲಾಪದೊಳು ॥

ವಿಸ್ಮಾಪನಗೊಂಡಿತು ಬಗೆ
ಕಸ್ಮಿಂಸ್ಥಿತ ಕರ್ಣಪೂರ ಶೋಭಾವರಣ ಪು-
ರಸ್ಮಿನ್ ಜಾವದಿ ನೆನೆದಳು
ಕಸ್ಮಿನ್ ಕಸ್ಮಿನ್ ಭಾಂಡಗಳ ತಿರುವಿ
ಹುಡುಕಾಡಿದಳು ॥

ಸಾಸಿವೆ ಡಬ್ಬಿಯ ತಿರುವುತ
ಕೇಶಾಲಂಕಾರ ಮುಕುರ ಪೇಟಿಕೆಯನ್ನು ॥
ಹಾಸಿಗೆ ಬುಡದೊಳು ಕಾಣದೇ
ಕಾಸಾವಿಸಿಗೊಂಡು ಕನಲಿ ಕೆಂಪೇರಿದಳು ॥

ಕನವರಿಸುತ ಚಡಪಡಿಸುತ
ನೆನಪಾಯಿತು. ಸ್ನಾನಗೃಹದ ಅಡ್ಡಣಿಗೆಯು, ದೇ-
ವನ ನೆನೆಸುತ ಐರ್ತಳ್
ಘನತಪ್ಪೇಲಿಯನು ಬೊಕ್ಕುಬೋರಲಿಟ್ಟಾಳೆ ॥



ಎಲ್ಲೆಲ್ಲಿಯೂ ಕಾಣದೆ ಬೆಂ-
ಡೋಲ್ಗಳೊಂದೂನೂ ಇರಲು ತಲ್ಲಣಿಸಿದಳು
ಝಲ್ಲೆಂದಿತು ರಮಣಿಯ ಎದೆ.
ಹುಲ್ಲಿಯ ಮೇಲಣ್ಣೆ ನೀರನೆರೆದಂತಾಯ್ತು ॥

ಇಂತು ಸೀಮಂತಿನೀ ರೋದನಂ:

ಕೆಂದದ ಕುಂದದ ಮುತ್ತಿನ
ಅಂದದ ತೇಜಾಪಿನಿಂದ ಸುತ್ತಿದ ಓಲೆ
ಎಂದೂ ಜಾರದ ಓಲೆಯ
ಇಂದೇತಕೆ ಕಳೆದುಕೊಂಡೆ ನಾ ಪಾಪಿನಿಯು ॥

ತಂಗಿಯ ಲಗ್ನದಿ ಅಪ್ಪನು
ಹಂಗಾಯ್ತೆಂಗೆಂದು ನವವ ಹೇಳುತ್ತಿರಲು
ಮುಂಗಾಲ್ಪುಟ್ಟಿಗೆ ಗ್ಯೆಯುತ
ಹಂಗಿರಿಸಿ ಪಡೆದಂಥ ಓಲೆ ಕಳೆದವು ಹಯ್ಯೋ ॥

"ಅವರೇ"ನನ್ನು ವರೂ ಮೇಣ್ ಅ-
ತ್ತೆವರಪ್ಪನ ಹಂದು ಹೀದಳೆಯವರೋ
ತವರವರೆಂಬರು, "ಕೊಟ್ಟಿವು,
ಇವರಿಗೆ ಇಟ್ಟುವ ದೈವವಿಲ್ಲವು!" ಎಂದು ॥

ಘಾಟೀ ಜನರೋ ಮೇಣ್ ಕಾ-
ಮಾಠೀ ಕೆಲಸಕ್ಕೆ ಬಹ ಲಪಾಟೀ ಜನರೋ
ಘೋಟಾ ಕುಡಿಯುತ ಭಯಾ,
ಸೋಟಾ ಕೆಳಗಿಟ್ಟು ಮಲಗಿ ಬಿಟ್ಟನೊ ಏನೋ ॥

ಪಂಜಾಬಿನಿ ನೀ ಬಲ್ಲೆಯ?
ತಂಜಾವರಿ ಸರ್ವಜ್ಞಾನಿ ನೀ ಬಲು ಚದುರೆ
ಮಂಜುಳರವದಲಿ ಕೇಳಳ್
ನಂಜನ ಉತ್ತರವ ಪಡೆದು ಮರುಡುತ ಬಂದಳ್ ॥



ಹಾಂಗೂ ಹೀಂಗೂ ಹುಡುಕುತ
ಕಂಗಾಲಾಗುತ್ತ ತನ್ನ ತಾ ಶಪಿಸಿರಲು
ಅಂಗಳ ದಾಟುವ ಗಣಪಂ
ಸಿಂಗನವೋಲ್ ಮಾತೃವಕ್ಷಸ್ಥಳಕೇರಿದನು ॥

ಕೋಪಾವಿಷ್ಟಳ್ ಕ್ಷಣದೊಳು
ಅಪವಾದಂ ಮಗನ ದೃಷ್ಟಿಸುತ ಲೆ ನುಡಿದಳ್
ಯಾ ಪರಿ ಕಾಡುವನಿವ ಪೂ-
ರ್ವಾಪರ ಸಂಬಂಧವುಳ್ಳ ಭಾಗಾದಿಯವೋಲ್ ॥

" ಎಲೆ ಏಕದಂತ ನೀನೇ
ಕಲಕಲ ಮಾಡುತ್ತಲಿದ್ದೆ ಅಡುಗಾಗೃಹದೊಳ್
ಉಳಿದಗ್ರಜರೆಲ್ಲ ಶಾಲೆಯ
ಕಲಿಯಲ್ ಹೋದಾಗ ಮನೆಯು ನಿನ್ನದೇ ರಾಜ್ಯಂ ॥



ಅಡಿಗೆಯ ಮನೆಯ ಕವಾಟಂ
ಬಡಬಡನೇರುತ್ತ ಹೋಗಿ ಅರ್ಧ ತೆರೆದುಂ
ಅಡಸಲು ಬಡಸಲು ಹುಡುಕುವ
ಕಡ ಕೌಶಲವೆಲ್ಲ ನಿನ್ನದೊಬ್ಬನ ರೀತಿ ॥

ನನ್ನಪ್ಪನು ಕೊಟ್ಟೋಲೆಯ
ನಿನ್ನೊರತಿನಾರು ಕದಿಯಲಿಕ್ಕಿದ ಶಕ್ಯಂ ॥
ಮುನ್ನೋಡಿ ತಂದು ಒಪ್ಪಿಸು
ಇನ್ನೇನಾದರು ಕೊಡುವೆ ಚಕ್ಕುಲಿಂ ಅವಲಕ್ಕಿ ॥

ಪುಟ್ಟಣ್ಣಾ, ಪುಟ್ಟ, ಪುಟ್ಟಾ,
ಕಟ್ಟಾಣೀ ಹೇಳು ಎಲ್ಲಿ ಬೈತಿಟ್ಟಿರುವೆ ?
ಪುಟ್ಟಾ. ಒಳ್ಳೆಯ ಮಾತಿಲೆ
ಕೊಟ್ಟರೆ ಸರಿ, ಇಲ್ಲ ಡುಬ್ಬಮಂ ಬಾಯಿಸುವೆಂ "॥

ಇಂತೆಲ್ಲ ಮಾತೃಪರಿತಾಪಮಂ ದಖಿಯಂತೆ ಸಹನ ಗೈಯ್ಯುತ್ತಿರೆ ಅಪವಾದಮಂ ಸಹಿಸಲಾರದೆ ಏಕದಂತಂ ಬಗೆಗೈಯ್ದುದೆಂತೆನೆ :

"ಮೊಲೆಯುಣಲು ಬಂದರೆ ಈ
ಮಲೆತಪವಾದಂ ಮಾತೃಪರಿತಾಪಂ ಚ
ತಲದೋರಿತು ಇರಲಿ ನೋಳ್ಪಂ
ಕಲಿ ಮೂಷಕನಿಂದು ನನಗು ಇಂದೇ ಯುದ್ಧಂ ॥

ಮೂಷಕರಾಜಂ ಗೈದಿಹ
ಚಾಪಲ್ಯಕ ಕರ್ಮಕ್ಕೆ ಬಂತು ನನಗಪವಾದಂ
ಈಪರ್ ದೃಷ್ಟಿಗೆ ಸರ್ವರ್
ದೋಷಂ ಕೊಡುವಡನು ತಡವೆ ಸಾಕ್ಷೀಸಹಿತಂ ॥



ತಸ್ಕರನಂದದಿ ಮೂಷಕ
ಚಪ್ಪಂಗೈಯುತ್ತಲಿರಲು ಹೋಳಿಗೆ ಉಂಡಿ
ಚಕ್ಕುಲಿ ತಿನೆ ಪೋದವ ನಾಂ
ಹುಸ್ಸೆಂದೊಡಿಸಿದ ಸೇಡ ತೀರಿಸಿಗೊಂಡನ್ ॥

ಆದೊಡೆ ನೋಳ್ಪಂ ಆತನ
ಭೇದನೀತಿಗೊಂಡುಪಾಯ ದಂಡೋಪಾಯಂ ।
ಈ ದಿನ ರಾತ್ರಿಯೆ ಆತನ
ಓದನಗೃಹಕೇನೆ ಕೊಳ್ಳಿ ಇಕ್ಕದೆ ಬಿಡೆನಂ "॥

ಇಂತು ಘೋರ ಪ್ರತಿಜ್ಞೆಗೈದ ಏಕದಂತಂ ಮೌನದಿಂ ತನ್ನ ನಿಶಾಯುದ್ಧಸನ್ನಾಹಂಗೈಯ್ಯುತ್ತೆ ದಿನಾವಸಾನಮಂ ಕಾಯುತ್ತಿರೆ :

ಅಗ್ರಜರ್ ಮಾತಾಪಿತೃಗಳ್ ಕನಕಹಾನಿ ದುಃಖಗ್ರಸ್ತರ್ ನಿದ್ರಾಂಗನಾಸ್ನೇಹಾಸಕ್ತರ್ ಮೈಮರೆತ ಬ್ರಾಹ್ಮೀಮುಹೂರ್ತದೋಳ್ ಯಾ ನಿಶಾ ಸರ್ವಭೂತಾನಾಂ ನಿಯಮಮುಪ್ಪಂತೆ ಏಕದಂತಂ ಅಪವಾದಮೆಂಬ ಪಾಶಿನಿಂ ಯಶಸ್ಸಂತಂ ಧೀಮಂತಮೇಳುವ ತೆರದಿಂ ನಿಶ್ಶಬ್ದಶಯ್ಯಾತ್ಯಾಗಂಗೈದು ಪಾಶಾಂಕುಶಸನ್ನದ್ಧಂ ಮೂಷಕಗುಹಾಪ್ರವೇಶಂಗೈಯ್ದನ್...

ದ್ವಿತೀಯ ಖಂಡಂ

ಇಂತು ಮೂಷಕಗುಹಾವರ್ಣನಂ :

ಹೊರಗೂ ಕತ್ತಲ್ ಒಳಗೂ
ಬೆರಗಾಗುವ ಬ್ರಹ್ಮರಾತ್ರಿ ಇಕ್ಕೆಲದೊಳಗೂ
ನರುಮುಂಟಿನ ಭೂವಲಯಂ
ವರನಾಡನ ಕಂಠರಂಧ್ರದಂದದಿ ನುಣುಪು ॥

ಬಸಿಯುವ ನೆಲಮಾಳಿಗೆಯೋಳ್
ಹಸಿನೆಲಕೇ ಹೊಟ್ಟೆ ತಿಕ್ಕಿ ನುಸುಳುತ ಮುಂದೆ

ಕುಶಲತೆಯಿಂ ಕೊಸರಿಸಿದಂ
ನಿಶೆಯೊಳ್ ಸಂಯಮಿಯ ತೆರದಿ ಸಲೆ ನಿರ್ಭೀತಂ ॥

ದೂರಂ ದೂರಾಂತರ್
ದೂರಂ ಭೂಗರ್ಭರಾಜ್ಯ ಪ್ಲೂಟೋ ದೊರೆಯೋಲ್
ಘೋರಾಂಧಃಕಾರದೊಳಂ
ಪಾರಾವಾರ,ಕಗಮನನಿಪ್ಪಂ ಪೋದಂ ॥

ದೂರದ ಕಂಡಿಯ ಬೆಳಕೊಳ್
ಹೋರಿನ ಕೊನೆಯೋಳ್ ಬೆಳೆದ ಮೂಷಕರಾಜ್ಯಂ
ದ್ವಾರದಿ ಉತ್ಸುಚ್ಛದ ಭ-
ಟ್ಟಾರಕರಂ ಕನೆ ವಾಡ ಪ್ರಾಸಾದಮುಮಂ ॥

ನೋಡುತ ನಿಂತೊಂದರೆಚಣ
ಮಾಡಿದನ್ಕೆ ಶಂಖನಾದಮತಿ ಗಂಭೀರಂ
ಗೂಢವ್ಯೋಮವ ಸೀಳುತ
ಗಾಢಾಂಧಃಕಾರದೊಳಗೆ ಘನಗರ್ಜನೆಯೊಲ್ ॥




ಹಾಹಾಕಾರಂ ಎದ್ದುದು
ಮೋಹಾಂತರ್ಗವಿತ ಮೂಷಕಾಂತಃಪುರದೊಳ್
ಟಾಹೋ ಎದ್ದಿತು ಪ್ರಜೆಯೋಳ್
ಕಾತುರದಿಂ ಕ್ಷಾಂತರಾಗಿ ನಿಂತಿತು ಸೇನೆ ॥

ಮಂತ್ರೀವರರೆಲ್ಲರ್ ಬಹು
ಚಿಂತಾಕ್ರಾಂತರ್ ಜ್ಯೋತಿಷರಂ ಕರೆದರ್
ಭ್ರಾಂತಿಗ್ರಸ್ತನ್ ಪಡೆವಳ
ಅಂತಃಪುರಮಂತು ರುದಿತತುಂದಿಲಮಾಯ್ತು ॥

ಕಿಲಿಬಿಲಿಯೆಂದಿತು ಪ್ರಜೆ ।
ಚಿಲಿಮಿಲಿಯೆಂದಿತು ಬಾಲಮೂಷಕಸಂಘಂ ।
ಗಲಗಲವೆಂದರ್ ಹಿರಿಯರ್
ಬಲದೋಳ್ ಕೂಡಿತು ಸಭೆಯು
ಮೂಷಕಪ್ರಜೆಯ ॥




ದೊರೆ ಮೂಷಕರಾಜನು ಖಲು
ಘೊರಘೊರನೇ ನಿದ್ರೆಗೈಯ್ಯುವಾತನ ಕಿವಿಯೊಳ್
ವರಮಂತ್ರೀಶನು ಪುಚ್ಛವ
ಛರಛರನೇ ತಿರುವಿ ಜಾಗರೂಕಂ ಗೈದನ್ ॥



ಪ್ರಭು ನಿನ್ನಯ ರಾಜ್ಯಂ ತವ
ವಿಭವ–ಪರಾಕ್ರಮ–ಚೌರಕೌಶಲದಿಂದಂ
ಅಭಯಮೆನಿಪ್ಪುದು ಇಂದುಂ
ಸಭಯಂ ನಡುಗಿಹುದು ನೀವು ನಿದ್ರಾಸಕ್ತರ್ ॥

ಇಂತೆನೆ ಮೂಷಕರಾಜಂ "ಆ" ಎನೆ ಒಂದುಂ "ಊಂ" ಎನೆ ಎರಡುಂ ಬಾರಿ ಆಕಳಿಸಿ ಲಟಲಟನೆ ಬೆರಳ ಮುರಿಯುತ್ತಂ ನಖಂಗಳಂ ದಂತ ಘರ್ಷಣದಿಂ ಮಸೆಯುತ್ತಂ ಕ್ರೋಧಾವಿಷ್ಟನಾಗಿ ಎದ್ದನದೆಂತೆನೆ :

ಸಕ್ರೋಧಂ ನೇತ್ರದ್ವಯಮಂ
ಕೆಕ್ಕರಿಸುತೆ ಗುಂಜಬೀಜ ತಾಮ್ರಂ ದೀರ್ಘಂ
ಆಕ್ರಸದಿಂದಂ ನೆಕ್ಕುತ
ಸೊಕ್ಕಿದ ಮೋಳಾಸಮಾನಮೀಶಾಪುಂಜಂ ॥



ಗೆಲಗೆಲಗೆಲಗೊಟರೆನ್ನುತ
ನೆಲಮುಗಿಲನ್ನೊಂದೆ ವಿಕಟದ್ವೃಷ್ಟಿಗೆ ಉಣಿಸಿ
ಸಲೆ ಗರ್ಜಿಸಿದಂ ಯಾವಂ
ಬಿಲರಾಜ್ಯಕೆ ಬಂದು ಮಕ್ಕಳಂ ಬೆದರಸುವಂ ॥

ಇಲಿರಾಜಗರ್ಜನೆಯಂ ಕೇಳುತ್ತುಂ ವಿಕದಂತಂ ಒಂದಿನಿಸೂ ಬೆದರದೆ ಬೆಚ್ಚದೆ ಮಾರ್ಗರ್ಜನೆಯಂ ಗೈದನ್ :



ಮಿಳ್ತುವು ನಿನ್ನಯ ಬಂದಿಹ
ಕಳ್ತನದಲಿ ಅಧಟಿನಲ್ಲಿ ಸಮವಿಕ್ರಾಂತಂ
ಒಳ್ತನದಲಿ ಓಲಿಯ ಕೊಡು
ತಳ್ತೊಡೆ ನಿನ್ನವರ ನಿನ್ನ ಕೂಡಿಯೆ ಕೊಲುವೆಂ ॥

ಓಲಿಯ ಕೊಡಿರಿಲ್ಲವೆ ಈ
ಕೋಲುಪ್ರಹಾರ ಸಹಿಸಿರಿ ತಲೆಯೋಳ್ ॥
ಈ ಲಾಘವಮಂ ಕಂಡೊಡೆ
ಬಾಲಾಗಸಿ ಮೀಸೆ ನಿಮಿರಿ ನಿಂತವು ಇಲಿಯಾ ॥

ಸಕ್ರೋಧಂ ವೀರರೀರ್ವರ್ ಪರಸ್ಪರಂ ಮುಷ್ಟಾಮುಷ್ಟಿ ನಖಾನಖಿಗೆಉದ್ಯುಕ್ತರಪ್ಪೊಡೆ ಯುದ್ಧಂ ತುಮುಲಮಪ್ಪುದು ಅದೆಂತೆನೆ :

ಮುಷ್ಟ್ಯೋರ್ಯುದ್ಧಂ ಗೈಯುತ
ದಂಷ್ಟ್ರಾಯೋಗಂ ವಿಕದಂತದಿಂ ನಿಗ್ರಹಿಸಿ
ದೃಷ್ಟಿಗೆ ದೃಷ್ಟಿಯನದುರಿಸಿ
ಕಷ್ಟೀಕರಿಸಿದನು ಪ್ರಬಲ ಹೆಗ್ಗಣಧೈರ್ಯಂ ॥

ಕೇಶಾಕೇಶಿಗ ಸರಿಸಮ
ಮೀಶಾಗ್ರಹಣಂ ಪ್ರಪುಚ್ಛಲಂಬೀಕರಣಂ
ಪಾಶಾಂಕುಶತಾಡಣದಿಂ
ಕಾಸಾವಿಸಿಗೊಳಿಸಿ ಅರಿಯ ಶೌರ್ಯಂ ಮುರಿದಂ ॥



ಆಗಳ್ ಅಸಮಪರಾಕ್ರಮನಂ ವಿಕದಂತನೇ ಕಂಡು ನಮ್ರಭಾವದಿಂ ಹೆಗ್ಗಣರಾಜಂ ಸಂಧಿಯ ಪ್ರಸ್ತಾಪಮಂ ಮುಪಕ್ರಮಿಸಿದನ್ ಅದೆಂತೆನೆ :

ಓಹೋ ಬಡವರ ಮನೆ
ಯಾಕೋ ! ಚಟಾಯಿ ಹಾಸಿರಿ ಬೇಗ !
ಕಾಹೋ, ನೆನಪಾಯಿತೆ ಹಳೆಕಳೆ
ಸ್ವಾಹಾಕಾರಸಮಾನ ಮಿತ್ರರ್ ನಾವು ॥



ಆಗಳ್ ವಿಕದಂತಂ ಸ್ವಾಗತಮಂ ನಿರಾಕರಿಸಿ:

ಇಲ್ಲದ ಉಪಚಾರಮೀಗಲ
ಸಲ್ಲದು ಅಪವಾದಗ್ರಸ್ತರಾವಿರೆ ಈಗ
ಅಲ್ಲಿಯೊ ಅವ್ವನ ಶೋಕಂ,
ಒಲ್ಲಂ ಸತ್ಕಾರಃ ಕೊಡಿರಿ ಯುದ್ಧದ ಭಿಕ್ಷೆ ॥

ಆಗಳ್ ಮೂಷಕರಾಜಂ ಚಿಂತಾಪೂರ್ವಕಂ ನುಡಿದನೆಂತೆನೆ:

ಹೋಳಿಗೆ ಕದಿಯುವ ಮೊದಲೇ
ಹೇಳಿದವೋಲ್ ತಡೆಯಲಿಲ್ಲ ಓಲಿಯನೇಕ
ಕೀಳೆಯೆಂಬ ನನ್ನಯ ಮಗಳದ
ತಾಳಿಯವೋಲ್ ಕೊರಳಮೇಲೆ ಧರಿಸಿರುವಳು ಸೈ ॥

ಕೊಡಲೊಲ್ಲಳು ಇನ್ನೀರ್ವರಿಗೆ
ಬಿಡಲೊಲ್ಲಳು ಹಗಲುರಾತ್ರಿ, ಕೊರಳಿನ ತೋಳ
ಕಡುಕಷ್ಟವು ಬಂದೊದಗಿತು !
ಲಾಭಾಯಿಯಿಲ್ಲ ಮಗಳಪೇಕ್ಷಾಭಂಗಂ ॥



ಹೀಗೆನ್ನುತ ಇಲಿರಾಜಂ
ಬಾಗಿಸಿ ಟೊಂಕವನು ಮಂತ್ರಿವರರಂ ಕರೆದನ್
ವಾಗಾಲೋಚಿಸಿ ಕಿವಿಯೋಳ್
ಈಗಲ್ ಸವಿಮಾತು ಬರೆದುದೇನಚ್ಚರಿಯೋ ॥



ದೀಪಾವಳಿಯ ಶುಭಾಶಯಗಳು

ಅಧಿಕೃತ ಉತ್ಪಾದಕರು
ಹುಬ್ಬಳ್ಳಿ ಬಾಟಲಿಂಗ ಕಂ. ಪ್ರಾ. ಲಿ.,
೧೬/೨ - ಗೋಕುಲ ರೋಡ - ಹುಬ್ಬಳ್ಳಿ




ಭಲೆ ಏಕದಂತ ನಿಮ್ಮಯ
ಕಲಿತನದಿಂ ಮೆಚ್ಚಿಕೊಂಡ ನಾ ಇಲಿಶ್ರೇಷ್ಠಂ
ಇಲಿಕುಲಲತಾಮಣೀಳೆಯ
ಸಲೆ ವಿವಹಿಸಲಿಕ್ಕೆ ನೀವೆ ಯೋಗ್ಯರ್ ಭಲೆಲೆ ॥



ಉಪವರಳಪ್ಪೀ ಈಳೆಯ
ಸಫಲಕಲಾವಿದಗ್ಧ ರೀತಿಯ ಬೇರೆ
ಅಪರೂಪ ನಕ್ಷೆ ಗೈವಳ್
ಪದಪದ ಕಡಿಯುತ್ತ ಸಿಲ್ಕು ಸಾಟೀನುಗಳಾ ॥

ದಡಗಡ ಗಿಲಿಗಿಲಿ ಚಲಿಮಿಲಿ
ದಿಡದಾಡಿಗಳನ್ನು ಅರಿತು ಸರಿಧಮದೊಳಗೆ
ಅಡಿತಡೆಯಿಲ್ಲದೆ ನಿರ್ಭಯ
ಅಡಾಚೌತಾಳದೊಳಗೆ ರಾಡಂಗೈವಳ್ ॥



ಪುಚ್ಛವಿಲಾಸಂಗೈಯುತ
ಅಚ್ಚೆಯ ಭ್ರೂಲುಲಿತ ಮೀಸೆ ಢಂಗೀಕರಣಂ
ಸಚ್ಚರಣಘಟಿತ ಢಧತೋಂ
ನಚ್ಚಣಕಲೆಯಲ್ಲಿ ಭರತನಾಟ್ಯವಿದಗ್ಧೆ ॥

ನಿನ್ನಯ ದೈವವು ತೆರೆಯಿತು
ಮುನ್ನಿಹ ಕಾಲಕ್ಕೋಟೆ ಕೂಡ ಉದರಿಸಿತು ಸೈ
ಮನ್ನಿಸು ಉಪವರಕನ್ನೆಯ
ಬಿನ್ನಾಣದ ವೀರಡುವರಗಿನ್ನೇಂ ಪೇಳ್ವಂ ॥

ಮೂಷಕರಾಜ್ಯದ ಘಟನಾ
ಶಾಸನದೊಳ್ ಚರಿತವಸ್ತು ಚೋರನ ಸೊತ್ತು
ಈ ಸಮಯಕೆ ಬಂಡೋಲೆ-ಯ-
ಥಾಶಕ್ತಿ ವರೋಪಚಾರಮೆಂದುಂ ಕೊಡುವೆಂ ॥



ಇಂತು ತನ್ನ ಚಲಮಲ್ಲದೆ ಕನ್ಯಾಲಾಭದಿಂ ರೋಮಹರ್ಷಿತನಾಗಿ ಏಕದಂತ ಕುಮಾರಂ ಗಾಂಧರ್ವವಿಧಿಯಿಂ ಈಳಾನಾಮಕ ಮೂಷಿಕಾಕುಮಾರಿಯೊಡನೆ ವಿವಾಹಂಗೈಯಲ್ಕು ಮಂಗಳ ವಾದ್ಯಂಗಳ್ ಭೋರಿಡುತಿರೆ ತ್ವ ಸು ರ ನಂ ಬೀಳ್ಕೊಟ್ಟು ಸ್ವರಾಜ್ಯದತ್ತಂ ಸ್ವವಧೂಪೂರ್ವಕಂ ಬಿಜಯಂಗೈದನ್ ಮೂಷಕಕಟಕಂ ಜಯ ಭೇರಿಯಂ ಬಾಜಿಸುತ್ತುಂ ಜಯಜಯಕಾರಂಗೆಯುತ್ತುಂ ವರನಂ ವಧುವಂ ಅವರ ಶಯ್ಯಾಗಾರದ ವರೆಗುಂ ಬೀಳ್ಕೊಟ್ಟು ಮರಳಿದಪ್ಪುದು. ಆ ಸುಸ್ವರದಿಂ ಜಾಗ್ರತಳಾದ ಗಿರಿಜಾಂಬೆಯು ಇಂದೇಕೆ ದಿನಕಿಂತ ಮಿಗಿಲು ಇಲಿಗಳ ಕಾಟ-ಮೆಂದು ಗುಬ್ಬೀಚಿಮಣಿಯುಪ್ಪೇರಿಸಿ ನೋಡುತ್ತೀರೆ,

ಥಳಥಳ ಹೊಳೆದವು ಗಣಪನ
ಬಳಿಯಲ್ಲಿಯೇ ಸ್ವರ್ಣಕರ್ಣಪೂರಂಗಳ್ ತಾ

ಪಳಿಯಂಥ ಗಾಢಿಯ ಚಿಮ್ಮುತೆ
ಥಳಚ್ಚನೆ ರಮಣೀನೇತ್ರದೀಪನಗೈಯ್ಯು

ಆಗಳ್ ಸುಂದರಿ "ಎಲ, ಇಲ್ಲಿಯೇ ಇಪ್ಪವು ವ್ಯರ್ಥಂ ಸುಕುಮಾರಂಗೆ ದೋಷವನಿತ್ತೆ ನಾಂ ಪಾಪಿನಿ" ಎನ್ನುತ್ತೆ ಅನುತಾಪದಿಂ ಏಕದಂತನ ಚುಂಬಿಸಲೆಂದಾತನ ಆಚ್ಛಾದನಕಂಬಲಮನೋ-ಸರಿಸಿರೆ ಕಂಡಳ್

ನಿದ್ರಾಸವನಿಹಿತ ದಣಪಂ
ಆರ್ದ್ರ ಮುಖಂ ಸ್ವಪ್ನಲೋಕಲೋಲುಪ ನೇತ್ರಂ
ಭದ್ರಾಲಿಂಗನ ಪಾಶದಿ ಹ-
ರಿದ್ರಾಲಿಪ್ತಾಂಗಿ ಚಾರುಗಾತ್ರಿ ನವೋಢೆ ॥

ದುಗನಂ ಸೊಸೆಯುಂ ಕಾಣುತೆ ಬೆಚ್ಚಬೆರಗಾ-ಪತಿಯುಂ ಇತರ ಪುತ್ರರಂ ಎಚ್ಚರಿಸಿಪ್ಪಳ್. ವೀರ ಶಂಕರರಾಯುಂ ವೀರವಸಂತಂ ವೀರಮೋಹನಂ ಸುಮನಮೀನಾಂಬಿಕೆಯುರ್ ಏಕದಂತನಂ ಆತನ ವಧುವಂ ಕಂಡು ಸೋಜಿಗಬಡುತ್ತೆ, ನಿಗ್ಗತ ಲಕ್ಷ್ಮೀಪುನರಾಗಮನ ಹೃಷ್ಟಚಿತ್ತರ್ ನವೋಢರ ನಿಂತು ಸ್ವಾಗತಂಗೈದರ್



ಹಗ್ಗ ಜರಾಣಿಯ ಸಮಸುಖ-
ಮುಗ್ಗುಲದೋಳ್ ಸಗ್ಗಸುಖದಳಂ ಪಡೆಯುತ್ತುಂ
ನುಗ್ಗಲಿ ಬಾಲ್ಯದ ದಿನಗಳ್
ಅಗ್ಗದ ದಣಪಮನೇಕದಂತನಾಡುವವರೆಡುಂ ॥

ಹದಿನಾರನೇ ವರ್ಷದಲ್ಲಿ ನೀವು ಆಕರ್ಷಕವಾಗಿ ಕಾಣಿಸದಿದ್ದರೆ ನಿಮ್ಮ ತಂದೆ ತಾಯಿಗಳಿಗೆ ದೋಷ ಕೊಡಬಲ್ಲಿರಿ, ಆದರೆ ಎಂಭತ್ತನೇ ವರ್ಷದಲ್ಲಿ ನೀವು ಆಕರ್ಷಕರಾಗಿ ಕಾಣಿಸದಿದ್ದರೆ ಅದು ನಿಮ್ಮದೇ ದೋಷ

—ಡಾ. ಪಾಲ್‌ಪಾರ್ಕರ್


• • •

ಎರಡನೆಯವರ ಮೇಲೆ ಅಧಿಕಾರ ನಡೆಯಿಸದ ಹಾಗು ಎರಡನೆಯವರ ಅಧಿಕಾರಕ್ಕೆ ಒಳಗಾಗದವನು ನಿಜವಾಗಿಯೂ ಮಹಾಪುರುಷನು.

—ಖಲೀಲ ಗಿಬ್ರಾನ್

ಈ ಉತ್ತಮ ಬೆಳೆಯ ಹಿಂದೆ ಕೆ.ಸಿ.ಸಿ ಬ್ಯಾಂಕಿನ ಆರ್ಥಿಕ ನೆರವು ಅಡಗಿದೆ





ಬ್ಯಾಂಕಿನ ಜ್ಯೋತಿಯು ಜನತೆಯ ಸಹಕಾರದ ತೈಲದ ಮೇಲೆ ಆಧಾರ ಪಟ್ಟಿದೆ. ಕೆ.ಸಿ.ಸಿ. ಬ್ಯಾಂಕಿನ ನಂದಾದೀಪ ಧಾರವಾಡ ಜಿಲ್ಲೆಯ ಅನೇಕಾನೇಕ ಮನೆಗಳನ್ನು ಬೆಳಗಿದೆ.
ಈ ದೀಪಾವಳಿಯು ನಿಮ್ಮೆಲ್ಲರಿಗೂ ಶುಭವನ್ನು ಒದಗಿಸಲಿ

ಅಧಿಕೃತ ಭಂಡವಲು	ರೂ. ೭೫ ಲಕ್ಷ	ಠೇವುಗಳು	ರೂ. ೪ ಕೋಟಿ
ಪೇಡ ಅಪ್ ಶೇರ ಭಂಡವಲು	ರೂ. ೪೫ ಲಕ್ಷ	ಸಹಕಾರಿ ಸಂಘಗಳ ಸಾಲಗಳು	ರೂ. ೬ ಕೋಟಿ
ಸ್ಟ್ಯಾಚ್ಯೂಟರಿ ರಿಝರ್ವ್ ಮತ್ತು ಇನ್ನಿತರ ನಿಧಿಗಳು	ರೂ. ೨೫ ಲಕ್ಷ	ದುಡಿಯುವ ಭಂಡವಲು	ರೂ. ೮ ಕೋಟಿ

ಎಂ. ಜಿ. [illegible]ಮತಿ
ವ್ಹಾಯಿಸ್ ಪ್ರೆಸಿಡೆಂಟ

ವ್ಹಿ. ಎಸ್. ಬಸವನಾಳ
ಪ್ರೆಸಿಡೆಂಟ

ಕೆ.ಸಿ.ಸಿ. ಬ್ಯಾಂಕ ಲಿ.,

ಸ್ಥಾಪನೆ: ೧೯೧೬ - ಹೆಡ್ ಆಫೀಸ: ಧಾರವಾಡ - ೩೮ ಶಾಖೆಗಳು



ಸುವರ್ಣ ಮಹೋತ್ಸವ ೧೯೬೬



ಜ್ಯೋತಿಸ್ಸೂಕ್ತ
(ಜಗಜ್ಜ್ಯೋತಿಗೆ ಆಮಂತ್ರಣ)

೧

ಅದು ಕೃತಯುಗಾರಂಭ—
ದೇವನಾಗಸದಿಂದ ಗುಡುಗಿದನು ಬೆಳಕಾಗಲೆಂದು
ಬೆಳಕಾಯಿತು !
ಬೆಂಕಿ ಬೆಳಗಿದ, ನೇಸರುರಿದ ಮಳೆಯನ್ನಿಂದ್ರ ಸುರಿಯಿಸಿದ—
ಹೊಳೆ ಹರಿಯಿತು.
ಹಸಿರೆದ್ದಿತು,
ಹಸು ಮೇಯ್ದಿತು;
ಮಾನವ್ಯನಾಯು ಬೀಸಿದನೊಂದು ಧ್ರುವದಿಂದ
ಇನ್ನೊಂದರೆಡೆಗೆ;
ಬಣ್ಣ ಬಣ್ಣದ ಕುಲಗಳುದಿಸಿದವು ಗದಿಸಿದವು.
ಮೃತ್ಯು ಎದ್ದೋಡಿದನು ಮರಣ ಭಯದಿಂದ—
ಅವ ಪಂಚಮ !
ಪಂಚಮಸ್ವರ ಕೆಟ್ಟುಹೋದ ಬಾಳಿನ ತೂತ
ಮಣ್ಣುಮುದ್ದೆಯನ್ನಿಟ್ಟು ಮುಚ್ಚಲೆಂದು
ನಡೆದದನಮವು !
ಮರಣ ಭಯಕಾಳಾದ ಬಾಳು ಅಸ್ಪೃಶ್ಯ ;
ಬೆಳ್ಪು ಬೆಳಕಿನ ಬಾಳಿಗೆಲ್ಲಿ ಮರಣ ?

೨

ಬೆಳಕನ್ನು ನೆಳಲೆಂದು ನೆಳಲನ್ನೇ ಬೆಳಕೆಂದು.
ಕಂಡ ಮರ್ತ್ಯರು ಬಕೋತ್ಸಾಹದಿಂದ
ಹೊಳೆವ ವಸ್ತುಗಳನ್ನು "ಶ್ರೀಮದೂರ್ಜಿತ" ಎಂದು
ತಿಳಿದು ಹೆಕ್ಕಿದರಹಹ ! ತಮದ ಮಾಯೆ
ಕಾರ್ಗಪ್ಪಿನಂಜನ, ಕರಾಳದರ್ಶನ ಜನಕ !
"ಹೀರುವೆನು ಮೋರುವೆನು. ಇದ್ದಲ್ಪ ಕಾಲದಲ್ಲಿ
ಸುಖಸಾರವನ್ನೆಲ್ಲ" ಎಂಬ ದುರ್ ದೈತ್ಯಾಶೆ
ಮೃತ್ಯುವಾಯಿತು ಚಕ್ರವರ್ತಿಗಳ ಹೆಡೆತಲೆಗೆ!

೩

ಅಂಬುಗಾಲವಿದಲ್ಲ, ಬಾಂಬುಗಾಲವಿದೆಯೆಂದು
ಜಂಭವನು ಜಂಭಾರಿಗಿಂತಧಿಕವಾಗಿ
ತೋರಿಸಿದ್ದಕ್ಕೆ ವೀಯತ್ನಾವರಣ ಸಾಕ್ಷಿ ;
ಜನಹನನ ಮಾರಣದ ಹೋಮ—
ಗಗನಕೇರಿಹುದದರ ಧೂಮ !
ಕೋಣನೇರಿದ ಪಿಂಗಲಾಕ್ಷನು ವಿಮಾನಗಳ
ದಾಳಿಗಳ ಅಬ್ಬರವ ಕಾಣನೇ ? ಬೆಳಕನ್ನು
ಆರಿಸುವ ತಾಮಸರ ಕಣ್ಣ ಕೀಳಿಸಲೆಂದು
ಕಾದಿರುವ ಕಾದಿರುವ ಕಾದುವವುಲನ್ನಿಳಿಸೆ !
ದೀಪಾವಳಿಯುನವಮಾವಾಸ್ಯೆಗಿಳಿಸುವ ಕುಲದ
ಪಾಪ ಭಾರವನ್ನೆಷ್ಟು ಕಾಲ ತಾಳೀತು ನೆಲ ?
ಆಪತ್ತುಗಳ ಕಾರಖಾನೆ ತೆರೆದಿಹ ಮಿತ್ತು.
ಯೂಪಕ್ಕೆ ಮಾರಕರ ಕಟ್ಟಿ ಕಡಿಯಿಸದಿಹನೆ ?

೪

ರಾಜತೃಷ್ಣಾಗ್ರಸ್ತ ಪಾಕ ಚೀನಗಳಲ್ಲಿ
ಆಗಲೇ ಬಿದ್ದಿಹುದು ದೀರ್ಘಮೃತ್ಯುಚ್ಛಾಯೆ !
ಪ್ರಾಂತ ವಿಸ್ತರಣ ಕ್ಷುಧಾರ್ತಿಯಲಿ ಪುಣ್ಯಜನ
ಮೆಕೆವಿಲ್ಲಿ ತಂತ್ರಗಳ ಹೂಡಿರಲು ಲೋಕಗಳ
ಏಕ ಕ್ಷಣದಲ್ಲಿ ಸಹರಾಯಿಸಿಯೇ ಬಿಡಬಲ್ಲ
ಭಯದೇವ ದೇವಭಯದಿಂದ ದಂಡವನೆತ್ತಿ
ನಿಂತಿಹನು ಕನ್ಯಾಢ ಪಶ್ಚಿಮದ ಗಡಿಯಲ್ಲಿ !

೫

ಊರಲ್ಲೆ ಡಾಮರಿಸಿದಂಥ ಗಾಢಾಂಧಕಾರ,
ಜಾತಿಮತ ಭೂತಗಳ ಭೂ ಬಿಟ್ಟ ಮಾಟಗಾರ—
ಕಣ್ ಕಿವಿ ಮನಂಗಳಲಿ ನುಗ್ಗಿ ಮಿದುಳನು ಹೊಕ್ಕು
ಸರ್ವಾವಯವಗಳನು ಕುರುಸಿದ ಬರಡಿಸಿದ
ಮರವಜ್ರಬಂಧದ ಮಹಾಲೇಪ ದಟ್ಟಯಿಸಿ—
ಕರೆಯುತಿದೆ ರಣಕೆ ಕಾಲಾಗ್ನಿರುದ್ರನ ಕೆಣಕಿ !

೬

ಮಾತಾಡಬೇಕು ಆ ಮಹದೇವ ಮತ್ತೊಮ್ಮೆ—
"ಅವ್ರೊಮೂರ್ಧಾನ ಮಕ್ರಮಿಂ
"ಅಥಸ್ಪದಾನ್ಮ ಉದ್ವದತ
"ಮಂಡೂಕಾ ಉದಕಾದಿವ" — ಎಂದು—
ಬರಿಯೆಬಾನ್,
ಉರಿಯೆಮೀನ್
ನೆಲಬುಗಳ ತೈಲವನು ಹೀರಿ,
ಕೋಟಿ ಸೂರ್ಯರ ಝಳವ ಬೀರಿ ;
ಕತ್ತಲೆಯ ವಸ್ತ್ರಾಪಹಾರ ಮಾಡಿ,
ಸತ್ಯತ್ರಿವಿಕ್ರಮ ಕ್ರಮವ ಹೂಡಿ—
ಪುಣ್ಯಚರಿತರ ಸಚ್ಚಿದುಲ್ಲಾಸವ,
ಪುಣ್ಯಚರಿತರ ದುಶ್ಚಿದುಧ್ವಂಸವ
ಒಡರಿಸಲಿ ;
ಗುಡಿಲಿನಲಿ
ಬಡಹಣತಿಕೂಡ
ನಿಡಿದಾಗಿ
ಸೇರಲಾ
ಬಾಂಬೊಳೆಯ ನಾಡ !


—ಬಿ. ಎಚ್. ಶ್ರೀ.

ದೀಪಾವಳಿಯು ನಮ್ಮೆಲ್ಲ ಗ್ರಾಹಕರಿಗೂ ಹಿತೈಷಿಗಳಿಗೂ


ಸುಖ-ಸಮೃದ್ಧಿಯನ್ನು ತರಲಿ !!

ಘೋಡಕೆ ಬ್ರದರ್ಸ

ತಂತಿ : Ghodkebros.] ಹಳೇ ಹುಬ್ಬಳ್ಳಿ, ಹುಬ್ಬಳ್ಳಿ. [Phone : 3153



* ಸ್ವಯಂಚಾಲಿತ ರಾಯಿಸ್ ಮಿಲ್
* ಆಯಿಲ್ ಎಕ್ಸಪೆಲ್ಲರುಗಳು




* ಆರ್ಟಿಫಿಸಿಯಲ್ ಭತ್ತ ಒಣಗಿಸುವ ಯಂತ್ರಗಳು
* ಅವಲಕ್ಕಿ ಮಶಿನ್‌ಗಳು

ನಮ್ಮೆಲ್ಲ ಗ್ರಾಹಕರಿಗೂ ಹಿತಚಿಂತಕರಿಗೂ ದೀಪಾವಳಿ ಹಬ್ಬದ ಹಾರ್ದಿಕ ಅಭಿನಂದನೆಗಳು !!


ಮಲ್ಲಿಕಾರ್ಜುನ ಸ್ಟೀಲ ವರ್ಕ್ಸ, ಮರಾಠಾಗಲ್ಲಿ ಹುಬ್ಬಳ್ಳಿ



ಸ್ಟೀಲ ಫರ್ನಿಚರುಗಳ
ತಯಾರಕರು, ಹಾಗೂ
ಆಯಿಲ್ ಜಿನಸ್ಟ್ರೋರಗಳ ಪೂರೈಕೆಗಾರರು



- ಉಕ್ಕಿನ ಫರ್ನಿಚರುಗಳು
- ಕ್ಯಾಬಿನೆಟ್‌ಗಳು
- ಪಲ್ಲಂಗ, ತೊಟ್ಟಿಲಗಳು
- ಕ್ಯಾಶಬಾಕ್ಸ, ಕುರ್ಚಿ ವಗೈರೆ



ಕಿವಿಮಾತು

ಭರತ ಖಂಡದ ಕಣ್ಣು
ತೋಳ ತೊಟ್ಟಿಲು ನಮಗೆ
'ತೊರೆ ಕಲಹ— ಬಾ ಬಂಧು'—
ಎಂದರೆ ದೂರ ಸಿಡಿದೆ.

ರನ್ನಗನ್ನಡಿಯೊಡೆದು
ಛಿಳ್ಳೆನಲು ಮೈ ತಳೆದು
ಹರಿದು ತಾಯಿಯು ಸೆರಗು
ಪಡೆದೆ ನಿನ್ನಯ ಪಾಲು.

ಸಹಿಸಿದೆವು ಈವರೆಗು
ಉದ್ಧಟದ ಉಪಟಳವ
ಸಹಿಸಲಾರೆವೊ ಇನ್ನು
ದಹಿಸುವೆವು—ಅಕ್ರಮಣವ.

ಅವರಿವರು ತಲೆ ಕೆಡಿಸಿ
ದ್ವೇಷ ಚೂರಿಯು ಮಸೆದೆ
ಕೂಡಿ ಬಾಳ್ದ ಹರಿಗೆ
ಮುಳ್ಳು ಬೇಲಿಯನೆಳೆದೆ.

ಚೇತರಿಸಿಕೊಂಡೆದ್ದು
ಗರ್ಜಿಸಿದೆ ಭಾರತವು
ಸಿಂಹ ವಿಕ್ರಮ ರಕ್ಷೆ
ಅಶೋಕ ಚಕ್ರಾಂಕಿತವು.

“ಪಾಕ್”—ಹೆಸರಿಗೆ;—ಕೃತಿಯೋ
“ನಾಪಾಕ್”— ಮತಿ ವಿಕಲ್ಪ
ಸಿಡಿದ ಬಾಂಬಿನ ಸೇಡು
ಬಿಡು, ಕರವಲ್ಲ ಜಲ್ಪ.

ತಾಯಸೆರಗನು ಹಾಸಿ
ಪರರ ಪದ ತಲಕೆರಗಿ
ದ್ವೇಷ ಸಾಧಿಪ ಛಲದಿ
ಕೊನೆಗೆ ಅಳಿಯುವೆ ರಣದಿ.

ಶ್ರಮಿಸದಲೆ ಹಟಮಾಡಿ
ಗಳಿಸಿರುವ ಮೃಷ್ಟಾನ್ನವ
ಉಂಡು ಕೊಬ್ಬಿದ ನೀನು
ಹೂಡಿರುವೆ ಅನ್ಯಾಯವ.

ಕೇಳು ಸಾಗರ ಘೋಷ—
ಸನ್ನದ್ಧ ಭಾರತದ
ಭದ್ರ ಜಾಗೃತ—ಪುರುಷ
ಶಾಂತಿ, ಸಮರಕು ಸಿದ್ಧ.

ಇಷ್ಟವಿದ್ದುದ ನಾಯುಃ
ಬಿಟ್ಟು ಕಾಶ್ಮೀರದ ಛಲ
ಬಂಧುವಾದರೆ ಚೆನ್ನ—
ಸ್ಪಷ್ಟ ಉಳಿದುದರ ಫಲ!

— ಇಟಗಿ ರಾಘವೇಂದ್ರ

ನಾನು ಕಾದಂಬರಿಗಳನ್ನೇ ಏಕೆ ಬರೆದೆ?

—ಬಸವರಾಜ ಕಟ್ಟೀಮನಿ

ಪ್ರತಿ ವರ್ಷವೂ ಬೇಸಗೆಯ ರಜಾಕಾಲದಲ್ಲಿ ನಾವೆಲ್ಲರೂ ನಮ್ಮ ಹಳ್ಳಿಗೆ ಹೋಗಿ ಒಂದು-ಒಂದೂವರೆ ತಿಂಗಳು ಅಲ್ಲಿಯೇ ಇರುತ್ತಿದ್ದೆವು. ಆಗ ನನಗೆ ಹತ್ತು-ಹನ್ನೊಂದು ವರ್ಷ ವಯಸ್ಸಿರಬಹುದು; ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದೆ. ರಾತ್ರಿಯ ಊಟ ಮುಗಿಸಿ. ಅಂಗಳದಲ್ಲಿ ಚಾಪೆ ಹಾಸಿ ಕುಳಿತಿರುತ್ತಿದ್ದೆವು. ನಡುವೆ ನಮ್ಮ ತಾಯಿ; ಆಕೆಯ ಸುತ್ತಲೂ ನಾವು ಹುಡುಗರು. ಊಟವಾದ ನಂತರ ನಮಗೆ ನಿದ್ದೆ ಬರುವ ವರೆಗೂ ಕಥೆ ಹೇಳುತ್ತ ಕುಳಿತಿರುವುದು ನಮ್ಮ ತಾಯಿಯ ನಿತ್ಯ ಕ್ರಮವಾಗಿದ್ದಿತು. ತಾಯಿ ಕಲಿತವಳಲ್ಲ; ಓದು ಬರೆಹ ಬಲ್ಲವಳಲ್ಲ. ಆದರೂ ಜಾನಪದ ಕಥೆ-ಕವಿತೆಗಳ ಆಕೆಯ ಸಂಗ್ರಹ ಬಹಳ ದೊಡ್ಡದು. ಬೇಸಗೆಯ ನಿರಭ್ರ-ನಿರ್ಮಲ ಆಗಸದಲ್ಲಿ ತಾರೆಗಳು ಥಳಥಳಿಸುತ್ತಿದ್ದಂತೆ ಬೀಸುಗಾಳಿಗೆ ಮೈಯೊಡ್ಡಿ ಕುಳಿತು ತಾಯಿ ಬಣ್ಣಿಸುತ್ತಿದ್ದ ಸೀತಾರಾಮರ-ಸುಭದ್ರಾ-ಅರ್ಜುನರ, ರುಕ್ಮಿಣೀ ಕೃಷ್ಣರ ಕಿತ್ತೂರ ಚೆನ್ನಮ್ಮ ಸಂಗೊಳ್ಳಿ ರಾಯಣ್ಣ, ಸಿಂಧೂರ ಲಕ್ಷ್ಮಣರ ರಮಣೀಯ ಕಥೆಗಳನ್ನಾಲಿಸುತ್ತ ನಾವು ಕಲ್ಪನಾ ಲೋಕದಲ್ಲಿ ವಿಹರಿಸುತ್ತಿದ್ದೆವು.

ಮತ್ತೆ ಮೂರು ನಾಲ್ಕು ವರ್ಷ ಕಳೆದ ಬಳಿಕ, ನನಗೆ ಚೆನ್ನಾಗಿ ಓದಲು ಬರತೊಡಗಿದಾಗ, ಶಾಲೆಯ ಗ್ರಂಥಾಲಯದಲ್ಲಿದ್ದ ಕಥೆ-ಕಾದಂಬರಿಗಳನ್ನು ಮನೆಗೆತೆಗೆದುಕೊಂಡು ಬರುತ್ತಿದ್ದೆ. ಪ್ರತಿದಿನವೂ ಎರಡು ಮೂರು ತಾಸುಗಳ ವರೆಗೆ ತಾಯಿಯೆದುರು ಕುಳಿತು ಅವುಗಳನ್ನೋದಿ ಹೇಳಬೇಕಾಗುತ್ತಿತ್ತು. ಗಳಗನಾಥರ, ವೆಂಕಟಾಚಾರ್ಯರ, ವಾಸುದೇವಾಚಾರ್ಯರ ಕಾದಂಬರಿಗಳ ಪರಿಚಯವಾದದ್ದು ಹಾಗೆ. ವಾಸುದೇವಾಚಾರ್ಯರ 'ಇಂದಿರಾ'ದಿಂದ ಪ್ರಭಾವಿತನಾಗಿ 'ಚಂದಿರಾ' ಎಂಬ ಇನ್ನೂರು ಪುಟಗಳ ಕಾದಂಬರಿಯೊಂದನ್ನು ಬರೆದು, ಯಾರಿಗೂ ತೋರಿಸದೆ ಪೆಟ್ಟಿಗೆಯಲ್ಲಿ ಮುಚ್ಚಿ ಇಟ್ಟಿದ್ದೆ! ಅದು ಅಲ್ಲಿಯೇ ಹುಳುಗಳಿಗೆ ಆಹಾರವಾಯಿತು! ಆಗ ನನ್ನ ವಯಸ್ಸು ಹದಿಮೂರು!

ಹೀಗೆ, ನನಗೆ ಕಥೆ-ಕಾದಂಬರಿಗಳ ಗೀಳು ಹಿಡಿಯಲು ನನ್ನ ತಾಯಿಯ ಪ್ರೇರಣೆಯೇ ಕಾರಣವಾಯಿತು. ತಂದೆಗೆ ಗೊತ್ತಾಗದಂತೆ ನನಗೆ ವಾಚನಾಲಯದ ವಂತಿಗೆಗಾಗಿ ಹಣ ಕೊಟ್ಟು ನನ್ನ ಸಾಹಿತ್ಯಾಭಿರುಚಿಯನ್ನು ಪ್ರೋತ್ಸಾಹಿಸಿದವಳು ನನ್ನ ತಾಯಿ.

"ಶಾಲೆಯ ಪುಸ್ತಕ ಓದೋದು ಬಿಟ್ಟು ಕಥೆ-ಕಾದಂಬರಿ ಓದಿ ಉಡಾಳ ಆಗತಾನ!" ಎಂದು ತಂದೆ ಬಯ್ಯುತ್ತಿದ್ದರು.

ತಾಯಿ ನನ್ನ ಪಕ್ಷ ವಹಿಸಿ ವಾದಿಸುತ್ತಿದ್ದಳು:

"ಉಡಾಳ ಯಾಕಾದಾನು? ಕಥೀ-ಕಾದಂಬರಿ ಬರದು ನಾಳೆ ಅವನೂ ದೊಡ್ಡ ಲೇಖಕ ಆಗತಾನ!"

"ಕಥೀ-ಕಾದಂಬರಿ ಬರದರ ಹೊಟ್ಟೆ ತುಂಬತದೇನ?" ಎನ್ನುವರು ತಂದೆ.

ತಾಯಿಯ ಮಾತೇ ಸತ್ಯವಾಗಿ ಪರಿಣಮಿಸಿತು. ನಾನು "ದೊಡ್ಡ" ಲೇಖಕನಾದೆನೋ ಇಲ್ಲವೋ ಗೊತ್ತಿಲ್ಲ; ಲೇಖಕನಾದದ್ದು ಮಾತ್ರ ನಿಜ. ಕಥೆ-ಕಾದಂಬರಿಗಳ ರಚನೆಯಿಂದಲೇ ಜೀವನ-ನಿರ್ವಾಹ ಮಾಡುತ್ತಿರುವುದು ನಿಜ. ವಯಸ್ಸಿನ ಹದಿನಾರನೆಯ ವರ್ಷದಲ್ಲಿಯೇ ಅಲ್ಲಿ ಬ್ರಾ-ಜಾಮೆಟ್ರಿಗಳಿಗೆ ಶರಣು ಹೊಡೆದು ಲೇಖನ ಕ್ಷೇತ್ರದಲ್ಲಿ ಪ್ರವೇಶಿಸಿದೆ. ೧೯೩೬-೩೭ರ ಕಾಲ. ಆಗ ಕನ್ನಡದಲ್ಲಿ ಕಥೆ ಬರೆಯುತ್ತಿದ್ದವರೂ ಕಡಮೆ. ಕಾದಂಬರಿಕಾರರ ಸಂಖ್ಯೆಯಂತೂ ಬೆರಳುಗಳಿಂದ ಎಣಿಸುವಷ್ಟಿದ್ದಿತು. ಇಂದಿನಂತೆ ಅಂದು ಲೇಖಕರಿಗೆ ಸಂಭಾವನೆಯೂ ಸಿಕ್ಕುತ್ತಿರಲಿಲ್ಲ. ಎಂತಲೇ, ಆರಂಭದಲ್ಲಿ ನಾನು ಪತ್ರಿಕೋದ್ಯಮದಲ್ಲಿ ದುಡಿಯುವುದು ಅನಿವಾರ್ಯವಾಯಿತು.

ಆಗ 'ಸಂಯುಕ್ತ-ಕರ್ನಾಟಕ' ಬೆಳಗಾವಿಯಿಂದ ಪ್ರಕಟವಾಗುತ್ತಿತ್ತು. ಶ್ರೀಗಳಾದ ಮೊಹರೆ ಮತ್ತು ಪುರೋಹಿತರ ಪರಿಚಯ ಮೊದಲಿನಿಂದಲೂ ಇತ್ತು.

ಸಂಪಾದಕೀಯ ವಿಭಾಗದಲ್ಲಿ ಕೆಲಸವನ್ನಾಶಿಸಿ ನಾನು ಮೊಹರೆಯವರ ಹತ್ತಿರ ಹೋದಾಗ, ಅವರು ನನ್ನ ವಯಸ್ಸನ್ನು ಗಮನಿಸಿ ನಗುನಗುತ್ತ ಹೇಳಿದರು:

"ಈಗಲೇ ಕೆಲಸಕ್ಕೆ ಸೇರೋದು ಬೇಡ. ನೀನಿನ್ನೂ ಓದಬೇಕು. ಮ್ಯಾಟ್ರಿಕ್ ಮುಗಿಸಬೇಕು."

"ಮ್ಯಾಥ್ಸ್ ಅಂದರೆ ನನಗೆ ತಲೆನೋವು. ಈ ಶಿಕ್ಷಣ ನನ್ನಿಂದ ಸಾಧ್ಯವಿಲ್ಲ. ಸುಮ್ಮನೆ ಸಮಯ ಹಾಳು"-ನಾನು.

"ನೋಡು. ಚೆನ್ನಾಗಿ ವಿಚಾರ ಮಾಡು. ದುಡುಕುವದು ಒಳ್ಳೆಯದಲ್ಲ" ಎಂದು ಮತ್ತೆ ಹೇಳಿದರು ಮೊಹರೆಯವರು.

"ಮ್ಯಾಟ್ರಿಕ್ ಮುಗಿಸುವದು ನನ್ನಿಂದ ಶಕ್ಯವೇ ಇಲ್ಲ. ಕಥೆ-ಕಾದಂಬರಿ ಬೇಕಾದಷ್ಟು ಬರೆಯಬಲ್ಲೆ"-ನಾನು.

"ನಿನಗೆ ವ್ಯವಹಾರಜ್ಞಾನವಿಲ್ಲ. ಕಥೆ-ಕಾದಂಬರಿಗಳಿಂದ ಹೊಟ್ಟೆ ತುಂಬುವದಿಲ್ಲ"-ಮೊಹರೆ.

"ಅದಕ್ಕೇ ಪತ್ರಿಕೆಯಲ್ಲಿ ಕೆಲಸ ಮಾಡೋದು, ಸಂಗಡವೇ ಕಥೆ ಕಾದಂಬರಿ ಬರೆಯೋದು"-ನಾನು.

"ಹಾಗಾದರೆ ನಿನ್ನ ಕರ್ಮ!" ಎಂದು ನಗುತ್ತಲೇ ನುಡಿದು, ಅವರು ಕೆಲಸಕ್ಕೆ ಸೇರಿಸಿಕೊಂಡರು.

ಸುಮಾರು ಹದಿನೆಂಟು ವರ್ಷಗಳ ತರುವಾಯ ಒಮ್ಮೆ ಹುಬ್ಬಳ್ಳಿಯಲ್ಲಿ ಭೆಟ್ಟಿಯಾದಾಗ ಮೊಹರೆಯವರು ಹೇಳಿದ್ದು ಹೀಗೆ:

"ನೀನು ಈ ಕ್ಷೇತ್ರವನ್ನಾರಿಸಿಕೊಂಡು ಒಳ್ಳೆಯದೇ ಮಾಡಿದೆ. ಮ್ಯಾಟ್ರಿಕ್ ಮುಗಿಸಿ ಬಿ. ಎ. ಯೋ ಎಂ.ಎ. ಯೋ ಆಗಿ ಅನೇಕರಂತೆ ಯಾವದಾದರೊಂದು ನೌಕರೀ ಮಾಡುತ್ತ ಇರುವ ಬದಲು ಕಾದಂಬರೀಕಾರನಾದದ್ದೇ ಉತ್ತಮವಾಯ್ತು."

"ಇಷ್ಟು ಕಾದಂಬರಿ ಹ್ಯಾಗಪ್ಪಾ ಬರೀತೀಯಾ? ವಿಷಯ ಎಲ್ಲಿಂದ ಸಿಗ್ತದ ಇವುಗಳಿಗೆಲ್ಲ?" ಎಂದು ಮೊಹರೆಯವರೇ ಒಮ್ಮೆ ಕೇಳಿದ್ದರು.

"ನಾನು ಸಾಯುವ ವರೆಗೆ ಬರೆದರೂ ಮುಗಿಯದಷ್ಟು ವಿಷಯ ಸಂಗ್ರಹವಿದೆಯಲ್ಲ? ನಾನು ತಿರುಗಿದ್ದೇನು ಕಡಿಮೆಯೆ?" ಎಂದು ಹೇಳಿದ್ದೆ.

ಕಾದಂಬರಿಕಾರನ ಮೂಲ ಬಂಡವಲು ಆತನ ಅನುಭವ. ನೂರಾರು ಊರು ಸುತ್ತಿ, ಸಾವಿರಾರು [illegible]. ಜೀವನದ ಸಹಸ್ರಮುಖಗಳ [illegible]ಂಚಯ ಮಾಡಿಕೊಂಡಾಗಲೆ,

ಕಾದಂಬರಿಯಲ್ಲಿ ವಾಸ್ತವತೆಯೂ ಜೀವಂತಿಕೆಯೂ ಎದ್ದು ಕಾಣುತ್ತದೆ. ನನ್ನ ಮೊದಲನೆಯ ಕಾದಂಬರಿ 'ಸ್ವಾತಂತ್ರ್ಯದೆಡೆಗೆ!' ಪ್ರಕಟವಾದದ್ದು ೧೯೪೬ರಲ್ಲಿ. ೧೯೪೨ರ ಚಳವಳಿಯಲ್ಲಿ ಭಾಗವಹಿಸಿ ಹಿಂಡಲಗಿ ಸೆರೆಮನೆಯಲ್ಲಿದ್ದಾಗಲೇ ಆ ಕಾದಂಬರಿಯ ಯೋಚನೆ ಸಿದ್ಧವಾಗಿತ್ತು. ಆದರೆ ಮುಂದಿನ ಮೂರು ನಾಲ್ಕು ವರ್ಷಗಳ ಕಾಲ ಪತ್ರಿಕೋದ್ಯಮದ ದುಡಿತವೇ ನನ್ನ ಸಮಯವನ್ನೆಲ್ಲ ನುಂಗುತಿದ್ದುದರಿಂದ ಕಾದಂಬರಿ ಬರೆಯಲು ಅನುಕೂಲವಾಗಿರಲಿಲ್ಲ. "ಉಷಾ"ದಿಂದ ನಿವೃತ್ತನಾಗಿ ನಾಲ್ಕಾರು ತಿಂಗಳು ಗದುಗಿನಲ್ಲಿದ್ದಾಗ 'ಸ್ವಾತಂತ್ರ್ಯದೆಡೆಗೆ' ಬರೆದು ಮುಗಿಸಿದೆ. ಮತ್ತೆ 'ಸ್ವತಂತ್ರ' ಪತ್ರಿಕೆಯ ಕೆಲಸದಲ್ಲಿ ತೊಡಗಿಕೊಂಡುದುದರಿಂದ ಆ ಕಾದಂಬರಿಯ ಎರಡನೆಯ ಭಾಗವನ್ನು ಬೇಗ ಬರೆಯಲಾಗಲಿಲ್ಲ. ಪತ್ರಿಕೆಗಳ ಸಹವಾಸ ತ್ಯಜಿಸಿ ಧಾರವಾಡಕ್ಕೆ ಬಂದು ಕುಳಿತಾಗಲೇ 'ಮಾಡಿ ಮಡಿದವರು' ರಚಿಸಲು ಶಕ್ಯವಾಯಿತು. ಆ ಕಾದಂಬರಿಗೆ ಲಭಿಸಿದ ಸ್ವಾಗತವೇ ನನ್ನನ್ನು ಪೂರ್ಣ ಸಮಯದ ಕಾದಂಬರಿಕಾರನನ್ನಾಗಿಸಿತು. ಕೂಲಿಕಾರ ಚಳವಳಿಯ ನನ್ನ ಅನುಭವಗಳನ್ನುಪಯೋಗಿಸಿಕೊಂಡು 'ಜ್ವಾಲಾಮುಖಿಯ ಮೇಲೆ!' ಬರೆದೆ. ಅನಂತರ ಒಂದಾದ ಮೇಲೊಂದರಂತೆ ವರ್ಷಕ್ಕೆ ಎರಡೋ ಮೂರೋ ಕಾದಂಬರಿ ರಚಿಸುತ್ತಲೇ ಇದೇನೆ.


ಕವಿತೆ. ಪ್ರಬಂಧ, ನಾಟಕ, ಚರಿತ್ರೆ ಇತ್ಯಾದಿಗಳನ್ನು ಬರೆಯದೆ ನಾನು ಕೇವಲ ಕಥೆ-ಕಾದಂಬರಿಗಳನ್ನೇ ಏಕೆ ಬರೆದೆ? ಎಂಬ ಪ್ರಶ್ನೆಯೊಂದು ಉದ್ಭವಿಸುತ್ತದೆ. ಇದಕ್ಕೆ ಸರಿಯಾದ ಸಮಾಧಾನ ಹೇಳುವುದು ಕಠಿಣ. ಇದು ಏನಿದ್ದರೂ ಒಬ್ಬೊಬ್ಬ ಬರಹಗಾರನ ಸ್ವಭಾವಕ್ಕೆ ಸಂಬಂಧಪಟ್ಟ ವಿಷಯ. ಕವಿತೆ-ಕಥೆ-ಕಾದಂಬರಿ-ಚರಿತ್ರೆ—ನಾಟಕ—ಪ್ರಬಂಧ—ವಿಮರ್ಶೆ ಇತ್ಯಾದಿ ಎಲ್ಲ ಬಗೆಯ ವಾಙ್ಮಯವನ್ನು ರಚಿಸಿದವರು ನಮ್ಮಲ್ಲಿಯೂ ಇದ್ದಾರೆ. ಪೂರ್ವ ಯೌವನದ ದಿನಗಳಲ್ಲಿ ನಾನೂ ಕವಿತೆಗಳನ್ನು ಬರೆಯುತ್ತಿದ್ದೆ. ಆದರೆ ಅದೇಕೋ ತಿಳಿಯದು--- ನನ್ನ ಕವಿತೆ ನನಗೇ ತೃಪ್ತಿ ನೀಡಲಿಲ್ಲ. ಎಂತಲೇ, ಅದುವರೆಗೆ ಬರೆದಿದ್ದ ನೂರಾರು ಕವಿತೆಗಳೆಲ್ಲವನ್ನೂ ಒಂದು ದಿನ ನಿಷ್ಕರುಣೆಯಿಂದ ಹರಿದು ಹಾಕಿ ಚಹ ಕಾಫಿ ಕುಡಿದುದಾಯಿತು! ಕಥೆ-ಕಾದಂಬರಿಗಳ ರಚನೆಯಲ್ಲಿ ಮಾತ್ರ ನಾನು ಸುಖವನ್ನೂ ಸಮಾಧಾನವನ್ನೂ ಪಡೆದಿದ್ದೇನೆ. ಇನ್ನು ಪ್ರಬಂಧ ನಾಟಕ ಇತ್ಯಾದಿಗಳ ಬಗೆಗೆ ಹೇಳುವುದಾದರೆ ಅವುಗಳಲ್ಲಿ ನನಗೆ ಒಲವೇ ಇಲ್ಲ. ಅನ್ಯರ ಒತ್ತಾಯಕ್ಕಾಗಿ ನಾನು ಏನನ್ನೂ ಬರೆಯಲಾರೆ. ಕಾಟಾಚಾರಕ್ಕಾಗಿ ಬರೆದುದಾವುದೂ ಒಳ್ಳೆಯ ಸಾಹಿತ್ಯಕೃತಿಯಾಗುವುದಿಲ್ಲ. ನಮಗೆ ಯಾವುದರಲ್ಲಿ ಸಹಜವಾದ ಒಲವು. ಗತಿ ಇರುವುದೋ ಅದನ್ನೇ ನಾವು ಮಾಡಬೇಕು. ಸಣ್ಣ ಕಥೆ ಮತ್ತು ಕಾದಂಬರಿಗಳ ಬಗೆಗೆ ನನಗೆ ಮೊದಲಿನಿಂದಲೂ ಇಂಥ ಒಲವು ಬೆಳೆದು ಬಂದಿದೆ. ಎಂತಲೇ ನಾನು ಈ ಎರಡು ವಿಭಾಗಗಳಲ್ಲಿಯೇ ಹೆಚ್ಚಾಗಿ ಕೆಲಸ ಮಾಡುತ್ತಲಿದ್ದೇನೆ. ನಾನು ಬರೆದುದೆಲ್ಲವೂ ಸರ್ವಶ್ರೇಷ್ಠ, ಶಾಶ್ವತವಾಗಿ ಉಳಿಯತಕ್ಕ ಸಾಹಿತ್ಯ ಎಂಬ ಭ್ರಾಂತಿಯೇನೂ ನನಗಿಲ್ಲ. ಕಥೆ-ಕಾದಂಬರಿಗಳ ರಚನೆಯಿಂದ ನನ್ನ ಮನಸ್ಸಿಗೆ ಶಾಂತಿಯೂ ತೃಪ್ತಿಯೂ ಲಭಿಸುತ್ತಿದೆ; ಅವುಗಳನ್ನೋದುವ ಹಲವರಿಗಾದರೂ ಸಂತೋಷವುಂಟಾಗುತ್ತಿದೆ. ನನಗೆ ಇಷ್ಟು ಸಾಕು. ಹೆಚ್ಚಿನದೇನನ್ನೂ ನಾನು ಅಪೇಕ್ಷಿಸುವುದಿಲ್ಲ.

ಕವಿತೆಯ ವ್ಯಾಖ್ಯೆ



ಮನದನ್ನೆ, ಕವಿತೆ ಎಂಬುದು ನಿನ್ನ ಒಲವು.
ನಿತ್ಯವೂ ಮುತ್ತು ಕೊಟ್ಟರೆ ಕವಿಗೆ ಗೆಲವು.
ನೀನು ಮುನಿದರೆ, ನಲ್ಲೆ, ಅದು ಮಹಾಕಾವ್ಯ.
ಒಮ್ಮೊಮ್ಮೆ ಮೂಲ ಭಾರತದಷ್ಟು ಭವ್ಯ.

—ದಿನಕರ ದೇಸಾಯಿ



ನೀನಿಲ್ಲದ ಒಂಟಿತನದ
ಕ್ರಂದನದಲಿ
ಇರುಳೆಲ್ಲ ಕೊರಗಿ
ಬೆಳಗು ಹರಿಯುತಿದೆ!
ನೀನು ಬೇಕೆಂಬ
ಲವಲವಿಕೆ
ಅಳುತಿದ ಈ ಪ್ರಾಣದಿ!

ನೆನಪು ಮೊಗ್ಗುಗಳನ್ನು
ಒಂದೆಡೆಗೆ ಸೇರಿಸುತ
ನಿನಗೊಂದು ಮಾಲೆಯನು
ಹೆಣೆವ ತವಕ, ನನ್ನ ಮನಕೆ!
ನಿನ್ನ ಶ್ರೀಮುಡಿಯಲ್ಲಿ
ಈ ಮಾಲೆಯನು ಮುಡಿಯೆ
ನೀ ಬರುವೆಯೆಂದು?
ನೀ ಬರುವ ದಾರಿಯಲಿ
ಹೂ ಹರಡಿ ಹಾಸಿ
ಪನ್ನೀರ ಚಳಿ ತಟ್ಟ
ಕಾಯ್ವೆ ನಿನಗಾಗಿ!

—ಪಂಚಾಕ್ಷರಿ ಹಿರೇಮಠ

ನಾನು ಕಾದಂಬರಿಗಳನ್ನೇ ಹೆಚ್ಚಾಗಿ ಏಕೆ ಬರೆದೆ?

ನಿರಂಜನ

"ನಮ್ಮ ದೀಪಾವಳಿ ಸಂಚಿಕೆಗಾಗಿ 'ನಾನು ಕಾದಂಬರಿಗಳನ್ನೇ ಏಕೆ ಬರೆದೆ?' ಎಂಬ ವಿಷಯವಾಗಿ ಆತ್ಮವಿಮರ್ಶಾತ್ಮಕವಾದ ಲೇಖನವೊಂದನ್ನು ಬರೆದು ಕಳಿಸಬೇಕು."

— ಇದು 'ಕರ್ಮವೀರ' ಸಂಪಾದಕರ ಅಜ್ಞಪ್ತಿ.

ಅದಕ್ಕೆ ನನ್ನ ಮೊದಲ ಪ್ರತಿಕ್ರಿಯೆ: 'ಈ ಕುತ್ತಿನಿಂದ ಪಾರಾಗಬೇಕು'!

ಒಂದು ಕಾದಂಬರಿ ಕೊಡಿ, ಎಂದಿದ್ದರೆ ಬರೆದು ಮುಗಿಸಬಹುದಾಗಿತ್ತು. ಕತೆ ಬೇಕಿದ್ದರೂ ಬರೆಯಬಹುದಿತ್ತು. 'ಯಾವುದಾದರೊಂದು ಲೇಖನ' ಎಂದಿದ್ದರೆ ಸಂತೋಷದಿಂದ ಒಪ್ಪಬಹುದಾಗಿತ್ತು. ಆದರೆ ಇವರು ವಿಷಯ ಸೂಚಿಸಿ ಬರಹ ಕೇಳುವ ಮೇಲ್ಪಟ್ಟದ ಸಂಪಾದಕರು ಅಲ್ಲದೆ, ಆತ್ಮೀಯತೆಯ ಬಲೆ ಬೀಸುವ ದಕ್ಷ ಬೆಸ ರು

ಬೇರೆ ದಾರಿ ಕಾಣದೆ, 'ಆಗಲಿ' ಎಂದು ಉತ್ತರ ವಿತ್ತೆ

ಕಾಗದವನ್ನು ಅಂಚೆಗೆ ಸೇರಿಸಿ ನಿದ್ದೆ ಹೋದೆ.

ಸಂಪಾದಕರ ಅಲಾರಂ ಗಡಿಯಾರ ಕೆಟ್ಟು ಹೋಗಿದ್ದಂತೆ ಕ್ಯಾಲೆಂಡರಿನ ಕಡೆಗೆ ಬೊಟ್ಟು ಮಾಡಿ 'ಗೆದ್ದೆ' ಎಂದು ನಾನು ನಕ್ಕಂತೆ ಕನಸು.

ಆದರೆ ಅದು ಕನಸು

ನೂರಾರು ಕರ್ಮಾಗಾರಗಳನ್ನು ಏಕಕಾಲದಲ್ಲಿಯೇ ನಡೆಸುವ ದಕ್ಷ ಮೇಸ್ತ್ರಿ ಎಂಬ ಹೆಗ್ಗಳಿಕೆ ಸಂಪಾದಕರದು. ಬುಟ್ಟಿಗೆ ನಾವು ಬೀಳಲೇಬೇಕು.

*

ಬರೆಯಲು ನಿರ್ಧರಿಸಿ, ಸಂಪಾದಕರ ಆಜ್ಞಾಪತ್ರವನ್ನು ಹುಡುಕಿ ತೆಗೆದು, ಮತ್ತೊಮ್ಮೆ ಓದಿದೆ.

'ನಾನು ಕಾದಂಬರಿಗಳನ್ನೇ ಏಕೆ ಬರೆದೆ?'

ನನ್ನ ಮಟ್ಟಿಗೆ ಇದು ಸರಿಯಲ್ಲವೆನಿಸಿತು. ಶಾಲದಲ್ಲಿ ಮೊಟ್ಟಮೊದಲ ನನ್ನ ಕೃತಿ ಕತೆಯಾದರೂ ನಾನು ಕವಿತೆ ಬರೆದದ್ದೂ ಉಂಟು.

[ಆಳವಾದ ನದಿ. ದಂಡೆಯಲ್ಲಿನ ತೆಂಗಿನಮರಕ್ಕೆ ಬಲವಾಗಿ ಬಿಗಿದು ಕಟ್ಟಿ ನದಿಯಲ್ಲಿ ತೇಲ ಬಿಟ್ಟದ್ದ ದೋಣಿ, ಅದರಲ್ಲಿ ನಾನು. ಒಬ್ಬನೇ. ಈಸು ಬರದು. ಶಾಲೆಗೆ ಅದು ಶನಿವಾರದ ರಜೆಯೋ, ಭಾನುವಾರದ್ದೋ ಇರಬೇಕು. ಟಿಪ್ಪಣಿ ಪುಸ್ತಕ ಕೈಯಲ್ಲಿ ಹಿಡಿದು, ಬರಿದು ಹಾಳೆಯನ್ನು ತೆರೆದಿಟ್ಟು, ಪೆನ್ಸಿಲಲ್ಲಿ ನಾನು ಬರೆಯಲು ಹೊರಟೆ. ಸುತ್ತು ಮುತ್ತಲ ಪ್ರಕೃತಿಯಿಂದ ಮಂತ್ರಮುಗ್ಧನಾದಂತೆ ಭಾವಿಸಿಕೊಂಡು, ಕವಿತೆ ರಚಿಸಿದೆ, ಅದು ಕೆಲವೇ ದಿನಗಳಲ್ಲಿ ಒಂದು ಪತ್ರಿಕೆಯಲ್ಲಿ ಅಚ್ಚಾಯಿತು. ಆಮೇಲೆ ನಾನು ನೆಲದ ಮೇಲೆ ನಡೆದುದೂ ಇಲ್ಲ, ನೀರಿನಲ್ಲಿ ತೇಲಿದುದೂ ಇಲ್ಲ. ರೆಕ್ಕೆಗಳು ಹುಟ್ಟಿದ್ದುವು ಹಾರಿದ್ದೇ ಹಾರಿದ್ದು.]

ಗದ್ಯಂ ಹೃದ್ಯಂ ಎಂದ ಮುದ್ದಣನ ಪ್ರಭಾವವೆಂದು ತೋರುತ್ತದೆ. ಅಥವಾ ಆನಂದಮಠದಿಂದ ಮೊದಲಾಗಿ ನಾನು ಓದುತ್ತಿದ್ದ ಕಾದಂಬರಿಗಳ, ಪತ್ರಿಕೆಗಳಲ್ಲಿನ ವಾರದ ಕತೆಗಳ, 'ಗೋರಾ' ಮೊದಲ್ಗೊಂಡು ಇಂಗ್ಲಿಷಿನಲ್ಲಿ ನಾನು ಓದಿದ ಗದ್ಯಕೃತಿಗಳ ಪರಿಣಾಮವಿರಬಹುದು. ಪ್ರಶಾಂತ ಕಾವ್ಯೋದ್ಯಾನದಿಂದ ಸದ್ದುಗದ್ದಲಗಳ ಮಾಯಾಬಜಾರಿಗೆ ಮರಳಿದೆ.

ನನ್ನ ಅಭಿಪ್ರಾಯದಲ್ಲಿ ಎಂಟೆದೆ ಇರಬೇಕಾದುದು ವಿಮರ್ಶಕನಿಗಲ್ಲ, ಬರೆಯುವವನಿಗೇ. [ಕ್ಷಮಿಸಿ ಬರೆಯುವವನಲ್ಲದೆ ಪ್ರಕಾಶಕನಿಗೂ–ಸಂಪಾದಕನಿಗೂ–ಅಷ್ಟೆದೆ ಬೇಕು] ಸ್ಮರಿಸಿಕೊಂಡರೆ ನಗುಬರುತ್ತದೆ. ಒಂದೇ ಸಮನೆ ಬರೆದು ಕಳುಹಿಸುತ್ತಿದ್ದ ಕತೆಗಳೆಲ್ಲ ಅಚ್ಚಾದುವಲ್ಲ? ಕಗ್ಗ–ಖಂಡಿತ ಕಗ್ಗ. ಅಚ್ಚಾದ ಆ ಪ್ರತಿಗಳೊಂದು ನನಲ್ಲಿ ಈಗ ಇಲ್ಲವೆಂದು ಸರಾಗವಾಗಿ ಉಸಿರಾಡುತ್ತೇನೆ ಆದರೂ ಅಂದಿನ ಸಂಪಾದಕರಿಗೆ ಕೃತಜ್ಞತೆ ಸಲ್ಲಿಸಬೇಕು ಎನಿಸುತ್ತದೆ. ಹಾಗೆ ಅವರು ಮುದ್ರಿಸದೇ ಇದ್ದಿದ್ದರೆ ಬರೆಯುವ ಚಟ ನನಗೆ ಅಂಟುತ್ತಿತ್ತೋ ಇಲ್ಲವೋ.

*

ಕತೆಗಾರ ಎನಿಸಿಕೊಂಡಿದ್ದ ವೇಳೆ ಬೇರೆ ಬೇರೆ ಕಾಲಾವಧಿಯಲ್ಲಿ, ಬೇರೆ ಬೇರೆ ಹೆಸರುಗಳು ನನಗಿದ್ದುವು. ಕಿಶೋರ, ಕು. ಶಿ. ರಾ, 'ಕತೆಗಾರ', ಶಿ. ರಾ ಕುಳುಕುಂದ, ಕುಳುಕುಂದ ಶಿವರಾಯ, ನಿರಂಜನ

ಕತೆಗಾರ, ಕಾದಂಬರಿಕಾರನಾದದ್ದು ನಿರಂಜನ ನಾಮಧೇಯ ಸ್ಥಿರವಾದ ಬಳಿಕ.

ಈ ಮಧ್ಯೆ ಸಣ್ಣಪುಟ್ಟ ನಾಟಕಗಳನ್ನೂ ರಚಿಸಿದ್ದೆ. ಕಮ್ಯೂನಿಸ್ಟ್ ವಿಶೇಷಣ ಕಳಚಿ ಬೀಳುವ ಹೊತ್ತಿಗೆ ಕಾಲಮಿಸ್ಟ್ ಆಗಿದ್ದೆ

ಹೀಗೆ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳ ಬಗೆಗೆ ಒಲವು ತೋರುತ್ತ ಬಂದಿರುವುದರಿಂದ, ಕಾದಂಬರಿಕಾರ ಮಾತ್ರ, ಎಂದು ಹೇಗೆನ್ನಲಿ? 'ನಾನು ಕಾದಂಬರಿಗಳನ್ನೇ ಏಕೆ ಬರೆದೆ?' ಎಂಬ ತಲೆಕಟ್ಟು ನನಗೆ ತುಸು ಭಾರವಾಗಲು ಇದೇ ಕಾರಣ. ಒಂದಿಷ್ಟು ಸ್ವಾತಂತ್ರ್ಯವಹಿಸಿ 'ನಾನು ಕಾದಂಬರಿಗಳನ್ನೇ ಹೆಚ್ಚಾಗಿ ಏಕೆ ಬರೆದೆ?' ಎಂದು ಈ ಲೇಖನದ ಶಿರೋನಾಮೆಯನ್ನು ಬದಲಿಸಿದ್ದೇನೆ।

ನನ್ನ ಐವತ್ತಕ್ಕೂ ಹೆಚ್ಚು ಪುಸ್ತಕಗಳಲ್ಲಿ ನಿಚ್ಚಳ ಬಹುಮತವಿರುವುದು ಕಾದಂಬರಿಗೆ. ಅರ್ಥಕ್ಕೆಂತಲೂ ಹೆಚ್ಚು ಸ್ಥಾನ ಅವುಗಳಿಗೇ. ಕಾದಂಬರಿಯದೇ ಮಂತ್ರಿಮಂಡಲ, ಉಳಿದವರು ವಿರೋಧ ಪಕ್ಷಗಳು, ಹೌದು, ವಿರೋಧ ಪಕ್ಷಗಳು

ಸಾಹಿತ್ಯರಾಜ್ಯದಲ್ಲಿ ಸುಭದ್ರ ಸರಕಾರ ರಚಿಸುವ ಸಾಮರ್ಥ್ಯವಿರುವುದು ಕಾದಂಬರಿಗೆ ಮಾತ್ರ. ಬಹ್ವಂಶ ಜನಸಮುದಾಯದ ಬೆಂಬಲ ಅದಕ್ಕೇ. ಉಳಿದ ಪಕ್ಷಗಳಿಗೆ ಬುದ್ಧಿಮತ್ತೆ ಇರಬಹುದು,

ಕಿಸು ಅಶಿಸ್ತುಕಟ್ಟುತನ ಇರಬಹುದು. ಆದರೆ, ರಾಜಕಾರಣಿಗಳಲು ಬೇಕಾದ ಬಹುಮತ ಮಾತ್ರ ಅವುಗಳಿಗಿಲ್ಲ.

ಭದ್ರತೆಯನ್ನು ಬಯಸಿ ಕಾದಂಬರಿಯ ಪಕ್ಷವನ್ನು ನಾನು ಸೇರಿದೆ ಎನ್ನಲೆ? ಇದು ಅರ್ಧ ಸತ್ಯ ಮಾತ್ರ.

ಉಳಿದರ್ಧ ಯಾವುದು?

*

ಯಾವುದು?

ಕೊಳದಲ್ಲಿ ನದಿಯಲ್ಲಿ ಈಜಿದವನಿಗೆ ಸಮುದ್ರಸ್ನಾನ ಯಾವಾಗಲೂ ಆಕರ್ಷಣೆಯ ಕೇಂದ್ರವೇ. ಪ್ರಪ್ರಥಮದಲ್ಲೇ ತೆರೆಗೆ ಮೈಯೊಡ್ಡುವವರು ಇರಬಹುದು ಅವರ ಸಂಖ್ಯೆ ಸಣ್ಣದು. ನಾನು ಸಮುದ್ರವಿಹಾರವನು ಮೊದಲಿನಿಂದಲೇ ಗುರಿಯಾಗಿಟ್ಟುಕೊಂಡವನು ನನ್ನ ಪಾಲಿಗೆ ಇತರ ಈಸಾಟಗಳು ಸಿದ್ಧತೆ. ನಾಳೆ ಕಾದಂಬರಿ ಆರಂಭಿಸಬೇಕು ಎಂದು ನಾನು ನಿರ್ಧರಿಸಿದ ಇವತ್ತುಗಳು ಬಹಳ. ನನಗೆ ಆತಂಕವಾಗಿದ್ದುದೊಂದೇ–ಬರೆಹಾನ್ನದ ತಳಮಳ. ದೀರ್ಘಕಾಲ ಕಾದಂಬರಿಯೊಂದನ್ನೇ ನಾನು ಬರೆಯುತ್ತ ಕುಳಿತು ತುಕಿನ ಚೇಲ ತೂತಾದರೆ?

ಇನು ತಡಯಬೇಕಾದುದಿಲ್ಲ ಎನ್ನುವಂತೆ ಒಂದು ಅವಕಾಶ ಹದಿಮೂರು ವರ್ಷಗಳಿಗೆ ಹಿಂದೆ ನನಗೆ ದೊರೆಯಿತು. ನಡೆಯುತ್ತಿದ್ದಾಗ ಕಾಲು ಜಾರಿ ಬಿದ್ದು ಬೀಳುವುದನ್ನು ತಪ್ಪಿಸಲೆಂದು ನೆಲಕ್ಕೆ ಊರಿದ ಬಲಗೈ ಮುರಿದು, ಅಸಹಾಯನಾದೆ.

ಪ್ಲಾಸ್ಟರ್ ಹಾಕಿದ ಬರೆಯುವ ಕೈ ಆರುವಾರವೋ; ಮೂರು ತಿಂಗಳೊ–ಗುಣವಾಗಲು.

ಎಳೆಯ ಮಿತ್ರನೊಬ್ಬನನ್ನು ದಿನವೂ ಬೆಳಗ್ಗೆ ಸ್ವಲ್ಪ ಹೊತ್ತು ಬರುವಂತೆ ಕೇಳಿಕೊಂಡೆ. ನನ್ನ ಪಾಲಿನ ವಿನಾಯಕ ಆತ. ಉಕ್ತಲೇಖನ ಆರಂಭವಾದುದು ಮಂಗಳವಾರ. ದಿನವೂ ಇಷ್ಟಿಷ್ಟು. ಕಾದಂಬರಿ ಬೆಳೆಯಿತು. ಅದು 'ವಿಮೋಚನೆ.'

ಕೂಡಿ ಬಂತು–ಎನುತ್ತಾರಲ್ಲ ಹಾಗೆ. ನನ್ನ ಮಿತ್ರರಾದ ಚಿಂತಾಮಣಿ, 'ವಿಮೋಚನೆ'ಯನ್ನು ನಾನು ಮುಗಿಸುವ ವೇಳೆಗೆ ಹೊಸ ಉದ್ಯಮವೊಂದನ್ನು ಆರಂಭಿಸಿದ್ದರು. ಅದು ಕೈಹೊತ್ತಗೆಗಳ ಪ್ರಕಟಣೆ. ಕನ್ನಡದ ಪ್ರಖ್ಯಾತ ಕಾದಂಬರಿಕಾರ ಅನಕೃರವರ 'ಗೃಹಲಕ್ಷ್ಮಿ' ಅವರ ಮೊದಲನೆಯ ಬಿಡುಗಡೆ. ಹೊಚ್ಚ ಹೊಸ ಕಾದಂಬರಿಕಾರನಾದ ನನ್ನ 'ವಿಮೋಚನೆ' ಎರಡನೆಯದು.

ಅದರ 'ಮುನ್ನುಡಿ'ಯಲ್ಲಿ ನಾನು ಬರೆಯಬೇಕಾದ ಕಾದಂಬರಿಗಳು ಇನ್ನೂ ಎಷ್ಟೋ ಇವೆ; ನನಗಿನ್ನೂ ಮೂವತ್ತು ದಾಟಿಲ್ಲ–ಎಂದೇನೋ ಹೇಳಿಕೊಂಡಿದ್ದೆ. ಯೌವನದ ಜಂಭ. ಅಪರಿಚಿತ ವಿಮರ್ಶಕರೊಬ್ಬರು, "ಈ ಕಾದಂಬರಿಯನ್ನೋದಿದಾಗ ಇವರಿಗೆ ಮೂವತ್ತು ದಾಟಿಲ್ಲವೆಂಬುದು ಸ್ಪಷ್ಟವಾಗುತ್ತದೆ" ಎಂದರು. ಪರಿಚಿತ ವಿಮರ್ಶಕರೊಬ್ಬರು, "ಇವರು ಕಾದಂಬರಿಕಾರರಾಗುತ್ತಾರೋ ಇಲ್ಲವೋ ಈಗಲೇ ಹೇಳುವಂತಿಲ್ಲ" ಎಂದರು. ವಿಮರ್ಶೆಗಳೆಂದರೆ ನನಗೆ ಯಾವಾಗಲೂ ಖುಷಿ. ಅದರಲ್ಲಿ ನವರಸಗಳಿದ್ದರಂತೂ ಎಲ್ಲಿಲ್ಲದ ಸಂತೋಷ.

'ಬನಶಂಕರಿ'ಯನು ಬರೆದೆ.

ಜನ ಓದಿದ ಮೆಚ್ಚಿದ ರೀತಿ ನನ ಪಾಲಿಗೆ ಮಾದಕ ಪಾನೀಯವಾಯಿತು.

'ಅಭಯ' 'ರಂಗಮ್ಮನ ವಠಾರ' 'ಚಿರಸ್ಮರಣೆ'–ಹೀಗೆಯೇ ಬರೆಯುತ ಹೋದೆ...

ಕಥಾ ಸಂಕಲನ ಕೊಡುತ್ತೇನೆ ಎಂದಿದ್ದಾಗ, ಮುಖದ ಅಂದ ಕೆಡಿಸಿಕೊಂಡಿದ್ದವರು ಈಗ 'ನಮಗೂ ಒಂದು ಕಾದಂಬರಿ ಕೊಡಿ' ಎಂದರು. ಪ್ರತಿಫಲವಾಗಿ ಹಣವನ್ನೂ ಕೊಟ್ಟರು.

ಜನಪ್ರಿಯತೆ ತಲೆಗೆ ಅಡರಿತು ಎನ್ನಲೆ? ಇದ್ದೀತು ಇದ್ದೀತು.

*

ಭಾಷಣಗಳಿಗೆ ಒಪ್ಪಿಕೊಂಡಾಗ ಆಹ್ವಾನ ಪತ್ರಗಳಲ್ಲಿ 'ಸುಪ್ರಸಿದ್ಧ ಕಾದಂಬರಿಕಾರ...' ಎಂಬ ಒಕ್ಕಣೆ, ಸ್ವಾಗತ ಭಾಷಣಗಳಲ್ಲಿ ಕೃತಿಗಳ ನಾಮೋಚ್ಚಾರಣೆ–ಇವೆಲ್ಲ ನಾನು ಕಾದಂಬರಿಯ ಪಕ್ಷದವನೆಂಬುದನ್ನು ಸಾರಿ ಹೇಳಿದುವು.

ಒಳ್ಳೆಯ ಕತೆಗಳನ್ನು ಬರೆಯಬೇಕು, ಎನಿಸುತ್ತಿತ್ತು. ನಾಟಕಕ್ಕಿಂತ ಮಿಗಿಲಾದುದಿಲ್ಲ–ಎಂಬ ನಂಬುಗೆ ಮತ್ತೆ ಮತ್ತೆ ನನ್ನನು ಚುಚ್ಚುತ್ತಿತ್ತು. ನನ್ನನ್ನು ಬಿಡ್ಬೇ ಬಿಟ್ಟೆಯಲ್ಲ, ಎಂದು ಮುನಿಸು ತೋರುತ್ತಿತ್ತು ವಿಮರ್ಶೆ.

ಆದರೆ ಕಾದಂಬರಿಯ ಅಪ್ಪುಗೆಯಿಂದ ಮುಕ್ತಿ ಸಾಧ್ಯವೆಂದು ನನಗೆ ಒಮ್ಮೆಯೂ ತೋರಲಿಲ್ಲ.

*

ಅಂಗಳ ಚಿಕ್ಕದು. ಇಲ್ಲಿ ನರ್ತಿಸಲಾರೆ–ಎನ್ನುವಂತಿಲ್ಲ. ಕಾದಂಬರಿ ಬಯಲು. ಅದರ ವಿಸ್ತಾರಕ್ಕೆ ನಾನು ಶರಣು. ವ್ಯಕ್ತಿಗಳನ್ನು ಘಟನೆಗಳನ್ನು ಬದುಕನ್ನು ದೊಡ್ಡ ಪ್ರಮಾಣದಲ್ಲಿ ಸೃಷ್ಟಿಸಲು ಕಾದಂಬರಿಯೊಂದೇ ಮಾಧ್ಯಮ.

ಆದಕ್ಕೇ ಪಶ್ಚಿಮದವರೆನ್ನುತ್ತಾರೆ: ಆಧುನಿಕ ಸಾಹಿತ್ಯದಲ್ಲಿ classic ಎನಿಸುವುದು ಕಾವ್ಯವಲ್ಲ, ನಾವೆಲ್ಲು.


*

ಕಾದಂಬರಿಗಳನ್ನೇ ನಾನು ಹೆಚ್ಚಾಗಿ ಬರೆದೆ. ಬರೆಯಬೇಕಾದುದು ಇನ್ನೂ ಎಷ್ಟೋ ಇವೆ. ದುಡ್ಡಿಗೋಸ್ಕರ ಅಲ್ಲ; ಸೃಷ್ಟಿಯ ಸಂತೋಷಕ್ಕೋಸ್ಕರ, ಕೃತಿಯನ್ನು ಜನ ಓದುವುದರಿಂದ ಬರೆಯುವವನಿಗೆ ಆಗುವ ಆನಂದಕ್ಕೋಸ್ಕರ.

ಸಮುದ್ರಸ್ನಾನವಾದ ಮೇಲೆ ನದಿಯ ಕೊಳ್ಳದಲ್ಲಿ ಈಸಾಡದೆ ಇರುತ್ತಾರೆಯೆ?

ಬಹುಮತಪಕ್ಷದವನಾದರೂ ಇತರ ಪಕ್ಷಗಳೊಡನೆಯೂ ಸಂಪರ್ಕ ಹೊಂದುವ ಆಸೆ ನನಗೆ.

ಕಾದಂಬರಿ ಅಸೂಯೆ ಪಡುವಳೆಂಬುದನ್ನು ಬಲ್ಲೆ. ಆದರೆ ಒಲುವಿನಲ್ಲಿ ಒಂದಿಷ್ಟು ಉಳಿದವರಿಗೂ ನಾನು ಕೊಡಬೇಕು. ಅದರ ಬಹುಭಾಗ ಮಾತ್ರ ಕಾದಂಬರಿಗೇ.



ವ್ಯಾಸರಾಯ ಬಲ್ಲಾಳ

'ಲಿಫ್ಟ್'ನಲ್ಲಿ ಮೇಲೇರುತ್ತಿದ್ದಂತೆಯೇ, ದಾಮೋದರರಾಯರು ಅಭ್ಯಾಸಬಲದಿಂದೆಂಬಂತೆ ತನ್ನ ಕಿಸೆಗೆ ಕೈಹಾಕಿ, ಮಂದಾ ತುರುಕಿಸಿದ್ದ ತುಂಡು ಕಾಗದವನ್ನು ಹೊರತೆಗೆದರು. ಆಕೆ ಬರೆದಿದ್ದುದಿಷ್ಟೆ: 'ನಾಲ್ಕು-ಏಯರ್ ಲೆಟರ್ ಫಾರ್ಮ್ಸ್.' ತನಗೆ ಬೇಕೆನಿಸಿದ ಅಥವಾ ಅಗತ್ಯವಿದ್ದ ವಸ್ತುವನ್ನು ತಂದೆ ಆಫೀಸಿನಿಂದ ಮರಳುವಾಗ ಮರೆಯದೆ ತರಬೇಕೆಂದು ಮಂದಾ ಆಗಾಗ ಕೊಡುತ್ತಿದ್ದ ನೆನಪಿನ ಚೀಟಿ. ಬಾಲ್ಯದ ಚಟ ಅಂಟಿಕೊಂಡಿತ್ತು. ಮೊದಲು ಚಾಕಲೇಟ್, ಆಟದ ಸಾಮಾನು, ಬಣ್ಣದ ರಿಬ್ಬನ್, ಗೊಂಬೆ, ಶಾಲೆಯ ಪುಸ್ತಕ... ಈಗ ಇಪ್ಪತ್ತನಾಲ್ಕರ ಯುವತಿಯನ್ನೂ ಈ ಚಟ ಬಿಟ್ಟಿರಲಿಲ್ಲ-'ನಾಲ್ಕು ಏಯರ್ ಲೆಟರ್ ಫಾರ್ಮ್ಸ್'.

'ಬಾಯಿಮಾತು ಸಾಲದೇನಮ್ಮಾ, ನೆನಪಿನ ಚೀಟಿ ಬೇಕೇ? ಅಷ್ಟು ಮುದುಕನಾದೆನೆ ನಾನು?' ಎಂದು ತನ್ನ ಬಕ್ಕತಲೆಯನ್ನು ಸವರಿಕೊಳ್ಳುತ್ತ, ನಗುತ್ತಲೇ ದಾಮೋದರರಾಯರು ಮಗಳೊಡನೆ ಹೇಳಿದ್ದರು.

'ನೀನು ಮುದುಕನಾಗಿಲ್ಲಪ್ಪ...ಆದರೆ ನೆನಪು ಯಾವಾಗಲೂ ಚಂಚಲ ಪ್ರಾಣಿ... ಕ್ಷಣದಿಂದ ಕ್ಷಣಕ್ಕೆ ಸಾಯುವುದರಲ್ಲೆ ಅದಕ್ಕೆ ತೃಪ್ತಿ. ಹಾಗಾಗದಂತೆ ಈ ಸಾಕ್ಷಿ.'

ಮಂದಾ ತಲೆ ತಗ್ಗಿಸಿಯೆ ಆ ಮಾತು ಆಡಿದ್ದಳು. ಮನಸ್ಸಿಗೆ ಅಪ್ರಿಯವೆನಿಸಿದ ಮಾತು ಆಡುವ ಸಂದರ್ಭ ಬಂದಾಗಲೆಲ್ಲ ಆಕೆ ನೇರ ನೋಡುತ್ತಿದ್ದುದೆಂದೂ ಇಲ್ಲ.

ಮನೋವಿಜ್ಞಾನದಲ್ಲಿ ಪದವೀಧರೆ. ಆದರೆ ಆ ಮಾತು ಆಡುವಾಗ ಮಗಳ ಕಣ್ಣಂಚಿನಲ್ಲಿ ಹನಿಯಿತ್ತೇ ಎಂಬ ಸಂದೇಹ ದಾಮೋದರರಾಯರಿಗೆ ಬಾರದಿರಲಿಲ್ಲ.

'ಚಿಯರ್ ಅಪ್' ಎಂದಿದ್ದರು ಅವರು. 'ಇವೊತ್ತು ಖಂಡಿತ ಕಾಗದ ಬರಲೇಬೇಕು.' ಮನಸ್ಸಿನ ಆಗ್ರಹ ಆಸೆಯ ಮಾತನ್ನು ಪ್ರಕಟಿಸಿದ್ದು ಆ ರೀತಿ. ಆದರೆ ಕಾಗದಕ್ಕಾಗಿ ಕಾಯುವಿಕೆ ತಂದ ಅತೃಪ್ತಿ ಕುದುರಿಸಿದ ಭೀತಿ ಬೆಳೆಯುತ್ತಲೇ ಇದ್ದುದರಿಂದ. ಕಾಗದ ಬಂದೀತೆಂಬ ಧೈರ್ಯವಿರಲಿಲ್ಲ. ಹೆಂಡತಿ ತಂದ ಕಾಫಿ ತುಂಬಿದ ಥರ್ಮಾಸ್ ಹಿಡಿದುಕೊಂಡು ಮನೆಬಿಟ್ಟು ಹೊರಗೆ ಬಂದು ಕಾರು ಹೊರಡಿಸಿ 'ಸ್ಟಿಯರಿಂಗ್ ವೀಲ್' ಹಿಡಿದ ಮೇಲೂ ದಾಮೋದರರಾಯರು ತನ್ನಷ್ಟಕ್ಕೆ 'ಚಿಯರ್ ಅಪ್' 'ಚಿಯರ್ ಅಪ್' ಎಂದು ಹಲವು ಸಲ ಹೇಳಿಕೊಂಡಿದ್ದರು... ಯಾರ ಸಮಾಧಾನಕ್ಕಾಗಿ!

'ಲಿಫ್ಟ್'ನಲ್ಲಿ ಮೇಲೇರುತ್ತಿದ್ದಂತೆ, ಮಂದಾಳ ನೆನಪಿನ ಚೀಟಿ ಹೊರತೆಗೆದಾಗ, ಇವೆಲ್ಲ ವಿಚಾರಗಳು ಕ್ಷಣಾರ್ಧದಲ್ಲಿ ಎಂಬಂತೆ ಮನಸ್ಸಿನಲ್ಲಿ ಸುಳಿದು ಹೋದವು. ಪಕ್ಕದಲ್ಲೇ ನಿಂತಿದ್ದ ಇನ್ನೊಬ್ಬ ಅಧಿಕಾರಿಯೊಡನೆ ಮುಂಬಯಿಯಲ್ಲಿ ಈ ವರ್ಷ ಮಳೆಯೇ ಇಲ್ಲವೆನ್ನುವ ವಿಚಾರ ಮಾತು ನಡೆದೇ ಇತ್ತು.

ನಾಲ್ಕನೆಯ ಮಾಳಿಗೆಯಲ್ಲಿ 'ಲಿಫ್ಟ್'ನಿಂದ ಹೊರಬಂದು ತನ್ನ ಕೋಣೆಗೆ ಹೋಗುತ್ತಿದ್ದ ದಾಮೋದರರಾಯರ ನಡೆಯಲ್ಲಿ ಮಾತ್ರ, ಅಲ್ಲಿದ್ದ ಸಹೋದ್ಯೋಗಿಗಳಿಗೆ, ಕೆಲಸಗಾರರಿಗೆ ವ್ಯಕ್ತವಾಗುತ್ತಿದ್ದುದು ಯಾವ ರೀತಿಯ ಚಾಂಚಲ್ಯವೂ ಕಾಣದಂಥ ಚಿತ್ತಸ್ಥೈರ್ಯ...ಎಂಥ ಅಡೆತಡೆಗಳನ್ನೂ ಹತ್ತಿಕ್ಕಿ ಮುನ್ನುಗ್ಗುವಂಥ ದೃಢತೆ...

'ಸ್ಟೀಮ್ ರೋಲರ್' ಎಂಬ ಅಡ್ಡ ಹೆಸರನ್ನು ಸಂಪಾದಿಸಿದ್ದ ದಾಮೋದರರಾಯರಿಗೆ ತನ್ನ ಬಗ್ಗೆ ಇತರರು ಏನು ಆಡುತ್ತಿದ್ದಾರೆ ಎಂದು ಕೇಳುವ ಕುತೂಹಲವಾಗಲೀ, ವ್ಯವಧಾನವಾಗಲೀ ಎಂದೂ ಇರಲಿಲ್ಲ. ಇಂಥ ತೊಡಕುಗಳಲ್ಲಿ ಸಿಲುಕಿಕೊಳ್ಳುವ ವ್ಯಕ್ತಿತ್ವ ಅವರದಾಗಿರಲಿಲ್ಲವೆಂದೇ, ಮೂವತ್ತು ವರ್ಷಗಳ ಹಿಂದೆ ಆರಂಭಿಸಿದ್ದ ಸಾಮಾನ್ಯ ಕಾರಕೂನಿಕೆಯಿಂದ, ಕಂಪೆನಿಯ ಹಿರಿಯ ಉದ್ಯೋಗಾಧಿಕಾರಿಯ ಪದಕ್ಕೆ ಸುಲಭವಾಗಿಯೇ ಏರಲು ಅವರು ಸಮರ್ಥರಾಗಿದ್ದರು.

ದಿನದ ಮೊದಲ ವಂದನೆ ಸಲ್ಲಿಸುತ್ತಿದ್ದ ಎಲ್ಲ ಕಾರಕೂನರಿಗೆ 'ಮಾರ್ನಿಂಗ್' 'ಮಾರ್ನಿಂಗ್' ಎಂದು ತಲೆ ತಗ್ಗಿಸದೇನೇ ಉತ್ತರ ಹೇಳಿ ತನ್ನ ಕೋಣೆಯೊಳಗೆ ಬರುವ ಸಂದರ್ಭಗಳಲ್ಲೆಲ್ಲ ದಾಮೋದರರಾಯರಿಗೆ ದಿನದ ದುಡಿಮೆ ಕಾದಿದೆಯೆಂಬ ಉತ್ಸಾಹ! ಹತ್ತು ವರ್ಷಗಳಿಂದ ಇದು ನಿತ್ಯದ ಅನುಭವ... ಹತ್ತು ವರ್ಷಗಳ ಹಿಂದೆ ಉನ್ನತಾಧಿಕಾರಿಯಾಗಿ- ಆಗಿನ್ನೂ ಮಂದಾ ಮೆಟ್ರಿಕ್ ಮುಗಿಸದ ಹುಡುಗಿ- ಆ ಕೋಣೆಯೊಳಗೆ ಪ್ರವೇಶಿಸಿದಂದಿನಿಂದ, ಅಧಿಕಾರದ ಆ ಮೆತ್ತನ್ನ ಕುರ್ಚಿ ಅವರಿಗೆ ರಕ್ಷೆಯಾಗಿತ್ತು. ಆ ಕುರ್ಚಿ ಅಧಿಕಾರದ ಸಂಕೇತ, ಯೋಗ್ಯತೆಯ ಸಂಕೇತ. ಆ ಕೋಣೆ ಅವರ ದುಡಿಮೆಯ ವಿಶ್ವ. ಪ್ರಗತಿಯ ಮೆಟ್ಟಲೇರಿ ಬಂದು ದೊರಕಿದ ಈ ಉನ್ನತಾಧಿಕಾರದ ಧನ್ಯತೆಯಲ್ಲಿ ದಾಮೋದರರಾಯರು ಎಂಥ ತೊಂದರೆಯನ್ನೂ ಎದಿರಿಸುವ ಧೈರ್ಯವುಳ್ಳವರಾಗಿದ್ದಾರೆ... ಎಂಥ ಕಹಿ ಅನುಭವವನ್ನೂ ನುಂಗಿಕೊಳ್ಳುವ ಯೋಗ್ಯತೆಯನ್ನು ತಂದುಕೊಂಡಿದ್ದಾರೆ

ಕಾಫಿಯ 'ಥರ್ಮಾಸ್' ಕೋಣೆಯ ಮೂಲೆಯಲ್ಲಿದ್ದ ಕಿರು ಮೇಜಿನ ಮೇಲಿರಿಸಿ, ದಾಮೋದರರಾಯರು ತನ್ನ ಮೇಜಿನ ಬೀಗದ ಕೈ ಕಿಸೆಯಿಂದ ಹೊರತೆಗೆದಾಗ, ಮಂದಾಳ ನೆನಪಿನ ಚೀಟಿ ಕೂಡ ಹೊರಗೆ ಬಂತು. ಕೂಡಲೇ ತನ್ನ ಕಾರ್ಯದರ್ಶಿಗಾಗಿ ಕರೆಗಂಟೆಯೊತ್ತಿದ ರಾಯರು ಆಕೆ ನಗು ನಗುತ್ತಲೇ ಬಂದಾಗ "ದಿನದ ಮೊದಲನೆಯ ಕೆಲಸ... ಒಂದು ಡಜನ್ ಏದೇ

ಶೀಯ ಏಯರ್ ಲೆಟರ್ ಫಾರ್ಮ್ಸ್…" ಎಂದರು.

"ಆಗಬಹುದು" ಎಂದು ಮಿಸ್ ಪೆರೇರಾ ಬಳುಕುತ್ತ, ಮೈ ಕುಲುಕಿಸುತ್ತ ಹೋದ ರೀತಿ ಮಾತ್ರ ದಾಮೋದರರಾಯರಿಗೆ ಸರ್ವಥಾ ಹಿಡಿಸಲಿಲ್ಲ. ಆಕೆ ಅಂಥ ವೈಯಾರ ತೋರಿಸುವಾಗಲೆಲ್ಲ ಅವರಿಗೆ ಸಿಟ್ಟೇರುತ್ತಿತ್ತು. ವಿನಾಕಾರಣ, ಕೇಶವನ ನೆನಪಾಗುತ್ತಿತ್ತು…ಒಂದು ವೇಳೆ ಕೇಶವನೇ ಈ ಕುರ್ಚಿಯಲ್ಲಿ ಕುಳಿತಿದ್ದರೆ! ಈ ಗೋವಾದ ಹುಡುಗಿಯ ಬಿನ್ನಾಣಕ್ಕೆ ಮನಸೋತು… ಥತ್… ಎಷ್ಟು ಸಲ ಹೀಗೆ ಈ ಯೋಚನೆ ಮನಸ್ಸಿನಲ್ಲಿ ಸುಳಿದಿದೆ!

ಈ ಮುದುಕನ ಮುಂದೆ ಈ ವೈಯಾರವೇಕೆ! ಇಪ್ಪತ್ತು ರೂಪಾಯಿ ಬಡ್ತಿ ಹೆಚ್ಚು ಸಿಗಬಹುದೆಂಬಾಸೆಯಿಂದಲೆ! ಎಂದು ಸಿಟ್ಟಿನಿಂದಲೇ ಮಿಸ್ ಪೆರೇರಾ ಹೋದಗಡೆ ದಾಮೋದರರಾಯರು ನೋಡಿದರು. ಆದರೆ ಆ ಸಿಟ್ಟು [illegible] ಕೆಲಸದ ಯೋಗ್ಯತೆ ನೋಡಿ ಮಿಸ್ ಪೆರೇರಾಳನ್ನು ತನ್ನ ಕಾರ್ಯದರ್ಶಿಯಾಗಿ ಆರಿಸಿದ್ದೂ ಅವರೇನೇ… ಆಕೆಯ ದಕ್ಷತೆಯ ಮುಂದೆ ಬೇರೆಲ್ಲ ಅವಗುಣಗಳೂ ಅಡಗಿ ಹೋಗುವಂತಿದ್ದುದರಿಂದ, ಈ ಬಿನ್ನಾಣವೂ ಸಹ್ಯ!

ಆದರೂ ಮಿಸ್ ಪೆರೇರಾ ಕೋಣೆಯೊಳಗೆ ಬಂದಾಗಲೆಲ್ಲ, ಆಕೆ ತಲೆಗೆ, ಮೈಗೆ ಲೇಪಿಸಿಕೊಂಡಿದ್ದ ಸುವಾಸ ದ್ರವ್ಯಗಳ ಮಾದಕ ಕಂಪು ಮೂಗಿಗೆ ಬಡಿದಾಗಲೆಲ್ಲ, ದಾಮೋದರರಾಯರಿಗೆ ಕೇಶವನ ನೆನಪಾಗುತ್ತಿತ್ತು…

ಎಷ್ಟೋ ಸಲ ಅವರು ತನ್ನ ಕಾರ್ಯದರ್ಶಿಯೊಡನೆ ಕೇಳಿದುದಿದೆ.

'ನೀನು ಯಾವಾಗ ಮದುವೆಯಾಗುತ್ತೀಯೆ?'

'ನನಗೆ ಬೇಕಾದ ಗಂಡ ಭಾರತದಲ್ಲಿ ಸಿಗುವಂತಿಲ್ಲ, ಆತ ಅಮೇರಿಕಾದಿಂದ ಬರುವುದನ್ನೆ ಕಾಯುತ್ತಿದ್ದೇನೆ…'

ಇಂಥವೇ ಚೇಷ್ಟೆಯ ಉತ್ತರ ಹೇಳಿ ಆಕೆ ನಗುತ್ತಿದ್ದಳು…

ಆಕೆ ಅಮೇರಿಕಾದ ಮಾತು ತರುತ್ತಿದ್ದುದರಿಂದ ಕೇಶವನ ನೆನಪೆ!

ದಿನದ ದುಡಿಮೆ ಆರಂಭಿಸುವುದಕ್ಕೂ ಮೊದಲು ಈ ಅಧಿಕಪ್ರಸಂಗಿ ಕಾರ್ಯದರ್ಶಿಯ ಕುರಿತಾದ ಯೋಚನೆಯೇಕೆಂದು ದಾಮೋದರರಾಯರು ಮೇಜಿನ ಮೇಲಿದ್ದ ತನ್ನ 'ಟ್ರೇ' ತುಂಬ ಬಿದ್ದಿದ್ದ ಕಾಗದಗಳ ಕಡೆ ಕಣ್ಣು ಹಾಯಿಸಿದರು.

ಅಂದು ಬೆಳಿಗ್ಗೆ, ಅಂಚೆಯ ಮೂಲಕ ಬಂದಿದ್ದ ಕಾಗದಗಳು ವ್ಯವಸ್ಥಿತವಾಗಿ ಮೇಜಿನ ಮೇಲಿದ್ದವು ಒಡೆಯದೇನೇ ಇರಿಸಲಾಗಿದ್ದ ಖಾಸಗಿ ಕಾಗದಗಳೆಡೆ ದಾಮೋದರರಾಯರು ಕೈ ಹಾಕಿದಾಗ, ನಿತ್ಯದ ಕುತೂಹಲ ಮತ್ತೆ ಚಿಗುರಿತ್ತು 'ಇಂದೇನಾದರೂ ಕೇಶವನ ಕಾಗದವಿದೆಯೆ?' ಆದರೆ ಕೇಶವ ಬರೆಯುವ ಅಭ್ಯಾಸವನ್ನೇ ಮರೆತಿದ್ದ. ಆ ಬರವಣಿಗೆಯಲ್ಲವೆ. ಸಂಪರ್ಕದ ಸಾಧನ- ಅಷ್ಟು ದೂರದ ನಾಡಲ್ಲಿರುವಾಗ…! ಆ ಸಾಧನದಿಂದಲ್ಲವೆ, ನೆನಪನ್ನು ಜೀವಂತವಾಗಿರಿಸುವ ಯತ್ನ! ಅದನ್ನೇ ಸಾಯಗೊಟ್ಟರೆ!…ಮುಂದಾ ಹೇಳಿದಂತೆ, ಕ್ಷಣದಿಂದ ಕ್ಷಣಕ್ಕೆ ಸಾಯುವ ನೆನಪನ್ನು ಬದುಕಿಸುವ ಪ್ರಯತ್ನವನ್ನೆ ಮಾಡದಿದ್ದರೆ…!

ಇಂದು ಕೂಡ ಕೇಶವನ ಕಾಗದವಿರಲಿಲ್ಲ. ಕಟ್ಟಿಕೊಂಡ ಹೆಂಡತಿಗೇ ಬರೆಯದಾತ, ಮಾವನಿಗೆ ಬರೆಯುತ್ತಾನೆಯೆ!

'ಸ್ಕ್ಯಾಂಡ್ರೆಲ್' ಎಂದು ತನ್ನಷ್ಟಕ್ಕೆ ಹೇಳಿಕೊಂಡು ಈ ಸಿಟ್ಟನ್ನು ಹತ್ತಿಕ್ಕಲು ರಾಯರು ಯತ್ನಿಸಿದರೂ ಕೇಶವ ತನ್ನ ಮನಸ್ಸಿನಲ್ಲೆ ಉಳಿಯುತ್ತಾನೆಂಬ ಆಧೈರ್ಯ ಅವರಲ್ಲಿತ್ತು. ಕಳೆದ ಆರು ತಿಂಗಳಿಂದ ಆತ ಆ ರೀತಿ ಇದ್ದಾನೆ. ಕೆಲಸ ದೊರಕಿಸುವ ತನ್ಮಯತೆಯಲ್ಲಿ ಬೇರೆಲ್ಲವನ್ನು ಮರೆಯುವ ಸಾಮರ್ಥ್ಯ ಅವರಿಗಿದ್ದರೂ ಕೇಶವ ನಡುವೆ ಮನಸ್ಸಿನಲ್ಲಿ ಸುಳಿದು ಉಳಿದು ನಗುತ್ತಾನೆ…

'ಈಗೇನು ಮಾಡುವೆ ಹೇಳು? ನಿನ್ನ ಮುಂದಾಳ ಭವಿಷ್ಯ ನನ್ನ ಕೈಯ್ಯಲ್ಲಿದೆ' ಎಂದು ಗಹಗಹಿಸಿ ನಗುತ್ತಾನೆ. 'ಆಕೆಯನ್ನು ನನ್ನ ಮನಬಂದಂತೆ ಕುಣಿಸಬಲ್ಲೆ…ಆಕೆ ನನ್ನ ಹೆಂಡತಿಯಲ್ಲವೆಂದು ದೂರಸರಿಯಬಲ್ಲೆ… ನಿನ್ನ ರಕ್ಷಾಕವಚ ಪ್ರಯೋಜನಕಾರಿಯಾಗುವುದಿಲ್ಲ. ನಿನ್ನ ಆಸೆಯ ಗೋಪುರ ಗಾಳಿಗೋಪುರವಾದೀತು' ಎಂದು ಹೇಳಿ ನಗುತ್ತಾನೆ.

"ಸ್ಕ್ಯಾಂಡ್ರೆಲ್" ಎಂದು ದಾಮೋದರರಾಯರು ಇನ್ನೊಮ್ಮೆ ತುಸು ಜೋರಾಗಿಯೇ ಹೇಳಿದರು. ಆಗ "ಕರೆದಿರಾ?" ಎಂದು ಬಳುಕುತ್ತಲೇ ಮಿಸ್ ಪೆರೇರಾ ಬಾಗಿಲು ದೂಡಿಕೊಂಡು ಒಳಗೆ ಬಂದಳು.

"ಗೆಟ್ ಔಟ್… ನಿನ್ನನ್ನು ಕರೆದಿಲ್ಲ ನಾನು" ಎಂದು ದಾಮೋದರರಾಯರ ಮಾತಿನಲ್ಲಿ ಕಾಠಿಣ್ಯವಿದ್ದರೂ, ತನ್ನ ಮನಸ್ಸಿನ ತುಮುಲ ಯಾರಿಗೂ ತೋರಗೊಡದಂತೆ ಎಚ್ಚರ ವಹಿಸಿದ್ದರೂ, ಈ ಗೋವಾದ ಹುಡುಗಿಗೆ ತಿಳಿಯಿತೇ ಎಂಬ ನಾಚಿಕೆಯೂ ಇತ್ತು.

ಕೇಶವ ಹೀಗೇಕೆ ಮಾಡಿದ! ಮೂವತ್ತು ವರ್ಷ ದಾಟ ಮುಂಬಯಿಯಲ್ಲಿ ಹೆದರಿಕೆಯೆಂದರೇನೆಂದು ಕಂಡರಿಯದ ತನ್ನಲ್ಲಿ ಮುಂದಾಳ ಭವಿಷ್ಯದ ಕುರಿತಾದ ಭೀತಿಯೇಕೆ ಕುದುರಿದೆ! ಅತ್ಯಂತ ಪ್ರತಿಭಾವಂತ ಇಂಜಿನಿಯರಿಂಗ್ ವಿದ್ಯಾರ್ಥಿಯೆಂದು ಹುಡುಕಿ ಹುಡುಕಿ ತಂದು, ಮುಂದಾಳಿಗೆ ಯೋಗ್ಯ ವರನೆಂದು ಗ್ರಹಿಸಿ ನಡೆದ ಮದುವೆ-ಮುಂದೆ ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಅಮೇರಿಕಾದ ಎಂ. ಐ. ಟಿ. ಗೆ ಪ್ರಯಾಣ… ಆದರೆ ಇಷ್ಟೆಲ್ಲ ಅನುಕೂಲತೆಯೊದಗಿಸಿದ ತನಗೇಕಿಂಥ ಕೃತಘ್ನತೆಯ ಉಡುಗೊರೆ!

"ಸ್ಕ್ಯಾಂಡ್ರೆಲ್" ತುಸು ಜೋರಾಗಿ ಹಾಗೆ ಒದರಿದರೆ ಮಿಸ್ ಪೆರೇರಾ ಓಡಿಬರಬಹುದೇನೋ ಎಂಬ ಶಂಕೆಯಿತ್ತು. ಆಕೆ ಬರಲಿಲ್ಲ. ಎದೆಯ ತುಮುಲ—ದಾಮೋದರರಾಯರ ಪರಿಚಯವಿದ್ದವರಿಗೆ ಅವರ ಜಾಯಮಾನದಲ್ಲೇ ಅಶ್ಚರ್ಯಕಾರಿ ಬದಲಾವಣೆ- ತುಸು ಕಡಮೆಯಾದಾಗ. ರಾಯರು ತನ್ನ ಆಫೀಸಿನ ವ್ಯವಹಾರದ ಕಾಗದಗಳನ್ನೆತ್ತಿಕೊಂಡರು.

ದುಡಿಮೆ ದಾಮೋದರರಾಯರ ಸರ್ವಸ್ವ… ಆಫೀಸಿನ ವ್ಯವಹಾರದ ತೊಡಕುಗಳಲ್ಲಿ ಅವರು ತನ್ನ ವೈಯಕ್ತಿಕ ವಿಚಾರಗಳನ್ನೆಲ್ಲ ಮರೆಯಲು ಸಮರ್ಥರಾಗುತ್ತಾರೆ. ಇಂಥ ಆಸಕ್ತಿ, ಅಸಾಧಾರಣ ಪರಿಶ್ರಮದ ತಾಳ್ಮೆ, ಸ್ವಭಾವ ಸಹಜವಾದ ಪ್ರತಿಭೆ, ಇವುಗಳಿಂದಾಗಿಯೇ ಅವರು ಅಧಿಕಾರದ ಮೆಟ್ಟಲೇರುತ್ತ, ಏರುತ್ತ ಬಂದಿದ್ದಾರೆ. ಮೂವತ್ತು ವರ್ಷಗಳ ಹಿಂದೆ, ಪ್ರಾಯಶಃ ಅವರ ಯೋಗ್ಯತೆಯನ್ನು ಗುರುತಿಸಿಯೇ, ಅವರ ವಿಭಾಗದ ಒಬ್ಬ ಆಂಗ್ಲ ಅಧಿಕಾರಿ ತನ್ನ ಸಹೋದ್ಯೋಗಿಯೊಡನೆ ಹೇಳಿದ್ದ :

'ಆ ದಕ್ಷಿಣದ ಹುಡುಗನನ್ನೊಮ್ಮೆ ನೋಡು…ರಾವ್…ಗಡಿಯಾರದ, ಮನೆಯ, ಯೋಚನೆಯೇ ಅಪ್ರಸ್ತುತವೆನ್ನುವಂತೆ ಕೆಲಸ ಮಾಡುವ ಹುಡುಗ ಈ ಇಡೀ ವಿಭಾಗದಲ್ಲಿ. ಅದಕ್ಕೆ ಸರಿಯಾದ ಪ್ರತಿಭೆ. ಈತ ಬಹಳ ದೂರ ಹೋಗುತ್ತಾನೆ.'

ಆ ಆಂಗ್ಲ ಅಧಿಕಾರಿ ನುಡಿದ ಭವಿಷ್ಯ ಸುಳ್ಳಾಗಿರಲಿಲ್ಲ.

ಮೂವತ್ತು ವರ್ಷಗಳ ಹಿಂದೆ ಮನೆಯ ಯೋಚನೆಯೆ ಬೇಡವಿತ್ತು.

ದಕ್ಷಿಣದ ಯೋಚನೆಯೇ ಬೇಡವಿತ್ತು. ಮಂಗಳೂರಿನ ಸಮೀಪದ ಆ ಹಳ್ಳಿಯ ನೆನಪನ್ನೇ ಅಳಿಸುವಂಥ ಕೆಲಸ ಬೇಕಿತ್ತು. ಅಂಥ ಕೆಲಸ ದೊರಕಿತ್ತು. ಎಂದೇ ದಾಮೋದರರಾಯರು ಅಸಾಧಾರಣ ಪರಿಶ್ರಮದ ವ್ಯಕ್ತಿಯಾಗಿ ಕಂಪೆನಿಯಲ್ಲಿ ಅಧಿಕಾರದ ಪ್ರಗತಿಯ ಮೆಟ್ಟಿಲುಗಳನ್ನೇರಿದ್ದರು.

ಆಫೀಸಿನ ಕೆಲಸದ ನಡುವೆ ಕೇಶವನ ಯೋಚನೆ ಮಿಂಚಿದುದು ರಾಯರು ೧೧ ಘಂಟೆಗೆ ಕಾಫಿಗೆಂದು ಥರ್ಮಾಸ್ ಎತ್ತಿಕೊಂಡಾಗ ಮಾತ್ರ. ಮಿಸ್ ಪೆರೇರಾ ತಂದಿರಿಸಿದ್ದ ಒಂದು ಡಜನ್ ವಿದೇಶೀಯ ಏಯರ್ ಲೆಟರ್ ಫಾರ್ಮ್ಸ್ ಥರ್ಮಾಸ್‌ನ ಪಕ್ಕದಲ್ಲೇ ಇದ್ದವು. ಕಾಫಿ ಕುಡಿದು ಮೇಜಿನ ಬಳಿ ಬಂದು ಮಧ್ಯಾಹ್ನದ ಏನೆಲ್ಲ ಕೆಲಸ ಬಾಕಿಯಿದೆಯೆಂದು ಮೇಜಿನ ಮೇಲಿದ್ದ ಕ್ಯಾಲೆಂಡರನ ಕಡೆ ರಾಯರು ದೃಷ್ಟಿ ಹರಿಸಿದಾಗ, ಅದರಲ್ಲಿ ಕಂಡ ಒಂದು ಹೆಸರಿನಿಂದಾಗಿ 'ಓ! ಈ ಬೇಡವಾದ ಕೆಲಸವೊಂದು ಬಾಕಿಯಿದೆಯೆ?' ಎಂದು ಅವರು ಹೇಳುವಂತಾಯಿತು.

'ತ್ರಿವಿಕ್ರಮ ದೇಸಾಯಿ- ೩-೩೦'

ಕೆಲವು ದಿನಗಳ ಹಿಂದೊಂದು ರಾತ್ರಿ ರಾಯರು ಊಟ ತೀರಿಸಿ ಡ್ರಾಯಿಂಗ್ ರೂಮ್‌ನಲ್ಲಿ ಏನೋ ಓದುತ್ತಿದ್ದಾಗ, ಆ ರಾತ್ರಿಯಲ್ಲೂ ಯಾರೋ ಕಾಣಲು ಬಂದಿದ್ದಾರೆಂದು ಮುಂದಾ ತಿಳಿಸಿದ್ದಳು. ಬಂದುದು ಒಬ್ಬ ಗುಜರಾತೀ ಗೃಹಸ್ಥರು. ರಾಯರ ಕಂಪೆನಿಯ ಇಂಜನಿಯರಿಂಗ್ ವಿಭಾಗದಲ್ಲಿ ತರಬೇತು ಪಡೆಯುತ್ತಿದ್ದ ಜ್ಯೂನಿಯರ್ ಆಫೀಸರ್ ತ್ರಿವಿಕ್ರಮ ದೇಸಾಯಿಯ ತಂದೆ!

ಹಾಗೆ ಬಂದಿದ್ದವರು ಒಂದು ವಿಚಿತ್ರ ಬೇಡಿಕೆಯನ್ನು ದಾಮೋದರರಾಯರ ಮುಂದಿರಿಸಿದ್ದರು.

"ನೋಡಿ ಮಿ॥ ರಾವ್…ನಮ್ಮ ಮನೆತನದ ಮಾನ ಉಳಿಸುವ ಒಂದು ಕೆಲಸ ನಿಮ್ಮಿಂದ ಆಗಬೇಕು. ತ್ರಿವಿಕ್ರಮ ನಮಗಿರುವ ಒಬ್ಬನೇ ಮಗ ಮುಂದಿನ ಮೇ ತಿಂಗಳಲ್ಲಿ ಆತನ ಮದುವೆ ನಡೆಯಬೇಕೆಂದು ರಾಜಕೋಟದ ಒಂದು ನೆಂಟಸ್ತಿಕೆ

ನಿಶ್ಚಯಿಸಿ, ಆತ ಒಪ್ಪಿಕೊಂಡು ಎಲ್ಲ ಆಗಿದೆ. ಆದರೆ ಈ ನಡುವೆ ನಿಮ್ಮ ಆಫೀಸಿನ ಒಬ್ಬಾಕೆ ಟ್ಯಾಪಿಸ್ಟ್ ಹುಡುಗಿ ಸುಧಾ ಎಂದೇನೋ ಆಕೆಯ ಹೆಸರು. ತ್ರಿವಿಕ್ರಮನ ಮೇಲೆ ಪ್ರಭಾವ ಬೀರಿದ್ದಾಳೆಂದು ಕಾಣುತ್ತದೆ. ಆತ ಮನಸು ಬದಲಿಸಿ ಒಪ್ಪಿದ ಹುಡುಗಿಯನ್ನು ಮದುವೆಯಾಗುವದಿಲ್ಲ ಎನ್ನುತ್ತಾನೆ. ಎಲ್ಲ ನಿಶ್ಚಯಿಸಿ, ಈ ರೀತಿ ಮಾತು ಮುರಿಯುವುದು ನಮಗೆ ಅವಮಾನದ ಸಂಗತಿ. ಅಷ್ಟೇ ಅಲ್ಲ-ತ್ರಿವಿಕ್ರಮನಿಗೆ ನಿಶ್ಚಯಿಸಿದ ಹುಡುಗಿ ಆತನೊಡನೆ ಮದುವೆಯಾಗದಿದ್ದರೆ, ಪ್ರಾಣ ತೆಗೆದುಕೊಳ್ಳುತ್ತೇನೆನ್ನುತ್ತಿದ್ದಾಳೆ...."

ಅನಾಕ್ಸಾಗಿ ಕುಳಿತಿದ್ದ ದಾಮೋದರರಾಯರು ಆವೇಶ ಬಂದವರಂತೆ "ಹೌದು ಮಿ|| ದೇಸಾಯಿ ಆದರೆ ಈ ಖಾಸಗೀ ವ್ಯವಹಾರದಲ್ಲಿ ನಾನೇಕೆ ಕೈ ಹಾಕಬೇಕು?" ಎಂದಿದ್ದರು.

"ನಿಮ್ಮ ಆಫೀಸಿನ ಆ ಹುಡುಗಿಯ ಸಂಪರ್ಕವನ್ನು ತೊರೆಯಬೇಕು ಎಂದು ಎಚ್ಚರಿಕೆ ಕೊಡುವಷ್ಟು ಸಹಾಯ ನೀವು ಮಾಡಿದರೆ, ತುಂಬ ಉಪಕಾರವಾಗುತ್ತದೆ." ಎಂದಿದ್ದರು ದೇಸಾಯಿ.

"ನೋಡಿ ದೇಸಾಯಿ! ತ್ರಿವಿಕ್ರಮನೇನು ಹೆಚ್ಚಿನ ತಿಳಿವಳಿಕೆಯಿಲ್ಲದ ಸಾಮಾನ್ಯ ಕಾರಕೂನನಲ್ಲ. ಒಬ್ಬ ಪ್ರತಿಭಾವಂತ ಇಂಜಿನಿಯರ್. ಮುಂದೆ ದೊಡ್ಡ ಆಫೀಸರ್ ನಾಗುವವನಾತ. ಅಷ್ಟೇ ಅಲ್ಲದೆ ನಮ್ಮ ಕಂಪೆನಿಯ ನೌಕರರ ಖಾಸಗಿ ವ್ಯವಹಾರದಲ್ಲಿ ನಾವು ಕೈ ಹಾಕುವಂತೆಯೇ ಇಲ್ಲ." ಎಂದು ಸ್ಪಷ್ಟವಾಗಿಯೇ ದಾಮೋದರರಾಯರು ಹೇಳಿದ್ದರು.

ಆದರೂ ಆ ವೃದ್ಧ ಗೃಹಸ್ಥರ ಹಟ ಕಡಿಮೆಯಾಗಲಿಲ್ಲ. ಒತ್ತಾಯ ತರಲು ಸಾಧ್ಯವಾಗದಿದ್ದರೆ, ಸ್ನೇಹದ ಉಪದೇಶವಾದರೂ ಕೊಡಿ ಅಷ್ಟೊಂದು ಉಪಕಾರ ಮಾಡಿ ಎಂದು ಬೇಡಿಕೊಂಡುದರಿಂದ, ದಾಮೋದರರಾಯರು "ನೋಡೋಣ; ಮಾತನಾಡಿ ನೋಡುತ್ತೇನೆ" ಎಂದಿದ್ದರು.

ಆ ಕಾರಣ ಅಂದು ಮಧ್ಯಾಹ್ನ ೩-೩೦ ಕ್ಕೆ ತ್ರಿವಿಕ್ರಮ ದೇಸಾಯಿಯ ಭೆಟ್ಟಿ.

ಈ ತ್ರಿವಿಕ್ರಮ ದೇಸಾಯಿಯ ಜತೆಗೆ ತಿರುಗುತ್ತಿರುವ ಎಕೌಂಟ್ಸ್ ವಿಭಾಗದ ಹುಡುಗಿ ಯಾರೆಂದು ಎಲ್ಲ ವಿವರ ಸಂಗ್ರಹಿಸಿದ ಮೇಲೆ ಮಧ್ಯಾಹ್ನ ಮೂರೂವರೆ ಘಂಟೆಗೆ ಸರಿಯಾಗಿ ರಾಯರು ಆತನಿಗೆ ಕರೆಕಳಿಸಿದರು. ಈ ಅಧಿಕಾರದ ಹತ್ತು ವರ್ಷಗಳಲ್ಲಿ ಒಬ್ಬ ನೌಕರನ ಖಾಸಗಿ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಯನ್ನು ಎತ್ತಿಕೊಂಡದ್ದು ಇದೇ ಮೊದಲೆಂದು ರಾಯರಿಗೆ ತಿಳಿದಿತ್ತು. ಸಾಮಾನ್ಯ ವ್ಯವಹಾರಕ್ಕೆ ಅನಗತ್ಯವೆನಿಸುವ ಈ ತೊಡಕಿನಲ್ಲಿ ಸಿಲುಕಿಕೊಳ್ಳಬೇಕೆ? ಎಂಬ ಅಳುಕು ಅವರನ್ನು ಕಾಡಿದರೂ, ತ್ರಿವಿಕ್ರಮ ದೇಸಾಯಿ ರಾಯರ ಕೋಣೆಯೊಳಗೆ ಬಂದಾಗ ಆತನಿಗೆ ದೊರಕಿದುದು ನಗುಮೊಗದ ಸ್ವಾಗತವೆ.

ಆತ ಕುಳಿತ ಮೇಲೆ ತಾನೇ ಹೋಗಿ ಬಾಗಿಲು ಮುಚ್ಚಿ ಬಂದ ರಾಯರು "ಹೇಗಿದ್ದೀಯ ತ್ರಿವಿಕ್ರಮ್? ಹೇಗೆ ಮುಂದುವರಿಯುತ್ತದೆ ನಿನ್ನ ಟ್ರೈನಿಂಗ್?" ಎಂದರು.

"ಚೆನ್ನಾಗಿದೆ, ಥ್ಯಾಂಕ್ಸ್" ಎಂದ ತ್ರಿವಿಕ್ರಮ. "ಆದರೆ ನನ್ನನ್ನು ಕರೆಕಳುಹಿಸಿದುದರ ಉದ್ದೇಶ ಇದೇ ಏನು?"

ದಾಮೋದರರಾಯರು ತ್ರಿವಿಕ್ರಮನನ್ನೆ ನೋಡುತ್ತಿದ್ದರು. ಮಂದಾಳಿಗಿಂತ ತುಸು ದೊಡ್ಡವನಿರಬೇಕು. ಉತ್ಸಾಹದ ನಗುಮೊಗದಲ್ಲಿ ಪ್ರಕಟವಾಗುತ್ತಿದ್ದುದು ಆತ್ಮವಿಶ್ವಾಸ, ದೃಢತೆ. ಚಾಂಚಲ್ಯದ ಕುರುಹು ಕೂಡ ಕಾಣಿಸದಂಥ, ತೀಕ್ಷ್ಣವಾದ ಬುದ್ಧಿಮತ್ತೆಯನ್ನು ಸೂಚಿಸುವ ಕಣ್ಣುಗಳು...

ಒಂದು ಕ್ಷಣ...ವರ್ಷಗಟ್ಟಲೆ ತಾನು ಹಿಂದೆ ಸರಿದಿದ್ದೇನೆಯೇ ಎಂಬ ವಿಚಾರ ದಾಮೋದರ ರಾಯರ ಮನಸ್ಸಿನಲ್ಲಿ ಮಿಂಚಿ ಮಾಯವಾಯಿತು. ಮೂರುದಶಕಗಳ ಹಿಂದೆ. ತ್ರಿವಿಕ್ರಮನದೇ ವಯಸ್ಸಿನಲ್ಲಿ ತಾನು ಜಗತ್ತನ್ನು ಕಂಡ ಬಗೆ... ಛೆ! ಏನು ಭ್ರಮೆ !

"ಅಲ್ಲ ದೇಸಾಯಿ. ನಿನ್ನ ಪ್ರಗತಿಯ ವಿಚಾರ ಅತ್ಯಂತ ಒಳ್ಳೆಯ ವರದಿಗಳೇ ನಮ್ಮ ಕೈಸೇರಿವೆ. ಆ ವಿಚಾರ ನಾನು ಪ್ರಶ್ನಿಸುವುದಿಲ್ಲ. ನಾನು ಪ್ರಶ್ನಿಸಲಿರುವುದು ಒಂದು ಖಾಸಗಿ ವಿಚಾರ.."

ಈ ಪ್ರಶ್ನೆ ಅರ್ಥವಾಗಿಲ್ಲವೆಂಬಂತೆ ಒಂದು ಕ್ಷಣ ತ್ರಿವಿಕ್ರಮ್ ರಾಯರನ್ನೇ ನೋಡಿದ. ಆಮೇಲೆ ನಿಧಾನವಾಗಿ "ಅದನ್ನು ಕೇಳುವ ಅಧಿಕಾರ ನಿಮಗೇನಿದೆ ?" ಎಂದು ಪ್ರಶ್ನಿಸಿದ.

"ನಿನ್ನ ಹಿತವೂ ಕಂಪೆನಿಯ ಹಿತವೂ ಒಂದಕ್ಕೊಂದು ಹೊಂದಿಕೊಂಡಿವೆಯೆಂದು ನಾನು ತಿಳಿದಿರುವುದರಿಂದ ಈ ಪ್ರಶ್ನೆ ಕೇಳುವ ಅಧಿಕಾರ ನನಗಿದೆಯೆಂದು ನಾನು ಬಗೆದಿದ್ದೇನೆ. ಇದು ತಪ್ಪಿದ್ದರೆ ಕ್ಷಮೆ ಕೇಳಲು ನಾನು ಸಿದ್ಧ...ನಿನ್ನ ಖಾಸಗಿ ಜೀವನಕ್ಕೆ ಸಂಬಂಧಿಸಿದ ವಿಚಾರಗಳಿಗೆ ಕೈಹಾಕುವುದು ಸರ್ವಥಾ ನನಗೆ ಇಷ್ಟವಿಲ್ಲ...."

"ಏನದು, ಮಿ|| ರಾವ್?"

"ಮದುವೆಯಾಗುವೆನೆಂದು ಮಾತು ಕೊಟ್ಟು ಬಂದಿರುವ ರಾಜಕೋಟೆಯ ಗೌರವಸ್ಥ ಮನೆತನದ ಹುಡುಗಿಯಲ್ಲಿ ಕಾಣದ ಗುಣ ವಿಶೇಷಗಳೇನಿವೆ, ನಮ್ಮ ಎಕೌಂಟ್ಸ್ ವಿಭಾಗದ ಟೈಪಿಸ್ಟ್ ಸುಧಾ ಅವಸರೆಯಲ್ಲಿ ಹೇಳು?"

"ಅದನ್ನು ನಿರ್ಧರಿಸುವಾತ ನಾನು, ಮಿ|| ರಾವ್... ನೀವಲ್ಲ...ಏನಿದ್ದರೂ ಇದು ಅಧಿಕ ಪ್ರಸಂಗದ ಪರಮಾವಧಿ."

"ನನಗೆ ತಿಳಿದಿದೆ ತ್ರಿವಿಕ್ರಮ್, ಈ ಪ್ರಶ್ನೆ ಕೇಳುವ ಅಧಿಕಾರ ನನಗಿಲ್ಲವೆಂದು. ಆದರೆ, ನೋಡು, ನಮ್ಮ ಕಂಪೆನಿಯ ಪ್ರಮುಖ ಅಧಿಕಾರೀವರ್ಗದಲ್ಲಿ ಸೇರಬೇಕಾದಾತ ನೀನು. ನಾವು ಯೋಚಿಸಿಕೊಂಡಿರುವಂತೆ, ಮುಂದಿನ ವರ್ಷ ಕೆನಡಾಕ್ಕೆ ತರಬೇತಿಗಾಗಿ ಹೋಗಲಿರುವಾತ. ಆ ಕಾರಣದಿಂದ ಮುಂಬಯಿಯ ಬೆಡಗಿನ ಹುಡುಗಿಯರ ಬಿನ್ನಾಣಕ್ಕೆ ಮನಸೋತು,-ಅದೂ ಈ ಸುಧಾ ಅವಸರೆ—ನಿನ್ನ ಭವಿಷ್ಯವನ್ನು ಹಾಳು ಮಾಡಿಕೊಳ್ಳುವದು ನನಗೆ ಸರಿಕಾಣುವದಿಲ್ಲ."

"ಸ್ಟಾಪ್ ಇಟ್" ಎಂದ ತ್ರಿವಿಕ್ರಮ ಸಿಟ್ಟಿನಿಂದಲೇ. ಆತನ ಮುಖ ಕೆಂಪಡರಿತ್ತು. "ನೀವು ಮಾತು ನಿಲ್ಲಿಸಿ ಮಿ|| ರಾವ್...ಇಲ್ಲವಾದರೆ ನನ್ನ ರಾಜೀನಾಮೆಯನ್ನು ಬರೆದು ಬಿಸಾಡಿ ನಾನಿಲ್ಲಿಂದ ಹೊರಟು ಹೋಗುತ್ತೇನೆ. ಇಂಥ ಪ್ರಶ್ನೆ ಕೇಳಲು ನಿಮಗೆ ಯಾವ ಅಧಿಕಾರವೂ ಇಲ್ಲ."



ನಾನು ಇಷ್ಟು ಮಾತು ಹೇಳಿದುದು ಸರಿಯೇ ಎಂದು ದಾಮೋದರರಾಯರು ತುಸು ಬೆದರಿದರು. ಆದರೆ, ತುಂಬ ಸಮಾಧಾನದಿಂದಲೇ, ತ್ರಿವಿಕ್ರಮ ಕುಳಿತಿದ್ದಲ್ಲಿಗೆ ಹೋಗಿ ಆತನ ಭುಜದ ಮೇಲೆ ಕೈಯಿರಿಸಿ "ಕ್ಷಮಿಸು ತ್ರಿವಿಕ್ರಮ ನಿನ್ನನ್ನು ರೇಗಿಸುವುದು ಸರ್ವಥಾ ನನ್ನ ಉದ್ದೇಶವಲ್ಲ. ನಾನು ಕಂಪೆನಿಯ 'ಪರ್ಸನಲ್' ಆಫೀಸರನಾಗಿ ಈ ಮಾತುಗಳನ್ನು ಆಡುತ್ತಿಲ್ಲ. ಹೆಚ್ಚು ಕಡಿಮೆ ನಿನ್ನ ತಂದೆಗಾದಷ್ಟೇ ನನಗೂ ವಯಸ್ಸಾಗಿದೆ. ಮೊನ್ನೆ ನಿನ್ನ ತಂದೆಯವರು ನನ್ನ ಮನೆಗೆ ಬಂದು. ನಿನ್ನ ಮನವೊಲಿಸಲು ಹೇಗಾದರೂ ಸಹಾಯ ಮಾಡಬೇಕೆಂದು ಕೇಳಿದುದರಿಂದ' ಇದು ನನ್ನ ಕೆಲಸವಲ್ಲವೆಂದು ತಿಳಿದೂ ಒಪ್ಪಿಕೊಂಡೆ... ಅದೇನೇ ಇರಲಿ. ತ್ರಿವಿಕ್ರಮ, ನೀನು ಇಷ್ಟು ತಿಳಿದವನಿದ್ದೂ, ನಿನ್ನ ಮನಸ್ಸಿಗೆ ಒಪ್ಪಿಗೆಯಿರದಿದ್ದರೆ, ರಾಜಕೋಟಿಯ ಆ ಹುಡುಗಿಯನ್ನು ಮದುವೆಯಾಗುವೆನೆಂದೇಕೆ ಒಪ್ಪಿಕೊಂಡೆ? "

ತ್ರಿವಿಕ್ರಮ ಕುಳಿತಲ್ಲಿಂದೆದ್ದ... " ತುಂಬ ಥ್ಯಾಂಕ್ಸ್ ಮಿ. ರಾವ್..." ಎಂದ. "ಸತ್ಯ ಹೇಳಿದ್ದಕ್ಕಾಗಿ ಥ್ಯಾಂಕ್ಸ್. ನಿಮ್ಮ ಕೊನೆಯ ಪ್ರಶ್ನೆಗಷ್ಟೆ ಉತ್ತರ ಹೇಳುತ್ತೇನೆ. ಸಂಪ್ರದಾಯವನ್ನೂ, ತಮ್ಮ ಗೌರವವನ್ನೂ. ತಮ್ಮ ಆಸೆಯನ್ನೂ ಮೆಚ್ಚಿಕೊಳ್ಳುವ ನನ್ನಂಥ ತಂದೆ ತಾಯಂದಿರು ನಿಮಗಿದ್ದಿದ್ದರೆ ಆ ಹುಡುಗಿಯನ್ನು ಮದುವೆಯಾಗಲು ನನ್ನ ಸಮ್ಮತಿಯಿದೆಯೆಂದು ಅವರು ಹೇಗೆ ಗ್ರಹಿಸಿದರೆಂದು ನಿಮಗೆ ತಿಳಿಯಬಹುದಿತ್ತು...ನಾನು ಮಾತುಕೊಟ್ಟಿದ್ದೇನೆಂದು ಅವರು ತಿಳಿದುಕೊಂಡ ಮಾತ್ರಕ್ಕೆ ನಾನೇನು ಆ ಹುಡುಗಿಯನ್ನು ಮದುವೆಯಾಗಿಲ್ಲ. ಒಂದು ವೇಳೆ ಮದುವೆಯಾಗಿಯೇ ಆಕೆಯನ್ನು ಆಕೆಯ ಪಾಡಿಗೆ ಬಿಟ್ಟಿದ್ದರೆ... ಏನಿದ್ದರೂ, ನಿಮ್ಮ ಉಪದೇಶಕ್ಕಾಗಿ ಥ್ಯಾಂಕ್ಸ್ ಮಿ. ರಾವ್" ಎಂದ ತ್ರಿವಿಕ್ರಮ ರಾಯರ ಉತ್ತರ ಕಾಯದೇ ಅವರ ಕೋಣೆಯಿಂದ ಹೊರಬಿದ್ದ...

ಆದರೆ ದಾಮೋದರರಾಯರು ಉತ್ತರಕೊಡುವ ಸ್ಥಿತಿಯಲ್ಲೂ ಇರಲಿಲ್ಲ. 'ನನ್ನಂಥ ತಂದೆ ತಾಯಂದಿರು ನಿಮಗಿದ್ದಿದ್ದರೆ...' 'ಒಂದು ವೇಳೆ ಮದುವೆಯಾಗಿಯೇ ಆಕೆಯನ್ನು ಆಕೆಯ ಪಾಡಿಗೆ ಬಿಟ್ಟಿದ್ದರೆ...'

ಒಂದು ಕ್ಷಣ ದಾಮೋದರರಾಯರಿಗೆ ಇಡೀ ಮೈಯಲ್ಲಿ ಅಸ್ಪಷ್ಟ ನಡುಕದ ಅನುಭವವಾಯಿತು. ಮರಳಿ ಬಂದು ತನ್ನ ಕುರ್ಚಿಯಲ್ಲಿ ಕುಳಿತು ತನ್ನ ಮೇಜಿನ ಮೇಲಿದ್ದ ಪೆನ್ನನ್ನು ಕೈಗೆತ್ತಿಕೊಂಡು ಅದರ ಟೊಪ್ಪಿಗೆ ತೆಗೆದು ಆಡಲಾರಂಭಿಸಿದರು. ತೀಕ್ಷ್ಣವಾದ ಆಲೋಚನೆಗೊಳಪಡಿಸುವ ಏನಾದರೊಂದು ಸಮಸ್ಯೆ ಉದ್ಭವಿಸಿದಾಗ, ಅವರು ಪೆನ್ನಿನೊಂದಿಗೆ ಆ ರೀತಿ ಆಟವಾಡುತ್ತಿದ್ದುದು ರೂಢಿ.

'ನನ್ನಂಥ ತಂದೆ ತಾಯಂದಿರು ನಿಮಗಿದ್ದಿದ್ದರೆ!'

'ತ್ರಿವಿಕ್ರಮ ಹಾಗೇಕೆ ಮಾತನಾಡಿದ! ನನ್ನದೇನಾದರೂ ಪೂರ್ವದ ಇತಿಹಾಸ ತಿಳಿದಿದೆಯೆ? ಛೆ! ಸರ್ವಥಾ ಇಲ್ಲ. ಈ ಗುಜರಾತಿಗೇನು ಗೊತ್ತು, ಮಂಗಳೂರಿನ ಸಮೀಪದ ಆ ಹಳ್ಳಿಯ ಕತೆ!'

ತನಗೇ ಎಲ್ಲಿದೆ ನೆನಪು! ಅದು ಬೇಡವೆಂದಲ್ಲವೆ! ಅದನ್ನು ಅಳಿಸಲೆಂದಲ್ಲವೆ, ಮುಂಬಯಿಗೆ ಬಂದುದು! ತನ್ನ ಭವಿಷ್ಯವನ್ನು ನಿರ್ಧರಿಸುವ ಅಧಿಕಾರ ಯಾವ ನೆನಪಿಗೂ ಇರಬಾರದೆಂದಲ್ಲವೆ- ತಾನು ಮಾಡಿದ ಒಂದು ಸಣ್ಣ ತಪ್ಪು, ತನ್ನ ಜೀವನದುದ್ದ ತಡೆಯಾಗುವುದು ಬೇಡವೆಂದಲ್ಲವೆ, ಮುಂಬಯಿಗೆ ಬಂದುದು!

ಪೆನ್ನನ್ನು ಮೇಜಿನ ಮೇಲಿರಿಸಿ ದಾಮೋದರರಾಯರು ತನ್ನ ಬಕ್ಕತಲೆಯನ್ನು ಸವರಿಕೊಂಡರು. ಕುರ್ಚಿಯಲ್ಲಿ ಕುಳಿತಿದ್ದಂತೆ, ಅಸ್ಪಷ್ಟ ನಡುಕದ ಅನುಭವ. ತ್ರಿವಿಕ್ರಮನನ್ನು ಪ್ರಶ್ನಿಸುತ್ತಿದ್ದಾಗ, ಯೌವನದ ಉನ್ಮಾದ ತುಂಬಿದ ಆ ಮೊಗದಲ್ಲಿ, ದಶಕದಶಕಗಳೇ ಹಿಂದೆ ಸರಿದು, ತನ್ನ ಪ್ರತಿಬಿಂಬವನ್ನೆ ಕಂಡಂತೆ ಭಾಸವಾದಾಗ, ಕಾಲ ನಿತ್ಯ ಸತ್ಯ, ಅದು ಸಾಯುವುದೆಂದೇ ಇಲ್ಲ ಎಂದೆನಿಸಿತ್ತು ಒಂದು ಕ್ಷಣ...

ಈಗೇಕೆ ನಡುಕ!

ಎಂದೋ ಸತ್ತಿದೆಯೆಂದು ಭಾವಿಸಿದ್ದ ನೆನಪಿಗೆ ತಾನೇಕೆ ಇಂದು ತನ್ನ ಜೀವನದೊಂದಿಗೆ ಸಂಬಂಧವನ್ನು ಕಲ್ಪಿಸುತ್ತಿದ್ದೇನೆ!

'ನನ್ನಂಥ ತಂದೆ-ತಾಯಂದಿರು ನಿಮಗಿದ್ದಿದ್ದರೆ!'

ಈಗ ತಂದೆಯೂ ಇಲ್ಲ...ತಾಯಿಯೂ ಇಲ್ಲ. ಹುಟ್ಟೂರಿನ ಸಂಬಂಧವೂ ಇಲ್ಲ. ಅವನ್ನೆಲ್ಲ ಕಡಿದೊಗೆದು ಮುಂಬಯಿಯಲ್ಲಿ ಕಟ್ಟಿದ ಹೊಸ ಬಾಳಿನ ಆಶಾದೀಪವಾಗಿ ಮಂದಾ ನಗುತ್ತಿದ್ದಾಳೆ...

ಮಂದಾ ನಗುತ್ತಿದ್ದಾಳೆಯೆ!

ತಗ್ಗಿಸಿದ ಮುಖ...ಮುಂದಾಳ ನೆನಪು ಬಂದಾಗಲೆಲ್ಲ ಅವರು ಮೊದಲು ಕಾಣುತ್ತಿದ್ದುದು ಆಕೆಯ ತಗ್ಗಿಸಿದ ಮುಖವನ್ನೇ. ಎಣ್ಣೆಗಪ್ಪ

...ಅಂಥ ಹೇಳಿಕೊಳ್ಳುವ ಚೆಲುವೆಯೇನಲ್ಲವಾದರೂ, ನಿಧಾನವಾದ ಮಾತು, ನಡೆ, ಯಾವುದೋ ಒಂದು ದೂರದ ಕನಸನ್ನೆ ಸದಾ ನೆಚ್ಚಿಕೊಂಡಿರುವಂಥ ಮುಖಭಾವ, ಆಕೆಯ ವ್ಯಕ್ತಿತ್ವಕ್ಕೆ ತುಂಬ ಗಾಂಭೀರ್ಯದ ಒಪ್ಪುಕೊಟ್ಟಿದ್ದವು.

ಅಥವಾ ಅದು ಬರಿಯ ಭ್ರಮೆಯೆ !

ಛೆ! ಸರ್ವಥಾ ಇರಲಾರದು. ದುಡಿಮೆಗೆ ಹೊರತಾದ ಅವರ ಜೀವನಕ್ಕೆ ಏನಾದರೂ ಅರ್ಥವಿದೆಯೇ ಎಂದು ಯೋಚಿಸುವ ಸಂದರ್ಭ ಬಂದಾಗಲೆಲ್ಲ ಅವರಿಗೆ ಕಾಣುತ್ತಿದ್ದುದು ಮಂದಾ—ಹೆಂಡತಿ ಕಮಲೆ ಕೂಡ ಅಲ್ಲ. ಮಗಳು 'ಅಪ್ಪಾ' ಎಂದು ಕರೆಯುವಾಗಲೆಲ್ಲ ಆ ಕ್ಷಣಕ್ಕಾಗಿ ತಾನು ಬದುಕಿದ್ದೇನೆ ಎಂದೆನಿಸುತ್ತಿತ್ತು ದಾಮೋದರ ರಾಯರಿಗೆ...ಆ ಕರೆಯಲ್ಲಿ ಅವರು ಕಾಣುತ್ತಿದ್ದುದು ಅಪಾರ ಪ್ರೀತಿಯ ಸಾಗರವನ್ನೇ. ಹಳೆಯ ಇತಿಹಾಸವನ್ನೆ ತೊಳೆದು ಮುಂಬಯಿಗೆ ಬಂದು ಆರಂಭಿಸಿದ ಅವರ ಜೀವನದ ನಂದಾದೀಪ, ಮಂದಾ...

ಹಳೆಯ ಇತಿಹಾಸವನ್ನೇ ತೊಳೆದು...

ನೆನಪಿನ ಕಿಡಿ ಭುಗ್ಗನೆ ಹತ್ತಿಕೊಂಡು, ಹಳೆಯದನ್ನೆ ಬೆಳಕಿಗೆ ತರುತ್ತಿದೆಯೆ ಎಂಬ ಸಂದೇಹ ದಾಮೋದರರಾಯರ ಮನಸ್ಸಿನಲ್ಲಿ ಮಿಂಚಿತು. 'ಮಂದಾಗೆ ಈ ವಿಚಾರ ಏನಾದರೂ ತಿಳಿದಿದೆಯೆ?' 'ಛೆ! ಇರಲಾರದು...ತಿಳಿದರೆ, ತಾಯಿಯ ಬಾಯಿಯಿಂದ ತಿಳಿಯಬೇಕು. ಆದರೆ ಕಮಲಾ ಆ ವಿಚಾರ ಹೇಳುವಂತೆಯೇ ಇಲ್ಲ.'

ಸಾಧಾರಣವಾದ ದೇಹಾಲಸ್ಯ ಮುತ್ತಿದಾಗಲೂ ದಾಮೋದರರಾಯರಿಗೆ ತನ್ನ ಕೆಲಸದಲ್ಲಿ ಏಕಾಗ್ರತೆ ತಪ್ಪುತ್ತಿರಲಿಲ್ಲ. ಆದರೆ ಇಂದು ಮಾತ್ರ ತ್ರಿವಿಕ್ರಮ ದೇಸಾಯಿ ಹೊರಟು ಹೋದ ಮೇಲೆ, ಆಫೀಸಿನ ಕೆಲಸ ಮುಂದುವರಿಸಲು ಸಾಧ್ಯವಾಗಲಿಲ್ಲ.

ಮೂವತ್ತೊಂದು ವರುಷಗಳ ಹಿಂದೆ, ದೂರದ ಮಂಗಳೂರಿನ ಸಮೀಪದ ಆ ಹಳ್ಳಿಯಲ್ಲಿ ತಾನು ಕೈಹಿಡಿದು ತೊರೆದಿದ್ದ ಹುಡುಗಿ-ಪದ್ಮಾವತಿ ಎಂದಲ್ಲವೆ, ಹೆಸರು! ತಂದೆ ತಾಯಂದಿರ ಒತ್ತಾಯದಿಂದಾಗಿ ಮದುವೆ! ಹಾಗಾದರೆ ತನಗೆ ಅಂದು ಯಾವ ಸ್ವತಂತ್ರ ಭಾವನೆಯೂ ಇರಲಿಲ್ಲವೆ! ಆ ಮದುವೆಯ ನಾಟಕ ನಡೆದು ಯಾವ ಭಾವನೆಯನ್ನೂ ಪ್ರಕಟಿಸದ ಪದ್ಮಾವತಿಯ ಮುಖದಲ್ಲಿ ತನ್ನ ತಪ್ಪು ಹೆಜ್ಜೆಯನ್ನು ಗುರುತಿಸಿ. ಮಿಡುಕಿದೆ, ಎಂಬ ಭಾವ ಮೊಳೆತಾಗ...ಅಪಸ್ಮಾರದ ಹೆಸರು ಕೊಟ್ಟು ಆಕೆಯನ್ನು ತವರಿಗಟ್ಟಿದಾಗ...

ಆ ನೆನಪನ್ನು ಅಳಿಸಬೇಕು ಅಳಿಸಬೇಕು ಎಂಬ ಹಟ ಮೂಡಿದಾಗ...

ಪದ್ಮಾವತಿಯನ್ನು ತೊರೆದು ಬಿಡಲು ಯಾವ ಕಷ್ಟವೂ ಆಗಲಿಲ್ಲ. ದೂರದ ಮುಂಬಯಿಯಲ್ಲಿ ಹೊಸ ಜೀವನ ಕಾದಿತ್ತು. ಗಂಡ ಬಿಟ್ಟವಳು ಎಂಬ ಅಪವಾದ ಹೊತ್ತು ಮುಗ್ಧೆ ಪದ್ಮಾವತಿ ಆ ಹಳ್ಳಿಗಾಡಿನಲ್ಲಿ ಕೊಳೆತರೇನಂತೆ!

ಆ ನೆನಪನ್ನು ಅಳಿಸುವ ಹಟಕ್ಕೆ ಯಶ ದೊರಕಿತ್ತು. ತಂದೆ-ತಾಯಂದಿರು ಮೊದಲು ನೊಂದುಕೊಂಡರು. ಆದರೆ ಪದ್ಮಾವತಿಯನ್ನು ತವರಿಗೆ ಕಳುಹಿಸಿ ಮುಂಬಯಿಗೆ ಓಡಿ ಹೋದ ಮಗ ಊರಿಗೆ ಮರಳುವುದೇ ಸಂಶಯವೆಂಬ ಹೆದರಿಕೆ ಮೂಡಿದಾಗ, ಮಗನ ಮನಸ್ಸಿನ ನೋವನ್ನೆ, ತನ್ನ ನೋವನ್ನಾಗಿ ಅವರು ಪರಿವರ್ತಿಸಿಕೊಂಡು ಪದ್ಮಾವತಿಯ ವಿಚಾರ ಮಾತ ಬಿಟ್ಟರು, ಆಕೆಯ, ಸಂಬಂಧವನ್ನು ಬಿಟ್ಟರು.


ಮುಂದೆ, ತಂದೆಯ ಸಾವು, ತಾಯಿಯ ಸಾವು, ದಾಮೋದರರಾಯರಿಗೆ ಊರಿನ ನೆನಪನ್ನೆ ಅಳಿಸಲು ಸಹಾಯ ಮಾಡಿದಾಗ. ಮಂದಾ ನಗು ನಗುತ್ತ ಬೆಳೆಯುತ್ತಿದ್ದಳು...ಮುಂಬಯಿಯಲ್ಲಿ.

ಆದರೆ ಇಂದು ತ್ರಿವಿಕ್ರಮ ದೇಸಾಯಿ ಹಾಗೇಕೆ ಮಾತನಾಡಿದ!

'ಒಂದು ವೇಳೆ ಮದುವೆಯಾಗಿ ಆಕೆಯನ್ನು ಆಕೆಯ ಪಾಡಿಗೆ ಬಿಟ್ಟಿದ್ದರೆ!'

ರಾಯರಿಗೆ ಬೇರಾವ ಕೆಲಸವನ್ನೂ ಮಾಡಲಾಗಲಿಲ್ಲ. ಉದಾಸೀನದಿಂದೆಂಬಂತೆ ಆಗೊಮ್ಮೆ, ಈಗೊಮ್ಮೆ ಬರುತ್ತಿದ್ದ ಟೆಲಿಫೋನು ಕರೆಗಳಿಗೆ ಉತ್ತರ ಹೇಳುತ್ತಿದ್ದರು. ಬಾಕಿ ಉಳಿದಿದ್ದ ಕಾಗದಗಳ 'ಟ್ರೇ' ತುಂಬುತ್ತಲೇ ಇತ್ತು. ಅಸಾಧಾರಣ ಪರಿಶ್ರಮದ ಯೋಗ್ಯತೆಯ ದಾಮೋದರ ರಾಯರ ಕಸುವನ್ನು ಇಂದು ಹಳೆಯ ನೆನಪೊಂದು ಸೆಳೆದುಕೊಂಡಿತ್ತು.

ಸತ್ತಿದೆಯೆಂದೇ ಭಾವಿಸಿದ್ದ ಪದ್ಮಾವತಿಯ ನೆನಪಿಗೆ ಜೀವಬಂದು ಆಕೆ ತನ್ನಿದಿರಿಗೆ ಕುಳಿತಿದ್ದಳೇನೋ ಎಂಬಂತೆ ಭಾಸವಾಗತೊಡಗಿತು.



ಮೂವತ್ತೊಂದು ವರ್ಷಗಳ ಹಿಂದೆ ನೋಡಿದ ಹುಡುಗಿ ಆಗಿನ್ನೂ ತಾರುಣ್ಯದ ಹೊಸ್ತಿಲಲ್ಲಿ 'ನೀನು ತವರಿಗೆ ಹೋಗಿಬಾ...ಕರೆಯಲು ನಾನೇ ಬರುತ್ತೇನೆ' ಎಂದು ಮದುವೆಯಾದ ಎರಡೇ ತಿಂಗಳಲ್ಲಿ ಆಕೆಯನ್ನು ತನ್ನ ಜೀವನದಿಂದ ಹೊರಗಟ್ಟಿದಾಗ, ಆಕೆಯ ಕಣ್ಣು ತುಂಬಿರಲಿಲ್ಲ. ಆ ಮುಖದಲ್ಲಿ ಯಾವ ಭಾವವೂ ಇರಲಿಲ್ಲ.

ಈಗ, ಜೀವನದ ಮಧ್ಯರೇಖೆಯನ್ನು ಸಮೀಪಿಸಿರಬಹುದಾದ ವ್ಯಕ್ತಿ ಹೇಗಿರಬೇಕು? ಮೂವತ್ತೊಂದು ವರ್ಷ ಕಾಲ ಕೈಹಿಡಿದ ಗಂಡ

ಜೀವಂತ ಇದ್ದೂ ಒಂಟಿ ಬಾಳನ್ನು ನಡೆಸಿದ ಆ ಯುವತಿಯ ಹೃದಯದಲ್ಲಿ ತನ್ನ ಬಗೆಗೆ ಎಂಥ ಭಾವನೆಗಳಿರಬೇಕು!

ಮನೋವಿಜ್ಞಾನದ ಅಭ್ಯಾಸ ಮಾಡಿದ ಮಗಳು ಮಂದಾ, ಈ ವಿಚಾರ ತಿಳಿದರೆ ಏನೆನ್ನುವಳೋ!

'ಛೆ! ಈ ಗುಜರಾತೀ ಗೃಹಸ್ಥನೇಕೆ ಮನೆಗೆ ಬಂದ?' ಎಂದುಕೊಂಡರು ದಾಮೋದರರಾಯರು ತನ್ನಷ್ಟಕ್ಕೆ. ಪದ್ಮಾವತಿ ತನ್ನ ಪಾಲಿಗೆ ಎಂದೋ ಸತ್ತಿದ್ದಾಳೆ...ಆಕೆಯ ನೆನಪನ್ನು ಹಸಿಯಾಗಿಡುವ ಈ ಯತ್ನವೇಕೆ?

ಸತ್ತಿದ್ದಾಳೆಯೆ!

ಎಂಟು ವರ್ಷಗಳ ಹಿಂದೆ, ರಾಯರ ವಿಳಾಸಕ್ಕೆ ಒಂದು ಕಾಗದ ಬಂದಿತ್ತು. 'ಯಾರದೋ, ಏನೋ ದಿನವೂ ಬರುವ ನೂರು ಕಾಗದಗಳ ಜತೆಗೆ ಇದೂ ಒಂದು' ಎಂದುಕೊಂಡು ಅವರು ಆ ಲಕೋಟೆಯನ್ನು ಒಡೆದು ನೋಡಿದ್ದರು. ಅಂದು ಕೂಡ ಒಂದು ಆಶ್ಚರ್ಯ ಕಾದಿತ್ತು. ಇಂದಿನಂತೆಯೇ ಸತ್ತ ನೆನಪಿಗೆ ಜೀವಕೊಡುವ ಯತ್ನ... ಪದ್ಮಾವತಿಯಿಂದ ಅವರಿಗೆ ಬಂದ ಮೊದಲ ಹಾಗೂ ಕೊನೆಯ ಪತ್ರ...ಅಪರಿಚಿತ ಬರೆಹ... ಅಶುದ್ಧ ವಾಕ್ಯಗಳು. ಯಾವುದೋ ಒಂದು ಮಗುವಿನ ಶಾಲೆಯ ಪುಸ್ತಕದಿಂದ ಹರಿದ ಹಾಳೆಯೊಂದರಲ್ಲಿ ಪದ್ಮಾವತಿ ಯಾರಿಂದಲೋ ಬರೆಸಿದ್ದುದಿಷ್ಟೆ: "ನನ್ನನ್ನು ತೊರೆದು ಹೋದ ನಿಮಗೆ ಈ ಕಾಗದ ಬರೆಯುವ ಧೈರ್ಯ ನನಗಿಲ್ಲ. ಆದರೆ ಯಾರೋ, ಸಾವಿರಗಟ್ಟಲೆ ಸಂಬಳಬರುವ ದೊಡ್ಡ ಕೆಲಸದಲ್ಲಿದ್ದೀರಿ ಎಂದು ಹೇಳಿದರು. ನನ್ನ ಹೆತ್ತವರು ತೀರಿಕೊಂಡಿದ್ದಾರೆ. ಅಣ್ಣ ನೂರು ಮಾತು ಹೇಳಿ ಕೆಲವು ದಿನ ಅನ್ನ ಹಾಕಿದ. ಈಗ ಮನೆಯಿಂದ ಹೊರಗೆ ಹಾಕುವುದರಲ್ಲಿದ್ದಾನೆ. ಅಲ್ಲಲ್ಲಿ ಏನೋ ಚಾಕರಿಮಾಡಿಕೊಂಡು ಬದುಕಿದ್ದೇನೆ. ಸಾಲದುದಕ್ಕೆ ಮೈಯಲ್ಲಿ ಸೌಖ್ಯವೂ ಇಲ್ಲ. ಅನುಕೂಲವಾದಾಗ, ಒಂದು ಹತ್ತು ಹತ್ತು ರೂಪಾಯಿಗಳನ್ನಾದರೂ ಕಳಿಸಲು ಸಾಧ್ಯವಿದ್ದರೆ, ಬದುಕಿರುವಷ್ಟು ದಿನ ನಿಮ್ಮ ನೆನಪು ಮಾಡುತ್ತೇನೆ..."

ಚೂರು ಚೂರಾದ ಆ ಕಾಗದ ಕಸದ ಬುಟ್ಟಿಯ ದಾರಿ ನೋಡಿತ್ತು.

ಯಾವ ಸಂಬಂಧ! ಎಂಥ ನೆನಪು!

ಪದ್ಮಾವತಿ ಬೇಡಿದ ಹತ್ತೋ ಹದಿನೈದು ರೂಪಾಯಿಗಳನ್ನು ಕಳಿಸುವುದು ಅವರಿಗೆ ಕಷ್ಟದ ಮಾತಾಗಿರಲಿಲ್ಲ. ಆದರೆ ಬೇಡವಾದ ಈ ನೆನಪಿಗೆ ಜೀವ ಕೊಡಲು ದಾನದ ಸಾಕ್ಷಿಯೇಕೆ?

ಪದ್ಮಾವತಿಯ ಕೂಗಿನ ಸದ್ದು ಆ ರೀತಿ ಅಡಗಿತ್ತು.

ಆದರೆ ಇಂದು ಅದು ಮರುದನಿ ಕೊಡುತ್ತಿದೆ.

ಮರುದನಿಯಷ್ಟೇ ಏಕೆ! ಇದಿರಿಗೇ ಪದ್ಮಾವತಿ ಕುಳಿತಿದ್ದಾಳೆ, ತೀರ ಅಪರಿಚಿತ ಮುಖ. ಸುಕ್ಕುಗಟ್ಟಿದ ಮುಖ, ಮುಖದ ಚರ್ಮ ಹೀಗೂ ಬಣಗುವದುಂಟೇ ಎಂಬ ಭಯ ತರಿಸುವಂಥ ವಿಕಾರ ಮುಖ...ಆಕೆ ಬೇಡಿದ್ದು ಬೇರೆ-ನಿಲ್ಲ...ಬರೇ ಹತ್ತು ರೂಪಾಯಿಗಳ ದಾನ...

ದಾಮೋದರರಾಯರು ಕುರ್ಚಿಯಿಂದೆದ್ದು ಎರಡು ನಿಮಿಷ ಕೋಣೆಯಲ್ಲೆ ಅತ್ತಿಂದಿತ್ತ ತಿರುಗಿದರು. ಮರಳಿ ಬಂದು ಮೇಜಿನೊಳಗಿಂದ ಚೆಕ್ ಪುಸ್ತಕ ತೆಗೆದು ನೂರು ರೂಪಾಯಿಗಳಿಗೆ ಒಂದು ಚೆಕ್ ಬರೆದರು...ಮೂವತ್ತೊಂದು ವರ್ಷ ಹಿಂದೆ ಕಂಡಿದ್ದ ಹಳ್ಳಿಯ ನೆನಪು ತಂದುಕೊಂಡು ಪದ್ಮಾವತಿಯ ವಿಳಾಸ ಬರೆದು ತನ್ನ ಕಾರ್ಯದರ್ಶಿಯನ್ನು ಕರೆದರು. ಆಕೆ ಬಳುಕುತ್ತಲೇ ಬಂದಾಗ,

"ಈ ಚೆಕ್‌ನ ಹಣ ಪಡೆದು ಈ ವಿಳಾಸಕ್ಕೆ ಮನಿಯಾರ್ಡರು ಮೂಲಕ ಕಳುಹಿಸು. ನನ್ನ ಹೆಸರು ಸೂಚಿಸಿದರೆ ಸಾಕು...ಬೇರೇನೂ ಬರೆಯಬೇಕಾಗಿಲ್ಲ" ಎಂದರು.

"ಯಾರಿದು ಪದ್ಮಾವತಿ?" ಎಂದು ಬಂತು ಪ್ರಶ್ನೆ–ಮಿಸ್ ಪೆರೇರಾಳದು.

"ಗೆಟ್ ಔಟ್...ಹೇಳಿದಷ್ಟು ಕೆಲಸ ಮಾಡು" ಎಂದರು ದಾಮೋದರರಾಯರು.

ಆದರೆ ಸಂಜೆ ಮನೆ ಸೇರುವ ವರೆಗೂ ಮಿಸ್ ಪೆರೇರಾ ಕೇಳಿದ ಪ್ರಶ್ನೆಯನ್ನು ಮರೆತುಬಿಡಲು ದಾಮೋದರರಾಯರಿಗೆ ಸಾಧ್ಯವಾಗಲಿಲ್ಲ. "ಯಾರಿದು ಪದ್ಮಾವತಿ?"

ಯಾರೋ ಏನೊ!

ಒಂದು ವೇಳೆ ಮಂದಾ ಆ ಪ್ರಶ್ನೆಯನ್ನು ಕೇಳಿದರೆ? 'ಅಪ್ಪಾ ಯಾರಿದು ಪದ್ಮಾವತಿ?' ಎಂದರೆ!

'ಅಪ್ಪಾ! ನನ್ನ ಗಂಡ ಹೊಸದೇನನ್ನೂ ಮಾಡಿಲ್ಲ...ನಿನ್ನಂತೆಯೆ... ಎಂದರೆ!'

ಎದೆಯೊಳಗಿನ ಅವ್ಯಕ್ತ ಭೀತಿ ಭೂತಾಕಾರ ತಳೆಯುತ್ತಿತ್ತು. ಕೇಶವ ಬಾರದೆಯ ಉಳಿದಾನೆ! ಹೋಗಿ ಆರು ತಿಂಗಳಲ್ಲೆ ಮಂದಾಕಿನಿಯನ್ನು ಕರೆಸಿಕೊಳ್ಳುತ್ತೇನೆಂದು ಹೇಳಿ, ಒಂದು ವರ್ಷವಾದರೂ ಆ ವಿಚಾರ ಏನೂ ಬರೆಯದ ಕೇಶವ ಮಂದಾಕಿನಿಯನ್ನು ಮರೆತಿದ್ದಾನೆಯೆ! ದೂರದ ಅಮೇರಿಕಾಕ್ಕೆ ಹೋಗಲು ಎಲ್ಲ ಆರ್ಥಿಕಾನುಕೂಲತೆಯನ್ನೂ ಮಾಡಿಕೊಟ್ಟ ಮಾವನ ಉಪಕಾರವನ್ನೆ ಮರೆಯುವಷ್ಟು ಕೃತಘ್ನನಾದಾನೇ! ಸಾಂತಾಕ್ರೂಜ್ ವಿಮಾನ ನಿಲ್ದಾಣದಲ್ಲಿ ಎಲ್ಲರ ಇದಿರಿಗೇ ಹೆಂಡತಿಯ ಕಣ್ಣೀರೊರೆಸಿ, ಗದ್ಗದವರಿ "ಚಿಯರ್ ಅಪ್ ಮಂದಾ...ಬ್ಯಾ...ಬ್ಯಾ" ಎಂದಿದ್ದ ಕೇಶವನ ನೆನಪಿನಿಂದ ಮಂದಾಕಿನಿ ಮರೆಯಾದಾಳೆ!

ಮೊದಲು ಹದಿನೈದು ದಿನಗಳಿಗೊಮ್ಮೆ ಕಾಗದ...ಆಮೇಲೆ ತಿಂಗಳಿಗೊಂದು...ಈಗ...

'ಸ್ಕೌಂಡ್ರೆಲ್'

ಒಂದು ವೇಳೆ ಕೇಶವ ಭಾರತಕ್ಕೆ ಮರಳದೆಯೇ- ಉಳಿದರೆ! ಮಂದಾಕಿನಿಯನ್ನು ಕರೆಸಿಕೊಳ್ಳದಿದ್ದರೆ!

ಮುಂದೇನು?

ಸಂಜೆ ಗಂಡನ ಬಾಡಿದ ಮುಖ ನೋಡಿದಾಗ, ವಿಶೇಷ ಪರಿಶ್ರಮದ ಪರಿಣಾಮವಿದೆಂದು ಭಾವಿಸಿದ ಕಮಲಾಬಾಯಿಗೆ ಹೆಚ್ಚು ಮಾತನಾಡಿಸುವ ಉತ್ಸಾಹವಾಗಲಿಲ್ಲ. ಮಂದಾಕಿನಿ ಮನೆಯಲ್ಲಿರಲಿಲ್ಲ. ಬಟ್ಟೆ ಬದಲಿಸಿ, ಯಾವುದಾದರೊಂದು ಪುಸ್ತಕ ಹಿಡಿದುಕೊಂಡು ಬಾಲ್ಕನಿಗೆ ಬಂದು ತನ್ನ ಪ್ರೀತಿಯ ಆರಾಮ ಕುರ್ಚಿಯಲ್ಲಿ ಅರ್ಧತಾಸು ಕುಳಿತಿರುವುದು ರಾಯರಿಗೆ ರೂಢಿ. ಆಗ ಕಮಲೆ ಬಂದು ಬಳಿಯಲ್ಲೆ ನಿಲ್ಲುತ್ತಾಳೆ. ಮಂದಾ ನಗುನಗುತ್ತ ಬಂದು ಮಾತನಾಡಿಸುತ್ತಾಳೆ. ಮೂವರೂ ಬಾಲ್ಕನಿಯ ದಂಡೆಯ ಬಳಿ ನಿಂತು ಇದಿರಿಗೇ ಕಾಣುವ ಅರಬೀ ಸಮುದ್ರದಲ್ಲಿ ಸೂರ್ಯಾಸ್ತವನ್ನು ನೋಡುತ್ತಿರುತ್ತಾರೆ. ಆಗ ಕಾಲ ಸರಿಯುವುದಿಲ್ಲ.

ಇಂಥ ಸಂದರ್ಭಗಳಲ್ಲೆಲ್ಲ ಮೂವತ್ತು ವರ್ಷಗಳ ದುಡಿಮೆಯ ಧನ್ಯತೆಯೆಲ್ಲ ಆ ಕ್ಷಣದಲ್ಲಿದೆಯೆಂದು ರಾಯರಿಗೆ ಭಾಸವಾಗುತ್ತಿತ್ತು.

ಆದರೆ...ಇಂದು...ಕಮಲೆ ಬಾಲ್ಕನಿಗೆ ಬರಲಿಲ್ಲ...ಮಂದಾಕಿನಿಯೂ ಬರಲಿಲ್ಲ. ಪದ್ಮಾವತಿ ಮಾತ್ರ ತನ್ನನ್ನರಸಿ ಬಂದಂತೆ ದಾಮೋದರರಾಯರಿಗೆ ಭಾಸವಾಯಿತು.

"ಕಮಲಾ" ಎಂದು ತುಸು ಗಾಬರಿಯಿಂದಲೇ ರಾಯರು ಹೆಂಡತಿಯನ್ನು ಕರೆದರು.

ಆ ರೀತಿಯ ಕರೆ ಕೇಳಿ ಹೆದರಿದ ಕಮಲಾಬಾಯಿ ಕಾಫಿಯ ತಟ್ಟೆ ಹಿಡಿದುಕೊಂಡು ಓಡಿ ಬಂದರು. "ಏನು, ಏನಾಯಿತು?"

"ಮಂದಾ ಎಲ್ಲಿ?"

"ಅಷ್ಟೆಯೇ?" ಎಂದರು ಕಮಲಾಬಾಯಿ. "ನೀವು ಕರೆದ ರೀತಿ ನೋಡಿ ಏನಾಯಿತೋ ಎಂದು ಹೆದರಿದ್ದೆ. ಮಂದಾ ಮಧ್ಯಾಹ್ನ ಊಟ ತೀರಿಸಿ ಮೆರಿನ್‌ಡ್ರೈವ್‌ಗೆಂದು ಹೋದವಳು ಇನ್ನೂ ಬಂದಿಲ್ಲ. ನಂದಿನಿ ನಾಳೆ ಒಂದು ವಾರದ ಮಟ್ಟಿಗೆ ಬೆಂಗಳೂರಿಗೆ ಹೋಗುತ್ತಾಳಂತೆ. ಜತೆಗೆ ಬಾ ಎಂದು ಮಂದಾಗೂ ಒತ್ತಾಯಮಾಡುತ್ತಿದ್ದಾಳೆ."

"ಮಂಗಳೂರಿಗೆ!"

"ಮಂಗಳೂರಿನಲ್ಲೇನಿದೆ, ನಂದಿನಿಗೆ! ಬೆಂಗಳೂರಿನ ತನಕ ಕಾರಿನ ಪ್ರಯಾಣ. ಮಂಗಳೂರಿನ ನೆನಪೇಕೆ ಬಂತು ನಿಮಗೆ!"

ದಾಮೋದರರಾಯರು ಆ ಪ್ರಶ್ನೆಗೆ ಕೂಡಲೇ ಉತ್ತರ ಹೇಳಲಿಲ್ಲ.

"ಏನಾದರೂ ಕಾಗದವಿತ್ತೇ ಇವೊತ್ತು?"

ಕಾಗದದ ನೆನಪು ಕಮಲಾಬಾಯಿಗೆ ಬೇಡವಿತ್ತು. ಮಗಳು ಮಂದಾ ದೂರದ ಅಮೇರಿಕಾಕ್ಕೆ ಹೋಗಿ ಗಂಡನನ್ನು ಸೇರಿಕೊಳ್ಳುತ್ತಾಳೆ; ಆ ನಾಡಿನ ಜೀವನದ ಬಗೆಗೆ ದಿನವೂ ಕಾಗದ ಬರೆಯುತ್ತಿರುತ್ತಾಳೆ ಎಂಬ ಕನಸನ್ನೇ ಬೆಳೆಸಿಕೊಂಡಿದ್ದ ಅವರಿಗೆ, ಅದನ್ನು ಅಲುಗಿಸುವ ಯಾವ ನೆನಪೂ ಬೇಕಿರಲಿಲ್ಲ. ಕೇಶವನ ಕಾಗದ ವಿರಳವಾದಾಗ, ಈ ಕಾಯುವಿಕೆಯಲ್ಲಿ ಏನೋ ಗಂಡಾಂತರ ಕಾದಿದೆಯೆಂಬ ಭಯ ಮೂಡತೊಡಗಿದಾಗ, ಅವರು ಹೆದರಿದ್ದರು. ಆದರೆ, ಏಕೋ ಏನೋ ಇಂದಲ್ಲ ನಾಳೆ ಕೇಶವ ಬಾರದೆ ಉಳಿಯುತ್ತಾನೆಯೋ ಎಂಬ ಧೈರ್ಯದಲ್ಲಿ ಅವರು ಆಸರೆಯನ್ನು ಕಂಡುಕೊಂಡಿದ್ದರು.

"ಇಲ್ಲ...ಇವೊತ್ತೇನೂ ಇಲ್ಲ...ಏನು ಅಭ್ಯಾಸದ ಗಡಿಬಿಡಿಯೋ"

ರಾಯರು ಮಾತನಾಡಲಿಲ್ಲ. ಹೆಂಡತಿ ತನ್ನ

ಮನಸ್ಸಿನ ಕಳವಳವನ್ನು ಈ ರೀತಿ ಮುಚ್ಚಿಡುತ್ತಿದ್ದಾರೆಂಬುದು ಅವರಿಗೆ ತಿಳಿದಿತ್ತು. ಅವರು ಕ್ಷಣಕಾಲ ತಡೆದು,

"ಕಮಲಾ, ಮಂದಾಗೆ ಪದ್ಮಾವತಿಯ ವಿಚಾರವೇನಾದೂ ತಿಳಿದಿದೆಯೆ?" ಎಂದು ನಿಧಾನವಾಗಿ ಕೇಳಿದರು.

ಕಮಲಾಬಾಯಿ ಬಾಲ್ಕನಿಯ ದಂಡೆಯ ಬದಿ ನಿಂತಿದ್ದವರು ಗಂಡನನ್ನೇ ನೋಡಿ "ಯಾವ ಪದ್ಮಾವತಿ?" ಎಂದರು. ಆದರೆ ಗಂಡನ ಮುಖ ಚೆನ್ನಾಗಿ ದಿಟ್ಟಿಸಿ ನೋಡಿದೊಡನೆಯೇ ತನ್ನ ತಪ್ಪಿನ ಅರಿವಾಯಿತು. "ಓ! ಪದ್ಮಾವತಿಯೆ! ಛೆ ಇಲ್ಲ... ಯಾರು ಹೇಳುತ್ತಾರೆ ಮಂಗಳೂರಿನ ಹುಚ್ಚಿಯ ಹಳೆಯ ಕತೆ!"

"ಹೌದು, ಹುಚ್ಚಿಯ ಹಳೆಯ ಕತೆ" ಎಂದರು ದಾಮೋದರರಾಯರು ನಿಧಾನವಾಗಿ ಹಾಗೆಯೇ "ಮಗು ಕೇಶವನ ಕಾಗದವಿಲ್ಲವೆಂದು ಬೇಸರದಲ್ಲಿರುವಾಗ ಈ ಕತೆಯನ್ನು ತಪ್ಪಿಯಾದರೂ ಹೇಳಬೇಡ" ಎಂದರು.

ಆ ಕತೆಗೂ ಕೇಶವನ ಕಾಗದಕ್ಕೂ ಏನು ಸಂಬಂಧವೆಂದು ಕಮಲಾಬಾಯಿಗೆ ಹೊಳೆಯಲಿಲ್ಲ. ಆ ಕಾರಣ ಅವರು ಯಾವ ಮಾತನ್ನೂ ಆಡಲಿಲ್ಲ.

ಮತ್ತರ್ಧ ಘಂಟೆ ಕಳೆದ ಮೇಲೆ ಮಂದಾಕಿನಿ ಮನೆಗೆ ಬಂದಳು. ತಂದೆ ಸಂಜೆ ಮನೆಗೆ ಮರಳಿದಾಗ ಮೊದಲು ಕೇಳುವ ಪ್ರಶ್ನೆಯೇನೆಂದು ಆಕೆಗೆ ತಿಳಿದಿದೆ. ಮೊದಲು ಸ್ಪಷ್ಟವಾಗಿ ಮಾತಿನಲ್ಲೇ ಪ್ರಕಟವಾಗುತ್ತಿದ್ದ ಕೇಶವನ ಕಾಗದವಿದೆಯೇ?" ಪ್ರಶ್ನೆ ಈಗ ಪ್ರಕಟವಾಗುತ್ತಿದ್ದುದು ಬರೇ ದೃಷ್ಟಿಯಲ್ಲೇ. ಆದರೆ ಆಕೆಯ ತಿಳಿನಗೆಯ ಉತ್ತರ ಒಂದೇ ರೀತಿಯದು. ಯಾವ ರೀತಿಯ ಬೇಸರವೂ ವ್ಯಕ್ತವಾಗಬಾರದೆಂಬಂತೆ, ಯಾವುದೋ ಕನಸನ್ನು ಸದಾ ನೆಚ್ಚಿಕೊಂಡಿರುವಂತೆ, ಆಕೆ ತುಸುವೆ ನಕ್ಕಂತೆ ಮಾಡಿ ತಲೆ ತಗ್ಗಿಸುವಾಗ, ದಾಮೋದರರಾಯರಿಗೆ ಅದೇ ಸಮಾಧಾನ- ಮಗಳು ತನಗಿಂತ ಹೆಚ್ಚು ಬೇಸರದಲ್ಲಿಲ್ಲ ಎಂದು.

ಇಂದು ಕೂಡ ದಾಮೋದರರಾಯರ ದೃಷ್ಟಿ ಮಂದಾಕಿನಿಯ ಮುಖದ ಮೇಲೆ ಸರಿದಾಡಿತು. ತಂದೆಯನ್ನು ಎಂಥದೋ ಭೀತಿಕಾಡುತ್ತಿದೆಯೆಂಬ ಸಂದೇಹ ಬಂದ ಮಂದಾ ತನ್ನ ಮುಖದಲ್ಲಿ ಗಾಂಭೀರ್ಯದ ಛಾಯೆ ಕೂಡ ಕಾಣಿಸಬಾರದೆಂದು ನಗುತ್ತಲೇ ಹೇಳಿದಳು

"ಏಯರ್ ಲೆಟರ್ ಫಾರ್ಮ್ಸ್ ತಂದಿದ್ದೀಯಲ್ಲಪ್ಪ! ರಾತ್ರಿ ಕಾಗದ ಬರೆಯಬೇಕು. ಹೆಚ್ಚು ಕಲಿತವರಿಗೆ, ದೂರದ ನಾಡಲ್ಲಿರುವವರಿಗೆ ಮರೆವು ಜಾಸ್ತಿಯೇನೋ... ಆದರೆ ಎಚ್ಚರಿಕೆಯ ಪ್ರಜ್ಞೆ ಕೊಡಲು, ಅಲ್ಲಿಯ ತನಕ ಧಾವಿಸಿ ಬರಲು ಯಾರೂ ಇಲ್ಲವೆಂದು ಅವರು ತಿಳಿದಿದ್ದರೆ, ಅದು ತಪ್ಪು ತಿಳುವಳಿಕೆ. ನಾನೇನೂ ಹಳ್ಳಿಗಾಡಿನ ಪೆದ್ದು ಹುಡುಗಿಯಲ್ಲ... ಹೇಗೂ ನನ್ನ ಪಾಸ್ ಪೋರ್ಟ್ ಸಿದ್ಧವಾಗಿದೆಯಲ್ಲ"

ಮಂದಾ ನಗುತ್ತಲೇ ಹಾಗೆ ಹೇಳಿದರೂ ದಾಮೋದರರಾಯರ ಮುಖ ಕಳೆಗುಂದಿತು.

"ನಾನೇನೂ ಹಳ್ಳಿಗಾಡಿನ ಪೆದ್ದು ಹುಡುಗಿಯಲ್ಲ..."

ಪದ್ಮಾವತಿಯ ಕತೆಯನ್ನು ಯಾರೋ ಖಂಡಿತವಾಗಿ ಮಂದಾಕಿನಿಗೆ ತಿಳಿಸಿದ್ದಾರೆಂದೇ ಬಗೆದ ಅವರ ಮುಖದಲ್ಲಿ ಯಾತನೆಯ ಸ್ಪಷ್ಟ ಚಿತ್ರವಿತ್ತು.

"ಚಿಯರ್ ಅಪ್ ಡ್ಯಾಡಿ." ಎಂದಳು ಮಂದಾ. ತಂದೆ ತನ್ನ ಕುರಿತಾದ ನೋವನ್ನೆ ಅನುಭವಿಸುತ್ತಿದ್ದಾರೆಂದು ತೋರಿದಾಗ... "ನನ್ನ ಭವಿಷ್ಯದ ಕುರಿತು ನಿಮಗೆ ಯಾವ ಹೆದರಿಕೆಯೂ ಬೇಡ... ಅದಿರಲಿ...ನಾನು ನಾಳೆ ಬೆಂಗಳೂರಿನ ತನಕ ಹೋಗುತ್ತೇನೆ, ನಂದಿನಿಯ ಕಾರಿನಲ್ಲಿ... ಏಳು ದಿನಗಳೊಳಗೆ ಮರಳಿ ಬರುತ್ತೇನೆ. ನಿಮ್ಮ ಹುಟ್ಟೂರಾದ ಮಂಗಳೂರಿನ ತನಕವೂ ಹೋಗಿ ಬರಬೇಕೆಂದು ನನಗೆ ಆಸೆಯಿತ್ತು. ಆದರೆ ನಂದಿನಿಗೆ ಏಳೇ ದಿನಗಳಲ್ಲಿ ಮರಳಬೇಕಾಗಿದೆ. ಹೀಗಾಗಿ ಅದು ಸಾಧ್ಯವಾಗುವುದಿಲ್ಲ. ಹೋಗಿ ಬರಲೇನಪ್ಪಾ...?"

ಕ್ಷಣದಿಂದ ಕ್ಷಣಕ್ಕೆ ಮಗಳ ಮುಖಭಾವ ಬದಲಾಗುತ್ತಿದೆಯೆಂದು ದಾಮೋದರರಾಯರಿಗೆ ಅನಿಸಿದರೂ, ಆಕೆ ಮಂಗಳೂರಿಗೆ ಹೋಗುವುದಿಲ್ಲವೆಂಬ ಸಮಾಧಾನ ಮೂಡಿದಾಗ, ಮಗಳ ಉತ್ಸಾಹದಲ್ಲಿ ತನ್ನ ಮನಸ್ಸಿನ ಕಳವಳವನ್ನು ಮರೆಯಬಹುದೆಂದು ಅವರಿಗೆ ತೋರಿತೇನೋ... ಸಂಜೆ ಮೊದಲ ಬಾರಿಗೆ ಅವರ ಮುಖದಲ್ಲಿ ನಗು ಮರಳಿತು.

"ಅಗತ್ಯ ಹೋಗಿ ಬಾ ಮಂದಾ... ಈ ಬದಲಾವಣೆ ಬೇಸರ ಕಳೆಯಲು ತುಂಬ ಸಹಾಯ ಮಾಡುತ್ತದೆ. ನೀನು ಮರಳಿ ಬರುವಾಗ ಕೇಶವನ ಕಾಗದ ಕಾದಿರುತ್ತದೆ... ಖಂಡಿತವಾಗಿ..."

"ನಿಮಗಿನ್ನೂ ಅವರದೇ ಯೋಚನೆ" ಎಂದು ನಗುತ್ತಲೇ ಮಂದಾಕಿನಿ ಡ್ರಾಯಿಂಗ್ ರೂಮಿನೊಳಗೆ ಹೋದಳು.

ಮರುದಿನ ಸಂಜೆ ಮಂದಾಕಿನಿ ಗೆಳತಿಯ ಜತೆಗೆ ಬೆಂಗಳೂರಿಗೆ ಹೋದಳು. ಮಗಳು ಮನಸಿಗೆ ಹಿತವೆನಿಸುವ ಪ್ರವಾಸಕ್ಕಾಗಿ ಹೋಗಿದ್ದಾಳೆಂಬ ಸಂತೋಷ ಕೊಟ್ಟ ಸಮಾಧಾನದಿಂದ ರಾಯರು ಪುನಃ ತನ್ನ ಕರ್ತವ್ಯಕ್ಷೇತ್ರದೆಡೆ ದೃಷ್ಟಿ ಹರಿಸಿದರು.

ಏಳು ದಿನ ಕಳೆದರೂ ಕೇಶವನಿಂದ ಕಾಗದ ಬರಲಿಲ್ಲ.

ಎಂಟನೆಯ ದಿನ, ಆ ಸಂಜೆ ಮಂದಾ ಮನೆಗೆ ಮರಳುತ್ತಾಳೆ ಎಂಬ ಉತ್ಸಾಹದಿಂದಲೇ ದಾಮೋದರರಾಯರು ಆಫೀಸಿಗೆ ಹೋಗಿದ್ದರು. ಈ ಉತ್ಸಾಹ ಅವರ ಕಾರ್ಯೋತ್ಸಾಹವನ್ನು ಹೆಚ್ಚಿಸಿತ್ತು. ಆದರೆ ಹನ್ನೊಂದು ಗಂಟೆಯ ಹೊತ್ತಿಗೆ ಮಿಸ್ ಪೆರೇರಾ ಅವರಿದ್ದಲ್ಲಿಗೆ ಬಂದು "ನೀವು ಕಳಿಸಿದ ಮನಿಯಾರ್ಡರ್ ಹಿಂದಿರುಗಿ ಬಂದಿದೆ. ಈ ವಿಳಾಸದ ಹೆಂಗಸು ತೀರಿಕೊಂಡಿದ್ದಾರೆಂದು ಸೂಚಿಸಿದ್ದಾರೆ" ಎಂದಾಗ ಮಾತ್ರ.

ರಾಯರ ಕೈಯಲ್ಲಿದ್ದ ಪೆನ್ನು ಮೇಜಿನ ಮೇಲೆ ಬಿತ್ತು.

"ಯಾರಿದು ಪದ್ಮಾವತಿ?" ಎಂದು ಮಿಸ್ ಪೆರೇರಾ ಪುನಃ ಕೇಳಿದಳು.

ಆಕೆಯನ್ನೆ ದಿಟ್ಟಿಸಿ ನೋಡುತ್ತಿದ್ದ ದಾಮೋದರರಾಯರು ಮಾತನಾಡಲಿಲ್ಲ. ನಿಧಾನವಾಗಿ ಆಕೆಯ ಕೈಯಲ್ಲಿದ್ದ ಫಾರ್ಮಿಗೆ ಸಹಿ ಮಾಡಿ ಹಣ ಪಡೆದರು.

"ಐ ಸೀ? ಎಂದರು ತನ್ನಷ್ಟಕ್ಕೆ...

ಈ ವಿಳಾಸದ ಹೆಂಗಸು ತೀರಿಕೊಂಡಿದ್ದಾರೆ...

"ಪದ್ಮಾವತಿ ಸತ್ತುತುಂಬ ಸಮಯವಾಗಿದೆ."

ಹಳೆಯ ಇತಿಹಾಸದ ಮೇಲೆ ತೆರೆ ಬಿದ್ದಿದೆ. ತನ್ನ ತಪ್ಪಿನ ಕೊನೆಯ ಸಾಕ್ಷ್ಯವಳಿದಿದೆ.

ದಾಮೋದರರಾಯರು ತನ್ನೆದಿರಿಗಿದ್ದ ಹಣವನ್ನೆ ನೋಡುತ್ತಿದ್ದರು.

ಹತ್ತು ರೂಪಾಯಿಗಳ ದಾನ ಬೇಡಿ, ಬದುಕಿರುವ ತನಕ ನಿಮ್ಮ ನೆನಪು ಮಾಡುತ್ತೇನೆ ಎಂದಿದ್ದ ಪದ್ಮಾವತಿ, ನೂರು ರೂಪಾಯಿಗಳ ದಾನ ಸ್ವೀಕರಿಸಲು ಬದುಕಿರಲಿಲ್ಲ.

ಆ ಹಣ ಮರಳಿ ಬಂದಿದೆಯೆಂದು ನೋವು, ಜತೆಗೇ ಎಂಥ ವಿಚಿತ್ರ ಸಮಾಧಾನ; ಮೂವತ್ತು ವರ್ಷ ಕಾಲ ತನ್ನನ್ನು ಕಾಡಿದ್ದ ತಪ್ಪಿನ ನೆನಪಿಗೆ ಬದುಕಲು ಇನ್ನು ಯಾವ ಆಧಾರವೂ ಇಲ್ಲ.

'ಪದ್ಮಾವತಿ ಸತ್ತು ತುಂಬ ಸಮಯವಾಗಿದೆ'

ಸಾವು ಅಳಿಸಿದ ಈ ಹಳೆಯ ಕತೆ ಇನ್ನು ಮಂದಾಕಿನಿಗೆ ತಿಳಿಯುವುದಿಲ್ಲ. ತಿಳಿದರೂ ಆಕೆ ನೊಂದುಕೊಳ್ಳುವುದಿಲ್ಲ. ಯಾರಿದ್ದಾರೀಗ ತನ್ನ ತಪ್ಪಿಗೆ ಸಾಕ್ಷಿ ಹೇಳಲು!

ಅಂದು ಸಂಜೆ ಮನೆಗೆ ಮರಳಿದ ದಾಮೋದರರಾಯರನ್ನು ಮಂದಾ ಬಾಗಿಲಲ್ಲೆ ಸ್ವಾಗತಿಸಲಿಲ್ಲ. ಇನ್ನೂ ಬಂದಿಲ್ಲವೇನೊ ಅಂದುಕೊಂಡ ರಾಯರು ಮನೆಯೊಳಗೆ ಬಂದು "ಮಂದಾ ಬಂದಿಲ್ಲವೆ?" ಎಂದು ಹೆಂಡತಿಯೊಡನೆ ಕೇಳಿದರು.

"ಬಂದು ಹದಿನೈದು ನಿಮಿಷ ಕೂಡ ಆಗಿಲ್ಲ. ಅವಳ ಕೋಣೆಯಲ್ಲೇ ಇದ್ದಾಳೆ. ಕೇಶವನ ಕಾಗದವೂ ಬಂದಿದೆ..."ಎಂದರು ಕಮಲಾಬಾಯಿ ತುಂಬ ಸಡಗರದಿಂದಲೇ.

"ಕೊನೆಗೊಮ್ಮೆ ಕಾಗದ ಬರೆದನೆ ಮಹಾರಾಯ! ಹಾಗಿದ್ದರೆ ಸರಿ... ಮಂದಾ ಇನ್ನರ್ಧ ಘಂಟೆ ತನ್ನ ಕೋಣೆ ಬಿಟ್ಟು ಬರುವುದಿಲ್ಲ." ಎಂದು ಹೇಳಿ, ಒಮ್ಮಿಂದೊಮ್ಮೆಗೇ ತನ್ನನ್ನು ಮುತ್ತಿದ ಉತ್ಸಾಹ ತನಗೇ ಅರ್ಥವಾಗದಿದ್ದರೂ, ದಾಮೋದರರಾಯರು ತನ್ನ ಕೋಣೆಗೆ ಹೋಗಿ ಬಟ್ಟೆ ಬದಲಿಸಿ ಬಾಲ್ಕನಿಗೆ ಬಂದು ತನ್ನ ಪ್ರೀತಿಯ ಆರಾಮಕುರ್ಚಿಯಲ್ಲಿ ಕುಳಿತು "ಮಂದಾ sss" ಎಂದು ಕರೆದರು.

ಮಂದಾ 'ಓ' ಎನ್ನಲಿಲ್ಲ. ಆಕೆಯ ಕೋಣೆಯಿಂದ ಸದ್ದೇ ಇಲ್ಲ. ಗಂಡನ ಕಾಗದ ಬಂದಿದೆಯೆಂಬ ಸಂಭ್ರಮದಲ್ಲಿ ತನ್ನ ಸುತ್ತಣ ಜಗತ್ತನ್ನೆ ಮರೆತಿದ್ದಾಳೆಯೆ, ಹುಚ್ಚು ಹುಡುಗಿ! ಕಾಯಿಸಿ ಕಾಯಿಸಿ, ನೋಯಿಸಿ, ಕೊನೆಗೊಮ್ಮೆ ಮಾತನಾಡಿದ, 'ಸ್ಕ್ಯಾಂಡ್ರೆಲ್'— ತನ್ನ ಮುದ್ದು ಹುಡುಗಿಗೆ ಎಷ್ಟು ನೋವಾದೀತು ಎಂಬ ಯೋಚ

ನೆಯೇ ಇಲ್ಲದೆ. ಆದರೂ ಬರೆದನಲ್ಲ...ಕೊನೆಗೊವ್ಮೆ ಬರೆದ..'ಬೇಗ ಹೊರಟುಬಾ' ಎಂದಿರಲೇಬೇಕು. ಮಂದಾಳನ್ನೆ ಕೇಳೋಣ, ಎಂದು 'ಮಂದಾss' 'ಮಂದಾss' ಎಂದು ಕರೆಯುತ್ತಲೆ ದಾಮೋದರರಾಯರು ಆಕೆಯ ಕೋಣೆಯ ಬಾಗಿಲಿಗೆ ಬಂದರು.

ತಂದೆ ಕರೆದುದು ಮಂದಾಕಿನಿಗೆ ಕೇಳಿಸಲಿಲ್ಲ. ಆಕೆ ತನ್ನ ಕಿಡಿಕಿಯ ಬಳಿ ನಿಂತು ಇದಿರು ಕಾಣುತ್ತಿದ್ದ ಸಮುದ್ರವನ್ನೇ ನೋಡುತ್ತಿದ್ದಳು. ಕೈಯಿಂದ ಸಣ್ಣ ಸಣ್ಣ ಚೂರುಗಳಾಗಿ ಹರಿದಿದ್ದ ಕೇಶವನ ಕಾಗದವನ್ನು ಕಿಟಕಿಯಿಂದ ಹೊರಗೊಗೆಯುತ್ತಿದ್ದಳು. ತಂದೆ ಆರ ಹತ್ತಿರ ಬಂದು 'ಮಂದಾss' ಎಂದು ಕರೆದರೂ ಆಕೆ ಮುಖ ತಿರುಗಿಸಲಿಲ್ಲ. ಕಾಗದದ ಚೂರುಗಳನ್ನು ಹಾಗೆಯೇ ಹಾರಗೊಡುತ್ತಿದ್ದಳು.

ಹತ್ತಿರ ಬಂದ ರಾಯರು ಮಗಳ ಈ ರೀತಿಯ ವರ್ತನೆಯಿಂದ ಗಾಬರಿಗೊಂಡು,

"ಏನಾಯಿತು ಪದ್ಮಾವತೀss?" ಎಂದರು.

ಆದರೆ ಮಂದಾ ಸರಕ್ಕನೆ ಮುಖ ತಿರುಗಿಸಿ ತಂದೆ ತನ್ನ ಹೆಸರನ್ನು ಮರೆತಿದ್ದಾರೆಯೇ. ಎಂದು ನೋಡಿದಾಗ ಮಾತ್ರ ಅವರಿಗೆ ತನ್ನ ತಪ್ಪಿನ ಅರಿವಾಯಿತು

"ಏನಾಯಿತು ಮಂದಾs ಏನು ಬರೆದಿದ್ದಾನೆ?" ಎಂದರು ದಾಮೋದರರಾಯರು, ತನ್ನ ತಪ್ಪನ್ನು ತಿದ್ದಿಕೊಳ್ಳುವವರಂತೆ.

ಆದರೆ ತಂದೆಯ ಪ್ರಶ್ನೆಗೆ ಯಾವ ಉತ್ತರವೂ ಬೇಡವೆನ್ನುವಂತೆ ಮಂದಾಕಿನಿಯ ಬೊಗಸೆಗಣ್ಣುಗಳು ತುಂಬಿಕೊಂಡಿದ್ದವು.



ಎಚ್ಚರಿಕೆ!

ಸ್ವರ್ಗದಲ್ಲಿಹ ಎಲ್ಲ ದೇವರ್ಕಳೇ,
(ನಾರಕಿಗಳಾರಿಸಿದ ಎಂಟಿ ಎಮ್ಮೆಲಿಗಳೇನೊ?)
ನಿಮ್ಮ ಪಾಪದ ಕುಂಡ ಉಕ್ಕುಕ್ಕಿ ಹರಿಯುತಿರೆ
ಅದರ ನೆರೆಯೊಳು ಕೊಚ್ಚಿ ಹೋಹೆನೆಂದಳಲಿ,
ಬುವಿಯು ಬೆಳಗಿದ ಸೂರ್ಯ ಸರಿವುದನೆ ಕಾಯ್ದಿರ್ದು
ಸರಿದೊಡನೆ ಸುರಿದಿರಲಾ,
ತಮದ ಕೊಳಚೆಯನೆಲ್ಲ!
ತಾರೆ ತೂಬನು ತೆರೆದು ಈ ಬುವಿಯಗಲಕೆಲ್ಲ!!

•

ಕತ್ತಲಾಯಿತು ಜಗಕೆ,
ಪಾಪ,
ಸೂಳೆಯು ಪಾಪ,
ತಗುಲಿತ್ತು ಸಂನ್ಯಾಸಿಗೆ.

೨

'ಏಸುಬುದ್ಧ ಏಸುಕ್ರಿಸ್ತ ಏಸುಗಾಂಧಿ' ಬಂದರೂ,
ತಮ್ಮ ನೆತ್ತರನ್ನು ಹರಿಸಿ ಬುವಿಯ ಬಿಡದೆ ತೊಳೆದರೂ,
ತೊಳೆದಷ್ಟೂ ಇಳಿವ ಕೊಳೆ
ಬಳಿಯಲಾದೀತೇ?
ಯಾರೊಲಿದರೇನೆಮ್ಮ ಬರಡು ಹಯನಪ್ಪುದೆ?
ಎಂಬ ಗುಂಗೀಹುಳವು,
'ನೀನೊಲಿದರೆ ಕೊರಡು ಕೊನರುವದಯ್ಯ'
ಎಂದೆನುವ ಮನೆಜಂತಿ ಕೊರೆ ಕೊರೆದು ಹುಡಿಮಾಡಿದೆ!

೩

ದಿನದಿನವು ನೆರೆಸುರಿವ ಈ ತಮದ ವಿಷವನ್ನು
ಕುಡಿಕುಡಿದು ಕೊನೆಗೊವ್ಮೆ ವಿಷಕಂಠರಾನಾಗಿ
ಪ್ರಳಯ ತಾಂಡವಗೈದು ಹೊಸಜಗವ ಕಟ್ಟೇವು
ಎಂಬಕಿಡಿ ಹತ್ತುಕಡೆ ಚಿಮ್ಮುತ್ತಿದೆ.
ಎಚ್ಚರೆಚ್ಚರು, ವಿಯಚ್ಚರರೆ,
ಸಾಕಿನ್ನು ಬಾರಾ-ಬಂಗಾಲಿ,
ಅಗಲೇ ಪಾತಾಳ ಕಂಡಿಹನು ಬಲಿರಾನು,
ಇನ್ನಷ್ಟು ತುಳಿಯದಿರಿ!!

—ಪಶುಪತಿ ರೆಡ್ಡಿ



ಯಾರಿಗೆ ಬೇಕು ಯುದ್ಧ?

೧

ಪೂರ್ವ-ಪಶ್ಚಿಮಕೆರಡು ಹೋಳಾದ ಪಾಕ
ಎಲಾ! ಏನಿದೀ ಅವಿವೇಕ ?
ಒಂದು ವ್ಯವಹಾರಕೂ ಇಲ್ಲ ಸಮತೂಕ.
ಪಾಕವೆ ಹಸಿ-ಬಿಸಿಯು, ಹಂಡ-ಬಂಡ ?
ಹಾಕಿ ಮಾತಿನ ಲಾಗ ಕೋತಿ ಕುಣಿಸುತ್ತಿರುವೆ
ಕೃತಿಯು ಕಂಡದ್ದೆ ಇದೆ ; ತೆರು ನೀನೆ ದಂಡ.

ಕೂಡಿ ಬಾಳಲಾರದ ನೀನೆ ಬೇರಾದೆ
ಕಿತ್ತೆಸೆದೆ ಹೊಳೆವ ಕನ್ನಡಿ ಹರಳು ;
ಅತ್ತಿತ್ತ ಆರಿಸಿಕೊಂಡು ಚೂರು, ಚೂರಿ ಮಸೆದೆ.
ಇಡಿಯ ಮನೆತನ ಒಡೆದು
ನಡುವೆ ಗೋಡೆಗಳೆದ್ದು
ಕರಿನೆರಳು ಚಾಚುವುದ ಕಂಡ ತಂದೆ :
ಕೈ ಮುಗಿದು ಪ್ರಾರ್ಥನೆಯ ಮಾಡಿದರು
ಕಂಬನಿಯ ಹಣತೆಗಳ ಬೆಳಕ ನೀಡಿದರು :
"ಈಶ್ವರ ಅಲ್ಲಾ ತೇರೆ ನಾಮ್
ಸಬ್ ಕೊ ಸನ್ಮತಿ ದೆ ಭಗವಾನ್."
ಊರುಗೋಲಿಗೆ ನೂರು ಹೆಜ್ಜೆ ಮುಂದಕೆ ನಡೆದು
ನಿನ್ನ ಮಕ್ಕಳ ಕಣ್ಣನೀರನೊರೆಸಿದರು ;
ಸೋಜಿಗಕೆ ಸೋಜಿಗವೆನಿಸಿ ತಾವೆ ಬಲಿಯಾದರು.

ಆ ನಮ್ಮ ಹಿರಿಯಣ್ಣ
(ಮಾನವರೊಳಗೆ ರನ್ನ)
ನಿನ್ನ ದ್ವೇಷವ ನಿನ್ನ ಪಾಲಿಗೇ ಬಿಟ್ಟು ಹರಿಸಿದರು
ಕಿರುಕುಳವನೆಲ್ಲ ತಡಕೊಂಡು ಸಂಬಾಳಿಸಿದರು.
ಕಾದ ಹಂಚಿನ ಮೇಲೆ ಶಮ್ಮ ಮನವನು ಹೇಗೊ ತಾಳಿಸಿದ,
ಕಥೆಯಲ್ಲವಿದು ತಮ್ಮ : ಒಡೆದ ಬಾಳಿನ ವ್ಯಥೆ.
ಹಿಂದಿನಿತಿಹಾಸವನು ನೀನು ಮರೆತೆ.

೨

ಮನಬಲ್ಲಂತೆ ಅಡ್ಡಾತಿಡ್ಡ ಗಡಿ ಕೊರೆದು
ಅಡತೊಡಗಿದೆ ನೀನೆ ಹುಡುತುಖು.
ಆಷಾಢ ಅಡವಿ ಬಿದ್ದೆ.
ನುಗ್ಗಿ ಬೇಲಿಯ ಬರುವ ಪೋಲಿದನಗಳ ಕಾಟ
ತಿರುತಿರುಗಿ ತುಡುಗು ಮೇಯುವದೊಂದೆ ಪರಿಪಾಠ
ಕೊನೆಗೊಮ್ಮೆ ಹಿಡಿದು, ಮೈಹುಳೇ ಬಡಿದು, ಕಟ್ಟಿ
ಕೊಂಡವಾಡೆಗಟ್ಟುವ ಸರದಿ ಬಂತು.
ಹುಡುಗಾಟ ಹುಚ್ಚಾಟಗಳನ್ನೆಲ್ಲ ಸಹಿಸಿಕೊಂಡದ್ದಾಯ್ತು
'ಛೀ, ಹಚಾ' ಎಂಬ ಬರಿ ಬಾಯಿಮಾತಿಗೆ ನೀನು ಹಣಿಯದಾದೆ.
ಕಚ್ಚತೊಡಗಿದೆ ಹುಚ್ಚು ನಾಯಾಗಿ—
ಅದಕಾಗಿ
ನಿನಗೆ ಗುಂಡಿಕ್ಕದೆಯೆ ಬೇರೆ ಮಾರ್ಗವಿಲ್ಲ.

೩

ಯುದ್ಧ ಯಾರಿಗೆ ಬೇಕು ?
ತಂತಮ್ಮ ಮನೆಯೊಳು ತಾವು ಚೆಂದಾಗಿ ಬಾಳಿದರೆ ಸಾಕು.
ಮನ ಮನದ ಮಂದಾರವರಳಿ ಹಾಡಿನುಯ್ಯಾಲೆ ತೂಗಬೇಕು :
ಇದು ನಾವು ಕಂಡು ಕನಸು.
ನಿನ್ನದೋ ಬೇರೆಡೆಗೆ ಮನಸು.
ಹಿಟ್ಲರ್ ಮುಸೋಲಿನಿಯ ಬೂಟುಗಾಲಿನ ಹೆಜ್ಜೆ ಹಿಡಿದು
ಜನಮನದ ಬುಗ್ಗೆಯನೊತ್ತಿ, ಹೂವು, ಮೊಗ್ಗೆಯ ತುಳಿದು
ಸರ್ವಾಧಿಕಾರದ ಪಟ್ಟವೇರಿ ಕುಳಿತೆ.
ಅವರಿವರ ಮದ್ದು-ಗುಂಡುಗಳ ಕಡ ತಂದು
ಅಬಡಾಜಬಡ ತಿಂದು ತೇಗಿದೆ.
ನಿನ್ನ ಕಾಲಮೇಲೆಯೆ ಕಲ್ಲು ಚೆಲ್ಲಿಕೊಂಡು
ನೀತಿನಿಯಮಗಳ ಗೆರೆ ದಾಟ ಹೂಂಕರಿಸಿದೆ.
ಎದ್ದ ಮೇಲಾಳಲ್ಲ ಸನ್ನದ್ಧ ಭಾರತ :
ತೊಂಡಿಲದೊಳಗೆ ಸುತ್ತಿ ಎತ್ತೆತ್ತಿ ಒಗೆವ ಮದ್ದಾನೆ ಕುಳಿತ.
ಲಾಸ್ಯಕ್ಕು ತಾಂಡವಕು ಶಿವನೆ ಅಧಿದೈವತ.
"ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತ"
ಈ ರೀತಿ ನಾವು ಶಾಸನ ಬದ್ಧ.
ಬುದ್ಧಿಗಲಿಸುವದಕ್ಕೆ ಕೋಟಿ ಕೋಟಿ ಜನ ಸಿದ್ಧ.
ಹೇಳು : ಯಾರಿಗೆ ಬೇಕು ಯುದ್ಧ ?
ನಿನ್ನ ಹಿತಕ್ಕೆ ನಮ್ಮ ಯೋಧರೆ ತಕ್ಕ ಮದ್ದು.
ಹದ್ದು ಮೀರದಿರು, ಸಾಕು ಆ ಪೀತಾಂಬರದ ವಿಷಕನ್ಯೆ-ಮುದು
ಅಡು-ಅಡುತ ಆರುಸಲ ಹಳಸಿರುವ ಪಾಕ
ದೈವ ದುರ್ವಿಪಾಕ.
ದ್ವೇಷ-ಮಾತ್ಸರ್ಯಗಳನೆಲ್ಲ ಒಟ್ಟಿಗೆ ಸುಟ್ಟು ಈ ಸಮರಭೂಮಿಯಲಿ
ಯಾವ ಚಿಗುರೊಡೆಯುವದೊ : ಅದು ಯಾರ ಕೈಲಿ ?
ನಮ್ಮ ಕೈಯೊಳಗುಂಟು ಪಾಂಚಜನ್ಯವು, ಮುರಲಿ

— ಚೆನ್ನವೀರ ಕಣವಿ

ಎರಡನೆಯ ಹುಟ್ಟು

ಶ್ರೀಮತಿ ಅನುಪಮಾ ನಿರಂಜನ

ಕಿಟಕಿಯಲ್ಲಿದ್ದ ಕನ್ನಡಿಯಲ್ಲಿ ಅವನ ಮುಖ ಪ್ರತಿಬಿಂಬಿತವಾಗಿತ್ತು. ಸೋಪು ಹಚ್ಚಿದ ಕೆನ್ನೆ, ಗಲ್ಲಗಳು ಬಿಳಿನೊರೆಯ ಮುದ್ದೆಗಳಾಗಿ, ಇದ್ದಕ್ಕಿದ್ದ ಹಾಗೆ ಬಿಳಿಕೂದಲಾಗಿ, ಶ್ವೇತವರ್ಣದ ಗಡ್ಡವಾಗಿ ಕಂಡು ಅವನಿಗೆ ಬೆಚ್ಚಿಬೀಳುವ ಹಾಗಾಯಿತು. ಮುಂಡಗಿನ ಮುಖದಲ್ಲಿ ಆಳಕ್ಕೆ ಇಳಿದ ಕಣ್ಣುಗಳು ಕನಸೊಂದನ್ನು ಚಿಮ್ಮಿ, ಕಿಸಕ್ಕನೆ ನಕ್ಕುವು. ಮೋದುಳು ದಿಮಿಧಿಮಿಯೆಂದು ಕುಣಿದು ತಿರುಗುವ ಗಾಳಿಪಟವಾಯಿತು. ಸೋರಿಯೊಂದು ಉಬ್ಬಿ ರಾಕೆಟಾಗಿ ಆಕಾಶಕ್ಕೆ ಸಿಡಿದು, ಸಪ್ತಮಂಡಲವನ್ನು ಸೀಳಿ ಶೂನ್ಯಕ್ಕೆ ಅಪ್ಪಳಿಸಿ ಒಡೆದು ಪುಡಿಪುಡಿಯಾಗಿ ಸಮುದ್ರಕ್ಕೆ ಬಿದ್ದಿತು.

ವಿಚಿತ್ರ ಭಾವನೆಗಳಿಂದ ಶ್ರೀಪತಿಯ ಮನಸ್ಸು, ಮೆದುಳು ಜೋಮುಗಟ್ಟಿದವು. ಮುಖಕ್ಷೌರ ಮುಗಿಸಿ ಅವನು ತಲೆಗೆ ಕೈ ಆನಿಸಿ ಕುಳಿತ.

ಆಗ ಅವನ ಮಗಳು ಬಂದು ಕೇಳಿದಳು:

"ಅಣ್ಣಾ, ನಂಗೆ ಒಂದನೇ ಕ್ಲಾಸಿನ ರೀಡರ್ ಬೇಕು."

"ತರೋಣ, ತರೋಣ" ಎಂದ ಶ್ರೀಪತಿ ಔದಾಸೀನ್ಯದಿಂದ.

ತನ್ನ ಬೇಡಿಕೆಗಳನ್ನು ಮುಂದಿಡಲು ಅದೇ ಸರಿಯಾದ ಸಮಯವೆಂದರಿತ ಮಗ ಕೇಳಿದ:

"ನಾನಿವತ್ತು ಫೀಸು ಕೊಡ್ಬೇಕಣ್ಣಾ."

"ಕೊಡೋಣ. ಅವಸರವೇನು?"

"ಇವತ್ತೇ ಕಡೆ ದಿನವಂತೆ. ಫೀಸು ತರದಿದ್ರೆ ಕ್ಲಾಸಿಗೆ ಸೇರಿಸೊಲ್ಲ ಎಂದಿದಾರೆ ಮೇಸ್ಟ್ರು! ನಂಗಿವತ್ತೆ ದುಡ್ಡು ಕೊಡಣ್ಣ. ಇಲ್ಲದಿದ್ದೆ, ನಾನು ಸ್ಕೂಲಿಗೇ ಹೋಗೋದಿಲ್ಲ!"

ಮಗನ ಹಟ ಕಂಡು ಶ್ರೀಪತಿಗೆ ಸಿಟ್ಟು ಬಂತು.

"ಹೋಗಿದ್ದೆ, ಇಲ್ಲೇ ಸಾಯಿ!" ಎಂದವನು ಅಬ್ಬರಿಸಿದ.

ಅವನ ಎತ್ತರದ ದನಿ ಕೇಳಿ ಅಡುಗೆ ಮನೆಯಿಂದ ಮಂದಾಕಿನಿ ಹೊರಗೆ ಬಂದಳು. ಅಳಲು ಸಿದ್ಧನಾಗುತ್ತಿದ್ದ ಮಗನನ್ನು ನೋಡಿ ಅವಳೆದೆ ಕರಗಿತು.

"ಇದೇನೊಂದ್ರೆ, ಬೆಳಗ್ಗೆ ಎದ್ದು ಇಂಥಾ ಮಾತಾಡ್ತೀರಿ! ಮಗು ಅಲ್ವೆ? ಅವನಿಗೇನು ತಿಳಿಯುತ್ತೆ ಹೇಳಿ!"

"ತಿಳೀದೆ? ಒಳ್ಳೇ ಸಾಲಗಾರನ ಹಾಗೆ ಕಾಟ ಕೊಡ್ತಾನೆ. ಎಲ್ರಿಗೂ ದುಡ್ಡು ಬೇಕು? ಎಲ್ಲಿಂದ ತರ್ಲಿ ನಾನು? ನನ್ನ ಬಗೆದು ತಕೋಳೋಕಾದ್ರೆ ಎಲ್ರೂ ತಗೋಳಿ"

—ಎನ್ನುತ್ತಾ ಶ್ರೀಪತಿ ದಪದಪನೆ ಹೆಜ್ಜೆಯಿಡುತ್ತಾ ಬಚ್ಚಲುಮನೆಗೆ ಹೋಗಿ ಬಾಗಿಲು ಹಾಕಿಕೊಂಡ.

ಮೈಗೆ ಬಿಸಿನೀರು ಬಿದ್ದು ಹಾಯೆನಿಸಿತು. ಆದರದು ಕ್ಷಣಿಕ ತೃಪ್ತಿ. ಬೆಂಕಿಯುಗುಳುತ್ತಿರುವ ಮೆದುಳಿಗೆ ಎಷ್ಟು ನೀರು ಹುಯ್ದರೂ ತಣ್ಣಗಾಗಲಾರದು, ಎನಿಸಿತು ಅವನಿಗೆ. ಒಂದೇ? ಎರಡೆ? ನೂರು ತಾಪತ್ರಯ. ಬರುವ ನೂರಾಐವತ್ತು ರೂಪಾಯಿ ಸಂಬಳಕ್ಕೆ ನೂರು ಕೋಡಿಗಳು ಒಂದು ನಿಮಿಷದಲ್ಲಿ ಅದು ಮಂಗಮಾಯ. ಸಂಬಳವಾಗಿ ವಾರ ಕೂಡ ಕಳೆದಿಲ್ಲ ಆಗಲೇ ತನ್ನ ಕಿಸೆ ಬರಿದು. ಆದರೆ ಮಕ್ಕಳ ಬೇಕುಗಳಿಗೆ ಬರಗಾಲವಿಲ್ಲ. ಹೆಂಡತಿಯ ಆಶೆಗಳಿಗೆ ಕೊನೆಯಿಲ್ಲ. ಮನೆಗೆ ಅಕ್ಕಿ, ಸಕ್ಕರೆಯಾಗಬೇಕು, ತರಕಾರಿಯಾಗಬೇಕು. ಈ ಸಾರೆ ತಾಯಿಗೊಂದು ಹತ್ತು ರೂಪಾಯಿನ ಸೀರೆಯಾದರೂ ತರಬೇಕೆಂದು ಮಾಡಿದ ಮುಂಡಿಗೆ ಮಣ್ಣುಪಾಲಾಗಿತ್ತು. ಬಾಡಿಗೆ ಬೇರೆ ಬಾಕಿ ಉಳಿದಿದೆ. ಇನ್ನು ಉಳಿದ ಸಾಮಾನುಗಳ ಪಟ್ಟಿ? ಬೇಡ. ಅದರ ಯೋಚನೆ ಮಾಡುವುದೇ ಬೇಡ. ಇನ್ನು ತನ್ನ ತಲೆ ಸಿಡಿದೇ ಹೋಗುತ್ತದೆ, ಎಂದುಕೊಂಡ ಶ್ರೀಪತಿ.

ಬಿಳಿಯ ಜೀರ್ಣವಾದ ಷರಟು. ನಾಲ್ಕಾರು ಕಡೆ ಹರಿದು ರಿಪೇರಿಯಾಗಿದ್ದ ಬೂದು ಬಣ್ಣದ ಹತ್ತಿಯ ಪ್ಯಾಂಟು.

"ಅಡುಗೆಯಾಯಿತೇನೆ?"

ಕೆಂಪು ಮುಖಮಾಡಿ ಒಲೆಯ ಮುಂದೆ ಕುಳಿತ ಮಂದಾಕಿನಿ, ಒಲೆಯ ಕೆಂಡದಷ್ಟೇ ಸಿಟ್ಟಾಗಿ ನುಡಿದಳು:

"ಹಸಿ ಸೌದೆ ತಂದು ಹಾಕಿದೀರಿ. ಊದಿ ಊದಿ ಎದೆನೋವು ಶುರುವಾಯ್ತು. ಅನ್ನ ಸಾರು ಆಗಿದೆ. ಪಲ್ಯ ಚೆಂದಿಲ್ಲ. ಊಟ ಮಾಡ್ತೀರಾ?"

ಶ್ರೀಪತಿ ಊಟಕ್ಕೆ ಕುಳಿತ. ತುಪ್ಪವಿಲ್ಲ, ಮೊಸರಿಲ್ಲ, ಸಂಡಿಗೆ ಹಪ್ಪಳವಿಲ್ಲ. ಸಾರು ಅನ್ನದ ಸಪ್ಪೆ ಊಟ ಬಾಯಿಗೆ ರುಚಿಸಲಿಲ್ಲ. ಆದರೂ ಅವನು ಬಲವಂತವಾಗಿ ನಾಲ್ಕು ತುತ್ತು ತುರುಕಿಕೊಂಡ. ಬೇಡವೆಂದರೆ ಇನ್ನು ಸಂಜೆಯವರೆಗೂ ಉಪವಾಸವೇ ಆಶ್ರಯ.


ಮಂದಾಕಿನಿ ಮತ್ತೆ ಹೇಳಿದಳು:

"ಇವತ್ತು ಎದೆನೋವು ತುಂಬಾ ಜಾಸ್ತಿಯಾಗಿದೆ ಅಂದ್ರೆ. ಡಾಕ್ಟರಿಗಾದ್ರೂ ತೋರಿಸ್ಕೊಂಡು ಬರ್ಲಾ?"

ಅದುಮಿಟ್ಟಿದ್ದ ಸಿಟ್ಟಿನ ಬಿರಡೆ ಮೇಲೆ ಹಾರಿತು. ಶ್ರೀಪತಿ ಕೋಪದಿಂದ ಕಿರಿಚಿದ:

"ನಿಂಗೆ ಬುದ್ಧಿಯಿಲ್ಲ, ಮಂದಾ? ಡಾಕ್ಟ್ರ ಹತ್ರ ಸುಮ್ಮೆ ಹೋಗೋಕಾಗುತ್ತೇನೆ? ನಮ್ಮ ಸ್ಥಿತಿ ಹೇಗಿದೆ ಅಂತ ಗೊತ್ತಿದ್ದೂ ಕೇಳ್ತೀಯಲ್ಲ? ನಾನೇನು ಬಡುಕೊಳ್ಲಿ?"

—ಎಂದು ಎಡಗೈನಿಂದ ತಲೆಗೆ ಘಟ್ಟಿಸಿಕೊಂಡ.



ಮೂಲೆಯಲ್ಲಿ ಅಕ್ಕಿ ಆಯುತ್ತಾ ಕುಳಿತಿದ್ದ ಅವನ ತಾಯಿ, "ಬಿಡಪ್ಪಾ, ಇಷ್ಟಕ್ಕೆಲ್ಲಾ ಸಿಟ್ಟಾದರೆ ಹೇಗೂ!" ಎಂದು ಸಮಾಧಾನ ಹೇಳಿದರು

ಸಿಟ್ಟಲ್ಲ, ತನ್ನ ಮೇಲೆ ತನಗೇ ಜಿಗುಪ್ಸೆ. ಮದುವೆ ಮಾಡಿಕೊಂಡ, ಇಬ್ಬರು ಮಕ್ಕಳಾದರು. ಐದು ಜನರ ಸಂಸಾರವನ್ನೂ ಸರಿಯಾಗಿ ನೋಡಿಕೊಳ್ಳಲು ತನ್ನ ಕೈಲಿ ಆಗ್ತಾ ಇಲ್ಲವಲ್ಲಾ ಎಂಬ ಕೊರಗು. ಇಡೀದಿನ ಆಫೀಸಿನಲ್ಲಿ ಗುಮಾಸ್ತನಾಗಿ ದುಡಿದರೂ ಹೊಟ್ಟೆಯೂ ತುಂಬದು ಬಟ್ಟೆಗೂ ಸಾಲದು. ಮಕ್ಕಳ, ಹೆಂಡತಿಯ, ತಾಯಿಯ, ಕೊನೆಗೆ ತನ್ನ ಬೇಕುಗಳಿಗೂ ಸೊನ್ನೆಯೊಂದೇ ಉತ್ತರ.

ಶ್ರೀಪತಿ ಕೋಟು ಹಾಕಿಕೊಂಡು, ಹಿಮ್ಮಡಿ ಸವೆದಿದ ಚಪ್ಪಲಿ ಏರಿಸಿ ಬೇಗಬೇಗನೆ ಬಸ್‌ಸ್ಟಾಪಿಗೆ ಓಡಿದ. ಸಮಯ ಮೀರಿತ್ತು, ಬಸ್ಸು ಹೊಂಟು ಹೋಗಿತ್ತು. ಇನ್ನೊಂದು ಬಸ್ಸಿಗೆ ಇನ್ನು ಹದಿನೈದು ನಿಮಿಷ ಕಾಯಬೇಕು. ಆಫೀಸರು ದಿನವೂ ಬಯ್ಯುತ್ತಿದ್ದರು. "ಯಾವಾಗ್ಲೂ ಲೇಟ್ ಮಾಡ್ತಿರಲ್ಲಾ ಗಡಿಯಾರ ಇಲ್ಲೇನ್ರೀ ಮನೇಲಿ? ಟೈಂ ಸೆನ್ಸ್ ಇಲ್ಲದಿದ್ರೆ ಏನು ಪ್ರಯೋಜನಾನ್ರೀ?"

ಆಗ ಸುಬ್ಬಣ್ಣ ಅವನ ಹೆಗಲಮೇಲೆ ಕೈ ಹಾಕಿದ. "ಏನೋ ಶ್ರೀಪತಿ? ಬಸ್ಸು ಹೊರಟು ಹೋಯ್ತೇನೊ? ಇವತ್ತು ನಾನೂ ತಡ. ಮನೇಲಿ ಪಾಯಸ ಮಾಡಿದ್ರು, ಊಟ ಮಾಡೋದು ನಿಧಾನವಾಯ್ತು."

ಪಾಯಸದ ಊಟ. ತನ್ನ ಬಾಯಿ ಸಿಹಿಮದ್ದು ಎಷ್ಟು ದಿನವಾಗಿತ್ತೋ! ಸುಬ್ಬಣ್ಣ ತನಗಿಂತ ಮೇಲಿನ ದರ್ಜೆಯ ಗುಮಾಸ್ತ. ಸಂಬಳದಷ್ಟೇ ಗಿಂಬಳವನ್ನೂ ಸಂಪಾದಿಸುವನೆಂದು ಗೆಳೆಯರು ಆಡಿ ಹೇಳುತ್ತಿದ್ದರು. ನಿಜವಿರಬೇಕು ಅದು. ಸುಬ್ಬಣ್ಣನ ಸೊಂಪಾಗಿ ಬೆಳೆದ ಶರೀರವನ್ನೂ ತನ್ನ ಸಣಕಲು ಮೈಯನ್ನೂ ಹೋಲಿಸಿಕೊಂಡು ಶ್ರೀಪತಿ ನಿಟ್ಟುಸಿರುಬಿಟ್ಟ.

ಆಫೀಸು ತಲುಪಿದಾಗ ಸುಬ್ಬಣ್ಣ ಯಾವ ಮಾಯದಲ್ಲೋ ತನ್ನ ಜಾಗಕ್ಕೆ ಸೇರಿದ್ದ. ಎಂದಿನಂತೆ ಆಫೀಸರ ಕಣ್ಣಿಗೆ ಬಿದ್ದವನು ಶ್ರೀಪತಿಯೊಬ್ಬನೇ

"ಇವತ್ತು ಕಡೇ ವಾರ್ನಿಂಗ್ ಕೊಡ್ತಿದೀನಿ ಮಿಸ್ಟರ್ ಶ್ರೀಪತಿ. ಇನ್ನು ಲೇಟಾಗಿ ಬಂದ್ರೆ ನಾನು ರಿಪೋರ್ಟ್ ಮಾಡಬೇಕಾಗುತ್ತೆ!"

ಸುತ್ತಲಿದ್ದ ಸ್ನೇಹಿತರ ಗುಸುಗುಸು ಮಾತು. ತನ್ನತ್ತ ಬೊಟ್ಟು ಮಾಡಿ ನಗುವ ಮುಖಗಳು. ಶ್ರೀಪತಿಗ ಮೈ ಪರಚಿಕೊಳ್ಳುವ ಹಾಗಾಯಿತು. ಪಂಜರದಲ್ಲಿ ಬಿದ್ದ ಹಕ್ಕಿಯಂತೆ ಅವನ ಮನಸು, ವಿಲವಿಲಿ ಒದ್ದಾಡಿತು

ಪ್ರತಿಮಾಡಿದ ಕಾಗದಗಳನ್ನು ಹಿಡಿದುಕೊಂಡು ಆತ ಆಫೀಸರಲ್ಲಿಗೆ ಹೋದ. ಅದರಮೇಲೆ ಕಣ್ಣಾಡಿಸಿದ ಆಫೀಸರು ತಾರಕಸ್ವರದಲ್ಲಿ ಕೂಗಿದರು:

"ಇದೇನ್ರಿ? ಇಂಗ್ಲೀಷ್ ಬರೋದಿಲ್ವೇನ್ರೀ ನಿಮಗೆ? ಸ್ಪೆಲಿಂಗ್ ಗೊತ್ತಿಲ್ಲ, ಅರ್ಥ ಗೊತ್ತಿಲ್ಲ. ನಿಮ್ಮಂಥೋರು ಕೆಲ್ಸಕ್ಕಾದ್ರೂ ಯಾಕೆ ಬರ್ತೀರ? ನಿಮ್ಮನ್ನು ಡಿಸ್‌ಮಿಸ್ ಮಾಡಿಸ್ತೀನಿ ಕಣ್ರೀ!"

ರಾಕ್ಷಸನ ನಗೆಯಂತೆ ವಿಕಟ ಅಟ್ಟಹಾಸದಿಂದ ಉಬ್ಬಿ ಮೇಲೆದ್ದುಬಂದ ಅಲೆಗಳು ಅವನ ಮುಖಕ್ಕೆ, ಕಣ್ಣುಗಳಿಗೆ, ಅಪ್ಪಳಿಸಿ ಹೊಡೆದುವು. ಡಿಸ್‌ಮಿಸ್ ಎಂಬ ಶಬ್ದ ಗೆಜ್ಜೆ ಕಟ್ಟಿಕೊಂಡು ಅವನ ಮುಂದೆ ಕುಣಿಯಿತು. ಶ್ರೀಪತಿಯ ತಲೆ ತಿರುಗಿದಂತಾಗಿ ಅವನು ಕುರ್ಚಿಯ ಕೈಗಳನ್ನು ಹಿಡಿದುಕೊಂಡ. ಅನಂತರ? ಕೆಲಸ ಕಳೆದುಕೊಂಡ ಬಳಿಕ? ಕೊಡು ಎನ್ನುವ ಹತ್ತು ಕೈಗಳಿಗೆ ಅವನೇನನ್ನು ಕೊಡಬಲ್ಲ? ಕೈಗಳು ಅವನ ಸುತ್ತಲೂ ತಿರುಗಿ ಅವನ ಕುತ್ತಿಗೆಗೇ ಕೈಹಾಕಿದಂತಾಗಿ ಶ್ರೀಪತಿ ಟೇಬಲಿನ ಮೇಲೆ ತಲೆಯಿರಿಸಿ ಮುಖ ಮುಚ್ಚಿಕೊಂಡ

ಬಿಡುವಿನ ವೇಳೆಯಲ್ಲಿ ಸುಬ್ಬಣ್ಣ ಕರೆದ:

"ಹೊರಗೆ ಬರ್ತೀಯೇನೊ?"

"ಇಲ್ಲಪ್ಪ. ನಂಗ್ಯಾಕೋ ತಲೆ ನೋಯ್ತಿದೆ!"

"ತಲೆನೋವಿಗೆ ಸ್ಟ್ರಾಂಗ್ ಕಾಫಿ ಒಳ್ಳೇ ಔಷಧಿ"

ಎನ್ನುತ್ತಾ ಸುಬ್ಬಣ್ಣ ನಕ್ಕ. ಶ್ರೀಪತಿಯ ತೋಳು ಹಿಡಿದು ಎಳೆಯುತ್ತಾ "ಏಳಯ್ಯಾ, ಇವತ್ತು ನನ್ಜೊತೆ ಒನ್‌ಬೈಟು ಕಾಫಿ ಕುಡಿಯುವಂತೆ" ಎಂದು ಕರೆದೊಯ್ದ.

ಕ್ಯಾಂಟೀನಿನಲ್ಲಿ ನಗುವಿನ, ಮಾತುಗಳ ಸಮಾರಾಧನೆ. ಶ್ರೀಪತಿ ಕಾಫಿ ಕುಡಿದ. ಗರಿಗರಿಯಾದ ಇಸ್ತ್ರಿಯಿರುವ ಪ್ಯಾಂಟ್‌ಗಳು, ಉಲನ್ ಸೂಟುಗಳು, ತನ್ನಂತೆ ಹರಿದ ಪ್ಯಾಂಟು ತೊಟ್ಟವರೂ ಕೆಲವರಿದ್ದರು. ಆದರೆ ಆಫೀಸರಿಂದ ಬಯ್ಗಳು ತಿಂದ ತಾನು ಅವರಿಗೆಲ್ಲರಿಗಿಂತ ಹೀನಾಯ ಎನಿಸಿತು.

"ಅದನ್ನೆಲ್ಲ ಮನಸ್ಸಿಗೆ ಹಚ್ಕೋತಾರೇನಯ್ಯ!" ಎಂದ ಸುಬ್ಬಣ್ಣ.

"ನೀನು ಹಸುವಿನಂಥ ಪ್ರಾಣಿ!" ಎಂದ ಇನ್ನೋಬ್ಬಾತ.

ಯಾರ ಸಾಂತ್ವನವೂ ತನಗೆ ಬೇಕಾಗಿರಲಿಲ್ಲ. ದಯೆ, ಕರುಣೆಗಳನ್ನು ಕಂಡಾಗ, ಅಸಹಾಯತೆ ಸಿಟ್ಟಿನಿಂದ ಮುಖವನ್ನು ಪರಚಿತ್ತು.

ಸಂಜೆ ಮನೆಯತ್ತ ಹೊರಟಾಗ ತಲೆ ತುಂಬಾ ಭಾರವಾಗಿತ್ತು. ಮಕ್ಕಳ ನೆನಪು. ಅವರಿಗೆ ಪುಸ್ತಕಕ್ಕೆ, ಫೀಗೆ ತನ್ನ ಬಳಿ ಹಣವಿರಲಿಲ್ಲ. ಅವರನ್ನು ಸರಿಯಾಗಿ ಬೆಳೆಸಲಾರದ ನಾನು ತಂದೆ ಎನಿಸಿಕೊಂಡು ಏನು ಪ್ರಯೋಜನ? ಮಂದಾಕಿನಿ ಸದಾ ಎದೆನೋವು ಎನ್ನುತ್ತಿದಳು. ಮನೆಗೆಲಸ ಜಾಸ್ತಿಯೇನೋ ನಿಜ ಡಾಕ್ಟರಿಗೆ ಹಿಂದೊಮ್ಮೆ ತೋರಿಸಿದಾಗ ಮನೋವ್ಯಥೆ ಎಂದಿದ್ದರು. ವ್ಯಥೆಗೆ ಕಾರಣವೇನಿದೆ? ಮನೆಗೆ ಬೆಳಕಾಗಿ ಇಬ್ಬರು ಮಕ್ಕಳಿದ್ದಾರೆ. ಡಾಕ್ಟರೆಂದಿದ್ದರು—"ಮತ್ತೆ ಮಕ್ಕಳಾಗಲಿಲ್ಲವೆಂದು ನಿನ್ನ ಹೆಂಡ್ತಿಗೆ ಮನಸ್ಸಿಗೆ ನೋವು. ಅದು ಎದೆನೋವಿನ ರೀತಿಯಲ್ಲಿ ಪ್ರತಿಫಲಿಸಿದೆ. ಅಯ್ಯೋ!" ಎಂಥಾ ಆಸೆ ಇವಳಿಗೆ? ಇರೋ ಇಬ್ಬರು ಮಕ್ಕಳು ಸಾಲವೆ? ಅವನ್ನು ಸಾಕಿ ಸಲಹೋದೇ ಕಷ್ಟವಾಗಿರುವಾಗ ಬೇರೆ ಮಕ್ಕಳ ಹಂಬಲ ನನಗಿಲ್ಲಪ್ಪ. ದೇವರೇ, ಸಾಕು. ನನಗೆ ಇಬ್ಬರೇ ಮಕ್ಕಳು ಸಾಕು. ಇಲ್ಲದಿದ್ರೆ ಸಂಸಾರದ ಭಾರದಿಂದ ನಾನು ಕುಸಿದು ಹೋಗ್ತೀನಿ.

ಶ್ರೀಪತಿ ಮನೆ ತಲಪಿದಾಗ ಹಜಾರದಲ್ಲಿ ಮನೆಯ ಮಾಲಕ ಕುಳಿತಿದ್ದ. ಅವನನ್ನು ನೋಡಿದೊಡನೆ ಶ್ರೀಪತಿಯ ಮೈ ಬೆವತಿತು. ಅಸಹಾಯತೆಯಿಂದ ಹೃದಯ ಡವಗುಟ್ಟಿತು

"ಹೋದ ತಿಂಗಳ ಬಾಡಿಗೆ ಕೂಡ ಕೊಟ್ಟಿಲ್ಲ. ಎರಡು ತಿಂಗ್ಳದೂ ಸೇರ್ಸಿ ಕೊಟ್ಬಿಡಿ!" ಎಂದು ಬಿರುಸಾಗಿ ಬಂದವ ನುಡಿದ.

ಶ್ರೀಪತಿಯ ಮೈಯಲ್ಲಿ ಸಿಂಹಬಲ ಸಂಚಾರವಾಯಿತು ಅವನು ಗಟ್ಟಿಯಾದ ಧ್ವನಿಯಲ್ಲಿ ಅಂದ:

"ಹೋಗ್ರಿ, ನಿಮ್ಮ ಮನೇನೇನೂ ನಾವು ನುಂಗಿಬಿಡೋದಿಲ್ಲ ಮುಂದಿನ ತಿಂಗ್ಳು ಎಲ್ಲಾ ಸೇರ್ಸಿ ಕೊಟ್ಟು ಬಿಡ್ತೀನಿ."

"ಅದನ್ನ ನಾನು ನಂಬ್ತೀನ್ಯೆ?"

"ನಂಬದಿದ್ರೆ ಏನು ಮಾಡ್ತೀನಿ ಗೊತ್ತೊ?" ಎಂದೆನ್ನುತ್ತಾ ಶ್ರೀಪತಿ ತನ್ನ ಅಂಗೈಯನ್ನು ಆತನ ಕುತ್ತಿಗೆಗೆ ಹಾಕಲು ಹೋದ. ಮಾಲೀಕ ಹೆದರಿ ದಾಡಾಯಿಸಿದ.

ಪತಿಯ ರೌದ್ರಾವತಾರ ನೋಡಿ ಮಂದಾಕಿನಿ ಬೆದರಿ "ಇದೇನು ಮಾಡಿದಿರಿ!" ಎಂದು ಕೇಳುವ ದಕ್ಕೂ ಆಟ ಮುಗಿಸಿದ ಮಗಳು ಒಳಬರುವ ದಕ್ಕೂ ತಾಳೆಯಾಯಿತು. ಮಗು ತಂದೆಯನ್ನು ನೋಡಿ ಸಂಭ್ರಮದಿಂದ,

"ಅಪ್ಪಾ, ನನ್ನ ಪುಸ್ತಕ ತಂದ್ಯಾ?" ಎಂದು ಕೇಳಿದಳು.

ಸಿಟ್ಟು ಬೆಂಕಿಯ ನಾಲಗೆಗಳನ್ನು ಚಾಚಿತು. ಶ್ರೀಪತಿ ತನ್ನ ಬಲಗೈಯನ್ನೆತ್ತಿ ಮಗಳ ಕೆನ್ನೆಗೆ, ಬೆನ್ನಿಗೆ ಹೊಡೆದ. "ಅಮ್ಮಾ, ಅಮ್ಮಾ" ಎಂದು ಚೀರುತ್ತಾ ಅಳುತ್ತಾ ಮಗು ತಾಯಿಯ ಬಳಿಗೆ ಓಡಿದಳು. ಮಂದಾಕಿನಿ ಅವಳನ್ನು ತನ್ನ ಸೀರೆಯ-ಲ್ಲಡಗಿಸಿಕೊಳ್ಳುತ್ತಾ,

"ಇದೇನೂಂದ್ರೆ, ಮಗೂನ ಮುಖಮೋರೆ ನೋಡ್ದೆ ಹೊಡೆದಿರಿ? ನಿಮಗೇನಾಗಿದೆ ಇವತ್ತು?" ಎಂದಳು.

"ನಂಗೆ ದೆವ್ವ ಬಡಿದಿದೆ!" ಎನ್ನುತ್ತಾ "ನಿಂಗೂ ತೋರಿಸಲಾ?" ಎಂದು ವಿಕಟವಾಗಿ ನಗುತ್ತಾ ಮಂದಾಕಿನಿಯ ಮುಡಿಕಟ್ಟಿದ ಕೂದಲನ್ನು ಹಿಡಿ-ದೆಳೆದು ಬೆನ್ನಿನ ಮೇಲೆ ಗುದ್ದಿದ. ಕೇಕೆ ಹಾಕಿ ನಗತೊಡಗಿದ.

ಅವನ ಕಣ್ಣಮುಂದಿದ್ದ ಬೆಳಕಿನ ತಾರಿಕೆ ಸಿಡಿದು ಚೂರು ಚೂರಾಗಿತ್ತು. ವೀಣೆಯ ತಂತಿ ಎಳೆದೆಳೆದು ತೆಳ್ಳಗಾಗಿ ಇನ್ನು ಮಿಡಿಯಲಾರದೆ ಮುರಿದಿತ್ತು. ಮಮತೆ, ಪ್ರೀತಿಗಳ ಮುತ್ತಿನ ಹಾರ ಹರಿದು ಅದರ ಮಣಿಗಳು ಚೆಲ್ಲಾಪಿಲ್ಲಿಯಾಗಿ ಬಿದ್ದವು.

ತಾರಿಕೆಯ ಬೆಳಕಿಲ್ಲದೆ ಈಡ ಕತ್ತಲೆ. ತಣ್ಣಗಿನ ಸೋಪಾನಗಳ ಮೇಲೆ ಅವನು ನಡೆಯುತ್ತ ಹೊರಟ ಕಪ್ಪು ಕಳೆದು ಬಿಳಿಯ ಬಣ್ಣ ಮೈದೋರಿತು. ಬಿಳಿಯ ಬಣ್ಣವೆಲ್ಲ ಬೆಳಕು. ಹೂ ಬೆಳಕು. ಚಿನ್ನದ ಲೇಪನವಿರುವ ದೀಪದ ಬೆಳ್ಳಿ ಬೆಳಕು ಅಲ್ಲೊಂದು ಸಿಂಹಾಸನ, ಅದರ ಮೇಲೆ ತಾನು ರಾಜಾಧಿರಾಜ.

ಶ್ರೀಪತಿ ಮತ್ತಷ್ಟು ಜೋರಾಗಿ ನಗತೊಡಗಿದ.

ಮಂದಾಕಿನಿ, ಶ್ರೀಪತಿಯ ತಾಯಿ ಅಳುತ್ತಳುತ್ತ ಅವನನ್ನು ಕೊಠಡಿಗೆ ಕರೆದೊಯ್ದರು.

"ಹಾಗೆಲ್ಲ ಮಾಡಬಾರದಪ್ಪ, ಶ್ರೀಪ" ಎಂದರು ವೃದ್ಧ ಮಾತೆ.

"ಮಲಕೊಳ್ಳಿ, ನಿಮಗೆ ಆಯಾಸವಾಗಿದೆ" ಎಂದಳು ಹೆಂಡತಿ.

ಹೌದು ರಾಜನಿಗೆ ಆಯಾಸವಾಗಿದೆ ಸಿಂಹಾಸನದಲ್ಲೇ ಅವನೀಗ ಮಲಗುತ್ತಾನೆ.

ಶ್ರೀಪತಿಗೆ ಕಣ್ಣು ಭಾರವಾಗಿ ತೂಕಡಿಕೆ ಬಂತು. ಎಚ್ಚರವಾದಾಗ ರಾತ್ರಿಯಾಗಿತ್ತು.

"ಊಟ ಮಾಡ್ತೀರ? ಇಲ್ಲಿಗೇ ತರಲಾ?"



ಆತಂಕ ತುಂಬಿದ ಮಂದಾಕಿನಿ, ಕಣ್ಣಲ್ಲಿ ಸಂಕಟ ತುಂಬಿಕೊಂಡಿದ್ದ ತಾಯಿ, ಹದ್ದಿನಂತೆ ಕಣ್ಣು ಬಿಡುತ್ತಿದ್ದ ಮಕ್ಕಳು, ಪರಿಚಾರಕರು

ಓಹೋ! ಇವರೆಲ್ಲ ತನ್ನ ಸೇವೆಗೆ ಮೀಸಲಾದವರು.

"ಬರಲಿ ಲಾಡು, ಚಿರೋಟಿ, ಪಾಯಸಗಳು ಬರಲಿ ಬಗೆಬಗೆಯ ಹಣ್ಣುಗಳನ್ನು, ಕೇಸರಿ ಹಾಕಿದ ಹಾಲನ್ನು ತನ್ನಿ."

ಮಂದಾಕಿನಿ ಸೆರಗಿನಿಂದ ಕಣ್ಣೊರಸಿಕೊಳ್ಳುತ್ತಾ ಒಳಗೆ ಹೋದಳು. ತಟ್ಟೆಯಲ್ಲಿ ಅನ್ನ ಕಲಸಿಕೊಂಡು ಬಂದು ಅವನೆದುರಿಗಿರಿಸಿದಳು.

"ಬರಿಯ ಸಾರು ಅನ್ನ! ಥತ್! ನಾನೇನು ಭಿಕ್ಷುಕನೇ?"

ಶ್ರೀಪತಿ ತಟ್ಟೆಯನ್ನು ಒದ್ದ. ಸಿಟ್ಟಿನಿಂದ ಬೈದ. ಎಲ್ಲರೂ ಅಡುಗೆಮನೆಯೊಳಗಡಗಿದ್ದರು. ಜೋರಾದ ಧ್ವನಿಯಲ್ಲಿ ಶ್ರೀಪತಿ ಕೂಗಿದ.

"ಓ ಹೋ ಹೋ! ನನ್ನನ್ನು ಡಿಸ್‌ಮಿಸ್ ಮಾಡ್ತಾನಂತೆ ಇವನು! ಬೋಳೀಮಗ. ನಾನು ಯಾರಂತ ತಿಳ್ಕೊಂಡ? ನಾನು ರಾಜಾಧಿರಾಜ, ನಿನ್ನಂಥ ಸಾವಿರ ಆಫೀಸರ್‍ನ ನಾನು ಡಿಸ್‌ಮಿಸ್ ಮಾಡೇನು; ಜೋಕೆ! ನನ್ನ ತಂಟೆಗೆ ಬರೇಡ ತಿಳಿತಾ?"

ಹಾಗೆ ಒಂದಕ್ಕೊಂದು ಅರ್ಥವಿಲ್ಲದ ಮಾತು, ನಗೆ, ಅಳು, ನಿದ್ದೆ, ಇವುಗಳ ಮಧ್ಯೆ ರಾತ್ರಿ ಕಳೆಯಿತು. ಅತ್ತೆ ಸೊಸೆ ಕಣ್ಣಿಗೆ ಕಣ್ಣು ಹಚ್ಚದೇ ಕುಳಿತರು.

ಬೆಳಗ್ಗೆಯೂ ಅವನ ಸ್ಥಿತಿ ಅದೇ ರೀತಿ ಇರುವುದನ್ನು ಗಮನಿಸಿದ ಮಂದಾಕಿನಿ ತಾನೇ ಸುಬ್ಬಣ್ಣನ ಮನೆಗೆ ಹೋದಳು.

"ಸ್ವಲ್ಪ ನಮ್ಮ ಮನೆಗೆ ಬನ್ನೀಪ್ಪಾ, ರಾತ್ರಿಯಿಂದ ಇವ್ರು ಹೇಗೆ ಹೇಗೋ ಆಡ್ತಾ ಇದ್ದಾರೆ!"

ಆತನ ಹೆಂಡತಿಯೂ ಅವಳ ಮಾತಿಗೆ ಕನಿಕರಿಸಿದಳು. ಸುಬ್ಬಣ್ಣ ಉಟ್ಟಿದ್ದ ಅಡ್ಡಪಂಚೆಯಲ್ಲಿಯೇ ಶ್ರೀಪತಿಯ ಮನೆಗೆ ಬಂದ. ಅವನ ರೂಮಿನೊಳದಳ ಹೋಗುತ್ತಾ,

"ಯಾಕೋ ಶ್ರೀಪತಿ, ಮೈಲಿ ಸರಿ ಇಲ್ಲವೆನಯ್ಯ?" ಎಂದ.

ಸೂರನ್ನು ದಿಟ್ಟಿಸುತ್ತಾ ಕುಳಿತಿದ್ದ ಶ್ರೀಪತಿ ಸುಬ್ಬಣ್ಣನತ್ತ ನೋಡಿ,

"ನೀನು ಯಾರು? ಎಂದು ಸಂದೇಹದಿಂದ ಕೇಳಿದ."

ಸುಬ್ಬಣ್ಣನ ಎದೆ ಧಸಕ್ಕೆಂದಿತು. ಸ್ನೇಹಿತನಿಗೆ ಹುಚ್ಚು ಹಿಡಿದಿರುವುದು ದಿಟ ಎಂದು ಅವನಿಗೆ ಖಾತ್ರಿಯಾಯಿತು. ತೋರಿಕೆಯ ಧೈರ್ಯ ಪ್ರದರ್ಶಿಸುತ್ತಾ ಅವನೆಂದ,

"ನಾನು ಸುಬ್ಬಣ್ಣ ಅಲ್ಲವೇನೋ? ಎದ್ದೇಳಯ್ಯ ತಿಂಡಿ ತಿನ್ನು. ಆಫೀಸಿಗೆ ಹೊತ್ತಾಗ್ತದೆ."

"ಯಾವ ಆಫೀಸು? ಇದು ನನ್ನ ರಾಜ್ಯ, ನಾನೇ ರಾಜಾಧಿರಾಜ. ನನ್ನ ಕಲಾಪತ್ತಿನ ಪಂಚೆ ನೋಡು, ಜಗಜಗಿಸುವ ಆಭರಣಗಳನ್ನು ನೋಡು."

ಸುಬ್ಬಣ್ಣ ಮುಖ ಕೆಳಗೆ ಮಾಡಿ ಹೊರಗೆ ಬಂದ.

"ಅಮ್ಮಾ, ಅವನು ಮನಸ್ಸಿಗೆ ತುಂಬಾ ಹಚ್ಚಿಕೊಂಡು ಹೀಗಾಗಿದ್ದೆಮ್ಮ. ನಾನೀಗ ಹೋಗಿ ನಮ್ಮ ಡಾಕ್ಟರನ್ನು ಕರಕೊಂಡು ಬರ್‍ತೀನಿ. ಅವರಿಂದ ಸರ್ಟಿಫೀಕೇಟು ಇಸ್ಕೊಂಡು ಆಫೀಸಿಗೆ ತಲುಪಿಸ್ತೀನಿ. ನೀವೇನೂ ಹೆದರ್‍ಕೋಬೇಡಿ" ಎಂದವರಿಗೆ ಧೈರ್ಯ ಹೇಳಿ ಹೊರಟ.

ಡಾಕ್ಟರರು ಬಂದು ನೋಡಿದರು ಶ್ರೀಪತಿಗೆ ಇಂಜಕ್ಷನ್ ಕೊಡಲು ಮೂರು ನಾಲ್ಕು ಜನ ಅವನನ್ನು ಹಿಡಿಯಬೇಕಾಯಿತು. ಆನಂತರ ಅವನು ನಿದ್ದೆ ಮಾಡಿದ ಅತ್ತು ಅತ್ತು ಮಂದಾಕಿನಿ ಸೋತಳು. ಕಣ್ಣಿನಲ್ಲಿ ನೀರು ಇಂಗಿದ ತಾಯಿ ಸೆರಗು ಕಟ್ಟಿ, ಮನೆಗೆಲಸ ಮಾಡಿದರು

•

ದಿನಗಳು ಕಳೆದವು ಶ್ರೀಪತಿಯ ಸ್ಥಿತಿ ದಿನದಿನಕ್ಕೂ ಉಲ್ಬಣಿಸತೊಡಗಿತು. ಮಕ್ಕಳನ್ನು ಹಿಡಿದು ಹೊಡೆಯತೊಡಗಿದ. ಮಂದಾಕಿನಿಗೂ ಆ ಸರತಿ ಒಂದೆರಡು ಬಾರಿ ಬಂತು. ಅದನ್ನು ನೋಡಿ ನೋಡಿ ಸಾಕಾದ ತಾಯಿ ಸುಬ್ಬಣ್ಣನೊಡನೆ,

"ಆಸ್ಪತ್ರೆಗಾದ್ರೂ ಸೇರಿಸೋಣವೇನಪ್ಪ?" ಎಂದು ಕೇಳಿದರು.

ಶ್ರೀಪತಿಯನ್ನು ಮಾನಸಿಕ ಚಿಕಿತ್ಸಾಲಯದಲ್ಲಿ ಬಿಟ್ಟು ಬಂದ ಮಂದಾಕಿನಿ ರೋದಿಸುತ್ತ ಹೇಳಿದಳು.

"ಇನ್ನು ನಮ್ಮ ಗತಿಯೇನು ಅತ್ತೆ?"

"ದೇವರಿದ್ದಾನಮ್ಮ!" ಎಂದು ಆ ವೃದ್ಧೆ ತುಂಬ ವಿಶ್ವಾಸದಿಂದ ನುಡಿದರು.

•

"ಇವರಿಗೆ ವಾಸಿಯಾಗುತ್ತಾ ಡಾಕ್ಟ್ರೆ?"

"ನೋಡೋಣಮ್ಮ"

ಅಡ್ಡಗೋಡೆಯ ಮೇಲೆ ದೀಪ ಇಟ್ಟಹಾಗೆ ಉತ್ತರ. ಬದುಕೂ ಅಲ್ಲ, ಸಾವೂ ಅಲ್ಲ, ಅಂಥ ಜೀವನ ಆತಂಕ, ಭೀತಿ ಒಂದೆಡೆಗಾದರೆ, ಒಳಿತಾಗಬಹುದೆಂಬ ಆಕಾಂಕ್ಷೆ, ಆಸೆ ಇನ್ನೊಂದೆಡೆ. ಇವುಗಳ ತಾಕಲಾಟದಲ್ಲಿ ಮಂದಾಕಿನಿ ಸೋತಳು.

ಅವಳ ಮುಖ ಬಾಡಿತು. ಕಣ್ಣುಗಳು ಆಳಕ್ಕೆ ಇಳಿದವು. ತಲೆಗೂದಲು ಅಲ್ಲೊಂದು ಇಲ್ಲೊಂದು ಬೆಳ್ಳಗಾದತೊಡಗಿದವು.

ಡಾಕ್ಟರು ಒಮ್ಮೆ ಹೇಳಿದರು:

"ಮನಸ್ಸು ಬಲು ಸೂಕ್ಷ್ಮವಾದುದಮ್ಮ. ಸಣ್ಣ ಎಳೆಯ ಹಾಗೆ ಅದು. ಬದುಕಿನ ಕಷ್ಟನಷ್ಟಗಳು ಸುಖಕ್ಕಿಂತ ಮೇಲುಗೈಯಾಗಿ ಮನುಷ್ಯನನ್ನು ಹಿಂಸಿಸಿದರೆ, ಅದರ ಭಾರ ತಡೆಯಲಾರದೆ ಎಳೆ ಮುರಿಯುತ್ತೆ. ಸುತ್ತಲಿನ ಪ್ರಪಂಚಕ್ಕೂ ಮನಸ್ಸಿಗೂ ಬೆಸುಗೆ ಹಾಕಿರುವ ಕೊಂಡಿ ಮುರಿದಾಗ, ಮನುಷ್ಯ ವಿಚಿತ್ರವಾಗಿ ವರ್ತಿಸ್ತಾನೆ. ಒಂದು ರೀತಿಯಲ್ಲಿ ಹೇಳಬೇಕೆಂದರೆ ವಾಸ್ತವಿಕತೆಯಿಂದ ತನ್ನನ್ನು ತಾನು ಪಾರು ಮಾಡಿಕೊಳ್ಳಲು ಮಾನವನ ಮನಸ್ಸು ಹೂಡುವ ಆಟ ಇದು. ನಿಮ್ಮ ಯಜಮಾನರಿಗೆ ಆಗಿರೋದೂ ಇದೇ. ಮನಸ್ಸಿನ ಆತಂಕ ಕಡಮೆಯಾದರೆ ಅವರು ಸರಿ ಹೋಗಬಹುದು."

ಹಾಗೆ ಅವರು ಹೇಳಿ ಎರಡು ತಿಂಗಳುಗಳು ಕಳೆದುವು. ಆದರೆ ಶ್ರೀಪತಿಯ ವರ್ತನೆಯಲ್ಲಿ ಯಾವ ಬದಲಾವಣೆಯೂ ಕಂಡುಬರಲಿಲ್ಲ.

ಶ್ರೀಪತಿಗೆ ಕೆಲಸದಿಂದ ವಜಾ ಆಗಿದೆ ಎಂಬ ಸುದ್ದಿಯನ್ನು ಸುಬ್ಬಣ್ಣ ಹೇಳಿದ ಆ ಎರಡು ತಿಂಗಳು ಬಂದ ಅರ್ಧ ಸಂಬಳಕ್ಕೂ ಈಗ ಸೊನ್ನೆ. ಮುಂದೇನು ಮಾಡುವುದು? ಎಂಬುದು ಅತ್ತೆ ಸೊಸೆಯರ ಮುಂದೆ ಬೃಹದಾಕಾರವಾಗಿ ಬೆಳೆದು ಕುಳಿತ ಪ್ರಶ್ನಾರ್ಥಕ ಚಿಹ್ನೆ

ಸುಬ್ಬಣ್ಣ ಅಷ್ಟಿಷ್ಟು ಸಹಾಯ ಮಾಡಿದ ಆದರೆ ಅದು ತಾನೇ ಎಷ್ಟು ದಿನ ಮಾಡಲು ಸಾಧ್ಯ? ಮಂದಾಕಿನಿ ಅವನ ಮುಂದೆ ಗೋಗರೆದಳು:

"ನನಗೊಂದು ಕೆಲ್ಸ ಹುಡುಕಿ ಕೊಡಿಸೀಪ್ಪಾ, ತುಂಬಾ ಉಪಕಾರವಾಗತ್ತೆ!"

ಆದರೆ ಲೋಅರ್ ಸೆಕೆಂಡರಿ ಪಾಸಾದ ಹುಡುಗಿಗೆ ಎಂಥ ಕೆಲಸ ಸಿಕ್ಕೀತು? ಆದರೂ "ಆಗಲಮ್ಮ" ಎಂದ ಸುಬ್ಬಣ್ಣ.

ದಿನಗಳೆಯುವುದು ದುಸ್ತರವಾಯಿತು. ಅತ್ತೆ ಸೊಸೆಯರು ಅಕ್ಕಪಕ್ಕದವರಿಗೆ ಹಪ್ಪಳ ಸಂಡಿಗೆ ಮಾಡಿಕೊಟ್ಟರು. ಮೆಣಸಿನ ಪುಡಿ ಕುಟ್ಟಿಕೊಟ್ಟರು. ಊಟದೆಲೆ ಹಚ್ಚಿಕೊಟ್ಟರು. ಕಡೆಯದಾಗಿ ಮನೆಯಲ್ಲಿ ಇದ್ದ ಒಂದೇ ಒಂದು ಆಭರಣ, ಮಂದಾಕಿನಿಯ ಎರಡೆಳೆಯ ಚಿನ್ನದ ಸರವನ್ನು ಮಾರಿದರು. ಇನ್ನೆಂದೂ ಅಂಥದನ್ನು ಕೊಳ್ಳಲು ಆಗದೆಂದು ತಿಳಿದ ಮಂದಾಕಿನಿ ಬಿಕ್ಕಿಬಿಕ್ಕಿ ಅತ್ತಳು.

ಕಣ್ಣೆದುರಿಗೆ ಶೂನ್ಯ. ಕತ್ತಲು. ಮಂದಾಕಿನಿಗೆ 'ಹಸಿವು ಅಮ್ಮಾ' ಎಂದು ಗೋಗರೆಯುವ ಮಕ್ಕಳನ್ನು ಕಂಡಾಗ, ತಾವೆಲ್ಲರೂ ಆತ್ಮಹತ್ಯೆಮಾಡಿಕೊಂಡುಬಿಟ್ಟರೆ ಒಮ್ಮೆಗೇ ಈ ಹಸಿವು ಸಂಕಟಗಳಿಂದ ಮುಕ್ತಿ ದೊರೆಯುತ್ತದೆ ಎನಿಸಿತು.

ಆಗ ಅವಳ ಎದೆ ಕಂಪಿಸಿತು. ಉಸಿರು ಸಿಕ್ಕಿಕೊಂಡ ಹಾಗಾಯಿತು. ಒಳ್ಳೆಯ ಗಾಳಿಗೆಂದು ಅವಳು ಬಾಗಿಲ ಬಳಿ ಬಂದು ನಿಂತಳು. ಹಾಗೆ ನಿಂತವಳು ಮನೆಯ ಮುಂದಿನ ದೃಶ್ಯ ಕಂಡು ಚಕಿತಳಾದಳು.

ಭಿಕ್ಷುಕಿಯೊಬ್ಬಳು ತನ್ನ ನಾಲ್ಕು ಮಕ್ಕಳ ಜೊತೆ ಮನೆಯೆದುರಿಗಿನ ಮರದ ಕೆಳಗೆ ನೆಲದ ಮೇಲೆ ಕುಳಿತಿದ್ದಳು. ಅವಳ ಕೈಯಲ್ಲಿದ್ದ ಅಲ್ಯೂಮಿನಿಯಂ ತಟ್ಟೆಯೊಳಗಿಂದ ಹತ್ತಾರು ಮನೆಯವರು ಕೊಟ್ಟಿದ್ದ ಹಳಸಿದ ಅನ್ನ ಸಾರು ಕಲಿಸಿ ಉಂಡೆಮಾಡಿ ಮಕ್ಕಳಿಗೆ ಕೊಡುತ್ತಿದ್ದಳು. ಅವಳ ಮುಖದಲ್ಲಿ ನಾಳೆಯ ಚಿಂತೆಯಿರಲಿಲ್ಲ, ಆತಂಕವಿರಲಿಲ್ಲ. ತೃಪ್ತಿಯ ಭಾವ ಎದ್ದು ಕಾಣುತ್ತಿತ್ತು.

ಅವಳನ್ನು ನೋಡಿದ ಮಂದಾಕಿನಿಯ ಮುಖದಲ್ಲಿ ಆತ್ಮವಿಶ್ವಾಸದ ಭಾವ ತಲೆದೋರಿತು. 'ಯಾವ ಆಧಾರವೂ ಇಲ್ಲದ ಅಂಥ ಭಿಕ್ಷುಕಿ ಮಕ್ಕಳನ್ನ ಬೆಳೆಸ್ತಾಳೆ. ನನ್ನ ಕೈಲಿ ಮಕ್ಕಳ್ನ ನೋಡ್ಕೊಳ್ಳೋಕ್ಕಾಗದಿದ್ರೆ, ಎಂಥ ನಾಚಿಕೆಗೇಡು' ಎನಿಸಿ ಅವಳು ಹೃದಯವನ್ನು ಗಟ್ಟಿಮಾಡಿಕೊಂಡಳು.

ಆ ಸಮಯದಲ್ಲಿ ಸುಬ್ಬಣ್ಣ ಫ್ಯಾಕ್ಟರಿಯೊಂದರಲ್ಲಿ ಎಂಭತ್ತು ರೂಪಾಯಿನ ಕೆಲಸ ದೊರಕಿಸಿಕೊಟ್ಟ. ಶ್ರೀಪತಿಯ ತಾಯಿ ಅವನತ್ತ ಕೃತಜ್ಞತೆಯ ದೃಷ್ಟಿ ಹರಿಸಿ,

"ನೀನು ನಮ್ಮ ಭಾಗದ ದೇವರಪ್ಪಾ!" ಎಂದರು.

"ಸ್ನೇಹಿತನಿಗಾಗಿ ನಾನು ಇಷ್ಟು ಮಾಡದಿದ್ದೆ,

ಹೇಗಮ್ಮಾ ? ನಿಮಗೇನು ಬೇಕಾದ್ರೂ ಸಂಕೋಚ ವಿಲ್ದೆ ನನ್ನನ್ನು ಕೇಳಿ. ನನ್ನ ಕೈಲಾದದ್ದು ಮಾಡ್ತೀನಿ," ಎಂದ ಸುಬ್ಬಣ್ಣ ಅಂತಃಕರುಣೆ-ಯಿಂದ

ಮಕ್ಕಳ ಶಾಲೆ ನಿಂತುಹೋಯಿತು.

'ಮುಂದಿನ ವರ್ಷ ಹೋಗ್ಲಿ ಬಿಡು. ಅವರಿಗೇನು ವಯಸ್ಸು ಕಳ್ದೆ ಹೋದದ್ದು ?" ಎಂದು ಅತ್ತೆ ಮಂದಾಕಿನಿಯನ್ನು ಸಂತೈಸಿದರು.

ಅಡುತ್ತಿದ್ದ ಮಗ ಒಂದು ದಿವಸ ದೂರು ತಂದ.

"ನೋಡಮ್ಮಾ, ಪಕ್ಕದ ಮನೆ ಮುರಳಿ ಅಂತಾನೆ, ನಿಮ ತಂದೆ ಹುಚ್ಚ ಅಂತ. ನಾನು ಅವನಿಗೆ ಎರಡೇಟು ಕೊಟ್ಟೆ. ಅತ್ಕೊಂಡು ಹೋದ !"

ಮಂದಾಕಿನಿಯ ಮುಖ ಮುದುಡಿತು. ಕಣ್ಣೀರು ಕಾಣಿಸಿಕೊಂಡವು. ಹೌದು. ತನ್ನ ಗಂಡ, ಆ ಮಗುವಿನ ತಂದೆ ಹುಚ್ಚ. ಅಲ್ಲವೆಂದವರು ಯಾರು ? ನಿಜ ಸಂಗತಿ ಹೇಳಿದರೆ ತನಗೆ ದುಃಖವೇಕಾಗಬೇಕು, ಕೋಪವೇಕೆ ಬರಬೇಕು ? ಸಹಿಸುವಷ್ಟು ತಾಳೆ ಕೊಡು ದೇವರೆ, ಎಂದವಳು ಬೇಡಿಕೊಂಡಳು ಮಗನಿಗೆ ಹೇಳಿದಳು:

"ಮಗೂ, ಬೇರೊಬ್ಬರ ಮಕ್ಕಳ್ನ ಹೊಡೀಬಾರದಪ್ಪಾ !"

ಬೆಳಗಿನಿಂದ ಸಂಜೆಯುವರೆಗೆ ದುಡಿತ. ಮನೆಗೆ ಬಂದೊಡನೆ ಮನೆಯ ಮಕ್ಕಳ ಕೆಲಸ. ಸಂಜೆ ಆಸ್ಪತ್ರೆಗೆ ಊಟ ತೆಗೆದುಕೊಂಡು ಹೋಗಿ ಬರುತ್ತಿದಳು. ಇಷ್ಟು ಮಾಡಿದರೂ ತನಗೆ ಈಗ ಆಯಾಸವಿಲ್ಲವಲ್ಲಾ ಎಂದವಳು ಆಶ್ಚರ್ಯಪಟ್ಟಳು. ಮೊದಲಿಗೆ ಆಗಾಗ್ಗೆ ಕಾಡಿಸುತ್ತಿದ್ದ ಎದೆನೋವು ಈಗ ಕಂಗಮಾಯವಾಗಿತ್ತು. ಪರಿಸ್ಥಿತಿ ದೇಹಕ್ಕೆ ಅಸೀಮ ಬಲವನ್ನು ಸಂಪಾದಿಸಿಕೊಟ್ಟಿತ್ತು.

ನಾಲ್ಕು ತಿಂಗಳ ಆಸ್ಪತ್ರೆಯ ವಾಸದ ಬಳಿಕ ಡಾಕ್ಟರೆಂದರು:

"ಮಾತ್ರೆ, ಇಂಜೆಕ್ಷನ್‌ಗಳ ಪರಿಣಾಮ ಈಗ ಕಾಣಿಸ್ತಾ ಇದೆ. ಇತ್ತೀಚೆಗೆ 'ಶಾಕ್' ಟ್ರೀಟ್‌ಮೆಂಟ್ ಕೊಡ್ತಾ ಇದೀವಿ. ಶ್ರೀಪತಿ ಈಗ ಎಷ್ಟೋ ವಾಸಿ ಅಂತ ಅನಿಸೊಲ್ವೆ ನಿಮಗೆ ? ಬೇಕಾದ್ರೆ ಭಾನುವಾರ ಮನೆಗೆ ಕರ್‍ಕೊಂಡುಹೋಗಿ. ಸ್ನಾನ-ಗೀನ ಮಾಡಿಸಿ ಸಂಜೆಗೆ ವಾಪ್ಸ ಕರ್‍ಕೊಂಡು ಬನ್ನಿ."

ಅಂಥ ಸುದ್ದಿಗಾಗಿ ಮಂದಾಕಿನಿ ಅದೆಷ್ಟು ದಿವಸಗಳಿಂದ ತಪಸ್ಸು ಮಾಡಿದ್ದಳು ! ಅವಳು ಚಿಗುರೆ-ಯಾದಳು. ಮನಸ್ಸು ಹಗುರವಾಯಿತು. ಉಲ್ಲಾಸಗೊಂಡು ನಲಿಯಿತು.

'ಹಾಗಾದರೆ ಇವರಿಗೆ ಒಂದಲ್ಲ ಒಂದುದಿನ ವಾಸಿಯಾಗತ್ತೆ !' ಎಂದು ಅವಳಿಗೆ ನಂಬಿಕೆ ಮೂಡಿತು.

ಮನೆಗೆ ಕರೆದೊಯ್ಯುವ ಮುನ್ನ ಡಾಕ್ಟರು ಹೇಳಿದ್ದರು:

"ನೆನಪಿರಲಿ. ಶ್ರೀಪತಿಯ ಮನಸ್ಸಿಗೆ ಯಾವ ವಿಧದಲ್ಲೂ ಆಘಾತವಾಗದ ಹಾಗೆ ನೋಡಿಕೊಳ್ಳಿ."

ಅದು ಮಂದಾಕಿನಿಗೂ ತಿಳಿದಿತ್ತು. ಮಕ್ಕಳಿಗೆ ತಂದೆಯ ಬಳಿ ಯಾವ ವಿಷಯವನ್ನೂ ಮಾತಾಡಬಾರದೆಂದು ಕಟ್ಟಾಜ್ಞೆ ಮಾಡಿದಳು.

ಟಾಂಗಾದಲ್ಲಿ ಶ್ರೀಪತಿ ಹೆಂಡತಿಯೊಂದಿಗೆ ಮನೆಗೆ ಬಂದಾಗ, ಮಕ್ಕಳು ತಂದೆಯ ಎರಡೂ ಕೈಗಳನ್ನು ಹಿಡಿದುಕೊಂಡರು. ಶ್ರೀಪತಿ ಮುಗುಳು ನಕ್ಕ. ಕಾಠಿನ್ಯದ ರೇಖೆಗಳು ಆ ಮುಖದಿಂದ ಅಳಿಸಿಹೋಗಿದ್ದುವು.

"ಹುಶಾರಾಗಿದೀಯಪ್ಪಾ, ಬಾ ನನ್ನಪ್ಪಾ !" ಎಂದು ಸಂತೋಷ ತಡೆಯಲಾರದೆ ವೃದ್ಧ ಮಾತೆ ನಡುಗುವ ಧ್ವನಿಯಲ್ಲಿ ಸ್ವಾಗತಿಸಿದರು

ತಿಂಡಿ. ಬಿಸಿಬಿಸಿಯಾದ ಕಾಫಿ

"ಶ್ರೀಪೂಗೆ ಎಣ್ಣೆ ಒತ್ತಿ ಸ್ನಾನಮಾಡಿಸು ಮಂದಾಕಿನಿ ನೀರು ಕಾಸಿದೀನಿ."

"ಹೂಂ ಅತ್ತೆ"

ಮಂದಾಕಿನಿ ಶ್ರೀಪತಿಯ ಮೈಗೆಲ್ಲಾ ಎಣ್ಣೆ ಉಜ್ಜಿದಳು. ಅವಳ ಸ್ಪರ್ಶದಿಂದ ಅವನ ಮೈ ಹಿತವಾಗಿ ಕಂಪಿಸಿತು. ಹಳೆಯ ದಿನಗಳ ನೆನಪು. ತಾವು ಮದುವೆಯಾದ ತಾರುಣ್ಯದಲ್ಲಿ ಕಂಡ ಕನಸುಗಳು ಆಡಿದ ಆಟಗಳು, ಆಮೋದ ಪ್ರಮೋದಗಳು

ಶ್ರೀಪತಿ ಎಣ್ಣೆಯ ಮೈನಲ್ಲಿಯೇ ಮಂದಾಕಿನಿ-ಯನ್ನು ಬಿಗಿದಪ್ಪಿ ಚುಂಬಿಸಿದ

ಅಭ್ಯಂಜನ ಸ್ನಾನವಾದಮೇಲೆ ಬಿಸಿಬಿಸಿ ಹಾಲು, ರಾಜೋಪಚಾರ ತಾಯಿಯಿಂದರು

"ಮಂದಾಕಿನಿ, ಅನ್ನ ಒಂದಿಷ್ಟು ಮಾಡು. ನಾನು ಮಕ್ಕಳ್ನ ಕರ್‍ಕೊಂಡು ಮಾರ್ಕೆಟಿಗೆ ಹೋಗಿ ಬರ್‍ತೀನಿ."

ಮಂದಾಕಿನಿ ಕೃತಜ್ಞತೆಯಿಂದ ಅವರ ಕಡೆಗೆ ನೋಡಿದಳು.



ಮನೆಯಲ್ಲಿ ಅವರಿಬ್ಬರೇ. ಹುದುಗಿದ್ದ ಪ್ರೇಮದ ಒರೆಗಳು ಬಾಯಿಬಿಟ್ಟವು ಒಣಗಿದ ಭೂಮಿ ನೀರು ಹರಿದು ಹಸಿರಾಯಿತು.

ಶ್ರೀಪತಿ ಅವಳ ತಲೆ ನೇವರಿಸುತ್ತಾ ಕೇಳಿದ.

"ಮಂದಾ."

"ಊಂ ?"

"ನನ್ನನ್ನ ಇನ್ನೂ ಪ್ರೀತಿಸ್ತೀಯಾ ?"

"ಎಂಥ ಮಾತು ಕೇಳ್ತೀರ! ನಿಮ್ಮನ್ನಲ್ದೆ ಇನ್ನಾರನ್ನ ಪ್ರೀತಿಸ್ಲಿ ?"

ಶ್ರೀಪತಿಯ ಮನಸ್ಸು ಆ ಮಾತುಗಳಿಂದ ಮುದಗೊಂಡಿತು.

"ನನ್ನಿಂದ ನಿಮಗೆಲ್ಲಾ ತುಂಬ ಕಷ್ಟವಾಯ್ತು. ಮಕ್ಕಳೆಲ್ಲಾ ಚೆನ್ನಾಗಿ ಓದ್ಕೊಳ್ತಾ ಇದಾರಾ ?"

"ಓಹೋ ! ನೀವೇನೂ ಆತಂಕಪಟ್ಕೋಬೇಡಿ. ಹುಟ್ಸಿದ ದೇವರು ಹುಲ್ಲು ಮೇಯಿಸುತ್ತಾನೆಯೇ ? ಅವನೇ ನಮ್ಮನ್ನು ಕೈ ಹಿಡಿದು ನಡಸ್ತಾ ಇದಾನೆ. ಮುಂದೇನೂ ಯಾವ ತೊಂದರೇನೂ ಆಗೊಲ್ಲ, ಬೇಕಾದಷ್ಟು ಕೆಲ್ಸ ಸಿಗುತ್ತೆ ಅಂದಿದಾರೆ ಸುಬ್ಬಣ್ಣ !"

ಆ ಆಶ್ವಾಸನೆಯಿಂದ ಶ್ರೀಪತಿಯ ಹೃದಯ ಹಗುರವಾಯಿತು. ಒಡೆದಿದ್ದ ತಂತಿ ಮತ್ತೆ ಒಂದುಗೂಡುತ್ತಲಿತ್ತು. 'ಹಾಗಾದರೆ ನಾನು ಯಾವ ವಿಷಯದಲ್ಲೂ ವ್ಯಥೆಪಡಬೇಕಾಗಿಲ್ಲ. ಆತಂಕಗೊಳ್ಳಬೇಕಾಗಿಲ್ಲ. ಮಂದಾಕಿನಿ ಕೆಲ್ಸಕ್ಕೆ ಸೇರಿದಾಳೆ. ನಾನೂ ಆರೋಗ್ಯವಾಗಿ ವಾಪ್ಸ ಬಂದಾಗ "ಬೇಕಾದಷ್ಟು ಕೆಲ್ಸ ಸಿಗುತ್ತೆ" ಅಂತ ಸುಬ್ಬಣ್ಣ ಅಂದಿದಾನಂತೆ. ಸಾಲಗಾರರ ಯೋಚನೆ, ಮಕ್ಕಳ ಫೀಸು, ಪುಸ್ತಕ, ಬಾಡಿಗೆ, ಅಕ್ಕಿ, ತರಕಾರಿ, ಮಂದಾಕಿನಿಯ ಎದೆನೋವು, ಇವೆಲ್ಲದಕ್ಕೂ ಸಾಕಾಗುವಷ್ಟು ದುಡ್ಡನ್ನು ನಾವಿಬ್ಬರೂ ಸೇರಿ ಸಂಪಾದಿಸಬಹುದು. ಯಾವ ತೊಂದರೆಯೂ ಇಲ್ಲ. ಆತಂಕವೂ ಇಲ್ಲ.'

ಪಾಯಸದ ಸುಗ್ರಾಸ ಭೋಜನ. ಎಲ್ಲರೂ ಒಟ್ಟಿಗೆ ಊಟ ಮಾಡಿದರು.

"ಅಣ್ಣಾ ನೀನಿಲ್ಲೇ ಇರು," ಮಗಳ ಒತ್ತಾಯ.

"ಇನು ಸ್ವಲ್ಪದಿನ. ಆಮೇಲೆ ಬಂದ್ಬಿಡತಾರಮ್ಮ ! ಎಂದು ಮಂದಾಕಿನಿ ಮಗಳಿಗೆ ಸಮಾಧಾನ ಹೇಳಿದಳು.

ಆಗ ಶ್ರೀಪತಿ ಕೇಳಿದ:

"ಮಗು ನಿನ್ನ ಪುಸ್ತಕ ತೆಗೊಂಡ್ಬಾ. ಪಾಠ ಹೇಳ್ತೀನಿ."

ಮಗ ನುಡಿದ :

"ಪುಸ್ತಕ ಇಲ್ಲಪ್ಪ. ನಾನೀಗ ಸ್ಕೂಲಿಗೆ ಹೋಗ್ತಾ ಇಲ್ಲ."

ಮಂದಾಕಿನಿ ಬೆದರಿದಳು. ಶ್ರೀಪತಿ ನೆಟ್ಟನೋಟದಿಂದ ಅವಳನ್ನೇ ನೋಡುತ್ತಾ,

"ಯಾಕೆ ? ಯಾಕೆ ಮಗೂನ ಸ್ಕೂಲ್ಗೆ ಕಳಿಸ್ತಾ ಇಲ್ಲ ? ಮನೇಲಿರಿಸ್ಕೊಂಡು ಅವನ್ನ ಹಾಳು ಮಾಡ್ಬೇಕಂತ ಯೋಚಿಸಿದೀಯ ? ಅಥ್ವಾ ಹುಚ್ಚು ಮುಂಡೇ ಮಗನೇ, ನೀನೇ ಸ್ಕೂಲಿಗೆ ಚಕ್ಕರ್ ಹಾಕಿದೀಯೊ?" ಎನ್ನುತ್ತಾ ಹೆಂಡತಿಗೂ,ಮಗನಿಗೂ ರಪರಪನೆ ಏಟು ಕೊಟ್ಟ.

ಅಂದು ಆಸ್ಪತ್ರೆಗೆ ಹಿಂತಿರುಗಿದಾಗ ಮಂದಾಕಿನಿ ಡಾಕ್ಟರಿಗೆ ಎಲ್ಲವನ್ನೂ ವರದಿ ಮಾಡಿದಳು. ಸಮಾಧಾನ ಚಿತ್ತರಾಗಿ ಡಾಕ್ಟರು ನುಡಿದರು :

"ಇದು ಶುಭಸೂಚನೆ. ಶ್ರೀಪತಿಗೆ ಜೀವನದಲ್ಲಿ ಆಸಕ್ತಿ ಮೂಡ್ತಾ ಇದೆ ಅನ್ನೋದನ್ನ ತೋರಿಸೋದಕ್ಕೆ ನಿದರ್ಶನ ಇದು !"

ಮತ್ತೆ ನಾಲ್ಕಾರು ಬಾರಿ ಶ್ರೀಪತಿ ಮನೆಗೆ ಬಂದ. ಪ್ರತಿಸಾರೆಯೂ ಅವನ ವರ್ತನೆ ಸುಧಾರಿಸತೊಡಗಿತ್ತು. ಅವನು ಮಕ್ಕಳೊಂದಿಗೆ ಆಟವಾಡಿದ. ನಕ್ಕು ನಲಿದ. ಅದನ್ನು ಕಂಡು ತಾಯಿಯ ಕಣ್ಣುಗಳು ಹಿಗ್ಗಿದುವು.

ಒಮ್ಮೆ ಆತನೆಂದ,

"ಮಂದಾ, ನನ್ನಿಂದ ನಿಮಗೆಲ್ಲ ಎಷ್ಟು ತೊಂದರೆಯಾಯ್ತಲ್ಲೆ ! "

"ತೊಂದರೆಯೇನು ಬಂತು ? ನಮ್ಮ ಸಹನೆಯ ಪರೀಕ್ಷೆಯಾಯ್ತು ಅಷ್ಟೆ. ಸದ್ಯ ನೀವು ಹುಶಾರಾಗಿ ಮನೆಗೆ ಬನ್ನಿ ಸಾಕು. ನಂಗೆ ನಾಲ್ಕು ಭುಜ ಬಂದ್ಹಾಗಾಗುತ್ತದೆ."

ಕನಸಿನಲ್ಲಿ ಮಾತನಾಡಿದವನಂತೆ ಶ್ರೀಪತಿ ಮೆಲ್ಲಗೆ ನುಡಿದ.

"ಮುಂದಿನ ವರ್ಷದಿಂದ ಮಕ್ಕಳ್ನ ಮತ್ತೆ ಸ್ಕೂಲಿಗೆ ಸೇರಿಸೋಣ. ಇನ್ನೆಂದೂ ಅವರ ವಿದ್ಯಾಭ್ಯಾಸಕ್ಕೆ ತೊಂದರೆಯಾಗಬಾರದು."

ಮಂದಾಕಿನಿ ತೃಪ್ತಿಯಿಂದ, ಆನಂದದಿಂದ ತಲೆ ಬಾಗಿಸಿದಳು.

ತನ್ನ ಜನುಮ ಸಾರ್ಥಕವಾಯಿತಲ್ಲವೇ. ಎಂದ್ಕೊಂಡಳು. ಇನ್ನು ತಾನು ಬಾಳಲಾರೆ, ಕಷ್ಟಕೋಟಲೆಗಳ ಮಹಾಪೂರ ತಮ್ಮನ್ನು ಕೊಚ್ಚಿಕೊಂಡು ಹೋಗುತ್ತದೆ. ಎಂದು ಭಾವಿಸಿದ ಕಾಲವೊಂದಿತ್ತು. ಆದರೆ ಎಷ್ಟು ಸುಲಭವಾಗಿ ಆ ಬಿಕ್ಕಟ್ಟಿನಿಂದ ಪಾರಾಗಿದ್ದೆವು ತಾವೆಲ್ಲಾ. ಜನರ ಮುಂದೆ ತಲೆಯೆತ್ತಿ ಓಡಾಡಲೂ ಹೀನಾಯವೆನಿಸಿಕೊಂಡಿದ್ದ ಆ ವಿಷಗಳಿಗೆಗಳು ಈಗ ಮರೆಯಾಗಿ ಅಮೃತಸೇಚನವನ್ನು ಮಾಡಿವೆ ಎಂದು ಯೋಚಿಸಿಕೊಂಡಳು.

ಗೆಳೆಯನನ್ನು ನೋಡಿ ಹೋಗಲೆಂದು ಸುಬ್ಬಣ್ಣ ಬಂದ. ಶ್ರೀಪತಿ ಅವನ ಕೈಹಿಡಿದು "ನಿನ್ನ ಉಪಕಾರ ದೊಡ್ಡದು ಕಣೊ !" ಎಂದ.

"ಯಾವ ಯೋಚನೇನೂ ಮಾಡಬೇಡ. ನಿಂಗೆ ಬೇಕು ಅಂದ ದಿವಸ ಕೆಲ್ಸ ಕೊಡಿಸ್ತೀನಿ" ಎಂದು ಆಶ್ವಾಸನೆ ನೀಡಿದ ಸುಬ್ಬಣ್ಣ.

ಚಿಗುರುತ್ತಿದ್ದ ಬಳ್ಳಿಗೆ ಮೇಲೇರಲು ಗಟ್ಟಿಯಾದ ಆಧಾರ.


ಮುಂದೆ ಒಂದು ತಿಂಗಳಲ್ಲಿ ಆಸ್ಪತ್ರೆಯಿಂದ ಅವನಿಗೆ ಬಿಡುಗಡೆಯಾಯಿತು.


"ಇನ್ನೊಂದು ತಿಂಗಳು ವಿಶ್ರಾಂತಿ ಕೊಡಿ. ಔಷಧಿ, ಮಾತ್ರೆಗಳನ್ನು ಮಾತ್ರ ನಿಲ್ಲಿಸಬೇಡಿ ಶ್ರೀಪತಿಯೀಗ ಹೊಸ ಮನುಷ್ಯ !" ಎಂದರು ಡಾಕ್ಟರು.

ಮಂದಾಕಿನಿ ಅವರ ಕಾಲಿಗೆ ನಮಸ್ಕಾರ ಮಾಡಿದಳು.

"ನಿಮ್ಮಿಂದ ನನಗೆ ಮಾಂಗಲ್ಯದಾನವಾಯ್ತು ಜನ್ಮಜನ್ಮಾಂತರಗಳಲ್ಲೂ ನಾನೂ ನನ್ನ ಮಕ್ಕಳೂ ನಿಮ್ಮನ್ನು ನೆನೆಸ್ಕೋತೇವೆ." ಎಂದು ಕೃತಜ್ಞಳಾಗಿ ನುಡಿದಳು.

ಶ್ರೀಪತಿಗೀಗ ಪುನರ್ಜನ್ಮ. ಅವನ ದೇಹ ಬಲಿಷ್ಠವಾಗಿತ್ತು. ಹೃದಯ ಉಕ್ಕಾಗಿತ್ತು. ಮನಸ್ಸು ಧೈರ್ಯದ, ಉತ್ಸಾಹದ ಕಡಲಾಗಿತ್ತು. ಅವನ ಕಣ್ಣೆದುರಿಗೆ ಹೊಸ ಹಾರಿಕೆಯೊಂದು ಮೂಡಿತ್ತು. ಹರಿದ ಮುತ್ತಿನ ಮಣಿಗಳೊಂದಾಗಿ ಅವನ ಎದೆಯಲ್ಲಿ ಆತ್ಮವಿಶ್ವಾಸದ ಹಾರವಾಗಿತ್ತು.





ಒಂದು ತೊಲೆಯಷ್ಟು ಭಾರ ಸತ್ವದ ಸರಕು
ಆದರಷ್ಟೆ ತೂಕದ್ದು ಪ್ರಾಮಾಣಿಕತೆಯ ಹರಕು
ತ್ಯಾಗ, ನಿಷ್ಠೆಗಳ ಸಮ ಪ್ರಮಾಣದ ಕಲಬೆರಕೆ
ಒಂದಿಷ್ಟು ಹೇಡಿತನ; ಬಹಳಷ್ಟು ಪುಕ್ಕತನ
ಹೇಳಿದ್ದೆ ಹೇಳಿದರು, ತಲೆಚಿಟ್ಟು ಹಿಡಿದರೂ
ಮತ್ತದನೆ ಹೇಳುತಿಹ ಸಹನಶೀಲತೆಯು
ಜಂಗುತಿಂದಿಹ ಬುದ್ಧಿ. ತನ್ನ ತಪ್ಪಿಲ್ಲದಿದ್ದರೂ
ಬೇರೆಯವ ತಪ್ಪೆಂದು ಗದರಿದರೆ ಒಪ್ಪುತಿಹ
ಚಿಪ್ಪುತಲೆ. ಬೇಡಲಿ ಬೇಡದಿರಲಿ ಉಪದೇಶ
ಬಗಿವ ಛಲ; ಕೈಗಡದ ಶಿರಿತನವೆ ಇದರ ಬಲ.
ಕಂಡವರ ಮುಂದೆ ಹಲ್ಕಿರಿವ ಮೋಚಿನ
ಮೊಂಡುತನ, ಇವನೆಲ್ಲ ಪ್ರಜಾಪ್ರಭುತ್ವದ
ಮೂಸೆಯಲಿ ಕರಗಿಸಿ. ಎರಕ ಹೊಯ್ದು ಗಂಡು
ಬೊಂಬೆಯು ಮಾಡಿ, ಜೀವನದ ಜಾತ್ರೆಯೊಳು
ಅಂಗಡಿಯೊಳಿಡುವಾಗ ಇದಕೆ ಶಿಕ್ಷಕನೆಂಬ
ಬಹು ಮುದ್ದಾದ ಹೆಸರು.
ಯಾರಿಗೂ ಬೇಡಾದ, ಆದರೂ ಬೇಕಾದ
ಅನಿವಾರ್ಯವೀ ಹೆಸರು.

•

ಈ ಹೆಸರು ಬಲು ಅಗ್ಗ.
ಮಂತ್ರಿ ಮಾನ್ಯರು ಬರಲಿ ರಾಜತಂತ್ರಿಯೆ ಇರಲಿ
ಮಾನ ಪತ್ರದ ಕಗ್ಗ ಹೊಸೆಯಲೇ ಬೇಕು. ಸ್ವಾಗತದ
ಸೋಬಾನ ಪದ ಹೆಣೆವ ಸಿದ್ಧ ಕವಿ. ಶೀಘ್ರ ಕವಿ.
ಸಂಭ್ರಮದ, ಸಮಾರಂಭದೊಳಗಿವನ ಕಸದೊಳು
ಎಮ್ಮೆ ಕರುವನು ಮರೆತಂತೆ ಮರೆಯುವುದೆ
ವಾಡಿಕೆ. ಈ ಮಾತು ಬೇರೆ. ಆದರೂ ಇವನಿಹನು
ಎಲ್ಲರಲಿ; ಪಾತಕಿಗಳೊಡೊಲೊಳಿಹ ಪರಮಾತ್ಮನಂತೆ,
ಈ ಪಾಠ ಪ್ರವಚನ ಪಂಡಿತನ
ಧೀರ ವೈಖರಿ ನೋಡಿ ಬೆರಗಾಗದಿರಿ.

ಈ ಪ್ರಾಣಿಗೆರಡೇ ಕೈ.

ಕೈ ಎರಡೇ ಇದ್ದರೂ
ನಾಲ್ಕು ಕೈಗಳ ಸರಕನಿಷ್ಟೆ ಕೈಯಲಿ ತುರುಕಿತಿಂತ
ಶಂಖ, ಚಕ್ರ, ಗದಾ, ಪದ್ಮ ಪಾಣಿ.
ಒಂದರಲಿ ಕೋಲರ್ ಬ್ಲ್ಯಾಕಬೋರ್ಡು,
ಇನ್ನೊಂದರಲಿ ಚಿತ್ರಗಳ ಸಿವುಡು ಸಿವುದಿಗೆ ಸಿವುಡು,
ಮತ್ತೊಂದರಲಿ ಬಳಪಗಳ ಬಣ್ಣ ಬಣ್ಣಗಳ ರಾಸಿ ರಾಸಿಗೆ ರಾಸಿ,
ಪಠ್ಯ ಪುಸ್ತಕಗಳ ಹೊರೆ, ಟೀಚಿಂಗು ಏಡುಗಳು, ನೋಟು
ಬುಕ್ಕುಗಳ ಸಾಲು ಸಾಲಿನ ಕಂತೆ, ಜೇಬಿನಲಿ ಹಣಕಿ
ನೋಡುತಿದೆ ರಬ್ಬರಿನ ನಾಯಿ. (ಇದು ಪಾಠದಾ
ಮಾಡೆಲ್ಲು, ಒತ್ತಿದರೆ ಕೊಂಯೆನ್ನುತದೆ.)
—ಶಿಕ್ಷಕನ ಸಂಸಾರದಂತೆ—ಇನ್ನೊಂದು
ಜೇಬಿನಲಿ ಕೊಳಕು ಕರವಸ್ತ್ರ. ಹತ್ತು ಅವತಾರಕೂ
ಮೀರಿರುವ ಈ ಹನ್ನೊಂದನೆಯ ಶಿಕ್ಷಕನ ಅವತಾರ
ನಡೆದಿಹುದು. ಡೊಂಬರಾಟದ ಹುಡುಗ ಹೆಜ್ಜೆಯಿಡುವಂತೆ
ಮೊದಲಗಿತ್ತಿಯು ಬಳು ಬಳುಕಿ ನಡೆಯುವಂತೆ
ಬೆವರಹನಿಗಳೆ ಮೀಸೆ, ಗಡ್ಡಗಳ ಕಂತೆ.

•

ಚಿತ್ರ ಚಿತ್ರಗಳ, ಬಣ್ಣ ಬಣ್ಣಗಳ
ವಿಚಿತ್ರ ಪ್ರದರ್ಶನವೇ ಪಾಠ.
ಧರ್ಮದ ಪಾಠಕೆ, ಕರ್ಮದ ಪಾಠಕೆ
ಬಣ್ಣದ ಚಿತ್ರವು ಬೇಕೇ ಬೇಕು.
ಧರ್ಮವು ಮನುಷ್ಯನಿಗೆ ಬೇಕೆಂಬ ಪಾಠವನು
ಕಲಿಸುವಾಗಲು ಕೂಡ ಯಾವ ಚಿತ್ರವ ತೆಗೆದು
ತೋರಿಸಲಿ ಸ್ವಾಮಿ! ಎನ್ನುತಿಹ ಅಸಹಾಯಕ
ಮನೋವೃತ್ತಿಯ ಮುಖ ಭಾವದಲಿ ಬೇಡಿಕೊಂಬುವ ನೋಟ
'ಓ! ಶಿವನೆ! ಬಿ. ಇ. ಡಿ. ಪಾಠಗಳ ತಲೆಬುರುಡೆಗಳ
ಹೊಕ್ಕು ಡಮರುಗಳ ಬಾರಿಸುವೆಯಾ ನನ್ನಪ್ಪ.
ಹೃದಯುದ್ರಾವಕ! ಶಿಕ್ಷಕನದೆ ದುರಂತ ಚಿತ್ರದ ದನಿ
ಬಾನೆತ್ತರವಾದರೂ ತುಂಬೀತು.

ಹಸಿದವ ಬಲ್ಲಾ ಹಸಿವೆಯ ಶೂಲಿ
ತ್ಯಾಗದ, ಬಲಿದಾನದ, ಗೋಳಿನ, ನೋವಿನ
ಶಿಕ್ಷಕ ಹೃದಯದ ರುದ್ರವೀಣೆಯೋ
ರುದ್ರ ಭಯಂಕರವಾದೀತು,
ತಾ ಸತ್ತರು ಸರಿ, ತಾ ಬೆಂದರು ಸರಿ
ಭವ್ಯ ಭಾರತದ, ದಿವ್ಯ ಚೇತನದಿ
ಹೊಸ ಚೇತನವನು ತುಂಬಲು ಬೇಕು.

•

ಹೆಂಡತಿಯ ಕುಪ್ಪುಸಕೆ ತೇಪೆ ಹಚ್ಚಲು ಕೂಡ
ಉದ್ರಿ ಅಂಗಡಿಬೇಕು. ಮಗನ ಮುಂಜಿವೆಗಾಗಿ
ಸಾಲವೇಬೇಕು. ಕೈಗಡದ ದೊರೆಯಾಗಿ ಕೈಚಾಚಿ
ಬಾಳಬೇಕು. ಇವನ ಬೇಕುಗಳಿಗೆಲ್ಲ ಸಾಕು.
ಜೀವನವೆ ಸಾಕೆಂಬ ಈ ಪ್ರಾಣಿ
ಮಕ್ಕಳೊಳಗಾವ ಚೇತನವ ತುಂಬೀತು ಮಣ್ಣು!
ಕಣ್ಣಿದ್ದವರಿಗೆ ಕಾಣುವದೀ ಕಣ್ಣು! ಕುರುಡರಿಗೆಲ್ಲಿದೆ
ಕಾಣುವ ಕಣ್ಣು! ಘೋಷಣೆ ಸಂತೆ! ನಡೆದಿದೆ
ಡಂಭಾಚಾರಿಯ ರಥ, ವೈಹಾಳಿಯ ಬೆಡಗಿನ
ಮೆರವಣಿಗೆ, ಭ್ರಷ್ಟಾಚಾರಿಗೆ ಜೀವವೆ ಸುಲಿಗೆ
ಓ! ಶಿಕ್ಷಕಾ! ಜಗಕೆಲ್ಲ ಹೃದಯುದ್ರಾವಕಾ!!
ಸ್ವಾತಂತ್ರ್ಯ ಭಾರತದೊಳಾಧಾರಸ್ತಂಬರನು
ನಿರ್ಮಿಸುವ ನಿರ್ಮಾತಾ!
ಓ! ಕಗ್ಗಲ್ಲ ಕಂಬಗಳ ದಾತಾ!
ಶಾಂತಂ! ಪಾಪಂ! ರಕ್ಷಿಸು ಭಾರತನಾತಾ!
ಪ್ರಜಾಪ್ರಭುತ್ವದಲಿ.

ಈ ಪ್ರಾಣಿಗೆ ಯಾವ ಬೆಲೆಯೂ ಇಲ್ಲ.
ಲಂಚ ತಿನ್ನುವವಿಲ್ಲ.
ರುಸುವತ್ತು ಇದಕಿಲ್ಲ
ಸತ್ಯವನೆ ಮಾತಾಡುತಿದೆ
ಈ ಹುಚ್ಚು ನೋಡಿ! ಬುದ್ಧಿಯೇ
ಇದಕಿಲ್ಲ. ಸುಳ್ಳಿಗೆ ಹೆದರುವ
ನೋಸಳೆ ಬೆವರುವ ಅನ್ಯಾಳಿ ಇದು. ಧೈರ್ಯವೇ ಇದಕಿಲ್ಲ.
ಸ್ವಾರ್ಥವೇ ಇಲ್ಲ ಈ ಪ್ರಾಣಿಗೆ. ಅಂದ ಬಳಿಕ ಪ್ರಜಾಪ್ರಭುತ್ವದಲಿ
ಪಾಪ! ಹೇಗೆ ಬದುಕೀತು?
ಆದರೂ ಬದುಕಿದೆ. ಅಂದರೆ ಸತ್ತಿಲ್ಲ
ಉಸಿರಾಡಿಸುತ್ತಿದೆ ಪಾಪ!

ನೋಡದೂ
ರಣರಂಗದಲಿ ಬಿದ್ದ
ವೀರನು ಗೆದ್ದ.
ಈ ರಂಗದಲಿ ಗೆದ್ದ
ಶಿಕ್ಷಕನು ಸತ್ತ
ಸಾಯದೆಯೆ ಸತ್ತಂತೆ ಬದುಕುವನು ಧೀರ.
ಸತ್ತರೂ ಸಾಯದಿಹ ಹಟಮಾರಿ ವೀರ
ಬಾಳು ಸಾವಿರ ವರುಷ
ನಿನ್ನದೇ ಹರ:

—ಕೃಷ್ಣಮೂರ್ತಿ ಪುರಾಣಿಕ



ಅಶ್ವತ್ಥ

ಇದು ಪುರಾತನವಾದ ಅಶ್ವತ್ಥ ವೃಕ್ಷ
ನೂರಾರು ಜೀವಿಗಳಿಗಾಶ್ರಯವಿದರ ವಕ್ಷ.
    ಹಲವು ಶತಮಾನಗಳು ಸಾಹಸ ಮಾನಗಳು
    ಕಳೆದರೂ ನವನವೀನ.
    ಹಳೆಯತನವಿದಕಿಲ್ಲ ಚಿರ ನೂತನ.
ನೂರಾರು ಕೊಂಬೆರಂಬೆಗಳಿಹವು ಕವಲು ಕವಲಾಗಿ,
ಹರಡಿಹವು ಶಾಖೋಪಶಾಖೆಗಳು ಜಟಿಲವಾಗಿ,
ಲಕ್ಷೋಪಲಕ್ಷ ಕೋಟ್ಯನುಕೋಟಿ ಪತ್ರಗಳು
ಇಡಿಕಿರಿದು ಸಂಕೀರ್ಣ ಸತ್ವಯುಕ್ತ
ಅಡಿಯಿಂದ ಮುಡಿವರೆಗೆ ಸಾರಸಿಕ್ತ
ಜೀವರಸವೊಂದಾಗಿ ಹರಿಯುತಿಹುದು;
ಚೈತನ್ಯ ಚಿಮ್ಮುತಿಹುದು.
ಎಷ್ಟೊ ಶುಕಗಳು ಬಂದು ಹಣ್ಣು ತಿಂದು,
ಎಷ್ಟೊ ಪಿಕಗಳು ಬಂದು ತಳಿರ ಮೆದ್ದು,
    ಹೋದರೂ ಮರಕಿಲ್ಲ ಕುಂದು ಕೊರತೆ;
    ಜಿನುಗುತಿದೆ ಏಕರಸ ಜೀವದೊರತೆ,
ದಶದಿಕ್ಕುಗಳಿಗಿದರ ಗೆಲ್ಲು ಹರಡಿ
ತಣ್ಣೆಳಲ ತಂಪು ನೀಡಿ
ಲೋಕೋಪಕಾರಿಯೆನೆ ನೆಗಳಿ ನಿಂತು
ಕೀರ್ತಿ ಪ್ರತಿಷ್ಠೆಗಳ ವೃದ್ಧಿ ಬಂತು.
ನಿರ್ಬುದ್ಧಿ ವಾನರರ ವೃಂದ ಬಂದು
ಪತ್ರಯುತ ಶಾಖೆಗಳ ಹರಿದುವಂದು,
ಕೆಲವು ಕಪಿಗಳು ಇಲ್ಲೆ ಬಂದು ಮನೆ ಮಾಡಿ
ಮರವನ್ನೆ ಸ್ವಾಧೀನ ಮಾಡಿದವು ನೋಡಿ.
    ಸಾಗರೋತ್ತರದಿಂದ ಹಾರಿ ಬಂದು
    ಕಡಲ ಬಿಳಿ ಕಾಗೆಗಳು ಹಣ್ಣು ತಿಂದು
    ಮರವನ್ನು ಸೂರೆ ಮಾಡಿದವು
    ಎಲೆಗಳನು ಕಿತ್ತೆಸೆದವು.
    ವಜ್ರಸಮ ಕಲ್ಲುಗಳ ಕಟ್ಟೆಯಿತ್ತು
    ಇತ್ತೀಚೆ ಇಬ್ಬದಿಯು ಕಲ್ಲು ಬಿತ್ತು.
        ಕಳೆಯಿತು ಶಿಶಿರ
        ಬಂತು ವಸಂತ
    ಚಿಗುರುಗಳೆಸೆದವು ಕೆಂಪಾಗಿ
    ಕವಲುಗಳೊಡೆದವು ಸೊಂಪಾಗಿ
ಜವನಿಕೆ ಸರಿಸಿ ಉಷೆ ಮೊಗ ತೋರೆ
ಕೇಳಿತು ಮೋಹನ ರಾಗದ ಸೂರೆ.
ಪಕ್ಷಿಗಳೆಲ್ಲವು ಗಜಬಜಿಸಿದುವು
ಹುರುಪಿನ ರೆಕ್ಕೆಯು ಪಡಪಡಿಸಿದುವು.
ಸಾಮುದ ಗೀತವ ಹಾಡಿದುವು.
ನಮ್ಮ ಈ ಅಶ್ವತ್ಥ ಬೋಧಿವೃಕ್ಷ
ಅನ್ವರ್ಥವಿದೆ ನಾಮ ಅಜರಾಮರ
ಭಾರತಾಶ್ವತ್ಥವಿದು ಅವಿನಶ್ವರ

—ಅಮ್ಮೆಂಬಳ ಶಂಕರನಾರಾಯಣ ನಾವಡ

ಅಮರ ಪಲ್ಲವಿ

"ಮಲ್ಲಿಕಾsss…ಓsss…ಮಲ್ಲಿಕಾ"

"ಏನಾಣತಿ ದೇವಿಯರೆ…?"

"ಪಲ್ಲವಿಗೆ ಬರಹೇಳಿದ್ದೆನಲ್ಲ…!"

"ಪಲ್ಲವಿಯಮ್ಮನವರನ್ನು ಕಂಡುಬಂದ ಹರಿಕಾರ ಮಾಚ ತಮ್ಮ ಸನ್ನಿಧಾನದಲ್ಲಿಯೇ ಅರಿಕೆ ಮಾಡಬೇಕೆಂದು, ಅಂತಃಪುರದ ಪ್ರಾಂಗಣದಲ್ಲಿ ಕಾದು ನಿಂತಿದ್ದಾನೆ. ಅವನೇನೋ ಸಂದೇಶವನ್ನು ತಂದಿರುವನಂತೆ…!" ಎಂದು ಪರಿಚಾರಿಕೆ ಮಲ್ಲಿಕೆ, ಸೊಗಲ ನಾಡಿನ ಪಾಳೆಯಗಾರರ ಅರಸಿ ಕಂಚಿಕಬ್ಬೆಗೆ ಹೇಳಿದಳು.

"ಅದೇನು…? ಪಲ್ಲವಿಯಿಂದ ಅದಾವ ಸಂದೇಶ? ಮಾಚನಿಗೆ ಬರಹೇಳು" ಎಂದು ಮಹಾರಾಣಿ ಕಂಚಿಕಬ್ಬೆ ಹರಿಕಾರನ ಪ್ರತೀಕ್ಷೆಯಲ್ಲಿಯೇ ನಿಂತಳು.

"ಮಹಾರಾಣಿಯವರ ಸನ್ನಿಧಾನದಲ್ಲಿ ಅರಿಕೆ ಕಂಡುದುದನ್ನು ಕಂಡಂತೆ ಚಿತ್ರಿಸಿದರೆ ರಾಜ ಸನ್ನಿಧಿಗೆ ಅಪಚಾರವಾಗಲಿಕ್ಕಿಲ್ಲ ತಾನೆ…!" ಎಂದು ಹರಿಕಾರ ಮಾಚನು ಅರ್ಧಕ್ಕೆ ನಿಂತು ದೇವಿ ಕಂಚುಕಬ್ಬೆಯ ಆಜ್ಞೆಗಾಗಿ ಕಾಯಹತ್ತಿದನು.

"ವಿದ್ಯಮಾನವನ್ನು ವಿವರಿಸಲು ಭಯವೇಕೆ ಮಾಚ ?" ಎಂದಳು ಕಂಚಿಕಬ್ಬೆ. ಪಲ್ಲವಿಯ ಗೃಹದಲ್ಲಿ ಮಾಚ ಹೋದಾಗ ಅಘಟಿತ ಘಟನೆ ನಡೆದಿರಬೇಕೆಂದು ಕಂಚಿಕಬ್ಬೆ ಕುತೂಹಲಿಯಾದಳು

ತಾಯಿ ಪಲ್ಲವಿಯಮ್ಮನವರ ಮನೆಗೆ ಹೋದಾಗ ಅವರು ಅದೇತಾನೇ ಸುವರ್ಣಾಕ್ಷಿ ದೇವರ ಅರ್ಚನೆಯನ್ನು ಮಾಡಿಕೊಂಡು ಆರೋಗಣೆಗೆ ಸಮಯವಿದ್ದುದರಿಂದ ವೀಣೆಯನ್ನು ಮೀಟುತ್ತ ಕುಳಿತಿದ್ದರು ಅದೇಕೋ ವೀಣೆ ಅಪಶ್ರುತಿಯನ್ನು ನುಡಿಸುತ್ತಿತ್ತು ಪಲ್ಲವಿಯಮ್ಮನವರ ಮುಖವೆಲ್ಲಾ ಬಾಡಿಹೋಗಿತು. ತಾವು ಅಂತಃಪುರಕ್ಕೆ ಬರಲು ಹೇಳಿದ್ದಾರೆಂದು ನಾನು ಅವರಿಗೆ ಹೇಳುತ್ತಿರುವಾಗ ವೀಣೆಯ ಒಂದು ತಂತಿ ಹರಿಯಿತು ಅದರಿಂದ ಪಲ್ಲವಿಯಮ್ಮನವರು ನೊಂದು "ಮಾಚಾ, ಆರೋಗಣೆಯನ್ನು ಪೂರೈಸಿಕೊಂಡು ಬರುವೆವೆಂದು ನಿಮ್ಮರಸಿಗೆ ಹೇಳು" ಎಂದರು ತಾಯಿ. "ತಮ್ಮ ಆಜ್ಞೆಯನ್ನು ಅವರು ಮನ್ನಿಸಲಿಲ್ಲವಲ್ಲಾ ಎಂದು ನನಗೆ ಅವಮಾನವೆನಿಸಿತು ತಾಯಿ…" ಎಂದು ಮಾಚನು ಹೇಳುತ್ತ ಕಂಚಿಕಬ್ಬೆಗೆ ಬೆನ್ನು ತೋರಿಸದೆ ಮರಳಿ ಹೋಗಿಬಿಟ್ಟನು

ಮಾಚನ ಮಾತಿನಿಂದ ಕಂಚಿಕಬ್ಬೆ ಕಾದ ಕಂಚಿನಂತಾದಳು. ಚೆಂಗುಲಾಬಿಯ ವರ್ಣಕ್ಕಿದ್ದ ಅವಳ ಮುಖ ಕೆಂಪು ಕಣಗಿಲೆಯಂತಾಯಿತು ಅವಳಕ್ಷಿಗಳಿಂದ ಅಗ್ನಿ ತೂರಿಬರಹತ್ತಿತು ಆಗ "ಅಬ್ಬಾ…ಬರ ಹೇಳಿದರೆ ಆರೋಗಣೆಯನು ಪೂರೈಸಿಕೊಂಡು ಬರುವೆನೆಂದು ಹೇಳುವಷ್ಟು ಧಾಷ್ಟ್ರ್ಯ ಬಂದಿತೇ ಈ ಕಂಚಿನಿಗೆ…! ಮನಸು ಮಾಡಿದರೆ ಪಲ್ಲವಿಯ ದೇಹವನ್ನು ಸುಲಿಸಿ ಅದೇ ಚರ್ಮದಿಂದ ಸುವರ್ಣಾಕ್ಷಿ ದೇವರ ನಗಾರಿಗೆ ಬಿಗಿಸಬಲ್ಲೆ. ಕವಡೆಯ ಬೆಲೆಕಾಣದ ಈ ಬೆಲೆವೆಣ್ಣು ಪಲ್ಲವಿಗೆ ಇಷ್ಟು ಅಹಂಕಾರ ಬಂದಿತೇ…?" ಎಂದು ಕಂಚಿಕಬ್ಬೆ ದಾಸಿ ಮಲ್ಲಿಕೆಯನ್ನು ಉದ್ದೇಶಿಸಿ ತನ್ನ ಕ್ರೋಧವನ್ನು ಪ್ರಕಟಿಸಿದಳು.

"ಕ್ಷಮಿಸಿ ; ನನ್ನರಸಿ. ಸೊಗಲ ನಾಡಿನ ಸಕಲ ತಾರುಣ್ಯವನ್ನೂ ತನ್ನ ಬೆರಳಿನಲ್ಲಿಟ್ಟು ಗಿಲಿಗಿಲಿ ತಿರುಗಿಸಬಲ್ಲಂತಹ ಸೌಂದರ್ಯವನ್ನು ಪಡೆದಿರುವಳೆಂದು ಅವಳಿಗೆ ಅಭಿಮಾನ ಒಂದಲ್ಲ ನಾಲ್ಕು ಮುಖಗಳಿಂದ ಸಮಗ್ರ ಜೀವನದ ತಪಸ್ಸನ್ನೆರೆದು ಬ್ರಹ್ಮನು ಪಲ್ಲವಿಯನ್ನು ಸೃಜಿಸಿರುವನೆಂದು ಈ ನಾಡಿನಲ್ಲಿ ಆಡುತ್ತಿರುವದನ್ನು ಕೇಳಿಬಲ್ಲೆ. ಸೌಂದರ್ಯಕ್ಕೆ ಸಂ[illegible]ರ ಸೇರಿಸಿದರೆ ಪಲ್ಲವಿ ಈ ನಾಡಿನ ಪುರುಷರನ್ನು ಅದೇಕೆ ಕುಣಿಸಲಿಕ್ಕಿಲ್ಲ !! ಒಂದು ಪ್ರಾಂತದ ಪಾಳೆಯಗಾರರ ಹೆಂಡತಿಯಾದ ನೀವೆಲ್ಲಿ ? ನಿಮ್ಮಂತಹ ಹತ್ತಾರು ಪಾಳೆಯಗಾರರನ್ನು ಆಳುವ ಸಮ್ರಾಟರನ್ನೇ ಕಾಮಶರದಿಂದ ಸೋಲಿಸುವ ಸ್ವರೂಪರಾಣಿ ಪಲ್ಲವಿ ಎಲ್ಲಿ ?… ವಾಸ್ತವಿಕತೆಯತ್ತ ತಮ್ಮ ಮುಖವನ್ನೂ ಹೊರಳಿಲ್ಲ ತಾಯಿ… ಎಂದು, ದಾಸಿ ಹೇಳುತ್ತಿರುವಾಗ ಕಂಚಿಕಬ್ಬೆಯ ಕೋಪವು ಹಿಮಗಿರಿಯೆತ್ತರಕ್ಕೆ ನಿಲುಕಿತು. ದಾಸಿಯ ಮಾತುಗಳು ಅರುಚಿ ಎನಿಸಿದವು

ಗೋವಿಂದಮೂರ್ತಿ ದೇಸಾಯಿ

“...ಸಾಕು...ಸಾಕು...ಮಲ್ಲಿಕಾ. ಸೌಂದರ್ಯದಾಲಾಪವನ್ನು ನಾನಿನ್ನು ಕೇಳಲಾರೆ ಮಾಂಗಲ್ಯದ ಬಂಧನವಿಲ್ಲದ ಅವಳಿಗೆ ಧರ್ಮದ ಬಂಧನವಿಲ್ಲ! ಸುವರ್ಣಾಕ್ಷಿ ದೇವರ ಭಯವಿಲ್ಲ!! ಇಹ-ಪರಗಳ ಕಲ್ಪನೆಯಿಲ್ಲ!!! ಭೋಗದ ಬೆನ್ನೇರಿ ಬಂದ ವೇಶ್ಯೆ ಪಲ್ಲವಿಗೆ ಭೋಗಭುಕ್ತಿ ದೊರೆತರೆ ಅದೇಕೆ ಅವಳು ಸಮಾಜಕ್ಕೆ ಮಣಿಯಬೇಕು?... ಇರಲಿ...ಮಲ್ಲಿಕಾ...ಅರ್ಚನೆಯ ಸಿದ್ಧತೆಗಳು ಆದವೇನು ನೋಡಿಕೊಂಡು ಬಾ. ನಾನು ಮಜ್ಜನ ಶಾಲೆಗೆ ಹೋಗಿ ಬರುತ್ತೇನೆ” ಎಂದು ಕಂಚಿಕಬ್ಬೆ, ವಿಚಾರಸಾಗರದಲ್ಲಿ ಪಲ್ಲವಿಯ ನಡತೆಯನ್ನೇ ಮಥಿಸುತ್ತ ಗಜಗಮನದಿಂದ ಮಜ್ಜನಶಾಲೆಯನ್ನು ಪ್ರವೇಶಿಸಿದಳು

ಸೊಗಲದ ವೇಶ್ಯೆ ಪಲ್ಲವಿ ಸುವರ್ಣಾಕ್ಷಿ ದೇವರ ಅರ್ಚಕರಾದ ಶ್ರೀಕಂಠಶಾಸ್ತ್ರಿಗಳನ್ನು ಅವಮಾನ ಗೊಳಿಸಿದಳೆಂಬ ಮಾತು ಕಂಚಿಕಬ್ಬೆಯ ಕಿವಿಯ ವರೆಗೆ ಬಂದಿದ್ದರಿಂದ ಅದನ್ನು ಕೇಳಲು ಪಲ್ಲವಿಗೆ ಬರಹೇಳಿದ್ದಳು. ಆದರೆ ಪಲ್ಲವಿಯಿತ್ತ ಉತ್ತರದಿಂದ ಕಂಚಿಕಬ್ಬೆ ತಪ್ತಮನಸ್ಸಿನವಳಾದಳು. ಆ ಪಾಳೆಯದ ಸಕಲ ಚರಾಚರ ವಸ್ತುಗಳು ತನ್ನಾಧೀನದಲ್ಲಿವೆ ಎಂದು ಭಾವಿಸಿದ್ದ ಕಂಚಿಕಬ್ಬೆಯ ಮಾನಕ್ಕೆ ಒಡಕು ಬಂದಿತ್ತು ಪಲ್ಲವಿಯ ಮಾತುಗಳು ಅರೋಚಕವೆನಿಸಿದವು. ಸೊಗಲಿನ ಸೌಂದರ್ಯಕ್ಕೆ ಸೋತು ಸೊಗಲವನ್ನೇ ಸ್ವಗೃಹವನ್ನಾಗಿ ಮಾಡಿಕೊಂಡ ಕೋಕಿಲೆಗಳು “ಪುಗಲ್...ಪುಗಲ್... ಪಾಪಿಗಳೆ ಈ ನಾಡಿನಲ್ಲಿ ಬರಬೇಡಿ” ಎಂದು ಕುಕಿಲಿ ಸೊಗಲದ ಧರ್ಮವನ್ನು ಕಾಪಾಡುವಾಗ ಸೊಗಲದವಳೇ ಆದ ಪಲ್ಲವಿಯು ಅಧರ್ಮದ ಹಾದಿ ತುಳಿಯುತ್ತಿರುವದು ಕಂಚಿಕಬ್ಬೆಗೆ ಸರಿಬರಲಿಲ್ಲ ಸೊಗಲದ ಕುಲದೈವವಾದ ಸುವರ್ಣಾಕ್ಷಿ ದೇವರ ಅರ್ಚನೆಯನ್ನು ಅನನ್ಯ ಭಕ್ತಿಯಿಂದ ಮಾಡುವ ಶ್ರೀಕಂಠಶಾಸ್ತ್ರಿಗಳಿಗೆ ಅವಮಾನವಾಗುವ ರೀತಿಯಲ್ಲಿ ಪಲ್ಲವಿ ವರ್ತಿಸಿದಳೆಂದು ಕೇಳಿದ ಕಂಚಿಕಬ್ಬೆಗೆ ಕಸಿವಿಸಿಯಾಯಿತು.

ಮಜ್ಜನದಲ್ಲಾಗಲಿ, ಆರೋಗಣೆಯಲ್ಲಾಗಲಿ ಕಂಚಿಕಬ್ಬೆಗೆ ಅಂದು ಆಸ್ಥೆ ಇರಲಿಲ್ಲ. ಮ್ಲಾನ ಮುಖದ ಪತ್ನಿಯನ್ನು ವೀಕ್ಷಿಸುತ್ತ ಕೇತಿಮಯ್ಯನವರು “ದೇವಿ, ಮಲ್ಲಿಗೆ ಅರಳದಿದ್ದರೆ, ಸಂಪಿಗೆ ಸೌರಭವನ್ನು ಬೀರದಿದ್ದರೆ, ಪಾರಿಜಾತ ಸುರಿಯದಿದ್ದರೆ, ಕೇದಿಗೆ ಶುಭ್ರವರ್ಣಕ್ಕೆ ತಿರುಗಿದರೆ ಬಾಳಿಗೆ ರುಚಿ ಎಂಬುದು ಇರಬಹುದೇನು? ಸಂಗ್ರಾಮಸಾಗರದಲ್ಲಿ ಮಿಂದು, ಬೆಂದು, ಭವಣೆ ಪಟ್ಟ ಈ ಜೀವಕ್ಕೆ ಬಾಡಿದ, ಬತ್ತಿದ ಮುಖಾರವಿಂದವನ್ನು ಕಾಣುವದೆಂದರೆ ಹೇಗೆ?” ಎಂದು ನಸುನಗುತ್ತ ಆರೋಗಣೆಗೆ ಬಂದಾಗ ಕೇಳಿದಾಗ ಕಂಚಿಕಬ್ಬೆ ನಾಚಿಕೊಂಡಳು. ತನಗಾದ ಮನೋವ್ಯಥೆಯನ್ನು ಪತಿಗೆ ಹೇಳಲು ಕಂಚಿಕಬ್ಬೆ ಸಿದ್ಧಳಿರಲಿಲ್ಲ.

ಬಲವಂತದ ನಗುವನ್ನು ತಂದುಕೊಂಡು “ದೇವಾ, ನನ್ನ ಮುಖದಲ್ಲಿ ನೀವಾವ ವೈಕಲ್ಯವನ್ನು ಕಂಡಿರಿ?” ಎಂದು, ಕಂಚಿಕಬ್ಬೆ ಮನಸ್ಸಿನ ದುಗುಡಕ್ಕೆ ದುಕೂಲವನ್ನೆಳೆಯಲು ಪ್ರಯತ್ನಿಸಿ ವಿಫಲ

ಪಲ್ಲವಿಯುಳ್ಳಾದಳು ಅವಳ ಮುಖದಲ್ಲಿ ಸಹಜವಾದ ನಗೆ ಬರಲಿಲ್ಲ ಕಾರ್ಯಬಾಹುಳ್ಯದಲ್ಲಿದ್ದ ಕೇತಿಮಯ್ಯನವರು ಹೆಚ್ಚು ವಿಚಾರಿಸದಲೇ ಆರೋಗಣೆಯನ್ನು ಮುಗಿಸಿ ಎದ್ದುಹೋದರು. ಹೋಗುವ ಮುನ್ನ “ದೇವಿ ನಾನೇಕೋ ನಿನ್ನಲ್ಲಿ ಇಂದು ನಗೆಯನ್ನು ಕಾಣದಾಗಿದ್ದೇನೆ. ನೀನು ನಕ್ಕರೆ ಮಲ್ಲಿಗೆಯ ಮೊಗ್ಗು ಬಿರಿದು; ಸಂಪಿಗೆಯ ಹುದಿ ಹರಡಿದಂತೆ! ಅದು ನೋಡು, ತಿಲೋತ್ತಮೆ, ಸೌದಾಮಿನಿ, ರಂಭೆ, ಮೇನಕೆ ಊರ್ವಶಿಯರನ್ನರಿದು, ಗಂಧರ್ವ, ಕಿನ್ನರರ ಸೌಂದರ್ಯವನ್ನು ಬೆರೆಸಿ ಬ್ರಹ್ಮದೇವನು ಸ್ತ್ರೀಯೊಬ್ಬಳನ್ನು ನಿರ್ಮಿಸಿದರೆ ನಾನೇನೂ ಅವಳನ್ನು ಮೆಚ್ಚಲಾರೆ ದೇವಿ! ನಿನ್ನ ಸೌಂದರ್ಯವನ್ನು ನೋಡುವಲ್ಲಿ ನನಗೆ ಲೋಕವೇ ಮರೆಯುತ್ತದೆ ಕಂಚಿಕಾ!!” ಎಂದು ಕೇತಿಮಯ್ಯನವರು ಕಂಚಿಕಬ್ಬೆಗೆ ಹೇಳಿದಾಗ ಕಂಚಿಕಬ್ಬೆ ತನ್ನ ಪತಿದೇವರು ತನ್ನನ್ನು ಅಷ್ಟು ಪ್ರೀತಿಸುವರಲ್ಲಾ ಎಂದು ಆನಂದ ಪುಲಕಿತಳಾದಳು.

ಆರೋಗಣೆಯಾದ ಮೇಲೆ ಕಂಚಿಕಬ್ಬೆ ವಿಶ್ರಾಂತಿಗೆಂದು ಅಂತಃಪುರವನ್ನು ಪ್ರವೇಶಿಸುತ್ತಿರುವಾಗ ಕಂಚುಕಿ ಬಂದು “ಅರಸಿಯರೆ, ಪಲ್ಲವಿಯಮ್ಮನವರಂತೆ; ತಮ್ಮ ದರ್ಶನಕ್ಕಾಗಿ ಕಾದು ನಿಂತಿದ್ದಾರೆ!” ಎಂದು ಹೇಳಿದಾಗ ಕಂಚಿಕಬ್ಬೆಗೆ ತನ್ನ ಕಿವಿಗಳನ್ನೇ ನಂಬಲಾಗಲಿಲ್ಲ. ಕ್ಷಣಕಾಲ ಅವಳು ಯೋಚಿಸುತ್ತ, “ಬಂದ ಪಲ್ಲವಿಯನ್ನು ಮರಳಿ ಕಳಿಸಿದರೆ ಅವಳಿಗೆ ತಕ್ಕ ಶಿಕ್ಷೆಯಾಗುವದಲ್ಲವೆ...?” ಎಂದು ಅಂದುಕೊಂಡು “...ಛೀ...ಛೀ...ಇದು ಅತಿಥಿಧರ್ಮವಲ್ಲ!” ಎಂದು ಮತ್ತೆ ಮಾತನಾಡಿಕೊಳ್ಳುತ್ತ ಕಂಚುಕಿಗೆ ಒಳಕ್ಕೆ ಕಳಿಸಲು ಹೇಳಿದಳು.

ನರ್ತಕಿ ಪಲ್ಲವಿ ಮೆಲ್ಲನೆ ಬಳಕುತ್ತ ಅಂತಃಪುರ



ದೊಳಕ್ಕೆ ಬಂದು ಗೌರವಪೂರ್ವಕವಾಗಿ "ಕ್ಷಮಿಸಿ, ನನ್ನರಸಿ. ಮನಸ್ಸಿನ ಅಸ್ವಾಸ್ಥ್ಯದಿಂದ ಆರೋಗಣೆ ಮುಗಿಸಿ ಬರುವದಾಗಿ ಹೇಳಿದೆ..." ಎಂದು ಭಾರವಾದ ಧ್ವನಿಯಲ್ಲಿ ಹೇಳಿದಳು.

ಆದರೆ ಕಂಚಿಕಬ್ಬೆಯ ದೇಹವು ಕೋಪದ ಜ್ವಾಲೆಯಲ್ಲಿ ಬೆಂದುಹೋಗಿತ್ತು. ಅವಳ ಅವಮಾನದ ಬಟ್ಟಲವು ತುಂಬಿ ಬಂದಿತ್ತು. ಅವಳು ಒಳ್ಳೇ ದರ್ಪದಿಂದ "ಪಲ್ಲವಿ ನಮ್ಮ ನಾಡಿನ ಕುಲದೈವವಾದ ಸುವರ್ಣಾಕ್ಷಿ ದೇವರ ಅರ್ಚನೆಯನ್ನು ಮಾಡುವ ಶ್ರೀಕಂಠಶಾಸ್ತ್ರಿಗಳ ಜೊತೆ ನೀನು ಅನುಚಿತ ರೀತಿಯಲ್ಲಿ ನಡೆದುಕೊಂಡಿರುವಿ ಎಂದು ನಮಗೆ ದೂರು ಬಂದಿದೆ. ಅದನ್ನು ವಿಚಾರಿಸಿ ನಿನಗೆ ಶಿಕ್ಷೆ ಕೊಡಬೇಕೆಂದು ಮುಂಜಾನೆ ಕರೆಕಳುಹಿದ್ದೆ. ಆದರೆ ನಿನ್ನ ಔದ್ಧತ್ಯದ ಉತ್ತರವನ್ನು ಕೇಳಿ ನನ್ನ ದೇಹವು ಕೋಪದಲ್ಲಿ ಮಿಂದುಹೋಗಿದೆ" ಎಂದು ಹೇಳಿದಳು.

"ದೇವಿ, ನೀವೇನೋ ಬರಹೇಳಿದ್ದೀರಿ! ಆದರೆ..." ಎಂದು ಪ್ರಾರ್ಥಿತಸ್ವರದಲ್ಲಿ ಪಲ್ಲವಿ ಅರ್ಧಕ್ಕೆ ನಿಂತಳು.

"ಬರಲಾರದಂತಹ ರಾಜ್ಯಭಾರದ ಅವಸರವೇನು ಕಾದಿತ್ತು ?" ಎಂದು ಕಂಚಿಕಬ್ಬೆ ಅವುಡುಗಚ್ಚುತ್ತ ಪ್ರಶ್ನಿಸಿದಳು.

"ಅರಸಿಯರೆ, ನನ್ನ ಮನೆ ನನಗೆ ಸಾಮ್ರಾಜ್ಯ; ನನ್ನ ಮನೋರಾಜ್ಯಕ್ಕೆ ನಾನು ಸಮ್ರಾಜ್ಞಿ; ನನ್ನ ಮನೆವಾರ್ತೆ ನನ್ನ ರಾಜ್ಯಭಾರದ ಕಾರ್ಯ. ನೀವು ಅದನ್ನು ಕೇಳಬಾರದು, ನಾನು ಹೇಳಬಾರದು. ಈ ಮುಖದಿಂದ ಕರ್ಣಕಠೋರವಾದ ಮಾತುಗಳನ್ನಾಡಿಸಿ ನಿಮ್ಮ ಬಾಳನಂಬಿಕೆಗೆ ಚ್ಯುತಿಯನ್ನು ತಂದುಕೊಳ್ಳಬೇಡಿರಿ..." ಎಂದು ಪಲ್ಲವಿ ಆರ್ತಸ್ವರದಿಂದ ಹೇಳಿದಳು.

"ಪಲ್ಲವಿ ಚಂದನದ ಕಾಷ್ಠವನ್ನು ಎಲ್ಲಿ ತೀಡಿದರೂ ಚಂದನವು ಒಂದೇ ಅಲ್ಲವೆ? ಅಸಂಗತಿ ಮಾತನಾಡಿ ಸತ್ಯಕ್ಕೆ ಸುಳ್ಳಿನ ವಸ್ತ್ರವನ್ನು ಆಚ್ಛಾದಿಸಲು ಹವಣಿಸಬೇಡ. ಬೇರೊಬ್ಬರನ್ನು ವೃಥಾ ದೂಷಿಸಬೇಡ...ನೀನು ಮೊದಲೇ ವಾರಾಂಗನೆ...! ನೀತಿಗೂ ನಿನಗೂ ಮಾರುಮಾರು ಅಂತರ..." ಎಂದು ಕಂಚಿಕಬ್ಬೆ ಮೂದಲಿಸಿ ಮಾತನಾಡಿದಳು.

"ಕ್ಷಮಿಸಿ ದೇವಿ; ನೀವು ನಮ್ಮನ್ನು ಆಳುವವರು ನಾನು ನಿಮ್ಮ ಚರಣದಾಸಿ. ಆದರೆ ಸುವರ್ಣಾಕ್ಷಿ ದೇವರಿಗೆ ನಮ್ಮಿಬ್ಬರ ಹೃದಯದಳಲ್ಲಿ ಯಾವ ಅಂತರವೂ ಇಲ್ಲವೆಂದು ನಾನು ಭಾವಿಸಿರುವೆ. ನಾನು ಸೂಳೆಯಾದರೂ ಸತ್ಯದಿಂದ ದೂರಿಲ್ಲವೆಂಬುದನು ನಿವೇದಿಸುತ್ತೇನೆ" ಎಂದಳು ಪಲ್ಲವಿ

"ಪಲ್ಲವಿ, ಪ್ರಕಾಂಡ ಪಂಡಿತರ ಮುಖದಿಂದ ಬರುವಂತಹ ಮಾತುಗಳನ್ನಾಡಿದರೆ ನಿನ್ನ ಚಾರಿತ್ರ್ಯದ ಬೆಲೆ ಪ್ರಬಲಿಸುವದೆಂದು ಭಾವಿಸಿರುವಿಯಾ ?" ಎಂದು, ಕಂಚಿಕಬ್ಬೆ ನಕ್ಕಳು. ಅವಳ ನಗೆಯಲ್ಲಿ ಅಪಹಾಸ್ಯದ ಹೊನಲಿತ್ತು.

"ತಾಯಿ, ನೀಚರಾದ ನಮ್ಮಿಂದ ಉಚ್ಚತಮರು ಎಂದೆನಿಸಿಕೊಳ್ಳುವವರು ಯಾವ ಅರಿವಿನ ಬೆಳಕನ್ನೂ ಕಾಣಬಾರದೆಂದು ತಾವು ಭಾವಿಸಿರುವಿರೇನೋ! ದೇವಿ ಒಮ್ಮೆ ಇಂದ್ರನು ಚಾಂಡಾಲಿಗೆ 'ಏನು ಬೇಯಿಸುತ್ತಿರುವೆ, ಚಾಂಡಾಲಿ' ಎಂದು ಕೇಳಿದನಂತೆ. ಆಗ ಚಾಂಡಾಲಿ ಮದ್ಯಮಿಶ್ರಿತ ಮಾಂಸವನ್ನು ತಲೆಬುರುಡೆಯಲ್ಲಿಟ್ಟು ಶವದಗ್ನಿಯ ಮೇಲೆ ಬೇಯಿಸುತ್ತಿದ್ದೇನೆ. ದೇವರ, ದ್ವಿಜರ ಸೊತ್ತನ್ನು ಅಪಹರಿಸಿದ ಪಾಪಿಯ ಪಾದಧೂಳಿ ಬಿದ್ದೀತೆಂಬ ಭಯದಿಂದ ಅದರಮೇಲೆ ಚರ್ಮವನ್ನು ಹೊದಿಸಹತ್ತಿದ್ದೇನೆ ಎಂದು ಅಂದಳಂತೆ. ಆದರೆ ದೇವಿ, ಚಾಂಡಾಲಿ ಕೀಳುಕುಲದವಳೆಂದು ಅವಳ ಮಾತಿನಲ್ಲಡಗಿದ ಭಾವನೆ ಕೀಳಲ್ಲವಲ್ಲ! ಚಾಂಡಾಲಿಯ ದೃಷ್ಟಿಯಲ್ಲಿದ್ದ ಬ್ರಾಹ್ಮಣರು ಬೇರೆ, ಈಗಿನ ಬ್ರಾಹ್ಮಣರು ಬೇರೆ..." ಎಂದು, ಪಲ್ಲವಿ ಹೇಳಿದಳು ನೇರವಾಗಿ ಶ್ರೀಕಂಠಶಾಸ್ತ್ರಿಗಳ ಚಾರಿತ್ರ್ಯವನ್ನೇ ಕುರಿತು ಹೇಳುವ ಮನಸ್ಸು ಪಲ್ಲವಿಗಿರಲಿಲ್ಲ. "ಪಲ್ಲವಿ, ನಾಲಿಗೆಯನ್ನು ಹರಿಬಡಬೇಡ. ಮಹಾನುಭಾವರನ್ನು ಕುರಿತು ಮಾತನಾಡುವಾಗ ಮೈತುಂಬಾ ಜಾಗೃತವಾಗಿರಬೇಕು. ಶ್ರೀಕಂಠಶಾಸ್ತ್ರಿಗಳಂತಹವರ ಸಚ್ಚಾರಿತ್ರ್ಯವನ್ನು ಕುರಿತು ಮಾತ



"ಅಯ್ಯಾ, ಅನ್ನದ ಅಗುಳು ನೋಡಿ ಮೂರು ದಿವಸಾಯ್ತು, ಹಸಿದು ಸಾಯ್ತಿದೇನೆ ಸಾಮಿ"

ನಾಡಲು ನಿನಗಾವ ಅಧಿಕಾರವಿದೆ? ನೀನು ವಾರಾಂಗನೆ ಎಂಬುದನ್ನರಿತು ಮಾತನಾಡು ಧರ್ಮವನು ಕಾಪಾಡಿಕೊಂಡು ಸೊಗಲಿನ ಪುಣ್ಯದ ಸೊಡರಿಗೆ ತೈಲವನ್ನೆರೆಯುವ ಶ್ರೀಕಂಠಶಾಸ್ತ್ರಿಗಳೆತ್ತ, ಸೊಗಲಿನ ಧರ್ಮದಲ್ಲಿ ಅನೀತಿಯನ್ನು ಬೆರೆಸಿ ಧರ್ಮಕ್ಕೆ ದ್ರೋಹವನ್ನು ಬಗೆಯುವ ಯಃಕಶ್ಚಿತ ಬೆಲೆವೆಣ್ಣು ನೀನೆಲ್ಲಿ ? ನಿನ್ನ ಮಾತು ನಿನ್ನ ಯೋಗ್ಯತೆಯ ಮೇರೆಯನ್ನು ಮೀರುತ್ತಿವೆ. ನೀನು ನಾಲಿಗೆಯನ್ನು ಅನುಚಿತವಾಗಿ ಹರಿಬಿಟ್ಟರೆ ಸಿಗಿಹಾಕಿ ಬಿಡುವೆ...ಪಲ್ಲವಿ..." ಎಂದು ಕಂಚಿಕಬ್ಬೆ ಉದ್ವೇಗದಿಂದ ಹೇಳಿದಳು

ಪಲ್ಲವಿ ಮಾತ್ರ ಮಂದಹಾಸವನ್ನು ಬೀರುತ್ತ "ಮಹಾರಾಣಿ ಅಧಿಕಾರ ಮತ್ತರಾದ ತಮ್ಮ ಹಸದಲ್ಲಿಯೇ ಈ ಬಡದೇಹವಿದೆ. ಸ್ವಾಮಿನಿ, ತ್ರೇತಾಯುಗದ ಕೊನೆಯಲ್ಲಿ ರಾವಣನ ನೆಚ್ಚಿನವರಾದ ಮಾಲಿ ಸುಮಾಲಿ ದೈತ್ಯರು ಪ್ರತಿಷ್ಠಾಪಿಸಿದ ಸೊಗಲಿನ ಕುಲದೈವವಾದ ಈ ಸ್ವಯಂಭೂ ಸುವರ್ಣಾಕ್ಷಿ ದೇವರ ಸಾಕ್ಷಿಯಾಗಿ ಹೇಳುವೆ ವೀಣೆಯ ತಂತಿಗಳು ... ವೀಣೆಯ ತಂತಿಗಳು ಅನಂತ ಕಾಲ ... ಸುಮಧುರವಾದ ಧ್ವನಿಯನ್ನು ನುಡಿಸಲಾರವು.

"ಯಾವುದನ್ನು ನೀವು ಪವಿತ್ರವೆಂದು ಭಾವಿಸಿರುವಿರೋ ಅದನ್ನು ಪರೀಕ್ಷಿಸಿ ನೋಡಿಲ್ಲ. ಯಾವುದನ್ನು ನೀವು ಕೀಳೆಂದು ಭಾವಿಸಿರುವಿರೊ ಅದು ಭಾವಿಸಿದಂತೆ ನಿಕೃಷ್ಟವಲ್ಲವೆಂದು ಒಪ್ಪಲು ಸಿದ್ಧರಿಲ್ಲ. ಎಲ್ಲದಕ್ಕೂ ದೇವಿ ಕಾಲ ಬರಬೇಕು. ಈ ದೇಹಾವಸಾನದ ಮುನ್ನ ತಮ್ಮ ಸನ್ನಿಧಿಗೆ ಒಮ್ಮೆ ಬರಬೇಕೆಂದು ನನ್ನ ಮನದಿಚ್ಛೆ ! ನೀವು ನನ್ನನ್ನು 'ನಿಗ್ಗರಿ ನೈಚ್ಯ ವೃತ್ತಿಯವಳು ಎಂದು ಭಾವಿಸಿದ್ದೀರಿ ಆ...ದ...ರೆ...ಬರುವೆ ತಾಯಿ" ಎಂದೆನ್ನುತ್ತ, ಕಣ್ತುಂಬಾ ನೀರನ್ನು ತಂದುಕೊಂಡು ಅಂತಃಪುರದಿಂದ ಕದಲಿದದಳು. ಅವಳು ಬರುತ್ತಿರುವಾಗ ಅವಳ ಭಾರವಾದ ಹೆಜ್ಜೆಗಳಿಂದ ಅರಮನೆಯೇ ಕಂಪನಗೊಳ್ಳುತ್ತಿತ್ತು. ಅವಳ ಕೋಪದ ಕಿಡಿ ಸೊಗಲಿನ ರಾಜ್ಯವನ್ನೆ ಸುಡುವಷ್ಟು ಪ್ರಖರವಾಗಿತ್ತು !! ಅವಳಕ್ಷಿದಳಿಂದ ಉದುರುತ್ತಿದ್ದ ಜಲರಾಶಿ ಸೊಗಲವನ್ನೇ ಕೊಚ್ಚಿಕೊಂಡು ಹೋಗುವಷ್ಟು ಪ್ರಬಲವಾಗಿತ್ತು !!!

ಕಂಚಿಕಬ್ಬೆ ಪಲ್ಲವಿಯ ಅಟ್ಟಹಾಸದ ವಿಷ್ಯಮುಖವನ್ನೇ ನಿರೀಕ್ಷಿಸುತ್ತ "ಅಬ್ಬಾ ನಿಕೃಷ್ಟ, ಜಾತಿಗೆ ಸೇರಿದ ಈ ಪಲ್ಲವಿಗೆ ಅದೆಂತಹ ಛಲ ! ಪಂಡಿತೋತ್ತಮರೂ ವೇದಪಾರಂಗತರೂ ಆದ ಶ್ರೀಕಂಠಶಾಸ್ತ್ರಿಗಳ ಚಾರಿತ್ರ್ಯಕ್ಕೆ ಬೆರಳುಮಾಡಿ ತೋರಿಸಿದಂತೆ ಮಾತನಾಡುವ ಈ ಪಲ್ಲವಿಯ ಮಾನಭಂಗ ಮಾಡಿ ತುರುಗನು ಕೊಯ್ಸದಿದ್ದರೆ ನಾನು ಕಂಚಿಕಬ್ಬೆಯೇ ಅಲ್ಲ !" ಎಂದು ಕಂಚಿಕಬ್ಬೆ ನೇಪಥ್ಯದಲ್ಲಿ ಸಿದವಾಗುವ ವೇಷದಂತೆ ಮುಂದಿನ ರಂಗನಾಟಕಕ್ಕಾಗಿ ಸನ್ನದ್ಧತೆಗಳನು ಮಾಡಿಕೊಳ್ಳುವ ವಿಚಾರದಲ್ಲಿ ಲೀನಳಾದಳು

ಪಲ್ಲವಿ ನೇರವಾಗಿ ತನ್ನ ಮನೆಗೆ ಬಂದು ಮಂಚದಮೇಲೆ ಭಾರವಾದ ದೇಹವನ್ನು ಚೆಲ್ಲುತ್ತ ನಾನು ದಿಗ್ಗಜರೊಡನೆ ಛಲವನು ತೊಟ್ಟೆನೆನೋ ಎಂದು ಚಿಂತಾತುರಳಾದಳು ವಿಹ್ವಲಗೊಂಡ ಅವಳ ಮನಸ್ಸಿಗೆ ಯಾವದೋ ಒಂದು ಧ್ವನಿ "ಪಲ್ಲವಿ ದೇವರು ನಿನಗೆ ಅಪೂರ್ವವಾದ ಲಾವಣ್ಯವನಿತ್ತಿದ್ದಾನೆ. ನೀನು ಯಾವ ವಿಧದಿಂದಲೂ ಕಂಚಿಕಬ್ಬೆಗೆ ನಿಕೃಷ್ಟಳಲ್ಲ ! ಇಬ್ಬರ ಆತ್ಮಗಳು ಒಂದೇ !! ಛಲವನು ತೊಟ್ಟುಬಂದು ... ಹಿಂದೆಗೆದರೆ ಲೋಕವಾದರೂ ನಿನಗೆ ಏನಂದೀತು !!! ನಿನಗೆ ಮೊದಲೇ ಲೋಕವು ಸೂಳೆ, ಅಧರ್ಮಿ ಅತಿಕಾಮಿ ಎಂದು ಆಪಾದಿಸುತ್ತಿರುವಾಗ ನೀನು ಛಲಕ್ಕೀಡಾಯದಿದ್ದರೆ ಕಂಚಿಕಬ್ಬೆಯಂತಹವಳು ಅಪಹಾಸ್ಯ ಮಾಡುವಲ್ಲಿ ತಥ್ಯವಿದೆ ಎಂದು ಸಮಾಜ ಭಾವಿಸುತ್ತದೆ" ಎಂದು ಅಂದಾಗ ಪಲ್ಲವಿ ಮನೋವ್ಯಥೆ ತಾನೇ ತಾನಾಗಿ ತತ್ತರಿಸಿತು ಅವಳಿಗೆ ಎಂದಿಲ್ಲದ ಚೇತನಾಶಕ್ತಿ ಬಂದಿತು ಸಹಸ್ರಾಶ್ವಗಳ ಬಲವು ಅವಳ ದೇಹದಲ್ಲಿ ಸಂಚರಿಸಿ ಅವಳನು ಹೊಸ ಪಲ್ಲವಿಯನ್ನಾಗಿ ಮಾರ್ಪಡಿಸಿತು. ಪ್ರಸನ್ನವದನಳಾದ ಪಲ್ಲವಿ ಆ ಕ್ಷಣದಿಂದ ತನಗಾದ ಮೂವತ್ತು ವರ್ಷಾಯು

... ... ಮೂರು ವರ್ಷಗಳ ಹಸುಳೆ ... ಕಾಣಿಸುತ್ತಿದ್ದಳು.

ಮರುದಿವಸದಿಂದ ತನ್ನ ವೇಷ ಭೂಷಣಗಳಲ್ಲಿ ಅಲಂಕಾರದಲ್ಲಿ ಪಲ್ಲವಿ ಅತ್ಯಧಿಕ ಆಸ್ಥೆಯನ್ನು ವಹಿಸಹತ್ತಿದಳು. ಅವಳ ನವ್ಯ ನೈಪಥ್ಯ ಮತ್ತು ನೈಪಥ್ಯಗಳಿಂದ ಸೊಗಲಿನ ಯುವಪ್ರಪಂಚದಲ್ಲಿ ಒಂದು ಹೊಸಗಾಳಿ ಸಂಚರಿಸಿದಂತಾಯಿತು. ಹೊಸತಿಲಿನ ಆಚೆಗೆ ಕಾಲಿಕ್ಕುವಾಗ ನೂರುನೂರು ಸಲ ವಿಚಾರಿಸುತ್ತಿದ್ದ ಪಲ್ಲವಿ ಆಗೀಗ ಸೊಗಲಿನ ರಾಜ್ಯ-ವೀಥಿಗಳಲ್ಲಿ ಸುಳಿಯುವದನ್ನು ನೋಡುತ್ತಿದ್ದ ಜನತೆಗೆ ಆಶ್ಚರ್ಯದ ಜೊತೆ ಆನಂದವಾಗಹತ್ತಿತು. ಅವರ ಚಕ್ಷುಗಳಿಗೆ ಪರ್ವಕಾಲ ಬಂದಂತಾಯಿತು.

ಸುವರ್ಣಾಕ್ಷಿ ದೇವಾಲಯಕ್ಕಂತೂ ನಡೆಯುತ್ತಲೇ ಪ್ರತಿನಿತ್ಯ ಹೋಗಿ ಬರಹತ್ತಿದಳು. ಅವಳ ಬರವನ್ನೇ ನಿರೀಕ್ಷಿಸುತ್ತ ನಿಲ್ಲುವ ಒಂದು ರಸಿಕರ ತಂಡವೇ ಆ ಬೀದಿಯಲ್ಲಿ ಬೆಳೆಯಹತ್ತಿತು. ಅದೊಂದು ದಿವಸ ಫಲಪುಷ್ಪಗಳನ್ನೀಯುವಾಗ ಶ್ರೀಕಂಠಶಾಸ್ತ್ರಿಗಳು ಬಯಕೆಯ ಸೂಚನೆಯೇನೋ ಅನ್ನುವಂತೆ ಪಲ್ಲವಿಯ ಹಸ್ತಸ್ಪರ್ಶಮಾಡಿದಾಗ ಪಲ್ಲವಿ ಮುನಿದಿದ್ದಳು. ತುಳಿದ ಸರ್ಪಿಣಿಯಾಗಿದ್ದಳು. ಆದರೆ ಇಂದು ಅವಳೇ ಶ್ರೀಕಂಠಶಾಸ್ತ್ರಿಗಳಿಗೆ ಅಂತಹ ಅವಕಾಶವನ್ನು ಒದಗಿಸಿಕೊಡಹತ್ತಿದ್ದಾಳೆ. ಅವರನ್ನು ಮಾತಿಗೆಳೆದು ಅವರ ಲಕ್ಷ್ಯವನ್ನು ತನ್ನೆಡೆ ಸೆಳೆದುಕೊಳ್ಳುತ್ತಾಳೆ. ಪಲ್ಲವಿಯ ಈ ಮೂಕ ಪ್ರೀತಿ ಶ್ರೀಕಂಠಶಾಸ್ತ್ರಿಗಳನ್ನು ಕ್ಷಣಾರ್ಧದಲ್ಲಿ ಸೆರೆಹಿಡಿಯಹತ್ತಿತು. ಅವಳು ಈಗೀಗ ದೇವಾಲಯಕ್ಕೆ ಬರದಿದ್ದರೆ ಶ್ರೀಕಂಠಶಾಸ್ತ್ರಿಗಳಿಗೆ ಅಸ್ವಾಸ್ಥ್ಯವೆನಿಸಹತ್ತಿತು. ಈ ಪ್ರೀತಿ ದಿನದಿನಕ್ಕೂ ದೇವಾಲಯದ-ಲ್ಲಿಯೇ ಚಿಗುರೊಡೆದು ಬೆಳೆಯಹತ್ತಿತ್ತು. ಸ್ತ್ರೀ-ಯೆಂಬ ಶಬ್ದಾಲಾಪನೆಯಿಂದೆ ಮೋಹಗೊಳ್ಳುತ್ತಿದ್ದ ಶ್ರೀಕಂಠಶಾಸ್ತ್ರಿಗಳೀಗೂರು ಸೊಗಲಿನ ರಾಜ್ಯದಲ್ಲಿಯೇ ಅಪೂರ್ವ ಲಾವಣ್ಯವತಿ ಎಂದು ಪ್ರತೀತಿ ಪಡೆದ ಪಲ್ಲವಿ ಬಂದು ನಿಂತಾಗ ಅವರು ಪಲ್ಲವಿಗೆ ತಮ್ಮನ್ನೇ ವಿಕ್ರಯಿಸಿಕೊಂಡುಬಿಟ್ಟರು.

ಪಲ್ಲವಿಯ ರಾಜಸೌಂದರ್ಯಕ್ಕೆ ಮನಸೋತು ಅವಳ ದಾಸಾನುದಾಸರಾಗಲು ಲವಲವಿಸುತ್ತಿದ್ದ ಶ್ರೀಕಂಠಶಾಸ್ತ್ರಿಗಳನ್ನು ಅವಳು ತನ್ನ ಮಾಯಾ ಜಾಲದಲ್ಲಿ ಬಲೆಹಿಡಿದು ಕುಣಿಸಹತ್ತಿದಳು. ಶಾಸ್ತ್ರಿಗಳು ಅವಳ ರೂಪಕ್ಕೆ ಸೋತು ವಿವೇಕವನ್ನು ಗಾಳಿಗೆ ತೂರಿ ಅದೊಂದು ದಿವಸ ಅರ್ಚನೆಯ ಪ್ರಸಾದವನ್ನು ಅವಳ ಕೈಗಿಡುವಾಗ "ಪಲ್ಲವಿ... ನಾನೇನೋ ನಿನ್ನವನಾಗಿದ್ದೇನೆ...ಆದರೆ...ನೀನು ...!" ಎಂದು ಅರೆಅರೆ ಶಬ್ದಗಳನ್ನಾಡಿದರು.

ಪಲ್ಲವಿ ಲಜ್ಜಾಭಾರದಿಂದ ನತಮಸ್ತಕಳಾಗಿ "...ಅರ್ಚಕರೆ ಶಿವಸಾನಿಧ್ಯದಲ್ಲಿ ನುಡಿಯುವ ಈ ಮಾತುಗಳನು ನಾನು ಸ್ವೀಕರಿಸಲೇನು?" ಎಂದು ಕೇಳಿದಳು.

"ಏನು ಪಲ್ಲವಿ? ಕೊಟ್ಟ ಭಾಷ್ಯಕ್ಕೆ ಹಿಂದೆಗೆಯುವ ಶಾಸ್ತ್ರಿಗಳಿವರಲ್ಲವೆಂದು ಸೊಗಲಿನ ರಾಜ್ಯಕ್ಕೆ ರಾಜ್ಯವೇ ನನ್ನಲ್ಲಿ ವಿಶ್ವಾಸವನ್ನು ತಳೆಯುತ್ತಿರುವಾಗ ನಿನಗೆ ಅವಿಶ್ವಾಸವೆ? ನನಗೆ ಬಂದ ಕಾಮಜ್ವರಕ್ಕೆ ಧನ್ವಂತರಿಯಾದ ನೀನೇ ಉಪಚರಿಸಬೇಕು ..."ಎಂದು, ಶಾಸ್ತ್ರಿಗಳು ನಕ್ಕರು. ಅವರ ಆನಂದಕ್ಕೆ ಮಿತಿ ಇರಲಿಲ್ಲ.

"ವಿಪ್ರಶ್ರೇಷ್ಠರೇ, ಕಂಚಿನಂತಹ ನಿಮ್ಮ ದೇಹ ದಾರ್ಢ್ಯಕ್ಕೆ, ಮನ್ಮಥನಂತಹ ನಿಮ್ಮ ರೂಪಕ್ಕೆ, ಪ್ರಕಾಂಡಪಂಡಿತರಾದ ನಿಮ್ಮ ಬುದ್ಧಿಮತ್ತೆಗೆ ಯಾವ ಹೆಣ್ಣು ಮಣಿಯಲಿಕ್ಕಿಲ್ಲ! ನಾನೇ ಕೇಳಬೇಕಾದ ಪ್ರಶ್ನೆಯನ್ನು ನೀವು ಕೇಳಿಬಿಟ್ಟಿರುವಿರಿ. ಸುವರ್ಣಾಕ್ಷಿ ದೇವಾಲಯದ ಪಾವಿತ್ರ್ಯವನು ನಾವು ಹೊಲಗೆಡಿಸುವದು ಬೇಡ. ನಾನೊಂದು ತಾಣವನ್ನು ಆರಿಸಿದ್ದೇನೆ; ಸಮಯವನ್ನು ಆರಿಸಿದ್ದೇನೆ !! ಬರುವ ಮಾಘ ಅಮವಾಸ್ಯೆಯ ಶಿವರಾತ್ರಿಯ ಉತ್ಸವ ನಡೆಯಲಿ. ನಾನು ಸುವರ್ಣಾಕ್ಷಿ ದೇವರಿಗೆ ನರ್ತನಸೇವೆ ಸಲ್ಲಿಸುವೆ. ಆಮೇಲೆ ಬರುವ ಕಾಮಪೌರ್ಣಿಮೆ ನಿಮ್ಮ ಬೆಳದಿಂಗಳಿನ ರಾತ್ರಿಯಾದಲಿ ಶಾಸ್ತ್ರಿಗಳೇ !!! ಫಲ್ಗುಣ ಮಾಸದ ಕಾಮಕೇಳಿ ನಮ್ಮೀರ್ವರ ಸಮಾಗಮದ ಸಂಕೇತವೇನೋ ಅನ್ನುವಂತೆ ಕಾಯಹತ್ತಿದೆ ನಮಗಾಗಿ. ನಿಮ್ಮ ಒಬ್ಬಿಗೆ ತಾನೇ ...!" ಎಂದು, ಬೆಳದಿಂಗಳಲ್ಲಿ ಅರಳುವ ಮಲ್ಲಿಗೆಯ ಮೊಗ್ಗುಗಳನ್ನು ಚೆಂಗುಲಾಬಿಯಲ್ಲಿ ಹಿಡಿದಿಟ್ಟಂತೆ ಕಂಗೊಳಿಸುವ ದಂತಪಂಕ್ತಿಗಳನ್ನು ಪಲ್ಲವಿ ತೆರೆದು ನಕ್ಕಾಗ ಸುವರ್ಣಾಕ್ಷಿ ದೇವರಿಗೆ ಕೂಡ ಪಲ್ಲವಿಯ ಮೇಲೆ ಆಶೆಯಾಯಿತೇನೋ, ಎಂದು ಶ್ರೀಕಂಠ ಶಾಸ್ತ್ರಿಗಳು ದೇವರಮೇಲೆ ಅಸೂಯೆಗೊಂಡರಂತೆ! ಶ್ರೀಕಂಠಶಾಸ್ತ್ರಿಗಳಿಗಾದ ಅಂದಿನ ಆನಂದಕ್ಕೆ ಅಮಿತೋತ್ಸಾಹವು ಬೆರೆತಿತ್ತು. ಕೈ ಬೆರಳುಗಳನ್ನು ಲೆಕ್ಕ ಹಾಕುತ್ತ "ಬಿದಿಗೆ...ತದಿಗೆ...ಅಮಾವಾಸ್ಯೆಗೆ ಹನ್ನೆರಡೇ ದಿವಸಗಳು. ಅಮವಾಸ್ಯೆ ಕಳೆದರೆ ಬರುವ ಫಾಲ್ಗುಣ ಹುಣ್ಣಿಮೆಯ ರಾತ್ರಿಯೇ ತಮ್ಮ ರಾತ್ರಿ !...ಪಲ್ಲವಿ...ಈ...ತೋಳತೆಕ್ಕೆ..." ಎಂದು, ಶಾಸ್ತ್ರಿಗಳು ತಮ್ಮಲ್ಲಿ ತಾವೇ ನಕ್ಕರು.

ಅವರಿಗೆ ಒಂದೊಂದು ಕ್ಷಣವೂ ಅಂದಿನಿಂದ ಒಂದೊಂದು ಯುಗವಾಗಿ ಪರಿಣಮಿಸಹತ್ತಿತು. ದೇವರ ಅರ್ಚನೆಯಲ್ಲಿ ಮನಸ್ಸೇ ಅವರಿಗೆ ಇರಲಿಲ್ಲ. ಪ್ರತಿನಿತ್ಯ ದೇವಾಲಯಕ್ಕೆ ಬಂದು ಹೋಗುತ್ತಿದ್ದ ಪಲ್ಲವಿಯೊಡನೆ ನಕ್ಕು, ನಲಿದು, ಸರಸವಾಡುವದೆಂದರೆ ಅವರಿಗೆ ಅಪರಿಮಿತ ಆನಂದವನ್ನೀಯುತ್ತಿತ್ತು.

ಮಧ್ಯದಲ್ಲಿ ಎರಡು ದಿವಸಗಳ ಕಾಲ ಪಲ್ಲವಿ ವೇಣುಗ್ರಾಮಕ್ಕೆ ಹೋಗಿಬಂದಳು. ಅಲ್ಲಿಗೆ ಯಾವದೋ ಕಾರ್ಯಭಾರದಿಂದ ಬಂದ ಕೇತಿಮಯ್ಯನವರನ್ನು ಅವಳು ಸಂದರ್ಶಿಸಿದಳು. ಪಾಳೆಯಗಾರರು ಪಲ್ಲವಿಯನ್ನು ಅಷ್ಟು ಸಮೀಪದಿಂದ ಸೊಗಲಿನಲ್ಲಿ ಕಂಡಿರಲಿಲ್ಲ. ಅವಳ ಅಪೂರ್ವ ಲಾವಣ್ಯವನ್ನು ಕೇಳಿಬಲ್ಲ ಅವರಿಗೆ ನೋಡಲು ದೊರೆತಾಗ ಅವರಿಗೂ ವ್ಯಾಮೋಹವಾಯಿತು. ಅವರ ಆಶೆಗೂ ಚಿಗುರೊಡೆಯಿತು. ಸೊಗಲಿನಿಂದ ದೂರಬಂದ ಅವರಿಗೆ ಅಲ್ಲಿ ಯಾರ ಬಂಧನವೂ ಅನಿಸಲಿಲ್ಲ. ತಮ್ಮ ಪಾಳೆಯದ ವಾರಾಂಗನೆ ತಮ್ಮಾಧೀನದ ಪ್ರಜೆ ಪಲ್ಲವಿ ಎಂದಮೇಲೆ ಪಾಳೆಯಗಾರರ ಬಾಯಿ ನೀರುಬಿಟ್ಟಿತು. ಸೊಗಲಿನ ಕಂಚಿಕಬ್ಬೆ ಕೇತಿಮಯ್ಯನವರಿಗೆ ಪಲ್ಲವಿ ಎದುರು ಇರುವಷ್ಟು ಕಾಲ ಸ್ಮೃತಿಪಟಲದಿಂದ ಅಳಿಸಿ ಹೋದಳು. ಆಗ ಕೇತಿಮಯ್ಯನವರು "ಪಲ್ಲವಿ ವೇಣುಗ್ರಾಮಕ್ಕೆ ಬಂದ ಕಾರಣವೇನು ?" ಎಂದು ಕೇಳಿದರು.

"ಸ್ವಾಮಿ ಸಂಬಂಧಿಕರಲ್ಲಿ ಕಾರ್ಯವಿತ್ತು." ಎಂದು ಮುಗುಳುನಗೆ ನಕ್ಕು ಹೇಳಿದಳು. "ಸೊಗಲಿನಲ್ಲಿ ನಿನಗೆ ಸೌಖ್ಯವಿದೆ ತಾನೆ...!" ಎಂದು

ಕೇಶಿಮಯ್ಯನವರು ಲೋಕರೂಢಿಯಾಗಿ ಮಾತನ್ನು ಬೆಳೆಸುವ ರೀತಿಯಲ್ಲಿ ಕೇಳಿದರು.

"ದೇವಾ, ನಿಮ್ಮ ಕೃಪಾಛತ್ರದಲ್ಲಿ ನನಗಾವ ಕೊರತೆ ನಿಮ್ಮ ಕೃಪಾಕಟಾಕ್ಷವಿದ್ದ ಮೇಲೆ ಪಲ್ಲವಿಯ ಪುಣ್ಯಕ್ಕೆ ಅದಾವ ನ್ಯೂನತೆ! ದೇವಾ, ತಮ್ಮನ್ನು ಸೊಗಲಿನಲ್ಲಿ ನೋಡಬೇಕು ಎಂದು ಅಂದುಕೊಳ್ಳುತ್ತಲೇ ಕಾಲವು ಕಳೆದುಹೋಯಿತು. ದೇವರು..." ಎಂದು, ಪಲ್ಲವಿ ಅರೆನಕ್ಕು, ಕಣ್ಣುಗಳಿಂದಲೇ ಪ್ರೀತಿಯನ್ನು ಪ್ರದರ್ಶಿಸುತ್ತ ಕೇಶಿಮಯ್ಯನವರನ್ನು ನೋಡಿದಾಗ ಅವರಿಗೆ ಪಲ್ಲವಿಯ ರೂಪವನ್ನು ಹೀರಬೇಕು ಎನ್ನುವಷ್ಟು ಬಯಕೆಯಾಯಿತು. ಆದರೆ ಬೇರೆಯವರು ಇದ್ದುದರಿಂದ ಅವರು ಪಲ್ಲವಿಯತ್ತ ಅರ್ಥಪೂರ್ಣವಾಗಿ ನಗುತ್ತ "ಶಿವರಾತ್ರಿಯಂದು ಸುವರ್ಣಾಕ್ಷಿ ದೇವರಿಗೆ ಸಲ್ಲಿಸುವ ನಿನ್ನ ನೃತ್ಯಸೇವೆಯನ್ನು ಪ್ರತಿವರುಷ ನಾನು ನೋಡಿ ಮೆಚ್ಚಿದ್ದೇನೆ. ಆ...ದ...ರೆ..." ಎಂದು ತಮ್ಮ ನಾಲಗೆಯನ್ನು ಹಿಂದಕ್ಕೆಳೆದರು. "ದಣಿಯರೆ, ಆದರೇನು...? ಈ ದೇಹ ಪಾಳೆಯಗಾರರ ಆಶೆಯ ಹಸಿವಿಗೆ ತುತ್ತಾಗದಿದ್ದರೆ ಇನ್ನಾರಿಗಾಗಬೇಕು?..." ಎಂದು ಆಹ್ವಾನವನ್ನೀಯುವ ತೆರದಲ್ಲಿ ಪ್ರಕಟಿತವಾಗಿ ಹೇಳಿಬಿಟ್ಟಳು. ಮುಂದೆ ಕೇಶಿಮಯ್ಯನವರು ಪಲ್ಲವಿಯೊಡನೆ ರಹಸ್ಯವಾಗಿ ಮಾತನಾಡಿ ಯಾವದೋ ಒಂದು ನಿರ್ಧಾರಕ್ಕೆ ಬಂದರು. ಇಬ್ಬರ ಮುಖಗಳೂ ಕಮಲದಂತೆ ಅರಳಿದವು. ಇಬ್ಬರ ಕಣ್ಣುಗಳೂ ಮಾತನಾಡಿದವು. ಆ ಸವಿನೆನಪಿನ ಸಂಕೇತವಾಗಿ ಕೇಶಿಮಯ್ಯನವರು ತಮ್ಮ ಕಿರುಬೆರಳಿನ ಉಂಗುರವನ್ನು ತೆಗೆದು ಪಲ್ಲವಿಯ ಬೆರಳಿಗೆ ಹಾಕಿದರು. ವೇಣುಗ್ರಾಮದಿಂದ ಕೇಶಿಮಯ್ಯನವರನ್ನು ಬೀಳ್ಕೊಟ್ಟು ಪಲ್ಲವಿ ಸೊಗಲಿಗೆ ಬಂದಳು.

ಪಲ್ಲವಿ ಸೊಗಲಿನಿಂದ ದೂರ ಹೋದಕಾಲದಷ್ಟೂ ಶ್ರೀಕಂಠಶಾಸ್ತ್ರಿಗಳ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ಅವಳು ಸೊಗಲಿಗೆ ಬಂದ ಸಂಜೆಯೇ ದೇವಾಲಯಕ್ಕೆ ಬಂದು "ಶಾಸ್ತ್ರಿಗಳೇ ಕ್ಷಮಿಸಿ, ಅವಸರದಲ್ಲಿ ಹೇಳಿ ಹೋಗಲು ಮರೆತೆ. ಆ ಕಾಮಪೌರ್ಣಿಮೆಯ ರಾತ್ರಿಯಲ್ಲಿ ನಾವು ನಡಸಬೇಕಾದ ಕಾಮಕೇಳಿಯ ತಾಣವನ್ನು ನೋಡಲು ಹೋಗಿಬಂದೆ. ಬರುವಾಗ ವೇಣುಗ್ರಾಮದಲ್ಲಿ ನಿಂತುಬಂದೆ. ನಿರ್ಧರಿಸಿದಂತೆ ನಡೆಯಲು ಸಿದ್ಧತೆಗಳು ಕೊನೆಗೊಂಡಿವೆ. ಆ..ದ..ರೆ..!" ಎಂದು ಪಲ್ಲವಿ ಕಣ್ಣರಳಿಸಿ ನಾಲಿಗೆಯನ್ನು ಹಿಂದಕ್ಕೆಳೆದಳು.

"ಏನು, ಪಲ್ಲವಿ? ಸುವರ್ಣಾಕ್ಷಿ ದೇವರು ನನಗೆ ಸಂಪತ್ತು, ಕೀರ್ತಿ, ಸಕಲ ಸುಖವನ್ನೂ ಕೊಟ್ಟಿದ್ದಾನೆ. ಕೇಳು...ಕೊರತೆಯೇನು...?" ಎಂದರು.

ಅವಳು ಲಜ್ಜೆಯಿಂದ "ಅರ್ಚಕರೆ, ಸುವರ್ಣಾಕ್ಷಿ ದೇವರ ಅಮ್ಮನವರಾದ ಪಾರ್ವತಿಯ ವಸ್ತ್ರಗಳನ್ನು ಒಮ್ಮೆ ಇಟ್ಟುಕೊಂಡು ನೋಡಬೇಕು ಅನ್ನುವ ಆಶೆಯಾಗಿದೆ! ಒಂದೇ ರಾತ್ರಿ ಇಟ್ಟುಕೊಂಡು ಮರು-ದಿವಸ ಕೊಡುವೆ. ಶಿವರಾತ್ರಿಗಷ್ಟೇ ತೆಗೆಯುವ ಆ ಒಡವೆಗಳನ್ನಿಟ್ಟುಕೊಂಡು ಮನಸ್ಸಿನ ತೃಪ್ತಿಯನ್ನು ಕಳೆದುಕೊಳ್ಳಬೇಕು ಅನ್ನುವ ಬಯಕೆಯಾಗಿದೆ. ಆದರೆ...ಹೇಗೆ...ಕೇಳಲಿ ಸ್ವಾಮಿ" ಎಂದಳು.



"ಓ!...ಇಷ್ಟೇ...ತಾನೆ! ಶಿವರಾತ್ರಿಯ ರಾತ್ರಿಗೆ ಮೂರು ರಾತ್ರಿಗಳಿವೆ. ನಾಳಿಗೆ ಬಂದು ನೀನು ಒಯ್ದು ನಾಳೆ ರಾತ್ರಿ ನಿನ್ನ ಆಶೆಯನ್ನು ಪೂರೈಸಿಕೊಂಡುಬಿಡು. ಅಪ್ಪನವರಿಗೆ ಪಾಳೆಯಗಾರರು ಮತ್ತು ಕಂಚಿಕಬೆಯವರು ವಿಪುಲವಾಗಿ ವಸ್ತುಗಳನ್ನಿತ್ತಿದ್ದಾರೆ. ಅವು ಅರಮನೆಯ ಆಭರಣಗಳಾದರೂ ಅವುಗಳ ಅಧಿಪತಿ ನಾನೇ ಇದ್ದಂತೆ! ಶಿವ.ರಾತ್ರಿಯ ಹಿಂದಿನ ರಾತ್ರಿ ಮಾತ್ರ ತಂದುಕೊಡಬೇಕು. ಮರುದಿವಸ ಸ್ವಯಂಭೂವಿನೊಂದಿಗೆ ಅಮ್ಮನನ್ನೂ ಅಲಂಕರಿಸಬೇಕಲ್ಲವೇ? ನಿನಗೇನು ಈ ಮಾತು ಹೊಸದೇನು?" ಎಂದರು. ಪಲ್ಲವಿ ತಲೆಯಲ್ಲಾಡಿಸಿ "ಶಾಸ್ತ್ರಿಗಳೆ ನೀವು ಎಂತಹ ಉದಾರಿ

ಗಳು. ನನ್ನ ಆಶೆ ಹುಚ್ಚು, ಆಶೆ: ನನ್ನ ಬಯಕೆ ವಿಚಿತ್ರ ಬಯಕೆ! ಒಂದು ರಾತ್ರಿ ಇಟ್ಟುಕೊಂಡು ನೋಡಿದರೂ ನನಗೆ ತೃಪ್ತಿಯಾಗುತ್ತಿದೆ" ಎಂದು ಹೇಳಿದಳು.

ಮರುದಿವಸ ಸಂಜೆಯ ಮುಂದ ಸ್ವಯಂಭೂ ದೇವರಿಗೂ ಮತ್ತು ಪಾರ್ವತಿಯಮ್ಮನವರಿಗೂ ಆರತಿಯಾದ ಮೇಲೆ ಪಲ್ಲವಿ ದೇವಾಲಯಕ್ಕೆ ಬಂದಾಗ ಶ್ರೀಕಂಠಶಾಸ್ತ್ರಿಗಳೊಬ್ಬರೇ ಕಾದು ನಿಂತಿದರು. ಉತ್ಸವದ ಸಿದ್ಧತೆಗಳೆಲ್ಲಾ ಮುಗಿದಿದ್ದವು ಸೊಗಲಿನ ಜೀವನದಲ್ಲಿ ಶಿವರಾತ್ರಿ ಒಂದು ಉತ್ಸಾಹದ ರಾತ್ರಿ. ಸೊಗಲಿಗೆ ಸೊಗಲೇ ಆ ದಿನದ ಉತ್ಸವದಲ್ಲಿ ಭಾಗವಹಿಸುತ್ತದೆ. ಅಂದು ಕೇತಿಮಯ್ಯನವರು ಮತ್ತು ಕಂಚಿಕಬ್ಬೆಯು ಕೂಡಿ ದೇವರ ಅಭಿಷೇಕಕ್ಕೆ ಅರಮನೆಯಿಂದ ದೇಗುಲಕ್ಕೆ ಬರುವ ಆ ಮೆರವಣಿಗೆಯನ್ನು ನೋಡಲು ಸೊಗಲಿನ ಸುತ್ತ-ಮುತ್ತಲಿನ ಜನತೆ ಸೇರುತ್ತಿತ್ತು

ಪಲ್ಲವಿ ಬಂದದ್ದನ್ನು ನೋಡಿ ಶ್ರೀಕಂಠಶಾಸ್ತ್ರಿಗಳು ಆನಂದಪುಲಕಿತರಾಗಿ ಅಮ್ಮನವರ ಒಂದು ಸೀರೆಯಲ್ಲಿ ಅಮ್ಮನವರ ವಸ್ತ್ರಗಳನ್ನು ಕಟ್ಟಿ ಪಲ್ಲವಿಗೆ ಕೊಡುತ್ತ "ಪಲ್ಲವಿ ನಾಳೆ ಇಲ್ಲ, ನಾಡದು ಸಂಜೆ ತಂದುಕೊಟ್ಟರೂ ನಡೆಯುತ್ತದೆ. ಶಿವರಾತ್ರಿಯ ಮುಂಜಾವಿನ ಅಲಂಕಾರದ ಕಾಲಕ್ಕೆ ದೊರೆತರೆ ಸಾಕು! ಈ ಮಾತನ್ನು ನೀನು ಗುಟ್ಟಾಗಿ ಇಟ್ಟುಕೊಳ್ಳಬೇಕು! ಇಲ್ಲದೆ ಹೋದರೆ ಕೇತಿಮಯ್ಯನವರು ನನ್ನ ತಲೆಯನ್ನು ನನ್ನ ಭುಜದ ಮೇಲೆ ಇರಿಸಲಿಕ್ಕಿಲ್ಲ" ಎಂದು ಹೇಳಿದರು

"ಏನು ಶಾಸ್ತ್ರಿಗಳೇ ನನ್ನ ಮೇಲೆ ಅವಿಶ್ವಾಸವೇ! ಎಂದು ನಗುತ್ತ ಗಂಟನ್ನು ಸಾರೋಟದಲ್ಲಿಟ್ಟುಕೊಂಡು ಅಮ್ಮನ ಕುಂಕುಮವನ್ನು ಹಣೆಗಿಟ್ಟುಕೊಂಡು ಮನೆಗೆ ಹೋದಳು ಪಲ್ಲವಿ

ಅತ್ತ ಕಂಚಿಕಬ್ಬೆ ಈ ಶಿವರಾತ್ರಿಯ ಉತ್ಸವದಲ್ಲಿ ಸುವರ್ಣಾಕ್ಷಿ ದೇವರಿಗೆ ನರ್ತನಸೇವೆಯನ್ನು ಸಲ್ಲಿಸುತ್ತಿದ್ದ ಪಲ್ಲವಿಗೆ ಆ ಅವಕಾಶವನ್ನು ಕೊಡಬಾರದೆಂದು ನಿರ್ಧರಿಸಿದ್ದಳು ಪಲ್ಲವಿಯ ಆ ಅಧಿಕಾರ ಹೋದರೆ ಅವಳ ಗರ್ವಕ್ಕೆ ಭಂಗ ಬರುವದೆಂದು ಯೋಚಿಸಿ ಮೇನಕಾ ಎಂಬ ಇನ್ನೊಬ್ಬ ನರ್ತಕಿಯನ್ನು ನರ್ತಿಸಲು ಯೋಜನೆಯನ್ನು ಸಿದ್ಧಪಡಿಸಿ ರಹಸ್ಯವಾಗಿ ಅದನ್ನು ಕಾಪಾಡಿಕೊಂಡು ಬಂದಿದ್ದಳು ಶಿವರಾತ್ರಿಯ ಮಧ್ಯಾಹ್ನದಂದು ಪಲ್ಲವಿಗೆ ಈ ನಿರ್ಣಯವನ್ನು ತಿಳಿಸಿ ದೇವಾಲಯಕ್ಕೆ ಅಂದು ಬರಬಾರದೆಂದು ಹೇಳಿಕಳಿಸಿ ಅದೇ ಕ್ಷಣದಲ್ಲಿಯೇ ಮೇನಕಾಳ ನರ್ತನಸೇವೆಯ ಸುದ್ದಿಯು ಪ್ರಕಟವಾಗುವಂತೆ ಮಲ್ಲಿಕೆಯ ಸಹಾಯದಿಂದ ಸಿದ್ಧತೆಗಳನ್ನು ಮಾಡಿಕೊಂಡಿದ್ದಳು

ಮರುದಿವಸದ ರವಿ ಮೂಡಿ ಮುಳುಗುವ ಮುನ್ನ ಸೊಗಲವು ಶಿವರಾತ್ರಿಯ ರಾತ್ರಿಯನ್ನೇ ಕಣ್ಣರಳಿಸಿ ನೋಡುತ್ತಿತ್ತು! ಆ ರಾತ್ರಿ ಕಳೆದು ಬೆಳಗಾಯಿತು ಅಂದಿನ ರಾತ್ರಿಯೇ ಶಿವರಾತ್ರಿಯ ಹಿಂದಿನ ರಾತ್ರಿ, ಅಂದು ದೇವಾಲಯದ ಯಾವ ಸೇವೆಯವರಿಗೂ ಬಿಡುವಿಲ್ಲ, ನಿದ್ರೆಯಿಲ್ಲ!

ಆದರೆ ಶ್ರೀಕಂಠಶಾಸ್ತ್ರಿಗಳೇಕೊ ಅಸ್ವಸ್ಥರಾಗಿರಾಗಿದ್ದರು. ಪಲ್ಲವಿ, ಅಮ್ಮನವರ ಆಭರಣಗಳನ್ನು ಮರಳಿ ಕೊಡುವೆನೆಂದು ಹೇಳಿದವಳು ರಾತ್ರಿಯಾದರೂ ಕೊಡಲು ಬರಲಿಲ್ಲ. ತಮ್ಮ ನಂಬಿಗೆಯ ಶಿಷ್ಯನೊಬ್ಬನನ್ನು ಪಲ್ಲವಿಯ ಮನೆಗೆ ಕಳಿಸಿದಾಗ ಪಲ್ಲವಿ ಹಿಂದಿನ ದಿವಸವೇ 'ಸೊಗಲನ್ನು ಬಿಟ್ಟವಳು ಇನ್ನೂ ಬಂದಿಲ್ಲವೆಂದೂ ತಿಳಿಯಿತು ಅವಳೆಲ್ಲಿಗೆ ಹೋಗಿರುವಳೆಂದೂ ಮನೆಯ ದಾಸಿಯರಿಗೆ ತಿಳಿದಿರಲಿಲ್ಲವಂತೆ! ಶ್ರೀಕಂಠಶಾಸ್ತ್ರಿಗಳಿಗೆ ಜೀವವೇ ಭಾರವೆನಿಸಿತು ಮರು ದಿವಸ ಪೂಜೆಯಕಾಲಕ್ಕೆ ಅಮ್ಮನವರಿಗೆ ಒಡವೆಗಳಿಲ್ಲವೆಂದರೆ ತಮ್ಮ ತಲೆ ಹಾರುವದೆಂದು ಅವರು ಭಯಗೊಂಡರು ಅಂತಹ ಸಾವನ್ನು ಎದುರಿಸುವದಕ್ಕಿಂತ ವಿಷಪ್ರಾಶನವೇ ಲೇಸೆಂದು ಭಾವಿಸಿ ರಾತ್ರಿಯೆಲ್ಲವೂ ಕಾದು ಕಾದು ಬೆಳಗಿನ ಜಾವದಲ್ಲಿ ಮನೆಗೆ ಹೋಗಿ ಮಲಗಿಕೊಂಡರು. ಮರುದಿವಸ ರವಿ ಮೂಡಿದರೂ ಏಳಲಿಲ್ಲ. ಅವರ ದೇಹವೆಲ್ಲಾ ಕಾದು ಕೆಂಡವಾಗಿತ್ತು

ಬೆಳಗಿನಲ್ಲಿ ದೇವಾಲಯದ ಉತ್ಸವಗಳೇನೋ ಪ್ರಾರಂಭವಾದರೂ ಶ್ರೀಕಂಠಶಾಸ್ತ್ರಿಗಳ ಪೌರೋಹಿತ್ಯವು ಅದಕ್ಕೆ ಇರದ್ದರಿಂದ ಅದರಲ್ಲಿ ಕೊರತೆ ಎನಿಸಹತ್ತಿತ್ತು ಬೇರೆ ಅರ್ಚಕರು ಸ್ವಯಂಭೂ ಸುವರ್ಣಾಕ್ಷ ದೇವರಿಗೆ ಸಕಲ ವಸ್ತುಗಳಿಂದ ಅಲಂಕರಿಸಿದರೂ ಅಮ್ಮನವರ ವಸ್ತ್ರಗಳಿರದ್ದಕ್ಕೆ ವಿಹ್ವಲಗೊಂಡರು. ಎಲ್ಲೆಡೆ ಶೋಧಿಸಿದರೂ ಅಲ್ಲಿರಲಿಲ್ಲ. ಈ ವಾರ್ತೆ ಕಿವಿಯಿಂದ ಕಿವಿಗೆ ಹೋಗಿ ಕೇತಿಮಯ್ಯನವರ ಮತ್ತು ಕಂಚಿಕಬ್ಬೆಯ ಕಿವಿಗಳವರೆಗೂ ಹೋಯಿತು ಅವರೇನೋ ಅಭಿಷೇಕಕ್ಕೆ ಮೆರವಣಿಗೆಯಲ್ಲಿ ಬಂದರು. ಆದರೆ ದೇವಾಲಯದಲ್ಲಿ ರಾತ್ರಿಯೆಲ್ಲ ಇದ್ದು ಬೆಳಗಿನ ಜಾವದಲ್ಲಿ ಅಸ್ವಸ್ಥವಾಗಿ ಮಲಗಿಕೊಂಡ ಶ್ರೀಕಂಠಶಾಸ್ತ್ರಿಗಳಿಗೂ ಮತ್ತು ಕಾಣದ ಅಮ್ಮನವರ ವಸ್ತ್ರಗಳಿಗೂ ಯಾವದೋ ಸಂಬಂಧವಿದೆ ಎಂದು ಸೊಗಲಿಗೆ ಸೊಗಲೇ ಮಾತನಾಡಿಕೊಂಡಿತು

ಅಭಿಷೇಕ ಅನ್ನಸಂತರ್ಪಣೆ ಮುಗಿದಮೇಲೆ ಮಧ್ಯಾಹ್ನದ ವಿಶ್ರಾಂತಿಗೆಂದು ಕೇತಿಮಯ್ಯನವರು ಕಂಚಿಕಬ್ಬೆಯ ಅಂತಃಪುರಕ್ಕೆ ಬಂದಾಗ ಅವರು ಶ್ರೀಕಂಠಶಾಸ್ತ್ರಿಗಳ ಮಾತನ್ನೇ ಆಡಹತ್ತಿದರು. ಅಮ್ಮನವರ ವಸ್ತ್ರಗಳನ್ನು ಅವರು ಅಪಹರಿಸಿರುವರೆಂದಮೇಲೆ ಅವರ ವಿಚಾರಣೆ ನಡೆಸಿ ಅವರಿಗೆ ತಕ್ಕದಾದ ದಂಡನೆಯನ್ನು ಮಾಡಬೇಕೆಂದು ಕಂಚಿಕಬ್ಬೆಗೆ ಹೇಳಿದಾಗ ಅವಳು ತಲೆಯಲ್ಲಾಡಿಸಿ ಅದನ್ನೇ ಹೇಳಿದಳು ಈಗ ಅವಳಿಗೆ ಶ್ರೀಕಂಠಶಾಸ್ತ್ರಿಗಳ ಚಾರಿತ್ರ್ಯದ ಅರಿವಾಗಹತ್ತಿತು ಇದೇ ಸಂಧಿಯನು ಸಾಧಿಸಿ ಮೆಲ್ಲನೆ ಕಂಚಿಕಬ್ಬೆ ಪಲ್ಲವಿಯ ಬಗ್ಗೆ ಕೇತಿಮಯ್ಯನವರ ಕಿವಿಯಲ್ಲಿ ವಿಷದ ಬೀಜವನ್ನು ಬಿತ್ತಿ ಅಂದಿನ ರಾತ್ರಿ ಪಲ್ಲವಿಯ ನರ್ತನಸೇವೆಯನ್ನು ತಪ್ಪಿಸುವ ಬಗೆ ಮಾತನಾಡಿದಳು. ಆದರೆ

ಕೇತಿಮಯ್ಯನವರು "ಕಂಚುಕಾ, ಪಲ್ಲವಿಯ ಮನೆತನಕ್ಕೆ ಮೀಸಲಾದ ವೃತ್ತಿಯದು. ಅವರು ಕಾವಾಗಿಯೇ ಒಲ್ಲೆನೆಂದರೆ ಮಾತ್ರ ಆ ಸೇವೆ ಬೇರೆಯವರಿಗೆ ಸಲ್ಲಬೇಕು." ಎಂದು ನಿಷ್ಠುರವಾಗಿ ಹೇಳಿಬಿಟ್ಟರು. ಕಂಚಿಕಬ್ಬೆ ಪತಿಯ ಮಾತಿನಿಂದ ಮನಸ್ಸಿನಲ್ಲಿಯೇ ನೊಂದುಕೊಂಡಳು.

ಅಷ್ಟರಲ್ಲಿ ಕಂಚುಕಿ ಬಂದು "ಸ್ವಾಮಿ ಪಲ್ಲವಿ ತಮ್ಮನ್ನು ಮತ್ತು ಅಮ್ಮನವರನ್ನು ಕಾಣಲು ಕಾದು ನಿಂತಿದ್ದಾಳೆ" ಎಂದು ಹೇಳಿದನು ಕೇತಿಮಯ್ಯನವರು ಒಳಕ್ಕೆ ಬಿಡಲು ಹೇಳಿದರು.

ಪಲ್ಲವಿ ಒಳಕ್ಕೆ ಬಂದು "ದೇವಾ ನಿಮ್ಮ ಏಕಾಂತಕ್ಕೆ ಭಂಗವನ್ನು ತಂದೆನೇನೋ" ಎಂದೆನ್ನುತ್ತ ಶ್ರೀಕಂಠಶಾಸ್ತ್ರಿಗಳು ಕೊಟ್ಟ, ಅಮ್ಮನವರ ಆಭರಣಗಳಿದ್ದ ಗಂಟನ್ನು ಕೆಳಗಿಟ್ಟು "ಕಂಚಿಕಬ್ಬೆಯವರೆ, ಶ್ರೀಕಂಠಶಾಸ್ತ್ರಿಗಳ ಚಾರಿತ್ರ್ಯದ ಬಗ್ಗೆ ಈ ವಸ್ತುಗಳೇ ಸಾಕ್ಷಿ ನುಡಿಯುತ್ತಿವೆ" ಎಂದೆಂದು ಸಾದ್ಯಂತ ಕಥೆ ಹೇಳಿದಾಗ ಕಂಚಿಕಬ್ಬೆಯ ಮುಖ ಬಾಡಿತು. ಶ್ರೀಕಂಠಶಾಸ್ತ್ರಿಗಳ ಅಸ್ವಾಸ್ಥ್ಯದ ರಹಸ್ಯ ಆಗ ಕೇತಿಮಯ್ಯನವರಿಗೆ ತಿಳಿಯಿತು. ಪಲ್ಲವಿ ಮತ್ತು ಕಂಚಿಕಬ್ಬೆಯ ಛಲದ ಮಾತೂ ಆಗಲೇ ಕೇತಿಮಯ್ಯನವರಿಗೆ ತಿಳಿಯಿತು ಅವರು ಅಲ್ಲಿಂದ ಏಳುತ್ತ "ನಿಕೃಷ್ಟರು ಸದಾ ನಿಕೃಷ್ಟರೇ ಇರುವದಿಲ್ಲ ಪಲ್ಲವಿ ಇಂದು ನಿನ್ನ ನರ್ತನ ಸೇವೆ ಯಥಾರೀತಿಯಾಗಿ ಸಾಂಗವಾಗಲಿ" ಎಂದು ಹೇಳಿದರು.

ಕೇತಿಮಯ್ಯನವರು ಎದ್ದು ಹೋದಮೇಲೆ ಪಲ್ಲವಿ ತನ್ನ ಬೆರಳಿನಲ್ಲಿಯ ಅಂಗುಲೀಯಕವನ್ನು ತೋರಿಸಿ. "ದೇವಿ, ನಾನು ಸೂಳೆ, ಅಧರ್ಮಿ! ಆದರೆ ಲೋಕವು ಮಾತ್ರ ಸಾಧು; ಧರ್ಮನಿಷ್ಠ!! ನಿನ್ನ ಪತಿದೇವರಂತಹವರು ಸಹ ವಾರಾಂಗನೆಯನ್ನು ಕಾಮಿಸುತ್ತಾರೆಂದಮೇಲೆ ನೀನೇ ಲೋಕದ ನೀತಿಮತ್ತೆಯನ್ನು ಅಳೆ!!!" ಎಂದು, ನಿಷ್ಠುರವಾಗಿ ಮಾತನಾಡಿ, ಅರಮನೆಯಿಂದ ಎದ್ದು ಹೋದಳು

ಅಂದಿನರಾತ್ರಿ ಪಲ್ಲವಿಯದೇ ನರ್ತನಸೇವೆ ನಡೆಯಿತು. ಅವಳು ನರ್ತಿಸಿ, ನರ್ತಿಸಿ ಅರೆರಾತ್ರಿ ಕಳೆದ ಮೇಲೆ ಸುವರ್ಣಾಕ್ಷಿ ದೇವರ ಎದುರು ಬಿದ್ದುಬಿಟ್ಟಳು. ಅವಳ ದೇಹವನ್ನೆತ್ತಿದಾಗ ಅವಳ ಮುಖದಿಂದ ರಕ್ತವು ಬಿಡ್ಡುತ್ತಲ್ಲದೇ ದೇಹದಲ್ಲಿಯ ಪ್ರಾಣಪಕ್ಷಿ ಹಾರಿಹೋಗಿತ್ತು

ಮಾನಧನಳಾದ ಪಲ್ಲವಿ ಸಾಯುವ ಮುನ್ನ, 'ಕಂಚಿಕಬ್ಬೆಯ ರಾಜ್ಯ ಹಾಳಾಗಿ ಹೋಗಲಿ' ಎಂದು ಶಾಪವಿತ್ತು, 'ಕಂಚಿಕಬ್ಬೆಯ ಸೊಗಲನಾಡು ಹಾಳಾಗಿ ಹೋದರೂ ನನ್ನ ನೆನಪು ಚಿರಕಾಲ ಉಳಿಯಲಿ' ಎಂದು ಸುವರ್ಣಾಕ್ಷಿ ದೇವರನ್ನು ಭಕ್ತಿಪೂರ್ವಕವಾಗಿ ಬೇಡಿಕೊಂಡಳು. ಆಗ ಕಂಚಿಕಬ್ಬೆಗೆ ತಾನು ಪಲ್ಲವಿಗೆ ಮಾಡಿದ ಅಪರಾಧದ ಅರಿವಾಯಿತು. ಅವಳಿತ್ತ ಶಾಪವಿಮೋಚನೆಗಾಗಿ ಕಂಚಿಕಬ್ಬೆ ಜೀವನದುದ್ದಕ್ಕೂ ತನ್ನೆಲ್ಲ ಸಂಪತ್ತನ್ನು ದಾನಕ್ಕಾಗಿ ವ್ಯಯಿಸಿ, "ನಿರ್ಮಲಾಂಗಿ, ಪರಹಿತಗುಣಚರಿತೆ, ನಿರ್ಮಲಕೀರ್ತಿದಯಾಪರೆ, ದಾನ, ಧರ್ಮತತ್ಪರಗುಣಯುಕ್ತೆ, ದೇವಗುರುಭಕ್ತೆ" ಎಂಬ ಪ್ರತೀತಿಪಡೆದರೂ ತನ್ನ ರಾಜ್ಯವನ್ನು ಉಳಿಸಲಾಗಲಿಲ್ಲ. ಚಾಲುಕ್ಯ ಎರಡನೆಯ ತೈಲಪನ ಪಾಳೆಯಗಾರನಾದ ಕೇತಿಮಯ್ಯನ ಸಮೃದ್ಧ ಸೊಗಲನಾಡು ಕಾಲನ ದವಡೆಯಲ್ಲಿ ಸಿಲುಕಿ ನುಚ್ಚುನೂರಾಯಿತು! ಪಲ್ಲವಿ ಮಾತ್ರ ಅಮರಳಾಗಿ ಸುವರ್ಣಾಕ್ಷಿ ದೇವರ ಸನ್ನಿಧಿಯಲ್ಲಿಯೇ ನೀರಾಗಿ ಹರಿಯುತ್ತ, ಚಿಕ್ಕ ತಡಸಲಿನ ರೂಪದಿಂದ ಕುಣಿಯುತ್ತ "ತಿಳಿದವರು ಆತ್ಮಗಳಲ್ಲಿ ಭೇದಗಳನ್ನೆಣಿಸುವರೇ ?" ಎಂದು ಕೇಳುವಂತೆ ಧ್ವನಿಗೈಯುತ್ತ ಮಲಾಪಹಾರಿ ನದಿಯನ್ನು ಸೇರುತ್ತಾಳೆ

ಆ ಸುವರ್ಣಾಕ್ಷಿ ದೇವರೇ ವೇಣುಗ್ರಾಮ ಅಥವಾ ಇಂದಿನ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನಲ್ಲಿ ಸೊಗಲಿನ ಸೋಮೇಶ್ವರನಾಗಿ ಸೊಗಲದ ನಿಸರ್ಗರಮ್ಯ ಗುಡ್ಡದಲ್ಲಿ ನಿಂತಿದ್ದಾನೆ. 'ತನ್ನ ನೆನಪು ಅನಂತಕಾಲದ ವರೆಗೂ ಇರಲಿ' ಎಂದು ಬಯಸಿದ ಅವನ ಭಕ್ತೆ ಪಲ್ಲವಿ, ಅವನ ಬದಿಯಲ್ಲಿಯೇ ಜೀವಂತ ಝರಿಯಾಗಿ ಹರಿದು ತನ್ನ ಕಥೆಯನ್ನು ಹಾಡುತ್ತಿರುತ್ತಾಳೆ. ಇಂದು ಸೊಗಲಿನ ಸೋಮೇಶ್ವರ ಗುಡ್ಡದಲ್ಲಿ ಜನವಸತಿಯಿರದಿದ್ದರೂ ಪ್ರತಿವರುಷ ಶಿವರಾತ್ರಿಯಂದು ಶಿವ-ಪಾರ್ವತಿಯರ ಮದುವೆಯ ಉತ್ಸವ ವಿಜೃಂಭಣೆಯಿಂದ ಜರುಗುತ್ತದೆ. "ತಿಳಿದವರು ಆತ್ಮಗಳಲ್ಲಿ ಭೇದಗಳನ್ನೆಣಿಸುವರೆ ?" ಎಂದು ಪಲ್ಲವಿ ಕಂಚಿಕಬ್ಬೆಗೆ ಕೇಳಿದ ಪ್ರಶ್ನೆ ಅಂದಿನಿಂದ ಇಂದಿನ ವರೆಗೂ ಪ್ರಶ್ನೆಯಾಗಿಯೇ ಉಳಿದಿದೆ! ಆ ಅನಂತಪ್ರಶ್ನೆಯ ಉತ್ತರಕ್ಕಾಗಿ ಸೋಮೇಶ್ವರನೂ ಕೂಡ ಜನತೆಯತ್ತ ಮುಖ ಹೊರಳಿಸಿ ನಿಂತಿದ್ದಾನೆ !! ಆ ಪ್ರಶ್ನೆ ಎಂದೆಂದಿಗೂ ಅನಂತಪ್ರಶ್ನೆಯೇ ಎಂದು ಪಲ್ಲವಿ ತನ್ನಲ್ಲಿ ತಾನೇ ಹಾಡುತ್ತ ಹರಿಯುತ್ತಾಳೆ !!!



"ಯಾಕ ಕೂಗಿದೆ ಅಪ್ಪಯ್ಯಾ, ನಮ್ಮೆಲ್ಲರನ."

ಕೊಡೆಯ ವಿಚಾರ

—ರಾ. ಕು.

ರವಿವಾರದ ಸುಖವನ್ನು ಸವಿಯಲು ಪಡಸಾಲೆಯಲ್ಲಿ ಅಂಗತನಾಗಿ ಒರಗಿದಾಗ ಎದುರಿನ ಗೂಟಕ್ಕೆ ಇಳಿಬಿದ್ದ ಛತ್ರಿ ಪಕ್ಕನೆ ನನ್ನ ಕಣ್ಣು ಸೆಳೆಯಿತು. ನಾನು ಧಿಗ್ಗನೆ ಎದ್ದು ಕುಳಿತೆ. ಎಲಾ! ಇದಕ್ಕೇನು ಕೆಲಸ ಇಲ್ಲಿ? ಮಳೆಗಾಲದ ಛತ್ರಾಧಿಪತ್ಯ ಮುಗಿದು ಹೋಯಿತು. ಕೊಡೆಯ ಹಂಗಿಲ್ಲದೆ ಕೈಬೀಸಿಕೊಂಡು ನಡೆಯುವ ಸುಖವಿರುವಾಗ, ಇದನ್ನು ಹೊರಗೆ ತಂದು ಇಟ್ಟವರು ಯಾರು? ಬಹುಶಃ ಬಟ್ಟೆ ಒಣಹಾಕಲೆಂದು ಮನೆಯವರು ತೆಗೆದಿರಬಹುದು. ನಾಯಿಂಗೀಯಿ ಹೊಡೆಯಲು ಹೋಗಿದ್ದರೂ ಇರಬಹುದು. ಛೆ! ಇನ್ನು ಇದನ್ನು ಇಲ್ಲಿ ಬಿಡುವದು ಕ್ಷೇಮವಲ್ಲ. ಹುಡುಗರ ಕೈಗೆ ಸಿಕ್ಕರೆ ಏನು ಗತಿ?

ಮನೆಯವರಿಗೆ ಇದರ ಮೇಲೆ ಪ್ರೀತಿಯಿಲ್ಲ. ಈ ಛತ್ರಿ ನನ್ನ ಕೈಹಿಡಿದು ಎಷ್ಟು ಮಳೆಗಾಲ ಕಳೆಯಿತು! "ಇದಕ್ಕೆ ಪಿಂಚಣಿ ವಯಸ್ಸಾಯಿತು. ಒಂದು ಹೊಸ ಕೊಡೆ ಕೊಳ್ಳುವದು ಈ ಜನ್ಮದಲ್ಲಿ ಆದೀತೆ?" ಎಂದು ಅವರು ಕೇಳುತ್ತ ಬಂದಿದ್ದಾರೆ. "ಕೃಪಣಶಿರೋಮಣಿ" ಎಂಬ ಬಿರುದನ್ನು ನನಗೆ ಎಂದೊ ಗೊತ್ತು ಮಾಡಿದ್ದಾರೆ. ಈ ಕೊಡೆಗೆ ನಾನು ಎಷ್ಟು ವೆಚ್ಚ ಮಾಡಿದ್ದೇನೆ ಎಂಬುದನ್ನು ಅವರೇನು ಬಲ್ಲರು? ಇದನ್ನು ಹಳೆಯ ಕೊಡೆಯೆಂದು ಏಕೆ ಹೀಗಳೆಯುವರೊ ನಾನು ಊಹಿಸಲಾರೆ. ಬೇಕಾದರೆ ನೀವೆ ಬಿಡಿಸಿ ನೋಡಿರಿ. ಇದರ ಯಾವ ಅಂಶ ಹಳೆಯದು? ಹಿಡಿಕೆ, ಕಾಂದುರೆ, ಕೋಲು, ಕಡ್ಡಿ, ಬಟ್ಟೆ, ತುದಿಯ ಅಣಸು—ಎಲ್ಲವೂ ಹೊಚ್ಚ ಹೊಸವು. ಅದರೂ ಕೊಡೆ ಹಳೆಯದೆ. ಛತ್ರಿಕುಮಾರಿಯ ಈ ಚಿರಯೌವನದ ಗುಟ್ಟು ಏನು? ಹೀಗೆ ಕೇಳಿರಿ. ಹೇಳುತ್ತೇನೆ. ಇದು ಗಾಯಮಾಡಿಕೊಂಡು ಬಂದಸಲಕ್ಕೊಮ್ಮೆ ಆಗಿಂದಾಗಲೆ ಚಿಕಿತ್ಸೆ ಮಾಡಿಸಿ, ಅನವಸ್ಥೆಗೀಡಾದ ಅವಯವಗಳನ್ನು ತೆಗೆದುಹಾಕಿ ಹೆಚ್ಚು ಸಶಕ್ತವಾದ ಹಾಗೂ ನವೋನವೋವಾದ ಅವಯವಗಳನ್ನು ಕೂಡಿಸುವುದು ನನ್ನ ಪದ್ಧತಿಯಾಗಿದೆ. ಕರ್ತವ್ಯವೇ ಎನ್ನಿರಿ. ಏಕೆಂದರೆ ಈ ಅಪಘಾತಗಳ ಶ್ರೇಯಸ್ಸು ಬಹುಶಃ ನನಗೇ ಸೇರಿರುತ್ತದೆ. ಛತ್ರಿಯ ಸ್ವಭಾವವೂ ಕೆಲಮಟ್ಟಿಗೆ ಅದಕ್ಕೆ ಕಾರಣವಾಗಿದೆ. ಬಯಲಲ್ಲಿ ಮನುಷ್ಯನ ತಲೆಯ ಮೇಲೆ ಮೆರೆದಾಡುವುದಷ್ಟೆ ತನ್ನ ಕೆಲಸವೆಂದು ಅದು ತಿಳಿದಿಲ್ಲ. ಮನೆಯ ಒಳಗೂ ಅಷ್ಟಿಷ್ಟು ಸೇವೆ ಮಾಡಲೆಂದು ಹಾತೊರೆದು, ಮೂಲೆಯಲ್ಲಿಯೊ, ಗೂಟದ ಮೇಲೊ ನಿಂತು, ಅದು ನಮ್ಮ ಕೈಯನ್ನೆ ನೋಡುತ್ತಿರುತ್ತದೆ. ಮನೆಯಿಂದ ಮೇಲೆ ನಮಗೆ ಯಾವ ಹೊತ್ತಿನಲ್ಲಿ ಎಂತಹ ಕೆಲಸ ಬಿದ್ದೀತೆಂದು ಹೇಳಲಾಗದು. ಅವಸರ ಪ್ರಸಂಗದಲ್ಲಿ ನಮ್ಮ ಕೈಗೆ ಸುಲಭವಾಗಿ ಸಿಗತಕ್ಕದ್ದು ಈ ಕೊಡೆಯೆಂಬ ಪದಾರ್ಥವೆ. ಅದಕ್ಕೆ ಹದವಾದ ಹಿಡಿಕೆಯಿರುವುದು ಒಂದು ಬಲವಾದ ಕಾರಣ. ಅಂದಗೇಡಿಯಾದ ಅದರ ಬಣ್ಣ ನೋಡಿದರೆ, ಅದನ್ನು ಯಾವುದಕ್ಕೆ ಬಳಸಿದರೂ ತಪ್ಪಲ್ಲ ಎಂದೆನಿಸುತ್ತದೆ. ಛತ್ರಿಯ ಮುಖಕ್ಕೆ ಹೀಗೆ ಮಸಿ ಬಳಿದವರು ಯಾರು? ರಾಜ–ಮಹಾರಾಜರ ಛತ್ರಗಳು ಸ್ವಚ್ಛ ಶ್ವೇತವಾಗಿದ್ದವೆಂದು ಕೇಳಿದ್ದೇವೆ. ಕೊಡೆಯೆಂಬುದು ಆ ಕಾಲದಲ್ಲಿ ವೈಭವದ ಹಾಗು ಮರ್ಯಾದೆಯ ಒಂದು ವಸ್ತುವಾಗಿತ್ತೆ ಹೊರತು, ಈಗಿನಂತೆ ಮಳೆಯಲ್ಲಿ ತಪತಪ ತೋಯಿಸಿಕೊಂಡು ತಿರುಗಾಡುವ ಮಾನಗೇಡಿಯಾಗಿದ್ದಿಲ್ಲ. ಆ ಅರಸರೂ ಕೂಡ ಗೌರವದಿಂದ ಅದನ್ನು ಹಿಗ್ಗಿಸಿ, ತಮ್ಮ ತಲೆಯ ಮೇಲೆ ಹಿಡಿಸಿಕೊಳ್ಳುತ್ತಿದ್ದರು. ನಮ್ಮಂತೆ ಮಡಿಕೆಮಾಡಿ ಬಗಲಲ್ಲಿ ತುರುಕಿ ಹಿಡಿದೊ, ಮುಂಗೈಗೆ ಇಳಿಬಿಟ್ಟೊ, ನೆಲಕ್ಕೆ ತಿವಿತಿವಿದೊ, ಅದನ್ನು ಯಃಕಶ್ಚಿತ್ತಾಗಿ ನಡೆಸಿಕೊಳ್ಳುತ್ತಿದ್ದಿಲ್ಲ. ಈ ವ್ಯತ್ಯಾಸಕ್ಕೆ ಕಾರಣವೇನು? ಆ ದಿನಮಾನದಲ್ಲಿ ದೇಶಕ್ಕೆ ಒಬ್ಬನೇ ದೊರೆ, ಮತ್ತು ಅವನಿಗೆ ಅದೊಂದೆ ಕೊಡೆ–ಹೀಗೆ ನಿಯಮವಿತ್ತು. ಆದರೆ ಕಾಲ ಬದಲಾಗಿ ಹೋಯಿತು. ಕೊಡೆಗಳು ಮಿತಿಮೀರಿ ಬೆಳೆದುವು. ಅರಸರೆಂಬವರು ಉಳಿಯದಾದರು. ನಾವು ಛತ್ರಾಧಿಪತಿಗಳಾದರೂ, ಆ ಯೋಗ್ಯತೆಯವರಲ್ಲವೆಂದು ಅಥವಾ ಆ ಯೋಗ್ಯತೆಯಿದ್ದರೂ ಈಗ ಅರಸರ ಕಾಲವಲ್ಲವೆಂದು ನಮಗೆ ಸದಾ ಎಚ್ಚರ ಕೊಡುವ ಉದ್ದೇಶದಿಂದಲೆ ಛತ್ರದ ಬಣ್ಣವನ್ನು ತದ್ವಿರುದ್ಧವಾಗಿ ಮಾರ್ಪಡಿಸಿರಬೇಕು.

ಇದಕ್ಕೆ ಬೇರೆ ಬಣ್ಣ ಕೊಟ್ಟರೆ ಆಗುತ್ತಿದ್ದಿಲ್ಲವೆ? ಅಚ್ಚ ಕಪ್ಪೇ ಏಕೆ ಬೇಕಾಗಿತ್ತು ಎಂಬುದಕ್ಕೆ ಶಾಸ್ತ್ರೀಯ ವಿವರಣೆಗಳೇನೊ ಉಂಟು. ಆದರೆ ಛತ್ರಿಯ ಸ್ವಭಾವವನ್ನು ನೋಡಿಯೆ ಅದಕ್ಕೆ ಈ ಬಣ್ಣ ಕುಡಿಸಿರಬೇಕೆಂದು ತೋರುತ್ತದೆ. ಛತ್ರಿ ಒಮ್ಮೊಮ್ಮೆ ಅನಿವಾರ್ಯವಾದರೂ, ಅನೇಕಸಲ ಅದೊಂದು ಪೀಡೆಯೆ ಆಗಿರುತ್ತದೆ. ಈ ಅಸಹ್ಯವಸ್ತುವನ್ನು ಹೊತ್ತುಕೊಂಡು ಬೀದಿಬೀದಿ ಅಲೆಯುವದು ಯಾರಿಗೂ ಪ್ರಿಯವೆನಿಸಿಲ್ಲ—ಅದು ಕೂಡ, ಕೊಡೆಯನ್ನು ತೆರೆದು ಹಿಡಿವ ಪ್ರಸಕ್ತಿಯೆ ಇಲ್ಲದಿದ್ದಾಗ. ಮಳೆ ಬಂದಾಗ ಕೊಡೆ ಹಿಡಿಯಲೇಬೇಕು. ಆದರೆ ಮಳೆ ನಿಂತು ಹೋದ ಮೇಲೆ, ತೋದುತಪ್ಪಡಿಯಾದ ಈ ಸಂಗಾತಿಯನ್ನು ಸಂಗಡ ಕರೆದುಕೊಂಡು ತಿರುಗಾಡುವದು ಏನು ಸುಖ? ಬಗಲಲ್ಲಿ ಎತ್ತಿಕೊಳ್ಳುವಂತಿಲ್ಲ. ಮುಷ್ಟಿ ನಡುವೆ ಹಿಡಿದೇನೆಂದರೆ ಕೈಗೆ ಸೇಡು. ಇಳಿಬಿಟ್ಟರೆ, ಉಟ್ಟ ಬಟ್ಟೆ ತೋಯದಂತೆ ಅಂತರಿಸಿ ಹಿಡಿಯಬೇಕು. ದರದರ ಎಳೆಯುತ್ತ ಹೋಗುವದೆ? ಸುಮ್ಮನೆ ತೆರೆದೇ ಹಿಡಿದುಕೊಂಡು ಹೋಗುವದು ಹಗುರೆನಿಸುತ್ತದೆ. ಹೀಗೆ ಮಾಡಿ ಎಲ್ಲರ ಕಣ್ಣನ್ನು ನಮ್ಮೆಡೆಗೇ ಎಳೆದುಕೊಳ್ಳುವದು ಹೆಮ್ಮೆಯ ಮಾತಾಗುವದಿಲ್ಲ. ಮಳೆ ಬಾರದಾಗಂತೂ ಈ ಹೊರೆಯನ್ನು ಏಕೆ ತಂದೆವೊ ಎಂದು ಮರುಗುತ್ತೇವೆ. ಏನು ಮಾಡೋಣ? ಮೋಡ ನೋಡಿ ಕೊಡೆ ತರುತ್ತೇವೆ. ಕೊಡೆ ನೋಡಿ ಮಳೆ ತಡೆಯುತ್ತದೆ. ಕೊಡೆ ಬಿಟ್ಟು ಬಂದೆವೊ, ತಕ್ಕೊ ಹೊಡೆಮಳೆ! ಸೃಷ್ಟಿ ನಮ್ಮನ್ನು ನೋಡಿ ನಗುತ್ತಿರುವಂತೆ ಕಾಣುತ್ತದೆ.

ನಾವು ಕೊಡೆ ತಂದೆವು, ಮಳೆಯೂ ಬಂತು ಎನ್ನುವ. ಆಗಲಾದರೂ ಏನು ಸೌಖ್ಯ? ವರುಣದೇವನೊಡನೆ ಯುದ್ಧಕ್ಕೆ ನಿಂತಾಗ ಈ ಕರಿ ಢಾಲು ಏನೂ ಉಪಯೋಗವಿಲ್ಲ. ಕೊಡೆಯೆಂಬುದನ್ನು ಕಂಡು ಹಿಡಿದವನಿಗೆ ತಲೆಯೊಂದೆ ಇದ್ದು ಮೈಯಿರಲಿಲ್ಲವೆ? ಅಥವಾ ಅವನು ಕುಬ್ಜವರ್ಗದ ಮೂಲಪುರುಷನಾಗಿದ್ದನೆ? ಮೈ ಸಡಿಲು ಬಿಟ್ಟು ಬೆಳೆದ ಮಹಾಶಯರಿಗೆ ಈ ಛತ್ರಾಧಿಪತ್ಯ ಸಾಲದಾಗುತ್ತದೆ. ಉನ್ನತವ್ಯಕ್ತಿಗೆ ಅಲ್ಪರ ಪ್ರಯೋಜನ ಏನಾದೀತು? ಕೊಡೆಯಿಂದ ನಮ್ಮ ತಲೆ ಮಾತ್ರ ಬಚಾವಾಗುವದು. ಬಹಳವಾದರೆ

ತೆಗಲು, ಬೆನ್ನಿನ ಮೇಲ್ಭಾಗವೊಂದಿಷ್ಟು ತೋಯದಿರಬಹುದು. ಇತರ ಅವಯವಗಳೆಲ್ಲ ಅರಕ್ಷಿತವಾಗಿ ವೃಷ್ಟಿಪ್ರಹಾರಕ್ಕೆ ನಿಶ್ಚಿತ ಗುರಿಗಳಾಗುತ್ತವೆ. ಕೆಳಗಿದ್ದದ್ದೆ ಅವುಗಳ ತಪ್ಪೆ? ಕೆಳಗಿನವರನ್ನು ಕಡೆಗಣಿಸುವದು ತಲೆಯಿದ್ದವನಿಗೆ ಶೋಭೆಯಲ್ಲ. ಕೊಡೆ ಶೋಧವಾದ ಕಾಲದಲ್ಲಿ ಈ ಅನಾಹುತದ ಕಲ್ಪನೆಯೆ ಬಂದಿರಲಾರದು. ಹಿಂದಿನ ಕಾಲದಲ್ಲಿ ಮನುಷ್ಯರಂತೆ ಮಳೆಯೂ ಸರಳವಾಗಿರಬೇಕು, ಆಕಾಶದಿಂದ ಭೂಮಿಗೆ ಬರಬೇಕಾದರೆ ಲಂಬವಾಗಿರುವದೆ ತೀರ ಸಮೀಪದ ಹಾದಿ ಎಂಬ ತತ್ತ್ವ ಮಳೆಗೆ,(ಕನಿಷ್ಟ ಪಕ್ಷ, ಅದನ್ನು ಕಳಿಸುತ್ತಿದ್ದ ಇಂದ್ರದೇವನಿಗೆ) ಚೆನ್ನಾಗಿ ತಿಳಿದಿತ್ತು. ಆದ್ದರಿಂದ ಕೊಡೆ ಆಳುವ ಸೀಮೆ ಸುರಕ್ಷಿತವಾಗಿರುತ್ತಿತ್ತು. ಆದರೆ ಕಾಲ ಕೆಟ್ಟುಹೋಯಿತು. ಮನುಷ್ಯನು ಅಧಿಕಪ್ರಸಂಗಿಯಾದನು. ದೇವತೆಗಳನ್ನು ನಂಬಿಕೊಂಡು ಪ್ರಾರ್ಥಿಸುತ್ತಾ ಕುಳಿತುಕೊಳ್ಳದೆ, ಪ್ರಕೃತಿಯ ಅಂತರಂಗದಲ್ಲಿ ಇಣುಕಿಣುಕಿ ನೋಡತೊಡಗಿದನು. ನಿಸರ್ಗಶಕ್ತಿಗಳನ್ನು ಹಿಡಿದು ದುಡಿಸಿಕೊಳ್ಳುತ್ತಿದ್ದೇನೆ ಎಂದು ಜಂಬಕೊಚ್ಚಲು ಆರಂಭಿಸಿದನು. ಸೃಷ್ಟಿಗೆ ಸಿಟ್ಟು ಬಂತು. "ಬಾ ಮಗನೆ, ಮಾಡುತ್ತೇನೆ" ಎಂದು ತನ್ನ ಗತಿಗೆ ಒಂದು ತಿರುವು ಕೊಟ್ಟಿತು. ಅಂದಿನಿಂದ ಮಳೆ ಬೀಳುವಾಗ ಅನಿಶ್ಚಿತವಾದ ಕೋನ ಮಾಡಿಕೊಂಡೆ ಬೀಳತೊಡಗಿದೆ.

ಗೊಂಗಡಿಯ ಕೊಪ್ಪೆ ಮಾಡಿಕೊಂಡ ಹಳ್ಳಿಗನನ್ನು ಕಂಡು ನಾನು ಎಷ್ಟೋ ಸಲ ಅಸೂಯೆಪಟ್ಟಿದ್ದೇನೆ. ಎತ್ತ ಬಂದತ್ತ ಬೀಸಿ ಹೊಡೆವ ಮಳೆಯಲ್ಲಿ ಸಿಕ್ಕಾಗ, ಕೊಡೆ ಇದ್ದೂ ಏನೂ ಫಲ? ಕೊಡೆಯನ್ನು ಹೊರಳಿಸಿ ಹೊರಳಿಸಿ ಹಿಡಿದಂತೆಲ್ಲ ಅದು ಮತ್ತು ನಾವು ನುಗ್ಗಾದೇವೆ ಹೊರತು, ರಕ್ಷಣೆಯೆಂಬುದು ಹೆಸರಿಗೂ ಉಳಿಯುವದಿಲ್ಲ. ಗಾಳಿಯ ದಿಕ್ಕನ್ನೂ ಮಳೆಯ ಕೋನವನ್ನೂ ಅಳೆದು ನೋಡಿ ಢಾಲು ತಿರುಗಿಸುವ ಅಭ್ಯಾಸದಲ್ಲಿ ಮೈಯನ್ನೆಲ್ಲ ಮಳೆಗೆ ಈಡು



ಮಾಡುವುದು ನಮ್ಮ ಗತಿಯಾಗುತ್ತದೆ. ಮಳೆಗೆ ಸಿಕ್ಕಾಗ ಮನುಷ್ಯನು (ತಲೆಮೇಲೆ ಕೊಡೆಯಿದ್ದರೂ) ದನದಂತೆ ಬೆನ್ನು ಬಾಗಿಸಿ, ತಲೆ ಕೆಳಗೆ ಹಾಕಿಕೊಂಡೆ ನಡೆಯುತ್ತಾನೆ. ಆಗ ಕೊಡೆಯೂ ಬಾಗಿ, ಅವನ ತಲೆಯ ಬಳಿ ಹೋಗುತ್ತದೆ. ಮೈಯ ಹಿಂಭಾಗವೆಲ್ಲ ಅರಕ್ಷಿತ. ಮನುಷ್ಯನಿಗೆ ಮುಂದಿನದೊಂದೆ ಗಮನ. ಹಿಂದೆ ಏನಾದರೇನು? ತಲೆ ಒಂದು ಉಳಿದರೆ ಸಾಕು.

ಇಂತಹ ಪ್ರಸಂಗಕ್ಕೆ ಕೊಡೆ ತಕ್ಕುದಲ್ಲ. ಅದು ಕುರೂಪಿಯೇನೊ, ನಿಜ. ಆದರೆ ಬಹು ಕೋಮಲವಾದದ್ದು. ಸೃಷ್ಟಿದೇವತೆ ಉಸಿರು ಬಿಗಿಹಿಡಿದುಕೊಂಡು ಕುಳಿತಾಗ ಮಾತ್ರ, ಛತ್ರಕುಮಾರಿ ಸೆರಗು ಬಿಚ್ಚಿ ಮೆರೆದಾಡಬಲ್ಲಳು. ಅವಳನ್ನು ಎರೆಯಲು ಅಡ್ಡಿಯಿಲ್ಲ. ಗಾಳಿಗೆ ಮಾತ್ರ ಒಡ್ಡಬಾರದು. ಅವಳ ತಿವಿಯೊಳಗೆ ಗಾಳಿ ಹೊಕ್ಕಿತೊ ನೀವು ಕೆಟ್ಟಿರಿ. ಎದುರು ಗಾಳಿಯಿದ್ದರೆ ನಿಮ್ಮ ಕಡೆಗೆ ಬರುವವರು ಜೋಕೆ! "ಕೊಡೆ ಬರುತ್ತಲಿದೆ, ಎಚ್ಚರಿಕೆ!" ಎಂದು ಒಂದು ಹಲಗೆ ಬರೆಯಿಸಿ ಕೊಡೆಗೆ ಕಟ್ಟಿಸಬೇಕೊ ಏನೊ! ಹಾಗೆ ಮಾಡಿಯೂ ಉಪಯೋಗವಿಲ್ಲ. ಏಕೆಂದರೆ ಅದನ್ನು ನೋಡುವವರು ಯಾರು? ಮುಖ ಮರೆ ಮಾಡಿಕೊಂಡು ಕೊಡೆಯಿಂದ ತಿವಿಯುತ್ತ ಬರುವವರೆ ಎಲ್ಲರೂ. ಬುರಖಾದಲ್ಲಿ ಎರಡು ಕಣ್ಣು ಬಿಟ್ಟಂತೆ, ಅಥವಾ ಮೋಟಾರು ಕಾರಿಗೆ ಎದುರಿನ ರಸ್ತೆ ಕಾಣಲು ಕಾಜು ಇಟ್ಟಂತೆ, ಕೊಡೆಗಳಿಗೆ ಒಂದು ಪಾರದರ್ಶಕ ಭಾಗವನ್ನು ಕೂಡಿಸುವದು ವಿಹಿತವೆಂದು ಕಾಣುತ್ತದೆ. ಬಯಲಲ್ಲಿ ಹೊರಟಾಗ ಬೆನ್ನಿಗೆ ಗಾಳಿ ಬಿಟ್ಟಾಗಲಂತೂ ಕೊಡೆ ಹಿಡಿದವನ ಸ್ವಾತಂತ್ರ್ಯ ಎಷ್ಟೋ ಪಾಲು ನಷ್ಟವಾಗುತ್ತದೆ. ಗಾಳಿ ಬಲವಾದಾಗ ಕೊಡೆ ನಮ್ಮ ಬೆನ್ನನ್ನು ಹತ್ತೆಹತ್ತೆಯಾಗಿ ಆಲಿಂಗಿಸಿ ನಿಲ್ಲುತ್ತದೆ. ನಿಲ್ಲುತ್ತದೆಯೆಂಬುದಕ್ಕಿಂತ ನಮ್ಮನ್ನು ನೂಕುತ್ತದೆಯೆಂಬುದೆ ಸಮರ್ಪಕ.

ಈ ಸಂದರ್ಭಗಳಲ್ಲಿ ಹೆಜ್ಜೆಯ ಗತಿಯನ್ನು ನಿಯಂತ್ರಿಸಿ, ನಮ್ಮ ತೂಕ ಹಿಡಿದುಕೊಂಡು ಹೋಗುವದು ಸಾಧ್ಯವಾದರೂ ಸ್ಪೃಹಣೀಯವಲ್ಲ. ಇಂಗ್ಲೀಷರು ತೊಡಿಸಿಹೋದ ಲಗಳಜಣ್ಣ ನಮ್ಮದೇಶಕ್ಕೆ ಒಳ್ಳೆಯದಲ್ಲವೆಂಬುದನ್ನು ಪ್ರತಿಯೊಂದು ಮಳೆಗಾಲದಲ್ಲಿಯೂ ನಾನು ಕಂಡುಕೊಳ್ಳುತ್ತೇವೆ. ಧೋತ್ರ ಧರಿಸಿದವನು ಎಂಥ ಪುಣ್ಯವಂತ! ಕೆಲವರು ಏರುಗಚ್ಚೆ ಹಾಕಿಕೊಂಡೇ ಬೀದಿಗಿಳಿಯುತ್ತಾರೆ. ರಸ್ತೆಗಳಲ್ಲಿ ಆಗಾಗ ಹನುಮಂತನ ಕೆಲಸ ಮಾಡಬೇಕಾಗುವದರಿಂದ ಅದು ಸೂಕ್ತವೆನಿಸಿದರೂ, ದರ್ಶನೀಯವಾಗುವದಿಲ್ಲ. ಹೀಗಿರುವದರಿಂದ, ಬಲದ ಕೈಯನ್ನು ಕೊಡೆಗೆ ಮೀಸಲಾಗಿಟ್ಟು, ಎಡಗೈಯಿಂದ ಧೋತ್ರವನ್ನು ಸಾಧ್ಯವಿದ್ದಷ್ಟು, ಸಾಧುವೆಂಬಷ್ಟು, ಎತ್ತಿ ಹಿಡಿದುಕೊಳ್ಳುವದೇ ಸಂಪ್ರದಾಯ. ಆದರೆ ಈ ಒಕ್ಕೈಸೇವೆಯನ್ನು ಛತ್ರಿಗೆ ಮೆಚ್ಚುವಂತೆ ತೋರುವದಿಲ್ಲ. ನಮ್ಮನ್ನು ಶಿಕ್ಷಿಸಲು ಅದು ಸಮಯ ನೋಡುತ್ತಿರುತ್ತದೆ. ಅಸಾವಧಾನದ ಒಂದು ಕ್ಷಣದಲ್ಲಿ ನಮ್ಮ ಮುಷ್ಟಿಯ ಬಿಗಿತ ಸ್ವಲ್ಪ ಸಡಿಲಿದರೆ ಸಾಕು. ಅದು ಕೊಸರಿಕೊಂಡು ಗಾಳಿಗುಂಟ ತೇಲಿ ಹೋಗಲು ಇಲ್ಲವೆ ರಸ್ತೆಗುಂಟ ಕಥಕ್ಕಳಿ ಕುಣಿಯಲು ಹವಣಿಸುತ್ತದೆ. ತಲೆ ಕೊಡಹಿ ಅದು ಕೊಸರಿಕೊಂಡಾಗ ಅಡ್ಡಬರಿಸಿ ನಾವು ಹಿಡಿದುಕೊಳ್ಳಹೋದರೆ ಶೋಚನೀಯವಾದ ಸ್ಥಿತಿ ಸಂಪ್ರಾಪ್ತವಾಗುವದೇ ಹೆಚ್ಚು. ಊರ್ವಶಿ ಊರ್ಧ್ವಕ್ಕೆ ಹೊರಟು ನಿಂತಾಗ ಪುರೂರವನು ಅವಳ ಸೆರಗು ಹಿಡಿದು ನಿಲ್ಲಿಸುವ ಯತ್ನ ಮಾಡುತ್ತಿರುವ ಚಿತ್ರ ಕಣ್ಣಿಗೆ ಕಟ್ಟುತ್ತದೆ. ಕಾಳಿದಾಸನು ಕನಿಕರದಿಂದ ಅವಳನ್ನು ಮರಳಿ ಕರೆತಂದು ಆ ರಾಜನಿಗೆ ಒಪ್ಪಿಸಿದನೆಂದು ನಾವು ಸಂತೋಷ ಪಡುತ್ತೇವೆ. ನಾವು ಪುರೂರವ ಅಲ್ಲ, ಕೊಡೆ ಊರ್ವಶಿಯೂ ಅಲ್ಲ. ಕೈಬಿಟ್ಟು ಹೋದ ಕೊಡೆಯನ್ನು ತಿರುಗಿ ತಂದು ಒಪ್ಪಿಸುವ ಕರುಣಾಳು ಯಾರು? ಮೈಯಲ್ಲಿ ಗಾಳಿ ತುಂಬಿ ಹಾರಿ ಹೋದ ಛತ್ರಿ ಸಜೀವವಾಗಿ ಮರಳಿ ದೊರೆವ ಸಂಭವವೂ ಇಲ್ಲ. ಸೀದಾ ಸ್ವರ್ಗಕ್ಕೆ ಹೊರಟು ನಿಂತ ಈ ಛಲವಾದಿ ಛತ್ರಿಯನ್ನು ತರುಬಿ ಹಿಡಿದು ಉಳಿಸಿಕೊಳ್ಳುತ್ತೇನೆಂಬುದು ಎಂಥಹ ಮಾತು! ಎಲ್ಲಾದರೂ ಇರು, ಎಂತಾದರೂ ಇರು ಎಂದು



ಕಣ್ಣು ಮುಚ್ಚಿ ಬಿಟ್ಟು ಬಿಡುವದೇ ಸರಿ. ಬಿಡದೇ ಹೋದರೆ ಅದಕ್ಕೆ ಧನುರ್ವಾತ ಸೇರುತ್ತದೆ. ಒಡಲೆಲ್ಲ ಹೊರಮರಳಿ ಸೆಟೆದು ನಿಲ್ಲುತ್ತದೆ. ಫಕ್ಕಡಿ ಮುರಿದು ಹೋದೀತೆಂಬ ಖಬರು ಕೂಡಾ ಅದಕ್ಕಿದ್ದಂತಿಲ್ಲ. ಈ ಡೊಂಬರಾಟವನ್ನು ಬಣ್ಣಿಸುವದಕ್ಕಿಂತ, ಅದನ್ನು ಮಾಡಿನೋಡಿರೆಂದು ಹೇಳುವದೇ ಲೇಸು. ಮೇಲು ಹೊದಿಕೆ ಸ್ಥಾನಭ್ರಷ್ಟವಾಗಿ ವಿದ್ಯುಛ್ರಾಂತಿಗೆ, ಇಳಿಬಿದ್ದ ಕೊಗಲಬಾವಲಿಯಂತೆ ನಿರ್ವಿಣ್ಣವಾಗಿ ನೇತಾಡತೊಡಗಿತೆಂದರೆ, ಅದರ ಋಣ ಹರಿಯಿತೆಂದು ತಿಳಿಯಬೇಕು. ತುಂಬಿ ಹರಿವ ಒಂದು ಕಾಲುವೆಯಲ್ಲಿ ಅದರ ಅಂತ್ಯ ಸಂಸ್ಕಾರ ಮಾಡಿ, ಮಳೆಯಲ್ಲಿ ಸ್ನಾನ ಮಾಡುತ್ತ ನಾವು ಮನೆಗೆ ಮರಳಬೇಕು. ಇನ್ನೇನು ಮಾಡುವದಿದೆ?

ಕೋಮಲವಾದ ವಸ್ತುವನ್ನು ಈ ವಿಪನ್ನಾವಸ್ಥೆಗೆ ಗುರಿ ಮಾಡಿದವರು ನಾವೇ ಎಂಬ ಪ್ರಜ್ಞೆ ನಮಗಿದೆ. ಆದರೆ ಮಳೆಗೆಂದು ಸಿದ್ಧವಾದ ಈ ಸಾಧನ ಇಷ್ಟು ಅಸಮರ್ಥಕವಾಗಿ ಉಳಿದಿರುವದು ಮನುಷ್ಯನ ಬುದ್ಧಿಗೆ ಒಂದು ಕಲಂಕವಲ್ಲವೆ? ಛೆ:- ಇದು ಮಳೆಯೊಡನೆ ಹೋರಾಡಲು ಹುಟ್ಟಿದ್ದೇ ಅಲ್ಲ. ಛತ್ರವೆಂಬುದು ಮೂಲತಃ ಒಂದು ಅಲಂಕಾರವಾಗಿತ್ತು. ಆ ಮೇಲೆ ಆತಪತ್ರವಾಯಿತು. ಮುಂದೆ ಏನಾಯಿತು? ಮುಖಕ್ಕೆ ಮಸಿ ಬಳಿದುಕೊಂಡು ಮಂಗಳಸ್ನಾನಕ್ಕೆ ಹೊರಟಿತು. ತಾನೊಂದೇ ಅಲ್ಲ ತನ್ನನ್ನು ಹಿಡಿದವರಿಗೂ ಸ್ನಾನ ಮಾಡಿಸತೊಡಗಿತು. ಬುದ್ಧಿಗೇಡಿ ಮುಖಂಡನಂತೆ ತನಗೆ ನೀಗದ ಕೆಲಸ ಕೈಕೊಂಡು ನಂಬಿದವರನ್ನು ಗೋಳಿಗೀಡು ಮಾಡುವ ಈ ಛತ್ರಿ ಉತ್ಕ್ರಾಂತಿಯ ಶ್ರೇಣಿಯಲ್ಲಿ ತಪ್ಪಿಸಿಕೊಂಡು ಉಳಿದ ಹಳೆಯ ಕೂಸೆಂದು ಕಾಣುತ್ತದೆ. ಇದನ್ನು ಬಿಸಿಲಿಗೆ ಮಾತ್ರ ಹಿಡಿದು, ಹಗುರಾಗಿ ಮಡಿಚಿ ಇಡತಕ್ಕದ್ದು. ಮಳೆಗಾಲದಲ್ಲಿ ನಮ್ಮ ಮೈಯನ್ನಾಗಲಿ ಮಾನವನ್ನಾಗಲಿ ಇದು ಉಳಿಸೀತೆಂಬ ನೆಚ್ಚಿಗೆಯಿಲ್ಲ.

ಹೊರಗೆ ಹೋದಾಗ ಆಯತ ಹೊತ್ತಿನಲ್ಲಿ ನಮ್ಮನ್ನು ಪೇಚಿಗೆ ಈಡುಮಾಡುವದೊಂದೇ ಅಲ್ಲದೆ, ಅವಿವೇಕದಿಂದ ಆತ್ಮಹತ್ಯೆಗೂ ಇದು ಎಳೆಸುತ್ತದೆ ಎಂಬ ಸಿಟ್ಟಿನಿಂದಲೋ ಏನೋ ನಾವು ಇದನ್ನು ಮನೆಯಲ್ಲಿ ಮನಬಂದಂತೆ ಬಳಸಿ ಅವಮಾನಗೊಳಿಸುತ್ತಿರಬೇಕು. ಛತ್ರಿಯು ಕೂಡ ಅಷ್ಟಿಷ್ಟು ಅಧಿಕಪ್ರಸಂಗ ಮಾಡಲು ಆತುರವಾಗಿರುತ್ತದೆ ಎಂಬ ಸಂಶಯ ನನಗೆ ಆಗಾಗ ಬಂದಿದೆ. ಆದರೆ ನಮಗೆ ಸೇರಬೇಕಾದ ಶ್ರೇಯಸ್ಸನ್ನು ಕೊಡೆಗೆ ಬಿಟ್ಟುಕೊಡಲು ನಾನು ಸಿದ್ಧನಿಲ್ಲ. ಏಕೆಂದರೆ ಮನೆಯಲ್ಲಿ ನೆರವೇರಿಸುವ ಚಿಕ್ಕ ಪುಟ್ಟ ಅಪಘಾತಗಳಿಗೆ ನಾವು ಕೊಡೆಯನ್ನು ಮಾತ್ರ ಉಪಯೋಗಿಸುವದಿಲ್ಲ. ಈ ಅನ್ಯಾಯಗಳು ನಮಗೆ ಇಷ್ಟವಲ್ಲ ಆದರೆ ಏನು ಮಾಡೋಣ? ಅವಿವೇಕ ಹಾಗೂ ಅಸಾವಧಾನ ಈ ಎರಡು ಗುಪ್ತ ಶತ್ರುಗಳು ಸದಾಕಾಲ ಜಪ್ಪಿಸಿಕೊಂಡು ಕುಳಿತು, ನಮ್ಮನ್ನು ಅರಿಯಲು ಸಮಯ ನೋಡುತ್ತಿರುತ್ತವೆ. ನಾವು ಸಿಕ್ಕು ಬೀಳುತ್ತೇವೆ. ಹೊರಗೆ ಹೊರಟವೆಂದರೆ ಸಾಕು, ನಾವು ಮೈಯೆಲ್ಲ ಕಣ್ಣಾಗಿ ಮಾದರಿ ವ್ಯಕ್ತಿಗಳಾಗುವ ಹವಣಿಕೆಯಲ್ಲಿ ಮೈನರಗಳನ್ನೂ ಮೆದುಳಿನ ಮಡಿಕೆಗಳನ್ನೂ ಬಿಗಿದುಬಿಗಿದು ಸಂಪೂರ್ಣ ಸೋತು ಹೋಗಿ ಕಣ್ಣು ಮುಚ್ಚಿ ಕಾಲು ಚಾಚಲೆಂದೇ ಮನೆಗೆ ಬರುತ್ತೇವೆ. ಮನೆಯೆಂಬುದು ಕಣ್ಣು ಮುಚ್ಚಲೆಂದೇ ಮಾಡಿದ ಜಾಗ. ಆದರೆ ಆ ಜಾಗದಲ್ಲಿಯೂ ನಮ್ಮನ್ನು ಕೆಲಸ ಕರೆಯುತ್ತದೆ. ಅಷ್ಟಿಷ್ಟು ಮಾಡುತ್ತೇವೆ. ಅವಾಂತರಗಳು ಅನಾಯಾಸವಾಗಿ ನಡೆದು ಹೋಗುತ್ತವೆ. ಕೊಡೆಯನ್ನು ಏತಕ್ಕೆ ಮಾಡಲಾಗಿದೆಯೆಂಬುದು ನಮಗೆ ಮರೆತು ಹೋಗುತ್ತದೆ. ಸದಾಕಾಲ ಎಚ್ಚರವಿರುವದು ಪರಮೇಶ್ವರನಿಗೂ ಸಾಧ್ಯವಾಗಿಲ್ಲ ಎಂದ ಮೇಲೆ ನಮ್ಮ ಪಾಡು ಏನು.?

ಸಾಮಾನ್ಯ ಮನುಷ್ಯನು ಶೋಧ ಮಾಡುವುದಿಲ್ಲ. ಹೆರವರು ಮಾಡಿಟ್ಟ ಶೋಧಗಳಿಗೆ ಅನಿರೀಕ್ಷಿತವಾದ ಉಪಯೋಗಗಳನ್ನು ಮಾತ್ರ ಕಂಡುಹಿಡಿಯುತ್ತಾನೆ. ಅವನು ಯಾವುದನ್ನು ಏತಕ್ಕೆ ಬಳಸಿಕೊಂಡಾನೆಂದು ಹೇಳಲಾಗದು. ಉದಾಹರಣೆಗೆ ಕೊಡೆಯನ್ನೇ ನೋಡಿರಿ. ಅದರಷ್ಟು ಸರ್ವೋಪಯೋಗಿಯಾದ ಸಾಧನ ಮತ್ತೊಂದು ಇಲ್ಲವೇನೊ ಎಂಬಂತೆ ಅದನ್ನು ದುಡಿಸಿಕೊಳ್ಳಲಾಗುತ್ತದೆ. ಕೊಡೆಗೊಂದು ಕೋಲಿದೆ; ತುದಿಗೊಂದು ಹಿಡಿಯಿದೆ; ಮೇಲೊಂದು ಹರವಾದ ಬಟ್ಟೆಯ ಡುಬರಿ ಇದೆ. ಆದುದರಿಂದ ಕೋಲಿನ, ಕೊಕ್ಕೆಯ, ಬಟ್ಟೆಯ ಹಾಗು ತೆಳ್ಳನೆಯ ಬುಟ್ಟಿಯ ಎಲ್ಲ ಕೆಲಸಗಳಿಗೂ ಅದು ಅನುಕೂಲವೆಂದು ಕಾಣುತ್ತದೆ. ಬೀದಿಯಲ್ಲಿ ಹೋಗುವಾಗ, ಪೀಡಾ ವ್ಯಕ್ತಿಗಳನ್ನು ತಪ್ಪಿಸಲೂ, ಮುಖ ಮರೆಸಿಕೊಳ್ಳಲೂ ಕೊಡೆಯಂತಹ ಸಾಧನ ಮತ್ತೊಂದು ಯಾವುದು? ಬಯಲಲ್ಲಿ ನಡೆವ ಸಾರ್ವಜನಿಕ ಸಭೆ-ಸಮಾರಂಭಗಳಲ್ಲಿ ಜನರು ನಿಮ್ಮ ಪಾಲಿಗೆ ಬರಿ ನೆಲವನ್ನೆ ಕಾಯ್ದಿರಿಸಿದ್ದರೆ ನೀವೇನು ಮಾಡುತ್ತೀರಿ? ನನ್ನ ಮಿತ್ರನೊಬ್ಬನಿದ್ದಾನೆ. ಬಟ್ಟೆ ಮಾಸೀತೆಂಬ ಹೆದರಿಕೆಯೆ ಅವನಿಗಿಲ್ಲ. ...ಗಿಸಿದ ಕೊಡೆಯ ಕಿವಿ ಹಿಡಿದು ಹಾಸಿ, ಅದರ ಮೇಲೆ ಪ್ರಶಸ್ತವಾಗಿ ಕುಳಿತುಕೊಳ್ಳುತ್ತಾನೆ. ಕರವಸ್ತ್ರ ಹಾಸಿ ಕುಳಿತುಕೊಳ್ಳುವ ಜನರೂ ಇದ್ದಾರೆ. ಆದರೆ ಅವರು ಅಷ್ಟೊಂದು ಅನುಕರಣೀಯರೆಂದು ತೋರುವದಿಲ್ಲ. ಎದ್ದು ಹೋಗುವಾಗ ನೆಲದ ಕೊಳೆ ಸಹಿತವಾಗಿ ಆ ವಸ್ತ್ರವನ್ನು ಜೇಬಿಗೆ ತುರುಕಿಕೊಳ್ಳಬೇಕು. ಸಮಾರಂಭದ ಪ್ರಭಾವದಿಂದ ಕರವಸ್ತ್ರವನ್ನು ಮರೆತು ಬಿಡುವ ಸಂಭವವೂ ಇದೆ. ಕೊಡೆಯನ್ನು ಹಾಗೆ ಮರೆಯಲಾಗುವದಿಲ್ಲ. ಕಣ್ಣು ತಪ್ಪಿ ಉಳಿಯುವಷ್ಟು ಕ್ಷುದ್ರವಸ್ತುವಲ್ಲ ಅದು. ಒಂದುವೇಳೆ ಮರೆತು, ನಾಲ್ಕು ಹೆಜ್ಜೆ ಹೋದರೂ, "ಏನೊ ಭಾರ ಕಳಚಿ, ನಾನೆಷ್ಟು ಹಗುರಾಗಿದ್ದೇನಲ್ಲ! ಏಕಿದ್ದೀತು?" ಎಂಬ ಯೋಚನೆ ಬಂದು ಸರ್ರನೆ ನೀವು ಮರಳಿ ಬರುತ್ತೀರಿ. ಜೀವನವೊಂದು ರಣರಂಗವೆಂದೂ, ನಾವು ಯೋಧರಾಗಿಯೆ ಮುನ್ನುಗ್ಗಬೇಕೆಂದೂ ಒಂದು ಶಾಲೆಯ ಪದ್ಯದಲ್ಲಿ ನಾನು ಓದಿದ ಹಾಗಿದೆ. ಶಾಲೆಯಲ್ಲಿ ಕಲಿತ ಪದ್ಯಗಳು ಮಳೆಗಾಲದಲ್ಲಿಯೆ ಏಕೆ ಜಗ್ಗನೆ ನೆನಪಿಗೆ ಬರುವವೊ ನಾನು ಹೇಳಲಾರೆ. ರಸ್ತೆಯಲ್ಲಿ ಹೊರಟಾಗ ಒಂದು ಮೋಟಾರು ವಾಹನ ಕಂಡಾಗಲಂತೂ ಈ ಪದ್ಯ ಆಸುರವಾಗಿ ನನ್ನ ಕಿವಿಯಲ್ಲಿ ಚೀರತೊಡಗುವದು. ಮುಂದಿಯ ಮೇಲೆ ರಾಡಿ ಎರಚುವುದೆ ಮೋಟಾರಿನವನ ಕೆಲಸವಲ್ಲ. ರಾಡಿಯ ಕಾರಂಜಿಗೆ ಎದುರಿಗೆ ಢಾಲಿನವಂತೆ ಹಿಡಿಯಲೆಂದೆ ಕೊಡೆ ಮಾಡಿಲ್ಲ. ಆದರೆ ಈ ಎರಡೂ ಸಂಗತಿಗಳು ತಪ್ಪದೆ ನಡೆಯುತ್ತವೆ.

ಕೊಡೆಯನ್ನು ಎತ್ತಿ ಹಿಡಿವುದಕ್ಕಿಂತ ಇಳಿಬಿಡುವ ಸಂದರ್ಭಗಳೆ ಹೆಚ್ಚೆಂದು ಕಂಡು, ಅದಕ್ಕೊಂದು ಕೊಂಕಿದ ಹಿಡಿಕೆಯನ್ನು ಮಾಡಲಾಗಿದೆ. ಕೊಡೆಯ ದುರ್ದೈವಕ್ಕೆ ಅದೇ ಮುಖ್ಯ ಕಾರಣವಾಗುತ್ತದೆ. ಮುಂಗೈ ಸಡಿಲುಬಿಟ್ಟು, ಛತ್ರಿಯನ್ನು ಖಡ್ಗದಂತೆ ಗಿರಗಿರನೆ ತಿರುಗಿಸುವುದಾಗಲಿ, ಅದರ ತುದಿಯನ್ನು ನೆಲದಲ್ಲಿ ಕುಕ್ಕಿ ಕೀಳುವುದಾಗಲಿ, ಅಥವಾ ಚಿಕ್ಕಪುಟ್ಟ ಹರಳುಗಳನ್ನು ಅದರಿಂದ ತಳ್ಳುವುದಾಗಲಿ, ಅಯೋಗ್ಯವಾದರೂ, ಅಷ್ಟು ಮಾರಕವಾದ ಲೀಲೆಗಳಲ್ಲ. ಮನುಷ್ಯನ ಚಿತ್ತವೃತ್ತಿ ವಿಲಾಸವಾಡುವಾಗ ಇಲ್ಲವೆ ಉದ್ವೇಗದಿಂದ ತುಂಬಿರುವಾಗ, ಕೈಯಲ್ಲೊಂದು ಕೊಡೆಯೂ ಇಲ್ಲದಿದ್ದರೆ, ಆತನು ಅಭಿವ್ಯಕ್ತಿಗಾಗಿ ಬಹಳ ತಡಕಾಡಬೇಕಾಗುತ್ತದೆ. ಅಶಕ್ತ ಪ್ರಕೃತಿಯವರಿಗೆ ಒಂದು ಊರುಗೋಲಾಗಿಯೂ, ಅಹಂಕಾರಿಗಳಿಗೆ ಅಲಂಕಾರವಾಗಿಯೂ ಕೊಡೆ ಪ್ರಯೋಜಕವಾದ



ಜಾಸುದು. ಈ ಇಬ್ಬರ ಕೈಯಲ್ಲಿಯೂ ಅದರ ಆಯುಷ್ಯಕ್ಕೆ ಅಪಾಯವಿಲ್ಲ. ಪ್ರಾರಬ್ಧವಶದಿಂದ ಅದು ಸಾಹಸೀ ಪ್ರವೃತ್ತಿಯವರ ಕೈಹಿಡಿಯಿತೊ—ಮುಗಿಯಿತು ಅದರ ಅವಸ್ಥೆ. ಮುತ್ತೈದೆ ಸಾವಾಗಲಿ, ಅಕಾಲ ವೈಧವ್ಯವಾಗಲಿ ಈ ಛತ್ರಿಕುಮಾರಿಗೆ ಯಾವಾಗ ಒದಗೀತೆಂದು ಹೇಳಲಾಗದು. ಈ ಜನರು ಕೊಡೆ ಹಿಡಿವ ಶೈಲಿಯೆ ಬೇರೆ. ಏನನ್ನೋ ಹಿಡಿದು ಎಳೆಯ ಹೊರಟಂತೆ ಕೊಡೆಯ ಹಿಡಿ ಯಾವಾಗಲೂ ಹೊರಗೇ ಚಾಚಿರುತ್ತದೆ. ಹೀಗೆ ಮಾಡಿದಾಗ ಕೊಡೆಯ ಸತ್ವವೆಲ್ಲ ಜಾಗೃತವಾಗಿ, ಅದರ ವಕ್ರತೆಯಲ್ಲಿ ಸ್ಫುರಣಗೊಳ್ಳುವಂತೆ ತೋರುತ್ತದೆ. ಈ ಜಾಗೃತಿ ಅದನ್ನು ಹಿಡಿದ ಕೈಗೆ ನುಗ್ಗುವದೊ, ಆ ಕೈಯಿಂದಲೆ ಕೊಡೆಗೆ ಅದು ಬಂದದ್ದೊ, ಅಥವಾ ಈ ಎರಡಕ್ಕೂ ಆ ವ್ಯಕ್ತಿಯ ತಲೆಯು ಕೇಂದ್ರವೊ ತಿಳಿಯದು. ಏನೆ ಇರಲಿ, ಇವು ಮೂರೂ ಕ್ಷೇಮಕ್ಕೆ ಹೊರಟ ಲಕ್ಷಣವಿರುವುದಿಲ್ಲ. ಇದಕ್ಕೊಂದು ನಿದರ್ಶನವನ್ನು ಕೊಡಬಹುದು.

ನನ್ನ ಇಬ್ಬರು ಮಿತ್ರರೊಂದಿಗೆ ತಿರುಗಾಡಲು ಹಿತವಾಗಿ ಚಂಗನೆ ಆ ಕಾಲಕ್ಕೆ ಹೊರಟು ಬಿಡಬೇಕೆ?

ಹೋದಾಗ ಹೊಲದ ಅಂಚಿನಲ್ಲೊಂದು ಹಣ್ಣಿನ ಮರ ಕಣ್ಣಿಗೆ ಬಿತ್ತು. ಮಿತ್ರರಲ್ಲಿ ಒಬ್ಬನು ಹಿಡಿಕೆ ಹೊರಗೆ ಮಾಡಿ ಕೊಡೆ ಹಿಡಿದಿದ್ದನು. ನಾಲ್ಕಾರು ಪಾಡುಗಾಯಿಗಳ ಗೊಂಚಲು ತುದಿಯಲ್ಲಿ ಬಾಗಿನಿಂತು, "ನಾನು ನಿಮಗೆ ಬೇಡವೆ?" ಎಂದು ಕೇಳುವಂತೆ ಎದುರಿಗೇ ಇರಬೇಕೆ? ಸಾಹಸೀ ಮಿತ್ರನು ಹೊಲದ ಏರಿಯ ಮೇಲೆ ತುದಿಗಾಲಲ್ಲಿ ನಿಂತು ಗೊಂಚಲಿದ್ದ ಟೊಂಗೆಯನ್ನು ತನ್ನ ಕೊಡೆಯ ಕೊಕ್ಕೆಯಲ್ಲಿ ಹಿಡಿದು ಎಳೆಯ ತೊಡಗಿದನು. ಟೊಂಗೆ ತುಸು ಬಾಗಿತಾದರೂ ಸಾಕಷ್ಟು ಕೆಳಗೆ ಬರಲಿಲ್ಲ. ಎರಡು ಅಡಿ ಆಚೆಗಿನ ಭಾಗಕ್ಕೆ ಇನ್ನೊಬ್ಬನು ಜಿಗಿದು, ತನ್ನ ಕೊಡೆಯ ಹಿಡಿಯನ್ನು ಅದಕ್ಕೆ ತೊಡಕಿಸಿ ಜೋತುಬಿದ್ದನು. ಗೊಂಚಲು ಒಂದು ಜಿಗಿತಕ್ಕೆ ನಿಲುಕುವಷ್ಟು ಬಾಗಿದ್ದರಿಂದ ಅದನ್ನು ಇಳಿಸಿಕೊಳ್ಳುವ ಕೆಲಸಕ್ಕೆ ನನ್ನನ್ನು ನಿಯಮಿಸಲಾಯಿತು. ತುಸು ತಡೆದಿದ್ದರೆ ಎಲ್ಲವೂ ಸುಸೂತ್ರವಾಗುತ್ತಿತ್ತು. ಆದರೆ ಮೊದಲು ಕೊಡೆ ಹಾಕಿದವನು ಕಾಯಿಗೆ ಹಾತೊರೆದು, ಕೈಬಿಟ್ಟು ಓಡಿ ಬಂದನು. ಇದೇ ಸಂಧಿ ಸಾಧಿಸಿ, ನಡುವಿನವನು ಕೊಡೆ ನೆಲದಿಂದ ನೇರವಾಗಿ ಮೇಲಿಗೆ ಜಿಗಿದುಹೋಗುವ ಈ ವಿದ್ಯೆಯನ್ನು ಅವನೆಲ್ಲಿ ಕಲಿತಿದ್ದನೊ ತಿಳಿಯದು; ಸರ್ಕಸ್ಸಿನಲ್ಲಿ ಜೋಕಾಲಿಯಿಂದ ಬೀಳುವ ಕಸರತ್ತುಗಾರನಿಗೆಂದು ಕೆಳಗೆ ಹರವಾದ ಒಂದು ಜಾಳಿಗೆ ಹಿಡಿದಿರುತ್ತಾರೆ. ನಾವು ಅಂತಹದನ್ನು ಅಲ್ಲಿಗೆ ಒಯ್ದಿದ್ದಿಲ್ಲ. ಆಸ್ಪತ್ರೆಯಲ್ಲಿ ಅವನಿಗೆ ಮೂರು ತಿಂಗಳು ಆರೈಕೆಯಾಯಿತು.

ಒಂದುವೇಳೆ ಮಳೆ ಸುರಿಯುತ್ತಿದ್ದರೆ ಈ ಅನಿಷ್ಟ ಪ್ರಸಂಗ ನಡೆಯುತ್ತಿದ್ದಿಲ್ಲ. ಕೊಡೆಯನ್ನು ಏತಕ್ಕೆ ಮಾಡಲಾಗಿದೆಯೊ ಅದಕ್ಕಷ್ಟೆ ಬಳಸಿ, ನಾವು ಸುಖವಾಗಿ ಮನೆ ಸೇರುತ್ತಿದ್ದೆವು. ಮಳೆಯಿಲ್ಲದ ಹೊತ್ತಿನಲ್ಲಿ ಕೊಡೆ ಕೈಗೆ ಸಿಕ್ಕರೆ, ಏನಾದೀತೆಂದು ಯಾರು ಹೇಳಬಲ್ಲರು? ನಾನು ಧಿಗ್ಗನೆ ಎದ್ದು ಕುಳಿತು ಕೇಳುತ್ತಿರುವುದು ಅದಕ್ಕೇ ಮತ್ತೆ. ಮಳೆಯ ಸುದ್ದಿ ಕೂಡ ಮುಗಿದುಹೋದ ಈ ಕಾಲದಲ್ಲಿ ನನ್ನ ಛತ್ರಿಗೆ ಪಡಸಾಲೆಯಲ್ಲಿ ಏನು ಕೆಲಸ? ಇದನ್ನು ಜೋಪಾನವಾಗಿ ಒಯ್ದು ಮೇಲಟ್ಟದಲ್ಲಿ ಮಲಗಿಸಿ ಬರಬೇಕು. ಇದರ ಆಯುಷ್ಯ ಈಗಲೆ ಮುಗಿಯುವುದು ಬೇಡ.

ಮೋಹನ ಮಾತಾಡಿದ

ಶ್ರೀನಾರಾಯಣ

ಮೋಹನ ನಿದ್ದೆ ಮಾಡುತ್ತಿದ್ದ.

ಹೊರಗೆ ರಣಗುಡುವ ಬಿಸಿಲು. ಆಫೀಸು ಮನೆಯಿಂದ ಎರಡೂವರೆ ಫರ್ಲಾಂಗುಗಳ ದೂರದಲ್ಲಿದೆ, ಅಷ್ಟು ಮಧ್ಯಾಹ್ನ ಅರ್ಧಘಂಟೆ ವಿರಾಮವಿದೆ. ಆಗ ಮನೆಗೆ ಬಂದು ಬೇಗ ಊಟವನ್ನು ಮುಗಿಸಿ ಹೋಗುತ್ತಾನೆ ಶೇಖರ

ಸ್ಟ್ಯಾಂಡ್ ಹಾಕಿ ಸೈಕಲ್ ನಿಲ್ಲಿಸಿ, ಪ್ಯಾಂಟನ್ನು ತೆಗೆದು ಪಂಚೆಯನ್ನುಟ್ಟು, ಬಚ್ಚಲು ಮನೆಗೆ ಹೋಗಿ ಕಾಲು ತೊಳೆದುಕೊಂಡು ಬಂದ ಶೇಖರನ ದೃಷ್ಟಿ, ತತ್ಕ್ಷಣ ಮಗುವಿನೆಡೆಗೆ ಹೊರಳಿತು

ಸುಖವಾಗಿ ನಿದ್ರಿಸುತ್ತಿದ್ದ ಮೋಹನ, ತಲೆಗೆ ಕೈ ಕೊಟ್ಟು ಕಾಲ್ಗಳನ್ನು ಮಡಚಿ ಕೊಕ್ಕರಿಸಿ ಮಲಗಿದ್ದ

"ಮೋಹನ ಮಲಗಿಬಿಟ್ಟಿದ್ದಾನೆ."

"ಬೆಳಿಗ್ಗೆ ಹೊತ್ತಿಗೆ ಮುಂಚೆ ಎದ್ದಿದ್ದಾನೆ ನೋಡಿ ನಿದ್ದೆ ಬಂತು ತೊಡೇ ಮೇಲೇ ಹಾಕಿಕೊಂಡು ತಟ್ಟಿ ಮಲಗಿಸಿದೆ."

ಹಾಗೆ ಹೇಳಿಕೊಂಡ ಶೋಭಾ ಊಟಕ್ಕೆ ಚಾಪೆಯನ್ನು ಹಾಸಿ ತಟ್ಟೆಯನ್ನಿಟ್ಟಳು. ಶೇಖರ ತಟ್ಟೆಯ ಮುಂದೆ ಹೋಗಿ ಕುಳಿತ. ಶೋಭಾ ಬಡಿಸಿದಳು.

ಸಾರನ್ನವನ್ನು ಮುಗಿಸಿ ನಾಲ್ಕು ತುತ್ತು ಮಜ್ಜಿಗೆ ಅನ್ನವನ್ನು ಊಟಮಾಡಿರಬೇಕು ಆಗ "ಆ ಆ ಆ" ಎಂದು ಮೋಹನ ದನಿ ತೆಗೆದ

"ಇನ್ನೂ ಸ್ವಲ್ಪ ಹೊತ್ತು ಮಲಗಿರಬಾರದಿತ್ತೆ? ಇಷ್ಟು ಬೇಗ ಯಾಕೆ ಎದ್ದ?" ಎನ್ನುತ್ತ ಶೋಭಾ ಅತ್ತ ಧಾವಿಸಿದಳು "ಮಲಗಿಕೋ, ಸ್ವಲ್ಪ ಹೊತ್ತು. ಯಾಕೆ ಎದ್ದೀ......" ಎನ್ನುತ್ತ ಮೋಹನನನ್ನು ಲಟಪಟ ತಟ್ಟ ತೊಡಗಿದಳು.

ಮೋಹನ ಮತ್ತೆ ಮಲಗಲಿಲ್ಲ. ಎದ್ದೇಬಿಟ್ಟ. ತಾಯಿಯ ತೊಡೆಯ ಮೇಲೆ ಕುಳಿತ. "ಆ ಆ ಆ" ಎಂದ ಶೋಭಾ ಅವನ ಕೆನ್ನೆಯನ್ನು ಮೆಲ್ಲಗೆ ನೇವರಿಸಿದಳು. ತಾಯಿಯ ಸ್ಪರ್ಶ, ನೇವರಿಸುವಿಕೆ ಅವನಿಗೆ ಹಿತವನ್ನು ತಂದಿರಬೇಕು. ಅವನು ಆ ಆ ಆ ಎನ್ನುವುದನ್ನು ನಿಲ್ಲಿಸಿದ. ಅಷ್ಟರಲ್ಲಿ ಹೊರಗೆ ಢಿಢಿ ಢಿಢಿ ಢಿಢಿಲ್ ಎಂದು ಶಬ್ದವಾಯಿತು.

ಮೋಹನ ತಾಯಿಯ ತೊಡೆಯಿಂದ ಛಂಗನೆ ಜಿಗಿದವನೆ ಬಾಗಿಲಲ್ಲಿ ಬಂದು ನಿಂತ

ಅಲ್ಲಿ, ಮನೆಯ ಮುಂದೆ, ಎದುರು ಮನೆಯ ಹುಡುಗ ಮಧು, ತನ್ನ ಮೂರು ಚಕ್ರದ ಸೈಕಲ್ಲಿನ ಮೇಲೆ ಕುಳಿತು ಅತ್ತ ಓಡಿಸಿಕೊಂಡು ಹೋಗುತ್ತಿದ್ದಾನೆ

ಮಧುವನ್ನೂ ಅವನ ಸೈಕಲನ್ನೂ ನೋಡಿದನೊ ಇಲ್ಲವೊ ಮೋಹನ ಬೆರಳನ್ನು ಆ ಕಡೆ ತಾಯಿಗೆ ತೋರಿಸುತ್ತ "ಆ ಆ ಆ ಈ ಈ ಈ" ಎಂದು ಜೋರಾಗಿಯೆ ದನಿ ತೆಗೆದ

ಅವನು ಯಾಕೆ ಅಳುತ್ತಿದ್ದಾನೆ ಎನ್ನುವುದು ತಂದೆ ತಾಯಿಗಳಿಗೆ ತಿಳಿದಿದೆ. ಅದು ದಿನದಿನವೂ ತಿಳಿದ ಸಂಗತಿಯೇ ಆಗಿದೆ. ಶೋಭಾ ಅದಕ್ಕೇ ಅವನನ್ನೆ ದಿಟ್ಟಿಸುತ್ತ ನಿಟ್ಟುಸಿರನ್ನು ಬಿಡುತ್ತಿದ್ದಾಳೆ.

ಕೈ ತೊಳೆದುಕೊಂಡು ಬಂದ ಶೇಖರ ಅವಸರ-ಅವಸರವಾಗಿ ಪ್ಯಾಂಟನ್ನು ಹಾಕಿಕೊಂಡ. ಕೆದರಿದ್ದ ತಲೆಯನ್ನು ಬಾಚಿದ. "ಬರ್ತೀನಿ, ಶೋಭಾ" ಎಂದ. ಶೋಭಾ ತಲೆಯಲ್ಲಾಡಿಸಿದಳು. ಬಾಗಿಲಿನಲ್ಲಿಯೆ ನಿಂತಿದ್ದ ಮಗುವನ್ನು ಶೇಖರ ಮುದ್ದಿಸಿದ. ಬಳಿಕ ಹೊರನಡೆದು ಸೈಕಲ್ ಮೆಟ್ಟುವ ಮೊದಲು "ಟಾ ಟಾ ಟಾ ಟಾ" ಎಂದು ಕೈಗಳನ್ನು ಬೀಸಿದ.

ಮೋಹನ ಇಂದು ತಂದೆಗೆ ಟಾ ಟಾ ಮಾಡಲಿಲ್ಲ ಗುರ್ ಎಂದುಕೊಂಡು ಹಾಗೆಯೆ ನಿಂತಿದ್ದ.

ಮೋಹನ ಯಾಕೆ ಟಾ ಟಾ ಮಾಡಲಿಲ್ಲ ಎನ್ನುವುದು ಶೇಖರನಿಗೆ ತಿಳಿದಿದೆ. ಆದರೆ ತಿಳಿದು ಏನು ಮಾಡುವುದು?

ಶೇಖರ ಎರಡನೆಯ ದರ್ಜೆಯ ಒಬ್ಬ ಗುಮಾಸ್ತ. ಕೈತುಂಬ ಸಂಬಳ ಬರುವ ಉದ್ಯೋಗವಲ್ಲ. ಲಂಚ ಸಿಗುವ ಕೆಲಸವೂ ಅಲ್ಲ. ಸಂಬಳ ನೂರರ ಒಳಗೇ ಬರುತ್ತಿದೆ ಹಿಂದೆ ಮಾಡಿದ ಸಾಲಕ್ಕಾಗಿ ಸಂಬಳದ ಮೂರನೆಯ ಒಂದು ಭಾಗ ಹೊರಟುಹೋಗುತ್ತದೆ. ಉಳಿದುದರಲ್ಲಿಯೆ ಸಂಸಾರ ಆಗಬೇಕು

ಪಟ್ಟಣದ ಸಂಸಾರ ನೂರೆಂಟು ತಾಪತ್ರಯ. ಒಂದನ್ನು ಹೊಲಿಯುವುದಕ್ಕೆ ಹೋದರೆ ಮತ್ತೊಂದು ಬಿಚ್ಚಿಕೊಳ್ಳುತ್ತದೆ ಹೀಗಿರುವಾಗ ಮೋಹನನ ಕೋರಿಕೆಯನ್ನು ಹೇಗೆ ನೆರವೇರಿಸಬೇಕು?

ಮೋಹನನ ಕೋರಿಕೆ

ಮೂರು ಚಕ್ರದ ಬೈಸಿಕಲ್

ಶೇಖರನ ಎದುರು ಮನೆಯಲ್ಲಿ ಮನೆಯ ಮಾಲೀಕ ಸೀತಾರಾಮು ಇದ್ದಾನೆ. ಆತನಿಗೂ ಶೇಖರನಿಗಿರುವಂತೆಯೇ ಒಂದೇ ಒಂದು ಗಂಡು ಮಗು. ಹೆಸರು ಮಧು. ಸೀತಾರಾಮು ಕಾಂಟ್ರಾಕ್ಟುದಾರ. ಅವನಿಗೆ ಒಳ್ಳೆಯ ಸಂಪಾದನೆಯಿದೆ

ಆದರಿಂದಲೆ ಮಧು ಸೊಗಸಾದ ಒಂದು ಮೂರು ಚಕ್ರದ ಬೈಸಿಕಲ್ಲನ್ನು ಪಡೆದಿದ್ದಾನೆ ಅದರ ಮೇಲೆ ಕುಳಿತು ಮೂರು ಹೊತ್ತೂ ಢಿಢಿ ಢಿಢಿ ಢಿಢಿಲೆನ್ನುತ ಕಾಂಪೌಂಡಿನೊಳಗೆ ಸುತ್ತುಹಾಕುತ್ತಾನೆ

ಅಂಥದೇ ಸೈಕಲ್ ತನಗೂ ಬೇಕು ಎನ್ನುವುದು ಮೋಹನನ ಬಯಕೆ. "ಈ ಈ ಈ ಆ ಆ ಆ" ಎನ್ನುತ್ತ ಕೈಬೆರಳನ್ನು ತೋರಿಸುತ್ತ ಮೋಹನ ಹಟಮಾಡುತ್ತಾನೆ ನಾಲ್ಕು ತಿಂಗಳಿಂದಲೂ ತಂದೆ ತಾಯಿಯರು ಅಂಥದೊಂದು ಬೈಸಿಕಲ್ ತೆಗೆದು

ಕೊಡಲು ಸರ್ವಸಾಹಸವನ್ನೆ ಮಾಡುತ್ತಿದ್ದಾರೆ. ಅದಕ್ಕೆ ೫೦-೬೦ ರೂಪಾಯಿಗಳಾದರೂ ಬೇಕಾಗುತ್ತದೆ. ಒಮ್ಮೆಲೆ ಅಷ್ಟು ಹಣವನ್ನು ಎಲ್ಲಿಂದ ಒದಗಿಸುವುದು.

ಮಧು ಕೆಲವು ಸಮಯ ಮೋಹನನನ್ನೂ ಹಿಂದೆ ಕುಳ್ಳಿರಿಸಿಕೊಂಡು ಸುತ್ತುಹಾಕುತ್ತಾನೆ. ಮತ್ತೆ ಮತ್ತೆ ಕೆಲವು ಸಲ ಟೂ ಟೂ ಟೂ ಎನ್ನುತ್ತಾನೆ.

ಆಗ ಮಧುವಿಗೂ ಮೋಹನನಿಗೂ ಮಾರಾಮಾರಿ. ಒಂದು ಸಲ ಮೋಹನ ಮಧುವನ್ನು ಕೆಳಗೆ ತಳ್ಳಿ ಸೈಕಲನ್ನು ತಾನೇ ಆಕ್ರಮಿಸಿಕೊಂಡು ಸವಾರಿ ಹೊರಟ. ಕೆಳಗೆ ಬಿದ್ದ ಮಧುವಿನ ಮೂಗು ಕೆನ್ನೆ ಎಲ್ಲ ತರಚಿಹೋಯಿತು. ಮಧು ಅಳುತ್ತ ನಿಂತ

ಇದನ್ನು ನೋಡಿದ ಶೋಭಾಳಿಗೆ ಅಂದು ಸಿಟ್ಟನ್ನು ಹತ್ತಿಕ್ಕಿಕೊಳ್ಳಲು ಸಾಧ್ಯವಾಗಲಿಲ್ಲ. ಮೋಹನನಿಗೆ ನಾಲ್ಕು ಬಾರಿಸಬೇಕು ಎಂದು ಅವಳು ಕೈ ಎತ್ತುವಷ್ಟರಲ್ಲಿ ಸುಮಾ ಅವಳನ್ನು ತಡೆದುಬಿಟ್ಟಳು.

"ಇದೇನು ಶೋಭಾ ನಿನ್ನ ಕೆಲಸ. ಮಕ್ಕಳಿಗೆ ಏನು ಗೊತ್ತಾಗುತ್ತೆ ಹೇಳು! ಅವನ್ನ ಹೊಡೀಬೇಡಮ್ಮ."

ಸುಮಾ ಸೀತಾರಾಮುವಿನ ಹೆಂಡತಿ. ಅನುಕೂಲವಾಗಿದ್ದೇನೆ ಎನ್ನುವ ಬಿಂಕವಿಲ್ಲ, ಬಿಡಗಿಲ್ಲ. ಮೋಹನನನ್ನೂ ಅವಳು ತುಂಬ ಪ್ರೀತಿಸುತ್ತಾಳೆ

ಸುಮಾ ತನ್ನನ್ನು ಗದರಿಸಿಕೊಳ್ಳುವಾಗ ಬೇರೆ ಏನೂ ತೋಚದೆ ಶೋಭಾ ಮೋಹನನನ್ನೆತ್ತಿಕೊಂಡು ಮನೆಗೆ ಬಂದು ಕಣ್ಣೀರನು ಮಿಡಿಯುತ್ತಾಳೆ.

ಇವೊತ್ತು ಬೆಳಗ್ಗೆ ಶೇಖರ ಆಫೀಸಿಗೆ ಹೊರಡುವಾಗಲೂ ಮೋಹನ ಮಗುವಿನ ಸೈಕಲತ್ತ ಕೈಬೆರಳನ್ನು ತೋರಿಸುತ್ತ "ಈ ಈ ಈ ಆ ಆ ಆ" ಎಂದಿದ್ದ. ಆಗ ಶೇಖರ ಒಂದು ನಿಟ್ಟುಸಿರನ್ನು ಬಿಟ್ಟಿದ್ದ ಮಾತ್ರ, ಅದರಿಂದಲೆ ಆಫೀಸಿನಿಂದ ಹಿಂದಿರುಗಿದಾಗ ಆತ "ಮೋಹನ ಮಲಗಿಬಿಟ್ಟಿದಾನೆ?" ಎಂದು ಕೇಳಿದ್ದು.

ಈಗ, ಮಧ್ಯಾಹ್ನ, ಶೇಖರ ಊಟ ಮುಗಿಸಿಕೊಂಡು ಆಫೀಸಿಗೆ ಮತ್ತೆ ಮರಳುವಾಗ ಮೋಹನ ಟಾ ಟಾ ಮಾಡಲಿಲ್ಲ. ಅವನು ಪ್ರತಿದಿನ ಬಾಗಿಲಿನಲ್ಲಿ ನಿಂತು ಟಾ ಟಾ ಎನ್ನುವ ಸಂಜ್ಞೆಯ ಸಲುವಾಗಿ ಕೈಗಳನ್ನು ಬೀಸುವುದು ವಾಡಿಕೆ


ಇಂದು ಮೋಹನನಿಗೆ ತಂದೆಯ ಮೇಲೆ ಕೋಪ. ದಿಢದಿಢಲೆಂದು ಓಡಿಸಿಕೊಂಡು ಹೋಗುವ ಮಧುವಿನ ಸೈಕಲ್ಲಿನ ಮೇಲೆ ಕಣ್ಣು

ಈಗ ಶೇಖರ ತಾನು ಸೈಕಲ್ ತುಳಿಯುತ್ತ ಸಾಗುತ್ತಿದ್ದಂತೆ ಯೋಚಿಸಲಾರಂಭಿಸಿದ್ದ. ನಾಲ್ಕು ತಿಂಗಳಿಂದ ಪ್ರಯತ್ನಿಸಿದರೂ ಒಂದು ಬೈಸಿಕಲ್ ತೆಗೆಯಲು ತನ್ನಿಂದ ಸಾಧ್ಯವಾಗುತ್ತಿಲ್ಲವಲ್ಲ! ಮಾತು ಬಾರದ ಮೋಹನನ ಕೋರಿಕೆಯನ್ನು ನೆರವೇರಿಸಲು ಆಗುತ ಇಲ್ಲವಲ್ಲ. ಛೆ ಛೆ ಛೆ.

೩

ಮಾತು ಬಾರದ ಮೋಹನ.

ಮೋಹನನಿಗೆ ಆರು ವರ್ಷಗಳು ಕಳೆದಿವೆ. ಆದರೆ ಅವನಿಗೆ ಇನ್ನೂ, ಮಾತು ಬಂದಿಲ್ಲ



ಈ ಕಾರಣದಿಂದ ಮೋಹನ ಎಲ್ಲರ ಕನಿಕರಕ್ಕೆ ಪಾತ್ರನಾಗಿದ್ದಾನೆ. ಅವನ ಮುಗ್ಧತೆಗಾಗಿ ಸುಮಾ ಮಾರು ಹೋಗಿದ್ದಾಳೆ. ಮೋಹನನದು ಆಕರ್ಷಕವಾದ ಕಣ್ಣುಗಳು. ಆ ಕಣ್ಣುಗಳ ಸೌಂದರ್ಯಕ್ಕಾಗಿ ಸುಮಾ ಅವನನ್ನು ಬಹಳವಾಗಿ ಮೆಚ್ಚಿಕೊಂಡಿದ್ದಾಳೆ ಮೋಹನನಿಗೆ ಮಾತು ಬಾರದಿದ್ದರೂ ಅವನ ಆಟಪಾಟಗಳು ಚೆನ್ನ. ಸುಮಾ ತನ್ನ ಮಗು ಮಧುವನ್ನು ಮುದ್ದಿಸುವಂತೆಯೆ ಮೋಹನನನ್ನೂ ಮುದ್ದಿಸುತ್ತಾಳೆ.

ಪಾಪ, ಮೋಹನ ಮಾತು ಬಾರದ ಹಸುಳೆ ಎಂದು ಸುಮಾಳಿಗೆ ಅತ್ಯಂತ ಕನಿಕರ. ಅದಕ್ಕೇ ಅವಳು ಮೊನ್ನೆ ಹಾಗೆ ಶೋಭಾಳನ್ನು ಗದರಿಸಿಕೊಂಡುದು

"ಅವನ ಹೊಡೀಬೇಡ ಶೋಭಾ.

ಶೋಭಾ ತಾನೆ ಏನು ಮಾಡಬಲ್ಲಳು? ತನ್ನ ಮಗುವಿಗೆ ಮಾತು ಬಂದಿಲ್ಲ. ಎಂದೂ ಬರುವುದಿಲ್ಲ ಎಂದು ದಿನದಿನವೂ ಅವಳು ಕಣ್ಣೀರು ಮಿಡಿಯುತ್ತಾಳೆ. ಅವಳ ಕಣ್ಣೀರೇ ದೇವರ ಮುಂದಿನ ನೀಲಾಂಜನಕ್ಕೆ ಎಣ್ಣೆಯಾಗಿದೆ "ದೇವರೇ, ನನ್ನ ಮಗುವಿಗೆ ಮಾತು ಬರಿಸಪ್ಪ" ಎಂದು ಅವಳು ದಿನದಿನವೂ ದೇವರಲ್ಲಿ ಪ್ರಾರ್ಥಿಸುತ್ತಿದ್ದಾಳೆ.

ಆದರೆ ದೇವರು ಇನ್ನೂ ಕಣ್ಣನು ತೆರೆದಿಲ್ಲ ಮೋಹನನಿಗೆ ಮಾತು ಬಂದಿಲ್ಲ

ದೇವರು ಕಣ್ಣನ್ನು ತೆರೆದಿಲ್ಲವೆಂದು ತಂದೆ-ತಾಯಿಗಳು ಸುಮ್ಮನೆ ಇರುವುದಕ್ಕಾಗುತ್ತದೆಯೆ? ದೈವ ಕಣ್ಣನ್ನು ತೆರೆದಿಲ್ಲವೆಂದು ದಿನವಿಡೀ ಅವರು ಕಣ್ಣೀರನ್ನು ಮಿಡಿಯುತ್ತಿದ್ದಾರೆ

ಈ ಚಿಂತೆಯಿಂದ ಶೋಭಾ ದಿನದಿನಕ್ಕೆ ಸೇದು ಹಳ್ಳಿಯಾಗುತ್ತಿದ್ದಾಳೆ. ಮಾಡುವುದೆಲ್ಲವನ್ನೂ ಮಾಡಿ ಈಗ ಏನು ಮಾಡಲೂ ತೋಚದೆ ಶೇಖರ ದಿಕ್ಕುಗೆಟ್ಟಿದ್ದಾನೆ.

*

೪

ಜಗತ್ತಿನ ತಾಯಿತಂದೆಗಳು ಹೇಗೆ ಹಿಗ್ಗಬೇಕೊ ಹಾಗೆ ಒಂದು ದಿನ ಶೇಖರನೂ ಶೋಭಾಳೂ ಹಿರಿಹಿರಿ ಹಿಗ್ಗಿದರು.

ಅದು, ಮೋಹನ ಹುಟ್ಟಿದ ದಿನ

ಮೊದಲ ಮಗು; ಗಂಡು ಮಗು; ಮದುವೆಯಾದ ಒಡನೆಯೆ ಮಕ್ಕಳಾಗದೆ ನಾಲ್ಕು ವರ್ಷಗಳ ಅನಂತರದಲ್ಲಿ ಜನಿಸಿದ ಮಗು. ಎಂದ ಮೇಲೆ ತಾಯಿ ತಂದೆಗಳಿಗೆ ಸುಗ್ಗಿಯಾಗದೆ? ಸಂತಸವಾಗದೆ?

ಆದರೆ ಈ ಸುಗ್ಗಿ, ಈ ಸಂತಸವನು ಅವರು ಬಹಳ ದಿನಗಳು ಅನುಭವಿಸಲಿಲ್ಲ ಕಷ್ಟದ ತೆರೆಗಳು ಒಮ್ಮೆಲೆ ಸುರುಳಿ ಸುತ್ತಿ ಬಂದುವು ಒಂದರ ಮೇಲೆ ಒಂದು; ಒಂದರ ಹಿಂದೆ ಮತ್ತೊಂದು

ಜನ್ಮವೆತ್ತಿದ ಸ್ವಲ್ಪ ದಿನಗಳಲ್ಲಿಯೆ ಬೆಳಗಿದ್ದರೆ ಮೋಹನ ಡಾಕ್ಟರ್ ಷಾಪಿಗೆ ಎತ್ತಿಕೊಂಡು ಹೋಗುವ ಹಾಗಾದ ತಾಯಿಯ ಎದೆ ಹಾಲಿನಿಂದ ಬೆಳೆಯದೆ ಔಷಧಿ, ಟಾನಿಕ್ಕುಗಳಿಂದಲೆ ಅವನು ಬೆಳೆಯತೊಡಗಿದ

ಅವನಿಗೆ ಮೂರು ತಿಂಗಳು ತುಂಬಿದಾಗ ಮತ್ತೊಂದು ವ್ಯಾಧಿ ಅವನನು ಬಲವಾಗಿ ಅಪ್ಪಿಬಿಟ್ಟಿತು

ಕಾಲುಗಳೂ, ಕೈಗಳೂ ದೊಣ್ಣೆಯ ಹಾಗೆ ಸೆಟೆದು, ಕಣ್ಣುಗಳು ಮೇಲೆ ಮೇಲೆ ತೇಲಿ ಹೋಗಿ ಕತ್ತು ಇಳಿಬಿದ್ದು ಬಾಯಲ್ಲಿ ನೊರೆ ಕಾರಿ ಮೋಹನ ವಿಲಿವಿಲಿ ಒದ್ದಾಡಿದ.

ಅದು ಒಂದು ಬಗೆಯ ವಾಯು ಫಿಟ್ಸ್ ಎಂದರು

ಇಂಥ ವಾಯು ಮಗುವಿಗೆ ದಿನಕ್ಕೆ ಹತ್ತಾರು ಸಲ ಬಂದು ಬಿಡುತ್ತಿತ್ತು

ಹರಿಗೆಗೆ ಹಳ್ಳಿಗೆ ಹೋಗಿದ್ದ ಶೋಭಾ ಮಗುವಿನ ಅವಸ್ಥೆಯನ್ನು ನೋಡಿ ಹೆದರಿ, ಮೂರು ತಿಂಗಳಿಗೇ ಮಗುವನ್ನೆತ್ತಿಕೊಂಡು ಬಂದು ಪಟ್ಟಣಕ್ಕೆ ಸೇರಿಬಿಟ್ಟಳು. ಆಮೇಲೆ ಆ ತಂದೆತಾಯಿಗಳಿಗೆ ಯಾವುದಾದರೊಂದು ಪಾಪು, ಯಾರಾದರೊಬ್ಬ ಡಾಕ್ಟರ್ ಹೀಗೆ ಬೆಳಗೆದ್ದರೆ ಅಲೆದಾಡುವುದೆ ಸರಿಯಾಗಿ ಹೋಯಿತು

ಒಂದೆರಡು ಸಂದರ್ಭದಲ್ಲಿ ಮೋಹನ ವಾರ್ಡಿನಲ್ಲಿಯೆ ಇರಬೇಕಾಗಿ ಬಂತು; ಇದ್ದ. ಈ ದಿನಗಳಲ್ಲಿ ಶೇಖರ ಮಗುವನ್ನು ಉಳಿಸಿಕೊಳ್ಳಲು ಸಾವಿರಾರು ರೂಪಾಯಿಗಳನು ಖರ್ಚು ಮಾಡಬೇಕಾಯಿತು.

ಮಗುವನ್ನೇನೊ ಶೇಖರ ಉಳಿಸಿಕೊಂಡ. ಆದರೆ ಅದಕ್ಕಾಗಿ ಅವರು ಮಾಡಿದ ಸಾಲ ಸ್ವಲ್ಪವೊ? ಅವರ ಸ್ಥಿತಿಯಲ್ಲಿ ಅದು ಬಿರಿಮಿದ್ದಿನಾಕಾರಕ್ಕೆ ಬೆಳೆದಿತ್ತು.

ಶೇಖರನ ಸಂಪಾದನೆ ಅವರ ಜೀವನನಿರ್ವಹಣೆಗೂ ಸಾಲದು ಎನ್ನುವ ಹಾಗೆ. ಹೀಗೆ ಎಳೆದರೆ ಆ ಕಡೆ ಸ್ವಲ್ಪ ಬಿರುಕು; ಹಾಗೆ ಮುಚ್ಚಿದರೆ ಈ ಕಡೆ ಸ್ವಲ್ಪ ತೂತು. ಹೆಚ್ಚಿಗೆ ಖರ್ಚಿಗೆ ಏನು ಮಾಡಬೇಕು?

ಶೋಭಾಳ ಮೈಮೇಲಿದ್ದ ಚೂರುಚಾರು ಚಿನ್ನ ಬೆಳ್ಳಿ ಒಡವೆಗಳು ಮಾಯವಾದುವು. ಸ್ನೇಹಿತರ ಬಳಿ, ಅಲ್ಲಿ ಇಲ್ಲಿ, ಯಾರಲ್ಲೆಲ್ಲ ಕೈಯೊಡ್ಡಬೇಕೊ ಅಂಥವರ ಮುಂದೆಲ್ಲ ಶೇಖರ ಕೈ ಚಾಚಿದ.

ದಿನಗಳು ಕಳೆದುವು. ಮೋಹನ ನಾಲ್ಕರ ಮನೆಗೆ ಕಾಲಿಟ್ಟ. ಎಲ್ಲ ಹುಡುಗರಂತೆಯೆ ಅವನು ಚಟುವಟಿಕೆಯಿಂದಲೆ ಇದ್ದ

ಆದರೆ ನಾಲ್ಕು ವರ್ಷಗಳು ಕಳೆದರೂ ಮೋಹನ ಒಂದು ಮಾತನ್ನೂ ಆಡುತ್ತಿರಲಿಲ್ಲ. ಆ ಈ ಈ ಈ ಎಂದು ಬರಿಯ ಸಂಜ್ಞೆ ಮಾಡಿಯೆ ತನ್ನ ಇಂಗಿತವನ್ನು ವ್ಯಕ್ತಪಡಿಸುತ್ತಿದ್ದ

ಕೆಲವು ಮಕ್ಕಳಿಗೆ ಸ್ವಾಭಾವಿಕವಾಗಿಯೆ ನಿಧಾನವಾಗಿ ಮಾತು ಬರುತ್ತದೆ ಎಂದು ತಂದೆತಾಯಿಗಳು ಸುಮ್ಮನಿದ್ದರು. ಆದರೆ ಯಾರೊ ಸ್ನೇಹಿತರು ಅವನ ಕಣ್ಣು, ಕಣ್ಣಿನ ಚಲನೆ, ನಡೆ–ಚರ್ಯೆ ಎಲ್ಲವನ್ನೂ ಗಮನಿಸಿ, ಏನೊ ಸಂದೇಹ ಬಂದು "ಈ ಊರಿಗೆ ಹೊಸದಾಗಿ ಒಬ್ಬರು ಡಾಕ್ಟರು ಬಂದಿದಾರೆ. ಮಕ್ಕಳ ಚಿಕಿತ್ಸೆಯಲ್ಲಿ ಅವರು ಪ್ರವೀಣರು. ಯಾವದಕ್ಕೂ ಅವರಲ್ಲಿಗೆ ಕರೆದುಕೊಂಡು ಹೋಗಿ ತೋರಿಸಿ" ಎಂದು ಸಲಹೆಯನ್ನಿತ್ತರು


ಶೇಖರ ಮತ್ತೆ ಮೋಹನನ್ನೆತ್ತಿಕೊಂಡು ಆಸ್ಪತ್ರೆಗೆ ನಡೆದ. ಹತ್ತಾರು ದಿನ ಪರೀಕ್ಷೆ. ಎರಡು–ಮೂರು ಎಕ್ಸ್‌ರೇ. ಕಣ್ಣಿನ ಪರೀಕ್ಷೆ ಮೂತ್ರ ಪರೀಕ್ಷೆ–ಹೀಗೆ

ಸ್ನೇಹಿತರ ಸಂದೇಹ ಸರಿಯಾ[illegible]ತ್ತು ಎಲ್ಲ ಪರೀಕ್ಷೆಗಳೂ ಮುಗಿದಮೇಲೆ ಡಾಕ್ಟರರು ಹೇಳಿದರು:

"ಮಗುವಿಗೆ ಎಳವೆಯಲ್ಲಿಯೆ ಫಿಟ್ಸ್ ಬಂದು ನರಗಳು ದುರ್ಬಲವಾಗಿ ಹೋಗಿವೆ. ಅವು ತಮ್ಮ ಸತ್ವವನ್ನು ಕಳೆದುಕೊಂಡಿವೆ. ಹೀಗಾಗಿ ಮಿದುಳಿನ ಬೆಳವಣಿಗೆ ಕುಂಠಿತವಾಗಿದೆ. ಯಾವಾಗ ಮಿದುಳು ಬೆಳೆಯಲಿಲ್ಲವೊ ಆಗ ಮಗುವಿಗೆ ಮಾತು ಬಾರದೆ ಇರುವುದು ಸ್ವಾಭಾವಿಕ. ಆದರೆ ಇದು ಹೀಗೇ ಆಗಿದೆ ಎಂದು ಯಾವುದನ್ನೂ ಸ್ಪಷ್ಟವಾಗಿ ತಿಳಿಸುವುದು ಸಾಧ್ಯವಿಲ್ಲ. ನೀವು ಬೆಂಗಳೂರಿಗೆ ಕರೆದುಕೊಂಡು ಹೋಗಿ ಮೆಂಟಲ್ ಆಸ್ಪತ್ರೆಯಲ್ಲಿ ತೋರಿಸುವುದು ಒಳ್ಳೆಯದು."

ತಂದೆ ತಾಯಿಗಳು ಹೌಹಾರಿಹೋದರು. ಮಗುವಿನ ಭವಿಷ್ಯವನ್ನು ತಿಳಿದುಕೊಳ್ಳಲು ಕುತೂಹಲಿಗಳಾದರು. ಆದರೆ ಅವರ ಪರಿಸ್ಥಿತಿ ಒಡನೇ ಬೆಂಗಳೂರಿಗೆ ಹೋಗುವಹಾಗಿರಲಿಲ್ಲ

ಧಾನ್ಯದ ಖರೀದಿ



ಸರಕಾರ ಮಾಡಿತ್ತು ಧಾನ್ಯದ ಖರೀದಿ.
ಆದರೂ ಪ್ರಜೆಗಳಿಗೆ ಸಿಗಲಿಲ್ಲ ಗೋದಿ.
ಇದಕೆನ್ನುವರು ರಾಮರಾಜ್ಯದ ಪ್ರತಾಪ.
ಗೋದಾಮುಗಳು ತಿಂದುಹಾಕಿದವು ಪಾಪ!

—ದಿನಕರ ದೇಸಾಯಿ

ಒಂದು ವರ್ಷವೆ ಕಳೆಯಿತೇನೊ? ಆ ಬಳಿಕ ಅವರು ಒಂದು ಸಲವಲ್ಲ, ನಾಲ್ಕಾರು ಸಲ ಬೆಂಗಳೂರಿಗೆ ಹೋಗಬೇಕಾಯಿತು. ಮೆಂಟಲ್ ಆಸ್ಪತ್ರೆಯಲ್ಲಿ ತೋರಿಸಿದ್ದಾಯಿತು. ಮೋಹನನ ಪರೀಕ್ಷೆ ಮುಗಿಯಿತು.

"ನಿಜ. ಮಿದುಳಿನ ಬೆಳವಣಿಗೆ ಕುಂಠಿತವಾಗಿ ಮಗುವಿಗೆ ಮಾತು ಬಾರದೆ ಹೋಗಿದೆ. ಮಿದುಳು ದಿನದಿನಕ್ಕೆ ಬೆಳೆದಂತೆ ದಿನಕ್ರಮೇಣ ಮಗುವಿಗೆ ಮಾತು ಬರಬಹುದು. ಅಥವಾ ಬಾರದೆಯೂ ಹೋಗಬಹುದು. ಅದನ್ನು ಹೀಗೆಯೆ ಎಂದು ಸ್ಪಷ್ಟವಾಗಿ ತಿಳಿಸಲು ಸಾಧ್ಯವಿಲ್ಲ. ಮುಂದೆ ನೋಡೋಣ ಏನಾಗುತ್ತದೆ ಎಂದು. ನೀವು ಹೆದರಬೇಡಿ ಮುಂದೆ ಸರಿಹೋಗಬಹುದು ಮಗುವಿಗೆ ಮಾತು ಬರುವುದು ನಿಧಾನವಾದರೆ ಎಲ್ಲರಂತಿಲ್ಲದೆ ಅವನ ವಿದ್ಯಾಭ್ಯಾಸ ಹಿಂದುಳಿಯಬಹುದು. ಯಾವುದಕ್ಕೂ ಕಾದುನೋಡಿ"—ಹೀಗೆ ಆ ಆಸ್ಪತ್ರೆಯ, ಮಿದುಳಿನ ತಜ್ಞರು, ಆ ತಂದೆತಾಯಿಗಳಿಗೆ ಹೇಳಿಬಿಟ್ಟರು.

ಆ ಸಂಭವ, ಮೋಹನನ ಪರೀಕ್ಷೆ, ಮುಗಿದು ಎರಡು ವರ್ಷಗಳು ಕಳೆದಿವೆ ಮೋಹನನಿಗೆ ಇನ್ನೂ ಮಾತು ಬರಲಿಲ್ಲ. ಅವನು ಇನ್ನೂ ಆ ಆ ಈ ಈ ಎಂದು ಸಂಜ್ಞೆ ಮಾಡಿಕೊಂಡೇ ಇದ್ದಾನೆ.

ತಂದೆ ತಾಯಿಗಳು ದಿನದಿನಕ್ಕೆ ಈ ಚಿಂತೆಯಿಂದ ಹಣ್ಣಿಯಾಗಿ ಸೊರಗಿಹೋಗುತ್ತಿದ್ದಾರೆ. ತಮ್ಮ ಮೊದಲ ಮಗು, ಒಂದೇ ಒಂದು ಗಂಡು ಮಗುವಿಗೆ ಈ ಗತಿ ಒದಗಿಬಂದಿತೆ ಎಂದು ಕಣ್ಣೀರು ಮಿಡಿಯುತ್ತಿದ್ದಾರೆ.

೫

ಮೋಹನ ತುಂಬ ಹಟಮಾರಿ ಹುಡುಗನಾಗಿದ್ದಾನೆ. ಅವನು ಮಾತು ಬಾರದ ಮಗುವೆಂದು ಎಲ್ಲರ ಕನಿಕರಕ್ಕೆ ಪಾತ್ರನಾಗಿ ಅವನು ಹೇಳಿದುದೆ, ಬೇಡಿದುದೆ, ಆಗಬೇಕು ಎನ್ನುವ ಹಾಗಾಗಿ ಹೋಗಿದೆ.

ಆದರೆ ಮೂರು ಚಕ್ರದ ಬೈಸಿಕಲ್ ವಿಷಯದಲ್ಲಿ ಅವನ ಮಾತು ನಡೆಯುವಹಾಗಿಲ್ಲ. ಮಧು ಹೊಂದಿರುವಂತೆ ಅಂಥದೆ ಒಂದು ಸೈಕಲ್ ತನಗೂ ಬೇಕು ಎನ್ನುವುದು ಮೋಹನನ ಬಯಕೆ; ಹಟ. ಕೆಲವು ಸಮಯ ಮಧುವಿನೊಂದಿಗೆ ಜಗಳವಾಡಿ, ಅವನನ್ನು ಕೆಳಗೆ ಹಾಕಿ, ತಾನೇ ಆ ಸೈಕಲ್ಲಿನ ಮೇಲೆ ಕುಳಿತು ಸವಾರಿ ಮಾಡಿಬಿಡುತ್ತಾನೆ ಮೋಹನ.

ಅಂಥ ಒಂದು ಸೈಕಲನ್ನು ಹೇಗಾದರೂ ಮಾಡಿ ಮೋಹನನಿಗೆ ತೆಗೆದುಕೊಡಲೇಬೇಕು ಎಂದು ಶೇಖರನೂ ಮೂರು ತಿಂಗಳಿಂದ ಭಗೀರಥ ಯತ್ನ ಮಾಡುತ್ತಿದ್ದಾನೆ. ಆದರೆ ಸಾಧ್ಯವಾಗುತ್ತ ಇಲ್ಲ.

ಅಂದು ಸಂಜೆ ಶೇಖರ ಆಫೀಸು ಕೆಲಸ ಮುಗಿಸಿಕೊಂಡು ಬಂದ. ಬರುವಾಗಲೆ ಅವನಿಗೆ ಯಾಕೊ ತುಂಬ ತಲೆನೋವು. ಆಗ ಗಂಟೆ ಆರು–ಆರೂವರೆ ಸಮಯ.

ಶೋಭಾ "ಬಿಸಿಯಾಗಿ ಕಾಫಿ ಮಾಡಿಕೊಡುತ್ತೇನೆ. ಒಂದು ಗುಳಿಗೆ ನುಂಗಿ ಕಾಫಿ ಕುಡೀರಿ" ಎಂದವಳೆ ಕಾಫಿಗೆ ನೀರಿಟ್ಟಳು. ಕಾಫಿ ತಯಾರು ಮಾಡಿದಳು. ಪತಿಗೆ ಕೊಟ್ಟಮೇಲೆ ತಾನೂ ಸ್ವಲ್ಪ ಕುಡಿದು ಮೋಹನನಿಗೆ ಎಂದು ಅರ್ಧ ಲೋಟಾ ಇಟ್ಟು ಬಾಗಿಲಲ್ಲಿ ಬಂದು ನಿಂತು "ಮೋಹನಾ... ಮೋಹನಾ......ಬಾಪ್ಪಾ, ಇಲ್ಲೀ..." ಎಂದು ಕೂಗಿದಳು.

ಮೋಹನ ಮಧುವನ್ನು ಹಿಂದೆ ಕುಳ್ಳಿರಿಸಿಕೊಂಡು ತಾನು ಸೈಕಲ್ ಸವಾರಿ ಮಾಡುತ್ತಿದ್ದ. ತಾಯಿಯ ಕರೆಗೆ ಓ ಎಂದನೆ ಹೊರತು ಮತ್ತೆ ಅವನು ಇತ್ತ ಬರಲಿಲ್ಲ

ಶೋಭಾ ಕೂಗಿ ಕರೆದು ಮೋಹನ ಬಾರದಿರಲು ಹಿಂದಿರುಗಿದಳು. ಪತಿ ತಲೆನೋವು ಎನ್ನುತ್ತಿದ್ದಾನೆ. ಬಿಸಿಯಾಗಿ ತಿಳಿಸಾರು ಮಾಡೋಣ ಎಂದುಕೊಂಡ

ಬಳಿ ಸ್ವಲ್ಪ ತೆಂಗಿನಕಾಯಿಯನ್ನು ತುರಿದು ಮೆಣಸನ್ನು ಸೇರಿಸಿ ಒರಳಿಗೆ ಹಾಕಿದಳು.

ಆಕೆ ಆ ಮಸಾಲೆಯನ್ನು ನಾಲ್ಕು ಸುತ್ತು ರುಬ್ಬಿರಬೇಕು, ಅಷ್ಟೆ. ಆಗ ಹೊರಗೆ ಹೋ ಎನ್ನುವ ಚೀತ್ಕಾರ ಕೇಳಿಬಂದಿತು.

ಶೇಖರನೂ ಶೋಭಾಳೂ ಹೊರಗೆ ಧಾವಿಸಿದರು ಸುಮಾ ಸಹ ಓಡಿಬಂದಿದ್ದಳು.

ಸ್ವಲ್ಪ ಸಮಯದ ಹಿಂದೆ ಆಟವಾಡುತ್ತಿದ್ದ ಬಾಲರಲ್ಲಿ ಏನಾಯಿತೊ ಏನೊ? ಮೋಹನ ಮಧುವನ್ನು ಕೆಳಗೆ ಹಾಕಿದ್ದಾನೆ. ಅಷ್ಟುಮಾತ್ರವಲ್ಲ. ಅವನ ತೋಳನ್ನು ಬಲವಾಗಿ ಕಚ್ಚಿಬಿಟ್ಟಿದ್ದಾನೆ. ಮಧುವಿನ ತೋಳಿನಲ್ಲಿ ಮೋಹನನ ಹಲ್ಲುಗಳು ಪಡಿಮೂಡಿ ರಕ್ತ ಒಸರುತ್ತಿದೆ.

ಶೋಭಾ ಸಿಟ್ಟಿನಿಂದ ಕುದಿದವಳೆ ಮೋಹನನಿಗೆ ನಾಲ್ಕು ಏಟು ಬಾರಿಸಬೇಕು ಎನ್ನುವಾಗ ಸುಮಾ ಅವಳನ್ನು ತಡೆದುಬಿಟ್ಟಳು.

"ಇದೇನು ಶೋಭಾ ನಿನ್ನ ಹುಚ್ಚಾಟ! ಮಕ್ಕಳಿಗೆ ಏನು ತಿಳಿಯುತ್ತೆ ಹೇಳು? ಅವನ್ನ ಹೊಡೀಗಿಡೀ ಬೇಡಮ್ಮ."

ಪತಿಪತ್ನಿಯರು ಹಿಂದಿರುಗಿದರು. ಶೋಭಾಳಿಗೆ ಸಿಟ್ಟು ಇನ್ನೂ ತಣಿದಿರಲಿಲ್ಲ. ಅವಳು ಮೋಹನನ್ನು ಕೆಂಕುಳಿಂದ ಕೆಳಗಿಳಿಸಿದವಳೆ "ಕುಕ್ಕರಿಸು, ಮೂದೇವಿ. ಇವತ್ತು ಏಟಿನಿಂದ ತಪ್ಪಿಸಿಕೊಂಡೆ" ಎಂದವಳೆ ಮುಚ್ಚಿಟ್ಟಿದ್ದ ಕಾಫಿಯನ್ನು ಅವನ ಮುಂದೆ ಇಟ್ಟಳು. ಮೋಹನ ತಲೆಯಲ್ಲಾಡಿಸುತ್ತ ಆ ಎಂದು ದನಿತೆಗೆದ.

"ಕುಡೀದಿದ್ದರೆ ಹಾಳಾಗು" ಎಂದವಳೆ ಶೋಭಾ ಮತ್ತೆ ತನ್ನ ಕೆಲಸದಲ್ಲಿ ಮಗ್ನಳಾದಳು. ಮೋಹನ ಇನ್ನೂ ಜೋರಾಗಿ ಓ ಎಂದ.

ಶೇಖರನಿಗೂ ತುಂಬ ಸಿಟ್ಟು ಬಂದಿತ್ತು. "ಯಾಕೋ, ಯಾಕೊ ಹೀಗೆ ಅಳ್ತೀ? ಏನಾಯ್ತೊ ನಿನಗೆ?" ಎಂದು ಅವನೂ ಗದರಿಸಿಕೊಂಡ

ತಾಯಿಯ ಅಸಡ್ಡೆಗೂ ತಂದೆಯ ಗದರಿಸುವಿಕೆಗೂ ಎರಡಕ್ಕೂ ಮಣಿಯದೆ ಮೋಹನ ಮತ್ತೂ ಓ ಎಂದ. ಕೈಕಾಲುಗಳನ್ನು ನೆಲಕ್ಕೆ ಬಡಿದ, ದೇಹವನ್ನು ನುಲಿದ. ಆ ಎಂದ.

ಹೀಗೆ ಮೋಹನ ಕುಳಿತಲ್ಲಿಯೆ ಸರ್ಕಸ್ ಆಡುತ್ತ ಮುಂದೆ ಮುಂದೆ ಬಂದ. ಶೋಭಾ ಆಗ ತಾನೆ ಹಾಲನ್ನು ಕಾಯಿಸಿ ಸ್ಟವನ್ನು ಬದಿಯಲ್ಲಿಟ್ಟಿದ್ದಳು. ಹಾಲು ಹೊಗೆ ಹಾಯುತ್ತಿತ್ತು.

ಮೋಹನ ಹೀಗೆ ಹಾಗೆ ಕೈಕಾಲುಗಳನ್ನು ಬಡಿಯುತ್ತ ಆ ಹಾಲಿನ ಪಾತ್ರೆಯನ್ನು ಝಾಡಿಸಿ ಒದ್ದೇಬಿಟ್ಟ. ಹಾಲು ಮನೆತುಂಬ ಹರಿದುಹೋಯಿತು.

ಶೇಖರನಿಗೆ ಈಗ ಸಿಟ್ಟನ್ನು ತಡೆಹಿಡಿಯುವದು ಸಾಧ್ಯವಾಗಲಿಲ್ಲ ಅವನು ಎದ್ದವನೇ ಫಡಾರ್ ಫಡಾರ್ ಎಂದು ಮೋಹನನಿಗೆ ಚೆನ್ನಾಗಿ ಥಳಿಸಿಯೇ ಬಿಟ್ಟ.

ಶೋಭಾ ಅಯ್ಯೋ ಎಂದು ಕೂಗಿಕೊಂಡವಳೇ ಮೋಹನನನ್ನೆತ್ತಿಕೊಂಡಳು. ಮೋಹನ ಹೆದರಿಕೆಯಿಂದ, ತಂದೆಯ ಪೆಟ್ಟಿನಿಂದ ತತ್ತರಿಸಿ ನಿಂತಲ್ಲಿಯೇ ಉಚ್ಚೆಹೊಯ್ದುಕೊಂಡ. ಶೋಭಾ ಅವನನು ಎತ್ತಿಕೊಂಡು ಅವನ ತಲೆಯನ್ನು ತನ್ನ ಎದೆಯಲ್ಲಿ ಹುದುಗಿಸಿಕೊಂಡವಳೇ "ಅಯ್ಯೋ ನನ್ನಮ್ಮಾ ಅಯ್ಯೋ ನನ್ನಮ್ಮಾ...." ಎಂದು ಬಿಕ್ಕಿದಳು.


ಶೇಖರನಿಗೆ ಈಗ ತಾನೇ ತನ್ನ ಮೈಮೇಲಿನ ಪರಿವೆ ಬಂದಿದೆ. ತಾನು ಏನು ಮಾಡಿದೆ ಎನ್ನುವ ಮನವರಿಕೆಯಾಗಿದೆ.

ಮೋಹನ ಅಳುವನ್ನು ನಿಲ್ಲಿಸಿಬಿಟ್ಟಿದ್ದ. ಆದರೆ ಇನ್ನೂ ಬಿಕ್ಕುತ್ತಿದ್ದ. ಹೆದರಿಕೆಯಿಂದ ತಾಯ ಕೊರಳಿಗೆ ತನ್ನ ಕೈಗಳನು ಬಳಸಿದವನೇ ಭದ್ರವಾಗಿ ಅಪ್ಪಿಕೊಂಡಿದ್ದ

ಶೇಖರ ಮತ್ತೇನು ಮಾತನ್ನೂ ಆಡದೆ ಹಿಂದಿರುಗಿದ. ಹಾಸಿಗೆಯನು ಬಿಚ್ಚದ ಹಾಗೆಯೇ ಸುರುಟಿಕೊಂಡ

ಸ್ಟವ್ ಭರ್ರೋ ಎಂದು ಉರಿಯುತ್ತಿತ್ತು. ಸ್ಟವಿನ ಮೇಲಿದ್ದ ತಿಳಿಸಾರು ಕತಕತನೆ ಕುದಿಯುತ್ತಿತ್ತು

ಆಸ್ಪತ್ರೆಯಲ್ಲಿ ಕೇಳಿದ್ದು



ದೂರಾಯು, ಕೇಳು : ಇದು ಅಲ್ಲ ಆಸ್ಪತ್ರೆ.
ಇದಕೆನ್ನುವರು ರೋಗಿಗಳ ಮಹಾಯಾತ್ರೆ.
ಪುಣ್ಯವಂತರಿಗೆ ತೀಘ್ರದಲಿ ಕೈಲಾಸ.
ಬದುಕಿದವರಿಗೆ ಸಾವ ಕಾಯುದೆಯೆ ತ್ರಾಸ.

— ದಿನಕರ ದೇಸಾಯಿ

ಶೋಭಾ ಮೋಹನನನ್ನು ತೊಡೆಯ ಮೇಲೆ ಹಾಕಿಕೊಂಡೇ ಅಡಿಗೆಯನ್ನು ಮುಗಿಸಿದಳು. ಬಳಿಕ "ಬನ್ನೀಂದ್ರೇ.......ಬನ್ನೀಂದ್ರೇ........." ಎಂದು ನಾಲ್ಕು ನಾಲ್ಕು ಸಲ ಕೂಗನ್ನು ಹಾಕಿದಳು

ಶೇಖರ ಎದ್ದು ಬಂದ. ಮೋಹನ ತಾಯಿಯ ತೊಡೆಯಲ್ಲಿದ್ದಂತೆಯೇ ಕಣ್ಣು ಮುಚ್ಚಿದ್ದ. ಇನ್ನೂ ಬಿಕ್ಕುತ್ತಲೇ ಇದ್ದ. ರಕ್ತ ಹೆಪ್ಪುಗಟ್ಟಿದಂತೆ ಅವನ ಕೆನ್ನೆಗಳು ದೀಪದ ಪ್ರಭೆಗೆ ಲಕಲಕ ಮಿನುಗುತ ಇವೆ. ಬಾಸುಂಡೆ ಎದ್ದು ಕೆನ್ನೆ ಬೀಗಿಕೊಂಡಿದೆ.

ಪತಿ ಪತ್ನಿಯರು ಅಂದು ಊಟದ ಶಾಸ್ತ್ರವನು ಮುಗಿಸಿದರು, ಅಷ್ಟೆ.

ಆ ದುರ್ದೈವದ ರಾತ್ರಿ ಅಂದು ಹಾಗೆ ಪ್ರಾರಂಭವಾಯಿತು.

೨

ಮೋಹನನಿಗೆ ನಾಲ್ಕು ದಿನದಳಿಂದಲೂ ಒಂದೇ ಸಮನೆ ಜ್ವರ ಕಾಯುತ್ತ ಇದೆ. ಯಾವ ಗಳಿಗೆಯಲ್ಲಿ ಶೇಖರ ಮಗುವಿನ ಕೆನ್ನೆಗೆ ಥಳಿಸಿದನೋ ಏನೋ ಮಗುವಿನ ಕೆನ್ನೆ ಕೆಂಪಗೆ ಬಾತುಕೊಂಡಹಾಗಿದೆ.

ದಿನದಿನವೂ ಮೂರು ಹೊತ್ತು ಔಷಧಿ ಸೇವನೆ ನಡೆಯುತ್ತ ಇದೆ. ಆದರೂ ಯಾಕೋ ಮೋಹನನಿಗೆ ಜ್ವರದ ವೇಗ ತಣಿಯುತ್ತ ಇಲ್ಲವಲ್ಲ.

ಆ ರಾತ್ರಿ ಮೋಹನನ ಕೆನ್ನೆ ಮತ್ತಷ್ಟು ಊದಿಕೊಂಡಿದೆ ಮಿರಮಿರ ಎನ್ನುತ್ತಿದೆ ಬಲು ನಿನ ಹಾಗಿದೆ. ಎಲ್ಲಿ ಅದರ ಮೇಲೆ ಸ್ವಲ್ಪ ಬೆರಳಾಡಿಸಿದರೆ ಫಟ್ ಎಂದು ಒಡೆದು ಹೋಗುತದೆಯೋ ಎನ್ನುವ ಹಾಗಿದೆ

ಮಗುವಿನ ಅವಸ್ಥೆಯನ್ನು ನೋಡಿ ಸಹಿಸಲಾರದ ಶೋಭಾ, ಮಗುವಿನ ಬಳಿಯಲ್ಲಿ ಕುಳಿತು ಬಿಕಬಿಕ್ಕಿ ಅಳುತ್ತಿದ್ದಾಳೆ.

ತಾಯಿಯ ಸಂಕಟ, ಮಗುವಿನ ಯಾತನೆ, ಎರಡೂ ಒಟ್ಟುಗೂಡಿ ಶೇಖರನು ಹಾಯ್ ಹಾಯ್ ಎನ್ನುತ್ತಿದ್ದಾನೆ. ಅವನಿಗರಿವಿಲ್ಲದಂತೆಯೇ ಅವನ ಕಪೋಲಗಳ ಮೇಲೆ ಕಣ್ಣೀರು ಕೋಡಿವರಿಯುತ್ತಿದೆ

ಆಗ ಶೋಭಾ "ಏಳೀಂದ್ರೇ.........ಏಳೀಂದ್ರೇ........." ಎಂದು ಅವನ ಭುಜವನು ಹಿಡಿದು ಅಲುಗಿಸಿದಳು.

ಶೇಖರ ದಟ್ಟನೆ ಕಣ್ತೆರೆದ. ಬೆಳಗಾಗಿ ಹೋಗಿದೆ ಶೋಭಾ ತನ್ನನ್ನು ಎಬ್ಬಿಸುತ್ತಿದ್ದಾಳೆ

ಆತ ಹಾಸಿಗೆಯಲ್ಲಿ ಆ ಅವಸ್ಥೆಯಲ್ಲಿ ಕುಳಿತಿದ್ದಂತೆಯೇ ಶೋಭಾ ಮೋಹಕವಾಗಿ ನಕ್ಕಳು. "ಇದೇನ ಅಂದ್ರೆ, ಬೆಳಗಾದ ಮೇಲೆ ಕನವರಿಸುತ್ತ ಇದ್ದೀರಾ?" ಎಂದಳು, ಶೋಭಾ ಆಗ ತುಂಬ ಮೋಹಕವಾಗಿ ಕಾಣುತ್ತಿದ್ದಳು. ಅವಳು ಆಗತಾನೆ ಮಿಂದುಬಂದಿದ್ದರಿಂದ ಬೆಳಗಿನ ವೇಳೆಯಲ್ಲಿ ಇಬ್ಬನಿಯಿಂದ ತೊಯ್ದ ಹೂವಿನಂತೆ ಸ್ವಚ್ಛವಾಗಿದ್ದಳು. ತಲೆಗೂದಲೂ ನನೆಯಾಗಿದ್ದುದರಿಂದ ತುದಿಗಂಟನ್ನು ಹಾಕಿಕೊಂಡಿದ್ದಳು ಎರಡೂ ಕಡೆಯ ಕೇಶ ಕಿವಿಗಳ ಮೇಲೂ ಹರಿಹಾಯ್ದಿತ್ತು ದೇವರ ಮನೆಯಲ್ಲಿ ದೇವರ ಮುಂದಿನ ದೀಪ ಬೆಳಗಿದ್ದಳು ಎಂದು ಕಾಣುತ್ತದೆ ಊದುಬತ್ತಿ ಹಚ್ಚಿದ್ದಳು ಎಂದು ಕಾಣುತ್ತದೆ. ಊದುಬತ್ತಿಯ ಪರಿಮಳ ಘಮೋ ಎನ್ನುತ್ತ ಮನೆತುಂಬ ಅಲೆಹಾಯುತ್ತ ಇದೆ

ಈ ಪರಿಮಳ ಆ ಪರಿಮಳ ಎಲ್ಲ ಸೇರಿಕೊಂಡು ಆ ಸ್ಥಿತಿಯಲ್ಲಿ ಶೋಭಾಳನ್ನು ಬರಸೆಳೆದುಕೊಳ್ಳಬೇಕು ಎಂದು ಶೇಖರನಿಗನ್ನಿಸಿತು ಆದರೆ ಶೋಭಾ ಪತಿಯ ತಲೆದಿಂಬಿನ ಮೇಲ್ಗಡೆ ಹೊಗೆ ಹಾಯುವ ಕಾಫಿಯ ಬಟ್ಟಲನಿಟ್ಟು ಹಿಂದಿರುಗಿಬಿಟ್ಟಿದ್ದಳು

ಹಾಸಿಗೆಯಲ್ಲಿ ಕುಳಿತಿದ್ದಂತೆಯೇ ಶೇಖರ ಹೊಗೆ ಹಾಯುವ ಕಾಫಿಯ ಬಟ್ಟಲನ್ನು ಕೈಗೆತ್ತಿಕೊಂಡ ಮುಖವನ್ನು ತೊಳೆಯದೆ ಬೆಡ್ ಕಾಫಿ ಕುಡಿಯುವದು ಅವನ ವಾಡಿಕೆ

ಹಾಗೆ ಆತ ಒಂದು ಗುಟುಕು ಕಾಫಿ ಕುಡಿದಿರುವಾಗ ಮೋಹನನೆಡೆಗೆ ಪಟ್ಟನೆ ದೃಷ್ಟಿಯನು ಹರಿಸಿದ

ಕೂಕ್ಕರಿಸಿ ಮಲಗಿದ್ದ ಮೋಹನ ಕುತ್ತಿಗೆಯ

ವರೆಗೂ ಹೊದಿಕೆಯನ್ನೆಳೆದುಕೊಂಡಿದ್ದಾನೆ ಸುಖವಾಗಿ ನುಂಗಿ ನಿದ್ರಿಸುತ್ತಿದ್ದಾನೆ.

ಶೇಖರ ಮಗುವನ್ನೆ ಎವೆಯಿಕ್ಕದೆ ನೋಡಿದ.

ಹೌದು. ಇದು ವರೆವಿಗೂ ತಾನು ಕಂಡುದೆಲ್ಲವೂ ಕನಸು. ಅವನ ಕೆನ್ನೆ ಬಾತುಕೊಂಡದ್ದು, ಶೋಭಾ ಅವನ ಸನಿಹದಲ್ಲಿ ಕುಳಿತು ಬಿಕ್ಕಿಬಿಕ್ಕಿ ಅತ್ತದ್ದು—

ಇತ್ಯಾದಿ.

ಆದರೆ ರಾತ್ರಿ ತಾನು ಹಾಗೆ ಅವನನ್ನು ಥಳಿಸಬಾರದಿತ್ತು. ಆದರೆ ಏನು ಮಾಡುವುದು ? ಮಧುವಿನ ಕೈಯನ್ನು ಕಚ್ಚಿ ರಕ್ತ ಒಸರುವ ಹಾಗೆ ಮಾಡಿದ್ದಾನೆ. ಕಾಸಿ ಇಟ್ಟಿದ್ದ ಹಾಲಿನ ಪಾತ್ರೆಯನ್ನು ಒದೆದು ತನಗೆ ಸಿಟ್ಟು ಬರುವಂತೆ ಮಾಡಿದ್ದಾನೆ

ಈ ಸಿಟ್ಟು ಎನ್ನುವುದು ಆಕಸ್ಮಿಕವಾಗಿ ಏರ್ಪಡುವ ಅಪಘಾತದಂತೆ. ಇಲ್ಲವೆ ಇಂಕು ಮುಗಿದ ಮೇಲೆ ಥಟ್ಟನೆ ಧುಮುಕುವ ಒಂದು ತೊಟ್ಟಿನಂತೆ ಒಮ್ಮೆಲೇ ಅದು ಧುಮುಕಿ ಬಿಡುತ್ತದೆ. ಅನಂತರವೇ ಅಯ್ಯೋ ಹೀಗೆ ನಾವು ಮಾಡಬಾರದಿತ್ತು ಎನಿಸುತ್ತದೆ.

ಶೇಖರ ಎದ್ದ. ಹೊರಗಡೆ ನಡೆದ. ನಿತ್ಯ ಕರ್ಮಗಳನ್ನು ತೀರಿಸಿಕೊಂಡವನೆ ಸ್ನಾನವನ್ನೂ ಮುಗಿಸಿಕೊಂಡ.

ಆತ ಒಳಗೆ ಬಂದಾಗ ದೇವರ ಮುಂದಿನ ನೀಲಾಂಜನದ ಎಣ್ಣೆ ಮುಗಿದು ದೀಪ ನಂದಿಹೋಗುವ ಸ್ಥಿತಿಯಲ್ಲಿತ್ತು. ಬತ್ತಿ ಹೊಗೆ ಹಾಯುತ್ತಿತ್ತು.

ಶೇಖರ ಎರಡೂ ನೀಲಾಂಜನದಲ್ಲಿದ್ದ ಬತ್ತಿಯನ್ನು ಹಿಂದಕ್ಕೆ ತಳ್ಳಿದವನೆ ಎರಡಕ್ಕೂ ಅಷ್ಟು ಎಣ್ಣೆಯನ್ನು ಸುರಿದ. ದೀಪ ಕುಡಿಯೊಡೆದು ಪ್ರಭೆ ಬೆಳಗಿತು

ದೀಪ ಕುಡಿಯೊಡೆದು ಪ್ರಭೆ ಬೆಳಗುತ್ತಲೆ ದೇವರ ಮುಖವೂ ಮಿನುಮಿನುಗಿತು

ಶೋಭಾಳಿಗೆ ಆಶ್ಚರ್ಯ

ಶೇಖರ ಎಂದೂ ದೇವರ ಮುಂದಿನ ನೀಲಾಂಜನಕ್ಕೆ ಎಣ್ಣೆ ಸುರಿದವನಲ್ಲ. ಊದುಬತ್ತಿ ಹಚ್ಚಿದವನಲ್ಲ. ಅವನು ಯಾವೊತ್ತೂ ಹಾಗೆಯೇ ; ಯಾವಾಗಲೂ ಹಾಗೆಯೇ : ಜನಿವಾರದ ಹಬ್ಬದ ದಿವಸವೂ ಹಾಗೆಯೇ

ಅಂಥ ವಿಶೇಷಗಳಲ್ಲಿ ಶೋಭಾ ಅವನನ್ನು ಕುರಿತು ಆಕ್ಷೇಪಣೆ ಮಾಡಿದ್ದಾಳೆ. "ಇದೇನೂಂದ್ರೆ, ಹಬ್ಬದ ದಿನವಾದರೂ ನಾಲ್ಕು ಆಚಮನ ಮಾಡಿ ಜನಿವಾರ ಹಾಕಿಕೊಳ್ಳಬಾರದೆ ?" ಎಂದು.

ಅದಕ್ಕೆ ಶೇಖರನ ಉತ್ತರ ಹೀಗೆ :

"ಆಚಮನ ಎಲ್ಲ ಆಚಾರ್ಯರಿಗೆ ಬಿಟ್ಟಿದ್ದೇನೆ.'

ಅಂಥ ಶೇಖರ ಇಂದು ದೇವರ ಮುಂದೆ ಬಂದು ನಿಲ್ಲುವಾಗ ಯಾರಿಗೆ ಆಶ್ಚರ್ಯವಾಗಲಿಕ್ಕಿಲ್ಲ ! ಅದಕ್ಕೇ ಶೋಭಾ ಹಾಗೆ ರಾಗವೆಳೆದದು

"ಭಾಪುರೆ, ಇದೇನಿದು ಇವೊತ್ತು ?"

ಶೇಖರ ನಗುತ್ತ "ಏನೊ ಮನಸ್ಸಾಯಿತು" ಎಂದ.

ಆಗ "ಮ್ಮಾ ಮ್ಮಾ" ಎಂದು ಒಂದು ಕರೆ ಅತ್ತಣಿಂದ ಕೇಳಿಬಂದಿತು.

ಶೋಭಾ ಎದ್ದವಳೆ ಅತ್ತ ಧಾವಿಸಿದಳು ಶೇಖರನೂ ಅವಳನ್ನು ಹಿಂಬಾಲಿಸಿದ.

ಮೋಹನ ಹಾಸಿಗೆಯಲ್ಲಿ ಎದ್ದು ಕುಳಿತಿದ್ದಾನೆ. ಕಣ್ಣುಗಳನ್ನು ತೀಡಿಕೊಳ್ಳುತ್ತಿದ್ದಾನೆ. ತಾಯಿ ಸನಿಹಕ್ಕೆ ಬರುತ್ತಲೆ "ಅಮ್ಮಾ, ಅಮ್ಮಾ" ಎಂದು ಮತ್ತೆ ಉಚ್ಚರಿಸಿದ್ದಾನೆ

ಹೌದು ಇವೊತ್ತು ಅವನ ಬಾಯಿಂದ ಪ್ರಥಮವಾಗಿ "ಅಮ್ಮ" ಎನ್ನುವ ಶಬ್ದ ಹೊರಬಿದ್ದಿದೆ

ತನ್ನ ಕಣ್ಣುಗಳನ್ನೆ ನಂಬಲು ಸಾಧ್ಯವಿಲ್ಲದಂತೆ, ಹಿಗ್ಗು ಸೂರೆಯಾದಂತೆ, ಶೋಭಾ ಭದ್ರವಾಗಿ ಅವನನ್ನು ಅಪ್ಪಿಕೊಂಡುಬಿಟ್ಟಿದ್ದಳು. ಅವನ ತಲೆಯನ್ನು ತನ್ನ ಎದೆಯಲ್ಲಿ ಹುದುಗಿಸಿಕೊಂಡಿದ್ದಳು. ಅವಳ ಕಣ್ಣುಗಳಿಂದ ಕಣ್ಣೀರು ಕೋಡಿವರಿದಿತ್ತು.

ರಾತ್ರಿಯೂ ಹೀಗೆಯೆ ಅವಳು ಮೋಹನನು ಎದೆಗವಚಿಕೊಂಡಿದ್ದಳು. ಆಗಲೂ ಅವಳ ಕಪೋಲಗಳ ಮೇಲೆ ನೀರು ಹರಿಹರಿದು ಇಳಿದುಬಂದಿತ್ತು.

ಆದರೆ ರಾತ್ರಿಗೂ ರಾತ್ರಿ ತುಂಬಿದ ಒಂದು ಬೆಳಗಿಗೂ ಅದೆಷ್ಟು ವ್ಯತ್ಯಾಸ ! ಅದೆಷ್ಟು ಅಂತರ !!

ರಾತ್ರಿಯದು ಎಣ್ಣೆ ತೀರಿಹೋಗಿ ಬತ್ತಿ ಹೊಗೆ ಹಾಯುವ ಸಂಭವ ; ಬೆಳಗಿನದು ಎಣ್ಣೆ ತುಂಬಿಕೊಂಡು ಪ್ರಭೆ ಬೆಳಗುವ ಸನ್ನಿವೇಶ

ವ್ಯತ್ಯಾಸ ಇಷ್ಟೇ

ಬಾಲ ಪ್ರಪಂಚ



ಸುಂದ್ರೂ ಶಂಕ್ರೂ ಸ್ನೇಹ

ಆರ್. ಪದ್ಮನಾಭ

ಒಂದು ಊರಿನಲ್ಲಿ ಸುಂದ್ರು, ಶಂಕ್ರು ಎಂಬ ಇಬ್ಬರು ಹುಡುಗರು ಇದ್ದರು. ಇವರಿಬ್ರೇ ಅಲ್ಲ, ಬೇರೆ ತುಂಬ ಹುಡುಗರೂ ಇದ್ದರು. ಇದು ಸುಂದ್ರು ಶಂಕ್ರುಗಳ ಕತೆ.

ಸುಂದ್ರು ಬಡ ಹುಡುಗ, ಶಂಕ್ರು ಐಶ್ವರ್ಯವಂತರ ಮಗ. ಇಬ್ರೂ ಒಂದೇ ಶಾಲೆಗೆ ಹೋಗ್ತಿದ್ರು. ಶಂಕ್ರು ಬೆಲೆಬಾಳುವ ಬಟ್ಟೆಗಳನ್ನು ಹಾಕ್ಕೊಳ್ತಿದ್ದ. ಸುಂದ್ರು ಹರಕು ಅಂಗಿಬಟ್ಟೆಗಳನ್ನೆ ಒಗೆದು ಹೊಲಿದು ಹ್ಯಾಂಗೋ ಹಾಕ್ಕೊಳ್ತಿದ್ದ.

ಆದರೆ ಕಲಿಯುವುದರಲ್ಲಿ ಸುಂದ್ರು ಕ್ಲಾಸಿನಲ್ಲೇ ಗಟ್ಟಿಗ. ಆದ್ದರಿಂದ ಮಾಸ್ತರ್ರಿಗೆ ಅವನ ಮೇಲೆ ಹೆಚ್ಚು ಪ್ರೀತಿ.

"ಸುಂದ್ರೂನ ನೋಡಿ ಬುದ್ಧಿ ತಂದಕೋಬಾರದೆ?" ಎಂದು ಮಾಸ್ತರು ಕೆಲವು ಬಾರಿ ಹೇಳ್ತಾರೆ.

ಶಂಕ್ರೂಗೆ ಆ ಮಾತು ಹಿಡಿಸಿಲ್ಲ. ಸುಂದ್ರೂ ಏನು ಮಹಾ ದೊಡ್ಡ ಮನುಷ್ಯನೋ ಎಂದುಕೊಳ್ಳುತ್ತಿದ್ದ. ಅವನ ಮೇಲೆ ಹೊಟ್ಟೇಕಿಚ್ಚುಪಟ್ಟುಕೊಳ್ಳುತ್ತಿದ್ದ. ಆಗಾಗ ಏನೋ ಒಂದು ಸಣ್ಣಪುಟ್ಟ ಕಿರುಕುಳ ಅವನಿಗೆ ಕೊಡುತ್ತಿದ್ದ. ಅದರಿಂದ ಸುಂದ್ರೂಗೆ ಏನೂ ಕೆಡುಕಾಗಲಿಲ್ಲ ದೇವರ ದಯದಿಂದ.

ದೀಪಾವಳಿ ಹಬ್ಬ ಬಂತಲ್ಲ. ಎಲ್ಲ ಹುಡುಗರೂ ಚೆನ್ನಪ್ಪ ಅದು ತಂದುಕೊಟ್ರು, ಇದು ತಂದುಕೊಟ್ರು ಅಂತ ಒಬ್ಬರಿಗೊಬ್ಬರು ಹೇಳಕೊಳ್ತಾ ಇದ್ರು. ಪಟಾಕಿಬಾಣ, ಸಿಡಿಮದ್ದುಗಳ ಬಗೆಬಗೆಯ ಹೆಸರುಗಳು ಹುಡುಗರ ಬಾಯಿಯಲ್ಲಿ ಹೊರಡುತ್ತಿತ್ತು. ಸುಂದ್ರೂ ಏನೂ ಮಾತಾಡಲಿಲ್ಲ. ಕೂಲಿ ಕೆಲಸ ಮಾಡುವ ಅವನ ಅಪ್ಪ ಅವನಿಗೇನೂ ತಂದುಕೊಡುವ ಮಾತೇ ಇರಲಿಲ್ಲ.

ಶಂಕ್ರು ತನಗೆ ಅಷ್ಟು ಇಷ್ಟು ಅಂತ ಎಲ್ಲರಿಗಿಂತ ಹೆಚ್ಚೇ ಹಬ್ಬದ ಗಮ್ಮತ್ತು ಭಾರೀ ಹೇಳಕೊಂಡ. ಅವನಿಗೇನಪ್ಪ, ಮಹಾರಾಯರ ಮಗ ಅಂತ ಅಂದುಕೊಂಡ್ರು ಎಲ್ಲರೂ.

ಎಲ್ಲರ ಹಾಗೆ ಸುಂದ್ರೂ ಜಂಬ ಹೇಳಕೊಳ್ಳದಿದ್ದರೂ, ದೀಪಾವಳಿ ಸಮಯದಲ್ಲಿ ಅವನೂ ಸ್ವಲ್ಪ ಪಟಾಕಿ ಸಿಡಿಸದೇ ಇರುವುದಿಲ್ಲ. ಅದಕ್ಕೆ ದುಡ್ಡು ಕೂಡ ಅವನ ಸ್ವಂತದ್ದೇ. ಹೇಗೆಂದರೆ, ಯಾವಾಗಾದರೂ ಅವನು ಶಾಲೆಗೆ ಹೋಗುವಾಗ "ಏನಾದರೂ ತಕೊಂಡು ತಿಂದು, ಮನೆಗೆ ಬಾ. ಇವತ್ತು ಮನೆಯಲ್ಲಿ ತಿಂಡಿ ಮಾಡೋಲ್ಲ" ಎಂದು ಅಮ್ಮ ಅವನಿಗೆ ಐದು–ಆರು ಪೈಸೆ ಕೊಡುತ್ತಿದ್ದಳು. ಅದನ್ನೆಲ್ಲಾ ಹಾಗೇ ಮಿಗಿಲಿಸಿಟ್ಟುಕೊಳ್ಳುತ್ತಿದ್ದ. ಹಾಗೆ ಮಿಗಿಲಿಸಿದ ದುಡ್ಡು ಈ ಸಾರಿ ಲೆಕ್ಕ ಮಾಡಿದಾಗ, ಹತ್ರ ಹತ್ರ ಒಂದು ರೂಪಾಯಿಯಷ್ಟು ಆಗಿತ್ತು. ಅದರಿಂದ ಪಟಾಕಿ ತರಲು ಅಂಗಡಿಗೆ ಹೋದ.

ಅಲ್ಲಿ ವ್ಯಾಪಾರಕ್ಕೆ ಬಂದಿದ್ದ ಶಂಕ್ರೂ ಐದಾರು ರೂಪಾಯಿಗೆ ಮದ್ದುಬಾಣಗಳನ್ನು ತಕ್ಕೊಂಡ. ಸುಂದ್ರು ಒಂದು ರೂಪಾಯಿಗೆ ಪಟಾಕಿ ಮಾಲೆಗಳ ಪೊಟ್ಟಣ ತಕ್ಕೊಂಡು ಹೊರಟ.

ಸುಂದ್ರೂ ಅಷ್ಟಾದರೂ ಪಟಾಕಿ ತಕೊಂಡದ್ದನ್ನು ಸಹಿಸಲಿಕ್ಕಾಗಲಿಲ್ಲ ಶಂಕ್ರೂಗೆ. ಅವನು ಈ ಸಾರಿ ಪಟಾಕೀನೇ ಸಿಡಿಸದ ಹಾಗೆ ಮಾಡಬೇಕು ಅಂದುಕೊಂಡು ಅವನ ಹಿಂದೆಯೇ ಹೊರಟ ಶಂಕ್ರೂ. ಹೇಗೂ ಶಂಕ್ರೂ ತನ್ನ ಮನೆಗೆ ಹೋಗುವ ದಾರಿಯಲ್ಲೇ ಸುಂದ್ರೂನ ಮನೆಯೂ ಇತ್ತು.

ಸುಂದ್ರೂ ತಾನು ಕೊಂಡುಕೊಂಡ ಪಟಾಕಿ ಪೊಟ್ಟಣವನ್ನು ತನ್ನ ಸಣ್ಣ ಕರ್ಚೀಪಿನಲ್ಲಿ ಕಟ್ಟಿ ಮನೆಗೆ ತಂದು ಜಾವಡಿಯ ಬದಿಯಲ್ಲಿಟ್ಟು ಒಳಗೆ ಹೋದ.

ಶಂಕ್ರೂ ಸರಕ್ಕನೆ ಆ ಪೊಟ್ಟಣವನ್ನು ಎತ್ತಿಕೊಂಡು ತನ್ನ ಮನೆಯ ದಾರಿ ಹಿಡಿದ.

ಸುಂದ್ರೂ ಮತ್ತೆ ಬಂದು ನೋಡುತ್ತಾನೆ, ತನ್ನ ಪಟಾಕಿ ಪೊಟ್ಟಣ ಕಾಣೋದಿಲ್ಲ. ಅಚೆ ಈಚೆ ನೋಡಿದ. ಏನೂ ಗೊತ್ತಾಗ್ಲಿಲ್ಲ. ಮರದ ಮೇಲೆ ನೋಡಿದ. ಅಲ್ಲಿ ಕೆಲವು ಕೋತಿಗಳು ಕಾಣಿಸಿದವು. ಅವು ಅವನನ್ನು ನೋಡಿ ಹುಬ್ಬು ಹಾರಿಸುತ್ತ ಕೀಚ್–ಕೀರ್–ಎಂದು ಏನೇನೋ ಸದ್ದು ಮಾಡುತ್ತಿದ್ದುವು.

ಆ ಕೋತಿಗಳು ಆಗಾಗ ಆ ಮರದಲ್ಲಿ ಕಾಣಿಸಿಕೊಳ್ಳುತ್ತಿವೆ. ಯಾರಾದರೂ ಪಟಾಕಿ ಸಿಡಿಮದ್ದು ಬಾಣಗಳನು ಹಾರಿಸುವಾಗ, ಸಿಡಿಸುವಾಗ ಅವೂ ದೂರದಲ್ಲಿ ನೋಡಿ ಹಾರಿ ಹಾರಿ ಸಂತೋಷ ಪಡುತ್ತವೆ.

ಸುಂದ್ರೂ ಕರ್ಚೀಫಿನಲ್ಲಿ ಕಟ್ಟಿಕೊಂಡರೂ ಪಟಾಕಿ ಪೊಟ್ಟಣ ಹೊರಗೇ ಕಾಣಿಸುತ್ತಿತ್ತು. ಅದನ್ನು ನೋಡಿ ಕೋತಿಗಳು ಸುಂದ್ರೂ ಪಟಾಕಿ ಸಿಡಿಸುವುದನ್ನು ನೋಡಲು ಮರದಲ್ಲಿ ಕೂಡಿದ್ದುವು. ಒಂದು ದೊಡ್ಡ



ಕೋತಿಯ ಕುಟುಂಬವದು. ಅಪ್ಪ ಕೋತಿ ಅಮ್ಮ ಕೋತಿ, ಮರಿಗಳು ಎಲ್ಲ ಇದ್ದುವು.

ಶಂಕ್ರೂ ಸುಂದ್ರೂನ ಪಟಾಕಿ ಪೊಟ್ಟ ಕದ್ದು ಕೊಂಡು ಹೋದಕೂಡಲೇ ಅಪ್ಪ ಕೋತಿ ಅವನ ಹಿಂದೆಯೇ ಹೋಯಿತು. ಅವನು ತನ್ನ ಮದ್ದು ಬಾಣಗಳ ಚೀಲದಲ್ಲಿ ಸುಂದ್ರೂವ ಪೊಟ್ಟವನ್ನೂ ಹಾಕಿ ತನ್ನ ಮನೆಗೆ ಹೋಗಿ ಚೀಲವನ್ನು ಮೇಜಿನ ಮೇಲೆ ಇಟ್ಟು ಅಂಗಿ ತೆಗೆಯುತ್ತಾ ಇದ್ದ. ದೊಡ್ಡ ಕೋತಿ ಪಕ್ಕನೆ ಹೋಗಿ ಅವನ ಚೀಲವನ್ನು ಎತ್ತಿಕೊಂಡು ಗುಡುಗುಡು ಓಡಿಹೋಯಿತು, ಶಬ್ದ ಕೇಳಿ ತಿರುಗಿ ನೋಡಿದ ಶಂಕ್ರೂ "ಹೋ ಹೋ" ಎಂದು ಕೂಗುತ್ತ ಅದರ ಹಿಂದೆ ಓಡಿದ.

ಅದು ಅವನನ್ನು ನೋಡಿ ಹುಬ್ಬು ಹಾರಿಸಿ ಹಲ್ಲು ಕಿರಿದು ಎಗತಾಳಿ ಮಾಡುತ್ತಾ ಮರದ ಮೇಲೆ ಹತ್ತಿ ಎಲ್ಲಿಗೋ ಮಾಯವಾಗಿ ಹೋಯಿತು. ತಲೇ ಮೇಲೆ ಕೈಯಿಟ್ಟುಕೊಂಡು ಅಳುತ್ತಾ ಮೇಲೆ ಕೆಳಗೆ ನೋಡಿದ ಶಂಕ್ರು.

ಇತ್ತ ಸುಂದ್ರು ಚಿಂತೆಯಿಂದ ತಲೆ ತಗ್ಗಿಸಿ ಜಗಲಿಯ ಬದಿಯಲ್ಲಿ ಕುಳಿತಿದ್ದ. ಈ ಕೋತಿಗಳೇ ತನ್ನ ಪಟಾಕಿ ಪೊಟ್ಟ ಎತ್ತಿಕೊಂಡು ಹೋದವೇನೋ ಎಂದು ಅವನಿಗೆ ಸಂದೇಹ.

ಕೋತಿಗಳ ಕುಟುಂಬ ಎತ್ತಲೋ ನೋಡುತ್ತ ಆಚೆ ಈಚೆ ಓಡಾಡಿಕೊಂಡು ಅಲ್ಲೇ ಇದ್ದವು.

ಒಮ್ಮೆಲೇ ಕೀಚ್ ಕೀಚ್ ಎಂದು ಭಾರಿ ಗಲಾಟೆ ಮಾಡಿದುವು. ಅಪ್ಪ ಕೋತಿ ಶಂಕ್ರೂನ ಚೀಲವನ್ನು ತಂದು ಸುಂದ್ರೂನ ಮುಂದೆ ಇಟ್ಟು ಅವನ ಮುಖ ನೋಡುತ್ತಾ ಹಿಂದೆ ಹಿಂದೆ ಹೋಗಿ ತನ್ನ ಗುಂಪಿನೊಂದಿಗೆ ಮರದಲ್ಲಿ ನೋಡುತ್ತಾ, ಸನ್ನೆ ಮಾಡುತ್ತ ಕುಳಿತಿತ್ತು.

ಆಶ್ಚರ್ಯ, ಸಂತೋಷ, ಮೆಚ್ಚುಗೆ, ಅಯ್ಯೋ ಎಂಬ ದುಃಖ ಎಲ್ಲ ಒಟ್ಟಿಗೆ ಆಯಿತು ಸುಂದ್ರೂಗೆ. ಆ ಚೀಲವನ್ನು ನೋಡಿದ ಕೂಡಲೇ ಅದು ಶಂಕ್ರೂದೆಂದು ಅವನಿಗೆ ಗೊತ್ತಾಯ್ತು. ಅದರಲ್ಲಿ ತನ್ನ ಪಟಾಕೀ ಪೊಟ್ಟ ಕೂಡಾ ಹೇಗೆ ಬಂತು ಅಂತ ಆಶ್ಚರ್ಯವಾಯಿತು. ಈ ಕೋತಿಗಳು ತನ್ನದನ್ನೂ, ಅವನದನ್ನೂ ಎತ್ತಿಕೊಂಡುವೇನೋ ಅಂದುಕೊಂಡ! 'ಆಗಲಿ, ತಂದುಕೊಟ್ಟುವಲ್ಲ, ನಾನು ಸಿಡಿಸುವ ಪಟಾಕೀನ ನೋಡಲು ಕುಳಿತಿವೆ' ಎಂದುಕೊಂಡು ತನ್ನ ಪಟಾಕಿ ಪೊಟ್ಟ ಬಿಚ್ಚಿ ಒಂದು ಸರವನ್ನು ಬಿಡಿಸಿ ಒಂದೊಂದನ್ನೇ ಸಿಡಿಸಿ ಹಾರಿಸಿ ಅವುಗಳನ್ನೂ ಸಂತೋಷ ಪಡಿಸಿದ, ತಾನೂ ಸಂತೋಷ ಪಟ್ಟ. ಆಮೇಲೆ ಶಂಕ್ರೂ ಚಿಂತೆಪಡುತ್ತಿರಬಹುದು ಅಂದುಕೊಂಡು ಅವನ ಚೀಲವನ್ನೆತ್ತಿಕೊಂಡು ಹೋಗಿ, ದುಃಖದಲ್ಲಿರುವ ಅವನಿಗೆ ಕೊಡುತ್ತ, "ಇಕೋ ಶಂಕ್ರೂ. ದೊಡ್ಡದೊಂದು ಕಳ್ಳಕೋತಿ ನಿನ್ನ ಚೀಲ ತಂದು ನನ್ನ ಹತ್ರ ಕೊಟ್ತು. ಅದರಲ್ಲಿ ನನ್ನ ಪಟಾಕಿ ಸಹಾ ಇತ್ತು. ನಿಂದು ತಕೋ ಶಂಕ್ರು" ಎಂದ.


ಏನು ಹೇಳಬೇಕೋ ತೋರಲಿಲ್ಲ ಶಂಕ್ರೂಗೆ.

ಸುಂದ್ರೂ ಹಿಂದಿರುಗಿದ.

"ಸುಂದ್ರೂ, ಸುಂದ್ರೂ—" ಎಂದು ಶಂಕ್ರೂ ಗದ್ಗದ ಸ್ವರದಿಂದ ಅವನನ್ನು ಕರೆದು," ನನ್ನ ಕ್ಷಮಿಸು ಸುಂದ್ರೂ. ನಾನೇ ನಿನ್ನ ಪಟಾಕೀ ಎತ್ತಿಕೊಂಡು ಬಂದೆ. ಅದಕ್ಕೇ ಕೋತಿ ನನ್ನ ಚೀಲವನ್ನೇ ನಿನಗೆ ತಂದು ಕೊಟ್ತು. ನಾನು ಕೆಟ್ಟವ, ಕೆಟ್ಟವ" ಎಂದು ಕಣ್ಣೀರು ತುಂಬಿ.

"ಛೀ ಬಿಡಪ್ಪ" ಅಂತ ಸುಂದ್ರೂ ಅವನನ್ನು ಸಮಾಧಾನ ಮಾಡಿದ. ಶಂಕ್ರೂ ಕೊಟ್ಟ ಮದ್ದು, ಬಾಣಗಳ ಕಾಣಿಕೆಗಳೊಂದಿಗೇ ಹಿಂದಿರುಗಬೇಕಾಯಿತು ಸುಂದ್ರೂ— ಅಂದ್ರೆ ಅವ ಒತ್ತಾಯಮಾಡಿ ಕೊಟ್ಟ.

ಅಂದಿನಿಂದ ಅವರಿಬ್ಬರೂ ಅಚ್ಚುಮೆಚ್ಚಿನ ಗೆಳೆಯರು.





"ಹೂಂ...ಇಲ್ಲೇ ಎಲ್ಲಾ ನೋಡ್ಕೊಂಡ್ಬಿಡು; ಮನೆಗೆ ಹೋದಕೂಡ್ಲೆ ಪಟಾಕಿ ಕೊಡ್ಸು ಅಂತ ಹಟ ಮಾಡ್ಬೇಡ"

ವಿದ್ವಾಂಸರು ಮತ್ತು ಭಿಕ್ಷುಕ

ಆ ಊರಿನ ಒಂದು ಬೀದಿಯಲ್ಲಿ ಮೂರು ಜನ ವಿದ್ವಾಂಸರಿದ್ದರು. ಅವರಲ್ಲಿ ಒಬ್ಬನು ವ್ಯಾಕರಣ ಪಂಡಿತನಿದ್ದನು. ಇನ್ನೊಬ್ಬನು ಕಾಯದೆ ತಜ್ಞನಾಗಿದ್ದನು. ಮೂರನೆಯವನು ಕವೀಶ್ವರನಾಗಿದ್ದನು. ಒಮ್ಮೆಒಬ್ಬ ಭಿಕ್ಷುಕನು ವ್ಯಾಕರಣ ಪಂಡಿತನ ಮನೆಯಮುಂದೆ ನಿಂತು ಭಿಕ್ಷೆ ಬೇಡತೊಡಗಿದ. ಅದನ್ನು ಕೇಳಿ ವ್ಯಾಕರಣ ಪಂಡಿತನು ತನ್ನ ಮನೆಯಿಂದ ಹೊರಬಂದು—

"ಮೂರ್ಖ ಹೀಗೆ ಭಿಕ್ಷೆ ಬೇಡುವುದರಲ್ಲಿ ವೃಥಾ ಕಾಲಹರಣವನ್ನೂ ಶಬ್ದಗಳ ಅಪವ್ಯಯವನ್ನೂ ಮಾಡುವಿ ?" ಎಂದನು

ಆಗ ಆ ಭಿಕ್ಷುಕನು "ಸ್ವಾಮಿ ಹಸಿದ ಹೊಟ್ಟೆ ಭಿಕ್ಷೆ ಬೇಡದೇ ಇನ್ನೇನು ಮಾಡಲಿ" ಎಂದಾದ ಪಂಡಿತನು—

"ನೀನು ನಿಜವಾಗಿಯೇ ಮೂರ್ಖನಿರುವಿ. ಸರಿಯಾಗಿ ಎರಡು ವಾಕ್ಯಗಳನ್ನು ಹೇಳಲಿಕ್ಕೆ ಬರುವದಿಲ್ಲ—ನಿನಗೆ. ಹೋಗು, ವ್ಯಾಕರಣದ ನಿಯಮಗಳನ್ನು ಮೊದಲು ಕಲಿತುಕೋ. ಶಬ್ದ ಭಂಡಾರವೇ ನಿಜವಾದ ಸಂಪತ್ತು. ಹೋಗಿ ಅದನ್ನು ಸಂಪಾದಿಸು" ಎಂದನು.

ಅದನ್ನು ಕೇಳಿ, ಖಿನ್ನನಾದ ಭಿಕ್ಷುಕನು ಮುಂದಿನ ಮನೆಗೆಹೊರಟನು. ಅದು ಕಾಯದೆ ಪಂಡಿತನದಾಗಿತ್ತು. ಇವನ ಭಿಕ್ಷೆಯ ಬೇಡಿಕೆಯನ್ನು ಕೇಳಿ ಆ ನ್ಯಾಯಪಂಡಿತನು—

"ಅಲ್ಲವಯ್ಯ, ನಿನಗೆ ಹಸಿವೆಯಾಗಿದೆ ಎಂಬುದಕ್ಕೆ ಪ್ರಮಾಣವೇನು" ಎಂಬುದಾಗಿ ಪ್ರಶ್ನಿಸಿದನು. ಅದಕ್ಕೆ ಭಿಕ್ಷುಕನು ತನ್ನ ಹೊಟ್ಟೆಯನ್ನು ತಟ್ಟಿಕೊಳ್ಳುತ,

"ನನ್ನ ಈ ಹೊಟ್ಟೆ ನೋಡಿರಿ. ಹೇಗೆ ಬೆನ್ನಿಗೆ ಹತ್ತಿದೆ ಬಹಳ ಹಸಿವು





ಸಾವಕಾರರೇ. ಏನಾದರೂ ಇದ್ದರೆ ಹಾಕಿರಿ" ಎಂದು ಅಂಗಲಾಚಿದನು.

ಅವನು ಕೊಟ್ಟ ಕಾರಣದಿಂದ ಕಾಯದೇ ಪಂಡಿತನಿಗೆ ಸಮಾಧಾನವಾಗಲಿಲ್ಲ. "ಯೋಗಿಗಳ, ಸನ್ಯಾಸಿದಳ ಹೊಟ್ಟೆಯೂ ಹೀಗೆಯೇ ಇರುವುದುಂಟು ಅಲ್ಲದೆ ನಿನಗೆ ಅಪಚನ, ಅತಿಸಾರಗಳಿಂದಲೂ ನಿನ್ನ ಹೊಟ್ಟೆ ಹೀಗೆ ತಳಕಂಡಿರಬಹುದು. ಹಸಿವೆಯ ನಿಶ್ಚಿತ ಪುರಾವೆಯಿಲ್ಲದೆ ಯಾರೂ ನಿನಗೆ ಭಿಕ್ಷೆ ನೀಡಲಾರರು"

"ಇಲ್ಲ ಸ್ವಾಮಿ. ಹೊಟ್ಟೆಗೆ ತಿನ್ನಲಿಕ್ಕೇ ಇಲ್ಲ ಅಪಚನವೆಲ್ಲಿಂದ ಬರಬೇಕು ಬಹಳ ಹಸಿವು ಆಗಿದೆ ಸ್ವಲ್ಪ ದಯತೋರಿಸಿರಿ. ದೇವರು ನಿಮಗೆ ಒಳ್ಳೇದನ್ನು ಮಾಡುತ್ತಾನೆ" ಎಂದು ಪುನಃ ಅಂಗಲಾಚಿದನು.

ಅದಕ್ಕೆ ಆ ನ್ಯಾಯ ಪಂಡಿತನು "ನೋಡು. ಕಾಯದೆ ದೃಷ್ಟಿಯಿಂದ ನಿನಗೆ ಹಸಿವೆಯಾದದ್ದು ಸಿದ್ಧವಾಗಬೇಕೊ ಬೇಡವೊ ? ನೀನು ಯಾವ ವೇಳೆಯಿಂದ ಹಸಿವೆಯಿಂದ ಇದ್ದೀ ನಿನಗೆ ಎಷ್ಟು ಹಸಿವೆಯಾಗಿದೆ ನಿನ್ನ ಕೈಕಾಲು. ಮೈಗಳು ಮೊದಲಿನಂತೆಯೇ ಇದ್ದು, ಹಸಿವೆಯ ಯಾವ ಪರಿಣಾಮವೂ ನಿನ್ನ ದೇಹದ ಮೇಲೆ ಕಾಣುವದಿಲ್ಲ..." ಎಂದನು


ಶ್ರೀಮತಿ ಭಾರತಿ ಹಾವನೂರ

ಅವನ ಮಾತುಗಳನ್ನು ಕೇಳುತ್ತ ನಿಲ್ಲುವುದರಲ್ಲಿ ಪ್ರಯೋಜನವೇನೂ ಇಲ್ಲವೆಂದು ಭಿಕ್ಷುಕನು ಮುಂದಿನ ಮನೆಗೆ ಹೋದನು ಅದು ನಮ್ಮ ಕವಿ ಮಹಾಶಯನದಾಗಿದ್ದಿತ್ತು. ಭಿಕ್ಷುಕನು ತನ್ನ ಅಳಲನ್ನ ತೋಡಿಕೊಳ್ಳುತ್ತಿದ್ದಾಗ ಕವಿಯು ಕಿವಿಗೊಟ್ಟು ಕೇಳುತ್ತ ನಿಂತನು. ಅವನ ಅಳಲಿನಲ್ಲಿ, ಕವಿಗೆ ಕಾವ್ಯಸತ್ವವಾಗಲೀ, ರಸಾನುಬೋಧೆಯಾಗಲೀ ಕಂಡುಬರಲಿಲ್ಲ ಆಗ ಕವಿಯು ಹೇಳತೊಡಗಿದ—

"ಏನು ಹುಚ್ಚನಿರುವಿ ? ಹಸಿವು, ಸಂಕಟಗಳು ಮನುಷ್ಯನಿಗೆ ಬಾರದೇ ಮರಕ್ಕೆ ಬರುತ್ತವೆಯೆ ? ಅದಕ್ಕೆಲ್ಲ ವಿಶೇಷ ಗಮನಕೊಡಬಾರದು. ಸಂಕಟ ಬಂದಾಗ ಅದನ್ನು ಮರೆವಿಗೆ ಹಾಕಬೇಕಾದರೆ ಕಾವ್ಯ ದೇವಿಯ ಉಪಾಸನೆಯನ್ನು ಮಾಡು. ಕಲ್ಪನಾ ಸಾಮ್ರಾಜ್ಯದಲ್ಲಿ ವಿಹರಿಸು. ಆ ವಿಹಾರದಲ್ಲಿ ನೀರಡಿಕೆಯಾದರೆ ಕಾವ್ಯದೇವಿಯ ಕಾರಂಜಿಯ ನೀರನ್ನು ಸೇವಿಸು. ಶೃಂಗಾರ, ವೀರ, ರೌದ್ರ... ಇತ್ಯಾದಿ ರಸಸೃಷ್ಟಿಗಳೇ ನಿನ್ನ ಆಹಾರವಾಗಲಿ. ಬಾ ನಿನಗೆ ನನ್ನ ಕೆಲವು ಕವಿತೆಗಳನ್ನು ಓದಿ ತೋರಿಸುತ್ತೇನೆ" ಎಂದ ಕೂಡಲೇ ಭಿಕ್ಷುಕನು ಅಲ್ಲಿಂದ ಕಾಲೆ ಗೆದನು

ಅಲ್ಲಿಂದ ಮುಂದಿನ ಮನೆಯ ಮುಂದೆ ನಿಂತು, ಭಿಕ್ಷೆಯನ್ನು ಕೇಳಲೇ ಬೇಡವೇ ಎಂದು ಇತಿಮಿತಿಯಲ್ಲಿರುವಾಗ ಆ ಮನೆಯ ಗೃಹಸ್ಥನು ಇವನ ಮಾಸಿದ ಬಟ್ಟೆಯನ್ನೂ ಕಂದಿದ ಮುಖವನ್ನೂ ನೋಡಿ, ನಿಜ ಸ್ಥಿತಿಯನ್ನು ಊಹಿಸಿ ಒಳಗಿನಿಂದ ತಿಂಡಿಗಳನ್ನು ತಿನ್ನಲು ಕೊಟ್ಟನು ಕುಡಿಯಲು ನೀರನ್ನು ಕೊಟ್ಟನು. ಭಿಕ್ಷುಕನು ಆ ಗೃಹಸ್ಥನನ್ನು ಹಾಡಿ ಹರಸುತ್ತ, ಪ್ರಾಸಂಗಿಕವಾಗಿ ಆ ಮೂವರು ಪಂಡಿತರ ಮನೆಯ ಮುಂದೆ ಆದ ತನ್ನ ಅನುಭವಗಳನು ವಿವರಿಸಿದನು

ಭಿಕ್ಷುಕನು ಹೋದ ಮೇಲೆ ಗೃಹಸ್ಥನು ಆ ವಿದ್ವಾಂಸತ್ರಯಕ್ಕೆ ಬುದ್ಧಿ ಕಲಿಸುವ ಉದ್ದೇಶದಿಂದ ಅವರನ್ನು ಒಂದುದಿನ ತನ್ನ ಮನೆಗೆ ಊಟಕ್ಕೆ ಕರೆದನು. ಗೊತ್ತುಪಡಿಸಿದ ವೇಳೆಗೆ ಅವರು ಅವನ ಮನೆಗೆ ಬಂದರು. ಗೃಹಸ್ಥನು ಅವರನ್ನು ಆದರದಿಂದ ಸ್ವಾಗತಿಸಿ, ಸುಖಾಸನದಲ್ಲಿ ಕುಳ್ಳಿರಿಸಿ, ಅವರ ವರವಿಷಯದಲ್ಲಿ ಚರ್ಚೆ ಮಾಡುತ್ತ ಕಾಲ ಕಳೆದನು. ಅವರ ಸಂಭಾಷಣೆಯು ಹೀಗೆಯೇ ಮುಂದುವರಿದಾಗ ಒಬ್ಬ ವಿದ್ವಾಂಸನು ಮಧ್ಯಾಹ್ನದ ಊಟದ ಹೊತ್ತು ಮೀರುತ್ತ ಬಂತೆಂದು ಸೂಚಿಸಿದನು. ಕೂಡಲೇ ಗೃಹಸ್ಥನು ಅವರನ್ನು ತನ್ನ ಅಭ್ಯಾಸದ ಕೋಣೆಗೆ ಕರೆದೊಯ್ದನು. ಅಲ್ಲಿ ಒಂದು ಮೇಜಿನ ಎರಡೂ ಬದಿಗೆ ನಾಲ್ಕು ಕುರ್ಚಿಗಳನ್ನು ಇಡಲಾಗಿದ್ದಿತು. ಅಲ್ಲಿ ಅವರನ್ನು ಕೂಡ್ರಿಸುತ್ತ—




"ಕ್ಷಮಿಸಬೇಕು. ಊಟದ ವೇಳೆ ಮೀರಿತು. ನಿಮಗೆ ಬಹಳ ಹಸಿವೆಯಾಗಿರಬೇಕು. ಇನ್ನು ಎಲ್ಲರೂ ಸ್ವಸ್ಥಚಿತ್ತದಿಂದ ಉಣ್ಣಬೇಕು" ಎಂದನು.

ಅವನ ಕೊನೆಯ ವಾಕ್ಯವನ್ನು ಕೇಳಿ, ಪಂಡಿತತ್ರಯರು ಆಶ್ಚರ್ಯಚಕಿತರಾದರು ಒಬ್ಬರೊಬ್ಬರ ಮುಖ ನೋಡಿದರು ಏಕೆಂದರೆ ಅವರ ಮುಂದೆ ಊಟದ ತಟ್ಟೆಗಳಿರದೇ ಗ್ರಂಥಗಳ ಒಂದೊಂದು ಪುಟ್ಟ ರಾಶಿ ಇದ್ದಿತು. ಬಂದವರಿಗಂತೂ ತುಂಬಾ ಹಸಿವೆ. ಆಗ ಗೃಹಸ್ಥನು ವ್ಯಾಕರಣಾಚಾರ್ಯನ ಬಳಿಗೆ ಬಂದು—

"ಆಚಾರ್ಯರೇ ಸುರುವ್ಮಾಡಿರಿ. ಇದು ನೋಡಿರಿ ಪಾಣಿನಿಯ ವ್ಯಾಕರಣ ಗ್ರಂಥ. ಇದರಲ್ಲಿನ ಶಬ್ದ ಮತ್ತು ಧಾತು ಪ್ರತ್ಯಯಗಳಿಂದ ನಿಮಗೆ ಏನು ಬೇಕೊ ಅದನ್ನು ಆಯ್ದುಕೊಳ್ಳಿರಿ ಹೊಟ್ಟೆ ತುಂಬ ಸೇವಿಸಿರಿ" ಎಂದು ಹೇಳಿದನು.

ಅಲ್ಲಿಂದ ಕಾಯಿದೆ ಪಂಡಿತರ ಬದಿಯಲ್ಲಿ ನಿಂತು "ಭಿಡೆ ಮಾಡಿಕೊಳ್ಳಬೇಡಿರಿ. ಈ ಕಾಯದೇ ಗ್ರಂಥದ ಎಂಟು ಸಂಪುಟಗಳಲ್ಲಿ ನಿಮಗೆ ರಸದೂಟವೇ ಇದೆ" ಎಂದನು.



ಇವನ ಮಾತನ್ನು ಕೇಳಿ ಪಂಡಿತರು ಇವನ ತಲೆ ಕೆಟ್ಟಿದೆಯೆಂದುಕೊಂಡರು. ಗೃಹಸ್ಥನು ಕವಿಮಹಾಶಯನ ಹತ್ತಿರ ಬಂದು—

"ಕವಿಕುಲಗುರು, ಕಾಳಿದಾಸ ಎಂದು ಇದೀಗ ಹೇಳಿ, ಏನು ಅವನ ಕಲ್ಪನಾ ಸಾಮರ್ಥ್ಯ ಎಂದ ಹೊಗಳಿದಿರಲ್ಲವೆ. ಇಕೊಳ್ಳಿ ಇದು ಅವನ ಕಾವ್ಯ ಸಂಗ್ರಹ. ಇದಕ್ಕಿಂತ ಬೇರಾವ ಪಂಚ ಪಕ್ವಾನ್ನ ನಿಮಗೆ ಹಿಡಿಸೀತು!" ಎಂದು ಉದ್ಗರಿಸಿದನು.

ಹೀಗೆ ಅವನು ನುಡಿಯಲು ಆ ಮೂವರು ಪಂಡಿತರು ಬಹಳೇ ಸಿಟ್ಟಿಗೆದ್ದರು. "ನಮ್ಮ ಅಪಮಾನ ಮಾಡಲಿಕ್ಕೇ ನೀವು ನಮ್ಮನ್ನು ಕರೆದದ್ದೇನು ? ನೀವು ನಮಗೆ ಊಟಕ್ಕೆ ಆಮಂತ್ರಿಸಿದ್ದೀರಿ. ಈ ಪುಸ್ತಕಗಳನ್ನು ನಾವು ತಿನ್ನಬೇಕೆಂದು ನಿಮ್ಮ ಅಪೇಕ್ಷೆಯೋ?" ಎಂದು ಒದರಾಡಿದರು.

"ನನಗೆ ಹಾಗೆ ಅನಿಸಿತು. ನೀವು ಗ್ರಂಥವಾಚನ ಮನನದಿಂದಲೇ ಜೀವಿಸುತ್ತಿದ್ದೀರೆಂದು ನನ್ನ ಭಾವನೆಯಾಗಿದೆ. ಇಲ್ಲವಾದರೆ ಆ ಹಸಿದ ಭಿಕ್ಷುಕನಿಗೆ ನೀವು ವ್ಯಾಕರಣದ ನಿಯಮಗಳನ್ನು ಕಲಿ ಇಲ್ಲವೆ ಕಾವ್ಯವಾಣಿಯನ್ನು ಕೇಳು ಎಂದು ಮುಂತಾಗಿ ಹೇಳುತ್ತಿದ್ದಿಲ್ಲ. ನ್ಯಾಯತೀರ್ಥರೇ ನಿಮ್ಮ ಮುಖವು ಹಸಿವೆಯಿಂದ ಎಳ್ಳಷ್ಟೂ ವಿಕಾರಗೊಂಡಿಲ್ಲ. ಹಸಿವೆಯೇ ಆಗಿದೆಯೆನ್ನಲು ಏನು ಆಧಾರವಿದೆ ? ಅಥವಾ ಈ ಕಾಯದೇ ಗ್ರಂಥದಿಂದ ನಿಮ್ಮ ಹಸಿವೆಗೆ ಪ್ರಮಾಣವನ್ನು ತೋರಿಸುತ್ತೀರಾ?" ಎಂದು ಕೇಳಿದನು

ಅವನ ಮಾತಿಗೆ ಏನು ಉತ್ತರ ಹೇಳಬೇಕೆಂದು ತಿಳಿಯದೇ ಆ ಮೂವರು ಸುಮ್ಮನೆ ಕುಳಿತಿದ್ದಾಗ ಆ ಗೃಹಸ್ಥನು ಅವರನ್ನು ತನ್ನ ಅಡಿಗೆಯ ಮನೆಗೆ ಕರೆದುಕೊಂಡು ಹೋಗಿ ನಿಜವಾಗಿಯೇ ಸುಗ್ರಾಸ ಭೋಜನವನ್ನಿತ್ತು ಕಳಿಸಿಕೊಟ್ಟನು.

ಆ ದಿನದಿಂದ ಮುಂದೆ ಪಂಡಿತ ಮಹಾಶಯರು ತಮ್ಮ ವೃತ್ತಿಯನ್ನು ಬದಲಿಸಿಕೊಂಡರೆಂದು ಬೇರೆ ಹೇಳಬೇಕಾಗಿಲ್ಲ.

ವರ್ಷ ಭವಿಷ್ಯ

ಶ್ರೀ ವಿಕ್ರಮ ಸಂವತ್ ೨೦೨೩ ನೆಯ ವರ್ಷದ, ಅಂದರೆ ಶ್ರೀ ಶಕೆ ೧೮೮೮ ಕಾರ್ತಿಕ ಶುದ್ಧ ಪ್ರತಿಪದೆ ರವಿವಾರದಿಂದ ಶಕೆ ೧೮೮೯ ಆಶ್ವಿನ ಕೃಷ್ಣ ಅಮಾವಾಸ್ಯೆ ಗುರುವಾರದ ವರೆಗಿನ, ಅಂದರೆ ೧೯೬೬ ನವೆಂಬರ್ ೧೩ ರಿಂದ ೧೯೬೭ ನವೆಂಬರ್ ೨ ರ ವರೆಗಿನ ಒಂದು ವರ್ಷದ ಭವಿಷ್ಯ . . . .

(ಈ ದೀಪಾವಳಿಯಿಂದ ಮುಂದಿನ ದೀಪಾವಳಿಯ ವರೆಗೆ)

ಸೂಚನೆ : ಈ ವರ್ಷಭವಿಷ್ಯವು ಸ್ಥೂಲಮಾನದ್ದು. ಅವರವರ ಜನ್ಮಕುಂಡಲಿಯ ಮೇಲಿಂದ ಭವಿಷ್ಯ ಹೇಳಿದರೆ ಮಾತ್ರ ಪೂರ್ಣ ಸತ್ಯವಾಗಿ ಪರಿಣಮಿಸಬಲ್ಲದು. ಆದರೂ ಈ ಭವಿಷ್ಯದಿಂದ ಆಯಾ ರಾಶಿಯವರಿಗೆ ಆಗಬಹುದಾದ ದುಷ್ಟ ಸುಷ್ಟ ಪರಿಣಾಮಗಳ ಕಲ್ಪನೆ ಮಾತ್ರ ನಿಶ್ಚಿತ ಬರುವುದು. ಜನ್ಮರಾಶಿಯಂತೆ ಜನ್ಮಲಗ್ನದಿಂದಲೂ ಭವಿಷ್ಯ ಹೇಳಿದರೆ ಅದು ಹೆಚ್ಚು ನಿಜವಾದದ್ದು ಕಂಡುಬರುವುದು. . . . . .

ಮೇಷ

ಈ ವರ್ಷ ಸಾಡೇಸಾತಿಯಿಂದಾಗಿ ಈ ರಾಶಿಯವರು ಬಹಳ ದಗದಗಿಯನ್ನು ಅನುಭವಿಸಬೇಕಾಗಬಹುದಾದರೂ ಗುರುವಿನ ಉಚ್ಚಸ್ಥಾನ ಬಲದಿಂದಾಗಿ ಕೊನೆಗೆ ಅವರ ಮನೋರಥದಲ್ಲಿನ ಹೆಚ್ಚಿನ ಭಾಗ ಫಲಪ್ರದವಾಗುವುದು ನಿಶ್ಚಿತವೆಂದು ತಿಳಿಯಬೇಕು.

ಈ ರಾಶಿಯವರು ರಾಹುವು ವರ್ಷವಿಡಿ ಇದೇ ರಾಶಿಯಲ್ಲಿರುವುದರಿಂದ ಮತ್ತು ೧೨ನೆಯವನಾದ ಶನಿಯ ಸಾಡೇಸಾತಿಯಿಂದಾಗಿ ಆರೋಗ್ಯದ ವಿಷಯದಲ್ಲಿ ತುಸು ಜಪ್ಪಿಸಿಕೊಂಡಿರುವುದೇ ವಿಹಿತ. ಆದರೆ ರಾಶಿಸ್ವಾಮಿಯಾದ ಮಂಗಳನು ಆಯುಷ್ಯಸ್ಥಾನವಾದ ಅಷ್ಟಮದ ಸ್ವಾಮಿಯಾಗಿರುವನಲ್ಲದೆ ವರ್ಷಾರಂಭದಲ್ಲಿಯೆ ಪಂಚಮದಲ್ಲಿ ಮಿತ್ರಕ್ಷೇತ್ರದಲ್ಲಿದ್ದು, ಅವನ ಹಾಗು ಆಯುಷ್ಯವರ್ಧಕ ಸ್ಥಾನಾಧಿಪತಿ ಗುರುವಿನ ಪೂರ್ಣದೃಷ್ಟಿಯು ಅಷ್ಟಮಸ್ಥಾನದ ಮೇಲಿರುವದರಿಂದ ಎಷ್ಟೇ ಚಿಕ್ಕ ದೊಡ್ಡ ಕ್ಲೇಶಗಳುಂಟಾದರೂ ಆಯುಷ್ಯಕ್ಕೆ ಮಾತ್ರ ಎಷ್ಟೂ ಭಯವಿಲ್ಲವೆಂಬುದು ನಿಶ್ಚಿತ. ಅದರಂತೆಯೆ, ಮುಂದೆ ಸಪ್ಟೆಂಬರ್ ೩ರ ನಂತರ ಗುರುವು ೫ನೆಯವನಾಗುವುದರಿಂದ ಯಾವುದೇ ಕ್ಲೇಶವುಂಟಾಗದೆಯೆ ಒಳ್ಳೆಯ ಆರೋಗ್ಯವುಳಿಯುವದು. ಅಲ್ಲದೆ ಇದೇ ಗುರುವು ಅನೇಕ ಇಚ್ಛಿತ ವಿಷಯಗಳಲ್ಲಿ ಯಶಸ್ಸು ಕೊಡಲಾರಂಭಿಸುವನು. ಆದರೆ ಸಪ್ಟೆಂಬರ್ ೩ರ ಮೊದಲು ಉಂಟಾಗುವ ಕ್ಲೇಶ ಬರಿ ಯಾವುದೊಂದು ರೋಗದಿಂದುಂಟಾಗದೆ ಪೈಶಾಚಿಕಪೀಡೆ, ಮಂತ್ರಮಾಟ, ದೃಷ್ಟಿಬಾಧೆ ಮುಂತಾದ ವಿಚಿತ್ರ ಅದೃಶ್ಯ ಕಾರಣಗಳಿಂದಾಗಿರಬಹುದಾಗಿದೆ.

ಗುರುವು ೪ ಅಥವಾ ೫ನೆಯವನೇ ಆಗಿರಲಿ, ಶನಿಯು ೧೨ನೆಯವನೇ ಆಗಿರಲಿ ಸ್ತ್ರೀಸುಖಕ್ಕೆ ಮಾತ್ರ ಈ ವರ್ಷ ಅತ್ಯುತ್ತಮವೆಂದೇ ಹೇಳಬೇಕು. ಆದರೆ ಭಾರ್ಯಾಸ್ಥಾನದಲ್ಲಿರುವ ಕೇತುವಿನಿಂದಾಗಿ ಆಗೀಗ ಉಭಯತರಲ್ಲಿ ಕ್ಷುಲ್ಲಕ ವಿಷಯಗಳಿಂದಾಗಿಯೇ ಮತಭೇದವುಂಟಾಗಿ ಚಕಮಕಿಯು ಆಗಬಹುದು. ಆದರಂತೆಯೆ, ೮ನೆಯ ಮಂಗಳನಿರುವಾಗ, ಅಂದರೆ ಆಗಸ್ಟ್ ೨೭ ರಿಂದ ಅಕ್ಟೋಬರ್ ೯ ರ ವರೆಗಿನ ಅವಧಿಯಲ್ಲಿ ಅವಳ ಆರೋಗ್ಯಕ್ಕೆ ಉಷ್ಣಜನ್ಯ ವಿಕಾರದಿಂದಾಗಿ ತುಸು ಬಾಧೆಯುಂಟಾಗಬಹುದು. ಆದರೆ ಈ ವರ್ಷದ ಗ್ರಹಮಾನವು ನಿಮಗಿಂತಲೂ ಭಾರ್ಯಾಸ್ಥಾನಕ್ಕೆಯೇ ಹೆಚ್ಚು ಅನುಕೂಲವಿರುವದರಿಂದ ಅವಳಿಗೆ, ಅವಳ ವಿಚಾರಕ್ಕೆ, ಅಭಿಪ್ರಾಯಕ್ಕೆ, ಕೃತಿಗೆ ಹೆಚ್ಚು ಯಶ ದೊರೆಯುವದು.

ಈ ರಾಶಿಯ ಅವಿವಾಹಿತರು ವಿವಾಹವಾಗುವುದಿದ್ದಲ್ಲಿ ಈ ವರ್ಷ ಅಷ್ಟೊಂದು ವಿಶೇಷ ಬಾಸಿಂಗಬಲವಿಲ್ಲವೆಂದೇ ಹೇಳಬೇಕು. ಆದರೂ ಅದರಲ್ಲಿಯೇ ಸಪ್ಟೆಂಬರ್ ೩ ರ ನಂತರ ತುಸು ಅನುಕೂಲತೆಯುಂಟಾಗಿ ಕೆಲವರ ವಿವಾಹವೂ ಆಗಬಹುದು. ವಧೂವರರು ಪರಸ್ಪರ ಮನಸ್ಸಿಗೊಪ್ಪುವಂತಿರುವರಲ್ಲದೆ ಮೊದಲಿನಿಂದಲೂ ಪರಿಚಿತ ಮನೆತನದವರು ಅಥವಾ ಸಂಬಂಧಿಕರಲ್ಲಿಯವರೇ ಇರಬಹುದಾಗಿದೆ.

ಈ ವರ್ಷ ನಿಮ್ಮ ಮಗ ಅಥವಾ ಮಗಳ ಮದುವೆ ಮಾಡುವುದಿದ್ದರೆ, ಮೊದಲು ಅದು ಹೊಂದಬೇಕಾದರಿಯೇ ಸಾಕುಬೇಕಾಗುವುದಲ್ಲದೆ ನಂತರ ನಿಶ್ಚಿತ ಮುಹೂರ್ತಕ್ಕೇನಾದರೂ ಅಡೆತಡೆ ಬಂದು ಬೇರೊಂದು ಮುಹೂರ್ತದಲ್ಲಿ ಮಾಡುವ ಪ್ರಸಂಗ ಒದಗಬಹುದು. ವಿಶೇಷತಃ ಗುರುವು ೫ ನೆಯವನಾಗಿರುವಾಗ ವಿವಾಹ ಯೋಗವಿದೆ. ಸೊಸೆ ಇಲ್ಲವೆ ಅಳಿಯ ಮನಕ್ಕೊಪ್ಪುವಂತಿರುವರಲ್ಲದೆ ವಿವಾಹೋತ್ತರ ಕೆಲ ದಿನಗಳಲ್ಲೇ ಮಹತ್ವದ ವಿಷಯವೊಂದು ಯಶಸ್ವಿಯಾಗುವುದರಿಂದ ಅವರ ಕಾಲ್ಗುಣದ ಬಗೆಗೆ ಎಲ್ಲೆಲ್ಲೂ ಪ್ರಶಂಸೆಯೇ ಉಂಟಾಗುವುದು. ಮಕ್ಕಳಲ್ಲೊಬ್ಬನು ಶಿಕ್ಷಣ ಅಥವಾ ನೌಕರಿಗಾಗಿ ಬಹು ದೂರ ದೇಶಕ್ಕೆ ಹೋಗುವ ಯೋಗವಿದೆ. ಎಲ್ಲ ಕಡೆಗಳಿಂದಲೂ ನಿಮ್ಮ ಉತ್ಸಾಹ ಹೆಚ್ಚಿಸುವಂತಹ ಘಟನೆಗಳೇ ಸಂಭವಿಸುವವು. ಆದರೂ ೮ನೆಯ ಶನಿಯಿಂದಾಗಿ ಮಕ್ಕಳಲ್ಲಿ ಒಬ್ಬನ ವರ್ತನೆ ನೋವುಂಟುಮಾಡಬಹುದಾದಂಥದು ಇರಬಹುದಾಗಿದೆ.

ಆದರೆ ೫ನೇ ಗುರುವು ತುಸು ಹೆಚ್ಚು ಕಡಿಮೆ ಪ್ರಮಾಣದಲ್ಲಿ ನಿಶ್ಚಿತವಾಗಿಯೂ ಎಲ್ಲರ ಉನ್ನತಿಗೂ ಕಾರಣನಾಗುವನು.

ಉದ್ಯೋಗ ಧಂದೆಗಳಲ್ಲಿ ಈ ವರ್ಷ ಸಪ್ಟೆಂಬರ್ ೩ ರ ವರೆಗೆ ಭಾಗ್ಯೇಶ ಗುರುವು ನಾಲ್ಕನೆಯವನಾಗಿದ್ದರೂ ಕರ್ಕದಲ್ಲಿ ಉಚ್ಚನಾಗಿರುವುದರಿಂದ ಹಾಗು ಅನಂತರ ಬಲಿಷ್ಠ ಹಾಗು ಮಿತ್ರ ರಾಶಿಯಾದ ಸಿಂಹದಲ್ಲಿ ಐದನೆಯವನಾಗಿ ಪಾತ್ರ್ಯೋತ್ಕರ್ಷ ಕಾರಕನಾಗಿರುವುದರಿಂದ ಉದ್ಯೋಗದಲ್ಲಿ ಸದಾವಕಾಲವೂ ರಭಸದ ಹೆಚ್ಚಳವೇ ಆಗುತ್ತಿರುವುದಲ್ಲದೆ ಎಣಿಕೆಯಷ್ಟು ಲಾಭ ಸಹಜವಾಗಿಯೇ ದೊರೆಯುವುದು. ಆದರೆ ಕರ್ಮ ಮತ್ತು ಲಾಭಸ್ಥಾನಗಳ ಸ್ವಾಮಿಯಾದ ಶನಿಯು ಹನ್ನೆರಡನೆಯವನಾಗಿ ವ್ಯಯಸ್ಥಾನದಲ್ಲಿರುವುದರಿಂದ ಅರ್ಥಾತ್ ಸಾಡೇಸಾತಿಯಿರುವುದರಿಂದ ಎಷ್ಟೇ ಹಣ ದೊರೆತರೂ ಅದಕ್ಕಿಂತ ಹೆಚ್ಚಿನ ವೆಚ್ಚದ ಪ್ರಸಂಗಗಳು ಬಂದು ನಾಲ್ಕು ಕಾಸು ಕೂಡಿಟ್ಟಿದ್ದರೆ ಅದನ್ನು ಬಳಿಸಬೇಕಾಗಬಹುದಲ್ಲದೆ, ಹಾಗಿಲ್ಲದಿದ್ದರೆ ಸಾಲ ಮಾಡಬೇಕಾದ ಪ್ರಸಂಗವೂ ಬರಬಹುದು. ಉದ್ಯೋಗಸ್ಥರಿಗಿರತ ನೌಕರದಾರರಿಗೆ ಕಡಿಮೆ ತೊಂದರೆಯೆನಿಸಬಹುದಾದರೂ ಕೆಲಸದ ಭಾರ ಹೆಚ್ಚಬಹುದು ಇಲ್ಲವೆ ಅನನುಕೂಲ ಸ್ಥಳಕ್ಕೆ ಬದಲಿಯಾಗಬಹುದು. ಅದ

ರಲ್ಲೂ ವರ್ಷಾರಂಭದಿಂದ ಡಿಸೆಂಬರ್ ೮ ರ ವರೆಗೆ, ಜನೆವರಿ ೨೫ ರಿಂದ ಫೆಬ್ರುವರಿ ೧೮ ರ ವರೆಗೆ, ಏಪ್ರಿಲ್ ೮ ರಿಂದ ಜೂನ್ ೧ ರ ವರೆಗೆ, ಹಾಗು ನಂತರ ಜುಲೈ ೩ ರಿಂದ ಸಪ್ಟೆಂಬರ್ ೨೨ ರ ವರೆಗೆ ಈ ಅವಧಿ ಲಾಭಕ್ಕೆ ಹೆಚ್ಚು ನೆಟ್ಟಗೆ. ವಾಹನ, ಆಪ್ತರು ಹಾಗು ಸೇವಕರಿಂದ ಒಟ್ಟಿನ ಮೇಲೆ ಒಳ್ಳೆಯ ಸುಖ ದೊರೆಯಬಹುದು. ಐದನೆಯ ಗುರುವಿನಿಂದಾಗಿ ಯಾತ್ರಾದಿ ಪುಣ್ಯಕಾರ್ಯಗಳು ಜರುಗಬಹುದು. ನಾಲ್ಕನೆಯ ಗುರುವಿರುವ ಕಾಲದಲ್ಲಿ ಅನೇಕ ಶುಭಸ್ವಪ್ನಗಳನ್ನು ಕಾಣುವಿರಿ.

ದಾವೆ, ಫಿರ್ಯಾದಿ ಅಥವಾ ಇತರ ಸರಕಾರಿ ಕೆಲಸಗಳಲ್ಲಿ ಹಾಗು ಅದರಂತೆಯೆ ಖಾಸಗಿ ಕೆಲಸಗಳಲ್ಲಿಯ ಅರ್ಜಿ ಅಥವಾ ಸ್ಪರ್ಧೆಗಳಲ್ಲಿ ಹತ್ತರದಲ್ಲಿ ಮೂರು ನಾಲ್ಕರಷ್ಟು ಮಾತ್ರ ಯಶಸ್ವಿಯಾಗಬಹುದು. ಈ ಸಲ ಶತ್ರುಗಳಿಗಿಂತ ಮಿತ್ರರೇ ಹೆಚ್ಚು ಸತಾಯಿಸುವರು.

ಈ ರಾಶಿಯ ಗರ್ಭವತಿಯರಲ್ಲಿ ಬಹುತರರಿಗೆ ಪುತ್ರ ಲಾಭದ ಯೋಗವಿದ್ದು ನಾಲ್ಕನೆಯ ಗುರುವಿಗಿಂತ ಐದನೆಯ ಗುರುವಿದ್ದಾಗ ಹೆರಿಗೆ ಸುಲಭವಾಗುವುದು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ನವೆಂಬರ್ ೨೧ ರಿಂದ ಜನೆವರಿ ೨೨ ರ ವರೆಗೆ, ಫೆಬ್ರುವರಿ ೧೨ ರಿಂದ ಮಾರ್ಚ್ ೧೪ ರ ವರೆಗೆ, ಹಾಗು ಜುಲೈ ೫ ರಿಂದ ಅಗಸ್ಟ್ ೨೭ ರ ವರೆಗೆ ಈ ಅವಧಿಯಲ್ಲಾದರೆ ನಿಶ್ಚಿತ ಉತ್ತೀರ್ಣರಾಗುವ ಯೋಗವಿದೆ.

ವೃಷಭ

ಈ ವರ್ಷವು ಈ ರಾಶಿಯವರಿಗೆ ಪ್ರಾಪಂಚಿಕ ಸುಖದ ವಿಷಯದಲ್ಲಿ ಸಾಮಾನ್ಯವೆನಿಸಿದರೂ ಔದ್ಯೋಗಿಕ ಯಶಸ್ಸು ಹಾಗು ಕರ್ತೃತ್ವಗಳ ವಿಷಯದಲ್ಲಿ ಒಳ್ಳೆಯ ಪುರುಷಾರ್ಥದ್ದೆನಿಸುವುದೆಂಬುದರಲ್ಲಿ ಎಳ್ಳಷ್ಟೂ ಸಂದೇಹಕ್ಕೆಡೆಯಿಲ್ಲವೆಂದು ತಿಳಿಯಬೇಕು.

ಈ ರಾಶಿಯವರು, ಸಪ್ಟೆಂಬರ್ ೩ ರ ವರೆಗೆ ಇರುವ ಮೂರನೆಯ ಗುರುವಿನಿಂದಾಗಿ, ಆರೋಗ್ಯದ ಬಗೆಗೆ ನಿಶ್ಚಿಂತರಾಗಿರಬೇಕು. ನಂತರ ಆರೋಗ್ಯ ತುಸು ಕೆಟ್ಟರೂ ಅದು ಕೆಮ್ಮು, ನೆಗಡಿಗಳಂತಹ ತೀರ ಸಾಮಾನ್ಯ ಕಾರಣಗಳಿಂದ ಮಾತ್ರ. ಈ ರಾಶಿಯ ದೇಹಸ್ಥಾನದ ಮೇಲೆ ರಾಶಿಸ್ವಾಮಿ ಶುಕ್ರನ ಮತ್ತು ಭಾಗ್ಯೇಶ ಶನಿಯ ಪೂರ್ಣ ದೃಷ್ಟಿಯಿರುವುದರಿಂದ ಇತರ ವಿಷಯಗಳಲ್ಲಿ ಪ್ರಾಪಂಚಿಕಸುಖ ಚೆನ್ನಾಗಿ ದೊರೆಯುವುದು. ಮನಸ್ಸು ಯಾವಾಗಲೂ ಉತ್ಸಾಹದಲ್ಲಿರುವುದಲ್ಲದೆ ಆಶಾವಾದಿಯಾಗಿ ಬಲು ಮಹತ್ವಾಕಾಂಕ್ಷೆಯ ವಿಚಾರಗಳಲ್ಲಿಯೆ ಮುಳುಗಿರುವುದು.

ಆದರೆ ಆ ಮಾನದಿಂದ ಈ ವರ್ಷ ಸ್ತ್ರೀಸುಖ ಮಾತ್ರ ಅಷ್ಟಾಗಿ ದೊರೆಯಲಾರದು. ವರ್ಷದಲ್ಲಿ ನಾಲ್ಕೈದು ತಿಂಗಳಾದರೂ ಉಭಯತರಲ್ಲೊಬ್ಬರು ಬೇರೂರಿಗೆ ಹೋಗುವುದರಿಂದಾಗಿ ಸಹವಾಸದಲ್ಲಿ ವ್ಯತ್ಯಯವುಂಟಾಗುವುದು. ಅಲ್ಲದೆ ಜನೆವರಿ ೨೨ ರಿಂದ ಎಪ್ರಿಲ್ ೧೭ರ ವರೆಗೆ ಹಾಗು ನಂತರ ಜುಲೈ ೫ ರಿಂದ ಆಗಸ್ಟ್ ೨೭ರ ವರೆಗಿನ ಅವಧಿಯಲ್ಲಿ ಅವಳ ಆರೋಗ್ಯ ಸರಿಯಿರಲಾರದು. ಹೃದಯ ಅಥವಾ ರಕ್ತದ ಒತ್ತಡದಿಂದ ಅವಳು ಬಳಲಬಹುದು. ಆದರೆ ವ್ಯವಹಾರದಲ್ಲಿ ಉಭಯತರಲ್ಲಿ ಪೂರ್ಣ ಮತೈಕ್ಯವಿರುವುದಲ್ಲದೆ ಪ್ರೇಮವೂ ಅಖಂಡವಾಗಿರುವುದು.

ಈ ರಾಶಿಯ ಅವಿವಾಹಿತರ ಮದುವೆ ಈ ವರ್ಷ ಆಗುವುದಿದ್ದರೆ ಅದಕ್ಕೆ ನಾಲ್ಕನೆಯ ಗುರುವಿಗಿಂತ ಮೂರನೆಯ ಗುರುವಿರುವಾಗಲೆಯೆ ಅಂದರೆ ಸಪ್ಟೆಂಬರ್ ೩ರ ಮೊದಲು ಒಳ್ಳೆಯ ಅನುಕೂಲವಿದೆ. ಈ ಅವಧಿಯಲ್ಲಿ ಅಲ್ಪಾಯಾಸದಿಂದ ಮತ್ತು ಅಪೇಕ್ಷೆಗಿಂತಲೂ ಹೆಚ್ಚು ಉತ್ತಮ ಮನೆತನದೊಂದಿಗೆ ಸಂಬಂಧ ಬೆಳೆದು, ನಿಶ್ಚಿತ ಮುಹೂರ್ತಕ್ಕೆಯೆ ಒಳ್ಳೆಯ ಸಡಗರದಿಂದ ಮದುವೆಯಾಗುವುದಲ್ಲದೆ ವಧೂವರರು ಪರಸ್ಪರ ಅನುರೂಪರಾಗಿರುವರು ಮತ್ತು ತೀರ ಹತ್ತಿರದ ಊರವರೇ ಆಗಿರುತ್ತಾರೆ.

ಈ ವರ್ಷ ನಿಮ್ಮ ಮಗ ಅಥವಾ ಮಗಳ ಮದುವೆ ಮಾಡುವುದಿದ್ದರೆ ಅದೂ ನಿಶ್ಚಯವಾಗುವುದಲ್ಲದೆ ಮುಕ್ಕಾಲು ಪಾಲು ಜನರ ವಿವಾಹ ಜನೆವರಿ ೧ ರಿಂದ ೨೫, ಫೆಬ್ರುವರಿ ೧೮ ರಿಂದ ಮಾರ್ಚ್ ೧೪, ಎಪ್ರಿಲ್ ೮ ರಿಂದ ಮೇ ೪, ಹಾಗು ಜೂನ್ ೧ ರಿಂದ ಜುಲೈ ೩ ಈ ಅವಧಿಯಲ್ಲಾಗುವುದು. ಆದರೆ ವರ್ಷಾರಂಭದಲ್ಲಿ ಮಂಗಳನು ನಾಲ್ಕನೆಯವನೂ ಬುಧನು ವಕ್ರಿಯಾಗಿ ಮಂಗಳನ ರಾಶಿಯಾದ ವೃಶ್ಚಿಕದಲ್ಲಿಯೆ ಇರುವುದರಿಂದ ಲಗ್ನ ಸಮಾರಂಭದ ಕಾಲಕ್ಕೆ ಉಭಯಪಕ್ಷಗಳಲ್ಲಿ ತಪ್ಪು ತಿಳುವಳಿಕೆಯುಂಟಾಗಿ ವಿರಸಕ್ಕೆ ಕಾರಣವಾಗುವ ಸಂಭವ ಕೆಲ ಮಟ್ಟಿಗೆ ಇದೆ. ಸೊಸೆ ಅಥವಾ ಅಳಿಯ ನಿಮ್ಮ ಮನಸ್ಸಿಗೆ ಅಷ್ಟೊಂದು ಒಪ್ಪುವಂತಿರುವುದಿಲ್ಲ. ಆದರೆ ಈ ವರ್ಷವು ಮಕ್ಕಳೆಲ್ಲರ ಯಶಸ್ಸಿಗೆ, ಉನ್ನತಿಗೆ ಮತ್ತು ಗುಣಪ್ರಶಂಸೆಗೆ ಬಹಳ ಉತ್ತಮವಿದ್ದು ಅವರೆಲ್ಲರಿಂದಲೂ ನಿಮಗೊಳ್ಳೆಯ ಸುಖ ಸಿಗುವುದು. ಜನೆವರಿ ೧೪ ರಿಂದ ಫೆಬ್ರುವರಿ ೧ ರ ವರೆಗೆ ಇಲ್ಲವೆ ಮೇ ೧೨ ರಿಂದ ೧೯ ರ ವರೆಗೆ ಅಥವಾ ಅಗಸ್ಟ್ ೨ ರಿಂದ ೨೧ ರ ವರೆಗಿನ ಅವಧಿಯಲ್ಲಿ ಅವರಲ್ಲಿ ಒಬ್ಬಿಬ್ಬರ ಉನ್ನತಿ ಕಣ್ಣಲ್ಲಿ ವಿಶೇಷ ತುಂಬುವಂತೆ ಆಗುವುದು ನಿಶ್ಚಿತ.

ಉದ್ಯೋಗ ಧಂದೆಗಳಲ್ಲಿ ಈ ವರ್ಷ ಶನಿಯು ಹನ್ನೊಂದನೆಯವನಾಗಿ ಲಾಭಸ್ಥಾನದಲ್ಲಿರುವವನಲ್ಲದೆ ಸಪ್ಟೆಂಬರ್ ೩ ರ ವರೆಗೆ ಮೂರನೆಯ ಅಂದರೆ ಪರಾಕ್ರಮಸ್ಥಾನದಲ್ಲಿರುವ ಗುರುವಿನ ಪೂರ್ಣ ದೃಷ್ಟಿಯಲ್ಲಿರುವನು, ಮತ್ತು ಇಂಥವೇ ಫಲವನ್ನೀಯುವವನೂ ರೋಗ, ಶತ್ರು ಹಾಗು ಸಂಕಟಗಳ ಸಂಹಾರಕನೂ ಆದ ಆರನೆಯ ಕೇತುವು ಇದೇ ಸ್ಥಾನದಲ್ಲಿರುವನು ಮಾತ್ರವಲ್ಲ, ಜುಲೈ ೫ ರಿಂದ ಆಗಸ್ಟ್ ೨೭ ರ ವರೆಗೆ ಇದೇ ಸ್ಥಾನದಲ್ಲಿ ಕೇತುವಿನೊಂದಿಗೆ ಮಂಗಳನೂ ಇರುವಂತಹ ಪ್ರಬಲ ಯೋಗವಿರುದರಿಂದ ನಿಮ್ಮ ಜೀಕನೆ ಮೀರಿ ಎಲ್ಲಿಡಲಿ ಎಲ್ಲಿ ಬಿಡಲಿ ಎಂಬಷ್ಟು ಅಪಾರ ದ್ರವ್ಯಲಾಭವಾಗುವುದು. ಎಂಥದೇ ಕಠಿಣ ಕೆಲಸವಿದ್ದರೂ ಗುರುವು ಮೂರನೆಯವನಿರುವಾಗಿರಲಿ, ನಾಲ್ಕನೆಯವನಾಗಿರುವಾಗ ಸಹ ತೀರ ಸುಲಭದಲ್ಲಿ ಸಾಧ್ಯವಾಗುವುದು. ದೊಡ್ಡವರನೇಕರ ಪರಿಚಯವಾಗುವುದರಿಂದಲೂ ಅನೇಕ ಕಾರ್ಯಗಳು ಕೈಗೂಡುವವು. ಅಕಸ್ಮಾತ್ತಾಗಿ ದೂರದ ಪ್ರವಾಸ ಮಾಡಬೇಕಾಗಿ ಬಂದು ಅದರಲ್ಲಿಯೂ ಭಾವೀ ಉತ್ಕರ್ಷಕ್ಕೆ ಪೋಷಕವಾಗುವಂಥ ಬಹು ಮಹತ್ವದ ಕಾರ್ಯಗಳು ಸಾಧಿಸುವವು. ಹಿಂದೆ ವಿರೋಧಿಗಳಾಗಿದ್ದವರಲ್ಲಿ ಅನೇಕರು ತಾವಾಗಿಯೇ ಅನುಕೂಲರಾಗುವರು. ಗುರುವು ಮೂರನೆಯವನಿರುವಾಗ ನಿಮ್ಮ ಹಾಗು ಹೆಂಡತಿಯ ಸೋದರರ ಉತ್ಕರ್ಷವಾಗುವುದಾದರೆ ಅವನು ನಾಲ್ಕನೆಯವನಿರುವಾಗ ನಿಮ್ಮ ಹಿರಿತನದಲ್ಲಿ ಅಥವಾ ನಿಮ್ಮ ಮನೆಯಲ್ಲಿಯೆ ಬೇರೆಯವರ ವಿವಾಹಾದಿ ಮಂಗಲ ಘಟನೆಗಳು ನಡೆಯಬಹುದಾಗಿದೆ. ಸರಕಾರದಲ್ಲಿಯ ಜನರ ಮೇಲೆ ನಿಮ್ಮ ಒಳ್ಳೆಯ ವರ್ಚಸ್ಸು ಬೀಳುವುದು. ಕೊಡತಕ್ಕೊಳ್ಳುವ ವ್ಯವಹಾರ ಸುರಳೀತವಾಗುವುದಲ್ಲದೆ ಮೂಲ ಗ್ರಹಬಲಾನುಸಾರ ಹೆಚ್ಚು ಕಡಿಮೆ ಪ್ರಮಾಣದಲ್ಲಿಯಾದರೂ ಸ್ಥಾವರ ಜಂಗಮ ಆಸ್ತಿಯಲ್ಲಿ ಸಂಗ್ರಹವಾಗುವುದು ನಿಶ್ಚಿತ. ಮೂರನೆಯ ಗುರುವಿರುವಾಗ ಬಹು ಪ್ರಶಂಸನೀಯ ಮಿತ್ರಸುಖ ದೊರೆತರೆ ಅವನು ನಾಲ್ಕನೆಯವನಿರುವಾಗ ಉದ್ಯೋಗದಲ್ಲಿ ದೊಡ್ಡ ಆಶ್ರಯದಾತರು ದೊರೆಯಬಹುದು. ಅದರಂತೆಯೆ, ನೌಕರದಾರರಿಗೆ ಸಹ ಈ ವರ್ಷವು ಭಾರೀ ಯಶೋದಾಯಕವಾಗಿದೆಯಲ್ಲದೆ ಬಹುತರರಿಗೆ ಮೇಲಿನ ಬಡತಿ ದೊರೆಯುವುದು. ಮೂರನೆಯ ಗುರುವಿಗಿಂತ ನಾಲ್ಕನೆಯ ಗುರುವಿರುವಾಗ ವರಿಷ್ಠರ ಮರ್ಜಿ ಹೆಚ್ಚಾಗಿರುವುದು. ಬದಲಿಯಾದರೆ ಅದು ಅಪೇಕ್ಷಿತ ಸ್ಥಳಕ್ಕೆಯೆ ಆಗುವುದಲ್ಲದೆ ಹೊಸ ಸ್ಥಳದಲ್ಲಿ ನಿಮ್ಮ ಕಾರ್ಯನಿರ್ವಹಣೆಯು ಜನಪ್ರಿಯತೆಯನ್ನೂ ಪಡೆಯುವುದು. ಮೂರನೆಯ ಗುರುವಿರುವಾಗ ಕೆಲವು ಯಾತ್ರೆಗಳು ನಡೆದರೆ ನಾಲ್ಕನೆಯ ಗುರುವಿರುವಾಗ ಧಾರ್ಮಿಕ ಕೃತ್ಯವೊಂದು ನಡೆಯಬಹುದು. ಜನೆವರಿ ೧೪ ರಿಂದ ಫೆಬ್ರುವರಿ ೧೨, ಮಾರ್ಚ್ ೧೪ ರಿಂದ ಎಪ್ರಿಲ್ ೧೪, ಮತ್ತು ಅಕ್ಟೋಬರ್ ೧೮ ರಿಂದ ವರ್ಷಾಂತ್ಯದ ವರೆಗೆ ಕೈಕೆಳಗಿನವರಿಂದ ಬಹಳ ತೊಂದರೆಯಾಗಬಹುದಲ್ಲದೆ ನಿಮ್ಮ ಹೆಸರು ಕೆಡಿಸಲು ಒಂದು ಪ್ರಯತ್ನ ಸಹ ನಡೆಯಬಹುದು. ಅದರಂತೆಯೆ, ಆಪ್ತರು ಸಹ ನಿಮ್ಮ ನೈತಿಕ ಆಚರಣೆಯ ವಿರುದ್ಧ ಅಪಪ್ರಚಾರ ನಡೆಸಬಹುದು.

ದಾವೆ, ಫಿರ್ಯಾದಿ ಮತ್ತು ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ೧೦ರಲ್ಲಿ ೭-೮ ರಷ್ಟಾದರೂ ನಿಶ್ಚಿತ ಯಶಸ್ವಿಯಾಗುವವಲ್ಲದೆ ಜನೆವರಿ ೨೨ ರಿಂದ ಎಪ್ರಿಲ್ ೧೭ ಹಾಗು ಜುಲೈ ೫ ರಿಂದ ಆಗಸ್ಟ್ ೨೭ರ ವರೆಗಿನ ಅವಧಿಯಲ್ಲಿ ನಿರ್ಣಯ ದೊರೆತರೆ ಶತ್ರುವು ಸಂಪೂರ್ಣ ಮಣ್ಣು ಮುಕ್ಕುವನು.

ಈ ರಾಶಿಯ ಗರ್ಭವತಿಯರು ಗುರುವು ೩ನೆಯವನಿರುವಾಗ ಪ್ರಸೂತರಾದರೆ ಹೆರಿಗೆ ಸುಲಭವಾಗಿ ಕನ್ಯಾಜನನವಾಗುವುದು ಹಾಗು ೪ನೆಯ ಗುರುವಿರುವಾಗ ಆದರೆ ಹೆರಿಗೆ ಕಷ್ಟಕರವಾಗಿ ಬಹುತರರಿಗೆ ಪುತ್ರಲಾಭವಾಗುವುದು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಗುರುವು ಮೂರನೆಯವನಿರುವಾಗಲಾದರೆ ಉತ್ತೀರ್ಣರಾಗು

ವುದು ನಿಶ್ಚಿತ, ಅದರಲ್ಲೂ ಡಿಸೆಂಬರ್ ೬ ರಿಂದ ೨೮, ಜನೆವರಿ ೧೪ ರಿಂದ ಫೆಬ್ರುವರಿ ೧, ಮಾರ್ಚ್ ೮ ರಿಂದ ಎಪ್ರಿಲ್ ೨೬ ಮತ್ತು ಮೇ ೨೯ ರಿಂದ ಅಗಸ್ಟ್ ೨೩ ಈ ಅವಧಿಯಲ್ಲಾದರೆ ಬಹುಶಃ ಪ್ರಥಮ ಶ್ರೇಣಿ ದೊರೆಯುವುದು. ಅದಾಗದಿದ್ದರೆ ಕನಿಷ್ಠ ದ್ವಿತೀಯ ಶ್ರೇಣಿಯಾದರೂ ದೊರೆಯುವುದು ನಿಶ್ಚಿತ.

ಮಿಥುನ

ಈ ರಾಶಿಯವರಿಗೆ ಈ ವರ್ಷ ಮಾನಸಿಕ ಅಸ್ವಾಸ್ಥ್ಯವೆನಿಸಿದರೂ ಉದ್ಯೋಗ ಧಂದೆಯವರಿಗೆ ತುಂಬ ಉತ್ಕರ್ಷಕಾರಕವೆನಿಸಿದೆಯೆಂದು ತಿಳಿಯಬೇಕು.

ಈ ವರ್ಷ ಈ ರಾಶಿಯವರಿಗೆ ಗುರು, ಶನಿ ಮತ್ತು ರಾಹು ಈ ಪ್ರಮುಖ ಗ್ರಹಗಳು ಪೂರ್ಣ ಅನುಕೂಲವಿರುವುದರಿಂದ ಆರೋಗ್ಯದ ವಿಷಯದಲ್ಲಿ ಎಷ್ಟೂ ಸಂಶಯಪಡದೆಯೆ ನಿಶ್ಚಿಂತರಾಗಿರಬೇಕು; ಆದರೆ ಆಹಾರ-ವಿಹಾರಗಳ ವಿಷಯದಲ್ಲಿ ಮಾತ್ರ ಮಿತಿ ಮೀರದಿರುವುದು ಉತ್ತಮ. ಈ ಮೊದಲು ಬಹು ದಿನಗಳಿಂದಲೂ ಅಸ್ವಾಸ್ಥ್ಯವನ್ನನುಭವಿಸುತ್ತಿದ್ದರೂ ಆದು ಈ ವರ್ಷ ನಿವಾರಣೆಯಾಗುವುದು. ಆದರೆ ವರ್ಷಾರಂಭದಲ್ಲಿ ಮಾತ್ರ ರಾಶಿಸ್ವಾಮಿ ಬುಧನು ೬ನೆಯವನಾಗಿ ಶತ್ರುಕ್ಷೇತ್ರದಲ್ಲಿ ಹಾಗು ವಕ್ರಿಯಾಗಿ ಇರುವುದರಿಂದ ಮಾನಸಿಕಸ್ಥಿತಿ ಮಾತ್ರ ಚೆನ್ನಾಗಿರದೆಯೆ ಅನೇಕ ಪ್ರಕಾರದ ಸಂಶಯಗಳು ಮುತ್ತಿಕೊಂಡು ತ್ರಸ್ತರಾಗುವಿರಿ. ನಿಮ್ಮ ಆಪ್ತರು, ಸೇವಕರು ಮಾತ್ರವಲ್ಲ ಹೆಂಡತಿ ಸಹ ನಿಮ್ಮ ವಿರುದ್ಧಳಾಗಿದ್ದಾಳೆಂಬಂಥ ವಿಚಿತ್ರ ವಿಪರೀತ ತಪ್ಪು ಕಲ್ಪನೆಗಳನ್ನು ತಲೆಯಲ್ಲಿ ತುಂಬಿಕೊಂಡು ಬಳಲುತ್ತೀರಿ. ಅದರಲ್ಲೂ ಡಿಸೆಂಬರ್ ೬ ರಿಂದ ೨೮, ಜನೆವರಿ ೧೪ ರಿಂದ ಫೆಬ್ರುವರಿ ೧, ಮೇ ೧೨ ರಿಂದ ೨೯ ಈ ಅವಧಿಯಲ್ಲಿ ಇಂಥ ಪ್ರವೃತ್ತಿ ನಿಮ್ಮಲ್ಲಿ ವಿಶೇಷವಾಗಿ ಕಂಡುಬರುವುದು. ಇದೊಂದನ್ನುಳಿದು ಇತರ ವಿಷಯಗಳಲ್ಲಿ ದೇಹಸುಖ ಬಹಳ ಉತ್ತಮವಲ್ಲದೆ ಪ್ರತಿಯೊಂದು ಕೆಲಸವೂ ನಿಶ್ಚಿತ ಅಂದಾಜಿನಂತೆಯೇ ಕೈಗೂಡುವುದು.

ಅದರಂತೆಯೇ ಈ ವರ್ಷವು ಸ್ತ್ರೀಸುಖಕ್ಕೂ ಉತ್ತಮವಾಗಿದೆ. ಭಾರ್ಯೇಶ ಗುರುವು ಸಪ್ಟೆಂಬರ್ ೩ ರ ವರೆಗೆ ಎರಡನೆಯವನಾಗಿ ಧನ ಮತ್ತು ಕುಟುಂಬಸ್ಥಾನದಲ್ಲಿ ಉಚ್ಚನಾಗಿ ಕರ್ಕದಲ್ಲಿರುವನು ಹಾಗು ಅನಂತರ ಮೂರನೆಯವನಾಗಿ ಭ್ರಾತೃ ಮತ್ತು ಪರಾಕ್ರಮಸ್ಥಾನದಲ್ಲಿ (ಕರ್ಕದಲ್ಲಿರುವಂತೆಯೆ) ಬಲಿಷ್ಠ ರಾಶಿಯಾದ ಸಿಂಹದಲ್ಲಿರುವುದರಿಂದ ಅವಳ ಆರೋಗ್ಯ (ಕೆಲವು ಚಿಲ್ಲರೆ ಅಸ್ವಸ್ಥತೆಗಳನ್ನು ಬಿಟ್ಟರೆ) ಸದಾಕಾಲವೂ ಉತ್ತಮವಾಗಿಯೇ ಇರುವುದು. ಅಲ್ಲದೆ ನೀವು ಅವಳೊಂದಿಗೆ ಎಷ್ಟೇ ತುಚ್ಛತೆಯಿಂದ ವರ್ತಿಸಿದರೂ ಅವಳು ಮಾತ್ರ ಸರಳ, ಅಚಲ ಪ್ರೇಮದಿಂದ ಹಾಗು ಶ್ರದ್ಧೆಯಿಂದಲೇ ನಿಮ್ಮೊಂದಿಗೆ ನಡೆದುಕೊಳ್ಳುವಳು. ಅಲ್ಲದೆ ಅವಳ ಕೈಗುಣ ಅಥವಾ ವಿಚಾರ ನಿಮಗಿಂತಲೂ ಉತ್ತಮವೆನಿಸಬಹುದಾಗಿದೆ.

ಈ ರಾಶಿಯ ಅವಿವಾಹಿತರ ವಿವಾಹವಾಗುವುದಿದ್ದರೆ, ಅದು ಎರಡನೆಯ ಗುರುವಿರುವಾಗ ಅಗುವುದಾದರೆ ಬಹಳ ಮಾತುಕತೆಗಳ ನಂತರವಾದರೂ ಅಪೇಕ್ಷೆಗಿಂತ ಹೆಚ್ಚು ಉತ್ತಮ ಮನೆತನದೊಂದಿಗೆ ಹೊಂದುವುದು. ಆದರೆ ಮೂರನೆಯ ಗುರುವಿರುವಾಗಾದರೆ ಅಲ್ಪಾಯಾಸದಿಂದ, ಆದರೆ ಸಾಮಾನ್ಯ ಯೋಗ್ಯತೆಯ ಮನೆತನದೊಂದಿಗೆ ಹೊಂದುವುದಲ್ಲದೆ ನಿಶ್ಚಿತ ಮುಹೂರ್ತಕ್ಕೆಯೆ ನಿರ್ವಿಘ್ನವಾಗಿ ಮದುವೆಯೂ ನೆರವೇರುವುದು. ಆದರೆ ವಧೂವರರು ಜನರ ದೃಷ್ಟಿಯಲ್ಲಿ ಅನುರೂಪರೆನಿಸಿದರೂ ಸ್ವತಃ ನಿಮಗೆ ಮಾತ್ರ ತುಂಬ ಸಂಶಯವುಳಿಯುವುದು.

ಈ ವರ್ಷ ನಿಮ್ಮ ಮಗ ಅಥವಾ ಮಗಳ ಮದುವೆ ಮಾಡುವುದಿದ್ದರೆ ಅದಕ್ಕೆ ಯೋಗ್ಯ ಮನೆತನದೊಂದಿಗೆ ಸಂಬಂಧ ಹೊಂದಿ ನಿಶ್ಚಿತ ಮುಹೂರ್ತದಲ್ಲಿ ಅಲ್ಪಾಯಾಸದಿಂದಲೇ ಆದಾಗುವುದಕ್ಕೆ ಸದಾಕಾಲವೂ ಉತ್ತಮ ಬಾಸಿಂಗಬಲವಿದೆ. ಆದರೆ ಅಳಿಯ ಅಥವಾ ಸೊಸೆಯ ಊರು ಮಾತ್ರ ಬಲು ದೂರದ್ದಾಗಿರಬಹುದಾಗಿದೆ. ಸೊಸೆ ಅಥವಾ ಅಳಿಯ ಮನಸ್ಸಿಗೊಪ್ಪುವಂತೆಯೆ ಇರುವರಾದರೂ ಸಂತತಿಸ್ಥಾನದಲ್ಲಿರುವ ಕೇತುವಿನಿಂದಾಗಿ ಅವರಿಂದ ಅಷ್ಟಾಗಿ ಸುಖ ದೊರೆಯದು ಮಾತ್ರವಲ್ಲ, ಕೆಲ ಸಮಯ ಅವರ ವರ್ತನೆ ನೋವುಂಟುಮಾಡುವಂಥದೂ ಆಗಿರಬಹುದು. ನವೆಂಬರ ೧೪ ರಿಂದ ಡಿಸೆಂಬರ್ ೮, ಜನೆವರಿ ೧ ರಿಂದ ೨೫, ಹಾಗು ಎಪ್ರಿಲ್ ೮ ರಿಂದ ಮೇ ೪ ರ ವರೆಗಿನ ಅವಧಿಯಲ್ಲಿ ಇದು ವಿಶೇಷವಾಗಿ ಒಡೆದು ಕಾಣುವಂತಿರಬಹುದು. ಅವರ ಉನ್ನತಿಗೆ ಮಾತ್ರ ಈ ವರ್ಷವು ಎಣಿಕೆಯಷ್ಟೇ ಚೆನ್ನಾಗಿದೆ.

ಉದ್ಯೋಗ ಧಂಧೆಗಳಿಗೆ ಈ ವರ್ಷವು ಬಹಳ ಉತ್ತಮವಾಗಿದೆ. ಡಿಸೆಂಬರ್ ೧೯ ರ ನಂತರ ಸದಾ ಕಾಲವೂ ಭಾಗ್ಯೇಶ ಶನಿ ದಶಮನೂ ಆದರಂತೆಯೆ ದಶಮೇಶ ಅಂದರೆ ಕರ್ಮೇಶ ಗುರು ಸಪ್ಟಂಬರ್ ೩ರ ವರೆಗೆ ೨ನೆಯವನಾಗಿ ಉಚ್ಚನೂ ಆಗಿದ್ದರೆ ಅನಂತರ ೩ನೆಯವನಾಗಿ ಮಿತ್ರಕ್ಷೇತ್ರದಲ್ಲಿರುವುದರಿಂದ ಅವನ ದೃಷ್ಟಿ ಮೊದಲು ಕರ್ಮ ಹಾಗು ನಂತರ ಭಾಗ್ಯಸ್ಥಾನದ ಮೇಲಿರುವುದು. ಇದರೊಟ್ಟಿಗೆಯೆ ರಾಹುವು ಹನ್ನೊಂದನೆಯವನಾಗಿ ಭಾಗ್ಯಸ್ಥಾನದಲ್ಲಿ ವರ್ಷವಿಡೀ ಇರುವವನಲ್ಲದೆ ವರ್ಷಾರಂಭದಲ್ಲಿಯೆ ಮಂಗಳನು ಮೂರನೆಯವನಾಗಿ ಪರಾಕ್ರಮಸ್ಥಾನದಲ್ಲಿರುವನು. ಕಪಿಲಾಷಷ್ಠಿಯಂತೆಯೆ ಅಪೂರ್ವವಾದ ಈ ಯೋಗದಿಂದಾಗಿ ಉದ್ಯೋಗದಲ್ಲಿ ಬಲುರಭಸದ ಪ್ರಗತಿಯಾಗುವುದಲ್ಲದೆ ಪತ್ತು, ಪ್ರತಿಷ್ಠೆಗಳು ತುಂಬ ಹೆಚ್ಚುವವು. ಮತ್ತು ಅಪೇಕ್ಷೆಗಿಂತ ಬಹಳ ಹೆಚ್ಚು ದ್ರವ್ಯಲಾಭವಾಗುವುದು. ಲಾಭಸ್ಥಾನದಲ್ಲಿರುವ ರಾಹುವು 'ಆಸುರೀ ಸಂಪತ್ತ'ನ್ನು ಕೊಡುವವನೆಂದು ನಿಯಮವಿದೆ. ಅದರಂತೆಯೆ ೨ನೆಯ ಗುರುವು ಧನಸಂಗ್ರಹವನ್ನು ಹೆಚ್ಚಿಸುತ್ತಾನೆಯಾದರೆ ೩ನೆಯ ಗುರುವಿರುವಾಗ ಸಾಹಸದ ಅಥವಾ ದುರ್ದಮ್ಯ ಕೆಲಸದಲ್ಲಿ ಸಹ ತೀರ ಸಹಜವಾಗಿ ಯಶಸ್ಸು ದೊರೆಯುತ್ತದೆ. ಹತ್ತನೆಯ ಶನಿಯು ಸರಕಾರಿ ಕೆಲಸಗಳಲ್ಲಿ ಅಥವಾ ಕಲಹ, ಸ್ಪರ್ಧೆ ಇಲ್ಲವೆ ಅಹಮಹಮಿಕೆಯುಳ್ಳಂತಹ ಉದ್ಯೋಗದಲ್ಲಿ ಉತ್ತಮ ಯಶಸ್ಸು ಕೊಡುತ್ತಾನೆ. ವಿಶೇಷತಃ ನವೆಂಬರ್ ೨೧ ರ ವರೆಗೆ, ನಂತರ ಜನೆವರಿ ೨೨ ರಿಂದ ಎಪ್ರಿಲ್ ೧೬ ರ ವರೆಗೆ, ಜುಲೈ ೫ ರಿಂದ ಅಗಸ್ಟ್ ೧೬ರ ವರೆಗೆ, ಮತ್ತು ಅಕ್ಟೋಬರ್ ೯ ರಿಂದ ವರ್ಷಾಂತ್ಯದ ವರೆಗಿನ ಕಾಲವು ಒಳ್ಳೆಯ ತೇಜಿಯ, ಯಶಸ್ಸಿನ ಮತ್ತು ವಿಪುಲ ಲಾಭದಾಯಕ ಸಮಯ

ದೆನಿಸಲಿದೆ. ಉದ್ಯೋಗಸ್ಥರಂತೆಯೆ ನೌಕರದಾರರಿಗೆ ಸಹ ಈ ಕಾಲ ಇಷ್ಟೇ ಉತ್ಕರ್ಷಕಾರಕವಿದ್ದು ಜನೆವರಿ ೨೨ ರಿಂದ ಎಪ್ರಿಲ್ ೧೭ ಅಥವಾ ಅಕ್ಟೋಬರ್ ೯ ರ ನಂತರ ಅನೇಕರಿಗೆ ಮೇಲಿನ ಸ್ಥಾನಕ್ಕೆ ಬಡತಿ ಸಿಗುವುದು. ಆದರೆ ಒಂದು ಮಾತನ್ನು ಇಲ್ಲಿ ಲಕ್ಷಿಸಬೇಕು. ಅದೆಂದರೆ, ಸರಳವೃತ್ತಿಯವರಿಗಿಂತ ಧೂರ್ತರೂ ಭೂಮ್ಯಾಕಾಶಗಳನ್ನು ಒಂದುಗೂಡಿಸುವೆನೆಂಬ ಸಾಹಸಿಗಳೂ ಆದವರಿಗೆಯೆ ಈ ಸಲ ಹೆಚ್ಚಿನ ಉತ್ಕರ್ಷ ಕಾದಿಧೆ ಎಂಬುದು. ಸಪ್ಟೆಂಬರ್ ೧ ಕ್ಕಿಂತ ಮೊದಲೇ ಬದಲಿಯಾಗುವುದಾದರೆ ಯೋಗ್ಯ ಸ್ಥಳಕ್ಕೆಯೇ ಆಗುವುದು, ಆದರೆ ಅಂನತರವಾದರೆ ಮಾತ್ರ ತದ್ವಿರುದ್ಧವೆ. ಹೊಲ ಮನೆ ಮುಂತಾದ ಸ್ಥಾವರ ರೂಪದಲ್ಲಿಗಿಂತ ರೋಖ ಹಣ, ಶೇಅರುಗಳು, ಬಾಂಡುಗಳು, ಚಿನ್ನ ಮುಂತಾದ ರೂಪದಲ್ಲಿ ಸಂಗ್ರಹ ಮಾಡುವುದಕ್ಕೆ ಇದು ಹೆಚ್ಚು ಅನುಕೂಲ ಕಾಲವೆನಿಸಿದೆ. ಗುರುವು ಮೂರನೆಯವನಿರುವಾಗ ಮಹತ್ವದ ಕೆಲಸಕ್ಕಾಗಿ ದೂರದ ಪ್ರವಾಸ ಕೈಕೊಳ್ಳಬೇಕಾಗಬಹುದು.

ವಾದ ಮತ್ತು ಸ್ಪರ್ಧೆಗಳಲ್ಲಿ ಪ್ರತಿಸ್ಪರ್ಧಿಗಳಿಂದ ತೊಂದರೆ ಎಡೆಬಿಡದೆಯೇ ನಡೆದಿರುವುದಾದರೂ ಕೊನೆಗೆ ಅವರಲ್ಲಿಯ ಬಹುತರರ ಮೇಲೆ ನಿಮಗೆ ಭಾರೀ ವಿಜಯ ದೊರೆಯುವುದು ನಿಶ್ಚಿತ.

ಈ ರಾಶಿಯ ಗರ್ಭವತಿಯರ ಹೆರಿಗೆ ತುಸು ಕಷ್ಟಕರವೇ ಆದರೂ ಅಪಾಯವೇನೂ ಸಂಭವಿಸುವಂತಿಲ್ಲ. ಗುರುವು ಎರಡನೆಯವನಾಗಿರುವಾಗಲಾದರೆ ಕನ್ಯೆ ಹಾಗು ಅವನು ಮೂರನೆಯವನಾಗಿರುವಾಗಲಾದರೆ ಪುತ್ರ ಜನಿಸುವ ಯೋಗವಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಡಿಸೆಂಬರ್ ೮ ರಿಂದ ಜನೆವರಿ ೧, ಜನೆವರಿ ೨೫ ರಿಂದ ಫೆಬ್ರುವರಿ ೧೮, ಮಾರ್ಚ್ ೧೪ ರಿಂದ ಎಪ್ರಿಲ್ ೮, ಮೇ ೪ ರಿಂದ ಜೂನ್ ೧ ಹಾಗು ಜುಲೈ ೩ ರ ನಂತರ ಈ ಅವಧಿಯಲ್ಲಾದರೆ ಅವರು ನಿಶ್ಚಿತ ಉತ್ತೀರ್ಣರಾಗುವರು.

ಕರ್ಕ

ಈ ವರ್ಷವು ಈ ರಾಶಿಯವರಿಗೆ ಸಂಗ್ರಹ-ಕಾರಕವೆನಿಸದಿದ್ದರೂ ಯಶಸ್ಸು, ಲಾಭ ಮತ್ತು ಉತ್ಕರ್ಷಕ್ಕೆ ಪೋಷಕವೆಂದೇ ತಿಳಿಯಬೇಕು.

ಶನಿಯು ಈ ವರ್ಷ ಬಹುಕಾಲ ಒಂಬತ್ತನೆಯವನೆ ಆಗಿರುವನಾದರೂ ವಕ್ರಗತಿಯಿಂದಾಗಿ ಡಿಸೆಂಬರ್ ೧೪ ರ ವರೆಗೆ ಎಂಟನೆಯವನಾಗಿರುವುದರಿಂದ ಆ ವರೆಗೆ ಆರೋಗ್ಯಕ್ಕೆ ತುಸು ತೊಂದರೆ ಕೊಟ್ಟೇಕೊಡುವನು. ಅಲ್ಲದೆ ಸಪ್ಟೆಂಬರ್ ೩ ರ ವರೆಗೆ ಈ ರಾಶಿಯಲ್ಲಿರುವ ಗುರು ಉಚ್ಚನಾಗಿದ್ದಾನೆ. ಅನಂತರ ಎರಡನೆಯವನಾದರೂ ಮೊದಲಿನಂತೆಯೆ ಬಲಾಢ್ಯನಾಗಿರುವುದರಿಂದ ಆಯುಷ್ಯಕ್ಕೆ ಎಷ್ಟೂ ಬಾಧೆಯಿಲ್ಲ. ಗುರುವಿನ ಈ ಎರಡೂ ಸ್ಥಾನಗಳು ಉಚ್ಚ ಹಾಗು ಮಿತ್ರರಾಶಿಯವಾಗಿದ್ದು ನೈಸರ್ಗಿಕವಾಗಿಯೇ ಅವರ ಬಲವನ್ನು ಹೆಚ್ಚಿಸುವಂತಹವಾಗಿವೆಯಾದ್ದರಿಂದ ಇತರ ವಿಷಯಗಳಲ್ಲಿ ಬಹಳ ಉತ್ತಮ ದೇಹಸುಖ ದೊರೆಯುವುದು ಮಾತ್ರವಲ್ಲ, ಮನಸ್ಸು ಯಾವಾಗಲೂ ಶುದ್ಧ ಮತ್ತು ಸರ್ವಮಾನ್ಯವೆನಿಸಿದ ಒಳ್ಳೊಳ್ಳೆಯ ವಿಚಾರಗಳಲ್ಲಿಯೇ ತೊಡಗಿರುವುದು. ನೀವು ಮುಂಚೆಯೆ ನುಡಿದಂತೆಯೇ ಅನೇಕ ಘಟನೆಗಳು ಸಂಭವಿಸಿದ್ದು ಜನರ ಅನುಭವಕ್ಕೆ ಬರುವುದು. ಸಪ್ಟೆಂಬರ ೩ ರಿಂದ ಗುರುವು ಎರಡನೆಯ ಅಂದರೆ ಧನ ಮತ್ತು ಕುಟುಂಬಸ್ಥಾನಕ್ಕೆ ಬಂದಾಗ ಮನೆತನದ ಲೌಕಿಕವನ್ನು ಹೆಚ್ಚಿಸುವಂತಹ ಕನಿಷ್ಠ ಮೂರು ನಾಲ್ಕು ಘಟನೆಗಳಾದರೂ ನಿಶ್ಚಯವಾಗಿಯೂ ಸಂಭವಿಸುವವು, ಹಾಗು ಆ ಬಗ್ಗೆ ಸ್ವಪ್ನ ಇಲ್ಲವೆ ದೃಷ್ಟಾಂತಗಳ ಮೂಲಕ ಬಹು ಮೊದಲೇ ಸೂಚನೆಗಳು ಸಹ ನಿಮಗೆ ದೊರೆಯಬಹುದಾಗಿದೆ. ಅದರಂತೆಯೆ, ವಿಶೇಷ ಪ್ರಿಯರಾದ ಅಥವಾ ಪೂಜ್ಯರೆನಿಸಿದ ವ್ಯಕ್ತಿಗಳ ಭೆಟ್ಟಿಯು ಹಾಗು ಅಲ್ಪಕಾಲ ಸಹವಾಸದ ಯೋಗ ಅನಿರೀಕ್ಷಿತ ಒದಗಿ ಬಂದು ಆನಂದ ವೀಯುವುದು.

ಸ್ತ್ರೀಸುಖಕ್ಕೆ ಈ ವರ್ಷ ಬಹಳ ಉತ್ತಮವಿದೆ. ಆದರೆ ನಾಲ್ಕನೆಯ ಅಂದರೆ ಸುಖಸ್ಥಾನದಲ್ಲಿ ವರ್ಷವಿಡಿ ಪಾಪ ಹಾಗು ಖಲಗ್ರಹವೆನಿಸಿದ ಕೇತುವಿರುವುದರಿಂದ ಹಾಗು ಅವನೊಟ್ಟಿಗೆ ಜನೆವರಿ ೨೨ ರಿಂದ ಎಪ್ರಿಲ್ ೧೭ ರ ವರೆಗೆ ಹಾಗು ಮತ್ತೆ ಜುಲೈ ೫ ರಿಂದ ಅಗಸ್ಟ ೨೭ ರ ವರೆಗೆ ಮಂಗಳನೂ ಈ ಸ್ಥಾನದಲ್ಲಿಯೇ ಇರುತ್ತಾನೆ. ಆಗ ಮಾತ್ರ ನಿಮ್ಮ ಮತ್ತು ಅವಳ ಮನಸ್ಸನ್ನು ಪರಸ್ಪರರ ವಿಷಯದಲ್ಲಿ ಕಲುಷಿತಗೊಳಿಸುವ ಕುಪ್ರಯತ್ನವನ್ನು ಕೆಲವು ಆಪ್ತರು ಬಲು ಜೋರಿನಿಂದಲೇ ಮಾಡಬಹುದು. ಆದರೆ ಆರನೆಯ ಅಂದರೆ ರಿಪುಸ್ಥಾನದ ಮೇಲೆ ಶನಿಯ ಪೂರ್ಣ ದೃಷ್ಟಿಯಿರುವುದರಿಂದ ಕೊನೆಗೆ ಸತ್ಯವು ತಾನೇ ಬಹಿರಂಗವಾಗಿ ಈ ಆಪ್ತರೆಂಬವರು ತಮ್ಮ ನಾಲಿಗೆಯನ್ನು ತಾವೇ ಕಡಿದುಕೊಳ್ಳುವಂತಾಗುವುದು. ಅಲ್ಲದೆ ಭಾರ್ಯೇಶನಾದ ಶನಿಯು ಈ ವರ್ಷವಿಡೀ ಸ್ಥಾನ ಮತ್ತು ರಾಶಿಬಲಿಷ್ಠನಾಗಿರುವುದರಿಂದ ಪ್ರತಿಂದೊಂದು ಕೆಲಸದಲ್ಲೂ ಅವಳ ಸಲಹೆ ಕೇಳುವುದು ಸುಕರವೂ ಪ್ರಭಾವಿಯೂ ಅನಿಸಬಹುದಾಗಿದೆ. ಅವಳ ಆರೋಗ್ಯಕ್ಕೆ ಜುಲೈ ೫ ರಿಂದ ೧೭ ರ ವರೆಗಿನ ಕಾಲ ತುಸು ಕ್ಲೇಶಕರವಾಗಿದೆ.

ಈ ರಾಶಿಯ ಅವಿವಾಹಿತರ ವಿವಾಹ ಈ ವರ್ಷ ಆಗುವುದಿದ್ದಲ್ಲಿ ಅದಕ್ಕೆ ಎರಡನೆಯ ಗುರುವಿಗಿಂತ ಮೊದಲನೆಯ ಗುರುವಿರುವಾಗ ಹೆಚ್ಚು ಅನುಕೂಲವಿದೆ. ಮೊದಲನೆಯ ಗುರುವಿರುವಾಗ ಅಂದರೆ ಸಪ್ಟೆಂಬರ್ ೩ ರ ವರೆಗೆ ಬಾಸಿಂಗಬಲ ಅತ್ಯುತ್ತಮವಿದ್ದು ತೀರ ಅಲ್ಪಾಯಾಸದಿಂದ ವಿವಾಹವಾಗುವುದು. ಎರಡನೆಯ ಗುರುವಿರುವಾಗ ತುಸು ಕಷ್ಟವೆನಿಸಬಹುದು; ಅಲ್ಲದೆ ಮದುವೆಯಾಗದಿದ್ದರೂ ನಿಶ್ಚಯವಾದರೂ ಆಗಬಹುದಾಗಿದೆ. ಗುರುವು ಮೊದಲನೆಯವನಿರುವಾಗ ಮದುವೆಯಾದರೆ ವಧೂವರರು ಪರಸ್ಪರ ಅತ್ಯನುರೂಪರಿರುವರು; ಆದರೆ ಅವನು ಎರಡನೆಯವನಾದಾಗಾದರೆ ನಿಮಗಿಂತಲೂ ಪ್ರತಿ-ವ್ಯಕ್ತಿಯ ಆರ್ಥಿಕಸ್ಥಿತಿ ಹೆಚ್ಚು ಸಧನವಾಗಿರುತ್ತದೆ. ಅದರಂತೆಯೆ, ನಿಮ್ಮ ಮಗ ಅಥವಾ ಮಗಳ ಮದುವೆ ಮಾಡುವದಿದ್ದಲ್ಲಿ ಈ ವರ್ಷ ೨ನೆಯ ಗುರುವಿಗಿಂತ ಮೊದಲನೆಯ ಗುರುವಿರುವಾಗಲೇ ಅದು ಅನಾಯಾಸವಾಗಿ ಮತ್ತು ಅಪೇಕ್ಷೆಗಿಂತ ಹೆಚ್ಚು ಸ್ಥಿತಿ ಹಾಗು ಯೋಗ್ಯತೆಯುಳ್ಳ ಮನೆತನದಲ್ಲಿಯೇ ಆಗು-ವದು ಮಾತ್ರವಲ್ಲ, ಸೊಸೆ ಇಲ್ಲವೆ ಅಳಿಯ ನಿಮ್ಮಂ-ತೆಯೆ ಇತರ ಎಲ್ಲರಿಗೂ ರೂಪಗುಣಾದಿ ಎಲ್ಲ ವಿಷಯಗಳಲ್ಲೂ ಮನಕ್ಕೊಪ್ಪಿತರಾಗಿರುವರು. ಅವರವರ ವಯೋಮಾನಕ್ಕನುಗುಣವಾಗಿ ಮಕ್ಕಳೆಲ್ಲರ ಉತ್ಕರ್ಷವೂ ನಿಮ್ಮ ಅಪೇಕ್ಷೆಗಿಂತ ಹೆಚ್ಚಾಗಿಯೇ ಆಗುವದು. ಒಬ್ಬಿಬ್ಬರದಂತೂ ಮಹದ್ಭಾಗ್ಯವೇ ತೆರೆಯುವದು. ವರ್ಷಾರಂಭದಲ್ಲಿಯೇ ಈ ಸ್ಥಾನದಲ್ಲಿ ಭಾಗ್ಯೇಶ ಗುರುವಿನೊಂದಿಗೆಯೆ ಸ್ವಸ್ವಾಮಿ ಮಂಗಳನ ಪೂರ್ಣ ದೃಷ್ಟಿಯಿರುವದರಿಂದ ಪ್ರತಿಯೊಬ್ಬರಿಂದಲೂ ನಿಮಗೆ ಉತ್ತಮ ಸುಖ ದೊರೆಯುವದೆಂಬುವದರಲ್ಲಿ ತಿಲ ಮಾತ್ರವೂ ಸಂಶಯ ಬೇಡ.

ಉದ್ಯೋಗ-ಧಂದೆಗಳಲ್ಲಿ ಕೂಡ ಈ ವರ್ಷ ಈ ರಾಶಿಯವರಿಗೆ ಅತ್ಯುತ್ಸಾಹಕರವೆನಿಸಿದೆ. ಅದರಲ್ಲಿ ಭಾರೀ ಯಶಸ್ಸು ದೊರೆಯುವದಲ್ಲದೆ ವಿಸ್ತಾರ ಮತ್ತು ಲಾಭಕ್ಕೆ ತುಂಬ ಅನುಕೂಲವಿದೆ. ಅನೇಕರಿಗೆ ಬೇರೆ ಬೇರೆ ಸ್ಥಳಗಳಲ್ಲಿ ಶಾಖೆಗಳನ್ನು ತೆರೆಯುವ ಅವಕಾಶವೂ ದೊರೆಯಬಹುದಾಗಿದೆ. ಕೈಕೆಳಗಿನವರು, ಪಾಲುಗಾರರು ಹಾಗು ಮಿತ್ರರಿಂದ ಪೂರ್ಣ ಸಹಕಾರ ದೊರೆಯುವದು. ಸರಕಾರಿ ಕೆಲಸಗಳಲ್ಲಿ ಅಧಿಕಾರೀ ವರ್ಗವೂ ಒಳ್ಳೆಯ ಅನುಕೂಲವಿರುವದಲ್ಲದೆ ಪ್ರತಿಸ್ಪರ್ಧಿಗಳು ಎಷ್ಟೇ ಅಡೆತಡೆಗಳನ್ನೊಡ್ಡಿದರೂ ಕೊನೆಗೆ ಎಲ್ಲವೂ ನಿಮ್ಮಂತೆಯೇ ಆಗುವದು. ನೌಕರದಾರರಿಗೂ ಈ ಸಲ ಒಳ್ಳೆಯ ಉನ್ನತಿದಾಯಕ ಸಮಯವಾಗಿದೆ. ಲಾಭದ ವಿಷಯದಲ್ಲಿಯಂತೂ ಉತ್ತಮ ಭವಿತವ್ಯವೇ ಕಾದಿದೆ. ಅನೇಕರಿಗೆ ಮೇಲಿನ ಸ್ಥಾನಕ್ಕೆ ಬಡತಿ ಕನಸುಮನಸ್ಸಿನಲ್ಲಿಲ್ಲದಾಗಲೂ ಅಕಸ್ಮಾತ್ ದೊರೆಯುವದು. ಅರ್ಥಾತ್ ಅದು ದೊರೆಯಬೇಕಾದ ನ್ಯಾಯವಾದ ನಿರೀಕ್ಷೆಯಲ್ಲಿದ್ದವರು ಅಥವಾ ಹಕ್ಕುಳ್ಳವರಿಗಂತೂ ಅದು ದೊರೆತೇ ತೀರುವದು. ಮೊದಲನೆಯ ಗುರುವಿಗಿಂತ ಅವನು ೨ನೆಯವನಿರುವಾಗ ವರಿಷ್ಠರು ಹೆಚ್ಚು ಸಂತುಷ್ಟರಾಗಿರುವರು. ಬದಲಿಯಾದರೆ ಅದು ನಿಮ್ಮ ವ್ಯಕ್ತಿತ್ವ ಹಾಗು ಸ್ವತಂತ್ರತೆಯನ್ನು ಹೆಚ್ಚಿಸುವಂತಹ ಅಧಿಕಾರಸ್ಥಾನಕ್ಕೆಯೇ ಆಗುವದು, ಆದರೆ ಇರುವದರ ದೃಷ್ಟಿಯಿಂದ ತುಸು ಅನಾನುಕೂಲ ಸ್ಥಳಕ್ಕಾಗಬಹುದಾದ ಸಂಭವ ಬಹಳವಾಗಿದೆ. ವಿಶೇಷತಃ ನವೆಂಬರ್ ೧೪ ರಿಂದ ಡಿಸೆಂಬರ್ ೮, ಜನೆವರಿ ೧ ರಿಂದ ಮಾರ್ಚ್ ೧೪, ಎಪ್ರಿಲ್ ೮ ರಿಂದ ಮೇ ೪ ಹಾಗು ಜುಲೈ ೩ ರಿಂದ ವರ್ಷಾಂತ್ಯದವರೆಗಿನ ಅವಧಿಯು ಲಾಭಕ್ಕೆ ಬಹಳ ಉತ್ತಮ ಕಾಲವೆನಿಸಿದೆ. ಆದರೆ ಆಗುವ ಲಾಭದ ಮಾನದಿಂದ ಅದನ್ನು ಸಂಗ್ರಹ ಮಾಡಿಡಲು ಸಾಧ್ಯವಾಗುವದರ ಪ್ರಮಾಣ ಮಾತ್ರ ಬಹಳ ಕಡಿಮೆ. 'ನೀವೆಷ್ಟೇ ಹಿಡಿತದಿಂದ ವೆಚ್ಚ ಮಾಡಲು ಪ್ರಯತ್ನಿಸಿದರೂ ೪ನೆಯ ಕೇತು ಹಾಗು ನೆಪ್ಚೂನರಿಂದಾಗಿ ಮೇಲಿಂದ ಮೇಲೆ ವಿಪರೀತ ವೆಚ್ಚದ ಪ್ರಸಂಗಗಳು ಆಕಸ್ಮಿಕವಾಗಿ ಬರುವವು. ವಾಹನಗಳಿದ್ದರೆ ಅವು ಮೇಲಿಂದ ಮೇಲೆ ಕೆಟ್ಟು ತುಂಬ ವೆಚ್ಚಕ್ಕೆ ಕಾರಣವಾಗುವವು. ಯಾರಿಗಾದರೂ ಸಾಲ ಅಥವಾ ಕೈಗಡ ಕೊಟ್ಟಿದ್ದರೆ ಅದನ್ನು ಮರಳಿ ಪಡೆಯುವದು

ಮಾತ್ರ ದುಸ್ಸಾಧ್ಯವಾಗಬಹುದು. ಗುರುವು ಮೊದಲನೆಯುವನಿರುವಾಗ ಧಾರ್ಮಿಕ ಕಾರ್ಯಗಳು ಮನಸ್ಸಿನಂತೆಯೆ ಜರುಗುವವಾದರೆ ಅವನು ೨ನೆಯುವನಾಗಿರುವಾಗ ಅವನ್ನು ಯೋಜಿಸಿದರೆ ಮಾತ್ರ ಅನಪೇಕ್ಷಿತ ಅಡೆತಡೆಗಳಿಗಾಗಿ ಅವನ್ನು ಸ್ಥಗಿತಗೊಳಿಸಬೇಕಾಗಬಹುದು.

ದಾವೆ, ಫಿರ್ಯಾದಿ ಅಥವಾ ಇನ್ನಿತರ ಸ್ಪರ್ಧೆಯ ಕೆಲಸಗಳಲ್ಲಿ ನಿರ್ಣಯವು ಮೊದಲನೆಯ ಗುರುವಿದ್ದಾಗ ದೊರೆತರೆ ಪ್ರತಿಪಕ್ಷಿಯು ಮತ್ತೆ ತನ್ನ ತಲೆಯೆತ್ತದಷ್ಟು ಬಲವಾಗಿರುವದು; ಆದರೆ ಅವನು ೨ನೆಯುವನಿದ್ದಾಗಾದರೆ ಯಶಸ್ಸು ದೊರೆಯುವುದಾದರೂ ಶತ್ರುವು ಮೇಲಿಂದ ಮೇಲೆ ತನ್ನ ತಲೆಯೆತ್ತಲು ಸಾಧ್ಯವಾಗುತ್ತದೆ.

ಈ ರಾಶಿಯ ಗರ್ಭವತಿಯರು ಈ ವರ್ಷ ಸರ್ವಸಾಮಾನ್ಯವಾಗಿ ಸುಲಭವಾಗಿಯೇ ಪ್ರಸೂತರಾಗುವರು, ಜನೆವರಿ ೨೨ ರಿಂದ ಏಪ್ರಿಲ್ ೧೬ ಹಾಗು ಜುಲೈ ೫ ರಿಂದ ಅಗಸ್ಟ್ ೨೬ ಈ ಅವಧಿಯಲ್ಲಿ ಹೆರಿಗೆಯಾದರೆ ಕನ್ಯೆ ಜನಿಸುವದಾದರೆ ಇತರ ಅವಧಿಯಲ್ಲಿಯಾದರೆ ಪುತ್ರಯೋಗದ ಸಂಭವವೇ ಹೆಚ್ಚಾಗಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಮೊದಲನೆಯ ಗುರುವಿದ್ದಾಗಲಾದರೆ ಶ್ರೇಣಿಯು ಸಿಕ್ಕಬಹುದು ೨ನೆಯ ಗುರುವಿರುವಾಗಾದರೆ ಉತ್ತೀರ್ಣರಾಗಬೇಕಿದ್ದವರೂ ಆಗಲಿಕ್ಕಿಲ್ಲ.

ಅವರ ಆರೋಗ್ಯ ಮಾತ್ರ ಈ ವರ್ಷ ತೀರ ಕಿರಿಕಿರಿಯದಾಗಿರಬಹುದಾಗಿದೆ.

ಉದ್ಯೋಗ ಧಂದೆಗಳಲ್ಲಿ ಈ ವರ್ಷವು ಮೂರನೆಯ ಅಂದರೆ ಪರಾಕ್ರಮ ಸ್ಥಾನದಲ್ಲಿಯ ಕೇತುವಿನಿಂದಾಗಿ ಹಾಗು ಒಂಬತ್ತನೆಯ ಅಂದರೆ ಭಾಗ್ಯಸ್ಥಾನದಲ್ಲಿಯ ಅಂದರೆ ಭಾಗ್ಯಸ್ಥಾನದ ರಾಹುವಿನಿಂದಾಗಿ ಅತ್ಯಂತ ಸಾಹಸದ್ದೂ ಪ್ರಯಾಸದ್ದೂ ಎನಿಸಲಿದೆ. ಅರ್ಥಾತ್ ಪ್ರತಿಯೊಂದು ಕೆಲಸ ಕೈಗೂಡಬೇಕಾದರೂ ದೀರ್ಘ ಪ್ರಯತ್ನದ ನಿಶ್ಚಯ ಮಾಡಬೇಕಾಗುವುದಲ್ಲದೆ ಬೇಕಾದಷ್ಟು ಅಡ್ಡಿ ಆತಂಕಗಳು ಬಂದರೂ ಎದೆಯೊಡ್ಡುವ ಧೈರ್ಯವನ್ನೂ ತೋರಬೇಕಾಗುತ್ತದೆ. ಅಂದರೆ ನಿಮ್ಮ ಉದ್ದಿಷ್ಟಗಳು ನೆರವೇರುವವು. ಹನ್ನೆರಡನೆಯ ಗುರುವಿರುವಾಗ ಲೆಕ್ಕವಿಲ್ಲದಷ್ಟು ವೆಚ್ಚದ ಪ್ರಸಂಗಗಳು ಬರುವದು ನಿಜವಾದರೂ ಎಂಟನೆಯ ಶನಿಯಿಂದಾಗಿ ಈ ವೆಚ್ಚವನ್ನೆಲ್ಲ ತೂಗಿಸಿಕೊಂಡು ಹೋಗುವಷ್ಟು ಲಾಭ ನಿಶ್ಚಿತವಾಗಿಯೂ ಆಗುವುದು. ಅಲ್ಲದೆ ಅಷ್ಟಮಸ್ಥಾನದಲ್ಲಿರುವ ಮೀನ ರಾಶಿಯ ಮೇಲೆ ಉಚ್ಚವಾಗಿರುವ ತತ್‌ಸ್ವಾಮಿ ಗುರುವಿನ ಪೂರ್ಣ ದೃಷ್ಟಿಯಿರುವದರಿಂದ ಅಕಲ್ಪಿತ ಧನಲಾಭವೂ ಸಾಕಷ್ಟು ಆಗುವುದು ನಿಶ್ಚಿತ. ಪತ್ತು, ಪ್ರತಿಷ್ಠೆಗಳು ಕರಗಿ ಹೋಗುತ್ತಿರುವವೆಂದು ಭಾಸವಾದರೂ ಕೊನೆಗೆ ದೈವೀಕೃಪೆಯಂಥ ಆಶ್ಚರ್ಯಕರ ಘಟನೆಯೊಂದು ಸಂಭವಿಸಿ ಅವು ಮೊದಲಿಗಿಂತಲೂ ಬಹಳ ಹೆಚ್ಚುವವು. ಮೊದಲನೆಯ ಗುರುವಿರುವಾಗ ಮಾಡಿದ ಶ್ರಮ, ಮನಸ್ಸಿನಂತೆಯೆ ಸಾರ್ಥಕವಾಗುವುದು. ಸರಕಾರಿ ಕೆಲಸಗಳಲ್ಲಿ ಮೊದಲು ವೆಚ್ಚ ಹಾಗು ತೊಂದರೆಗಳನ್ನು ಬಹಳ ಸಹಿಸಬೇಕಾಗಿ ಬಂದರೂ ಕೊನೆಗೆ ಒಳ್ಳೆಯ ಯಶಸ್ಸು ದೊರೆಯುವುದು. ನೌಕರದಾರರಿಗೆ, ಹನ್ನೆರಡನೆಯ ಗುರುವಿರುವಾಗ ಮನಸ್ಸಿಗೆ ಬೇಡಾದ ಹಾಗು ಬೇಸರ ತರಿಸುವಂತಹ ಕೆಲಸಗಳನ್ನು: ಮಾಡಬೇಕಾಗಿ ಬಹಳ ಸಲ ಬರುವುದು. ಬದಲಿಯಾದರೆ ಅದು ತೀರ ಅನನುಕೂಲ ಸ್ಥಳಕ್ಕೆಯೆ. ವರಿಷ್ಠರು ಅಸಂತುಷ್ಟರಾಗಿರುವರು. ಆದರೆ ಮೊದಲನೆಯ ಗುರು ಬಂದೊಡನೆಯೆ ಮಾತ್ರ ಇದೆಲ್ಲವೂ ಪೂರ್ಣ ಬದಲುಗೊಂಡು ಸುಖದ ಗಾಳಿ ಮತ್ತೆ ಬೀಸತೊಡಗುವುದು. ನವೆಂಬರ್ ೧೪ ರಿಂದ ಡಿಸೆಂಬರ್ ೬, ಡಿಸೆಂಬರ್ ೨೮ ರಿಂದ ಜನವರಿ ೧೪, ಫೆಬ್ರುವರಿ ೧ ರಿಂದ ಮಾರ್ಚ್ ೮, ಎಪ್ರಿಲ್ ೨೩ ರಿಂದ ಮೇ ೧೨, ಮೇ ೨೯ ರಿಂದ ಅಗಸ್ಟ್ ೨, ಹಾಗು ಸಪ್ಟೆಂಬರ್ ೬ ರಿಂದ ವರ್ಷಾಂತ್ಯದ ವರೆಗಿನ ಈ ಅವಧಿಯು ಲಾಭಕ್ಕೆ ಅನುಕೂಲವಾಗಿದೆ. •ಸಂಗ್ರಹದ ಯೋಗ ಅಷ್ಟಾಗಿ ಇಲ್ಲವಾದರೂ ಸಾಲ ಮತ್ತು ಕೈಗಡ ಮುಂತಾದುದಿದ್ದರೆ ಬಹಳ ಮಟ್ಟಿಗೆ ಅವುಗಳಿಂದ ಮುಕ್ತರಾಗುವಿರಿ. ಸೋದರರೊಂದಿಗೆ ವಿರೋಧ ಉಂಟಾಗುವುದು. ಅಲ್ಲದೆ ಮೂರನೆಯ ಮಂಗಳನಿರುವಾಗ ಅಂದರೆ ಜನೆವರಿ ೨೨ ರಿಂದ ಎಪ್ರಿಲ್ ೧೬ ಹಾಗು ಮತ್ತೆ ಜುಲೈ ೫ ರಿಂದ ಅಗಸ್ಟ್ ೨೬ರ ವರೆಗಿನ ಅವಧಿಯು ಅವರಿಗೆ ಶಾರೀರಕ ಕ್ಲೇಶವನ್ನುಂಟುಮಾಡಬಹುದಾದಂಥದಿದೆ. ಮೊದಲನೆಯ ಗುರುವಿರುವಾಗ ಯಾತ್ರೆ ಇಲ್ಲವೆ ಇತರ ಧಾರ್ಮಿಕ ಕಾರ್ಯಗಳು ನೆರವೇರಬಹುದು. ಈ ಸಲ ಆಪ್ತೇಷ್ಟರು ತುಂಬ ತಾಪಪಡುವರು.

ಸಿಂಹ

ಈ ವರ್ಷ ಈ ರಾಶಿಯವರಿಗೆ ಬಹುತರ ವಿಷಯಗಳಲ್ಲಿ ಬಹಳ ಕಷ್ಟ, ಅಲ್ಪ ಲಾಭವೆಂಬಂತೆ ಕಷ್ಟಸಾಧ್ಯ ಕಾಲವೆಂದು ತಿಳಿಯಬೇಕು.

ಈ ರಾಶಿಯವರಿಗೆ ವರ್ಷವಿಡೀ ಶನಿಯು ಎಂಟನೆಯವನಾಗಿರುವನಲ್ಲದೆ ಸಪ್ಟೆಂಬರ್ ೩ರ ವರೆಗೆ ಅಂದರೆ ಹತ್ತು ತಿಂಗಳ ಕಾಲ ಅಷ್ಟಮೇಶ ಗುರುವು ಹನ್ನೆರಡನೆಯವನಾಗಿರುತ್ತಾನಾದ್ದರಿಂದ ಆರೋಗ್ಯ ವಿಷಯದಲ್ಲಿ ತುಂಬ ಜಪ್ಪಿಸಿಕೊಂಡಿರಬೇಕು. ಅಜೀರ್ಣ ಅಥವಾ ತೀವ್ರ ಉಪವಾಸಗಳಂತಹ ಪ್ರಸಂಗಗಳನ್ನು ಸರ್ವಥಾ ತಂದುಕೊಳ್ಳಬಾರದು. ಶನಿಯ ಮೇಲೆ ಹಾಗು ಅಷ್ಟಮದ ಮೇಲೆ ಗುರುವಿನ ಪೂರ್ಣ ದೃಷ್ಟಿಯಿರುವದರಿಂದ ಮತ್ತು ಕ್ಲೇಶನಾಶಕ ರಾಹು ವರ್ಷವೆಲ್ಲ ಇರುವದರಿಂದ ಗಂಡಾಂತರದ ಭಯ ನೂರಕ್ಕೆ ತೊಂಬತ್ತೊಂಬತ್ತು ಪಾಲು ಇಲ್ಲವೆಂದೇ ಹೇಳಬೇಕು. ಕ್ಲೇಶಪರಿಹಾರಾರ್ಥ ಶನಿಯ ಇಪ್ಪತ್ತೊಂರುಸಾವಿರ ಇಲ್ಲವೆ ಮಹಾಮೃತ್ಯುಂಜಯನ ೧೧ ಸಾವಿರ ಜಪ ಮಾಡಬೇಕು. ಭಾಗ್ಯೇಶ ಮತ್ತು ಸುಖೇಶನಾದ ಮಂಗಳನು ಈ ವರ್ಷಾರಂಭದಿಂದಲೇ ಈ ರಾಶಿಯಲ್ಲಿರುವದರಿಂದ ಇತರ ವಿಷಯಗಳಲ್ಲಿ ಅವಶ್ಯಕವಾದ ಒಳ್ಳೆಯ ಸುಖವು ಯಾವದೇ ಅಡೆತಡೆಗಳಿಲ್ಲದೆಯೆ ದೊರೆಯುವದು. ಅದರಂತೆಯೆ, ಸಪ್ಟೆಂಬರ್ ೩ ರಿಂದ ಮೊದಲನೆಯ ಅಂದರೆ ಇದೇ ರಾಶಿಯಲ್ಲಿ ಬರುವ ಗುರುವು ಇಚ್ಛಿತ ಉದ್ದಿಶ್ಯಗಳಲ್ಲಿ ಬಹಳಷ್ಟನ್ನು ಸಫಲಗೊಳಿಸುವನು.

ಭಾರ್ಯೇಶ ಶನಿಯು ಈ ಸ್ಥಾನದಿಂದ ಎರಡನೆಯವನಾಗಿ ಆದರೆ ಸ್ವತಃ ನಿಮಗೆ ಎಂಟನೆಯವನಾಗಿರುವದರಿಂದ ಹಾಗು ಸ್ತ್ರೀಸುಖದರ್ಶಕ ಗ್ರಹವಾದ ಶುಕ್ರನು ಈ ವರ್ಷಾರಂಭದಲ್ಲಿ ತುಲಾದಿಂದ ವೃಶ್ಚಿಕಕ್ಕೆ ಹೋಗುವ ಸಂಕ್ರಮಣಾವಸ್ಥೆಯಲ್ಲಿರುವದರಿಂದ ಹೆಂಡತಿಯ ಆರೋಗ್ಯದ ಬಗ್ಗೆ ಮೇಲಿಂದ ಮೇಲೆ ಕಿರಿಕಿರಿಯುಂಟಾಗಬಹುದು; ಅದರಲ್ಲೂ ಜುಲೈ ೨೦ ರ ನಂತರ ಶನಿಯು ವಕ್ರಿಯಾಗಿರುವಾಗ ಇದು ವಿಶೇಷವಾಗಿರಬಹುದು. ಅದರಂತೆಯೆ, ಉಭಯತರಲ್ಲೂ ಕ್ಷುಲ್ಲಕ ಕಾರಣಗಳಿಗಾಗಿ ಮೇಲಿಂದ ಮೇಲೆ ಮಾತಿನ ಚಕಮಕಿಯುಂಟಾಗಬಹುದು ಮಾತ್ರವಲ್ಲ, ಹನ್ನೆರಡನೆಯ ಗುರುವಿರುವಾಗಂತೂ ಬೇರೆಯವರು ಮಧ್ಯೆ ಪ್ರವೇಶಿಸಿ ನಿಮ್ಮ ತಂಟೆಯನ್ನು ಬಗೆಹರಿಸಬೇಕಾಗಬಹುದಾದಷ್ಟು ವಿಕೋಪಕ್ಕೆ ಹೋಗಬಹುದು. ಆದರೆ ಸಹವಾಸದಲ್ಲಿ ಮಾತ್ರ ವ್ಯತ್ಯಯವುಂಟಾಗುವದಿಲ್ಲ.

ಈ ರಾಶಿಯ ಅವಿವಾಹಿತರ ವಿವಾಹ ಈ ವರ್ಷವಾಗುವುದಿದ್ದಲ್ಲಿ ಗುರುವು ಹನ್ನೆರಡನೆಯವನಿರುವಾಗ ಅದರ ವಿಚಾರವನ್ನು ಸಹ ತ್ಯಜಿಸಿ ತೆಪ್ಪಗೆ ಕೂಡ್ರುವುದೇ ಜಾಣತನದ ಲಕ್ಷಣವೆನಿಸುವುದು. ಒಂದು ವೇಳೆ ಮದುವೆಯ ನಿಶ್ಚಯವಾದರೂ ಅದು ಕೈಗೂಡಬೇಕಾದರೆ ಮಾತ್ರ ಕೊನೆ ಮೊದಲಿಲ್ಲದಷ್ಟು ಅಡ್ಡಿ ಆತಂಕಗಳು ಎದುರಾಗುವವು. ಆದರೆ ಮೊದಲನೆಯ ಗುರುವಿರುವಾಗ ವಿವಾಹ ಗೊತ್ತಾಗಲು ತುಸು ಕಷ್ಟವಾದರೂ ನಂತರ ಅದು ನೆರವೇರುವುದಕ್ಕೆ ಮಾತ್ರ ಎಷ್ಟೂ ತೊಂದರೆಯಾಗದು. ವಧೂವರರು ರೂಪಗುಣಾದಿಗಳಿಂದ ಪರಸ್ಪರ ತೀರ ವಿರುದ್ಧ ಗುಣಧರ್ಮದವರಿರಬಹುದಾಗಿದೆ.

ಈ ವರ್ಷ ನಿಮ್ಮ ಮಗ ಅಥವಾ ಮಗಳ ಮದುವೆ ಮಾಡುವುದಿದ್ದರೆ, ನಿಮ್ಮ ಮನಸ್ಸಿಗೊಪ್ಪುವಂತೆ ಮದುವೆ ಗೊತ್ತಾಗುವುದೇ ಕಠಿಣ. ಒಂದು ವೇಳೆ ಗೊತ್ತಾದರೂ ಪ್ರತಿಪಕ್ಷಿಗಳ ವರ್ತನೆ ರಕ್ಕಸತನದ್ದೆನಿಸುವ ಮಟ್ಟಿಗೆ ವಿಚಿತ್ರವಾಗಿರಬಹುದಾಗಿದೆ. ಮೊದಲನೆಯ ಗುರುವಿರುವಾಗ ಮಾತ್ರ ಒಳ್ಳೆಯ ಬಾಸಿಂಗ ಬಲವಿದ್ದು. ಅಲ್ಪಾಯಾಸದಿಂದ ಗೊತ್ತಾಗಿ ವಿವಾಹ ನಿರ್ವಿಘ್ನವಾಗಿ ನಡೆದುಹೋಗುವದು. ಸೊಸೆ ಇಲ್ಲವೆ ಅಳಿಯ ಬುದ್ಧಿಯಿಂದ ಜಾಣ ಹಾಗು ರೂಪದಿಂದಲೂ ನೆಟ್ಟಗೆ ಇರುವರು. ಆದರೂ ಹನ್ನೆರಡನೆಯ ಗುರುವಿರುವಾಗ ಮಾತ್ರ ಅವರ ವಿಷಯಕ್ಕೆ ತಪ್ಪು ತಿಳುವಳಿಕೆಯಿಂದಾಗಿ ನಿಮ್ಮ ಮನಸ್ಸು ನೊಂದುಕೊಳ್ಳಬಹುದು. ಮಕ್ಕಳ ಉನ್ನತಿಗೆ ಮಾತ್ರ ಈ ವರ್ಷ ಉತ್ತಮವೇ ಆಗಿದೆ. ಆದರೆ ಯಾಥ ಉನ್ನತಿ ಹನ್ನೆರಡನೆಯ ಗುರುವಿರುವಾಗ ಆಗುವದೊ ಅವರಿಂದ ಮಾತ್ರ ಅವರ ವಿಚಿತ್ರ ವರ್ತನೆಯಿಂದಾಗಿ ನಿಮಗೆ ಸಿಗಬೇಕಾದ ಸುಖ ಸಿಗುವುದಿಲ್ಲ. ಮೊದಲನೆಯ ಗುರುವಿರುವಾಗ ಯಾರ ಉನ್ನತಿಯಾಗುವುದೊ ಅವರಿಂದ ಮಾತ್ರ ಒಳ್ಳೆಯ ಸುಖ ದೊರೆಯುವುದು. ಮೊದಲನೆಯ ಗುರುವಿದ್ದಾಗ ಒಬ್ಬೊಬ್ಬರ ಲೌಕಿಕ ವೃದ್ಧಿ ವಿಶೇಷವಾಗುವ ಸಂಭವವಿದೆ.

ದಾವೆ, ಫಿರ್ಯಾದಿ ಹಾಗೂ ಇತರ ಸ್ಪರ್ಧೆಯ ಕೆಲಸಗಳಲ್ಲಿ ಜನೆವರಿ ೨೨ ರಿಂದ ಎಪ್ರಿಲ್ ೧೭ ಹಾಗು ಮೊದಲನೆಯ ಗುರುವಿರುವಾಗ ಅಂದರೆ ಸಪ್ಟೆಂಬರ್ ೩ರ ನಂತರ ನಿರ್ಣಯ ದೊರೆತರೆ ಪೂರ್ಣವಲ್ಲದಿದ್ದರೂ ಸಾಕಷ್ಟು ಅನುಕೂಲವುಂಟಾಗಬಹುದಾಗಿದೆ.

ಈ ರಾಶಿಯ ಗರ್ಭವತಿಯರು ಪ್ರಸೂತರಾಗುವ ಕಾಲವು ಸ್ವತಃ ಅವರ ಹಾಗು ಡಾಕ್ಟರರ ಅಂದಾಜಿಗಿಂತ ಬಹಳ ಹಿಂದು ಮುಂದಾಗಬಹುದು. ಆದರೆ ಬಹುತರರ ಹೆರಿಗೆ ಸುಲಭವಾಗುವದು. ಹನ್ನೆರಡನೆಯ ಗುರುವಿರುವಾಗಲಾದರೆ ಕನ್ಯೆಯೂ, ಪ್ರಥಮ ಗುರುವಿರುವಾಗಲಾದರೆ ಪುತ್ರನೂ ಜನಿಸುವ ಯೋಗವಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಹನ್ನೆರಡನೆಯ ಗುರುವಿರುವಾಗಲಾದರೆ, ಜನ್ಮಕಾಲದಲ್ಲಿ ಒಳ್ಳೆಯ ಗುರುಬಲವಿದ್ದರೆ ಮಾತ್ರ, ಯಶಸ್ಸಿನ ಆಸೆ ತಳೆಯಬೇಕು. ಆದರೆ ಅದೇ ಗುರು ಮೊದಲನೆಯವನಾಗಿರುವಾಗ ಬಹುತರರು ಉತ್ತೀರ್ಣರಾಗುವರು.

ಕನ್ಯಾ

ಈ ರಾಶಿಯವರಿಗೆ ಈ ವರ್ಷ ಒಟ್ಟನಲ್ಲಿ ಕೆಲ ದಿನ ಶಾರೀರಕವಾದರೆ ಕೆಲ ದಿನ ಮಾನಸಿಕ ಕಷ್ಟ ವೆನಿಸಬಹುದಾದರೂ ಉದ್ಯೋಗ ಧಂದೆಗಳಲ್ಲಿ ಮಾತ್ರ ಒಳ್ಳೆಯ ಉತ್ಕರ್ಷಕಾರಕವೂ ತುಂಬ ಲಾಭಕರವೂ ಆಗಿದೆಯಲ್ಲದೆ ಭಾವೀ ಭಾಗ್ಯ-ಸೂಚಕ ಘಟನೆಗಳನೇಕವು ಸಂಭವಿಸಲಿವೆ ಯೆಂದೂ ತಿಳಿಯಬೇಕು.

ಎಂಟನೆಯ ಅಂದರೆ ಆಯುಷ್ಯಸ್ಥಾನದಲ್ಲಿ ರಾಹುವಿದ್ದರೆ ಡಿಸೆಂಬರ್ ೧೯ ರಿಂದ ಶನಿಯು ಏಳನೆಯವನಾಗಿದ್ದಾನೆ. ಈ ರಾಶಿಯು ಅವನ ಪೂರ್ಣ ದೃಷ್ಟಿಯಲ್ಲಿದೆಯಲ್ಲದೆಯೆ ವರ್ಷಾರಂಭದಲ್ಲಿ ರಾಶಿಸ್ವಾಮಿಯಾದ ಬುಧನು ಬಲಿಷ್ಠಸ್ಥಾನವಾದ ತೃತೀಯದಲ್ಲಿರುವನಾದರೂ ವಕ್ರಿಯಾಗಿರುವನು ಮತ್ತು ಹಟವಾದಿಯೂ ಶತ್ರುರಾಶಿಯೂ ಆದ ವೃಶ್ಚಿಕದಲ್ಲಿ ಈ ಯೋಗವಿದೆ. ಆದುದರಿಂದ ಈ ರಾಶಿಯವರ ಆರೋಗ್ಯಕ್ಕಿದು ಒಳಿತಲ್ಲ. ಯಾವಾಗಲೂ ಒಂದಿಲ್ಲೊಂದು ವಿಕಾರದ ತೊಂದರೆಯೂ ತುಸು ಹೆಚ್ಚು ಕಡಿಮೆ ಪ್ರಮಾಣದಲ್ಲಿ ಆಗುತ್ತಲೇ ಇರುವದು. ಅನೇಕರಿಗೆ ಮಂತ್ರಮಾಟ, ಭಾನಮತಿ, ಪೈಶಾಚಿಕ ಬಾಧೆ, ಮುಂತಾದವುಗಳಿಂದ ಉಪದ್ರವ ಉಂಟಾಗುವ ಭಯವಿದೆ. ಅಂತೆಯೆ ಇಂತಹ ಅದೃಶ್ಯ ಶಕ್ತಿಗಳನ್ನು ಪರೀಕ್ಷೆ ಮಾಡಲು ಯತ್ನಿಸದಿರುವುದೇ ಹಿತಕರ. ಕ್ಲೇಶ ನಿವಾರಣಾರ್ಥ ಹದಿನೆಂಟುಸಾವಿರ ರಾಹು ಜಪ ಮಾಡಬೇಕಲ್ಲದೆ, ಶನಿ ಪ್ರೀತ್ಯರ್ಥ ಎಳ್ಳೆಣ್ಣೆಯನ್ನೂ ಬುಧ ಪ್ರೀತ್ಯರ್ಥ ಹೆಸರುಕಾಳನ್ನೂ ದಾನ ಮಾಡಬೇಕು. ಆದರೂ ಈಶಕೃಪೆಯಿಂದ ಸಪ್ಟೆಂಬರ್ ೩ರ ವರೆಗೆ ಹನ್ನೊಂದನೆಯ ಗುರು ಮತ್ತು ಅಗಸ್ಟ ೨೭ ರಿಂದ ಅಕ್ಟೋಬರ್ ೯ ರ ವರೆಗೆ ಮೂರನೆಯ ಮಂಗಳ ಈ ಅರಿಷ್ಟನಾಶಕ ಗ್ರಹಗಳಿರುವದರಿಂದ ಗಂಡಾಂತರದ ಭಯ ನೂರಕ್ಕೆ ತೊಂಬತ್ತೈದು ಪಾಲು ಇಲ್ಲವೇ ಇಲ್ಲ. ಎಂಟನೆಯ ರಾಹುವಿನಿಂದಾಗಿ ಮೇಲಿಂದಮೇಲೆ ಭಯಜನಕ ದುಃಸ್ವಪ್ನಗಳನ್ನು ಕಾಣುವಿರಿ. ಈ ಭಯನಾಶಕ್ಕಾಗಿ ರಾಮರಕ್ಷೆ ಅಥವಾ ಶಿವಕವಚವನ್ನು ನಿತ್ಯ ಪಠಿಸಬೇಕು. ಇತರ ವಿಷಯಗಳಲ್ಲಿ ಆವಶ್ಯಕ ದೇಹ ಸುಖಕ್ಕೆ ಹನ್ನೊಂದನೆಯ ಗುರು ಉತ್ತಮನೇ ಆಗಿದ್ದಾನೆ. ಅವನ ದೃಷ್ಟಿಯು ರಾಶಿಸ್ವಾಮಿ ಬುಧನ ಮೇಲೆ ಪೂರ್ಣವಾಗಿರುವದರಿಂದ ಆತ್ಮೋನ್ನತಿಯ ಅನೇಕ ಸಂಗತಿಗಳು ಜರುಗುವವು ಹಾಗು ನಿಮ್ಮ ಬೌದ್ಧಿಕ ತೇಜಸ್ಸು ಬೆಳಗುವದು.

ಭಾರ್ಯಾಸ್ಥಾನದ ಅಂದರೆ ಏಳನೆಯ ಶನಿಯ ಕಾರಣದಿಂದಾಗಿ ಅನೇಕ ವಿಷಯಗಳಲ್ಲಿ ಹೆಂಡತಿಯ ವರ್ಚಸ್ಸನ್ನು ಸಹನಮಾಡಬೇಕಾಗಿ ಬರುವುದು. ಆದರೂ ಪರಸ್ಪರರ ವಿಷಯದಲ್ಲಿ ಆದರ, ನಿಷ್ಠೆಗಳು ಬಹಳ ಉತ್ತಮವಾಗಿರುತ್ತವೆ. ಯಾಕೆಂದರೆ ಶನಿಯು ಈ ರಾಶಿಯ ಪಂಚಮವೆಂಬ ತ್ರಿಕೋಣನಾಮಕ ಅತಿ ಶುಭಸ್ಥಾನದ ಸ್ವಾಮಿಯಾಗಿರುವನಲ್ಲದೆ ಭಾರ್ಯೇಶ ಗುರುವು ಉಚ್ಚನಾಗಿದ್ದು ಲಾಭಸ್ಥಾನದಲ್ಲಿದ್ದಾನೆ. ಶನಿ ಹಾಗು ರಾಶಿಸ್ವಾಮಿ ಬುಧ ಇಬ್ಬರೂ ಈ ಗುರುವಿನ ದೃಷ್ಟಿಯಲ್ಲಿರುವದರಿಂದ ಎಲ್ಲ ವಿಷಯಗಳಲ್ಲೂ ಅವಳಿಂದ ಮನಸ್ಸಿನಂತೆಯೇ ಸುಖ ದೊರೆಯುವದಲ್ಲದೆ ಕಿರುಕಳ ವಾತಜನ್ಯ ತೊಂದರೆಗಳನ್ನುಳಿದು ಅವಳ ಆರೋಗ್ಯ ನಿರೋಗಿಯಾಗಿಯೇ ಇರುವದು. ಹತ್ತು ಹದಿನೈದು ದಿನಗಳನ್ನುಳಿದರೆ ಉಳಿದ ಕಾಲವೆಲ್ಲ ಅವಳ ಸಹವಾಸ ದೊರೆತೇ ದೊರೆಯುವದು.

ಈ ರಾಶಿಯ ಅವಿವಾಹಿತರ ವಿವಾಹ ಈ ಸಲ ಆಗುವದಿದ್ದರೆ ಹನ್ನೊಂದನೆಯ ಗುರುವಿರುವವರೆಗೆ ಅನಾಯಾಸ ಹೊಂದಿ, ಅಪೇಕ್ಷೆಗಿಂತ ಹೆಚ್ಚು ಉತ್ಸಾಹದಿಂದ ನೆರವೇರುವದಲ್ಲದೆ ವಧೂವರರು ಪರಸ್ಪರ ಗುಣ ರೂಪಾದಿ ಲಕ್ಷಣಗಳಲ್ಲಿ ಅನುರೂಪರಾಗಿರುವರು ಮತ್ತು ಬಹುಶಃ ಮೊದಲಿನಿಂದಲೂ ಪರಿಚಿತರೇ ಇರುವರು.

ಅದರಂತೆಯೆ, ನಿಮ್ಮ ಮಗ ಅಥವಾ ಮಗಳ ಮದುವೆ ಮಾಡುವದಿದ್ದರೆ ಅದು ಸಹ ಒಂದೆರಡು ದಿನಗಳ ಮಾತುಕತೆಗನಲ್ಲಿಯೇ ಅಲ್ಪಾಯಾಸದಿಂದ ನಿಶ್ಚಯವಾಗಿ ಮುಂದೆ ಬಲು ಬೇಗ ಒಳ್ಳೆಯ ಸಡಗರದಿಂದ ಮುಗಿದುಹೋಗುವದು. ಇಷ್ಟೊಂದು ಉತ್ತಮ ಬಾಸಿಂಗಬಲ ಉಂಟಾಗಿರುವದು ೧೧ನೆಯ ಗುರುವಿನಿಂದಾಗಿಯೆ. ಸೊಸೆ ಅಥವಾ ಅಳಿಯ ಎಲ್ಲರಿಗೂ ಮನಸ್ಸಿಗೊಪ್ಪುವಂತಿರುವರಲ್ಲದೆ ಮದುವೆಯಾದ ಒಂದೆರಡು ತಿಂಗಳುಗಳಲ್ಲೇ ಲೌಕಿಕ ಉತ್ಕರ್ಷದ ಘಟನೆಯೊಂದು ಸಂಭವಿಸಿ ಸರ್ವತ್ರವೂ ಅವರ ಕಾಲ್ಗುಣದ ಪ್ರಶಂಸೆಯಾಗುವದು. ಮಕ್ಕಳೆಲ್ಲರ ಆರೋಗ್ಯವೂ ಉತ್ತಮವಾಗಿರುವದಲ್ಲದೆ ಅವರಿಂದ ದೊರೆಯುವ ಸುಖವೂ ಅತ್ಯಮೂಲ್ಯವಾಗಿರುತ್ತದೆ. ಆದರೆ ೧೨ನೆಯ ಗುರು ಬಂದನಂತರ ಅಂದರೆ ಸಪ್ಟೆಂಬರ್ ೩ರ ನಂತರ ಅವರಲ್ಲಿ ಒಬ್ಬಿಬ್ಬರು ಅತಿ ದೂರ ಸ್ಥಳಾಂತರ ಹೊಂದುವದರಿಂದಾಗಿ ಮನಸ್ಸು ವ್ಯಾಕುಲಗೊಳ್ಳುತ್ತದೆ. ಅವರೆಲ್ಲರ ಉತ್ಕರ್ಷಕ್ಕೆ ಸಹ ೧೧ ನೆಯ ಗುರು ಬಹಳ ಉತ್ತಮನಾಗಿದ್ದಾನೆ. ವಿಶೇಷತಃ ಮಂಗಳ ಎರಡನೆಯವನಾಗಿರುವಾಗ ಅಂದರೆ ಜನೆವರಿ ೨೨ ರಿಂದ ಎಪ್ರಿಲ್ ೧೭ ಅಥವಾ ಜುಲೈ ೫ ರಿಂದ ೨೭ ರ ವರೆಗಿನ ಅವಧಿಯಲ್ಲಿ ಇದು ಕಂಡುಬರುತ್ತದೆ.

ಉದ್ಯೋಗ ಧಂದೆಗಳ ದೃಷ್ಟಿಯಿಂದ ನೋಡುವದಾದರೆ ೧೧ ನೆಯ ಗುರುವು ತುಂಬ ಅನುಕೂಲವಾಗಿದ್ದಾನೆ. ಅವನಿಂದಾಗಿ ಉದ್ಯೋಗದಲ್ಲಿಯೇ ಆಗಲಿ ನೌಕರಿಯಲ್ಲಿಯೇ ಆಗಲಿ ಎಲ್ಲರಿಗೂ ಅಪೇಕ್ಷೆಗಿಂತ ಹೆಚ್ಚಾಗಿಯೇ ಸತ್ಫಲ ದೊರೆತು ವಿಪುಲ ಲಾಭ ಮತ್ತು ಮೇಲಿನ ದರ್ಜೆಗೆ ಬಡತಿ ಸಿಗುವವು ಎಂಬುದಂತೂ ನಿಸ್ಸಂಶಯ. ವ್ಯಾಪಾರಿಗಳು ಅಥವಾ ಶ್ರಮಜೀವಿಗಳಿಗಿಂತಲೂ ಬುದ್ಧಿಜೀವಿ ವ್ಯಾಪಾರಸ್ಥರಿಗೆಯೆ ಹೆಚ್ಚಿನ ಲಾಭ ಮತ್ತು ಯಶಸ್ಸು ಪ್ರಾಪ್ತವಾಗುವವು. ನೀವು ಮುಂದೆ ಬರಲು ಮಿತ್ರರು ಅಥವಾ ಪರಿಚಿತರಿಗಿಂತ ತಾತ್ಕಾಲಿಕ ಪರಿಚಯವಾದವರಿಂದಲೇ ಹೆಚ್ಚು ಸಹಾಯವಾಗುವದು. ಆದರೂ ಮಿತ್ರರು ಸಹ ಆತ್ಮಿಯತೆಯಿಂದ ವರ್ತಿಸುವರು. ನೌಕರದಾರರಿಗೆ ಗುರುವು ೧೧ ನೆಯವನಿರುವಾಗ ಬದಲಿಯಾದರೆ ಎಷ್ಟೊಂದು ಸುಖಸೌಕರ್ಯಗಳಿದ್ದ ಸ್ಥಳಕ್ಕಾಗುವದೊ ಅದೇ ಮುಂದೆ ಅವನು ೧೨ ನೆಯವನಾದ ನಂತರ ಆಗದು ಎಂಬುದು ಸ್ಪಷ್ಟವೇ ಇದ್ದರೂ ಅಂಥ ಸ್ಥಳದಲ್ಲಿ ಸಾಮಾಜಿಕ ಶ್ರೇಷ್ಠತ್ವ ಮಾತ್ರ ಚೆನ್ನಾಗಿ ದೊರೆಯುವದು. ವರಿಷ್ಠರು ಅಥವಾ ಆಶ್ರಯದಾತರು ನಿಮ್ಮ ಬಗ್ಗೆ ಸದಾಕಾಲವೂ ಸಂತುಷ್ಟರೇ ಆಗಿರುವರಾದರೂ ನಿಮ್ಮ ಕೈಕೆಳಗಿನವರು ನಿಮ್ಮ ವಿರುದ್ಧ ಅವರ ಕಿವಿಯೂದುವದರಿಂದಾಗಿ ಒಂದೆರಡು ಸಲ ಅವರು ನಿಮ್ಮ ಮೇಲೆ ಸಿಟ್ಟಿಗೇಳಬಹುದಲ್ಲದೆ ನಿಮ್ಮ ಮುಖದ ಮೇಲೆ ನೀರಿಳಿಯುವಂತೆಯೂ ವರ್ತಿಸಬಹುದು. ಇಂಥ ಭೀತಿ ವಿಶೇಷವಾಗಿರುವದು ನವೆಂಬರ್ ೧೪ ರಿಂದ ಡಿಸೆಂಬರ್ ೮, ಫೆಬ್ರುವರಿ ೧೮ ರಿಂದ ಮಾರ್ಚ ೧೪ ಹಾಗು ಅಗಸ್ಟ ೧೬ ರಿಂದ ಸಪ್ಟೆಂಬರ್ ೧೭ ಈ ಅವಧಿಯಲ್ಲಿಯೇ ಕಂಡುಬರುತ್ತದೆಂಬುದನ್ನು ಲಕ್ಷ್ಯದಲ್ಲಿರಿಸಿಕೊಳ್ಳಬೇಕು. ಎರಡನೆಯ ಕೇತುವಿನಿಂದಾಗಿ ನಿಮ್ಮ ಆಪ್ತರು ಅಥವಾ ಮನೆಯವರಲ್ಲಿಯೇ ಕೆಲವರು ನಿಮ್ಮ ಬಗ್ಗೆ ತಮಗಿರುವ ಒಳಗಿನ ದ್ವೇಷದಿಂದಾಗಿ ನಿಮ್ಮ ವಿರೋಧಿಗಳೊಡನೆ ಸಖ್ಯ ಬೆಳೆಯಿಸಿ ನಿಮ್ಮ ತೇಜೋವಧೆ ಮಾಡಲೆತ್ನಿಸಬಹುದು, ಮತ್ತು ಇದರಲ್ಲಿ ಪುರುಷರಂತೆಯೆ ಸ್ತ್ರೀಯರ ಕೈವಾಡವೂ ಇರಬಹುದು. ಈ ಸಲ ತಂದೆಯ ಅಥವಾ ತಾಯಿಯ ಸೋದರರೊಂದಿಗೆ ಅಥವಾ ಅವರ ಪರಿವಾರದೊಂದಿಗೆ ತುಂಬ ವೈರವುಂಟಾಗುವ ಸಂಭವವಿದೆ. ಪ್ರಾಪ್ತಿಯು ಮಾನದಿಂದ ವೆಚ್ಚವೂ ಹೆಚ್ಚುವದರಿಂದ ಮನಸ್ಸಿಗೆ ತಕ್ಕಂತೆ ಸಂಗ್ರಹ ಸಾಧ್ಯವಾಗುವದಿಲ್ಲ. ಯಾತ್ರೆಯ ಯೋಗ ಕಡಿಮೆಯೇ ಆದರೂ ಇತರ ಕಾರಣಗಳಿಗಾಗಿ ದೂರ ಪ್ರವಾಸದ ಯೋಗ ಬಹಳ ಸಲ ಒದಗುವದು. ಸ್ವಂತ ವಾಹನವಿದ್ದರೂ ವಾಹನಸುಖ ಅಷ್ಟಾಗಿ ದೊರೆಯುವದಿಲ್ಲ. ವರ್ಷಾರಂಭದಲ್ಲಿ ವ್ಯಯಸ್ಥಾನದಲ್ಲಿ ಮಂಗಳನಿರುವದರಿಂದ ಯಾರದೇ ದೊಡ್ಡ ಕೊಡತಕ್ಕೊಳ್ಳುವ ವ್ಯವಹಾರವಿದ್ದರೆ ಬಗೆಹರಿಯುವದಾದರೂ ಕಿರುಕಳವಾದುದಾವುದಾದರೂ ಇದ್ದರೆ ಹಟದಿಂದ ಅದನ್ನು ಹಾಗೆಯೆ ಉಳಿಸಿಕೊಂಡು ಬರುವಿರಿ. ಈ ವರ್ಷವು ಸೋದರರಿಗೆ ತುಂಬ ಉನ್ನತಿಕಾರಕವಾಗಿದೆ.

ದಾವೆ, ಫಿರ್ಯಾದಿ ಅಥವಾ ಖಾಸಗಿ ಸ್ಪರ್ಧೆಯ

ಕೆಲಸಗಳಲ್ಲಿ ನಿರ್ಣಯವು ಗುರುವು ೧೧ ನೆಯವನಿರುವ ವರೆಗೆ ದೊರೆತರೆ ಅನುಕೂಲವಾಗಿರುವದಾದರೆ ಅವನು ೧೨ ನೆಯವನಾದನಂತರ ವಿರುದ್ಧವಾಗುವ ಭಯವಿದೆ.

ಈ ರಾಶಿಯ ಗರ್ಭವತಿಯರು ಹನ್ನೊಂದನೆಯ ಗುರುವಿರುವಾಗ ಪ್ರಸೂತರಾದರೆ ಹೆರಿಗೆ ಸುಲಭವಾಗುವುದು ಮತ್ತು ಎರಡನೆಯ ಮಂಗಳನಿರುವಾಗ ಅಂದರೆ ಜನೆವರಿ ೨೨ ರಿಂದ ಎಪ್ರಿಲ್ ೧೭, ಮತ್ತು ಜುಲೈ ೫ ರಿಂದ ಆಗಸ್ಟ್ ೨೭ ಈ ಅವಧಿಯಲ್ಲಾದರೆ ಬಹುಶಃ ಬಹುತರರಿಗೆ ಪುತ್ರಲಾಭವೇ ಆಗುವುದು. ಅದೇ ೧೨ನೆಯ ಗುರುವಿರುವಾಗ ಹೆರಿಗೆಯಾದರೆ ಪ್ರಸೂತಿ ತೀರ ಕಷ್ಟಕರವಾಗುವುದಲ್ಲದೆ ಮಗು ತೀರ ಅಶಕ್ತವಾಗಿರಬಹುದಾಗಿದೆ ಮತ್ತು ಬಹುತರರಿಗೆ ಕನ್ಯೆಯೇ ಜನಿಸಬಹುದು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಹನ್ನೊಂದನೆಯ ಗುರುವಿರುವಾಗ ಅಂದರೆ ಸಪ್ಟೆಂಬರ್ ೩ರ ಮೊದಲು ಆದರೆ ನಿಶ್ಚಿತ ಉತ್ತೀರ್ಣರಾಗುವರು ಮಾತ್ರವಲ್ಲ, ಮಂಗಳನು ಎರಡನೆಯವನಾಗಿರುವಾಗ ಅಂದರೆ ತುಲಾದಲ್ಲಿರುವಾಗ ಅರ್ಥಾತ್ ಜನವರಿ ೨೨ ರಿಂದ ಎಪ್ರಿಲ್ ೧೭ರ ವರೆಗೆ ಇಲ್ಲವೆ ಜುಲೈ ೫ ರಿಂದ ಅಗಸ್ಟ್ ೨೭ ರ ವರೆಗಿನ ಅವಧಿಯಲ್ಲಾದರೆ ಶ್ರೇಣಿಯನ್ನು ಸಹ ಪಡೆಯುವರು. ಆದರೆ ೧೨ನೆಯ ಗುರುವಿರುವಾಗ ಪರೀಕ್ಷೆಗೆ ಕಟ್ಟುವವರು ಮತ್ತು ಒಮ್ಮೆ ಅದೇ ಪರೀಕ್ಷೆಯನ್ನೆದುರಿಸಬೇಕಾಗುವ ಸಂಭವವೇ ಹೆಚ್ಚಾಗಿದೆ.

ತುಲಾ

ಈ ರಾಶಿಯವರಿಗೆ ಈ ವರ್ಷ ಅಲ್ಪ ಕಷ್ಟ ವಿಪುಲ ಲಾಭವೆಂಬ ಮಾತಿನ ಅನುಭವ ಪೂರ್ಣತಃ ಬರುವುದೆಂಬುದು ನಿಶ್ಚಿತವೆಂದು ತಿಳಿಯಬೇಕು.

ಈ ಸಲ ಈ ರಾಶಿಯವರ ಗ್ರಹಮಾನ ಬಹಳ ಉತ್ತಮವಾಗಿದೆ. ಆದರೆ ಪ್ರಾರಂಭದ ಸುಮಾರು ಒಂದು ತಿಂಗಳು, ಆಗ ರಾಶಿಸ್ವಾಮಿ ಶುಕ್ರನು ಆರಂಭದಲ್ಲಿಯೇ ಈ ರಾಶಿಯಿಂದ ಮುಂದಿನ ರಾಶಿಗೆ ಹೋಗುವ ಸಂಕ್ರಮಣಾವಸ್ಥೆಯಲ್ಲಿರುವುದರಿಂದ, ಮತ್ತು ಆತ್ಮಾಕಾರಕ ಗ್ರಹ ರವಿಯೂ ಇಂಥದೇ ಸ್ಥಿತಿಯಲ್ಲಿದ್ದು ಕೇತು ಮತ್ತು ನೆಪ್ಚ್ಯೂನರು ಸಹ ವರ್ಷವಿಡೀ ಇದೇ ರಾಶಿಯಲ್ಲಿದ್ದಾರೆ. ಅದರಿಂದಾಗಿ ಒಂದು ಒಂದೂವರೆ ತಿಂಗಳು ಶೈತ್ಯ – ಪಿತ್ತದಿಂದಾಗಿ ಅಥವಾ ರಕ್ತದ ಒತ್ತಡದಿಂದಾಗಿ ಕ್ಲೇಶವುಂಟಾಗಬಹುದು. ಆದರೆ ಅನಂತರ ಮಾತ್ರ ರೋಗ ನಾಶಕ ನೆನಿಸಿದ ಆರನೆಯ ಶನಿಯು ಉತ್ತಮ ಆರೋಗ್ಯ ಮತ್ತು ಉತ್ಸಾಹಗಳನ್ನೀಯುವನು. ಉಚ್ಚನಾದ ಹತ್ತನೆಯ ಗುರುವು ಬಹಳ ಉತ್ತಮನಿರುವುದರಿಂದ ಇತರ ವಿಷಯಗಳಲ್ಲಿ ದೇಹಸುಖದಲ್ಲಿ ಯಾವ ಕೊರತೆಯೂ ಉಂಟಾಗದಂತೆ ನೋಡಿಕೊಳ್ಳುವನು.

ವರ್ಷ ಮುಗಿಯುವ ವರೆಗೂ ರಾಹುವು ಭಾರ್ಯಾಸ್ಥಾನದಲ್ಲಿ ಇರುವುದರಿಂದ ಪ್ರಾಪಂಚಿಕ ಮಹತ್ವದ ವಿಷಯಗಳಲ್ಲಿ ಹೆಂಡತಿಯೊಂದಿಗೆ ತೀವ್ರ ಮತಭೇದವಾಗುತ್ತಲೇ ಇರುವುದಾದರೂ ಭಾರ್ಯೇಶ ಮಂಗಳನು ವರ್ಷಾರಂಭದಲ್ಲಿಯೆ ಲಾಭಸ್ಥಾನದಲ್ಲಿ, ಹಾಗು ಜನೆವರಿ ೨೨ ರಿಂದ ಎಪ್ರಿಲ್ ೧೭ ರ ವರೆಗೆ ಮತ್ತು ಜುಲೈ ೫ ರಿಂದ ಕೊನೆಯ ವರೆಗೆ ಕೆಲ ಕಾಲ ರಾಶಿಬಲಿಷ್ಠನಾಗಿದ್ದರೆ ಹಲ ಕಾಲ ಸ್ಥಾನಬಲಿಷ್ಠನಾಗಿರುತ್ತಾನೆಯಾದ್ದರಿಂದ ಪರಸ್ಪರರ ವಿಷಯದಲ್ಲಿ ಪ್ರೇಮಾದರಗಳಲ್ಲೂ ಸಹವಾಸದಲ್ಲೂ ಏನೂ ವ್ಯತ್ಯಯವುಂಟಾಗುವುದಿಲ್ಲ. ಅನೇಕ ಸಲ ಅವಳ ಸಲಹೆ ಸೂಚನೆಗಳು ನಿಮ್ಮ ವಿಚಾರಗಳಿಗಿಂತಲೂ ಹೆಚ್ಚು ಫಲಪ್ರದವೆಂದು ಕಂಡುಬರಬಹುದಾಗಿದೆ. ಅವಳ ಆರೋಗ್ಯ ನವೆಂಬರ್ ೨೧ ರಿಂದ ಜನೆವರಿ ೨೨ರ ವರೆಗಿನ ಅವಧಿಯಲ್ಲಿ ತುಸು ಕೆಡಬಹುದು.

ಈ ರಾಶಿಯ ಅವಿವಾಹಿತರಿಗೆ ಮಾತ್ರ ಈ ಸಲ ಬಾಸಿಂಗಬಲವಿಲ್ಲವೆಂದೇ ಹೇಳಬೇಕು. ಮಹತ್ಪ್ರಯಾಸದಿಂದ ಒಂದು ವೇಳೆ ಮದುವೆ ಹೊಂದಿದರೂ ಕೆಲವು ಅಪೇಕ್ಷಿತವಾದರೆ ಇನ್ನು ಕೆಲವು ಅನಪೇಕ್ಷಿತ ಅಡೆತಡೆಗಳು ಬಂದು ಅದು ಪ್ರತ್ಯಕ್ಷ ಕಾರ್ಯರೂಪಕ್ಕೆ ಬರದೆಯೆ ಮುಂದೆ ಬೀಳುವ ಸಂಭವವಿದೆ.

ನಿಮ್ಮ ಮಗ ಅಥವಾ ಮಗಳ ವಿವಾಹವನ್ನು ಈ

ವರ್ಷ ಮಾಡುವುದಿದ್ದರೆ ಅದಕ್ಕೆ ಡಿಸೆಂಬರ್ ೧೯ ರಿಂದ ಉತ್ತಮ ಬಾಸಿಂಗಬಲವಿದೆ. ಅಂತೆಯೆ, ಬಹಳ ಪ್ರಯತ್ನಪಟ್ಟು ಹೊಂದಿಸಬೇಕಾಗಿ ಬಂದರೂ ನಿಶ್ಚಿತ ವಿವಾಹವಾಗುವದು. ಆದರೆ ಉಭಯಪಕ್ಷಗಳಲ್ಲೂ ತಪ್ಪು ಕಲ್ಪನೆಗಳು ಬಹಳವಾಗುವುದರಿಂದಾಗಿ ಸಮಾರಂಭದಲ್ಲಿ ಅಷ್ಟೊಂದು; ಉತ್ಸಾಹದ ವಾತಾವರಣವೇ ಇರಲಾರದು. ಆದರೆ ಸುತೇಶ ಶನಿಯು ಆರನೆಯವನಾಗಿ ಸ್ಥಾನಬಲಿಷ್ಠನೂ ಮೀನದಲ್ಲಿದ್ದುದರಿಂದ ರಾಶಿ ಬಲಿಷ್ಠನೂ ಆಗಿರುವುದರಿಂದ ಸೊಸೆ ಅಥವಾ ಅಳಿಯ ರೂಪಗುಣಗಳಿಂದ ಪೂರ್ಣ ಮನಸ್ಸಿಗೊಪ್ಪುವಂತಿರುವರು. ಡಿಸೆಂಬರ್ ೧೯ರ ನಂತರದ ಸರ್ವಕಾಲವೂ ನಿಮ್ಮ ಮಕ್ಕಳಲ್ಲಿ ವಯೋಮಾನಕ್ಕನುಗುಣವಾಗಿ ಪ್ರತಿಯೊಬ್ಬರಿಗೂ ಬಹು ಉನ್ನತಿಕಾರಕವಿದೆ ಮಾತ್ರವಲ್ಲ, ಒಬ್ಬಿಬ್ಬರ ಬಗೆಗಂತೂ ಸರ್ವತ್ರವೂ ಪ್ರಶಂಶೆಯೆ ಕೇಳಿಬರಬಹುದು; ಒಬ್ಬನ ಹೆಸರಂತೂ ಪತ್ರಿಕೆಗಳಲ್ಲೂ ಒಳ್ಳೆಯ ಪ್ರಸಿದ್ಧಿ ಪಡೆದು ಅವರಲ್ಲಿ ಪ್ರತಿಯೊಬ್ಬರಿಂದಲೂ ಸ್ವತ: ನಿಮಗೆ ಒಳ್ಳೆಯ ಸುಖ ಸಿಗುತ್ತದೆ.

ಉದ್ಯೋಗ ಧಂದೆಗಳಲ್ಲಿ ಪರಾಕ್ರಮೇಶ ಗುರು ೧೦ ನೆಯ ಅಂದರೆ ಕರ್ಮಸ್ಥಾನದಲ್ಲಿ ಉಚ್ಚನಾಗಿದ್ದು, ನಿಮ್ಮ ರಾಶಿ(ತುಲಾ)ಯ ಮುಖ್ಯ ರಾಜಯೋಗಕರ್ತನಾದ ಶನಿಯು ೬ನೆಯವನಾಗಿ ಪ್ರಬಲನಾಗಿದ್ದು ಗುರುವಿನಿಂದ ದೃಷ್ಟನಾಗಿದ್ದಾನೆ. ಇಂತಹ ಅನುಪಮ ಸುಂದರ ಯೋಗದಿಂದಾಗಿ, ಉದ್ಯೋಗಸ್ಥರ ದೈವದ ಬಾಗಿಲು ತೆರೆದಂತೆಯೇ ಸರಿ. ನೌಕರದಾರರಲ್ಲೂ ೧೦೦ಕ್ಕೆ ೭೫ ಪಾಲು ಜನರಿಗವರ ಹಕ್ಕು ಅಥವಾ ಕಲ್ಪನೆ ಮೀರಿ ಹೆಚ್ಚಿನ ದರ್ಜೆಗೆ ಖಂಡಿತ ಬಡತಿ ಸಿಗುವದು. ವರಿಷ್ಠರು ಸದಾ ನಿಮ್ಮ ಬಗ್ಗೆ ಸಂತುಷ್ಟರಾಗಿಯೇ ಇರುವರಲ್ಲದೆ ಮೇಲಿಂದ ಮೇಲೆ ನಿಮ್ಮ ಗುಣಪ್ರಶಂಸೆ ಮಾಡುವರು. ಮುಂದೆಂದಾದರೂ ಇದು ಉಪಯುಕ್ತವೆನಿಸಲಿದೆ. ಡಿಸೆಂಬರ್ ೧೯ ಕ್ಕಿಂತ ಮೊದಲೇ ಬದಲಿಯಾದರೆ ಅದು ಬಡತಿಯ ಮೇಲೆಯೇ ಇರುವುದಾದರೂ ತುಸು ಅನನುಕೂಲ ಸ್ಥಳಕ್ಕಾಗಬಹುದಾಗಿದೆ. ಅದರ ನಂತರ ಬದಲಿಯಾದರೆ ಅದು ಪೂರ್ಣ ಅನುಕೂಲ ಸ್ಥಳಕ್ಕಾಗುವದಲ್ಲದೆ ವರಿಷ್ಠರಂತೆಯೇ ಜನರಲ್ಲೂ ನಿಮ್ಮ ಬಗೆಗೆ ಸದಭಿಪ್ರಾಯವೇ ಇರುವದು. ಅದರಂತೆಯೆ ನಿಮ್ಮಿಂದಲೂ ಪರರ ಕಲ್ಯಾಣದ ಅನೇಕ ಕಾರ್ಯಗಳು ಜರಗಬಹುದು. ಉದ್ಯೋಗಸ್ಥರಿಗೆ ಹೊಸ ಶಾಖೆಗಳನ್ನು ತೆರೆಯುವ ಸುಯೋಗವೊದಗಿದರೆ ಅನೇಕರಿಗೆ ಅದರ ಜೊತೆಗೆ ಹೊಸ ಉದ್ಯೋಗವನ್ನೇ ಪ್ರಾರಂಭಿಸುವ ಅವಕಾಶವೂ ದೊರೆಯಬಹುದು. ಕೇವಲ ಲಾಭದ ದೃಷ್ಟಿಯಿಂದ ನವೆಂಬರ್ ೧೬ ರಿಂದ ಜನೆವರಿ ೧೪, ಫೆಬ್ರುವರಿ ೧೨ ರಿಂದ ಮಾರ್ಚ್ ೧೪, ಎಪ್ರಿಲ ೧೪ ರಿಂದ-ಜುಲೈ ೧೬, ಅಗಸ್ಟ್ ೧೭ ರಿಂದ ಸಪ್ಟೆಂಬರ್ ೧೭ ಹಾಗು ಅಕ್ಟೋಬರ್ ೧೮ ರಿಂದ ಮುಂದಿನ ಅವಧಿಯೆಲ್ಲ ತುಂಬ ಅನುಕೂಲಕರವಾಗಿದೆ. ಅದರಂತೆ, ನವೆಂಬರ್ ೨೧ ರಿಂದ ಜನೆವರಿ ೨೨ ಹಾಗು ಏಪ್ರಿಲ್ ೧೭ ರಿಂದ ಜುಲೈ ೫ರವರೆಗಿನ ಅವಧಿಯಲ್ಲಿ ಸರಕಾರಿ ಕೆಲಸಗಳಿಗಾಗಿ ಹುಚ್ಚು ವೆಚ್ಚವನ್ನು ಸಹಿಸಲೇಬೇಕಾಗುವದಾದರೂ ಕೊನೆಗೆ ಆ ಕೆಲಸಗಳು ಮಾತ್ರ ಮನಸ್ಸಿನಂತೆಯೆ ಪೂರ್ಣಗೊಳ್ಳುವವು. ಕೈಕೆಳಗಿನವರು ಆದರ ವಿಶ್ವಾಸಗಳಿಂದ ವರ್ತಿಸುವರು. ಲಾಭದಂತೆಯೆ ಸಂಗ್ರಹದ ಪ್ರಮಾಣವೂ ಹೆಚ್ಚುವದು. ಆದರೆ ವಾಹನಸುಖ ಮಾತ್ರ ತೊಂದರೆದಾಯಕ. ಯಾತ್ರೆಯ ಯೋಗ ಕಡಿಮೆಯೇ. ಆದರೂ ಇತರ ಕೆಲಸಗಳಿಗಾಗಿ ಬಹಳ ಸಲ ಪ್ರವಾಸ ಕೈಕೊಳ್ಳಬೇಕಾಗಬಹುದು. ಜೀರ್ಣೋದ್ಧಾರದಂಥ ಒಂದು ದೈವೀ ಅಥವಾ ಲೋಕೋಪಯೋಗಿ ಸತ್ಕೃತ್ಯ ನಿಮ್ಮಿಂದ ಜರುಗಬಹುದಾಗಿದೆ. ತಂದೆ-ತಾಯಿಗಳಿಗೆ ಈ ವರ್ಷ ಚೆನ್ನಾಗಿದೆ.

ದಾವೆ, ಫಿರ್ಯಾದಿ ಇಲ್ಲವೆ ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ಡಿಸೆಂಬರ್ ೧೯ರ ಮೊದಲು ಅಥವಾ ಎಪ್ರಿಲ್ ೧೭ ರಿಂದ ಜುಲೈ ೫ರ ವರೆಗಿನ ಅವಧಿಯಲ್ಲಿ ನಿರ್ಣಯ ದೊರೆತರೆ ನಿಮ್ಮ ವಿರುದ್ಧವಾಗಬಹುದಾದರೆ ಇತರ ಸಮಯದಲ್ಲಿ ಮಾತ್ರ ಭಾರಿ ಹಾಗು ಪೂರ್ಣ ಯಶಸ್ಸು ದೊರೆಯುವದು.

ಈ ರಾಶಿಯ ಗರ್ಭವತಿಯರು ಡಿಸೆಂಬರ ೧೯ರ ಮೊದಲು ಪ್ರಸೂತರಾದರೆ ಹೆರಿಗೆ ತುಸು ಕಷ್ಟಕರವೇ ಆಗುವದಲ್ಲದೆ ಬಹುತರರಿಗೆ ಜನಿಸುವ ಮಗು ಕನ್ಯೆಯೆ ಆಗಿರಬಹುದಾಗಿದೆ. ಆದರೆ ಅನಂತರವಾದರೆ ಸುಲಭ ಪ್ರಸೂತಿಯಾಗುವದಲ್ಲದೆ ಬಹುತರರಿಗೆ ಪುತ್ರಲಾಭದ ಯೋಗವೂ ಇದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಜನೆವರಿ ೨೫ ರಿಂದ ಎಪ್ರಿಲ ೧೭ರ ವರೆಗೆ ಅಥವಾ ಜುಲೈ೫ರ ನಂತರ ಎಂದರೆ ಅವರು ಖಂಡಿತ ಉತ್ತೀರ್ಣರಾಗುವರು.

ವೃಶ್ಚಿಕ

ಈ ರಾಶಿಯವರಿಗೆ ಈ ವರ್ಷ ಕೆಲವು ಕಿರುಕಳ ತೊಂದರೆಗಳನ್ನುಳಿದರೆ ಬಹುತರ ವಿಷಯಗಳಲ್ಲಿ ಒಳ್ಳೆಯ ಯಶಸ್ಸಿನ ಹಾಗು ಭಾಗ್ಯವರ್ಧಕ ಕಾಲವಾಗಿದೆಯೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲವೆಂದು ತಿಳಿಯಬೇಕು.

ವರ್ಷವಿಡೀ ೯ ನೆಯ ಅಂದರೆ ಆರೋಗ್ಯ ಮತ್ತು ಭಾಗ್ಯದಾಯಕ ಸ್ಥಾನದಲ್ಲಿ ಗುರು ಉಚ್ಚ, ರಾಶಿಸ್ವಾಮಿ ಮಂಗಳನು ವರ್ಷಾರಂಭದಲ್ಲಿಯೇ ಜಾತ್ಯಾ ಬಲಪ್ರಾಪ್ತವಾಗುವಂತಹ ೧೦ ನೆಯ ಸ್ಥಾನದಲ್ಲಿ ಹಾಗು ಮಿತ್ರ ಮತ್ತು ಬಲಿಷ್ಠ ರಾಶಿಯೆನಿಸಿದ ಸಿಂಹದಲ್ಲಿ ಹಾಗು ಗುರುವಿನಂತೆಯೆ ಶತ್ರು, ರೋಗ ಮತ್ತು ಸಂಕಟಗಳ ನಾಶಕ್ಕೆ ಸಮರ್ಥನಾದ ೬ ನೆಯ ರಾಹು ಇಂಥ ಯೋಗವಿರುವದರಿಂದ ಆರೋಗ್ಯ ಉತ್ತಮವಾಗಿಯೇ ಇರುವದು. ಆದರೆ ರಾಶಿಸ್ವಾಮಿ ಮಂಗಳನು ಸಕ್ರಿಯಾಗಿ ತುಲಾದಲ್ಲಿ, ಅಂದರೆ ೧೨ನೆಯವನಾಗಿರುವಾಗ, ಅಂದರೆ ಮಾರ್ಚ ೮ ರಿಂದ ಮೇ ೧೮ರ ವರೆಗಿನ ಅವಧಿಯಲ್ಲಿ ಆರೋಗ್ಯ ತುಸು ಕೆಡುವ ಸಂಭವವಿದೆ. ಇತರ ವಿಷಯಗಳಲ್ಲಿ ಪ್ರಾಪಂಚಿಕಸುಖ ಹಾಗು ದೇಹಸುಖ ಬಹಳ ಉತ್ತಮ. ಅಲ್ಲದೆ ಎಲ್ಲ ವಿಷಯಗಳಲ್ಲಿ ಯೋಜನೆಯಂತೆಯೆ ಯಶಸ್ಸು ದೊರೆಯುತ್ತಲೇ ಇರುವದು.

ಈ ವರ್ಷ ಜುಲೈ ೫ ರಿಂದ ಅಗಸ್ಟ್ ೨೭ರ ವರೆಗಿನ ಅವಧಿಯಲ್ಲಿ ಹೆಂಡತಿಯ ಆರೋಗ್ಯಕ್ಕೆ ತುಸು ಕ್ಲೇಶ ಉಂಟಾಗಬಹುದಾದ್ದರಿಂದ ಸ್ತ್ರೀಸುಖದಲ್ಲಿ ವ್ಯತ್ಯಯ ಬರಬಹುದಾದರೂ ಉಳಿದ ಸಮಯವೆಲ್ಲ ಅದು ಉತ್ತಮವೇ ಸರಿ. ಅಲ್ಲದೆ ಭಾರ್ಯೇಶ ಶುಕ್ರನು ವರ್ಷಾರಂಭದಲ್ಲಿ ಈ ರಾಶಿಯಲ್ಲಿದ್ದು ಅವನ ಪೂರ್ಣದೃಷ್ಟಿ ಭಾರ್ಯಾಸ್ಥಾನದ ಮೇಲಿರುವದರಿಂದ ಬಹುತರ್ ವಿಷಯಗಳಲ್ಲಿ ಪರಸ್ಪರರಲ್ಲಿ ಸಹಮತ ಉಳಿಯುವದು. ಆದರೆ ಮಾರ್ಚ್ ೧೪ ರಿಂದ ಎಪ್ರಿಲ್ ೮ರವರೆಗಿನ ಅವಧಿಯಲ್ಲಿ ನೀವು ಬೇರೂರಿಗೆ ಹೋಗುವುದರಿಂದಾಗಿ ಸಹವಾಸದಲ್ಲಿ ವ್ಯತ್ಯಯ ಉಂಟಾಗಬಹುದಾದರೂ ಇನ್ನುಳಿದ ವೇಳೆಯಲ್ಲಿ ಅದಕ್ಕೆಷ್ಟೂ ಬಾಧೆಯಿಲ್ಲ. ಆದರೆ ಅಲ್ಲಿರುವ ಶನಿಯ ದೃಷ್ಟಿನಿಮಿತ್ತವಾಗಿ ಅವಳು ಸಂತುಷ್ಟಳೂ ಉತ್ಸಾಹಿಯೂ ಆಗಿರುವದರ ಬದಲಾಗಿ ಉದಾಸೀನಳಾಗುಳಿಯಬಹುದಾಗಿದೆ. ಒಟ್ಟಿನಲ್ಲಿ ಸ್ತ್ರೀಸುಖ ಚೆನ್ನಾಗಿ ದೊರೆಯುವದು.

ಈ ರಾಶಿಯ ಅವಿವಾಹಿತರ ವಿವಾಹವೀ ಸಲವಾಗುವುದಿದ್ದಲ್ಲಿ ಅದಕ್ಕಾಗಿ ತುಸು ಹೆಚ್ಚು ಪ್ರಯತ್ನ ಮಾಡಬೇಕಾಗುವುದಾದರೂ ಆಗುವದು ಖಂಡಿತ. ವಿಶೇಷತಃ ನವಂಬರ್ ೧೪ ರಿಂದ ಡಿಸೆಂಬರ್ ೮, ಜನೆವರಿ ೧ ರಿಂದ ೨೫, ಫೆಬ್ರುವರಿ ೧೮ ರಿಂದ ಮಾರ್ಚ್ ೧೪, ಎಪ್ರಿಲ್ ೮ ರಿಂದ ಮೇ ೪, ಮತ್ತು ಜೂನ್ ೧ ರಿಂದ ಜುಲೈ ೪ರ ವರೆಗಿನ ಕಾಲವು ಅದಕ್ಕೆ ಅಷ್ಟನುಕೂಲವಾಗಿದ್ದು ವಧೂವರರು ಪರಸ್ಪರ ಅನುರೂಪ ಸ್ವಭಾವದವರಾಗಿರುತ್ತಾರೆ.

ಅದರಂತೆಯೆ, ನಿಮ್ಮ ಮಗ ಅಥವಾ ಮಗಳ ಮದುವೆಯನ್ನೇ ಈ ಸಲ ಮಾಡುವುದಿದ್ದರೆ ಅದು ಅನಾಯಾಸವಾಗಿ ಹಾಗು ಉತ್ತಮ ಮನೆತನದಲ್ಲಿ ಆಗುವಂಥ ಬಾಸಿಂಗಬಲವಿದೆ. ಅಲ್ಲವೆ ಅದು ನಿಶ್ಚಿತ ಮುಹೂರ್ತಕ್ಕೆಯೆ ಆಗುವದಲ್ಲದೆ ನಿರೀಕ್ಷೆಗಿಂತ ಹೆಚ್ಚು ಸಡಗರದಿಂದಾಗುವದು. ಪ್ರತಿಪಕ್ಷದ ಮನೆತನ ಸಮೀಪದ ಊರಿನದು ಅಥವಾ ಪೂರ್ವಾಪರ ಪರಿಚಯದ್ದೂ ಆಗಿರಬಹುದಾಗಿದೆ. ಸೊಸೆ ಇಲ್ಲವೆ ಅಳಿಯ ಎಲ್ಲ ಮನಸ್ಸಿಗೂ ಒಪ್ಪಿತರಿರುವಂತೆಯೆ ಒಳ್ಳೆಯ ಸುದೈವಿಗಳೂ ಆಗಿರುವದೆಂಬುದು ಮುಂದಿನ ಕೆಲದಿನಗಳಲ್ಲೇ ಕಂಡುಬರುವದು. ಅದರಂತೆಯೆ, ಮಕ್ಕಳಲ್ಲಿ ಪ್ರತಿಯೊಬ್ಬರ ಉನ್ನತಿಯೂ ಅಂದಾಜಿಗಿಂತ ಹೆಚ್ಚೇ ಆಗುವದು ಮಾತ್ರವಲ್ಲ, ಒಬ್ಬಿಬ್ಬರ ಕೀರ್ತಿಯಂತೂ ವಿದೇಶಗಳಲ್ಲೂ ಹಬ್ಬುವ ಸಂಭವವಿದೆ. ಕೆಲ ಸಮಯ ನಿಮ್ಮ ಹಾಗು ಮಕ್ಕಳ ನಡುವೆ ಮತಭೇದ ತಲೆದೋರಬಹುದಾದರೂ ಇತರ ವಿಷಯಗಳಲ್ಲಿ ಅವರಿಂದ ಉತ್ತಮ ಸುಖ ದೊರೆಯುವದು.

ಉದ್ಯೋಗ ಧಂದೆಗಳಲ್ಲಿ ಈ ವರ್ಷ ೯ ನೆಯ ಗುರುವು ಸಪ್ಟೆಂಬರ್ ೪ರ ವರೆಗೆ ಭಾಗ್ಯಸ್ಥಾನದಲ್ಲಿರುವದರಿಂದ, ಅತ್ಯಂತ ತೇಜಿಯ, ತುಂಬ ಲಾಭದ, ಭಾರೀ ಪ್ರಗತಿಯ ಹಾಗು ವಿಸ್ತೃತ ಪ್ರಸಿದ್ಧಿಯ ಕಾಲವೆನಿಸುತ್ತದೆ. ಪರಾಕ್ರಮೇಶ ಮತ್ತು ಸುಖೇಶ ಶನಿಯು

೫ನೆಯವನಾಗಿ ಬುದ್ಧಿಸ್ಥಾನದಲ್ಲಿರುವದರಿಂದ ಉದ್ಯೋಗದಲ್ಲಿ ಪ್ರತಿಯೊಂದು ವಿಷಯವೂ ಮೊದಲೇ ನಿರ್ಧರಿಸಿದ ವಿಚಾರದಂತೆಯೇ ಕೈಗೂಡುವದು ಹಾಗು ೬ನೆಯ ಅಂದರೆ ರಿಪುಸ್ಥಾನದ ರಾಹುವಿನಿಂದಾಗಿ ಯಾರೇ ಮಧ್ಯದಲ್ಲಿ ಅಡ್ಡಿಯೊಡ್ಡಿದರೂ ವಿರೋಧ ಅಥವಾ ಶತ್ರುತ್ವ ಸಾಧಿಸಿದರೂ ಎಷ್ಟೇ ಸಂಕಟಗಳು ಬಂದರೂ ಅವು ಸಂಪೂರ್ಣ ನಿವಾರಣೆಯಾಗಿ ನಿಮಗೆ ಶ್ರೇಷ್ಠತಮ ವಿಜಯ ದೊರೆಯುತ್ತಲೇ ಹೋಗುವದು. ಈ ವರ್ಷವು ಉದ್ಯೋಗಸ್ಥರಿಗಿಂತ ನೌಕರದಾರರಿಗೆ ಹೆಚ್ಚು ಉತ್ಕರ್ಷಕಾರಕವಾಗಿದೆ. ಬಹುತರರಿಗೆ ಮೇಲಿನ ಸ್ಥಾನಕ್ಕೆ ಬಡತಿ ದೊರೆಯಬಹುದಲ್ಲದೆ ವರ್ಷಾರಂಭದಲ್ಲಿಯೆ ಪ್ರಬಲ ಹಾಗು ಸ್ವಭಾವತಃ ಅಧಿಕಾರವೃತ್ತಿಯ ರಾಶಿಯಾದ ದಶಮಸ್ಥ ಸಿಂಹ ರಾಶಿಯಲ್ಲಿರುವ ಮಂಗಳನಿಂದಾಗಿ ಲಾಭದ ಅಂಕಿಗಿಂತ ಅನೇಕರ ಅಧಿಕಾರ ಕಕ್ಷೆಯು ಹೆಚ್ಚು ವಿಸ್ತೃತವಾಗಬಹುದಾಗಿದೆ. ಬದಲಿಯಾದರೆ ಅದು ಒಳ್ಳೆಯ ಸೌಕರ್ಯಗಳುಳ್ಳ, ಆದರೆ ರುಕ್ಷ ಅಥವಾ ವಿಷಮ ಹವೆಯ ಸ್ಥಳಕ್ಕೆ ಆಗಬಹುದಾದ ಸಂಭವವೇ ಹೆಚ್ಚು. ನಿಮ್ಮ ವರಿಷ್ಠರು ಯಾವಾಗಲೂ ನಿಮ್ಮ ಬಗ್ಗೆ ಎಷ್ಟೊಂದು ಸಂತುಷ್ಟರಿರುವರೊ, ನಿಮ್ಮ ಕೈಕೆಳಗಿನವರು ಅಷ್ಟೇ ಅಸಂತುಷ್ಟರೂ ಅಸಂತೃಪ್ತರೂ ಆಗಿರುವದು ಕಂಡುಬರುವದು. ಕೈಕೆಳಗಿನವರಿಂದ ದೊರೆಯುವ ಸುಖಕ್ಕಿಂತ ವಾಹನಸುಖವೇ ಹೆಚ್ಚಾಗಿರುವ ಸಂಭವವಿದೆ. ದುಡಿಮೆಯಂತೆಯೆ ಸಂಗ್ರಹವೂ ಚೆನ್ನಾಗಿ ಆಗುವ ಯೋಗವಿದೆ. ಉದ್ಯೋಗಸ್ಥರ ಕಲಾಕೃತಿಗಳು ಅಥವಾ ವಸ್ತುಗಳಿಗೆ ಸ್ವ-ಪ್ರಾಂತಕ್ಕಿಂತ ಬೇರೆ ದೂರದ ಪ್ರಾಂತಗಳಿಂದ ಅಥವಾ ನೇರವಾಗಿ ಪರದೇಶಗಳಿಂದಲೇ ಹೆಚ್ಚಿನ ಬೇಡಿಕೆ ಬರಬಹುದು. ಆಪ್ತರು, ಸೋದರರು ಹಾಗು ಮಿತ್ರರಿಂದ ಉತ್ತಮ ಸುಖ ದೊರೆಯುವದು. ೯ನೆಯ ಗುರುವಿನಿಂದಾಗಿ ಅಪೇಕ್ಷಿತ ಯಾತ್ರೆ ಅಥವಾ ಧಾರ್ಮಿಕ ಕಾರ್ಯಗಳು ಜರುಗಬಹುದು. ಅದರಂತೆಯೆ, ಇತರ ಕೆಲಸಗಳಿಗಾಗಿಯೂ ಒಂದೆರಡು ಸಲ ದೂರದ ಪ್ರವಾಸ ಮಾಡಬೇಕಾಗಿ ಬರಬಹುದು. ಖಾಸಗಿ ಹಾಗು ಸರಕಾರಿ ಲೇಖನ ಕೆಲಸಗಳು ಅನಿರೀಕ್ಷಿತವಾಗಿ ಮನಸ್ಸಿನಂತೆಯೇ ಆಗಬಹುದು. ಕೆಟ್ಟವೇ ಇರಲಿ, ಒಳ್ಳೆಯವೇ ಇರಲಿ ನೀವು ನುಡಿದ ಅನೇಕ ಭವಿಷ್ಯಗಳು ಸತ್ಯವಾಗಿ ಪರಿಣಮಿಸಿದ ಅನುಭವ ಬರುವದು.

ದಾವೆ, ಫಿರ್ಯಾದಿ ಇಲ್ಲವೆ ಖಾಸಗಿ ಸ್ಪರ್ಧೆಗಳಲ್ಲಿ ಹೆಚ್ಚಿನವುಗಳಲ್ಲಿ ನಿರ್ಣಯ ನಿಮಗನುಕೂಲವೇ ಆಗಿ ಪರಿಣಮಿಸಬಹುದು. ಆದರೆ ಮಂಗಳ ವಕ್ರಿಯಾಗಿರುವಾಗ ಅಂದರೆ ಮಾರ್ಚ ೧೭ ರಿಂದ ಮೇ ೧೬ರ ವರೆಗಿನ ಅವಧಿಯಲ್ಲಾದರೆ ಮಾತ್ರ ನಿಮ್ಮ ವಿರುದ್ಧವಾಗುವ ಸಂಭವವಿದೆ.

ಈ ರಾಶಿಯ ಗರ್ಭವತಿಯರು ೯ ನೆಯ ಗುರುವಿರುವಾಗ ಅಂದರೆ ಸಪ್ಟೆಂಬರ್ ೩ ರೊಳಗೆಯೆ ಪ್ರಸೂತರಾದರೆ ಹೆರಿಗೆ ಸುಲಭವಾಗುವದಲ್ಲದೆ ಪುತ್ರಲಾಭದ ಯೋಗವೂ ಇದೆ. ಆದರದೆ ಅವನು ೧೦ ನೆಯವನಿರುವಾಗ ಪ್ರಸೂತಿ ತುಸು ಕಷ್ಟಕರವೆನಿಸುವದಲ್ಲದೆ ಬಹುತರರಿಗೆ ಕನ್ಯೆ ಜನಿಸುವ ಯೋಗವೂ ಇದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ೯ನೆಯ ಗುರುವಿರುವಾಗಲಾದರೆ ನಿಶ್ಚಿತ ಉತ್ತೀರ್ಣರಾಗುವರು ಮಾತ್ರವಲ್ಲ, ನವಂಬರ್ ೨೧ ರಿಂದ ಜನೆವರಿ ೨೨, ಎಪ್ರಿಲ್ ೧೭ ರಿಂದ ಜುಲೈ೫ ಹಾಗು ಅಗಸ್ಟ್೨೭ರಿಂದ ಸಪ್ಟೆಂಬರ್ ೩ರ ವರೆಗಿನ ಅವಧಿಯಲ್ಲಾದರೆ ಶ್ರೇಣಿಯನ್ನು ಸಹ ಪಡೆಯಬಹುದು.

ಧನು

ಈ ರಾಶಿಯವರಿಗೆ ಈ ವರ್ಷದ ಮೊದಲ ೧೦ ತಿಂಗಳುಗಳು ತುಂಬ ದಗದಗಿಯವೂ ಕಷ್ಟಕರವೂ ಮನೋಭಂಗವನ್ನುಂಟುಮಾಡುವಂತಹವೂ ಆದರೂ ಕೊನೆಯ ೨ ತಿಂಗಳುಗಳು ಮಾತ್ರ ಹಿಂದೆ ಪಟ್ಟ ಕಷ್ಟವೆಲ್ಲವೂ ಮರೆತುಹೋಗುವಷ್ಟು ಉನ್ನತಿಯಾಗುವದು ಖಂಡಿತವೆಂದು ತಿಳಿಯಬೇಕು.

ಈ ವರ್ಷ ರಾಶಿಸ್ವಾಮಿ ಗುರುವು ಸುಮಾರು ೧೦ ತಿಂಗಳ ಕಾಲ ಅಂದರೆ ಸಪ್ಟೆಂಬರ್ ೩ರವರೆಗೆ ೮ನೆಯವನಾಗಿರುವನಲ್ಲದೆ ರಾಹುವು ೫ನೆಯವನಾಗಿ ವರ್ಷವಿಡೀ ಬುದ್ಧಿಸ್ಥಾನದಲ್ಲಿರುವದರಿಂದ ಆರೋಗ್ಯ ತುಸು ಕೆಡಬಹುದು. ಆದರೆ ಅದು ತೀರ ಕೆಟ್ಟಿರುವದೆಂಬ ಭ್ರಮೆ ಮಾತ್ರ ಮೇಲಿಂದ ಮೇಲೆ ಆಗುತ್ತಲೇ ಇರುವದು. ಅಲ್ಲದೆ ಶನಿಯು ೪ ನೆಯವನಾಗಿ ಸುಖಸ್ಥಾನದಲ್ಲಿರುವದರಿಂದ ಪರಿಸ್ಥಿತಿ ಅನುಕೂಲವೂ ಸುಖದಾಯಕವೂ ಇದ್ದರೂ ನೀವು ಮಾತ್ರ ಪ್ರತಿಕೂಲ ಹಾಗು ದುಃಖಕರ ಪರಿಸ್ಥಿತಿಯಲ್ಲಿಯೆ ಇರುವ ಭ್ರಮೆಯಲ್ಲಿರುವಿರಿ. ಆದರೆ ಗುರುವು ಕರ್ಕದಲ್ಲಿ ಉಚ್ಚನಾಗಿರುವದರಿಂದ ಗಂಡಾಂತರದ ಭಯವೆಳ್ಳಷ್ಟೂ ಇಲ್ಲ. ಕ್ಲೇಶವಾಗಲಿ, ಆಗದಿರಲಿ ಭ್ರಮನಿವಾರಣಾರ್ಥ ದತ್ತಾತ್ರಯನ ಅಥವಾ ಮಾರುತಿಯ ಉಪಾಸನೆ ಮಾಡಬೇಕು. ಇಲ್ಲವೆ ನಿಮ್ಮ ಆರಾಧ್ಯದೇವತೆಯ ಒಂದು ಕೋಟಿ ನಾಮಸ್ಮರಣ ಮಾಡಬೇಕು. ಇತರ ವಿಷಯಗಳಲ್ಲಿ ದೇಹಸುಖ ಮಧ್ಯಮ ಪ್ರತಿಯದು ಅಂದರೆ ಕಷ್ಟಸಾಧ್ಯ, ಅಥವಾ ಬಹಳ ಪ್ರಯತ್ನಾನಂತರದಲ್ಲಿ ದೊರೆಯುವಂಥದು ಎಂದು ತಿಳಿಯಬೇಕು. ಗುರುವು ೯ ನೆಯವನಾದ ನಂತರ ಮಾತ್ರ ಮಾನಸಿಕ ಮತ್ತು ಶಾರೀರಿಕಸುಖದಲ್ಲಿ ಭರದಿಂದ ಸುಧಾರಣೆಯಾಗುವದರಲ್ಲಿ ಎಷ್ಟು ಮಾತ್ರವೂ ಸಂದೇಹವಿಲ್ಲ.

ಸ್ತ್ರೀಸುಖಕ್ಕೆ ಈ ವರ್ಷ ಡಿಸೆಂಬರ್ ೭ ರಿಂದ ೨೮, ಮಾರ್ಚ ೮ರಿಂದ ಎಪ್ರಿಲ್ ೨೬ ಹಾಗು ಮೇ ೧೨ರಿಂದ ೨೮ ಈ ಅವಧಿಯಲ್ಲಿ ಅವಳ ಆರೋಗ್ಯಕ್ಕೆ ತುಸು ಕ್ಲೇಶವುಂಟಾಗುವದರಿಂದಾಗಿ ವ್ಯತ್ಯಯವುಂಟಾಗಬಹುದಾದರೂ ಇನ್ನುಳಿದ ಕಾಲವೆಲ್ಲ ಉತ್ತಮವೇ ಆಗಿದೆ. ಪರಸ್ಪರ ಪ್ರೇಮ, ನಿಷ್ಠೆಗಳು ಉತ್ತಮವಾಗಿರುವಾಗಲೂ ಭಾರ್ಯೇಶ ಬುಧನು ವರ್ಷಾರಂಭದಲ್ಲಿ ವಕ್ರನಾಗಿರುವದರಿಂದ ಆಗೀಗ ಅವಳ ಮಾತು ಮನಸ್ಸಿಗೆ ಚುಚ್ಚುವಂಥವೂ ವರ್ತನೆ ತಲೆತಿರುಗಿದವರಂಥದೂ ಎನಿಸಬಹುದು.

ತಹಶೀಲದಾರನ ನಿವೃತ್ತಿ



ಈ ಮಹಾರಾಯ ಹೊಂದಿದನು ನಿವೃತ್ತಿ.
ಆದರೂ ಬಿಡಲಿಲ್ಲ ಹಳೆಯ ಪ್ರವೃತ್ತಿ.
ರಾಜಕಾರಣ ಸೇರಿ ತಿನ್ನುವ ಪ್ರಯತ್ನ.
ಉದ್ದೇಶ ಹಳತಾದರೂ ರೀತಿ ನೂತ್ನ.

— ದಿನಕರ ದೇಸಾಯಿ

ಈ ರಾಶಿಯ ಅವಿವಾಹಿತರ ಮದುವೆ ಈ ಸಲ ಆಗುವದಿದ್ದಲ್ಲಿ ಎಂಟನೆಯ ಗುರುವಿರುವಾಗ ಎಷ್ಟೇ ಪ್ರಯತ್ನಪಟ್ಟರೂ ಅದು ಹೊಂದುವದು ಕೂಡ ಕಠಿಣವೆನಿಸುವದಾದರೆ ಅವನು ೯ನೆಯವನಾದನಂತರ ಅಂದರೆ ಸಪ್ಟೆಂಬರ್ ೩ರ ನಂತರ ತೀರ ನಿರಾಯಾಸವಾಗಿ ಹತ್ತಿರದ ಮನೆತನವೊಂದರೊಂದಿಗೆ ಸಂಬಂಧ ಬೆಳೆದು ನಿರ್ವಿಘ್ನವಾಗಿ ವಿವಾಹ ನೆರವೇರುವದು. ವಧೂವರರ ಜೊತೆಯು ಸಮಾನಸ್ವಭಾವಿಯಾದರೂ ನೋಡಲು ಮಾತ್ರ ತುಸು ಇಜ್ಜೋಡಿಯೆನಿಸಬಹುದು. ಆದರೆ ಪ್ರತಿಪಕ್ಷಿಯ ಪರಿಸ್ಥಿತಿ ಮಾತ್ರ ನಿಮಗಿಂತ ಬಹಳ ಉತ್ತಮವಿರುವದು.

ಅದರಂತೆಯೆ, ನಿಮ್ಮ ಮಗ ಅಥವಾ ಮಗಳ ಮದುವೆಯನ್ನು ಈ ಸಲ ಮಾಡುವುದಿದ್ದರೆ ಅದಕ್ಕೆ ಸಹ ಎಂಟನೆಯ ಗುರುವಿಗಿಂತ ಒಂಬತ್ತನೆಯ ಗುರುವಿರುವಾಗಲೇ ಹೆಚ್ಚು ಅನುಕೂಲತೆಗಳಿವೆ. ಆದರೆ ಎಂಟನೆಯ ಗುರುವಿರುವಾಗಲೂ ೬ ಕನ್ಯಾರಾಶಿಯಲ್ಲಿ ಮಂಗಳನಿರುವಾಗ, ಅಂದರೆ ನವೆಂಬರ್ ೨೧ ರಿಂದ ಜನೆವರಿ ೧೭ ರ ವರೆಗೆ ಅಥವಾ ಎಪ್ರಿಲ್ ೧೭ ರಿಂದ ಜುಲೈ ೫ ರ ವರೆಗಿನ ಅವಧಿಯಲ್ಲಿ ಕೆಲವರ ವಿವಾಹವಾಗುವ ಸಂಭವವಿದೆ. ಸೊಸೆ ಅಥವಾ ಅಳಿಯ ರೂಪಕ್ಕಿಂತ ಸ್ವಭಾವ ಮತ್ತು ಬುದ್ಧಿಮತ್ತೆಯ ದೃಷ್ಟಿಯಿಂದ ಹೆಚ್ಚು ಮನಸ್ಸಿಗೊಪ್ಪುವಂತಿರುತ್ತಾರೆ. ಮಕ್ಕಳೆಲ್ಲರ ಉತ್ಕರ್ಷಕ್ಕೂ ಈ ವರ್ಷವು ಉತ್ತಮವಾಗಿದ್ದು ಒಂಬತ್ತನೆಯ ಗುರುವಿರುವಾಗಲಂತೂ ಅಪೂರ್ವ ಉತ್ಕರ್ಷದ ಯೋಗವೇ ಇದೆ. ಆದರೆ ಈ ಸ್ಥಾನದಲ್ಲಿ ರಾಹುವು ಸದಾಕಾಲವೂ ಇರುವನಾದ್ದರಿಂದ ಕೆಲವರ ಆರೋಗ್ಯದ ಬಗೆಗೆ ಕೆಲ ಕಿರುಕುಳಗಳಿರುವ-

ವಾದರೆ ಮತ್ತೆ ಕೆಲವರ ವರ್ತನೆ ಆಗೀಗ ಮನಸ್ಸಿಗೆ ತಾಪವುಂಟುಮಾಡುವಂಥದಿರುವುದು.

ಉದ್ಯೋಗ ಧಂದೆಗಳಲ್ಲಿ ಈ ವರ್ಷ ವ್ಯಾಪಾರಿಗಳಿಗೆ ಹಾಗು ಶ್ರಮಜೀವಿಗಳಾದ ಉದ್ಯೋಗಸ್ಥರಿಗೆ ಎಂಟನೆಯ ಗುರುವಿರುವಾಗಲಾದರೆ ಬುದ್ಧಿಜೀವಿಗಳಾದ ಉದ್ಯೋಗಸ್ಥರಿಗೆ ಅವನು ಒಂಬತ್ತನೆಯವನಾದ ನಂತರ ಭಾರಿ ಲಾಭದ ಯೋಗವಿದೆ. ನೌಕರದಾರರಿಗೆ ಸಹ ಗಳಿಕೆಯ ದೃಷ್ಟಿಯಿಂದ ಒಂಬತ್ತನೆಯ ಗುರುವಿಗಿಂತ ಎಂಟನೆಯ ಗುರುವೇ ಉತ್ತಮ. ಬಹುತರರು ತುಸು ಹೆಚ್ಚುಕಡಿಮೆ ಪ್ರಮಾಣದಲ್ಲಿ ವರಿಷ್ಠರ ಅಸಂತುಷ್ಟಿಯನ್ನು ಸಹಿಸಬೇಕಾಗಬಹುದು. ಬದಲಿಯಾದರೆ ಅದು ತೀರ ಪ್ರತಿಕೂಲ ಸ್ಥಳಕ್ಕೆ. ನಿಮ್ಮದು ವಿಶೇಷ ಹಕ್ಕಿದ್ದರೆ ಮಾತ್ರ ಒಂಬತ್ತನೆಯ ಗುರುವಿರುವಾಗ ಬಡತಿ ದೊರೆಯಬಹುದು. ಜನ್ಮಕುಂಡಲಿಯಲ್ಲಿ ಆಕಸ್ಮಿಕ ಧನಲಾಭಯೋಗವಿದ್ದವರಿಗೆ ಗುರುವು ಎಂಟನೆಯವನಿರುವಾಗ ಕೆಲಮಟ್ಟಿಗೆ ದೊರೆಯಬಹುದಾಗಿದೆ. ಅದೇ ರೀತಿ ಎಂಟನೆಯ ಗುರುವಿರುವಾಗುಲೆಯೆ ಅನೇಕ ಶುಭಸೂಚಕ ಸ್ವಪ್ನಗಳನ್ನು ಕಾಣುವಿರಿ ಮತ್ತು ಅವನು ಒಂಬತ್ತನೆಯವನಾದನಂತರ ಅವು ಪ್ರತ್ಯಕ್ಷ ಅನುಭವಕ್ಕೆ ಬರಬಹುದು. ಆಪ್ತರು ಮತ್ತು ನೆರೆಹೊರೆಯವರು ಬಹಳ ತೊಂದರೆಕೊಡುವರು. ವಾಹನವಿದ್ದರೆ ಆದರ ದುರಸ್ತಿಗಾಗಿಯೇ ಬಹಳ ವೆಚ್ಚ ಸಹಿಸಬೇಕಾಗಬಹುದು. ಎಷ್ಟೇ ಹಣ ಬಂದರೂ ಸಂಗ್ರಹದಲ್ಲಿಡಲಿಷ್ಟೂ ಸಾಧ್ಯವಾಗದಂತೆ ವೆಚ್ಚದ ಪ್ರಸಂಗಗಳು ಬರುವವು. ಗುರುವು ಒಂಬತ್ತನೆಯವನಿರುವಾಗ ವಿಶಿಷ್ಟ ಧಾರ್ಮಿಕ ಕಾರ್ಯವೊಂದು ನಡೆಯುವದು. ಮಿತ್ರರು ಅಷ್ಟೊಂದು ಹಿತವಾಗಿ ವರ್ತಿಸುವದಿಲ್ಲ. ಸ್ವಕೀಯರಿಗಿಂತ ಪರಕೀಯರೇ ಹೆಚ್ಚು ಹಿತವಹರೆನಿಸುವರು.

ದಾವೆ, ಫಿರ್ಯಾದಿ ಅಥವಾ ಖಾಸಗಿ ಸ್ಪರ್ಧೆಯ ಕೆಲಸಗಳಲ್ಲಿ ನಿರ್ಣಯ ಎಂಟನೆಯ ಗುರುವಿರುವಾಗ ದೊರೆತರೆ ತುಸು ಹೆಚ್ಚುಕಡಿಮೆ ನಿಮ್ಮ ವಿರುದ್ಧವೇ ಇರುವುದು; ಆದರೆ ಅದೇ ಒಂಬತ್ತನೆಯವನಿರುವಾಗಲಾದರೆ ಪೂರ್ಣ ಯಶ ಸಿಗುವದು.

ಈ ರಾಶಿಯ ಗರ್ಭವತಿಯರು ಹನ್ನೆರಡನೆಯ ಮಂಗಳನಿರುವಾಗ ಅಂದರೆ ಅಗಸ್ಟ್ ೭ ರಿಂದ ಅಕ್ಟೋಬರ್ ೯ ರ ವರೆಗಿನ ಅವಧಿಯಲ್ಲಿ ಪ್ರಸೂತರಾದರೆ ಹೆರಿಗೆ ತುಸು ಕಷ್ಟಕರವೆನಿಸಬಹುದು; ಆದರೆ ಅದೇ ೯ ನೆಯ ಗುರುವಿರುವಾಗಲಾದರೆ ಅಷ್ಟೊಂದು ಕಷ್ಟವೆನಿಸಲಾರದು. ಎಂಟನೆಯ ಗುರುವಿರುವಾಗ ಬಹುತರರಿಗೆ ಕನ್ಯಾಜನನದ ಸಂಭವವಿದ್ದರೆ ಒಂಬತ್ತನೆಯ ಗುರುವಿರುವಾಗ ಪುತ್ರಲಾಭದ ಯೋಗವಿದೆ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಸಪ್ಟೆಂಬರ್ ೩ ರ ನಂತರ ಅಂದರೆ ಒಂಬತ್ತನೆಯ ಗುರು ಬಂದ ಮೇಲೆ ಆಗುವುದಾದರೆ ಅವರು ಪ್ರಥಮವಲ್ಲದಿದ್ದರೆ ಕನಿಷ್ಠ ದ್ವಿತೀಯ ದರ್ಜೆಯಲ್ಲಾದರೂ ನಿಶ್ಚಿತ ಉತ್ತೀರ್ಣರಾಗುವರು. ಆದರೆ ಡಿಸೆಂಬರ್ ೨೨ ರಿಂದ ಎಪ್ರಿಲ್ ೨೭ ಅಥವಾ ಜುಲೈ ೫ ರಿಂದ ಅಗಸ್ಟ್ ೨೩ ರ ವರೆಗಿನ ಅವಧಿಯಲ್ಲಿ ಪರೀಕ್ಷೆಯಾದರೆ ಕೊನೆಯ ಪಕ್ಷ ಉತ್ತೀರ್ಣರಾಗಬಹುದು.

ಮಾಡುವದಿದ್ದಲ್ಲಿ ಅದು ಆಗಬಹುದಾದರೂ ಅದಕ್ಕೆ ಮೊದಲು ಬಹಳ ಪ್ರಯತ್ನ ಮಾಡಬೇಕಾಗಬಹುದು. ಎಲ್ಲಿ ವಿವಾಹ ಹೊಂದಿಬರುವದೆಂದು ನಿಮಗೆ ಪೂರ್ಣ ವಿಶ್ವಾಸವಿರುವದೊ ಅಲ್ಲಿಯೆ ವಿಚಿತ್ರ ಕಾರಣವೊಂದರಿಂದಾಗಿ ವ್ಯವಹಾರ ಮುರುಗಡೆಯಾಗಿಬಿಡಬಹುದು. ಎಲ್ಲಿ ಹೊಂದುವದೆಂದು ನೀವು ನಂಬುವಿರೊ ಅಲ್ಲಿ ಕೆಲ ಕುಹಕರು ಸುಳ್ಳು ಅಪಪ್ರಚಾರಾದಿಗಳಲ್ಲಿ ತೊಡಗುವದರಿಂದ ನಿಮ್ಮ ಪ್ರಯತ್ನ ವಿಫಲವಾಗಬಹುದಾದರೂ ಕೊನೆಗೆ ಎಲ್ಲಿ ವಿವಾಹ ನಿಶ್ಚಯವಾಗುವದೊ ಆ ಮನೆತನ ಮಾತ್ರ ಮೊದಲಿನ ಯಾವದಕ್ಕಿಂತಲೂ ಹೆಚ್ಚು ಯೋಗ್ಯವೆನಿಸುವದು ಸುನಿಶ್ಚಿತ. ಸೊಸೆ ಇಲ್ಲವೆ ಅಳಿಯನ ಬಗೆಗೆ ಮೊದಮೊದಲು ಕೆಲದಿನ ನಿಮ್ಮ ಮನೋಭಾವ ಉದಾಸವಾಗಿರುವದಾದರೂ ಅನಂತರ ಅಷ್ಟೇ ಪ್ರಸನ್ನವಾಗುವದು. ಅವರ ವಿವಾಹಕ್ಕೆ ನವೆಂಬರ್ ೧೪ ರಿಂದ ಡಿಸೆಂಬರ್ ೮, ಜನೆವರಿ ೧ ರಿಂದ ೨೫, ಫೆಬ್ರುವರಿ ೧೮ ರಿಂದ ಮಾರ್ಚ್ ೧೪, ಎಪ್ರಿಲ್ ೮ ರಿಂದ ಮೇ ೪ ಹಾಗು ಜೂನ್ ೧ ರಿಂದ ಜುಲೈ ೩ರ ವರೆಗಿನ ಅವಧಿಯಲ್ಲಿ ಹೆಚ್ಚು ಅನುಕೂಲ. ಮಕ್ಕಳ ಉನ್ನತಿಗೆ ಸಹ ಈ ವರ್ಷ ಏಳನೆಯ ಗುರುವಿರುವ ಕಾಲವು ಅನುಕೂಲವಿದೆ. ಆದರೆ ಅವರಲ್ಲಿ ಒಬ್ಬಿಬ್ಬರನ್ನುಳಿದು ಬೇರಾರೊಡನೆಯೂ ನಿಮಗೆ ಅಷ್ಟೊಂದು ಕೂಡಿ ನಡೆಯುವದಿಲ್ಲ. ಭಾರೀ ವಿರೋಧವೇನೂ ಬರದಿದ್ದರೂ ಶಾಬ್ದಿಕ ವಿರೋಧವಾದರೂ ಮೇಲಿಂದಮೇಲೆ ಉಂಟಾಗುತ್ತಲೇ ಇರುವುದು.

ಉದ್ಯೋಗ ಧಂದೆಗಳಲ್ಲಿ ಸಹ ಈ ವರ್ಷ ೮ನೆಯ ಗುರುವಿಗಿಂತ ೭ ನೆಯ ಗುರುವಿರುವಾಗಲೇ ಹೆಚ್ಚು ತೇಜಿಯಿರುವುದಲ್ಲದೆ ವಿಪುಲ ಲಾಭವಾಗುವದು. ಮತ್ತು ಪತ್ತು ಪ್ರತಿಷ್ಠೆಗಳಲ್ಲಿ ಕಲ್ಪನಾತೀತ ಹೆಚ್ಚಳವಾಗುವುದು. ಬುದ್ಧಿಜೀವಿಗಳಿಗಿಂತಲೂ ಈ ವರ್ಷ ಶ್ರಮಜೀವಿಗಳಿಗೆ ಮತ್ತು ವ್ಯಾಪಾರೀವರ್ಗದವರಿಗೆಯೆ ಹೆಚ್ಚು ಸುಖಕರವೂ ಲಾಭಕರವೂ ಆಗಿದೆ. ಅನೇಕರಿಗೆ ಉದ್ಯೋಗದಲ್ಲಿ ಶಾಖೆಗಳನ್ನು ತೆರೆಯುವ ಯೋಗವಿದೆ. ಯಾರ ಉದ್ಯೋಗ ಸ್ವಂತ ಊರಲ್ಲಿ ಅಥವಾ ಸ್ವಪ್ರಾಂತದಲ್ಲಿರದೆ ಬೇರೆಡೆಯಿದ್ದರೆ ಅಂಥವರಿಗೆ ಈ ವರ್ಷ ಬಹಳ ಉತ್ಕರ್ಷದ್ದಾಗಿದೆ. ನೌಕರದಾರರಿಗೆ ಮಂಗಳನು ನಾಲ್ಕನೆಯವನಿರುವಾಗ ಮೇಲಿನ ಹುದ್ದೆಗೆ ನಿಶ್ಚಿತ ಬಡತಿ ದೊರೆಯುವದು ಮತ್ತು ವರಿಷ್ಠರ ಮರ್ಜಿಯೂ ವಿಶೇಷವಾಗಿರುವದು. ೧೦ನೆಯ ಮಂಗಳನಿರುವಾಗ ಅಂದರೆ ಜನೆವರಿ ೨೨ ರಿಂದ ಎಪ್ರಿಲ್ ೧೫ ಹಾಗೂ ಜುಲೈ ೫ ರಿಂದ ಅಗಸ್ಟ್ ೧೭ರ ವರೆಗಿನ ಅವಧಿಯಲ್ಲಿ ಬದಲಿಯಾದರೆ ಅದು ಬಹಳ ಒಳ್ಳೆಯ ಊರಿಗಾಗುವದು. ಅದೇ ಗುರುವು ೮ನೆಯನಿರುವಾಗ ಬದಲಿಯಾದರೆ ಅಧಿಕಾರದ ದೃಷ್ಟಿಯಿಂದ ಒಳ್ಳೆಯದೆನಿಸುವ ಊರಾಗಿರುವುದಾದರೂ ಉಳಿದ ವಿಷಯಗಳಲ್ಲಿ ತುಂಬ ಪ್ರತಿಕೂಲವೇ ಇರುವುದು. ವರಿಷ್ಠರು ಸಂತುಷ್ಟರಾಗಿರುವರಾದರೂ ಕೈಕೆಳಗಿನವರು ತೀರ ಸೋಮಾರಿಗಳಾಗಿ ಕೆಲಸ ತಪ್ಪಿಸುತ್ತ ತೊಂದರೆ ಕೊಡುವರು. ಈ ಸಲ ಸ್ಥಾವರಕ್ಕಿಂತ ನಾನಾ ವಿಧದ ವಸ್ತುಗಳ ಸಂಗ್ರಹ ವಿಶೇಷವಾಗುವದು. ಗುರುವು ೭ನೆಯವನಾಗಿರುವ

ಮಕರ

ಈ ರಾಶಿಯವರಿಗೆ ಈ ವರ್ಷ ಮನಸ್ಸಿಗೆ ಚುಚ್ಚುವಂತಹ ಕೆಲವು ಘಟನೆಗಳು ಜರುಗಬಹುದಾದರೂ ಯಶಸ್ಸು ಮತ್ತು ಲಾಭ ದೃಷ್ಟಿಯಿಂದ ಬಹಳ ಉತ್ತಮವಾಗಿದೆಂದು ತಿಳಿಯಬೇಕು.

ಈ ರಾಶಿಯ ಸಾಡೇಸಾತಿಯು ಇದೀಗ ಮುಕ್ತಾಯವಾಗಿದ್ದು, ಈ ವರ್ಷದ ಮೊದಲ ೧೦ ತಿಂಗಳು ಅಂದರೆ ಸಪ್ಟೆಂಬರ್ ೩ರ ವರೆಗೆ ಗುರುವು ೭ನೆಯವನೂ ಉಚ್ಚನೂ ಆಗಿದ್ದಾನೆ. ರಾಶಿಸ್ವಾಮಿ ಶನಿಯಂತೂ ಸದಾಕಾಲವೂ ೩ನೆಯವನಾಗಿ ಬಲಿಷ್ಠಸ್ಥಾನದಲ್ಲಿ ಹಾಗು ಮಿತ್ರಕ್ಷೇತ್ರದಲ್ಲಿದ್ದಾನೆ. ಅದರೊಂದಿಗೆಯೆ ಲಾಭ ಹಾಗು ದೇಹಸ್ಥಾನವು ಅರ್ಥಾತ್ ಈ ರಾಶಿಯು ಗುರುವಿನ ಪೂರ್ಣ ದೃಷ್ಟಿಯಲ್ಲಿದೆ. ಈ ಸುಯೋಗದಿಂದಾಗಿ ಆರೋಗ್ಯ ಉತ್ತಮವಿರುವದಲ್ಲದೆಯೆ ಯೋಜಿಸಿದ ಬಹುತರ ಕೆಲಸಗಳು ಮನಸ್ಸಿನಂತೆಯೆ ಕೈಗೂಡುವವು. ಆದರೆ ೪ನೆಯ ಅಂದರೆ ಸುಖಸ್ಥಾನದಲ್ಲಿರುವ ರಾಹುವಿನಿಂದಾಗಿ ಸೋದರರು, ಹತ್ತಿರದ ಬಳಗದವರು, ಮನೆಯಲ್ಲಿಯ ಆಶ್ರಿತರು ಹಾಗು ಊರಲ್ಲಿರುವ ನಿಮ್ಮ ಸಮಾನಸ್ಥಿತಿಯ ಕೆಲ ಜನರಿಂದ ಅತಿಶಯ ಉಪದ್ರವ ಉಂಟಾಗುವದರಿಂದ ಮನಸ್ಸು ತುಂಬ ಅಸ್ವಸ್ಥವಾಗುವದು.

ಸ್ತ್ರೀಸುಖಕ್ಕೆ ಈ ವರ್ಷವು ಉತ್ತಮವಾಗಿದ್ದು ಎಲ್ಲ ವಿಷಯಗಳಲ್ಲೂ ಮತ್ಯೈಕ್ಯ, ಒಮ್ಮನಸ್ಸು ಹಾಗು ಪೂರ್ಣಪ್ರೇಮ ಕಂಡುಬರುವವು. ವರ್ಷಾರಂಭದಿಂದ ನವೆಂಬರ್ ೨೧ರ ವರೆಗೆ ಹಾಗು ಮತ್ತೆ ಅಕ್ಟೋಬರ್ ೯ರ ನಂತರದ ಕಾಲದಲ್ಲಿ ಅವಳಿಗೆ ತುಸು ಕ್ಲೇಶ ಉಂಟಾಗುವ ಸಂಭವವಿದೆ, ಅಥವಾ ಕೆಲಕಾಲ ಸಹವಾಸದಲ್ಲಿ ವ್ಯತ್ಯಯ ಉಂಟಾಗಬಹುದು. ಅಷ್ಟನ್ನುಳಿದರೆ ಇತರ ಕಾಲವೆಲ್ಲ ಅವಳ ಆರೋಗ್ಯ ಉತ್ತಮವಿರುವದಲ್ಲದೆ ಅವಳಿಂದ ಉತ್ತಮ ಸುಖವೂ ದೊರೆಯುವದು.

ಅದರಂತೆಯೆ, ಈ ರಾಶಿಯ ಅವಿವಾಹಿತರ ವಿವಾಹ ಈ ಸಲ ಆಗುವದಿದ್ದಲ್ಲಿ ೭ನೆಯ ಗುರುವಿರುವಾಗ ಅಂದರೆ ಅವನು ಭಾರ್ಯಾಸ್ಥಾನದಲ್ಲಿ ಉಚ್ಚನಾಗಿರುವಾಗ ಅತ್ಯಲ್ಪಾಯಾಸದಿಂದ ನಿಶ್ಚಯವಾಗಿ ವ್ಯವಸ್ಥಿತ ರೀತಿಯಲ್ಲಿ ಪೂರ್ತಿಯಾಗುವದು. ಅಲ್ಲದೆ ಪ್ರತಿಪಕ್ಷಿಯು ಅಥವಾ ವಧು ಇಲ್ಲವೆ ವರ ನಿಮ್ಮ ಅಂದಾಜಿಗಿಂತ ಹೆಚ್ಚು ಸರಸರಾಗಿರುವದು ನಿಮ್ಮ ಅನುಭವಕ್ಕೆ ಬರುತ್ತದೆ. ಮನೆತನ ದೂರದ ಊರಿನದೆನಿಸಿದರೂ ಸಾಧಾರಣ ಮಟ್ಟಿಗೆ ಪೂರ್ವಪರಿಚಿತವೇ ಇರುವದು ಹಾಗು ವಧೂವರರು ಸರ್ವ ವಿಷಯಗಳಲ್ಲೂ ಸಮಾನ ಲಕ್ಷಣಗಳುಳ್ಳವರಾಗಿರುತ್ತಾರೆ.

ಈ ವರ್ಷ ನಿಮ್ಮ ಮಗ ಅಥವಾ ಮಗಳ ಮದುವೆ

ವರೆಗೆ ಮಂಗಲಕಾರ್ಯದ ನಿಮಿತ್ತ ಅನೇಕ ಸಲ ಪ್ರವಾಸ ಕೈಕೊಳ್ಳಬೇಕಾಗಬಹುದು. ಯಾತ್ರಾಯೋಗ ಕಡಿಮೆಯೆ. ಪತ್ರವ್ಯವಹಾರ ಹಾಗು ಇತರ ಲೇಖನ ಕೆಲಸಗಳು ಬಹಳ ಉತ್ತಮ.

ದಾವೆ, ಫಿರ್ಯಾದಿ ಹಾಗು ಇತರ ಸ್ಪರ್ಧೆಯ ಕೆಲಸಗಳಲ್ಲಿ ನಿರ್ಣಯವು ಗುರುವು ೭ನೆಯವನಿದ್ದಾಗ ಎಷ್ಟು ಅನುಕೂಲವಾಗಿರುವುದೊ ಮುಂದೆ ಅವನು ೮ನೆಯವನಾದ ನಂತರ ಅಷ್ಟೇ ಪ್ರತಿಕೂಲನೂ ಆಗುತ್ತಾನೆ.

ಈ ರಾಶಿಯ ಗರ್ಭವತಿಯರು ೭ನೆಯ ಗುರುವಿರುವಾಗ ಪ್ರಸೂತರಾದರೆ ಕಷ್ಟಭಯವಿಲ್ಲವಾದರೂ ಕನ್ಯಾಜನನವಾಗುವ ಸಂಭವ ಹೆಚ್ಚಾಗಿದೆ, ಅದೇ ಅವನು ೮ನೆಯವನಾದನಂತರವಾದರೆ ಹೆರಿಗೆ ತುಸು ತೊಂದರೆದಾಯಕವೆನಿಸಿದರೂ ಬಹುತರರಿಗೆ ಪುತ್ರಲಾಭವೇ ಆಗುವುದು.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ೭ನೆಯ ಗುರುವಿರುವಾಗಲಾದರೆ ಉತ್ತೀರ್ಣರಾಗುವುದು ಎಷ್ಟು ನಿಶ್ಚಿತವೊ, ಮುಂದೆ ೮ನೆಯ ಗುರು ಬಂದನಂತರ ಮಾತ್ರ ಅದು ತೀರ ಅನಿಶ್ಚಿತವೇ ಆಗುವದು.

ಕುಂಭ


ಈ ರಾಶಿಯವರಿಗೆ ಈ ವರ್ಷ ಸಾಡೇಸಾತಿ ಇದ್ದರು ಕೂಡ ಪ್ರತಿಯೊಂದು ವಿಷಯದಲ್ಲೂ ಸುಲಭಸಾಧ್ಯವಲ್ಲದಿದ್ದರೆ ಕಷ್ಟಸಾಧ್ಯ ಯಶಸ್ಸಾದರೂ ದೊರೆತೇ ತಿರುವುದೆಂದು ತಿಳಿಯಬೇಕು.

ಈ ರಾಶಿಯು ಈಗ ಸಾಡೇಸಾತಿಯ ಕೊನೆಯ ಹಂತದಲ್ಲಿದ್ದರೂ ಅದರ ಕರ್ತೃವಾದ ಶನಿಯು ಈ ರಾಶಿಸ್ವಾಮಿಯಾಗಿರುವದರಿಂದ ಮತ್ತು ಅವನು ತನ್ನ ಮಿತ್ರರಾಶಿಯಾದ ಮೀನದಲ್ಲಿರುವದರಿಂದ ಅಶುಭಫಲಗಳನ್ನೀಯದೆಯೆ ವಿಶೇಷ ಉನ್ನತಿಕಾರಕವೆನಿಸುವಂಥ ಒಂದೆರಡು ಫಲಗಳನ್ನಾದರೂ ಕೊಡುವನು. ಆದರೆ ಅವನು ೨ನೆಯ ಅಂದರೆ ಧನ ಮತ್ತು ಕುಟುಂಬ ನಾಮಕಸ್ಥಾನದಲ್ಲಿರುವದರಿಂದ ತುಸು ಗೃಹಕಲಹ ಉಂಟಾಗುವದು, ಮತ್ತು ಸ್ಥಾವರ ಜಂಗಮ ಆಸ್ತಿಯನ್ನು ಮನಸ್ಸಿನಂತೆ ಸಂಗ್ರಹಿಸಲು ಸಾಧ್ಯವಾಗುವದಿಲ್ಲ. ಮನೆತನದಲ್ಲಿಯ ಪ್ರತಿಯೊಬ್ಬರೂ ತಾವು ಉಳಿದವರಿಗಿಂತ ಹೆಚ್ಚು ಬುದ್ಧಿವಂತರೆಂಬ ಭಾವನೆಯಿಂದ ಮನಬಂದಂತೆ ವರ್ತಿಸುವರಲ್ಲದೆ ಬೇಕಾದ ವ್ಯವಹಾರ ಮಾಡಿ ಹಣ ವೆಚ್ಚಮಾಡುವರು. ಆದರೂ ಗುರು ೬ನೆಯವನಿರುವಾಗ ಅಂದರೆ ಸಪ್ಟೆಂಬರ್ ೩ರ ವೊದಲು ಕೌಟುಂಬಿಕ ಉತ್ಕರ್ಷದ ಮತ್ತು ಮನೆತನದ ಗೌರವವನ್ನು ಹೆಚ್ಚಿಸುವಂತಹ ಕೆಲ ಘಟನೆಗಳು ಜರುಗುವವು. ಆರೋಗ್ಯಕ್ಕೆ ನವೆಂಬರ್ ೨೧ ರಿಂದ ಜನೆವರಿ ೨೨ ಅಥವಾ ಎಪ್ರಿಲ್ ೧೭ ರಿಂದ ಜುಲೈ ೫ರ ವರೆಗಿನ ಅವಧಿಯಲ್ಲಿ ಮಂಗಳ ೮ನೆಯವನಿರುವದರಿಂದ ತುಸು ಕ್ಲೇಶವುಂಟಾಗುವ ಭಯವಿದೆ ಹಾಗು ಅದೊಂದು ಅಪಘಾತದಿಂದುಂಟಾಗುವ ಸಂಭವವಿದೆ. ಇತರ ವಿಷಯಗಳಲ್ಲಿ ಪ್ರಾಪಂಚಿಕಸುಖ ಗುರುವು ೭ನೆಯವನಾದ ನಂತರ ಅಂದರೆ ಸಪ್ಟೆಂಬರ್ ೩ರ ನಂತರ ಹೆಚ್ಚು ಚೆನ್ನಾಗಿ ಸಿಕ್ಕುವುದು.

ವರ್ಷಾರಂಭದಲ್ಲಿ ಭಾರ್ಯಾಸ್ಥಾನದಲ್ಲಿ ಮಂಗಳನಿದ್ದು ಭಾರ್ಯೇಶ ರವಿಯು ಭಾಗ್ಯಸ್ಥಾನದಲ್ಲಿದ್ದರೂ ಕೇತುವಿನಿಂದ ಯುಕ್ತನಾಗಿರುವದರಿಂದ ಹೆಂಡತಿಯ ಆರೋಗ್ಯ ಮೇಲಿಂದ ಮೇಲೆ ಕೆಡಬಹುದು. ರವಿಯೊಂದಿಗೆ ದೇಹೇಶ ಶನಿಯು ಷಡಾಷ್ಟಕಯೋಗವಾಗಿರುವದರಿಂದ ಉಭಯತರದಲ್ಲೂ ಅಷ್ಟಿಷ್ಟು ಕಾರಣಕ್ಕಾಗಿಯೇ ವಾಗ್ವಾದವಾಗಬಹುದು. ಅದರಂತೆಯೇ, ಅನಿರೀಕ್ಷಿತ ಕಾರಣಗಳಿಂದಾಗಿಯೇ ಸಹವಾಸದಲ್ಲಿ ವ್ಯತ್ಯಯವುಂಟಾಗಬಹುದು.

ಈ ರಾಶಿಯ ಅವಿವಾಹಿತರ ವಿವಾಹವಾಗುವಧಿದ್ದಲ್ಲಿ ೬ನೆಯ ಗುರುವಿರುವಾಗ ಅದಾಗುವದು ಕಠಿಣವೆ. ಅನೇಕ ಎಡೆಗಳಲ್ಲಿ ನೀವೇ ನಿರಾಕರಿಸುವ ಪ್ರಸಂಗ ಬಂದರೆ ಆಕಸ್ಮಾತ್ ವಿವಾಹ ನಿಶ್ಚಯವಾದಾಗಲೂ ಅಪರಿಹಾರ್ಯ ಕಾರಣಗಳಿಂದಾಗಿ ಅದನ್ನು ಮುಂದೂಡುತ್ತ ಹೋಗುವ ಪ್ರಸಂಗ ಬರಬಹುದು. ಆದರೆ

ಮುಗುದಾಣಿಯ ಅವಶ್ಯಕತೆ



ಸರಕಾರವೆನ್ನುವುದು ವಿಕ್ಷಿಪ್ತ ಪ್ರಾಣಿ.
ಇದಕೆ ಪ್ರಜೆಗಳು ಹಾಕಬೇಕು ಮುಗುದಾಣಿ.
ಹಾಕದಿದ್ದಲ್ಲಿ ಸಿಕ್ಕಾಪಟ್ಟೆ ಓಡಿ
ಬೀದಿ ಬೀದಿಗಳಲ್ಲಿ ಮಾಡುವುದು ರಾಡಿ.

— ದಿನಕರ ದೇಸಾಯಿ

ಗುರುವು ೭ನೆಯವನಾದ ನಂತರ, ಅಂದರೆ ಸಪ್ಟೆಂಬರ್ ೩ರ ನಂತರ ವಿವಾಹ ಅಲ್ಪಾಯಾಸದಿಂದ ನಿಶ್ಚಯವಾಗಿ ಅಲ್ಪಾವಧಿಯಲ್ಲಿಯೆ ಸಮಾರಂಭ ಕೂಡ ಮುಗಿದುಹೋಗುವದು. ಆದರೆ ವಧೂವರರಿಗೆ ಮೊದಮೊದಲು ಕೆಲದಿನ ಅಷ್ಟೊಂದು ಕೂಡಿನಡೆಯುವದಿಲ್ಲವಾದರೂ ನಂತರ ಮಾತ್ರ ಸರಿ ಹೋಗುವದು.

ಅದರಂತೆಯೆ, ನಿಮ್ಮ ಮಗ ಅಥವಾ ಮಗಳ ವಿವಾಹವನ್ನು ಈ ಸಲ ಮಾಡುವದಿದ್ದಲ್ಲಿ ಅದಕ್ಕೆ ಮಾತ್ರ ಏಳನೆಯ ಗುರುವಿಗಿಂತ ೬ನೆಯ ಗುರುವೇ ಹೆಚ್ಚು ಅನುಕೂಲನೆಂದು ತಿಳಿಯಬೇಕು. ಆದರೆ ವೊದಲೊಂದೆಡೆ ನಿಶ್ಚಯವಾದ ಮದುವೆ ಮುರುಗಡೆಯಾಗಿ ನಂತರ ಬೇರೊಂದೆಡೆ ಅದಾಗುವ ಅನುಭವ ಅನೇಕರಿಗೆ ಬರುವದು. ಮಕ್ಕಳಲ್ಲಿ ಅನೇಕರ ಉನ್ನತಿ ಒಪ್ಪಿಟ್ಟುಕೊಳ್ಳುವಷ್ಟು ಮಟ್ಟಿಗೆ ಆಗಬಹುದು. ಆದರೆ ಒಬ್ಬನದು ಮಾತ್ರ ತೀರ ಅವನತಿಯಾಗುವ ಅಥವಾ ಅವನಿಗೆ ಹಿಂದೇಟು ಬೀಳುವ ಯೋಗವೂ ಇದೆ. ಯಾಕಂದರೆ ಸಂತತಿಸ್ವಾಮಿ ಬುಧನು ವರ್ಷಾರಂಭದಲ್ಲಿಯೇ ವಕ್ರಿಯಾಗಿರುವಾಗಲೂ ಶುಭಕ್ಷೇತ್ರಿಯಾಗಿದ್ದಾನೆ. ಬಹುತರ ಎಲ್ಲರೊಂದಿಗೆಯೂ ನಿಮಗೆ ಕೂಡಿ ನಡೆಯುವದು.

ಉದ್ಯೋಗ ಧಂದೆಗಳಲ್ಲಿ ಈ ವರ್ಷ ಆರನೆಯ ಗುರುವು ನೌಕರದಾರರಿಗೆ ಉದ್ಯೋಗಸ್ಥರಿಗಿಂತ ಹೆಚ್ಚು ಸುಖಕರನೂ, ತಾತ್ಕಾಲಿಕ ಮತ್ತು ಭಾವೀ ಉತ್ಕರ್ಷಕ್ಕೆ ಪೋಷಕವಾಗುವಂತಹ ಘಟನೆಗಳಿಗೆ ಅನುಕೂಲನೂ ಆಗಿದ್ದರೆ ಅವನು ೭ನೆಯವನಾದ ನಂತರ ಮಾತ್ರ ಎಲ್ಲರ ಉತ್ಕರ್ಷಕ್ಕೂ ಲಾಭಕಾರಕನಾಗುವನು. ಶ್ರಮಜೀವಿಗಳಿಗಿಂತ ಬುದ್ಧಿಜೀವಿ ಉದ್ಯೋಗಸ್ಥರಿಗೆ ಈ ಸಲ ವಿಶೇಷ ಅನುಕೂಲವಾಗಿದೆ. ನೌಕರದಾರರಿಗೆ ಸಪ್ಟೆಂಬರ್ ೨೧ ರ ವೊದಲು ಅಥವಾ ಅಗಸ್ಟ್ ೭ ರಿಂದ ಅಕ್ಟೊಬರ್ ೯ ರ ವರೆಗಿನ ಅವಧಿಯಲ್ಲಿ ನಿಶ್ಚಿತ ಬಡತಿ ದೊರೆಯುವದು. ಬದಲಿಯಾದರೆ ಅದು ಮನಸ್ಸಿಗೊಪ್ಪಿತ ಸ್ಥಳಕ್ಕೆ ಮತ್ತು ಅಲ್ಲಿ ಬೇಗ ಲೋಕಪ್ರಿಯತೆಯು ದೊರೆಯುವುದು. ಗಳಿಕೆಯ ಮಾನದಿಂದ ಆಗಬೇಕಾದಷ್ಟು ಸಂಗ್ರಹ ಸಾಧ್ಯವಾಗದಿದ್ದರೂ ಗೊತ್ತುಪಡಿಸಿದಷ್ಟು ವೆಚ್ಚವನ್ನು ಮಾತ್ರ ವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸಲು ಸಾಧ್ಯವಾಗುವದು. ೩ನೆಯ ಅಂದರೆ ಪರಾಕ್ರಮ ಸ್ಥಾನದಲ್ಲಿರುವ ರಾಹುವಿನಿಂದಾಗಿ ಉತ್ಸಾಹವೃದ್ಧಿಯಾಗುವದಲ್ಲದೆ ಸಾಹಸ ಮತ್ತು ಧೈರ್ಯದ ಕಾರ್ಯಗಳಲ್ಲಿ ಉತ್ತಮ ಯಶಸ್ಸು ದೊರೆಯುವದು. ಯಾತ್ರಾಯೋಗ ಕಡಿಮೆಯೇ ಆದರೂ ಮಹತ್ವದ ಕೆಲಸಗಳಿಗಾಗಿ ಒಂದೆರಡು ಸಲ ದೂರದ ಪ್ರವಾಸ ಕೈಕೊಳ್ಳಬೇಕಾಗಬಹುದು. ಸೋದರರೊಂದಿಗೆ ಅಷ್ಟಾಗಿ ಕೂಡಿನಡೆಯುವದಿಲ್ಲವಾದರೂ ಇತರ ಆಪ್ತರೊಂದಿಗೆ ಮಾತ್ರ ಚನ್ನಾಗಿ ಹೊಂದುವದು. ಮಿತ್ರರಲ್ಲಿ ಒಬ್ಬನಿಂದ ಮಹತ್ವದ ಕಾರ್ಯವೊಂದರಲ್ಲಿ ದೊಡ್ಡ ಸಹಾಯ ಸಿಕ್ಕುವದು. ಉತ್ತಮ ವಾಹನಸುಖ ದೊರೆಯುವದಲ್ಲದೆ ಸೇವಕರು ಹಾಗು ಆಶ್ರಿತರು ಚೆನ್ನಾಗಿ ವರ್ತಿಸುವರು.

ದಾವೆ, ಫಿರ್ಯಾದಿ ಅಥವಾ ಇತರ ಸ್ಪರ್ಧೆಯ ಕೆಲಸಗಳಲ್ಲಿ ನಿರ್ಣಯ ಜನೆವರಿ ೨೨ ರಿಂದ ಎಪ್ರಿಲ್ ೧, ಜುಲೈ ೫ ರಿಂದ ಅಗಸ್ಟ್ ೨೭ ಅಥವಾ ಅಕ್ಟೋಬರ್ ೯ರ ನಂತರ ದೊರೆತರೆ ನಿಮಗೆ ಪೂರ್ಣ ಯಶಸ್ಸು ದೊರೆಯುವುದು. ಆದರೆ ಇತರ ಕಾಲದಲ್ಲಾದರೆ ನಿಮ್ಮ ವಿರುದ್ಧವಾಗಬಹುದಲ್ಲದೆ, ನಿಮಗೆ ನೋವುಂಟುಮಾಡಲೂಬಹುದು.

ಈ ರಾಶಿಯ ಗರ್ಭವತಿಯರು ೬ನೆಯ ಗುರುವಿರು

ವಾಗ ಪ್ರಸೂತರಾದರೆ ಬಹುತರರಿಗೆ ಕನ್ಯಾಜನನವಾಗುವ ಸಂಭವವಿದ್ದರೆ ೭ನೆಯ ಗುರುವು ಬಂದ ನಂತರವಾದರೆ ಪುತ್ರಲಾಭದ ಯೋಗವಿದೆ. ಹೆರಿಗೆ ಯಾವಾಗಾದರೂ ಕಷ್ಟಕರವೆನಿಸುವದಿಲ್ಲ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಗುರುವು ೬ನೆಯವನಿರುವಾಗ ಆದರೆ ಅವರಿಗೆ ಉತ್ತೀರ್ಣರಾಗುವ ಮಟ್ಟಿಗೆ ಗುಣಗಳು ದೊರೆಯಬಹುದು; ಆದರೆ ಅದೇ ೭ನೆಯ ಗುರು ಬಂದ ನಂತರವಾದರೆ ಉತ್ತಮ ಗುಣಗಳು ದೊರೆತು ಹೆಚ್ಚಿನ ಶ್ರೇಣಿಯಲ್ಲೂ ಉತ್ತೀರ್ಣರಾಗಬಹುದು.

ಮೀನ

ಈ ರಾಶಿಯವರಿಗೆ ಈ ವರ್ಷ ಪ್ರತಿಯೊಂದು ಕಾರ್ಯದಲ್ಲೂ ತುಸು ವಿಲಂಬ ಹಾಗೂ ಹೆಚ್ಚು ಶ್ರಮವುಂಟಾದರೂ ಔದ್ಯೋಗಿಕ ದೃಷ್ಟಿಯಲ್ಲಿ ಒಳ್ಳೆಯ ಪ್ರಗತಿಪರವೂ ಲಾಭದಾಯಕವೂ ಆಗಿದೆಯೆಂಬುದು ನಿಶ್ಚಿತ.

ಕುಂಭದಂತೆಯೆ ಈ ರಾಶಿಗೂ ಸದ್ಯ ಸಾಡೇಸಾತಿ ಇದ್ದು ಇದೀಗ ಅದರ ಮಧ್ಯಭಾಗದಲ್ಲಿದೆ. ಈ ಮಧ್ಯ ಭಾಗ ಈಗ ಮಾತ್ರ ಪ್ರಾರಂಭವಾಗಿದ್ದು ಶನಿಯು ಇದೇ ರಾಶಿಯಲ್ಲಿ ಮೊದಲನೆಯವನಾಗಿ ಅಂದರೆ ಜನ್ಮಸ್ಥನಾಗಿದ್ದಾನೆ. ಅವನು ಈ ರಾಶಿಯ ಶುಭ ಸ್ಥಾನವಾದ ಏಕಾದಶ ಅಂದರೆ ಲಾಭಸ್ಥಾನ ಹಾಗು ಅಶುಭಸ್ಥಾನವಾದ ದ್ವಾದಶ ಅಂದರೆ ವ್ಯಯಸ್ಥಾನಗಳೆರಡರ ಅಧಿಪತಿಯೂ ಆಗಿರುವನಾದರೂ ಮೀನವು ಅವನ ಮಿತ್ರರಾಶಿಯಾಗಿರುವುದರಿಂದ ಸಾಡೇಸಾತಿಯಿದ್ದರೂ ಅವನು ತೀವ್ರ ತರಹದ ಅಶುಭಫಲಗಳನ್ನು ಕೊಡದೆ ತೀರ ಸೌಮ್ಯನಾದವನ್ನು ಮಾತ್ರ ನೀಡುತ್ತಾನೆಂದು ತಿಳಿಯಬೇಕು. ಅಲ್ಲದೆ ಈ ರಾಶಿಸ್ವಾಮಿ ಗುರುವು ಮೊದಲಿನ ಹತ್ತು ತಿಂಗಳು, ಅಂದರೆ ಸಪ್ಟೆಂಬರ್ ೪ರ ವರೆಗೆ ಐದನೆಯವನಾಗಿ ಕರ್ಕದಲ್ಲಿ ಉಚ್ಚನಿರುವುದರಿಂದ ಅವರಿಗೆ ಆರೋಗ್ಯ ಬಹಳ ಉತ್ತಮವಾಗಿರುವುದರಲ್ಲಿ ಎಷ್ಟೂ ಸಂಶಯಕ್ಕೆ ಆಸ್ಪದವಿಲ್ಲ. ಅನಂತರ ಮಾತ್ರ ಅವನು ೬ನೆಯ ಅಂದರೆ ರೋಗಸ್ಥಾನಕ್ಕೆ ಬರುವುದರಿಂದ ತುಸು ಕಿರುಕಳ ಅಸ್ವಾಸ್ಥ್ಯಗಳುಂಟಾಗುವ ಸಂಭವವಿದೆ. ಅದರಂತೆಯೆ, ಎರಡನೆಯ ಅಂದರೆ ಕುಟುಂಬ ಸ್ಥಾನದಲ್ಲಿ ರಾಹುವಿರುವದರಿಂದ ಮನೆಯಲ್ಲಿಯ ಜನರೊಂದಿಗೆ ಮೇಲಿಂದಮೇಲೆ ಕಲಹವುಂಟಾಗುತ್ತಲೇ ಇರುವುದು ಹಾಗು ಪ್ರತಿಯೊಬ್ಬರೂ ತಮ್ಮದೇ ಹಟ ನಡೆಸುವದಕ್ಕಾಗಿ ನಿರರ್ಥಕ ವೆಚ್ಚ ಮಾಡುವದು ಮಾತ್ರವಲ್ಲ, ಬೇರೆಯವರಿಗೆ ವೆಚ್ಚ ಕಡಿಮೆ ಮಾಡಲು ಉಪದೇಶವೀಯುವರು. ಆದರೆ ಇದನ್ನುಳಿದು ಇತರ ವಿಷಯಗಳಲ್ಲಿ ಒಳ್ಳೆಯ ದೇಹಸುಖ ದೊರೆಯುವದಲ್ಲದೆ ಇಚ್ಛಿತ ಸಂಗತಿಗಳಲ್ಲಿ ಬಹಳಷ್ಟು ಈಡೇರುವವು. ಗುರು ೫ನೆಯವನೆ ಇರಲಿ ೬ನೆಯವನೆ ಇರಲಿ ಮನಸ್ಸಿನ ಉತ್ಸಾಹ ಮಾತ್ರ ಯಾವಾಗಲೂ ಉತ್ತಮವಾಗಿರುವದು.

ಎರಡನೆಯ ರಾಹುವಿನಿಂದಾಗಿ ಮನೆತನದಲ್ಲಿಯ ಇತರರಂತೆಯೆ ಹೆಂಡತಿಯೊಂದಿಗೆ ಸಹ ಮೇಲಿಂದ ಮೇಲೆ ಮತಭೇದದ ಹಾಗು ಕಲಹದ ಪ್ರಸಂಗಗಳು ಏರುಪಡುವರೂ ವರ್ಷಾರಂಭದಲ್ಲಿಯೆ ಭಾರ್ಯೇಶ ಬುಧನು ಭಾಗ್ಯಸ್ಥಾನದಲ್ಲಿದ್ದು ಅವನು ರಾಶಿಸ್ವಾಮಿ ಗುರುವಿನಿಂದ ದೃಷ್ಟನಾಗಿರುವದರಿಂದ ಉಭಯತರಲ್ಲಿಯ ಪ್ರೇಮಕ್ಕೆ ಎಷ್ಟೂ ವ್ಯತ್ಯಯವೂ ಉಂಟಾಗದೆಯೇ ಅದು ಮೊದಲಿನಂತೆ ಉತ್ತಮವಾಗಿರುವದು ಮಾತ್ರವಲ್ಲ, ಮಹತ್ವದ ವಿಚಾರಗಳಲ್ಲಿ ಇಬ್ಬರದೂ ಸಹಮತವೇ ಆಗುವದು. ಆದರೆ ಈ ಸ್ಥಾನದ ಮೇಲೆ ಶನಿಯ ದೃಷ್ಟಿಯಿರುವದರಿಂದ ಇಬ್ಬರಲ್ಲಿ ಯಾರೊಬ್ಬರು ಬೇರೂರಿಗೆ ಹೋಗಬೇಕಾಗಿ ಬಂದು ಒಂದೆರಡು ಸಲ ೧೫-೨೦ ದಿನಗಳಷ್ಟು ಕಾಲ ಸಹವಾಸ ತಪ್ಪಬಹುದು. ಆದರೆ ಶನಿಯ ದೃಷ್ಟಿಯಿರುವದು ಈ ಮಿತ್ರರಾಶಿಯ ಮೇಲೆಯೇ ಆದ್ದರಿಂದ ಈ ಗ್ರಾಮಾಂತರಕ್ಕೆ ಕಾರಣ ಅನಿಷ್ಟವಾಗಿರದೆಯೆ ಇಷ್ಟವೇ ಆಗಿರುವದು.

ಈ ರಾಶಿಯ ಅವಿವಾಹಿತರ ವಿವಾಹವು ಈ ಸಲ ಆಗುವದಿದ್ದಲ್ಲಿ ಅದಕ್ಕೆ ೫ನೆಯ ಗುರುವು ಪೂರ್ಣ ಅನುಕೂಲವಿದ್ದು ದೊರೆಯುವ ಮನೆತನ ಒಳ್ಳೆಯದ್ದಾಗಿರುತ್ತದೆ ಮತ್ತು ಅನಾಯಾಸ ಮದುವೆ ನಿಶ್ಚಯವಾಗಿ ಪೂರ್ಣವಾಗುತ್ತದೆ. ಅಲ್ಲದೆ ಈ ರಾಶಿಯ ವಧೂವರರಿಗೆ ಅವರ ಅಪೇಕ್ಷೆಗಿಂತ ರೂಪಗುಣಗಳೆರಡರಲ್ಲೂ ಹೆಚ್ಚು ಉತ್ತಮ ಜೊತೆ ದೊರೆಯುತ್ತದೆ.

ಈ ಸಲ ನಿಮ್ಮ ಮಗ ಅಥವಾ ಮಗಳ ಮದುವೆ ಮಾಡುವದಿದ್ದರೆ ಅದಕ್ಕೆ ಹೆಚ್ಚು ಪ್ರಯತ್ನ ಮಾಡಬೇಕಾಗದೆಯೆ ಅಲ್ಪಾಯಾಸದಿಂದ ಹಾಗು ಅಪೇಕ್ಷೆಗಿಂತಲೂ ಉಚ್ಚಸ್ಥಿತಿಯ ಮನೆತನದೊಂದಿಗೆ ಹೊಂದಿ ೪-೬ ವಾರಗಳಲ್ಲಿ ಮದುವೆಯೂ ಮುಗಿದುಹೋಗುವದು. ಅಲ್ಲದೆ ಸೊಸೆ ಇಲ್ಲವೆ ಅಳಿಯ ಸಕಲ ದೃಷ್ಟಿಯಿಂದಲೂ ಉತ್ತಮರಾಗಿರುತ್ತಾರೆ ಮಾತ್ರವಲ್ಲ, ಆ ಬಗ್ಗೆ ಇತರರಿಗೆ ಈರ್ಷೆಯುಂಟಾಗಲೂಬಹುದು. ಅದರಂತೆಯೆ ಇದು ಮಕ್ಕಳೆಲ್ಲರ ಉನ್ನತಿಗೆ ಅತ್ಯಂತ ಪ್ರಗತಿಪರ ವರ್ಷವಾಗಿದೆ. ಒಬ್ಬಿಬ್ಬರದಂತೂ ಭಾರೀ ಉತ್ಕರ್ಷವಾಗುವದು. ಅವರೆಲ್ಲ ನಿಮ್ಮೊಂದಿಗೆ ಚೆನ್ನಾಗಿಯೆ ವರ್ತಿಸುವರಾದರೂ ೮ನೆಯ ಕೇತುವಿನಿಂದಾಗಿ ನಿಮ್ಮ ಮನಸ್ಸಿಗೆ ಮಾತ್ರ ಅದಾವದೂ ಹಿಡಿಸುವದಿಲ್ಲ.

ಸಾಡೇಸಾತಿಯಿದ್ದರೂ ಉದ್ಯೋಗ ಧಂದೆಗಳಿಗೂ ಈ ವರ್ಷ ಉತ್ತಮವೇ ಆಗಿದೆ. ಯಾಕೆಂದರೆ ವರ್ಷಾರಂಭದಲ್ಲಿಯೆ ಲಾಭೇಶ ಶನಿಯು ದೇಹಸ್ಥಾನದಲ್ಲಿ; ದೇಹೇಶ ಮತ್ತು ಕರ್ಮೇಶ ಗುರು ಉಚ್ಚನಾಗಿ ಐದನೆಯ ಶುಭಸ್ಥಾನದಲ್ಲಿದ್ದು ದೇಹ, ಭಾಗ್ಯ, ಲಾಭ ಈ ಮೂರು ಸ್ಥಾನಗಳ ಮೇಲೆ ಅವನ ಪೂರ್ಣದೃಷ್ಟಿ; ಅದರಂತೆಯೆ ಭಾಗ್ಯೇಶ ಮಂಗಳನು ಆರನೆಯವನಾಗಿರುವದರಿಂದ ಅವನ ಪೂರ್ಣದೃಷ್ಟಿ ಭಾಗ್ಯಸ್ಥಾನದ ಮೇಲೆ, ಅದರಂತೆಯೆ; ಲಾಭೇಶ ಶನಿಯ ದೃಷ್ಟಿ ಪರಾಕ್ರಮ ಮತ್ತು ಕರ್ಮಸ್ಥಾನದ ಮೇಲೆ ಈ ರೀತಿ ಉತ್ಕರ್ಷಕಾರಕ ಯೋಗವುಂಟಾಗಿರುವದರಿಂದ ಉದ್ಯೋಗಸ್ಥರು, ನೌಕರದಾರರಿಬ್ಬರಿಗೂ ವಿಪುಲ ಲಾಭವಾಗುವುದು. ಉದ್ಯೋಗದ ಶಾಖೋಪಶಾಖೆಗಳನ್ನು ತೆರೆಯುವ ಯೋಗವೂ ಅನೇಕರಿಗೆ ಒದಗುವದು. ಉದ್ಯೋಗಸ್ಥರಿಗೆ ತಮ್ಮ ಉದ್ಯೋಗದಲ್ಲಿ ಅವರು ತೋರುವ ಪ್ರಾವೀಣ್ಯ, ಪ್ರಾಮಾಣಿಕತೆ ಹಾಗು ಸಾಹಸಗಳ ಬಗೆಗೆ ಸರ್ವತ್ರ ಪ್ರಶಂಸೆ ದೊರೆತರೆ ನೌಕರದಾರರ ಮೇಲೆ ವರಿಷ್ಠರ ಮರ್ಜಿ ಸಾಕಷ್ಟಿದ್ದು ಭಾವೀ ಉತ್ಕರ್ಷಕ್ಕೆ ಅನುಕೂಲವಾದಂತಹ ಸಹಾಯ ಅವರಿಂದ ದೊರೆಯುವುದು. ಆದರೆ ಕೈಕೆಳಗಿನವರು ಮಾತ್ರ ತೀರ ಹೀನಾಯವಾಗಿ ನಿಮ್ಮ ತಪ್ಪು ಹುಡುಕುವದರಲ್ಲೇ ತೊಡಗಿರುವರಲ್ಲದೆ ನಿಮ್ಮನ್ನು ಹಿಂದೆಳೆಯಲು ಶಕ್ಯವಿದ್ದಷ್ಟು ಪ್ರಯತ್ನ ಮಾಡುವರು. ಆದರೂ ವರ್ಷಾರಂಭದಲ್ಲಿರುವ ಆರನೆಯ ಅಂದರೆ ರಿಪುಸ್ಥಾನದ ಗುರುವಿನಿಂದಾಗಿ ಕೊನೆಗೆ ನಿಮ್ಮ ವಿರೋಧಿಗಳು ಅಪಯಶಕ್ಕೀಡಾಗಿ ತಲೆ ತಗ್ಗಿಸಬೇಕಾಗುವದು ಖಂಡಿತ. ಗುರುವು ಏಳನೆಯವನಿರುವಾಗ ಬದಲಿಯಾದರೆ ಅದು ಪುಣ್ಯಕ್ಷೇತ್ರವೆಂದು ಹೆಸರಾಂತ, ಆದರೆ ಪಾಪದೃಷ್ಟಿಯಿಂದ ತುಸು ಅನನುಕೂಲ ಸ್ಥಳಕ್ಕೆ ಆಗುವುದು; ಆದರೆ ಅದೇ ಆರನೆಯ ಗುರುವಿರುವಾಗಲಾದರೆ ಒಳ್ಳೆಯ ಅನುಕೂಲ ಸ್ಥಳಕ್ಕಾಗುವುದು. ಈ ಸಲ ಹಣ ವಿಪುಲವಾಗಿಯೆ ದೊರೆಯುವುದಾದರೂ ಧನಸ್ಥಾನದ ರಾಹುವಿನಿಂದಾಗಿ ವೆಚ್ಚವೂ ಮಿತಿಮೀರುವುದು, ಹಾಗು ಅದರಿಂದಾಗಿಯೆ ಸಂಗ್ರಹ ಸಹಸಾ ಸಾಧ್ಯವಾಗುವುದಿಲ್ಲ. ಅಲ್ಲದೆ ಕಳವಿನಿಂದ ಅಥವಾ ಯಾರೊ ಮೋಸಮಾಡುವುದರಿಂದ ತುಸು ಹಾನಿಯುಂಟಾಗುವ ಸಂಭವವೂ ಇದೆ. ವಾಹನಸುಖ ತುಸು ದಗೆದಗಿಯಿದೆ. ಅನೇಕ ವಿಚಿತ್ರ ಹಾಗು ಭಯಪ್ರದ ಸ್ವಪ್ನಗಳನ್ನು ಕಾಣುವಿರಿ. ೫ನೆಯ ಗುರುವಿರುವಾಗ ಪ್ರಸಿದ್ಧ ಯಾತ್ರೆಯೊಂದನ್ನು ಕೈಕೊಳ್ಳಬಹುದಾದ ಯೋಗವಿದೆ, ಮತ್ತು ಧಾರ್ಮಿಕ ಅಥವಾ ಮಂಗಲಕಾರ್ಯದ ಯೋಗವೂ ಇದೆ. ಸರಕಾರಿ ಕೆಲಸಗಳಿಗೆ ೫ನೆಯ ಗುರುವಿಗಿಂತ ೬ನೆಯ ಗುರುವೇ ಹೆಚ್ಚು ಅನುಕೂಲನಾಗಿದ್ದಾನೆ. ಅದರಂತೆಯೇ ಪ್ರತ್ಯಕ್ಷ ಭೆಟ್ಟಿಗೆ ಸಹ ಅದೇ ಉತ್ತಮ ಕಾಲವಾಗಿದೆ.

ದಾವೆ, ಫಿರ್ಯಾದಿ ಅಥವಾ ಇತರ ಸ್ಪರ್ಧೆಯ ಕೆಲಸಗಳಲ್ಲಿ ನಿರ್ಣಯವು ಜನೆವರಿ ೨೨ರ ವರೆಗೆ ಅಥವಾ ಎಪ್ರಿಲ್ ೧೭ರಿಂದ ಜುಲೈ ೫ರ ವರೆಗೆ ಅಥವಾ ಅಗಸ್ಟ್ ೨೭ರಿಂದ ಅಕ್ಟೋಬರ್ ೧೪ರ ವರೆಗಿನ ಅವಧಿಯಲ್ಲಿ ದೊರೆತರೆ ಪೂರ್ಣ ಯಶಸ್ಸು ದೊರೆಯುವದು; ಆದರೆ ಇನ್ನುಳಿದ ಸಮಯದಲ್ಲಿ ನಿಮಗದು ತೀರ ಪ್ರತಿಕೂಲವೇ ಆಗಿರುವದು.

ಈ ರಾಶಿಯ ಗರ್ಭವತಿಯರು ೫ನೆಯ ಗುರುವಿರುವಾಗ ಪ್ರಸೂತರಾದರೆ ಹೆರಿಗೆ ಅತ್ಯಂತ ಸುಲಭವಾಗಿ ಬಹುತರರಿಗೆ ಕನ್ಯಾಜನನದ ಯೋಗವಿದ್ದು ೬ನೆಯ ಗುರುವಿರುವಾಗಲಾದರೆ ಹೆರಿಗೆ ಕಷ್ಟವೆನಿಸಿದರೂ ಪುತ್ರಪ್ರಾಪ್ತಿ ಮಾತ್ರ ನಿಶ್ಚಿತ.

ಈ ರಾಶಿಯ ವಿದ್ಯಾರ್ಥಿಗಳ ಪರೀಕ್ಷೆ ಗುರುವು ೫ನೆಯವನಿರುವಾಗ ಅಂದರೆ ಸಪ್ಟೆಂಬರ್ ೪ರ ಮೊದಲು ಆದರೆ ಅವರು ಉತ್ತೀರ್ಣರಾಗುವದರಲ್ಲಿ ಎಷ್ಟೂ ಸಂದೇಹವಿಲ್ಲ ಮಾತ್ರವಲ್ಲ, ಜನೆವರಿ ೨೨ರ ಮೊದಲು ಅಥವಾ ಎಪ್ರಿಲ್ ೧೭ ರಿಂದ ಜುಲೈ ೫ರ ವರೆಗಿನ ಅವಧಿಯಲ್ಲಾದರೆ ಉತ್ತಮ ಶ್ರೇಣಿಯನ್ನು ಸಹ ಪಡೆಯುವರು.

॥ ಶುಭಂ ಭವತು ॥

ಲಕ್ಷ್ಮಿಯ ಮುದ್ರಿಕೆಗಳು

ಗಿ ರೀ ಶ್ರೀ ಬ —

ಲಕ್ಷ್ಮಿ ಸಿಕ್ಕುವುದು ಸುಲಭವಲ್ಲ.

ಅವಳ ಜೀವನ ಚರಿತ್ರ ದೊರೆಯುವುದು ಇನ್ನೂ ದುರ್ಲಭ.

ಲಕ್ಷ್ಮಿಯು ಸ್ತ್ರೀ, ಸಾಲದ್ದಕ್ಕೆ ದೇವತೆ!

ಹೆಣ್ಣಿನ ಕತೆಯ ದೇವತೆಗಳಿಗೆ ತಿಳಿಯದು. ಇನ್ನು ಹೆಣ್ಣು ದೇವತೆಯ ಚರಿತ್ರ ಮಾನವನಿಗೆ ಹೇಗೆ ಗೊತ್ತಾದೀತು! ದೇವತೆಗಳೆಲ್ಲರೂ ಪರೋಕ್ಷ ಪ್ರಿಯರು. ಲಕ್ಷ್ಮಿಯೋ ಬಹು ಚಂಚಲೆ!

ದೇವತೆಗಳನ್ನು ಹುಡುಕುವುದು ಬಹಳ ಕಷ್ಟದ ಕೆಲಸ. ಅದಕ್ಕೆ ಕಾಯಬೇಕು, (ತಪಸ್) ಹೀಗೆ ತಪಿಸಿದರೂ ಹುಡುಕಬೇಕಾದ ದೇವತೆಯ ಅನುಗ್ರಹ ಇಲ್ಲದೆ ಸಿಕ್ಕುವಹಾಗೆ ಇಲ್ಲವಂತೆ!

ದೇವತೆಗಳನ್ನು ಎಲ್ಲಿ ಹುಡುಕುವುದು? ಎಲ್ಲಿಯಾದರೂ ಒಂದು ಕಡೆಗೆ ಇರುವವರನ್ನು ಯಾರೂ ಹುಡುಕಬಹುದು. ಎಲ್ಲಕಡೆಗೆ ಇರುವವರನ್ನು ಹುಡುಕುವುದು ಬಹು ಕಷ್ಟ!

ಪುರಾಣಗಳು ದೇವತೆಗಳ ರಂಗಭೂಮಿ. ವೇದಗಳು ಅವರ ಆಡುಂಬೊಲ. ಅಲ್ಲಿಯೇ ನೋಡಬೇಕು. ಆದರೆ ಅಲ್ಲಿಯೂ ಒಂದು ತೊಡಕಿದೆ. ಪುರಾಣ ರಂಗದಲ್ಲಿಯ ವೇಷಭೂಷಣ,ಬೆಡಗು ಬಿನ್ನಾಣಗಳು ವೇದದಲ್ಲಿರುವುದಿಲ್ಲ. ಅದ್ದರಿಂದ ಪುರಾಣದಲ್ಲಿ ದೇವತೆಗಳ ಪರಿಚಯ ಬೆಳೆಸಿಕೊಂಡವರು ವೇದಗಳಲ್ಲಿ ಯಥಾವತ್ತಾಗಿ ಅವರನ್ನು ನೋಡೇವೆಂದರೆ ಸಾಧ್ಯವಾಗದು.

ಈ ದೃಷ್ಟಿಯಿಂದ ಲಕ್ಷ್ಮಿಯ ಕತೆ ಬಹಳ ಕುತೂಹಲಕಾರಿಯಿದೆ. ವೇದಗಳಲ್ಲಿ ಋಕ್ ಹಿರಿದು, ಪ್ರಾಚೀನ ಎಂದು ಬಹುಜನದ ಧಾರಣೆ. ಅಲ್ಲಿ ಲಕ್ಷ್ಮಿ ನಡೆದಾಡಿದ ಹೆಜ್ಜೆಗಳಿವೆ. ಅವಳಿಗೆ ಅಲ್ಲಿ ಶ್ರೀ ಎಂಬ ಹೆಸರೂ ಇದೆ.

"ಹಿರಣ್ಯವರ್ಣಾಂ ಹರಿಣೀಂ
ಸುವರ್ಣರಜತಸ್ರಜಾಂ
ಚಂದ್ರಾಂ ಹಿರಣ್ಮಯೀಂ
ಲಕ್ಷ್ಮೀಂ ಜಾತವೇದೊ ಮ ಆವಹ"

ಚೊಕ್ಕ ಚಿನ್ನದ ಬಣ್ಣ, ಬೆಳ್ಳಿಬಂಗಾರದ ಮಾಲೆಗಳು, ಶಾಂತವಾದ ತಿಂಗಳ ಬೆಳಕಿನ ಕಳೆಯಿರುವ ಈ ಲಕ್ಷ್ಮಿ

"ತೃಪ್ತಾಂ ತರ್ಪಯಂತೀಂ
ಪದ್ಮೇ ಸ್ಥಿತಾಂ ಪದ್ಮವರ್ಣಾಂ"

ಹೊಂದಾವರೆಯ ಮೈಬಣ್ಣದ ಲಕ್ಷ್ಮಿ ತಾವರೆಯಲ್ಲಿ ನೆಲೆಸಿದ್ದಾಳೆ. ತಾನು ತೃಪ್ತಳು, ತನ್ನ ನಂಬಿದವರನ್ನು ತೃಪ್ತಿಪಡಿಸುವವಳು.

ಇಲ್ಲಿ ಲಕ್ಷ್ಮಿಯ ಬೇಕು ಬೇಡಗಳನ್ನು ಋಷಿ ಹೇಳುತ್ತಾನೆ, ಸಂಬಂಧ ಸೂತ್ರಗಳ ಪರಿಚಯವನ್ನೂ ಕೊಡುತ್ತಾನೆ.



ಗಜಲಕ್ಷ್ಮಿ
(ಸಾಂಬ ವಿಗ್ರಹ)

ಲಕ್ಷ್ಮಿಯು ಹಸ್ತಿನಾದ ಪ್ರಬೋಧಿನಿ. ಆನೆಯ ಕೂಗಿನಿಂದ ಏಳುವವಳು, ಇಲ್ಲವೆ ಎಚ್ಚರಿಸುವವಳು. ಬಿಲ್ವ ಇವಳ ಅಚ್ಚುಮೆಚ್ಚಿನ ಮರ. ಕರ್ದಮ ಎಂಬ ವ್ಯಕ್ತಿಗೆ ಈಕೆ ಸಂಬಂಧಿಕಳು. ಶ್ರೀ— ಎಂಬುದು ಇನ್ನೊಂದು ಹೆಸರು ಈಕೆಗೆ.

ವಿಷ್ಣುವಿಗೂ ಈಕೆಗೂ ಏನು ಸಂಬಂಧ ಎಂಬುದರ ವಿಷಯದಲ್ಲಿ ಋಗ್ವೇದ ಸುಮ್ಮನಿದೆ. ಆದರೆ ಯಜುರ್ವೇದ ಇದಕ್ಕೂ ವಿಚಿತ್ರವಾದ ಕೆಲ ಅಂಶಗಳನ್ನು ಹೇಳುತ್ತದೆ.

ಶ್ರೀ ಎಂಬವಳು ಬೇರೆ—
ಲಕ್ಷ್ಮಿ ಎಂಬವಳು ಬೇರೆ.

ಅವರಿಬ್ಬರೂ ವಿಷ್ಣುವಿನ ಕೈಹಿಡಿದ ಹೆಂಡಂದಿರು. ಯಜುರ್ವೇದದಲ್ಲಿ ಬಂದ ಈ ಲಕ್ಷ್ಮೀವಿಷ್ಣುಗಳ ಸಂಬಂಧ ಮುಂದೆ ಮನೆಮಾತಾಯಿತು.

ಋಗ್ವೇದದಲ್ಲಿಯೆ ಆಗಲಿ ಯಜುರ್ವೇದದಲ್ಲಿಯೆ ಆಗಲಿ ಅವಳು ಹಣಕಾಸಿನ ಶಾಖೆಯನ್ನು ನಿರ್ವಹಿಸುವ ದೇವತೆಯಾದದ್ದು ಕಾಣುವುದಿಲ್ಲ. ಸೌಂದರ್ಯ ಹಾಗೂ ಸಮೃದ್ಧಿಗಳನ್ನು ತತ್ತ್ವತಃ ಅವಳು ಪ್ರತಿನಿಧಿಸುತ್ತಿದ್ದಳು.

ವೇದಗಳಲ್ಲಿ ಮೊದಮೊದಲು ಲಕ್ಷ್ಮಿ ಉಜ್ವಲ ಹಾಗು ಶಾಂತಪ್ರಕಾಶದ ದೇವತೆಯಾಗಿ ಜೀವನದಲ್ಲಿ ಶಾಂತಿ ಹಾಗು ಉಜ್ವಲತೆಯನ್ನು ಪ್ರತಿನಿಧಿಸುವ ತತ್ತ್ವವಾಗಿದ್ದಳು. ಇನ್ನೂ ವಿಶ್ಲೇಷಿಸಿ ವಿಚಾರಿಸಿದಾಗ ಮೊದಲು ಪ್ರಕಾಶತತ್ವವಾಗಿ ಕಂಡ ಇವಳು ಬಳಿಕ ನೀರಿನ ಸೆಳವಿಗೆ ಬಿದ್ದಳು ಎಂದು ತೋರುತ್ತದೆ. ಅಂತೆಯೆ ಇವಳು ಕಮಲೆ, ಜಲಜೆಯಾದಳು. ನೀರು ನೀರಜ ನೀರದಗಳು ಅವಳ ಸಮೀಪದ ವಸ್ತುಗಳಾದವು.

ಭೃಗು ಬ್ರಹ್ಮನ ಒಬ್ಬ ಮಾನಸಪುತ್ರ. ಅವನಿಗೆ

ಖ್ಯಾತಿ ಎಂದು ಪ್ರಸಿದ್ಧಳಾದ ಧರ್ಮಪತ್ನಿ. ಈ ದಂಪತಿಗಳ ಹೊಟ್ಟೆಯಲ್ಲಿ ಈ ಲಕ್ಷ್ಮಿ ಜನಿಸಿದಳು. ಆಗ ಈಕೆ ಭಾರ್ಗವಿಯಾದಳು. ಭೃಗು ಈಕೆಯನ್ನು ವಿಷ್ಣುವಿಗೆ ಕೊಟ್ಟು ಮದುವೆ ಮಾಡಿದ.

ಲಕ್ಷ್ಮಿ ಜೀವನದಲ್ಲಿ ತುಂಬ ಸ್ವಾಭಿಮಾನಿಯಾದ ಮಹಿಳೆ. ಅವಳ ಕೋಪ ಮೂಗಿನ ತುದಿಯಮೇಲೆ. ಅವಳು ಜೀವನದಲ್ಲಿ ಅತ್ಯಂತ ಪ್ರಿಯತಮ ವಸ್ತು-ವಾದ ಗಂಡನನ್ನೆ ತೊರೆದೂ ಹೋದವಳು. ಈಕೆಗೆ ಗಂಡನಿಗೆ ಈ ಐಶ್ವರ್ಯ ಕೊಟ್ಟವಳೂ ತಾನೇ ಎಂಬ ಗರ್ವವೂ ಇರಬಹುದು.

ಒಮ್ಮೆ ಲಕ್ಷ್ಮಿ ತನ್ನ ಪತಿಯ ಸೇವೆಯಲ್ಲಿರುವಾಗ ಅವಳ ತಂದೆ ಕೆಲಸದ ನಿಮಿತ್ತ ವಿಷ್ಣುವಿನ ಮನೆಗೆ ಬಂದ. ಭೃಗು ತನ್ನ ಅಳಿಯ ಹಾಗೂ ಮಗಳು



ಆಯಸಿಸ್

ತನ್ನನ್ನು ಆದರಿಸಲಿಲ್ಲವೆಂದು ಸಿಡಿಯಾದ. ತಪಸ್ವಿ ಬೇರೆ; ಕೋಪ ಹೆಚ್ಚು. ಒಂದು ಕ್ಷಣ ವಿಷ್ಣು ಮುಂದೆ ಬಂದು ಆದರಿಸಬಹುದೆಂದು ಕಾಯ್ದ. ಆತ ಬರಲಿಲ್ಲ. ಈತನ ಜಡೆಯ ಕೆಳಗಿದ್ದ ತಲೆ ಇನ್ನೂ ಕಾಯಿತು. ಹೋಗಿ ಕೋಪೋನ್ಮತ್ತನಾಗಿ ವಿಷ್ಣುವಿಗೆ ಒದ್ದು-ಬಿಟ್ಟ.

ಲಕ್ಷ್ಮಿಗೆ ತಡೆಯಲಿಲ್ಲ. ತಂದೆಯಾದರೂ ಬಾಯಿ ಬಿಟ್ಟಳು. ಸಿಕ್ಕಾಪಟ್ಟೆ ಶಪಿಸಿದಳು. ಗಂಡಸಾಗಿ ಎದೆಗೆ ಒದ್ದವನ ಸಮಾಚಾರ ತೆಗೆದುಕೊಳ್ಳದ ದುರ್ಬಲ ಎಂದು ಗಂಡನನ್ನು ಹೀಗಳೆದು ತಾನು ಮನೆ ಬಿಟ್ಟು ಹೋಗಿಬಿಟ್ಟಳು.

*

ಲಕ್ಷ್ಮಿ ಸಮುದ್ರರಾಜನ ಮಗಳು. ದೇವತೆಗಳು ದಾನವರು ಕೂಡಿ ಸಮುದ್ರ ಕಡೆವಾಗ ಹದಿನಾಲ್ಕು ರತ್ನ ಹುಟ್ಟಿದವು. ಅದರಲ್ಲಿ ಲಕ್ಷ್ಮಿ ಒಬ್ಬಳು.

*

ಒಂದು ಕತೆ ಈಕೆ ಬ್ರಹ್ಮನ ಮೊಮ್ಮಗಳು ಎಂದು ಹೇಳುತ್ತಿದ್ದರೆ ಇನ್ನೊಂದು ಕತೆ ಬ್ರಹ್ಮನೆ ಇವಳ ಮಗ ಎಂದು ಹೇಳುತ್ತಿದೆ. ಬ್ರಹ್ಮನ ಹೆಂಡತಿ ಸರಸ್ವತಿ. ಅವಳಿಗೆ ಈಕೆ ಅತ್ತೆಯೂ ಅಹುದು. ಸೊಸೆಯೂ ನಿಜ. ಇಷ್ಟು ವಿಚಿತ್ರ ಜೀವನ ಇವಳದು.

ಬ್ರಹ್ಮನಿಗೆ ಲಕ್ಷ್ಮಿ ಏನೇ ಆಗಿರಲಿ ಇವಳಿಗೆ ಹಣಕಾಸಿನ ಶಾಖೆಯನ್ನು ಒಪ್ಪಿಸುವಲ್ಲಿ ಈತನದೇ ಕೈವಾಡ. ಬ್ರಹ್ಮಯೋಜನೆಯ ಮೇರೆಗೆ ಇವಳಿಗೆ



ಮಧುರಾದ ವಿಗ್ರಹ

ಹಣಕಾಸಿನ ಶಾಖೆ ದೊರೆಯಿತು. ಸ್ವರ್ಗದ ಸಂಸತ್ತಿನಲ್ಲಿ ಶಾಖೆಯ ಹಂಚಿಕೆ ನಡೆದಾಗ ಬ್ರಹ್ಮನಂತಹ ದೇವ ವರಿಷ್ಠನಿಗೆ ಈ ಶಾಖೆ ತನ್ನ ಸಂಬಂಧಕರಿಗೇ ಇರಲಿ ಎನ್ನಿಸಿದ್ದರೆ ಆಶ್ಚರ್ಯವಲ್ಲ.

ಲಕ್ಷ್ಮಿಗೆ ಈ ಹಣಕಾಸಿನ ಶಾಖೆ ವಹಿಸಿಕೊಳ್ಳುವ ಪೂರ್ವದಲ್ಲಿ ಇರುವ ಮಹತ್ವ ಕಡಿಮೆ ಇರಲಿಲ್ಲ. ಒಂದು ದೃಷ್ಟಿಯಿಂದ 'ಅವಳು ಹಣಕಾಸನ್ನೂ ನಿಯಂತ್ರಿಸುತ್ತಲೇ ಇದ್ದಳು. ಆದರೆ ಈ ಶಾಖೆಯನ್ನು ನೇರವಾಗಿ ಕೈಗೆತ್ತಿಕೊಂಡಂದಿನಿಂದ ಇವಳ ಮಹತ್ವ ಅಗತ್ಯ ಹಲವು ವಿಧದಿಂದ ಬೆಳೆದವು. ಅಂದಿನಿಂದ ಇವಳ ಗಂಡ ವಿಷ್ಣುವನ್ನು ಲಕ್ಷ್ಮೀಪತಿ ಎಂದು ಗುರುತಿಸುವಂತಾಯಿತು.

ಲೋಕಸಭೆಯಲ್ಲಿ ಲಕ್ಷ್ಮಿಯ ಪಾತ್ರ ಮಹತ್ವ-ದ್ದಾಯಿತು. ಲೋಕದ ಚಿನ್ನದ ಮೇಲೆ ತನ್ನ ನಿಯಂತ್ರಣವನಿಟ್ಟ ಮೊದಲನೆ ಮಹಿಳಾ ಪ್ರಧಾನಿ ಯಾರೂ ಅಲ್ಲ ಲಕ್ಷ್ಮಿ! ಸರಸ್ವತಿಯು ಇವಳು ಸ್ವಲ್ಪ ಬಂಡವಲಶಾಹಿಯನ್ನು ಪುರಸ್ಕರಿಸುವವಳು ಎಂದು ಆರೋಪಿಸುತ್ತಾಳೆ.

ಒಮ್ಮೆ ಋಷಿಗಳು ಲಕ್ಷ್ಮಿಯ ಹತ್ತಿರ ಬಂದು ಕೈ ಮುಗಿದು ಕೇಳಿಕೊಂಡರು :

"ನಮ್ಮ ಮೇಲೆ ಅನುಗ್ರಹ ಮಾಡು, ಆಶೀರ್ವದಿಸು."

ಲಕ್ಷ್ಮಿ ಋಷಿಗಳತ್ತ ನಸುನಗೆ ಬೀರಿ ಹೇಳಿದಳು:

"ನೀವು ನನ್ನನ್ನು ಬೇಡುತ್ತೀರಿ. ನಾನು ಭರತ ಭೂಮಿಯಲ್ಲಿ ಪುಣ್ಯವಂತರ ಮನೆಯಲ್ಲಿ ಬಂದು ನಿಲ್ಲುತ್ತೇನೆ. ಹೆಂಡತಿಯ ಮೇಲೆ ಮುನಿಯುವವರ ಮನೆಯಲ್ಲಿ, ಅಣ್ಣ ತಮ್ಮಂದಿರ ಆಸ್ತಿ ಎತ್ತಿಹಾಕುವವರ ಮನೆಯಲ್ಲಿ ನಾನಿರುವದಿಲ್ಲ. ಪ್ರಜೆಗಳ ರಕ್ತ ಹೀರುವ ರಾಜರ ಹತ್ತಿರ ನಾನು ಇರಲಾರೆ. ದುಡಿಯದೇ ಇರುವ ಗಂಡಸಿನ ಹತ್ತಿರ, ಮಕ್ಕಳನ್ನು ನೋಡದ ಹೆಂಗಸಿನ ಹತ್ತಿರ ನಾನೆಂದಿಗೂ ಇರುವದಿಲ್ಲ"

ಇನ್ನೂ ಹಲವು ವಿಧದಿಂದ ತಾನೆಲ್ಲಿ ಇರುತ್ತೇನೆ. ಎಲ್ಲಿ ಇರುವದಿಲ್ಲ ಎಂಬ ಮಾತನ್ನು ಬ್ರಹ್ಮವೈವರ್ತ ಪುರಾಣದಲ್ಲಿ ಸ್ವತಃ ಹೇಳುತ್ತಾಳೆ.

ಸ್ಕಂದಪುರಾಣದಲ್ಲಿ ಲಕ್ಷ್ಮಿ ತನ್ನ ಬೇಕು-ಗಳನ್ನು ಹೇಳುತ್ತಾಳೆ.

"ಕೀರ್ತಿಧರ್ಮಗಳು ಇರುವಲ್ಲಿ ನಾನಿರುತ್ತೇನೆ, ತೋಳಿನಲ್ಲಿ ಕಸುವುಳ್ಳ ಗಂಡಸಿನೆದೆಯಲ್ಲಿ ರೂಪವಿರುವ ಯೌವನವತಿಯ ಪ್ರಾಯದಲ್ಲಿ ನಾನಿರುವೆ."

ವರಾಹಪುರಾಣದ ಒಂದು ಕಡೆಯಲ್ಲಿ "ತುಪ್ಪವಿಲ್ಲದವರ ಮನೆಯಲ್ಲಿ, ಚಿನ್ನವಿಲ್ಲದ

ಫಾರಚೂನಾ



ಕೋಶದಲ್ಲಿ, ವ್ಯದುತ್ವ ಇಲ್ಲದವರ ಭಾಷೆಯಲ್ಲಿ, ವಾತ್ಸಲ್ಯವಿಲ್ಲದ ಹೆಂಗಸಿನಲ್ಲಿ ಪೌರುಷವಿಲ್ಲದ ಗಂಡಸಿನಲ್ಲಿ ನಾನು ಇರುವುದಿಲ್ಲ" ಎಂದು ಲಕ್ಷ್ಮಿ ಹೇಳುತ್ತಾಳೆ.

ಮಹಾಭಾರತದಲ್ಲಿಯೇ ಜ್ಞಾನವೃದ್ಧರೆಂದು ಹೆಸರಾದ ಭೀಷ್ಮ ಲಕ್ಷ್ಮಿಯ ಬಗ್ಗೆ ಕೆಲ ಅನುಭವದ ಮಾತು ಹೇಳುತ್ತಾನೆ:

"ಮಹತ್ವಾಕಾಂಕ್ಷೆ ಇಲ್ಲದವನನ್ನು ಎಂದೂ ಲಕ್ಷ್ಮಿ ಮೆಚ್ಚುವದಿಲ್ಲ."

ಲಕ್ಷ್ಮೀ ಹೆಂಗಸು! ಸ್ತ್ರೀಯರ ವಿಷಯದಲ್ಲಿ ಅವಳಿಗೆ ತುಂಬ ಪಕ್ಷಪಾತ ಕಾಣುತ್ತದೆ. ಒಮ್ಮೆ ಗರ್ಗ ಎಂಬ ಋಷಿ ಅವಳನ್ನು ಕುರಿತು ತಪಸ್ಸು ಮಾಡಿದಾಗ, "ಹೆಂಗಸರನ್ನು ಅಳಿಸುವ ಗಂಡನಲ್ಲಿ ನಾನಿರಲಾರೆ ಎಂದು ಸ್ಪಷ್ಟವಾಗಿ ಹೇಳಿದಳು.

ಲಕ್ಷ್ಮಿಯ ರೂಪ ಆಕೃತಿಗಳು ಕಾಲಾಧೀನವಾಗಿವೆ. ಮೊದಮೊದಲು ಅವಳಿಗೆ ಎರಡೇ ಕೈಗಳಿದ್ದವು. ಬಳಿಕ ಕಾರ್ಯಬಾಹುಲ್ಯದಿಂದಲೋ ಏನೂ ನಾಲ್ಕು ಕೈಗಳಾದವು. ಆದರೆ ಅನೇಕ ಸಲ ಅವಳಿಗೆ ಹದಿನಾರು ಹದಿನೆಂಟು ಕೈಗಳು ಇರುವದೂ ಕಂಡಿದೆ.

ಕಮಲ ಅವಳಿಗೆ ಪ್ರಿಯವಾದ ವಸ್ತು. ತಲೆಯ ಮೇಲೆ ಕಿರೀಟ ಇದೆ. ಕಣ್ಣು ಅವಳಿಗೆ ಎರಡು ಎಂಬುದು ಸಾಮಾನ್ಯ. ಆದರೆ ಅನೇಕ ಸಲ ಮೂರು ಎಂದೂ ಕಂಡಿದೆ. ಕೈಯಲ್ಲಿ ಅಮೃತ ಪಾತ್ರೆ ಹಿಡಿದುಕೊಂಡದ್ದುಂಟು. ಧಾನ್ಯದತೆಗೆ, ಅಭಯಗಳನ್ನು ತೋರಿದ್ದು ಇದೆ.




ರತ್ನಲಕ್ಷ್ಮಿ
(ವಿದಿನಾಪುರ ವಿಗ್ರಹ)

ಲಕ್ಷ್ಮಿಗೆ ಬೆಳ್ಳಿ ಹಾಗೂ ಬಂಗಾರದ ಮೇಲೆ ಬಹಳ ಮಮತೆ.

ಲಕ್ಷ್ಮಿ ಭಾರತದಲ್ಲಿ ಮಾತ್ರ ಉಪಾಸ್ಯ ದೇವತೆಯಲ್ಲ ಸಮಸ್ತ ಭೂಮಂಡಲದಲ್ಲಿಯೇ ಇವಳು ಪೂಜ್ಯಳಾಗಿದ್ದಾಳೆ. ಇಟಲಿ ದೇಶದಲ್ಲಿ ಪೂಜ್ಯಳಾಗಿದ್ದ "ಫಾರಚೂನಾ" ನಮ್ಮ ದೇಶದ ಶುಭಲಕ್ಷ್ಮಿಯೇ ಆಗಿದ್ದಾಳೆ. ಅವಳು ತಲೆಯಮೇಲೆ ಕಿರೀಟವಿಟ್ಟು ಸಿಂಹವಾಹಿನಿಯಾಗಿರುವಳು. ಉರ್ಝುಬೆಕ್‌ದ ಉಪಾಸ್ಯದೇವತೆಯಾದ ಎರ್ಝಃಟಾ ಭಯಂಕರಿಯಾಗಿದ್ದರೂ ಶಂಕರಿಯೂ ಆಗಿದ್ದಾಳೆ. ಅವಳು ತನ್ನ ಮಕ್ಕಳಿಗೆ ಮಾನವಪುತ್ರರಿಗೆ ಸ್ತನಪಾನ ಮಾಡಿಸುತ್ತಾಳೆ. ಇದು ಅಲ್ಲಿಯ ಭಕ್ತರಿಗೆ ದೊರೆಯುವ ಪರಮ ಸಿದ್ಧಿ.

ಅವಳು ಕ್ರೂರರಲ್ಲದವರ ತಾಯಿ ಎಂದು ಹೇಳುತ್ತಾರೆ. ಬ್ಯಾಬಿಲೋನಿಯದ ಸರ್ವೇಶ್ವರಿಯಾದ "ಈಸ್ತರ" ದೇವಿಯೂ ಲಕ್ಷ್ಮಿಯೆ. ಸಿರಿಯಾ, ಏಶಿಯಃ ಮೈನರ್ ದೇಶದಲ್ಲಿ ಧಾನ್ಯ ಲಕ್ಷ್ಮಿಯಃ ಪೂಜೆ ನಡೆಯುತ್ತಿತ್ತು. ಇಜಿಪ್ತ ದೇಶದಲ್ಲಿ ಸಂಪತ್ತಿನ ದೇವಿಯೆಂದು ಆಯಸಿಸ್ ದೇವತೆಯ ಪೂಜೆ ನಡೆಯುತ್ತಿತ್ತು. ಇವಳು ಮಾನವರಿಗೆ ಅಮೃತ್ವ ಕೊಡುತ್ತಾಳೆ. ಸಂಪತ್ತು ಕೊಡುತ್ತಾಳೆ. ಇಜಿಪ್ಶಿಯನ್ ಪುರಾಣಗಳಲ್ಲಿ ತನ್ನ ಮಗನಾದ ಹೋರಸ್‌ನಿಗೆ ಸ್ತನಪಾನ ಮಾಡಿಸಿದ ಐತಿಹ್ಯವಿದೆ.

ಭಾರತದಲ್ಲಿ ಜಯಲಕ್ಷ್ಮಿ, ಧನಲಕ್ಷ್ಮಿ, ರತ್ನಲಕ್ಷ್ಮಿ, ಪ್ರಸನ್ನಲಕ್ಷ್ಮಿಗಳಿದ್ದಾರೆ.



ಮುಖಕೆ—
ಬಿಳಿಯ ಲೇಪವಿರಿಸಿ
ಕೆಂಪು ಭ್ರಮೆ ನಿಶೆಯಲಿ
ಕನವರಿಸಿ
ಕಪ್ಪು ಕನ್ನಡಕ ಧರಿಸಿ
ದಪ್ಪ ಕನ್ನಡಿಯೊಳಗೆ
ನೋಡಿಕೊಂಡೆ—
ಕಂಡದೆಲ್ಲ ಕಪ್ಪು ॥

ಬಿಳಿಯ ಗುಡ್ಡಿಯ ಮರೆಸಿ
ಮೆಳ್ಳಗಣ್ಣಿನ ನೋಟ
ಒಳಗೊಳಗೆ ಸರಿಸಿ
ಮಾಟಮಾಡಿದೆನೆಂದು
ಹಾಡೇ ಹಗಲನು ಕಂಡೆ—
ಕಂಡ ಬೆಳಕೂ ಕಪ್ಪು ॥

ಕಪ್ಪು ಬಾಜಾರ
ಕಪ್ಪು ವ್ಯವಹಾರ
ವಕ್ರ ದೃಷ್ಟಿಯು
ಪೃಥಕ್ಕರಿಸೆ—
ನನ್ನ ಬರಿಯು
ಕರಿಯು ಆಕಾರ
ಅಲ್ಲಿ ಬಿಂಬಿಸಿತ್ತು ॥

—ಶ್ರೀನಿವಾಸ ಕುಲಕರ್ಣಿ

ಕಾದಂಬರಿ

ಹರಕು ಬಿರುಕು

ಸೇವ ನಮಿರಾಜ ಮಲ್ಲ



ಒಮ್ಮೆ ಅವಸರವಸರದಲ್ಲಿ ಬಿಟ್ಟು ಹೋಗಿದ್ದ ಮದರಾಸನ್ನು ಪುನಃ ಸೇರುವದು ನನಗೆ ಪ್ರಯಾಸದ ಕೆಲಸವೇ ಆಗಿತ್ತು. ಆದರೆ ಅಲ್ಲಿಗೆ ಹೋಗದೆ ನಿರ್ವಾಹವಿರಲಿಲ್ಲ. ನನ್ನದೊಂದು ಹಾಳು ಪರೀಕ್ಷೆಯ ನೆವ ವಿತ್ತು. ಅದನ್ನು ಮುಗಿಸಲು ಒಂದು ತಿಂಗಳು ಅಲ್ಲಿರಬೇಕು. ಪರೀಕ್ಷೆಗೆ ಅಭ್ಯಸಿಸಲು ಹುಟ್ಟೂರು ಯೋಗ್ಯವಾದುದಲ್ಲವೆಂದು ನಂಬಿದ್ದ ನನಗೆ ಹೀಗೆ ಬೇಡ ಬೇಡವೆಂದರೂ ಮದರಾಸಿನ ಇಡ್ಲಿಸಾಂಬಾರು ಜೀವನ ವನ್ನನುಭವಿಸುವ ಯೋಗ ತಿರುಗಿ ಬಂದಿತ್ತು. ಹಾಗೆಂದು ನನ್ನನ್ನಾರೂ ನೀನು ಪರೀಕ್ಷೆಗೆ ಕುಳಿತುಕೊಳ್ಳಲೇಬೇಕು ಎಂದು ಗದರಿಸಿ ಒತ್ತಾಯಪಡಿ ಸುವವರು ಇರಲಿಲ್ಲ. ನಿಜವಾಗಿ ಹೇಳಬೇಕಾದರೆ ಅಂಥ ಒತ್ತಾಯ ನಾನು ಕಲಿಯುವ ವೇಳೆ ಯಾರಿಂದಲೂ ಬಂದಿರಲಿಲ್ಲ. ಅದರ ಬದಲು ಹೆಚ್ಚಿ ನವರು ಅನ್ನುತ್ತಿದ್ದರು: ಏನೋ ಈ ತಲೆತಿರುಕ ಕಲಿಯಲಿಕ್ಕೆ ಹಣ ಹಾಳು ಮಾಡುತ್ತಿದ್ದಾನೆ; ಊರಿನಲ್ಲಿದ್ದು ಹಾಯಾಗಿ ದಿನ ಕಳೆಯುವು ದರ ಬದಲು ಮಂಗಳೂರಿನಲ್ಲೋ ಮದರಾಸಿನಲ್ಲೋ ಇದ್ದುಕೊಂಡು ಯಾವುದೋ ಹೋಟೆಲ್ಲುಗಳ ಅನ್ನ ತಿಂದುಕೊಂಡು ಬದುಕುತಿದ್ದಾನೆ: ಯಾಕೆ ಬೇಕು ಇವನಿಗೆ ಈ ಕಲಿಯುವಿಕೆ? ಇವನಪ್ಪ, ಇವನಜ್ಜ ಯಾರೂ ಸಾಲೆಗೆ ಹೋದವರಲ್ಲ.

ಹೀಗೆ ಒಂದು ಮುಂಜಾನೆ ಅರಬಿ ಸಮುದ್ರದ ತೀರದಿಂದ ಹೊರಟವ ಮರುದಿನ ಮುಂಜಾನೆ ಬಂಗಾಲ ಅಖಾತದ ತೀರವನ್ನು ಸೇರಿದೆ. ಆ ಪ್ರಯಾಣದಲ್ಲಿ ಹಿತಕರವಾದ ಒಂದೇ ಒಂದು ವಿಷಯವೆಂದರೆ ಬಂಡಿ ಯನ್ನು ಮಧ್ಯದಲ್ಲಿ ಬದಲಿಸುವ ಪ್ರಮೇಯವಿಲ್ಲದುದು. ಇಲ್ಲವಾದರೆ ಆ ಜನಜಂಗುಳಿ, ಆ ಗದ್ದಲ, ಆ ಕಲ್ಲಿದ್ದಲು ಚೂರ್ಣದ ಗಾಳಿ, ಆ ಸುಣ್ಣದ ನೀರಿನಂಥ ಚಹ-ಇವೆಲ್ಲ ಪ್ರಯಾಣಿಕರ ಸಹನೆಗೆ ಆಹ್ವಾನವೀಯುವಂಥವು. ಹಿಂದೆ ನಾನು ಅವುಗಳಿಗೆ ಅಂಜಿಯೇ ಕೆಲವು ದೀರ್ಘವಾದ ರಜೆಗಳನ್ನು ಊರಿಗೆ ಬಾರದೆಯೇ ಕಳೆದುದಿತ್ತು. ಇಂಥ ಪ್ರಯಾಣಕ್ಕೊಳಗಾದ ಖದ್ದರ್ ಉಡುಪು ನಾಲ್ಕುಸಲ ಧೋಬಿಯ ಒಲೆಯ ಮೇಲೆ ಬೆಂದರೂ ಕಲ್ಲಿದ್ದಲಿನ ಪ್ರಭಾವಲಯದಿಂದ ಅದು ಪೂರ್ಣ ಪಾರಾಗುತ್ತಿದ್ದಿಲ್ಲ.

ಸೆಂಟ್ರಲ್ ಸ್ಟೇಶನಿನಿಂದ ಪೋರ್ಟರರ ಚಕ್ರವ್ಯೂಹವನ್ನು ದಾಟ ಹೇಗೋ ಕೈಯಲ್ಲಿ ಹೋಲ್ಡಾಲಿನ ಸುರುಳಿಯನ್ನು ಒಂದು ಕೈಯಿಂದ ಇನ್ನೊಂದು ಕೈಗೆ ಬದಲಿಸುತ್ತ ಭಾರ ಸಮಾನತೆಯನ್ನು ಸಾಧಿಸುತ್ತ ಹೊರಬಿದ್ದೆ. ಹೊರಲಾರದ ಭಾರವನ್ನು ಎತ್ತಿಕೊಂಡು ಹೋಗುವ ನನ್ನನ್ನು ರಿಕ್ಷಾ ಎಳೆಯುವವರು ಕೂಡಾ ಕಡುಲೋಭಿಗಳ ಸಾಲಿಗೆ ಸೇರಿಸಿ ನನ್ನ ಗೊಡವೆಯನ್ನೇ ಬಿಟ್ಟುಬಿಟ್ಟರು. ಸ್ವಲ್ಪ ದೂರದಲ್ಲೇ ಇದ್ದ ಯಾವುದೋ ಹೋಟೇಲಿನೊಳಗೆ ಹೋಗಿ ಒಂದು ಕೋಣೆಯ ಒಳ ಹೊಕ್ಕಿದೆ. ಅಲ್ಲಿಯ ಕನ್ನಡಿಯಲ್ಲಿ ನನ್ನ ಮುಖವನ್ನು ನೋಡಿಕೊಂಡಾಗ

ತಾನೆ ನನ್ನ ಮುಖದಲ್ಲಿ ಆಗಿದ್ದ ಪರಿವರ್ತನೆ ನನಗೆ ತಿಳಿದುದು: ಮುಖದಲ್ಲಿ ಮೂರು ದಿನಗಳ ಗಡ್ಡ ಬೆಳೆದಿತ್ತು. ತಲೆಗೂದಲು ಒಣಗಿ ಅಸ್ತವ್ಯಸ್ತವಾಗಿತ್ತು. ಕಂಣುಗಳು ನಿದ್ದೆಯಿಲ್ಲದೆ ಕೆಂಪಾಗಿದ್ದವು. ಮುಖವೆಲ್ಲ ಕರ್ರಗಾಗಿತ್ತು. ಈ ಸ್ಥಿತಿಯಲ್ಲಿ ನನ್ನನ್ನು ಸ್ಟೇಶನಿನಿಂದ ಹೋಟೇಲಿನ ವರೆಗೆ ಪೋಲೀಸರು ಬರಬಿಟ್ಟುದೇ ಸೋಜಿಗವೆಂದು ನನಗೆತೋರಿತು.

ಹೋಟೇಲಿನಲ್ಲಿ ನನ್ನ ಸತ್ಕಾರವನ್ನು ನಾನೇ ಮಾಡಿಕೊಳ್ಳಬೇಕಾಗಿತ್ತು. ಸ್ನಾನ ಮುಗಿಸಿ ಬರುವಾಗ ಹೋಲ್ಡಾಲನ್ನು ಬಿಚ್ಚಿಸುವ ಶಕ್ತಿಯೂ ನನ್ನಲ್ಲಿರಲಿಲ್ಲ. ಹೇಗೋ ಒಂದು ಅಂಗಿ ಮತ್ತೊಂದು ಪಂಚೆಯನ್ನು ಅದರ ಹೊಟ್ಟೆಯಿಂದ ಹಿಡಿದೆಳೆದೆ. ಅವನ್ನು ಧರಿಸಿಕೊಂಡು ಚಹದಂಗಡಿಯ ಬಳಿ ಧಾವಿಸಿದೆ. ಬಂತು ಬಿಸಿ ಬಿಸಿ ಇಡ್ಲಿ. ಅದರ ಜೊತೆಗೆ ವಡೆ. ಹೊಗೆ ಏಳುವ ಸಾಂಬಾರು ಅವುಗಳನ್ನು ಮೀಯಿಸಿತು. ಕಾಫಿಯ ಕೊನೆಯ ಗುಟುಕು ಮುಗಿದ ಬಳಿಕ ತಾನೇ ನಾನಿನ್ನೂ ಬದುಕಿದ್ದೇನೆ ಎಂದು ನನಗೆ ತಿಳಿದುದು.

ಹಿಂದೆ ಬಂದವ ಮಂಚವನ್ನೇರಿ ನಿದ್ರಿಸಿದೆ. ಆದರೆ ನಿದ್ದೆಯ ಜೊಂಪು ಹತ್ತಿದೊಡನೆ ಹಿಂದಿನ ರಾತ್ರಿಯ ರೈಲು ಬಂಡಿಯ ದೃಶ್ಯಗಳ ಕನಸೇ ಬೀಳುತ್ತಿತ್ತು. ಮಲಯಾಕ್ಕೋ ಸಿಂಗಾಪುರಕ್ಕೋ ರಬ್ಬರ್ ತೋಟಗಳಲ್ಲಿ ದುಡಿಯಲು ಹೋಗುವ ಬಡಗರದ ಮಾಪಿಳ್ಳೆಯವರ ಗದ್ದಲ ಆಗಲೂ ನಡೆಯುತ್ತಿದ್ದಂತೆ ಭಾಸವಾಗಿ ಫಕ್ಕನೆ ಎಚ್ಚರವಾಗುತ್ತಿತ್ತು. ಅಷ್ಟು ಹೊತ್ತಿಗೆ ಹೊರಗಿನಿಂದ ಆಕಾಶವೇ ಮೇಲೆ ಬೀಳುವಂಥ ಟ್ರಾಂ ಸಂಚಾರದ ಗರ್ಜನೆ. ಅಂತೂ ನಾನು ಆಗ ನಿದ್ರಿಸಿದ್ದಕ್ಕಿಂತಲೂ ಹಾಸಿಗೆಯಲ್ಲಿ ಹೊರಳಾಡಿದುದೇ ಹೆಚ್ಚು. ರೈಲ್ವೇ ಸ್ಟೇಶನ್ನಿನ ಗೋಪುರದ ಗಡಿಯಾರ ಹನ್ನೆರಡು ಹೊಡೆದುದನ್ನು ಕೇಳಿದವನೇ ಹಾಸಿಗೆಯಿಂದೆದ್ದು ಮುಖತೊಳೆದು ಊಟಕ್ಕೆ ಹೋದೆ. ಆ ಸಾಂಬಾರು, ಕೂಟು, ರಸಂ ನನಗೆ ಅಷ್ಟು ಒಗ್ಗದಿದ್ದರೂ ಹೇಗೋ ಕಣ್ಣು ಮುಚ್ಚಿಕೊಂಡು ಉಂಡು ಮೊಸರನ್ನದೊಡನೆ ಊಟ ಮುಗಿಸಿ ಕೈತೊಳೆದೆ. ಮತ್ತೊಂದು ಸಿಗರೇಟನ್ನು ಹಚ್ಚಿಸಿಕೊಂಡು ಸೆಂಟ್ರಲ್ ಸ್ಟೇಶನ್ನಿನ ಹಿಗಿನ್ ಬಾತಮ್ಸ್ ಪುಸ್ತಕದಂಗಡಿಗೆ ಎಂದಿನಂತೆ ತೆರಳಿದೆ.

ಕೆಲಕಾಲ ಹಳ್ಳಿಯಲ್ಲಿದ್ದು ಫಕ್ಕನೆ ಇಷ್ಟು ದೊಡ್ಡ ನಗರಕ್ಕೆ ಬಂದೊಡನೆ ಹೊಸ ಪುಸ್ತಕಗಳು, ಹೊಸ ಪತ್ರಿಕೆಗಳು ಕಣ್ಣಿಗೆ ಬೀಳುವುದು ಸಹಜವಾಗಿತ್ತು. ಅವುಗಳ ಸಹವಾಸದಿಂದಾಗಿ ನನ್ನ ಕಾಲೇಜಿನ ಪಾಠಗಳ ಅಭ್ಯಾಸಕ್ಕೆ ಗ್ರಹಣ ಹಿಡಿದುದೂ ಇತ್ತು. ಪರೀಕ್ಷೆಗಳ ಕಾಲಗಳಲ್ಲೂ ಪಠ್ಯಪುಸ್ತಕಗಳ ಮಧ್ಯದಲ್ಲೇ ಇಂಥ ಪಠ್ಯವಲ್ಲದ ಕೃತಿಗಳನ್ನಿಟ್ಟುಕೊಂಡು ಶಿಕ್ಷಣದ ಅಪಚಾರ ಮಾಡಿದ ಅಕೃತ್ಯಕ್ಕಾಗಿ ನಾನಾಗಲೇ ಅಲ್ಪಸ್ವಲ್ಪ ಬೆಲೆ ತೆತ್ತಾಗಿತ್ತು. ಪರೀಕ್ಷೆಗಳಲ್ಲಿ ವರ್ಗ, ಶ್ರೇಣಿಗಳನ್ನು ಗಳಿಸಿ ಪ್ರಯೋಜನವಿಲ್ಲವೆಂಬ ಆಂತರಿಕ ಭಾವನೆ ಹೇಗೋ ನನ್ನನ್ನು ಬಹಳ ಹಿಂದೆಯೇ ನನಗೆ ಗೊತ್ತಿಲ್ಲದೆಯೇ ಆವರಿಸಿದ್ದಿರಬೇಕು ಎಂದು ತೋರುತ್ತದೆ. ಹಾಗೆಂದು ಕಲಿಯುವ ಐದಾರು ವಿಷಯಗಳ ಪೈಕಿ ಒಂದೋ ಎರಡೋ ವಿಷಯಗಳಲ್ಲಿ ನನಗೆ ಪ್ರಥಮ ಶ್ರೇಣಿದೊರಕುವ ಸಂಪ್ರದಾಯ ಹೊಸದಲ್ಲ. ಇಂಥ ಸಾಧನೆಯಿಂದಾಗಿ ನನ್ನ ಸಹಪಾಠಿಗಳ ಮತ್ತು ಶಿಕ್ಷಕರ ಶಹಬಾಸ್‌ಗಿರಿಯನ್ನು ಗಳಿಸಿ ಮತ್ತೆ ಸುಮ್ಮನಾಗುತ್ತಿದ್ದೆ. ನಿಜವಾಗಿ ನೋಡಿದರೆ ಆಗ ನನ್ನ ಸಾಧನೆಯ ಶ್ರೇಷ್ಠತೆಯನ್ನು ಕಂಡು ಇತರರಿಗಾದ ಆಶ್ಚರ್ಯಕ್ಕಿಂತಲೂ ಹೆಚ್ಚಿನ ವಿಸ್ಮಯ ನನಗೇ ಆಗದಿರುತ್ತಿದ್ದಿಲ್ಲ. ಏಕೆಂದರೆ ಪರೀಕ್ಷೆಯಲ್ಲಿ ಹೆಚ್ಚಾಗಿ ಸ್ವಕಪೋಲ ಕಲ್ಪಿತ ವಿಷಯಗಳನ್ನು ಬರೆಯುವುದು ವಿನಃ ಪ್ರಶ್ನೆಗೆ ಉಚಿತವಾಗಿ ಉತ್ತರ ಬರೆಯುವ ಭಾಗ್ಯ ನನ್ನದಾಗಿರುತ್ತಿದ್ದಿಲ್ಲ. ಆದ್ದರಿಂದ ಪರೀಕ್ಷಕರು ಕೆಲವು ವೇಳೆ ನನ್ನ ಉತ್ತರಗಳಲ್ಲಿ ವೈಚಾರಿಕ ಆಹ್ವಾನವನ್ನೇ ಎದುರಿಸಬೇಕಾಗುತ್ತಿತ್ತು. ನನ್ನ ಇಂಥ ಪ್ರವೃತ್ತಿಯನ್ನು ಸಿಂಹಾವಲೋಕನ ಮಾಡಿದಾಗಲೆಲ್ಲ ನಾನು ಲೋಕದಲ್ಲಿದ್ದ ಎಲ್ಲ ಪುಸ್ತಕದಂಗಡಿಗಳನ್ನು, ಅದರಲ್ಲೂ ಹಳೆಯ ಪುಸ್ತಕಗಳನ್ನು ಮತ್ತು ಪತ್ರಿಕೆಗಳನ್ನು ಮಾರುವ ಅಂಗಡಿಗಳನ್ನು ನಾನು ಶಪಿಸುತಿದ್ದೆ.

ಈಗ ಹಿಗಿನ್‌ಬಾತಮ್ಸ್ ಪುಸ್ತಕದಂಗಡಿಗೆ ಬಂದಾಗ ಸುದೈವದಿಂದ ನನ್ನೊಡನೆ ಇದ್ದುದು ಬರೇ ಒಂದು ರೂಪಾಯಿ ಚಿಲ್ಲರೆ. ಆದ್ದರಿಂದ ಕೂಡಲೇ ದೊಡ್ಡ ದೊಡ್ಡ ಪುಸ್ತಕಗಳನ್ನು ಪಡೆಯುವ ಅಪಾಯ ತಪ್ಪಿತ್ತು. ಆದರೂ ಆರೇಳು ತಾಸುಗಳನ್ನು ಆರಾಮವಾಗಿ ಕೋಣೆಯೊಳಗೆ ಕಳೆಯಲು ಬೇಕಾದಷ್ಟು ಪತ್ರಿಕೆಗಳನ್ನು ಖರೀದಿ ಮಾಡಲು ನನ್ನೊಡನಿದ್ದ ಒಂದು ರೂಪಾಯಿಗೆ ಸಾಧ್ಯವಿತ್ತು. ಹಾಗೆಯೇ ಒಂದೆರಡು ಪತ್ರಿಕೆಗಳನ್ನು ಬಿಡಿಸಿ ನೋಡುವಷ್ಟರಲ್ಲಿ ನನ್ನ ಹೆಗಲ ಮೇಲೆ ಒಬ್ಬ ಕೈಹಾಕಿದ.

ಫಕ್ಕನೆ ಹಿಂತಿರುಗಿ ನೋಡಿದೆ.

"ಏನೋ ಭಯವಾಯಿತೆ? "

"ವಣಕ್ಕಂ ಸಾರ್" ಎಂದು ನನ್ನ ಬಿಡಿತಮಿಳನ್ನು ಬಿಚ್ಚಿಸಿದೆ.

"ಪೋರುಂಗೋ ಸಾರ್, ತಮಿಳು ಭಾಷೆಯನ್ನು ಕೊಲ್ಲಬೇಡಿ" ಎಂದು ಕಿಟ್ಟು ಇಂಗ್ಲಿಷ್ ಭಾಷೆಯಲ್ಲಿ ನುಡಿದು ನಕ್ಕ.

ಮತ್ತೊಂದು ಕ್ಷಣದಲ್ಲಿ ನಾವಿಬ್ಬರೂ ರೈಲ್ವೇ ಕ್ಯಾಂಟೀನಿನೊಳಗೆ ಸೇರಿಕೊಂಡಿದ್ದೆವು. ನಾವು ಕೊನೆಯಬಾರಿ ಭೇಟಿಯಾದ ಬಳಿಕ ಆತನಕ ನಡೆದ ಘಟನೆಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡೆವು. ಕಿಟ್ಟು, ಅಂದರೆ ಕೃಷ್ಣಸ್ವಾಮಿ ನನ್ನ ಆರು ವರ್ಷಗಳ ಗೆಳೆಯ. ಮೊದಲ ಮೂರು ವರ್ಷಗಳಲ್ಲಿ ಅವನು ನನ್ನ ಸಹಪಾಠಿಯಾಗಿದ್ದ. ಕಾಲೇಜಿಗೆ ದಿನಾಲೂ ಅವನು ಇಪ್ಪತ್ತು ಮೈಲು ದೂರದ ತನ್ನ ಚಂಗಲ್ಪೇಟೆಯ ಮನೆಯಿಂದ ಬಂದು ಹೋಗುತಿದ್ದ.

ಮೊದಲ ವರ್ಷ ನನಗೂ ಅವನಿಗೂ ಅಷ್ಟೊಂದು ಸ್ನೇಹ ಬೆಳೆಯದಿದ್ದರೂ ಮುಂದೆ ನಾವು ಕೇವಲ ಅಭ್ಯಾಸದ ಮಟ್ಟಿಗೆ ಗೆಳೆಯರಾದೆವು. ಕೊನೆಯ ಪರೀಕ್ಷೆಯಲ್ಲಿ ಅವನು ಪ್ರಥಮ ಶ್ರೇಣಿ ಗಳಿಸಿದನಲ್ಲದೆ ಒಂದು ಸುವರ್ಣಪದಕವನ್ನು ಹೊಡೆದ. ಅನಂತರವೂ ನಮ್ಮ ಭೇಟಿ ನಗರದಲ್ಲಿ ಒಮ್ಮೊಮ್ಮೆ ಆಗುತ್ತಿತ್ತು. ಅವನು ರೈಲ್ವೇಯಲ್ಲಿ ಅಪ್ಪರ್ ಡಿವಿಜನ್ ಕ್ಲಾರ್ಕನಾಗಿ ನೇಮಕಗೊಂಡಿದ್ದನೆಂದೂ ನನಗೆ ತಿಳಿದಿತ್ತು. ಅದೂ ಅವನ ಶ್ರೀರಂಗದ ಮಾವ ಅದರಲ್ಲೇ ಎಂಜಿನಿಯರ್‌ರಾಗಿದ್ದುದರಿಂದ ಆ ಕೆಲಸ ಸಿಕ್ಕಿತಂತೆ.

"ನಿನಗೇನು, ನೌಕರಿ ಬೇಡ,ಕ್ಲಾಸು ಬೇಡ. ಸಿಕ್ಕಿದ್ದನ್ನೆಲ್ಲ ಓದುತ್ತಿ. ಏನೇನೋ ಬರೆಯುತ್ತಿ. ಮೊನ್ನೆ ಆ ಶಂಕರ್ಸ್‌ವೀಕ್ಲಿಯಲ್ಲಿ ರಾಮರಾಜ್ಯದ ಅಧ್ಯಕ್ಷ ಪಟ್ಟಾಭಿ ಸೀತಾರಾಮಯ್ಯನ ಬಗ್ಗೆ ತಮಾಷೆ ಮಾಡಿದ್ದಿಯಲ್ಲ? ಅದನ್ನೋದಿ ನನ್ನ ಸಹೋದ್ಯೋಗಿಗಳು ಮಾತ್ರವಲ್ಲ ನಮ್ಮ ಸುಪರಿಂಟೆಂಡೆಂಟರು ಕೂಡಾ ನಕ್ಕರು. ನೀನು ನನ್ನ ಸಹಪಾಠಿ-ಸ್ನೇಹಿತ ಎಂದು ಅವರಿಗೆ ತಿಳಿಸಿದೆ... ಇನ್ನೇನು, ಹೀಗೆ ಬರೆಯುತ್ತಲೇ ದಿನಗಳೆಯಲು ನಿಶ್ಚಯ ಮಾಡಿದ್ದಿಯಾ? " ಎಂದು ಅವನು ಪ್ರಶ್ನಿಸಿದ.

ಇದಕ್ಕೆ ಉತ್ತರ ಹೇಳುವುದು ಸುಲಭವಾಗಿರಲಿಲ್ಲ. ನಾನು ನಿಜವಾಗಿಯೂ ಎಲ್ಲಾದರೂ ನೌಕರಿ ಹಿಡಿದು ಜೀವನ ನಡೆಸುವ ಸಂಭವಿಕೆಯನ್ನು ನೆನೆಸಿದವನಲ್ಲ. ಹಾಗೆಂದು ಒಂದೆರಡು ಕಡೆ ಆಗಲೇ ನೌಕರಿ ಮಾಡಿ ಬಿಟ್ಟಾಗಿತ್ತು. ನಾನೆಲ್ಲಿಗೆ ಹೋದರೂ ಸ್ವಂತ ಊರು ನನ್ನ ವೈಯಕ್ತಿಕ ಭವಿಷ್ಯದ ಯೋಚನೆಯಲ್ಲಿ ಕೇಂದ್ರಸ್ಥಾನವನ್ನು ಪಡೆದಿತ್ತು.

"ಇನ್ನೇನು? ನೀನು ಫಸ್ಟ್‌ಕ್ಲಾಸ್ ಹೊಡೆದ ಮಹಾಶಯ. ಫಸ್ಟ್ ಕ್ಲಾಸ್ ಎಂ. ಎ. ಎಂದರೆ ಮುಂದೆ ಮಂತ್ರಿ ಪದವಿಗೇರಲೂ ಸಾಕಾಗುವಂಥ ವಿದ್ಯಾರ್ಹತೆ ಎಂದು ಅಂದು ನಮ್ಮ ಪ್ರೊಫೆಸರರು ಹೇಳಿದ್ದರು. ಆದರೆ ನೀನದನ್ನು ಸುಳ್ಳು ಮಾಡಿದ್ದೀಯಲ್ಲ? ನೂರೈವತ್ತರಿಂದ ಇನ್ನೂರೈವತ್ತರ ವರೆಗಿನ ಈ ಯುಡಿಸಿ ಮಾತ್ರ ನಿನ್ನಂಥ ಬೃಹಸ್ಪತಿಗೆ ದೊರೆಯುವುದೆಂದಾದ ಮೇಲೆ ನನ್ನಂಥ ಸೆಕೆಂಡ್ ಕ್ಲಾಸ್‌ನವನಿಗೆ ಎಲ್. ಡಿ. ಸಿ. ಕೂಡಾ ದೊರೆಯಲಾರದೆಂದು ಅನ್ನಿಸುತ್ತೆ. ನೋಡು ಎಲ್ಲರೂ ಭಾರತವೆಂದರೆ ನಿರಕ್ಷರಿಗಳ ನಾಡೆನ್ನುತ್ತಾರೆ. ನಾವೂ ಎಂ. ಎ. ಪದವಿ ಪಡೆದು ಇಂಥ ಯುಡಿಸಿ, ಎಲ್‌ಡಿಸಿ ಕಾರಕೂನ ನೌಕರಿಯಲ್ಲಿ ಬಡಿದಾಡುತ್ತಿರುವುದಕ್ಕಿಂತ ನಿರಕ್ಷರಿಗಳೇ ಆಗಿರುತಿದ್ದರೆ ನಮ್ಮ ದೇಶದ ಖ್ಯಾತಿಯಾದರೂ ಉಳಿಯುತ್ತಿತ್ತಲ್ಲ! "

"ನಿನ್ನ ವ್ಯಂಗ್ಯವಿಚಾರ ನನಗೆ ಗೊತ್ತು. ಆದರೆ ಅದರಲ್ಲಿ ಸತ್ಯವಿಲ್ಲದಿಲ್ಲ. ನನಗೂ ಬರೆದು ಬರೆದು ಆಯಾಸವಾದಾಗ ಇಂಥ ಬರವಣಿಗೆ ನೌಕರಿಗಾಗಿ ನಾನಷ್ಟು ಶ್ರಮಪಟ್ಟು ಫಸ್ಟ್‌ಕ್ಲಾಸ್ ಗಳಿಸಬೇಕಿತ್ತೇ ಎಂದು ಪ್ರಶ್ನಿಸಿಕೊಳ್ಳುತ್ತೇನೆ. ಇಷ್ಟಾದ ಮೇಲೂ ಆ ಮ್ಯಾಟ್ರಿಕ್ಯುಲೇಶನ್ ಕಲಿತ ಸುಪರಿಂಟೆಂಡೆಂಟ್ ಬೇಕೆಂದೇ ಏನಾದರೂ ತಪ್ಪು ಹುಡುಕಿ ಹಳಿಯುತ್ತಾನೆ. ಅದಕ್ಕೇ ಇನ್ನೊಮ್ಮೆ ಐಯೇಯಸ್‌ಗೆ ಕುಳಿತುಕೊಳ್ಳಬೇಕೆಂದಿದ್ದೇನೆ. "

"ಸರಿ. ಇಲ್ಲಿಯಾದರೂ ಮ್ಯಾಟ್ರಿಕ್ಯುಲೇಶನ್‌ಪಾಸಾದ ಸುಪರಿಂಟೆಂಡೆಂಟ್ ನಿನಗಿದ್ದಾನೆ. ಐಯೇಯಸ್ ಆದಿಯೆಂದರೆ ಮತ್ತೆ ನಿನಗೆ ಮ್ಯಾಟ್ರಿಕ್ಯುಲೇಶನ್ ಫೈಲಾದ ಮಂತ್ರಿಗಳೇ ಒದೆಯುತ್ತಾರೆ."

"ಜಾತಿ ಕೆಟ್ಟರೂ ಸುಖ ಪಡೆಯಬೇಕಲ್ಲ? ಇದು ನಿನ್ನದೇ ಮಾತು.



" ನೀನು ಇಂದು ಸಂಜೆಯೇ ನಿನ್ನ ಪೆಟ್ಟಿಗೆ ಸಾಮಾನುಗಳೊಡನೆ ನಮ್ಮ ಮನೆಗೆ ಬರಬೇಕು." ಕಿಟ್ಟು ಹೇಳಿದ.

ಅಂದು ನಮ್ಮ ಪದ್ಮಿನಿ, ಷಣ್ಮುಗಂನೊಡನೆ ರಾತ್ರಿ ರೈಲಿನಲ್ಲಿ ಬಂದಿಳಿದಾಗ ನೀನು ಹೇಳಿದುದು ನನಗೆ ಇನ್ನೂ ನೆನಪಿದೆ."

"ಅಂತೂ ನೀನು ನನ್ನ ಬೋಸ್ವೆಲ್ ಆಗಲು ಯೋಗ್ಯನೆಂದು ತೋರುತ್ತದೆ! "

ಇಬ್ಬರೂ ಆಗ ಗಹಗಹಿಸಿದೆವು.

ಮತ್ತು ನಮ್ಮ ಸಂಭಾಷಣೆ ಮುಂದುವರಿಯಿತು. ನಮ್ಮ ಕಾಲೇಜು ಪ್ರೊಫೆಸರರು, ಸಹಪಾಠಿಗಳು ಮತ್ತು ಇತರ ಸ್ನೇಹಿತರ ಕುರಿತಾದ ಮಾಹಿತಿಗಳ ವಿಚಾರ ವಿನಿಮಯ ನಡೆಯಿತು. ನಮ್ಮ ಸಹಪಾಠಿಣಿಯರಿಗೆ ಮದುವೆಗಳಾದ ಸುದ್ದಿಗಳನ್ನು ಚರ್ಚಿಸಿ ನಕ್ಕೆವು.

"ಪದ್ಮಿನಿಗೆ ಮದುವೆಯಾದುದು ನಿನಗೆ ಸ್ವಲ್ಪ ಹೊಟ್ಟೆನೋವನ್ನುಂಟುಮಾಡಿರಬೇಕು, ಅಲ್ಲವೆ ಕಿಟ್ಟು" ಎಂದೆ ನಾನು.

"ಓಹ್! ನನಗೇನು?"

"ನಿನಗೆ ಅವಳು ಮಾತು ಕೊಟ್ಟಿದ್ದಳಂತಲ್ಲ? ಫಸ್ಟ್‌ಕ್ಲಾಸ್ ಬಂದರೆ ನಿನ್ನನ್ನೇ ಮದುವೆ..."

"ಸಾಕೋ ನಿನ್ನ ತಮಾಷೆ! ನಿನ್ನಿಂದ ಏನೋಅವಳು ಲೈಬ್ರೆರಿಯಲ್ಲಿ ಕಾದು ನಿಂತು ನೋಟ್ಸ್‌ಗಳನ್ನೋ, ಪ್ರಬಂಧಗಳನ್ನೋ ಗುಟ್ಟನಲ್ಲಿ ಪಡೆಯುತ್ತಿದ್ದುದು ನನಗೆ ಗೊತ್ತಿಲ್ಲವೆ? ಅವುಗಳ ಮಧ್ಯೆ ನಿಮ್ಮೊಳಗೆ ಎಷ್ಟು ಕಾಗದಪತ್ರಗಳು ವಿನಿಮಯವಾಗುತಿದ್ದುವೋ ಯಾರಿಗೆ ಗೊತ್ತು? ಅದಿರಲಿ, ವೇಣಿಕಾ ಕೊಟ್ಟ ಲೇಡಿ ಶಾಟರ್ಲೆಸ್‌ಲವರ್ ಪುಸ್ತಕವನ್ನು ಏನು ಮಾಡಿದ್ದೀ? ಫ್ರೇಂ ಹಾಕಿ ಇಟ್ಟಿದ್ದಿಯಾ?"

"ಸಾಕೋ ನಿನ್ನ ಕಲ್ಪನೆ! ನನ್ನನ್ನು ನೀವೆಲ್ಲ ಮಹಾತ್ಮಾ ಗಾಂಧಿಯೆಂದು ಕರೆಯುತ್ತಿದ್ದ ನೆನಪಿದೆಯೇ"

"ಗಾಂಧಿಯವರೇನು ಮದುವೆಯಾಗಲಿಲ್ವೆ?"

"ಅಲ್ಲ, ನಾನು ಅಂಥ ರೋಮಿಯೋ ಮಾದರಿಯವನಲ್ಲವೆಂದು ನಿಮಗೆ ತಿಳಿದಿರಲಿಲ್ಲವೆ?"

"ಎಲ್ಲ ಗೊತ್ತು, ನಿನಗೊಂದು ಕಸ್ತೂರ್ ಬಾ ಬೇಕಿತ್ತಲ್ಲ? ಸಂತಳಿಲ್ಲದ ಸಂತ ಎಲ್ಲಿದ್ದಾನೆ?"

"ನೋಡು, ನಮ್ಮ ರಿಸಲ್ಟ್ ಬಂದು ಎರಡು ತಿಂಗಳ ನಂತರ ಪದ್ಮಿನಿ ಒಮ್ಮೆ ಇಲೆಕ್ಟ್ರಿಕ್ ಟ್ರೈನಿನಲ್ಲಿ ಕಾಣಸಿಕ್ಕಿದ್ದಳು. ಅವಳ ತಂದೆ ನಿನ್ನ ತಂದೆ..."

"ಸಾಕು ಸಾಕು. ನಿನ್ನ ಕಲ್ಪನೆ ಅಂತಿರಲಿ. ನೋಡು ಇನ್ನು ಐದು ನಿಮಿಷ ಇದೆ. ಹೋಗೋಣ."

"ಸರಿ."

ಕ್ಯಾಂಟೀನಿನಿಂದ ಹೊರಡುವಾಗ ನಾನೆಲ್ಲಿದ್ದೇನೆಂದು ಕಿಟ್ಟು ಕೇಳಿದ.

"ಸದ್ಯ ಕೇರಾಫ್ ಫುಟ್‌ಪಾತ್."

"ಎಷ್ಟು ದಿನ?"

"ಇನ್ನೊಂದು ತಿಂಗಳು."

"ಹಾಂ. ಇನ್ನು ಮುಂದೆ ಮನುವಾಗುವ ಮಹಾಶಯ ಹೀಗೆ ರಸ್ತೆ ಪಾಲಾದರೆ ದೇಶದ ಗತಿಯೇನು?"

"ಮನುಗಳೆಲ್ಲ ರಸ್ತೆಯ ಬದಿಯಲ್ಲೇ ಇರುವ ಕಾಲ ಇದು. ಅವರಿಗೆ ರಾಜಾಶ್ರಯವೂ ಇಲ್ಲ, ಪ್ರಜಾಶ್ರಯವೂ ಇಲ್ಲ!"

"ಹಾಗಾದರೆ ನಾನು ಒಬ್ಬ ಮನುವನ್ನು ಸಾಕಿ ಪುಣ್ಯ ಕಟ್ಟಿಕೊಳ್ಳಬೇಕೆಂದಿದ್ದೇನೆ. ಬಾ! ಎಗ್ಮೋರಿನಲ್ಲಿ ಮನೆ ಹಿಡಿದಿದ್ದೇನೆ. ಮನೆಯಲ್ಲಿ ಬೇರೆ ಯಾರೂ ಇಲ್ಲ. ಉಪ್ಪರಿಗೆಯಲ್ಲಿ ಒಂದು ಖಾಲಿ ಕೋಣೆಯಿದೆ."

"ನಾನು ಪುರುಸತ್ತಿದ್ದಾಗ ಬರುತ್ತೇನೆ."

"ಆದಾಗದು. ನೀನು ಇಂದು ಸಂಜೆಯೇ ನಿನ್ನ ಪೆಟ್ಟಿಗೆ ಸಾಮಾನುಗಳೊಡನೆಬರಬೇಕು. ಇಲ್ಲವೆನ್ನಲಾಗದು.

ಕಿಟ್ಟುವಿನ ಯಥಾರ್ಥತೆ ನನ್ನ ಮನಸ್ಸಿಗೆ ನಾಟಿತು. ಅವನು ನನ್ನನ್ನು ಪರೀಕ್ಷಿಸಲಿಕ್ಕಾಗಿ ಹೀಗೆಂದು ಹೇಳಲಿಲ್ಲವೆಂಬುದು ಖಚಿತವಾಯಿತು. ಹಿಂದೊಮ್ಮೆ ಯಾವುದೋ ರೈಲು ಮುಷ್ಕರದ ಸಂದರ್ಭದಲ್ಲಿ ಅವನಿಗೆ ನನ್ನ ಕೋಣೆಯಲ್ಲಿ ಒಂದೋ ಎರಡೋ ದಿನಗಳ ಆಶ್ರಯ ಕೊಟ್ಟಿದ್ದೆ. ಕಿಟ್ಟುವಿಗೆ ಈಗ ಅದು ನೆನಪಿತ್ತೋ ಇಲ್ಲವೋ ತಿಳಿಯದು. ಆದರೆ ಈಗ ನಾನು ತಂದಿದ್ದ ಇನ್ನೂರು ರೂಪಾಯಿಯೊಳಗೆ ಒಂದು ತಿಂಗಳು ಕಾಲ ಮದ್ರಾಸಿನಲ್ಲಿ ಕಳೆದು ಮರಳಿ ಊರನ್ನು ಸೇರಬೇಕಿತ್ತು. ಇದರಲ್ಲಿ ಊಟ, ವಸತಿಮಾತ್ರವಲ್ಲದೆ ವಾರಕ್ಕೊಂದೋ ಎರಡೋ ಇಂಗ್ಲಿಷುಸಿನಿಮಾ, ಪತ್ರಿಕೆಗಳು ಮತ್ತು ಪುಸ್ತಕಗಳಿಗೂ ಹಣ ಉಳಿಯಬೇಕಿತ್ತು. ಅದರ ಹಿಂದಿನ ವರುಷದ ಕೆಲ ತಿಂಗಳುಗಳಲ್ಲಿ, ಒಂದು ಪತ್ರಿಕಾಲಯವು ಕೊಡುತಿದ್ದ ಎಪ್ಪತ್ತೈದು ರೂಪಾಯಿಗಳಲ್ಲಿ ನಾನು ದಿನಗಳೆಯಲು ಯತ್ನಿಸಿದ ಅನುಭವ ಇನ್ನು ಹಚ್ಚ ಹಸರಾಗಿಯೇ ಉಳಿದಿತ್ತು. ಆದ್ದರಿಂದ ಕಿಟ್ಟು ಒಂದು ವೇಳೆ ಕೋಣೆಯ ಮಟ್ಟಿಗೆ ಬಾಡಿಗೆ ಪಡೆದರೂ ಅದು ಹೋಟೇಲಿನಲ್ಲಾಗುವ ಖರ್ಚಿನಷ್ಟಾಗಲಿಕ್ಕಿಲ್ಲವೆಂದು ಲೆಕ್ಕ ಹಾಕಿ, ಅವನಲ್ಲಿಗೆ ಹೋಗಲು ಸಮ್ಮತಿಸಿದೆ.

" ನೋಡು ನೀನು ನನ್ನೊಡನಿದ್ದರೆ ನನ್ನ ಬೇಸರವೂ ಕಳೆಯುತ್ತದೆ—ನಿನಗೂ ಓದಲು ಅನುಕೂಲ. "

" ಭೇಷ್ ! ಸ್ನೇಹಿತರೆಂದರೆ ನಿನ್ನಂಥವರಿರಬೇಕು. ಆದರೆ ಒಂದು ಮಾತ್ರ. ನಿನ್ನಲ್ಲಿ, ಊಟ ಅಂತಿರಲಿ, ಒಂದಿಷ್ಟು ಕಾಫಿ ಕೂಡಾ ನಾನು ಮುಟ್ಟಲಾರೆ. ಅದೆಲ್ಲ ಹೊಟೇಲಿನಲ್ಲೇ. ನೀನೆಲ್ಲಾದರೂ ಅಪ್ಪಿತಪ್ಪಿ ಅದಕ್ಕೆ ಒತ್ತಾಯ ಮಾಡಿದರೆ ಕೂಡಲೆ ನಾನು ಸಮೀಪದ ಹೋಟೆಲಿಗೆ ಹೋಗುವೆ"

" ಸಾಕೋ ನಿನ್ನ ಭೀಷ್ಮಪ್ರತಿಜ್ಞೆ. ನನಗೆ ಹೊತ್ತಾಯಿತು. ಐದು ಗಂಟೆಗೆ ಆಫೀಸು ಬಿಡುತ್ತೇನೆ. ಆಗ ನೀನಿಲ್ಲಿರಬೇಕು. ಆ ಮೇಲೆ ನಿನ್ನ ಸಾಮಾನುಗಳನ್ನು ಒಂದು ರಿಕ್ಷಾದಲ್ಲಿ ಸಾಗಿಸೋಣ. ಮನೆಗೆ ಹೋದ ಬಳಿಕ ಸಾಧ್ಯವಾದರೆ ಒಂದಿಷ್ಟು ತಿರುಗಾಡುವ. ಬೇಕಾದರೆ ನಮ್ಮ ಮನೆಯ ಹತ್ತಿರವೇ ರೋಕ್ಸಿ ಇದೆ. ಏನೋ ದಿ ಸ್ಟ್ರೀಟ್ ಕಾರ್ ನೇಮ್ಡ್ ಡಿಸಯರ್ ನಡೆಯುತ್ತಿದೆ. ಬಹಳ ಒಳ್ಳೆಯ ಸಿನಿಮಾ ಎಂದು ನಮ್ಮ ಆಫೀಸಿನಲ್ಲಿ ಹೇಳುತ್ತಿದ್ದಾರೆ..."

" ನಾನು ಬೊಂಬಾಯಿಯಲ್ಲಿ ಕಳೆದ ವರ್ಷ ನೋಡಿದ್ದೆ. ಟೆನೆಸ್ಸಿ ವಿಲಿಯಮ್ಸ್ ನಾಟಕ. ಆದರೆ ನೀನು ಹಿಂದಿರುಗುವಾಗ 'ನನಗೆ ಅರ್ಥವಾಗಲಿಲ್ಲಪ್ಪ!' ಎಂದು ಹೇಳದಿದ್ದರೆ ದೊಡ್ಡದು.''

ನಾನು ಹೇಳುತ್ತಿದ್ದಂತೆಯೇ ಕಿಟ್ಟು ಉಪ್ಪರಿಗೆಯ ಮೇಲಿದ್ದ ತನ್ನ ಕಚೇರಿಗೆ ಬೇಗನೆ ನಡೆದ. ಗಂಟೆ ಆಗಲೇ ಮೂರು ಬಾರಿಸಿಯಾಗಿತ್ತು.

ನಾನು ಪುನಃ ಪುಸ್ತಕದಂಗಡಿಗೆ ಮರಳಿದೆ. ಹತ್ತಿಪ್ಪತ್ತು ಪುಸ್ತಕಗಳನ್ನು ನೋಡಿ ಅವುಗಳಲ್ಲಿ ಎರಡನ್ನಾದರೂ ಖರೀದಿ ಮಾಡಬೇಕೆಂದು ಬಯಸಿದೆ. ಆದರೆ ಆಗ ನನ್ನೊಡನೆ ಹಣವಿಲ್ಲದಿದ್ದುದು ಒಳ್ಳೆಯ ನೆವನಾಯಿತು. ಕೊನೆಗೆ ಎರಡು ಸಾಪ್ತಾಹಿಕ ಪತ್ರಿಕೆಗಳನ್ನು ತೆಗೆದುಕೊಂಡು ಕೋಣೆಗೆ ಹೋದೆ.

ಪತ್ರಿಕೆಗಳ ಪುಟಗಳನ್ನು ತಿರುವಿ ಹಾಕುತ್ತಿದ್ದಂತೆ ನನಗೆ ನಿದ್ದೆಯ ಜೊಂಪು ಹಿಡಿಯಿತು. ಹಾಗೆಯೇ ನಿದ್ದೆ ಬಂತು.

ಮತ್ತೆ ಎಚ್ಚರವಾಗುವಾಗ ಗಂಟೆ ಐದೂವರೆಯಾಗುತಿತ್ತು. ಕಿಟ್ಟು ನನ್ನನ್ನು ಶಪಿಸುತ್ತ ತನ್ನ ಮನೆಗೆ ಹೋಗಿರಬೇಕೆಂಬುದರಲ್ಲಿ ನನಗೆ ಆಗ ಸಂಶಯವಿರಲಿಲ್ಲ. ಕೊಟ್ಟ ಸಮಯಕ್ಕೆ ತಪ್ಪುವವನಲ್ಲ ನಾನು ಎಂಬುದು ಅವನಿಗೆ ಗೊತ್ತಿತ್ತೆಂಬುದು ನನಗೆ ಗೊತ್ತು. ನಾನು ಅವನಿಗೆ ಕೊಟ್ಟ ಮಾತಿನಂತೆ ಐದುಗಂಟೆಗೆ ಅವನ ಕಚೇರಿಯ ಬಳಿ ಹೋಗದಿದ್ದುದರಿಂದ ನಾನು ಅವನೊಡನೆ ಹೋಗಲು ಬಯಸಿಲ್ಲವೆಂದು ಅವನು ಅಪಾರ್ಥ ಕಲ್ಪಿಸಿಕೊಂಡಿರಬೇಕೆಂದು ನಾನು ಬೇಸರಗೊಂಡೆ.

ಕೂಡಲೇ ಅಲ್ಲಿಂದೆದ್ದು ಕೋಣೆಗೆ ಬೀಗ ಹಾಕಿ ಸೆಂಟ್ರಲ್ ಸ್ಟೇಶನಿಗೆ ಧಾವಿಸಿದೆ. ಕಿಟ್ಟುವಿನ ಕಚೇರಿಯ ಬಾಗಿಲುಗಳು ಮುಚ್ಚಿದ್ದುದು ನನಗೆ ಕೆಳಗಿನಿಂದ ಕಂಡಿತು. ಮುಂದೇನು ಮಾಡುವುದೆಂದು ಪುನಃ ಪುಸ್ತಕದಂಗಡಿಯ ಬಳಿಗೆ ಹೋದೆ. ಜನರ ನೂಕುನುಗ್ಗಲು ಆಗ ಹೆಚ್ಚಿತ್ತು. ನಗರದಿಂದ ಹೊರಡುವ ದೀರ್ಘ ಪಯಣದ ರೈಲು ಬಂಡಿಗಳು ಘೀಳಿಡುತಿದ್ದುವು. ಪ್ರಯಾಣಿಕರು, ಕೂಲಿಯಾಳುಗಳು, ಪ್ರಯಾಣಿಕರ ಆಪ್ತವರ್ಗದವರು—ಎಲ್ಲ ಹೊರಗಿನ ದ್ವಾರಗಳಿಂದ ಹಿಡಿದು ಪ್ಲಾಟ್‌ಫಾರ್ಮಿನವರೆಗೂ ಗದ್ದಲ ಮಾಡುತ್ತ ಓಡಾಡುತಿದ್ದರು. ಈ ಗೊಂದಲದಲ್ಲಿ ಕಿಟ್ಟು ಇದ್ದರೂ ನನಗೆ ಸಿಗುವಂತಿರಲಿಲ್ಲ.

ಸ್ವಲ್ಪಹೊತ್ತಿನಲ್ಲಿ ಕಿಟ್ಟು ನನ್ನ ಮುಂದೆ ಪ್ರತ್ಯಕ್ಷನಾದ. ಅವನ ಕೈಯಲ್ಲಿ ಫಲಹಾರದ ಡಬ್ಬಿ ಮತ್ತು ಪತ್ರಿಕೆಗಳಿದ್ದುದರಿಂದ ಅವನು ಇನ್ನೂ ಮನೆಗೆ ಹೋಗಿರಲಿಲ್ಲವೆಂಬುದು ಸ್ಪಷ್ಟವಾಗಿತ್ತು.

"ಏನೋ! ಐದು ಗಂಟೆ ಈಗ ತಾನೇ ಆಯಿತೆ, ನಿನಗೆ?" ಎಂದವ ನನ್ನ ಹೆಗಲನ್ನು ಜಗ್ಗಿದ.

"ಮಹಾಶಯ, ನನ್ನೊಡನೆ ವಾಚೂ ಇಲ್ಲ. ಅದರ ಜೊತೆಗೆ ನಿನ್ನೆ ರಾತ್ರಿ ಸರಿಯಾಗಿ ನಿದ್ದೆ ಇಲ್ಲದ್ದರಿಂದ ಒಂದಿಷ್ಟು ನಿದ್ದೆ ಬಂತು. ಏಳುವಾಗ ಐದುವರೆ. ಕೂಡಲೇ ಇಲ್ಲಿಗೆ ಧಾವಿಸಿದೆ. ಕ್ಷಮಿಸು."

"ಹೂಂ, ವಾಲ್‌ಟೇಕ್ಸ್ ರಸ್ತೆಯ ಹೋಟೇಲುಗಳು ಪ್ರಸಿದ್ಧವಾದವುಗಳು. ನೀನೊಬ್ಬನೇ ನಿದ್ರಿಸಿದ್ದಿಯೆಂದು ನಾನು ಭಾವಿಸುತ್ತೇನೆ." ಎಂದು ನಕ್ಕು ನನ್ನನ್ನು ಹೊರಗೆಳೆದುಕೊಂಡು ಹೋದ.

"ನಿನ್ನ ಕೋಣೆಗೆ ತೆರಳೋಣ. ನಾನು ರಿಕ್ಷಾ ತರುತ್ತೇನೆ."

ನನ್ನಲ್ಲಿ ಪಶ್ಚಾತ್ತಾಪ ಉಕ್ಕುತಿದ್ದುದರಿಂದ ನಾನು ಉಸುರೆತ್ತದೆ ಅವನನ್ನು ಕರೆದುಕೊಂಡು ನನ್ನ ಹೋಟೇಲು ಕೋಣೆಗೆ ಹೋದೆ. ಅಲ್ಲಿ ಅವನಿಗೊಂದು ಕಾಫಿ ತರ ಹೇಳಿ, ನನ್ನ ಲೆಕ್ಕದ ಹಣವನ್ನು ಇತ್ತೆ. ಹಾಸಿಗೆಯನ್ನು ಸುರುಳಿ ಮಾಡಿ ಪೆಟ್ಟಿಗೆಯಲ್ಲಿ ಹೊರಗಿದ್ದ ನನ್ನ ವಸ್ತುಗಳನ್ನು ಹಾಕಿ ಕೀಲಿ ಹಾಕಿ ಅವುಗಳೆರಡನ್ನೂ ಎತ್ತಿಕೊಂಡು ಹೊರಬಂದೆ. ಕಿಟ್ಟು ಅಷ್ಟರಲ್ಲಿ ಕಾಫಿ ಮುಗಿಸಿ ಒಂದು ರಿಕ್ಷಾವನ್ನು ತಂದು ಬಾಗಿಲಿನಲ್ಲಿ ನಿಲ್ಲಿಸಿದ್ದ. ನನ್ನ ಗಂಟುಮೂಟೆಗಳನ್ನು ಅದರಲ್ಲಿರಿಸಿ ನಾವಿಬ್ಬರೂ ಅದನ್ನೇರಿದೆವು.

"ಎಣಂಬೂರ್" ಎಂದ ಕಿಟ್ಟು ರಿಕ್ಷಾ ಎಳೆಯುವವನಿಗೆ.

ರಿಕ್ಷಾ ಮುಂದರಿಯಿತು. ಮತ್ತೆ ಅರ್ಧತಾಸಿನಲ್ಲಿ ಎಗ್ಮೋರ್ ದಾಟ ಒಂದು ಚಿಕ್ಕ ರಸ್ತೆಯಲ್ಲಿ ಹೋದೆವು.

"ಇಂಗೆ ತಾ" ಎಂದು ಕಿಟ್ಟು ರಿಕ್ಷಾದವನಿಗೆ ಅಜ್ಞಾಪಿಸಿದ.

ನಾವಿಬ್ಬರೂ ರಿಕ್ಷಾದಿಂದಿಳಿದೆವು. ನಾನು ನನ್ನ ಪೆಟ್ಟಿಗೆ ಮತ್ತು ಮೂಟೆಯನ್ನು ತೆಗೆದೆ. ಅಷ್ಟರಲ್ಲಿ ಕಿಟ್ಟು ರಿಕ್ಷಾದವನಿಗೆ ನಾನು ಬೇಡ ಬೇಡ ವೆಂದರೂ ಹಣವನ್ನೆಣಿಸಿಕೊಟ್ಟ.

ಬಾಗಿಲಲ್ಲಿ ಇಬ್ಬರು ಹೆಂಗಸರು ನಿಂತಿದ್ದರು. ಅವರಲ್ಲೊಬ್ಬಳು ಕಿಟ್ಟನ ಹೆಂಡತಿಯೆಂಬುದರಲ್ಲಿ ಸಂದೇಹವಿರಲಿಲ್ಲ.

ಕೂಡಲೇ ಕಿಟ್ಟು ನನ್ನ ಪೆಟ್ಟಿಗೆಯನ್ನು ಎತ್ತಿಕೊಂಡ. ನಾನು ಹಾಸಿಗೆಯ ಮೂಟೆಯನ್ನು ಎತ್ತಿಕೊಂಡೆ. ಇಬ್ಬರೂ ಒಳಗೆ ಅವನ ಅಟ್ಟದ ಕೋಣೆಗೆ ಹೋದೆವು.

"ಇದೇ ನಿನ್ನ ಕೋಣೆ. ಇಲ್ಲಿ ಸ್ವಲ್ಪ ಕುಳಿತುಕೋ. ನಾನು ಕೆಳಗೆ ಹೋಗುತ್ತೇನೆ. ನನ್ನಾಕೆ ನನ್ನನ್ನು ತಡಮಾಡಿ ಬಂದುದಕ್ಕಾಗಿ ಶಪಿಸುತ್ತಿರಬಹುದು."

ಇಂಥ ಮಾತು ಕೇಳಿದೊಡನೆ ನನ್ನ ಮಾತು ಚುರುಕಾಗಿ ಮುಂದು ವರಿಯಬಹುದಿತ್ತು. ಆದರೆ ನನಗೆ ಆ ಸನ್ನಿವೇಶದ ಅರಿವು ಚೆನ್ನಾಗಿ ಇತ್ತು. ಕಿಟ್ಟ ಮತ್ತು ಅವನ ಹೆಂಡತಿ ಇಬ್ಬರೇ ಸಂಸಾರ ನಡೆಸುತಿದ್ದಾರೆ. ಕಿಟ್ಟು ಗಂಟೆ ಪ್ರಕಾರ ಹೋಗಿ ಬರುವವ. ಆದ್ದರಿಂದ ಅಂದು ಅವನು ಬರುವಾಗ ತಡುವಾದುದನ್ನು ಕಂಡು ನಿಜವಾಗಿಯೂ ಅವನ ಹೆಂಡತಿ ಕಳವಳಗೊಂಡಿರಬೇಕೆಂಬುದರಲ್ಲಿ ಸಂದೇಹವಿರಲಿಲ್ಲ. ನನ್ನ ಅಕಾಲ ನಿದ್ರೆಯನ್ನು ನಾನೇ ಶಪಿಸತೊಡಗಿದೆ.

ಕೆಳಗೇನು ಮಾತಾಡಿದರೋ ನನಗೆ ತಿಳಿಯದು. ಅಂತೂ ನಾನು ಸ್ವಲ್ಪ ಕಾಲು ಚಾಚಿ ಕುಳಿತು ಅರ್ಥಹೀನವಾಗಿ ಕಿಟಕಿಯಿಂದ ಹೊರಗೆ ನೋಡುತಿದ್ದಂತೆಯೇ ಕಿಟ್ಟು ಮೆಟ್ಟಲೇರಿ ಬರುವ ಸದ್ದು ಕೇಳಿಸಿತು. ಬಳೆಗಳ ಶಬ್ದವನ್ನು ಕೇಳಿ ಅವನ ಹೆಂಡತಿಯೂ ಬಂದಿರ ಬೇಕೆಂದು ನೆನೆಸಿದೆ.

ಕಿಟ್ಟು ನನ್ನ ಬಳಿ ಕುಳಿತ. ಅವನ ಹೆಂಡತಿ ಎರಡು ಲೋಟ ಕಾಫಿ ನಮ್ಮ ಬಳಿ ಇಟ್ಟಳು.

"ಇವರೇ ತಾ" ಎಂದು ನನ್ನನ್ನು ಆಕೆಗೆ ಪರಿಚಯ ಮಾಡಿಸಿದ.

ನಾನು ಆಕೆಗೆ ಕೈಮುಗಿದೆ. ಅವಳೂ ಪ್ರತಿಯಾಗಿ ಕೈಮುಗಿದು ಸೀರೆಯ ಸೆರಗನ್ನು ಸರಿಪಡಿಸಿಕೊಳ್ಳುತ್ತ ಹೊರನಡೆದಳು.



" ತಾಯೀ......ಬೇಗ ಭಿಕ್ಷೆ ಹಾಕ್ತೀರೋ, ಇಲ್ಲಾ ಕಿಟ್ಟಿ ಧ್ವನಿಯಲ್ಲಿ ಹಾಡು ಹೇಳಲು ಶುರುಮಾಡಲೊ !......"

ನಾವಿಬ್ಬರೂ ಮೌನವಾಗಿ ಕಾಫಿಯನ್ನು ಚೀಪಿದೆವು.

"ಕಾಫಿ ಚೆನ್ನಾಗಿಲ್ಲನೆಂದು ತೋರುತ್ತದೆ" ಎಂದು ಕಿಟ್ಟು ಮಾತು ಆರಂಭಿಸಿದ.

"ನನ್ನ ಕಾಫಿ ಚೆನ್ನಾಗಿತ್ತು" ಎಂದೆ ನಾನು ನಸುನಗುತ್ತ.

"ಏ ಸುಳ್ಳಾಡಬೇಡ. ಇದಕ್ಕೆ ಸಕ್ಕರೆ ಹಾಕಿರಲೇ ಇಲ್ಲ! ಆದರೂ ನೀನು ಕುಡಿದು ಬಿಟ್ಟೆ! ಬಹುಶಃ ನನ್ನ ಹೆಂಡತಿಯ ಮೇಲಿನ ದಾಕ್ಷಿಣ್ಯ ದಿಂದ ಎಂದು ತೋರುತ್ತದೆ."

"ಇಲ್ಲಪ್ಪ!" ಎಂದು ನಾನು ಯೋಚನಾಮಗ್ನನಾದೆ. ಕಿಟ್ಟು ನನ್ನ ಕಾಫಿಯ ಲೋಟವನ್ನು ಹಿಡಿದುಕೊಂಡು ಕೆಳಗೆ ಹೋದ.

ನನ್ನಗಿದೊಂದು ಸಮಸ್ಯೆಯಾಯಿತು. ನಿಜವಾಗಿಯೂ ಕಾಫಿಗೆ ಸಕ್ಕರೆ ಸೇರಿಸಿರಲಿಲ್ಲವೇ? ಎಂದು ಸಂಶಯವಾಯಿತು. ಮುಂಚೆಯೇ ಬರೆಯುವವರು ಭಾವಪರವಶರು ಎಂಬ ಸಂಶಯಾತ್ಮಕ ಪ್ರಶಂಸೆಯನ್ನು ನಾನು ಹಲವರಿಂದ ಕೇಳಿದವ. ಈಗ ನಿಜವಾಗಿ ಕಾಫಿಗೆ ಸಕ್ಕರೆಯನ್ನು ಸೇರಿಸಿರದಿದ್ದರೆ ನನಗೆ ಅದು ಕಹಿಯಾಗಿ ಇಲ್ಲವೇ ಸಪ್ಪೆಯಾಗಿ ಏಕೆ ರುಚಿಸಲಿಲ್ಲ? ನಾನು ಕಾಫಿಯನ್ನು ಕುಡಿಯುವಾಗ ಮನಸ್ಸನ್ನು ಎಲ್ಲೋ ಅಲೆದಾಡ ಬಿಟ್ಟದ್ದೆನೆ? ಹೀಗೆ ನೆನಪಿನ ಪದರುಗಳನ್ನು ಒಂದೊಂದಾಗಿ ಎಳೆ ಬಿಡಿಸಲು ನಾನು ಮಾಡಿದ ಪ್ರಯತ್ನ ನಿಷ್ಫಲವೇ ಆಯಿತೆನ್ನಬಹುದು. ಮನಸ್ಸಿನ ಅಲೆದಾಟ ಇಂದ್ರಿಯಗಳ ಚಟುವಟಿಕೆಗಳನ್ನು ಪ್ರಜ್ಞಾವಾಹಿಯಿಂದ ಬೇರ್ಪಡಿಸುವ ಸಂಭವವಿದೆ ಎನ್ನುವುದು ನನಗೆ ಅಪರೂಪವಾಗಿ ಅನುಭವಕ್ಕೆ ಬಂದಿತ್ತು.ಆದರೂ ಈಗ ಮನಸ್ಸು ಹೀಗೆ ಇಂದ್ರಿಯಗಳ ಮೇಲಿನ ತನ್ನ ಹತೋಟಿಯನ್ನು ಕಳೆದುಕೊಳ್ಳಲು ಅದಕ್ಕೆ ಒಂದು ಗುರುತರವಾದ ಗುರಿ ಇರಬೇಕಲ್ಲ? ಅಂಥ ಗುರುತರವಾದ ಗುರಿಯೇನು? ನನ್ನ ಊಟ, ವಸತಿಯ ಸಮಸ್ಯೆಯೆ?ಛೆ! ಅದು ಸಮಸ್ಯೆಯೇ ಅಲ್ಲ. ಮತ್ತೇನು ಪರೀಕ್ಷೆ? ಲಾ ಪರೀಕ್ಷೆ ಪಾಸಾಗಿ ಎರಡನೆಯ ಮನುವಾಗಬೇಕೆಂಬ ಅಪೇಕ್ಷೆಯಂತೂ ನನ್ನಲ್ಲಿರಲಿಲ್ಲ. ಕಿಟ್ಟುವಿನ ಸಹವಾಸದ ಸಂತಸವೆ? ಅದೂ ಅಂಥ ಪ್ರಜ್ಞಾಪ್ರವಾಹವನ್ನೇ ವಿಮುಖವನ್ನಾಗಿ ಮಾಡುವಂಥ ಮಹತ್ವದ ಸಂತಸವಲ್ಲ. ನಾವು ಎಲ್ಲ ಅರ್ಥದಲ್ಲೂ ಬರೆಯ ಗೆಳೆಯರು ಮಾತ್ರ. ಹೆಚ್ಚೆಂದರೆ ನಾವಿಬ್ಬರೂ ರಸಿಕತನದ ಹರಟೆ ಹೊಡೆದು ವೇಳೆ ಕಳೆಯಬಹುದು. ಒಟ್ಟಿಗೆ ಮೆರಿನಾ ಸಮುದ್ರ ತೀರದಲ್ಲಿ ವಿಹರಿಸಬಹುದು. ಒಂದೆರಡು ಸಿನೀಮಾಗಳನ್ನು ಜೊತೆಯಾಗಿ ನೋಡಬಹುದು. ಇವುಗಳಲ್ಲೇನಿದೆ?

ಕಿಟ್ಟು ಈಗ ನಾನೆಂದುದನ್ನು ನಂಬಿದನೆ, ಇಲ್ಲವೆ? ಥಕ್ಕನೆ ಮರವೆಗೆ ಈಡಾಗುವ ನನ್ನ ಸ್ವಭಾವ ಅವನಿಗೆ ತಿಳಿಯದಿಲ್ಲ. ಆದರೆ ಆ ಮರವೆಗೆ ಈಗ ತನ್ನ ಹೆಂಡತಿಯ ದರ್ಶನವೇ ಕಾರಣವೆಂದು ಅವನು ಭಾವಿಸಿದರೆ? ಬಾಂಧವ್ಯದ ಬಂಧನಕ್ಕೆ ನಾನು ಸದಾ ಅಂಜುವವ. ಆದಷ್ಟು ಮಟ್ಟಿಗೆ ಅದರ ಜೇಡನ ಕಾಲುಗಳಿಂದ ದೂರವಿರಲು ಯತ್ನಿಸುವವ. ಕಿಟ್ಟುವಿಗೆ ನನ್ನ ಈ ನಿಷ್ಠೆ ಗೊತ್ತಿತ್ತೆಂದು ಹೇಳಲಾಗದು. ಆದ್ದರಿಂದ ನಾನು ಅವನ ಹೆಂಡತಿಯನ್ನು ಕಂಡೊಡನೆ ಅವಳ ರೂಪ ಲಾವಣ್ಯಗಳಿಂದಾಗಿ ಚಕಿತನಾಗಿ ಬಿಟ್ಟೆನೆಂದು ಅವನು ಭಾವಿಸಲು ಅವಕಾಶವಿದೆಯಲ್ಲಾ ಎಂದು ನಾನು ಪರಿತಪಿಸಿದೆ.

ಇದು ಕೇವಲ ಕಿಟ್ಟುವಿನ ಸಮಾಧಾನದ ಪ್ರಶ್ನೆಯಾಗಿರಲಿಲ್ಲ. ನನ್ನ ಮನಸ್ಸಿಗೇ ನಾನು ಉತ್ತರ ಹೇಳಬೇಕಿತ್ತು. ಕಾಫಿಯನ್ನೇನೋ ನಾನು ಕುಡಿದೆ ನಿಜ. ಆದರೆ ಅದರ ರುಚಿ ನನ್ನ ಗಮನಕ್ಕೆ ಏಕೆ ಬರಲಿಲ್ಲ? ನನ್ನ ಪ್ರಜ್ಞಾವಾಹಿನಿ ಅದನ್ನೇಕೆ ಹೊರಗಿನಿಂದ ಹೊರಗೇ ವರ್ಜಿಸಿಬಿಟ್ಟತು? ನಾನೇನು ನೈಟ್ರಿಕ್ ಎಸಿಡ್ ಕುಡಿಯಬಲ್ಲ, ಗಾಜನ್ನು ತಿನ್ನಬಲ್ಲ ಯೋಗಿಯ ಶಕ್ತಿಯನ್ನು ಒಮ್ಮಿಂದೊಮ್ಮೆಲೇ ಪಡೆದೆನೆ?

ಹೀಗೆ ಮನಸ್ಸನ್ನು ತಿರುವುಮುರುವು ಮಾಡಿ ಆಲೋಚಿಸುತಿದ್ದಂತೆಯೇ ಕಿಟ್ಟು ಕೋಣೆಯೊಳಗೆ ಪ್ರವೇಶಿಸಿದ.

"ಆಕೆ ಕಾಫಿಗೆ ಸಕ್ಕರೆ ಹಾಕಿದುದು ಕರಗದೆ ಹಾಗೆಯೇ ಲೋಟಗಳ ಬುಡದಲ್ಲಿಉಳಿದಿತ್ತು. ನಾನೊಂದಿಷ್ಟು ಸಕ್ಕರೆಯನ್ನೇ ಬಾಯಿಗೆ ಸುರಿದುಕೊಂಡೆ."

ಕಿಟ್ಟು ಹೀಗೆಂದಾಗ ನನ್ನ ಸಮಸ್ಯೆ ಪರಿಹಾರವಾದಂತೆಯೂ ತೋರಿತು, ಮರುಕ್ಷಣದಲ್ಲಿ ಅದು ಜಟಿಲವಾದಂತೆಯೂ ಕಾಣಿಸಿತು. ನನ್ನನ್ನವನು ಪರೀಕ್ಷೆ ಮಾಡುತಿದ್ದಾನೋ ಏನೋ ಎಂಬ ಸಂಶಯ ಇದರೊಡನೆಯೇ ಮೂಡಿತು.

ಇದೇನಾದರೂ ಒಂದೆರಡು ಗಂಟೆಗಳ ಸಂಬಂಧವಾಗಿದ್ದರೆ ನನಗೆ

ಬಹುಶಃ ಅಷ್ಟೊಂದು ಕಳವಳವಾಗುತ್ತಿರಲಿಲ್ಲ.ಆದರೆ ನಾನು ಸುಮಾರು ಒಂದು ತಿಂಗಳ ಕಾಲ ಕಿಟ್ಟುವಿನ ಅತಿಥಿಯಾಗಿ ಉಳಿಯುವವ. ಮನೆಯಲ್ಲಿರುವುದು ಅವನು ಮತ್ತು ಅವನ ಹೆಂಡತಿ ಇಬ್ಬರೇ. ಅವನು ಮುಂಜಾನೆ ಹತ್ತು ಗಂಟೆಗೆ ಕಚೇರಿಗೆ ಹೋದರೆ ಮರಳುವುದು ಸಂಜೆ ಆರು ಗಂಟೆಗೆ. ಅಷ್ಟರತನಕ ಮನೆಯಲ್ಲಿ ನಾವಿಬ್ಬರೇ. ಇದಕ್ಕಾಗಿಯೇ ಕಿಟ್ಟು ನನ್ನ ಮನೋಸ್ಥೈರ್ಯವನ್ನು ಪರೀಕ್ಷಿಸಿದನೇ ಎಂದು ನನಗೆ ಭಯವಾಗಿತ್ತು.

ಕಾಫಿಯ ಗುಟುಕೊಂದು ಇಂಥ ಸಮಸ್ಯೆಯನ್ನುಂಟುಮಾಡಿದುದು ನನಗೆ ಇದೇ ಮೊದಲು.ಕಿಟ್ಟುವಿನ ಆತಿಥ್ಯವನ್ನು ನಿರಾಕರಿಸಿ ಬಿಡುವುದೇ ಈ ಸಂದರ್ಭದಲ್ಲಿ ಉಚಿತವೆಂದು ನನಗೆ ಆಗ ಅನ್ನಿಸದಿರಲಿಲ್ಲ. ಹಾಗೆಯೇ ಕಿಟ್ಟುವಿಗೆ ಏನೇನೋ ನೆವ ಹೇಳಿ ನುಸುಳಲು ಯತ್ನಿಸಿದೆ. ಆದರೆ ಅವನು ನನ್ನನ್ನು ಹೋಗಬಿಡಲಾರನೆಂಬುದನ್ನು ಸ್ಪಷ್ಟಪಡಿಸಿದ. ಇದರಿಂದಾಗಿ ನನ್ನ ಮನಸ್ಸಿನ ಕಳವಳವೂ ಕಡಿಮೆಯಾಯಿತು: ಏಕೆಂದರೆ ಕಿಟ್ಟು ನನ್ನ ವರ್ತನೆಯ ಬಗ್ಗೆ ಸಂದೇಹ ತಾಳಿದ್ದರೆ ಹಾಗೆ ನನ್ನನ್ನು ಒತ್ತಾಯ ಪಡಿಸುವಗೋಜಿಗೆ ಹೋಗುತ್ತಿರಲಿಲ್ಲವೆಂಬುದು ನನಗೆ ಸ್ಪಷ್ಟವಾಯಿತು.

ಆದರೂ ಈ ಘಟನೆ ನನಗೆ ಒಂದು ಎಚ್ಚರಿಕೆಯಾಗಿತ್ತು ಎಂಬುದರಲ್ಲಿ ಸಂದೇಹವಿರಲಿಲ್ಲ. ನನ್ನ ಈ ಮನೋದೌರ್ಬಲ್ಯದ ಕೈವಾಡಕ್ಕೆ ಇನ್ನೊಂದು ಅವಕಾಶ ಕೊಡಬಾರದು ಎಂದು ನಾನು ಆಗ ನಿರ್ಧರಿಸದೆ ವಿಧಿಯಿರಲಿಲ್ಲ.

೨

ಅಂಬುಜಮ್ಮಾಳ್ ಕಿಟ್ಟುವಿನ ಮನೆಯೊಡತಿ. ಆಕೆಯೂ ಆ ಮನೆಯ ಎರಡು ಕೋಣೆಗಳಲ್ಲಿ ವಾಸಿಸುತಿದ್ದಳು. ಕಿಟ್ಟುವಿನ ಅಡುಗೆ ಕೋಣೆ ಮತ್ತು ಇನ್ನೊಂದು ಕೋಣೆ ಅವಳ ಕೋಣೆಗಳ ಎದುರಲ್ಲಿದ್ದುವು. ಅವರೆಡರ ಮಧ್ಯದಲ್ಲಿ ಜಗಲಿ ಮತ್ತು ಒಳಅಂಗಳವಿದ್ದುವು. ಮಹಡಿಯಲ್ಲಿ ನಾನಿದ್ದ ಕೋಣೆಯಲ್ಲದೆ ಇನ್ನೊಂದು ಕೋಣೆ ಮತ್ತೊಂದು ವಿಶಾಲವಾದ ಕೊಠಡಿಗಳು ಇದ್ದುವು. ಆ ಕೊಠಡಿಯ ಮೂಲಕವೇ ನಾನು ನನ್ನ ಕೋಣೆಗೆ ಹಾದು ಹೋಗಬೇಕಿತ್ತು. ಮಹಡಿಯ ಕೊಠಡಿ ಮತ್ತು ಇನ್ನೊಂದು ಕೋಣೆಯಲ್ಲಿ ಮೂವರು ಮಲೆಯಾಳಿಗಳಿದ್ದರು. ಅವರಲ್ಲಿ ಇಬ್ಬರು ಹೆಂಗಸರು. ಅಂತೂ ಆ ಮನೆಯಲ್ಲಿ ನಾವು ಗಂಡಸರು ಅಲ್ಪಸಂಖ್ಯಾಕರಾಗಿದ್ದೆವು.

ನಾನು ಕಾಫಿಗೆ ಮತ್ತು ಊಟಕ್ಕೆ ಹೋಟೇಲಿಗೆ ಹೋಗುವಾಗ ಕಿಟ್ಟುವಿನ ಕಣ್ಣು ತಪ್ಪಿಸಿಯೇ ಹೋಗಬೇಕಾಗುವುದೆಂಬುದು ನನಗೆ ಮರುದಿನವೇ ಸ್ಪಷ್ಟವಾಯಿತು. ನಮ್ಮ ಮೂಲ ಕರಾರಿನ ಈ ಶರ್ತವನ್ನು ಪಾಲಿಸಲು ಅವನು ಸಿದ್ಧನಿರಲಿಲ್ಲ. ಮತ್ತೆ ನಾನಾಗಿ ಸಂಪೂರ್ಣ ಅವನ ಹರಪುಟ್ಟನಾಗಿ ಇರಲು ಇಚ್ಛಿಸುತ್ತಿರಲಿಲ್ಲ. ನನ್ನಂಥವರಿಗೆ ನಿತ್ಯ ತನ್ನ ಮನೆಯಲ್ಲಿ ಆದರಾತಿಥ್ಯಗಳನ್ನು ಮಾಡುವಷ್ಟು ಅನುಕೂಲ ಅವನಿಗಿರುತಿದ್ದರೆ ಈ ನೂರೈವತ್ತು ರೂಪಾಯಿ ಸಂಬಳದ ಕೆಲಸಕ್ಕೆ ಕೈಹಾಕುತ್ತಿರಲಿಲ್ಲವೆಂಬುದನ್ನು ಪ್ರತ್ಯೇಕ ಹೇಳಬೇಕಾಗಿರಲಿಲ್ಲ. ಮೂರು ಬಿಡಾರಗಳಿರುವ ಈ ಮನೆಯಲ್ಲಿ ಒಂದು ಬಿಡಾರ ಹಿಡಿದಿದ್ದನೆಂದ ಬಳಿಕ ಅವನ ನಿಜವಾದ ಸ್ಥಿತಿಯೇನೆಂಬುದನ್ನು ಅರಿತುಕೊಳ್ಳಲು ಸಾಧ್ಯವಿತ್ತು. ಯಾವುದಾದರೂ ಒಂದು ರೀತಿಯಲ್ಲಿ ಅವನಿಗೆ ಪ್ರತ್ಯುಪಕಾರ ಸಲ್ಲಿಸಲು ನಾನು ಆಗಲೇ ನಿಶ್ಚೈಸಿಯಾಗಿತ್ತು.

ನಾನು ಬಂದ ಮರುದಿನವೇ ಅಂಬುಜಮ್ಮಾಳ ಮುಖಾಮುಖಿ ಪರಿಚಯವಾಯಿತು. ನಾನು ಮುಂಜಾನೆ ಎದ್ದುದೇ ಅವಳ ಕರ್ಕಶವಾದ ಮಾತುಗಳ ಸದ್ದಿನಿಂದ. ಯಾರೋ ಹಾಲು ಮಾರುವವನೊಡನೆಯೋ, ಕಾಯಿಪಲ್ಲೆ ಮಾರುವವನೊಡನೆಯೋ ಅವಳು ಬಲವಾದ ಚರ್ಚೆ ನಡೆಸಿದ್ದಳು. ಇದರ ಪರಿಣಾಮದಿಂದ ಅವಳಿಗೇನಾದರೂ ಒಂದೆರಡು ಕಾಸು ಲಾಭವಾಗಿದ್ದರೂ, ಉಳಿದ ನನ್ನಂಥವರಿಗೆ ನಿದ್ದೆಯ ಮಟ್ಟಿಗಾದರೂ ನಷ್ಟವೇ ಆಯಿತೆನ್ನಬಹುದು. ಇಂಥ ಚಪಲ ನಾಲಿಗೆಯ ಕರ್ಕಶ ಕಂಠದಾಕೆಯನ್ನು ನಾನು ಹೇಗೆ ಎದುರಿಸುವೆನೋ ಎಂಬ ಭಯ ನನ್ನಲ್ಲಿ ಮೂಡಿತು. ನಾನೇನೋ ಕಿಟ್ಟನ ಅತಿಥಿ ಎಂಬುದು ನಿಜ. ಅತಿಥಿಗೆ ಸನ್ಮಾನ ಆದರ ಸಲ್ಲಬೇಕಾದ್ದೇ. ಆದರೆ ಪ್ರತ್ಯೇಕ ಮೂರು ಬಿಡಾರಗಳಿರುವ ಮನೆಯಲ್ಲಿ ಇಂಥ ಶಿಷ್ಟಸಂಪ್ರದಾಯಕ್ಕೆ ಅಪಚಾರವಾದರೆ ಆಶ್ಚರ್ಯವೇನೂ ಇರಲಿಲ್ಲ. ಅದರಲ್ಲೂ ನನ್ನ ಕೋಣೆಗೆ ಸಂಪೂರ್ಣವಾಗಿ ಮನೆಯ ಉಳಿದ ಭಾಗಕ್ಕೆ ಸಂಪರ್ಕವಿಲ್ಲದಿರುತಿದ್ದರೆ ನಾನು ಸಾಧ್ಯವಾದಷ್ಟು ಮಟ್ಟಿಗೆ ಇತರರ ಗೋಜಿಗೆ ಹೋಗದೆಯೇ ಇರಬಹುದಿತ್ತು. ಆದರೆ ನನ್ನ ಕೋಣೆಗೆ ಮನೆಯೊಳಗಿಂದಲೇ ದಾರಿ ಇದ್ದುದರಿಂದ ನಾನು ಈ ಮೂರು ಸಂಸಾರಗಳಿಂದ ದೂರವಾಗಿರುವದು ಅಸಂಭವನೀಯವಾಗಿತ್ತು.

ಮುಂಜಾನೆ ಕಿಟ್ಟು ಕಚೇರಿಗೆ ಹೋದ ಬಳಿಕ ನಾನು ಕೋಣೆಯ ಬಾಗಿಲನ್ನು ಮುಚ್ಚಿ ಅಭ್ಯಾಸವನ್ನು ಆರಂಭಿಸಿದೆ. ಆರೇಳು ವಿಷಯಗಳನ್ನು ನಾನು ಎರಡು ಮೂರು ವಾರಗಳೊಳಗೆ ಕರಗತ ಮಾಡಿಕೊಳ್ಳಬೇಕಿತ್ತು. ಆನೆಯನ್ನು ಹಿಡಿದು ಸೇರಿನ ಪಾತ್ರೆಯಲ್ಲಿ ಹಾಕುವಷ್ಟೇ ಗಡುತರವಾದ ಕೆಲಸವಾಗಿತ್ತದು. ಸರಿಯಾಗಿ ಕಲಿಯಬೇಕಾದರೆ ಒಂದೊಂದು ವಿಷಯಕ್ಕೆ ಒಂದೊಂದು ವರ್ಷವೂ ಸಾಲದು. ಆದರೆ ಪರೀಕ್ಷೆಯ ತಂತ್ರ ಎಲ್ಲರಿಗೂ ಗೊತ್ತು. ಹತ್ತು ವರ್ಷಗಳ ಪ್ರಶ್ನೆಪತ್ರಿಕೆಗಳ ಸಂಗ್ರಹವೇ ನನ್ನ ಮುಂದಿತ್ತು. ಅವುಗಳನ್ನು ತಿರುವಿ ಹಾಕಿ ಪೃಥಕ್ಕರಿಸಿದಾಗ ಮುಂದಿನ ಬಾರಿ ಯಾವ ಪ್ರಶ್ನೆಗಳು ಬರಬಹುದೆಂಬುದನ್ನು ಊಹಿಸಲು ಕಷ್ಟವಿರಲಿಲ್ಲ. ಅದೂ ಕೇವಲ ಐದೋ ಆರೋ ಪ್ರಶ್ನೆಗಳನ್ನು ಕೊಟ್ಟು ಅವುಗಳನ್ನೆಲ್ಲಾ ಉತ್ತರಿಸಬೇಕೆಂದು ಪರೀಕ್ಷೆಯಲ್ಲಿ ಕೇಳುತ್ತಿರಲಿಲ್ಲ. ಪರೀಕ್ಷಕ ಹನ್ನೆರಡೋ ಹದಿನೈದೋ ಪ್ರಶ್ನೆಗಳನ್ನು ಕೊಟ್ಟು ಅವುಗಳ ಪೈಕಿ ಐದನ್ನು ಮಾತ್ರ ಉತ್ತರಿಸಲು ಸೂಚಿಸುತ್ತಿದ್ದ. ಹೀಗಾಗಿ ವಿಷಯದ ವಿಸ್ತಾರ ಸಂಕುಚಿತವಾಗುತ್ತಿತ್ತು. ಪರೀಕ್ಷೆಗೆ ಅನ್ಯವಾದ ವಿಷಯಗಳನ್ನು ವರ್ಜಿಸಿ ಕೇವಲ ಪರೀಕ್ಷೆಗೆ ಬೇಕಾದಷ್ಟೇ ವಿಷಯವನ್ನು ನಿರೂಪಿಸುವ ಹಸ್ತಿಕೆಗಳಿಗೂ ಏನೂ ಕಡಿಮೆಯಿರಲಿಲ್ಲ. ಪರೀಕ್ಷೆಯ ಸಮಯ ನಿಜವಾಗಿ ಅವುಗಳೇ ಆಪದ್ಬಾಂಧವನಂತಿದ್ದುವು. ಅವುಗಳೇ ನನಗೆ ಪರೀಕ್ಷೆಯನ್ನು ಧೈರ್ಯದಿಂದ ಎದುರಿಸಲು ಹುರಿದುಂಬಿಸಿದವುಗಳು. ಇಲ್ಲವಾದರೆ ನಾನು ಅಭಿನವ ಮನುವಾಗುವ ಯತ್ನವನ್ನೇ ಕೈಬಿಡಬಹುದಿತ್ತು.

ವಿದ್ಯಾರ್ಥಿಪ್ರಪಂಚದ ಶಿಸ್ತಿನ ಸೀಮೋಲ್ಲಂಘನವನ್ನು ಎಂದೋ ಮಾಡಿದ್ದ ನನಗೆ ಹೀಗೆ ಒಂದೆಡೆ ಕುಳಿತು ಓದಿದ್ದನ್ನೇ ಓದುವ ಕೆಲಸ ಸಶ್ರಮ ಕಾರಾಗೃಹವಾಸದ ಶಿಕ್ಷೆಯಂತಿತ್ತು. ಪರೀಕ್ಷೆಗೆ ಸಂಬಂಧಿಸಿದ ಪುಸ್ತಕಗಳತ್ತ ಗಮನ ಹರಿಸುವುದೇ ಕಷ್ಟಸಾಧ್ಯವಾಗಿತ್ತು. ನಾಲ್ಕೈದು ಪುಟ ಓದುವಾಗ ಮೇಜಿನ ಮೇಲಿದ್ದ ಯಾವುದೋ ಪತ್ರಿಕೆಯ ನೆನಪಾಗುವುದು. ಪುಸ್ತಕ ಮುಚ್ಚಿಟ್ಟು ಪತ್ರಿಕೆಯನ್ನು ಓದಲು ಆರಂಭ ಆಗ. ಅದು



ಮುಗಿಯದ ಓದು. ಮುಂದೆ ಪುನಃ ಪಠ್ಯಪುಸ್ತಕವನ್ನು ಓದಬೇಕೆಂಬ ಸದುದ್ದೇಶವಿದ್ದರೂ, ಅದಕ್ಕೆ ಮೊದಲು ಒಂದಿಷ್ಟು ಕಾಫಿ ಕುಡಿಯ ಬೇಕೆಂಬ ಪ್ರಲೋಭನ. ಊಟಕ್ಕೆ ಇನ್ನೂ ಎರಡು ತಾಸಿದೆ. ಆ ಮಧ್ಯೆ ಒಂದು ನೀರುಳ್ಳಿ ದೋಸೆ ಒಂದು ಕಪ್ ಕಾಫಿ ಅತ್ಯಂತ ಹಿತಕರವೆಂಬ ಭಾವನೆ ಬೃಹದಾಕಾರ ತಾಳುವುದು. ಹಿಂದೆ ಬಂದವ ನೂರು ಪುಟಗಳನ್ನು ಓದದೆ ಊಟಕ್ಕೆ ಹೋಗಲಿಕ್ಕಿಲ್ಲವೆಂದು ಪ್ರತಿಜ್ಞೆ ಮಾಡುವೆನು. ಮನಸ್ಸಿಗೆ ಕುಶಾಗ್ರತೆಯನ್ನುಂಟುಮಾಡಲು ಭಸ್ಮಾಸುರನು ಸಹಾಯವಾಗುವನೆಂಬ ಭ್ರಮೆಯಿಂದ ಒಂದು ಪ್ಯಾಕೇಟು ಸಿಗರೇಟನ್ನು ತರುವೆನು.

ಇಂಥ ಪೂರ್ವಸಿದ್ಧತೆಯ ಕೆಲಸದ ಹೆಚ್ಚಿನ ಭಾಗ ನಿಷ್ಫಲ ವೆಂಬುದು ನನಗೆ ಅನುಭವಸಿದ್ಧವಾಗಿತ್ತು. ಆದರೂ ಎಷ್ಟೋ ಸಲ ಮಧ್ಯರಾತ್ರಿಯಲ್ಲಿ ಯಾವ ಚಹದಂಗಡಿಯಲ್ಲಿ ಬಾಗಿಲು ತೆರೆದಿದೆ ಎಂಬುದರ ಅನ್ವೇಷಣೆ ನಡೆಸಿ ಪರೀಕ್ಷೆಯ ನೆವನದಿಂದ ಬಿಸಿಬಿಸಿ ಚಹಾಮಾಡಿಸಿ ಕುಡಿದಿದ್ದೇ, ಸಹಪಾಠಿಗಳೊಡನೆ ಮತ್ತು ಸಹಾಭ್ಯಾಸಿಗಳೊಡನೆ. ರಾತ್ರಿ ಬಿಸಿ ಚಹ ಕುಡಿದರೆ ನಿದ್ದೆ ಹತ್ತಲೊಲ್ಲದು ಎಂಬ ಸಾಮಾನ್ಯಪ್ರತೀತಿ ಇಂಥ ಸಂದರ್ಭಗಳಲ್ಲಿ ಹತ್ತರಲ್ಲಿ ಒಂಭತ್ತು ಸಲ ಸುಳ್ಳಾಗುತ್ತಿತ್ತು. ನಮ್ಮಲ್ಲಿ ಹೆಚ್ಚಿನವರಿಗೆ ಚಹ ಕುಡಿದು ಕೋಣೆಗೆ ಮರಳಿದೊಡನೆ ಅಫೀಮು ತಿಂದ ವರಂತೆ ಅಮಲೇರುತ್ತಿತ್ತು. ಆದರೂ ಇದು ಪ್ರಕಟವಾಗದಂತೆ ಮತ್ತೆ ದೀಪ ಆರಿಸದೆಯೇ ನಿದ್ರಿಸುತಿದ್ದೆವು. ಇದರಿಂದಾಗಿ ಉಳಿದವರು "ರಾತ್ರಿ ಯಿಡೀ ಓದಿದರು" ಎಂದು ನಮ್ಮ ಸಾಹಸವನ್ನು ಬಣ್ಣಿಸುತ್ತಿದ್ದುದೊಂದೇ ನಮಗೆ ಸಮಾಧಾನ.

ಹೀಗೆ ಸುಮಾರುಎಂಟು ವರ್ಷಗಳಿಂದ ನನ್ನಲ್ಲಿ ಬೆಳೆದು ಬಂದಿದ್ದ ಈ ಪರೀಕ್ಷಾ ಪೂರ್ವಪ್ರವೃತ್ತಿ ಕಿಟ್ಟುವಿನ ಆತಿಥ್ಯದಲ್ಲಿ ಸೋಲಬಹು ದೆಂದು ನಾನು ಇಟ್ಟುಕೊಂಡಿದ್ದ ಆಸೆ ಸುಳ್ಳಾಗುವುದೆಂಬುದು ನನಗೆ ಮರುದಿನವೇ ಖಚಿತವಾಯಿತು. ಕಿಟ್ಟು ಹತ್ತುಗಂಟೆಗೆ ಕಚೇರಿಗೆ ಹೋದ ಬಳಿಕ ಹೇಗೋ ಅರ್ಧ ತಾಸನ್ನು ಕೋಣೆಯೊಳಗೆ ಓದುತ್ತ ಕಳೆಯುವಾಗ ಒಮ್ಮೆಲೇ ಆಕಳಿಸತೊಡಗಿದೆ. ಕಣ್ಣಿನಲ್ಲಿ ನೀರು ಬರತೊಡ ಗಿತು. ರೆಪ್ಪೆಗಳು ಭಾರವಾದಂತಾಗತೊಡಗಿದವು. ಸಾಮಾನ್ಯವಾಗಿ ಹಗಲು ನಿದ್ರಿಸುವ ರೂಢಿಯೇ ಇಲ್ಲದ ನನಗೆ ನಿದ್ದೆಯ ಈ ಪೂರ್ವ ಸೂಚನೆಗಳು ಹೋಟೇಲಿಗೆ ಹೋಗಲು ಪ್ರೇರೇಪಿಸಿದವು. ಅಂತೂ ನನ್ನ ಈ ಪರಿಕ್ಷಾ ತಪಶ್ಚರ್ಯೆಯನ್ನು ಭಂಗ ಮಾಡಲು ಅನೇಕ ರೂಪದ ಮೋಹಿನಿಗಳು ಎಂದಿನಂತೆ ಯತ್ನಿಸುತ್ತಿದ್ದುವೆಂಬದುರಲ್ಲಿಸಂಶಯವಿರಲಿಲ್ಲ.

ಸರಿ. ಕೂಡಲೇ ಅಂಗಿಹಾಕಿಕೊಂಡು, ಕೋಣೆಗೆ ಬೀಗ ಹಾಕಿ ಹೊರನಡೆದೆ. ಬಾಗಿಲಲ್ಲೇ ನಿಂತು ಕೆಲಸದವಳೊಡನೆ ಮಾತಾಡು ತಿದ್ದ ಅಂಬುಜಮ್ಮಾಳ್ ನನ್ನನ್ನು ನೋಡಿ ಸಡಗರದಿಂದ ನಸುನಗುತ್ತ ನನಗೆ ದಾರಿ ಮಾಡಿಕೊಟ್ಟಳು.

ನಾನು ಹೋದ ಚಹದಂಗಡಿಯ ಒಡೆಯರು ನನ್ನ ಹಿಂದಿನ ಪರಿ ಚಯದವರಾಗಿದ್ದರು. ಕೆಲತಿಂಗಳ ಹಿಂದಿನ ವರೆಗೆ ಅವರು ಮೌಂಟ್ ರೋಡಿನ ಊಟದ ಹೋಟೇಲಿನಲ್ಲಿ ನೌಕರರಾಗಿದ್ದರು. ನನ್ನನ್ನವರು ಸ್ವಾಗತಿಸುತ್ತ ತಾನು ನೌಕರಿಯಿಂದ ನಿವೃತ್ತಿ ಹೊಂದಿ ಒಡೆತನದ ಹಂತಕ್ಕೇರಿದ ಸಂಗತಿಯನ್ನು ಸಂತೋಷದಿಂದ ವಿವರಿಸಿದರು. ಹಿಂದೆ ನಮ ಗಿದ್ದ ಪರಸ್ಪರ ಪರಿಚಯ ಅಷ್ಟಕ್ಕಷ್ಟೆ ಆಗಿದ್ದರೂ, ಈಗ ಅವರು ಆಪ್ತ ರಂತೆ ಮಾತಾಡಿದುದನ್ನು ನೋಡುವಾಗ, ಅವರ ದೀರ್ಘ ಕಾಲದ ಆಸೆ ಫಲಿಸಿದುದಕ್ಕಾಗಿ ಅವರು ಎಷ್ಟು ಉಬ್ಬಿ ಹೋಗಿದ್ದರೆಂಬುದು ಸ್ಪಷ್ಟವಾ ಗುತ್ತಿತ್ತು. ಎಲ್ಲೋ ಚಿಕ್ಕಂದಿನಲ್ಲಿ ಹಿಟ್ಟು ರುಬ್ಬುವ ಹುಡುಗನಾಗಿ ಹೋಟೆಲಿಗೆ ಸೇರಿಕೊಂಡು, ಅಲ್ಲೇ ಬಾಲ್ಯ ಮತ್ತು ಕೌಮಾರ್ಯಗಳನ್ನು ಸಂಪೂರ್ಣವಾಗಿ ಕಳೆದು ಯೌವ್ವನದ ಗಡಿದಾಟುವ ವೇಳೆಗೆ ತನ್ನ ಸ್ವಂತ ಕಾಲಿನಲ್ಲೇ ನಿಲ್ಲುವ ಸಾಹಸವನ್ನು ಅವರು ಮಾಡಿದುದು ಪ್ರಶಂಸ ನೀಯವಾಗಿತ್ತೆನ್ನುವುದರಲ್ಲಿ ಸಂದೇಹವಿರಲಿಲ್ಲ. ನಮ್ಮೂರು ಬಟ್ಟ ಹೆಚ್ಚಿ ನವರು ಇಂಥ ಅವಸ್ಥಾಂತರಗಳನ್ನು ದೂರದ ಊರುಗಳಲ್ಲಿ ಪಡೆದು 'ಉಡುಪಿ' ಎಂಬ ಅಂಕಿತವನ್ನು ತಮ್ಮ ಹೋಟೇಲ್ ವ್ಯಾಪಾರಕ್ಕೆ ಅಂಟಿಸಿ ಕೊಳ್ಳುತಿದ್ದರೂ, ಅವರಿಂದ ಎಷ್ಟೋ ಪಾಲು ಹೆಚ್ಚು ಮಂದಿ ಅನಾಮ ಧೇಯ ನೌಕರಿಯಲ್ಲೇ ತಮ್ಮ ಜೀವನವನ್ನು ಸವೆಯಿಸುತಿದ್ದರು ಎಂಬುದು ನನಗೆ ಗೊತ್ತಿತ್ತು. ಆದ್ದರಿಂದ ನಾನು ಈ ಹೋಟೇಲ್ ಒಡೆಯರನ್ನು ಅಭಿನಂದಿಸಿದೆ. ಅದರ ಪರಿಣಾಮವಾಗಿಯೋ ಏನೋ ಮಾಣಿಗೆ ಚಲೋ ಕಾಫಿ ತಿಂಡಿಗಳನ್ನು ಕೊಡಲು ಆಜ್ಞಾಪಿಸಿದರು.

ನಾವು ಪರಸ್ಪರ ವಿಚಾರ ವಿನಿಮಯ ಮಾಡುವಾಗ ನಾನು ಎಲ್ಲಿ ಉಳಿದುಕೊಂಡಿದ್ದೇನೆಂಬ ವಿಷಯವೂ ಬಂತು. ಅವರಿಗೆ ಅಂಬುಜಮ್ಮಾಳಳ ಪರಿಚಯವಿದೆಯೆಂದು ನನಗೆ ತಿಳಿಯಿತು. ನಾನು ಬರೇ ಒಂದು ತಿಂಗಳ ಕಾಲ ಅಲ್ಲಿರುವುದರಿಂದ ಚಿಂತಿಲ್ಲವೆಂದು ಅವರು ನುಡಿದರು. ಆಕೆ ಮಹಾ ಜಗಳಗಂಟ ವಿಧವೆಯಂತೆ. ತನ್ನ ಭಾಡೇದಾರರಿಗೆ ತೊಂದರೆ ಕೊಡುವು ದರಲ್ಲಿ ಸಿದ್ಧಹಸ್ತಳಂತೆ. ಅವರು ಹೋಟೇಲನ್ನು ಆರಂಭಿಸಿ ಕೇವಲ ಮೂರು ತಿಂಗಳಾಗಿದ್ದರೂ, ಅವಳು ಅವರೊಡನೆ ಎರಡು ಸಲ ಜಗಳ ಮಾಡಿ ಈಗ ಅವರಲ್ಲಿಗೆ ಬರುವುದನ್ನೇ ನಿಲ್ಲಿಸಿ ನಾಲ್ಕೈದು ರೂಪಾಯಿ ಬಾಕಿ ಮಾಡಿಕೊಂಡಿದ್ದಾಳಂತೆ. ನಾನು ಅವರ ಸ್ನೇಹಿತ ಎಂದು ತಿಳಿದ ರಂತೂ ಅವಳು ನನ್ನನ್ನು ಹಾಗೆಯೇ ಇರಬಿಡಲಾರಳು ಎಂದು ಅವರು ಹೆದರಿಸಿಯೂ ಹೆದರಿಸಿದರು.

"ಒಂದು ವೇಳೆ ಅವಳು ನಿಮಗೆ ಹಾಗೆ ತೊಂದರೆ ಕೊಟ್ಟರೆ ನನ್ನೊ ಡನೆ ಹೇಳಿ. ನಿಮಗೆ ನನ್ನ ಬಿಡಾರದಲ್ಲಿ ಒಂದು ಕೋಣೆ ಕೊಡುತ್ತೇನೆ. ಏನೂ ದಾಕ್ಷಿಣ್ಯ ಮಾಡಬೇಡಿ. ನೋಡಿ, ಈ ತಮಿಳರನ್ನು ನಂಬಲಿಕ್ಕಾಗದು. ಅದರಲ್ಲೂ ತಮಿಳು ವಿಧವೆಯರ ಸುದ್ದಿ ಬಿಡಿ. ನಮ್ಮಲ್ಲಾದರೆ ಎಷ್ಟೇ ಬಡವನಿದ್ದರೂ ತನ್ನ ಮನೆಯ ಒಂದು ಭಾಗವನ್ನು ಬಾಡಿಗೆಗೆ ಕೊಟ್ಟಾನೆ? ಇಲ್ಲಿ ಹಾಗಲ್ಲ. ಪ್ರಾಯಕ್ಕೆ ಬಂದ ಹೆಣ್ಣುಮಕ್ಕಳಿದ್ದರೂ ಮನೆಯ ಒಂದು ಭಾಗವನ್ನು ಬಾಡಿಗೆಗೆ ಕೊಡಲೇಬೇಕು. ಅದಕ್ಕೆ ಯಾರು ಬಂದರೂ ಚಿಂತೆ ಯಿಲ್ಲ; ತನಗೆ ಮದುವೆಯಾಗಿದೆ ಎಂದು ಅವನು ಸುಮ್ಮನೆ ಒಪ್ಪಿ ಕೊಂಡರೂ ಸಾಕು. ಜೀವನ ಹೇಗೆ ಮರ್ಯಾದೆಯಿಂದ ನಡೆಸಬೇಕೆಂಬು ದನ್ನು ಈ ಜನ ನಮ್ಮವರಿಂದ ಕಲಿತುಕೊಳ್ಳಬೇಕು!"

ನಾನು ತಲೆಯಲ್ಲಾಡಿಸುತ್ತ ಧನ್ಯವಾದವಿತ್ತೆ. ಈ ಮನುಷ್ಯನ ವಿಚಾರ ಸರಣಿ ಸರಳವಾಗಿತ್ತು, ಸ್ಪಷ್ಟವಾಗಿತ್ತು, ಅನುಭವ ಪೂರ್ಣ ವಾಗಿತ್ತು. ಜನರನ್ನು ಹೇಗೆ ಪರೀಕ್ಷಿಸಬೇಕೆಂಬ ಕಲೆಯನ್ನು ಹಸ್ತಗತ ಮಾಡಿಕೊಂಡಿದ್ದನಿವ. ನನ್ನ ವಿಚಾರ ಸರಣಿಯೂ ಅವರದನ್ನೇ ಹೋಲು ತಿದ್ದುದರಿಂದ ನನಗೆ ಅವರ ಮೇಲೆ ಸ್ವಲ್ಪ ಅಭಿಮಾನ ಹೆಚ್ಚಿಯೂ ಹೋಯಿತೆನ್ನಬಹುದು. ಅಂತೂ ಮನುಷ್ಯನ ಸ್ವಭಾವವನ್ನರಿಯಲಿಕ್ಕೆ, ವ್ಯವಹಾರ ಚತುರರಾಗಲಿಕ್ಕೆ ವಿದ್ಯೆಯ ಅವಶ್ಯವಿಲ್ಲವೆನ್ನುವುದಕ್ಕೆ ಅವರು ಜೀವಂತ ಸಾಕ್ಷಿಯಾಗಿದ್ದರು. ನನ್ನಂತೆ ಹಲವಾರು ವರ್ಷ ಸಾಲೆಗೆ ಹೋದ ವರಲ್ಲ ಅವರು; ಹಲವಾರು ಪರೀಕ್ಷೆಗಳಿಗೆ ಕುಳಿತು ತೇರ್ಗಡೆಹೊಂದಿದವ ರಲ್ಲ. ಆದರೂ ಅವರಲ್ಲಿ ಸಾಹಸದ, ಮುನ್ನುಗ್ಗುವ ಪ್ರವೃತ್ತಿ ನನ್ನಲ್ಲಿದ್ದು ದಕ್ಕಿಂತ ಎಷ್ಟೋ ಪಾಲು ಹೆಚ್ಚು ಇತ್ತು. ಆ ಪ್ರವೃತ್ತಿಯಿಂದಲೇ ಅವರ ಜನರ ನಡತೆಯನ್ನು ಪರಿಶೀಲಿಸುವ ಜಿಜ್ಞಾಸೆ ಹೆಚ್ಚಿತ್ತು. ತನ್ನಂತೆ ಪರರು ಎಂಬ ದೃಷ್ಟಿಕೋನದಿಂದ ಅವರು ಇತರರನ್ನು ಅಳೆಯುತ್ತಿದ್ದರು ವಿನಾ ತನ್ನಂತೆ ತಾನೊಬ್ಬನೇ ಎಂಬ ಸ್ವಾರ್ಥದ ನೆಲೆಯಿಂದಲ್ಲ.

ನಾನು ಕೊಟ್ಟ ಹಣವನ್ನು ನನ್ನ ಜೇಬಿಗೇ ಅವರು ಹಿಂತಿರುಗಿಸಿ ದರು.

"ಏನು ಇನ್ನು ಮುಂದೆ ನಾನು ನಿಮ್ಮಲ್ಲಿ ಕಾಫಿಗೆ ಬರಬಾರದೆಂದೆ?" ಎಂದು ನಾನು ತುಸು ಕಠಿಣವಾಗಿಯೇ ಪ್ರಶ್ನಿಸಿದೆ. ಅರ್ಥಾತ್ ಸಂಬಂಧ ವಿಲ್ಲದೆ ಬರಿಯ ಪರಿಚಯಸ್ಥರ ಹಂಗಿನಲ್ಲಿ ಅಷ್ಟು ಸುಲಭವಾಗಿ ಅದೂ ಕೇವಲ ನಾಲ್ಕಾರಾಣೆಗಳ ಆತಿಥ್ಯಕ್ಕಾಗಿ ಸೆರಗೊಡ್ಡುವಂತಿರಲಿಲ್ಲ.

"ಇನ್ನೊಮ್ಮೆ ಬಂದಾಗ ತೆಗೆದುಕೊಳ್ಳುತ್ತೇನೆ ನಮ್ಮ ಹೋಟೇಲು ಹೊಸದು. ನೀವೂ ಹಳೆಯ ಪರಿಚಯಸ್ಥರಾದರೂ ಹೊಸ ಗಿರಾಕಿ."

ನಾನು ನಮಸ್ಕರಿಸಿ ಹೊರಬಿದ್ದು ಒಂದು ಪ್ಯಾಕೇಟು ಸಿಗರೇಟು ಮತ್ತು ಬೆಂಕಿ ಪೆಟ್ಟಿಗೆಗಳನ್ನು ಖರೀದಿ ಮಾಡಿ ಕೋಣೆಯತ್ತ ನಡೆದೆ. ಹಿಂದೆ ಬಂದವ ಖಂಡಿತವಾಗಿ ಓದುವೆನೆಂದು ಮಾಡಿದ್ದ ದೃಢಪ್ರತಿಜ್ಞೆ ಕಾಫಿ ಕುಡಿಯುವ ಭರದಲ್ಲಿ ತುಂಬಾ ಅಪಮೌಲ್ಯವಾಗಿತ್ತು. ಕೆಳಗಿನಿಂದ ಮೆಟ್ಟ ಲೇರುವ ಬಳಿಗೆಹೋಗುವಾಗ ಒಳಗಿನಿಂದ ಕಿಟ್ಟುವಿನ ಹೆಂಡತಿಯ ಮುಖ ಕಾಣಿಸಿತು. ಮತ್ತೆ ಮೇಲೆರುತ್ತಿದ್ದಂತೆಯೇ ಹಿಂದಿನ ದಿನದ ಸಕ್ಕರೆ ಇಲ್ಲದ ಕಾಫಿಯ ಪ್ರಕರಣ ನೆನಪಿಗೆ ಬಂದು ನನ್ನೊಳಗೇ ನಕ್ಕೆ. ಕಿಟ್ಟು ಅವಳಿಗೂ ಈ ಸುದ್ದಿಯನ್ನು ಹೇಳಿರಬಹುದೆಂದು ನೆನೆಯುವಾಗ ಮನಸ್ಸಿಗೆ ತುಸು ಸಂಕೋಚವೂ ಆಯಿತೆನ್ನಬಹುದು.

ಮುಖ್ಯವಾಗಿ ಕಿಟ್ಟುವಿನ ಹೆಂಡತಿ ನನ್ನ ಮನಸ್ಸನ್ನು ಸೆಳೆಯ ಬಲ್ಲಂತಹ ಅಪೂರ್ವ ಸುಂದರಿಯೇ ಎಂಬ ಪ್ರಶ್ನೆಯನ್ನು ನಾನು ಎದುರಿಸ ಬೇಕಿತ್ತು-ನಿಸ್ಸಂಕೋಚವಾಗಿ. ಅದನ್ನು ಬಯಲಿಗೆಳೆಯುವಿದ್ದರೆ ಅದು

ಅಸ್ಪಷ್ಟವಾದ ಮನಸ್ಸಿನ ಮಂಡಿಗೆಯಾಗಿ ಉಳಿದು ಮುಂದೆ ಪದೇ ಪದೇ ನನ್ನ ಅಭ್ಯಾಸದ ವೇಳೆ ಅಡ್ಡ ಬರಬಹುದೆಂಬುದರಲ್ಲಿ ಸಂಶಯವಿರಲಿಲ್ಲ. ಇದರಿಂದಾಗಿ ಭಾವಪೂರಿತ ಕಲ್ಪನೆಗಳಿಗೂ ಮುಂದೆ ಎಡೆಸಿಗದು. ಕಿಟ್ಟುವಿನ ಹೆಂಡತಿಯ ಮುಖದಲ್ಲಿ ಮುಗ್ಧತನ ನಲಿಯುತಿತ್ತು. ವಿಶೇಷವಾದ ಒನಪು—ವಯ್ಯಾರಗಳನ್ನು ಅಳವಡಿಸಿಕೊಳ್ಳದ ಅವಳ ವರ್ತನೆಯಲ್ಲಿ ಒಂದು ವಿಧದ ತಾಟಸ್ಥ್ಯಭಾವ ಒಡೆದು ಕಾಣುತ್ತಿತ್ತು. ಬಹುಶಃ ಆಕೆ ತಿರಸ್ಕಾರ ಪ್ರವೃತ್ತಿಯ ಅಹಂಕಾರಿಯೂ ಅಲ್ಲ; ಪುರಸ್ಕಾರ ಪ್ರವೃತ್ತಿಯ ಸ್ನೇಹಮಯಿಯೂ ಅಲ್ಲ. ಆದ್ದರಿಂದಲೇ ಆಕೆ ನನ್ನನ್ನು ಕಂಡೊಡನೆ ನಾಚಿದಂತೆ ಮುಖವನ್ನು ಗಂಟಿಕ್ಕಿಕೊಳ್ಳುತ್ತಿದ್ದಿಲ್ಲ. ಇಲ್ಲವೇ ಬೇಕೆಂದೇ ನನ್ನನ್ನು ಕರೆದು ಮಾತಾಡುತ್ತಲೂ ಇರಲಿಲ್ಲ.

ಅವಳಲ್ಲೂ ಆಗ ಸಂಶಯಕಲ್ಲೋಲ ಎದ್ದಿರಬೇಕೆಂಬುದು ನನಗೆ ಇಷ್ಟು ವಿಚಾರ ಮಾಡುವಾಗ ಹೊಳೆಯಿತು. ಮೊದಲು, ಕಿಟ್ಟೂವಿಗೂ ನನಗೂ ಇದ್ದ ಸ್ನೇಹವನ್ನು ಕಂಡು ಆಕೆ ಅಸೂಯೆಪಡದಿದ್ದರೂ, ಆಶ್ಚರ್ಯಪಟ್ಟಿರಬೇಕು. ಏನೋ ಒಂದು ತರಗತಿಯಲ್ಲಿ ಮೂರು ವರ್ಷ ಒಟ್ಟಿಗೆ ಕಲಿತು ಬಿಟ್ಟರೆಂದರೆ ಮುಂದೆ ಎಲ್ಲರೂ ಪರಸ್ಪರ ಅತಿಥಿಗಳಾಗಲು ಯೋಗ್ಯರೆ? ಎಂಬ ಪ್ರಶ್ನೆ ಅವಳಲ್ಲಿ ಮೂಡಿರಬೇಕು. ತನ್ನ ಗಂಡನ ಸ್ನೇಹವನ್ನು ಈಗ ದುರುಪಯೋಗ ಮಾಡುತಿದ್ದಾನೆ ಈ ಗೆಳೆಯ ಎಂದೂ ಅವಳಿಗೆ ತೋರಿರಬಹುದು. ಎರಡನೆಯದಾಗಿ, ತನ್ನ ಗಂಡನಂತೆಯೇ ಇವನೂ ತನ್ನ ವರ್ತನೆಯನ್ನು ವಿಶ್ಲೇಷಿಸಿ ತನ್ನ ಗಂಡನೊಡನೆ ಹೊಗಳಬಹುದು, ಇಲ್ಲವೇ ತೆಗಳಬಹುದು. ತನ್ನ ಗಂಡ ಇವನ ಮಾತನ್ನು ಅಲ್ಲಗಳೆಯಲಿಕ್ಕಿಲ್ಲ. ಇವನ ಅಭಿಪ್ರಾಯಗಳ ಮೇರೆಗೆ ತನ್ನ ಗಂಡ ಒಂದೋ ತನ್ನನ್ನು ಇನ್ನೂ ಗಾಢವಾಗಿ ಪ್ರೀತಿಸಬಹುದು, ಅಥವಾ, ವಿರಸ ತಾಳಬಹುದು. ಮೂರನೆಯದಾಗಿ, ಈ ಮನುಷ್ಯ ತನ್ನನ್ನು ಪರೀಕ್ಷಿಸುವ ನೆವದಿಂದ ತನ್ನ ಮೈತ್ರಿಯನ್ನು ಗಳಿಸಲೂ ಯತ್ನಿಸಬಹುದು. ತನ್ನ ಗಂಡನಿಗೆ ದ್ರೋಹ ಬಗೆಯಬಹುದು. ಆದ್ದರಿಂದ ಏನಿದ್ದರೂ ತಾನು ಇವನಿಂದ ದೂರವಾಗಿರುವುದೇ ಲೇಸು ಎಂದು ಆಕೆ ನಿಶ್ಚೈಸಿರಬೇಕು ಎಂದು ನಾನು ಮನಸ್ಸಿನೊಳಗೇ ತರ್ಕಿಸಿದೆ.

ಮರುಕ್ಷಣದಲ್ಲಿ, ಅವಳು ನನ್ನ ಇರವನ್ನಾದರೂ ಗಮನಿಸಿರುವಳೋ ಇಲ್ಲವೋ, ಇದು ಕೇವಲ ನನ್ನ ಕಪೋಲ ಕಲ್ಪಿತ ಆತ್ಮನಿಷ್ಠ ತರ್ಕಸರಣಿ ಎಂದು ನೆನೆದುಕೊಂಡು, ನನ್ನನ್ನೇ ನಾನು ಹಳಿಸಿದೆ. ನಾನು ಬಂದ ಉದ್ದೇಶವೇನು, ನಾನು ಮಾಡಬೇಕಾಗಿರುವ ಮುಖ್ಯ ಕೆಲಸವೇನು ಎಂಬುದರ ಕಡೆಗೆ ಮನಸ್ಸು ಕೊಡದೆ ಹೀಗೆ ಅಂಕು ಡೊಂಕಾಗಿ ಭಾವನೆಗಳನ್ನು ಹರಿಯಬಿಡುವುದು ನನಗಾಗಲೀ, ಇತರರಿಗಾಗಲೀ, ಒಳ್ಳೆಯದಲ್ಲವೆಂದು ತುಸು ಗಟ್ಟಿಯಾಗಿಯೇ ಹೇಳಿಕೊಂಡೆ. ಮಹತೋಮಹಿಮನಿಗೆ ಅಣುವಾಗಲಿ, ತೃಣವಾಗಲಿ ಅತೀ ಮುಖ್ಯವಿರಬಹುದು. ಆದರೆ ನಾನು ಅಂಥ ಸೂಕ್ಷ್ಮ ದೃಷ್ಟಿಯನ್ನಿಟ್ಟುಕೊಳ್ಳುವುದು ವಿಶೇಷವಾಗಿ ಈ ಸನ್ನಿವೇಶದಲ್ಲಿ ಕಷ್ಟಕರವಾಗಿತ್ತು. ಹಾಗೆ ಸೂಕ್ಷ್ಮ ದೃಷ್ಟಿಯಿಂದಲೇ ಪ್ರತಿಯೊಂದು ಘಳಿಗೆಯನ್ನು ವಿಶ್ಲೇಷಿಸಿದರೆ ಆ ಕೆಲಸಕ್ಕೆ ನನ್ನ ಆಯುಷ್ಯ ಸಾಲದು. ಆದ್ದರಿಂದ ಹೊಳೆಯ ನೀರಿನಂತೆ ಕಸಕಡ್ಡಿಗಳನ್ನೆಲ್ಲ ದಡಕ್ಕಪ್ಪಳಿಸಿ ಪ್ರವಾಹವನ್ನು ಮುಂದುವರಿಸಬೇಕು, ಎಂಬ ನಿರ್ಧಾರಕ್ಕೆ ಕೊನೆಗೆ ಬಂದೆ.

ಮೆಲ್ಲನೆ ಒಂದು ಪಠ್ಯಪುಸ್ತಕವನ್ನು ತೆಗೆದು ಅದನ್ನು ಓದಲಾರಂಭಿಸಿದೆ. ಮುಹಮ್ಮದೀಯರ ಶಾಸನದ ಪುಸ್ತಕವದು. ಅದರಲ್ಲಿ ಆಸ್ತಿಪಾಲಿನ ಅಧ್ಯಾಯ ತುಂಬಾ ಜಟಿಲವಾದುದು. ಅದರ ಭಿನ್ನ ರಾಶಿಯುಕ್ತವಾದ ಸೂತ್ರಗಳು ಸಾಧಾರಣ ಸುಲಭವಾಗಿ ನೆನಪಿನಲ್ಲಿ ಉಳಿಯತಕ್ಕಂಥವುಗಳಲ್ಲ. ಆದರೂ ಕೆಲವು ಸೂತ್ರಗಳನ್ನು ಆದಷ್ಟು ಶ್ರಮವಹಿಸಿ ಅಭ್ಯಸಿಸಿದೆ. ತನ್ಮಧ್ಯೆ ಎರಡು ಮೂರು ಸಿಗರೇಟುಗಳನ್ನು ಭಸ್ಮಮಾಡಿದೆ.

ಸುಮಾರು ಹನ್ನೆರಡು ಗಂಟೆಯಾಗುವಾಗ ಹೊರಗಿನಿಂದ ನನ್ನ ಕೋಣೆಯ ಕದ ಬಡೆದ ಸಪ್ಪಳ ಕೇಳಿತು. ನಾನು ಮೆಲ್ಲನೆ ಎದ್ದು ಕದ ತೆಗೆದೆ. ಅಂಬುಜಮ್ಮಾಳ್ ನಗುತ್ತ ಒಳಗೆ ಬಂದಳು.



"ನೀವು ಕೃಷ್ಣಸ್ವಾಮಿಯವರಿಗೆ ಏನಾಗಬೇಕು ?" ಅಂಬುಜಮ್ಮಾ ಕೇಳಿದಳು.

"ನಿಮ್ಮೊಡನೆ ಐದು ರೂಪಾಯಿ ಚಿಲ್ಲರೆ ಇದೆಯೆ? ನನಗೆ ಅಗತ್ಯ ಬೇಕಿತ್ತು" ಎಂದು ಐದುರೂಪಾಯಿ ನೋಟನ್ನು ತೋರಿಸಿದಳು.

"ಹೂಂ" ಎಂದು ನಾನು ನನ್ನ ಪೆಟ್ಟಿಗೆಯಲ್ಲಿ ಕೈಹಾಕಿ ಹಣವನ್ನು ಹುಡುಕಿ ಕೊಟ್ಟೆ.

"ರುಂಬ ಉಪಕಾರಂ" ಎಂದಳಾಕೆ.

"ಹಾಂ" ಎಂದು ನಾನು ಸುಮ್ಮನಾದೆ.

ಆಕೆ ಕೋಣೆಯ ಹೊರಗೆ ಹೆಜ್ಜೆ ಇಟ್ಟವಳು ಹಿಂದಿರುಗಿ "ನೀವು ಕೃಷ್ಣಸಾಮಿಯವರಿಗೆ ಏನಾಗಬೇಕು? " ಎಂದು ಪ್ರಶ್ನಿಸಿದಳು.

ಕಿಟ್ಟು ನನ್ನ ಬಗ್ಗೆ ಅವಳೊಡನೆ ಏನಾದರೂ ಹೇಳಿದ್ದನೋ ಇಲ್ಲವೋ ಎಂಬುದು ನನಗೆ ತಿಳಿಯದಾಗಿತ್ತು. ಆದ್ದರಿಂದ ಅವಳಿಗೆ ನಾನು ಯಾವ ಉತ್ತರವೀಯಬೇಕೆಂಬುದೂ ಥಕ್ಕನೆ ತೋಚಲಿಲ್ಲ. ಕೊನೆಗೆ.

"ಹಾಂ ಸಂಬಂಧವೇನು? ಹೀಗೇ..." ಎಂದು ನಿಧಾನವಾಗಿ ಸ್ವಲ್ಪ ತಿರಸ್ಕಾರ ಭಾವನೆಯಲ್ಲೇ ಅಸ್ಪಷ್ಟವಾಗಿ ನುಡಿದೆ.

"ನಿಮಗೆ ತಮಿಳು ಬರೋದಿಲ್ವೇ? ಎಂದು ಆಕೆ ಪುನಃ ಪ್ರಶ್ನಿಸಿದಳು ನಾನು ಮಾತಾಡುವ ರೀತಿಯನ್ನು ಕಂಡು.

"ಕೊಂಚ ಬರುತ್ತದೆ" ಎಂದೆ.

"ನಿಮ್ಮ ಊರು?"

ಸತ್ಯವನ್ನು ಮರೆಮಾಚುವ ಅವಶ್ಯವಿಲ್ಲವೆಂದು ನನಗೆನಿಸಿತಾಗ. ಹಾಗೆ ಮಾಡಿದರೆ, ಒಂದೋ ಕಿಟ್ಟು ಸುಳ್ಳುಗಾರನೆಂದು ಆಕೆ ಭಾವಿಸಬಹುದಿತ್ತು. ಇಲ್ಲವೇ ನಾನು ಸುಳ್ಳು ಹೇಳಿದೆನೆಂದು ತಿಳಿಯಬಹುದಿತ್ತು.

"ಮಂಗಳೂರು."

"ಓಹೋ! ಮಂಗಳೂರೇ? ನಾನೂ ಹದಿನೈದು ವರ್ಷಗಳ ಹಿಂದೆ ಅಲ್ಲಿ ನನ್ನ ಗಂಡನೊಡನೆ ಇದ್ದೆ. ಅವರು ಸರ್ವೆ ಇಲಾಖೆಯಲ್ಲಿ ಇದ್ದರು. ನನ್ನ ಮಗಳು ಅಲ್ಲೇ ಹುಟ್ಟಿದ್ದು. ಈ ವರ್ಷ ಅವಳಿಗೆ ಮದುವೆ ಮಾಡಿಸಿದೆ."

"ಹೂಂ" ಎಂದು ತಲೆಯಲ್ಲಾಡಿಸಿದೆ.

"ಬಹಳ ಒಳ್ಳೆಯ ಊರು. ಆದರೆ ನಮಗೆ ಅಲ್ಲಿ ಕೊಬ್ರಿ ಎಣ್ಣೆ ಮಾತ್ರ ಹಿಡಿಸುತ್ತಿರಲಿಲ್ಲ.ಇಲ್ಲಿಂದಲೇ ಶೇಂಗಾ ಎಣ್ಣೆ ತರಿಸುತಿದ್ದೆವು."

"ನಮಗೂ ಶೇಂಗಾ ಎಣ್ಣೆ ಒಳ್ಳೆಯದಾಗುವುದಿಲ್ಲ" ಎಂದು ನಾನು ನುಡಿದೆ.

"ಹೌದಪ್ಪ, ಅವರವರ ಊರೇ ಅವರವರಿಗೆ ಒಳ್ಳೇದು. ನೀವಿನ್ನು ಎಷ್ಟು ದಿನ ಇಲ್ಲಿರುತ್ತೀರಿ?"

"ಏನು, ಸ್ವಲ್ಪ ದಿನ."

"ನೋಡಿ, ನೀವು ಹೊರಗೆ ಹೋಗುವಾಗ ಬೀಗ ಹಾಕಿಕೊಂಡು ಹೋಗಿ. ಇಲ್ಲಿ ಕೆಲಸದವರು ಎಲ್ಲ ಬರುತ್ತಾರೆ. ಬೇರೊಂದು ಬಿಡಾರವೂ ಇದೆ. ಏನಾದರೂ ಹೆಚ್ಚು ಕಡಿಮೆಯಾದರೆ ಎಲ್ಲ ಗಲಾಟೆಯಾಗುತ್ತದೆ. ಮೊದಲೇ ಪೋಲೀಸರಿಗೆ ನನ್ನ ಮೇಲೆ ಕಣ್ಣಿದೆ."

"ಸರಿ" ಎನ್ನುತ್ತ ನಾನು ಬಾಗಿಲು ಮುಚ್ಚಿದೆ.

ಅಂಬುಜಮ್ಮಾಳ್‌ಳ ಮಾತುಗಳಲ್ಲಿ ಅತಿ ವಿನಯತೆಯಿದ್ದುದು ನನಗೆ ಸಂಶಯವನ್ನುಂಟುಮಾಡದಿರಲಿಲ್ಲ. ಆಕೆಯ ಮುಂಜಾನೆಯ ಬೈಯ್ದಾಟವನ್ನು ಕೇಳಿದಾಗಲೇ ಅವಳು ನೆಟ್ಟಗಿನ ಸ್ವಭಾವದವಳಲ್ಲವೆಂದು ನನಗೆ ಮನನವಾಗಿತ್ತು. ಅವಳಿಗೆ ನಿಜವಾಗಿ ನನ್ನೊಡನೆ ಮಾತಾಡುವ ಅವಶ್ಯವಿದ್ದಿಲ್ಲ. ಇದರಿಂದಾಗಿ ಅವಳ ಅತಿ ವಿನಯತೆ ನನಗೆ ಹೆಚ್ಚು ಕೃತ್ರಿಮವಾಗಿ ತೋರಿತು. ಒಂದೋ ಅವಳು ಕಿಟ್ಟುವಿನ ಬಾಡಿಗೆ ಹೆಚ್ಚಿಸಲು ಯತ್ನಿಸಬಹುದು, ಇಲ್ಲವೇ ನನ್ನಿಂದ ಏನಾದರೂ ಹಣ ಸುಲಿಯಲು ಇಚ್ಛಿಸಿರಬಹುದು. ಅಂತೂ ಅವಳು ಸದುದ್ದೇಶದ ವಿಶ್ವಸನೀಯ ವ್ಯಕ್ತಿಯೆಂದು ಹೇಳಲು ಸಾಧ್ಯವಿದ್ದಿಲ್ಲ. ಅವಳ ಸ್ವಲ್ಪ ಹಿನ್ನೆಲೆಯಂತೂ ಹೋಟೇಲಿನ ಒಡೆಯರಿಂದ ನನಗೆ ಆಗಲೇ ದೊರಕಿತ್ತು. ಕಿಟ್ಟು ಅವಳ ಬಗ್ಗೆ ನನ್ನೊಡನೆ ಏನೂ ಅಭಿಪ್ರಾಯ ಕೊಟ್ಟಿರಲಿಲ್ಲ. ಬಹುಶಃ ನನ್ನಲ್ಲಿ ಸುಮ್ಮನೆ ಸಂಶಯಾತ್ಮಕ ಭಯವನ್ನುಂಟು ಮಾಡುವ ಇಚ್ಛೆ ಅವನಿಗಿರಲಿಲ್ಲವೆಂದು ತೋರುತ್ತದೆ.

ಆದರೂ ಆಕೆ ಏಕಾಏಕಿಯಾಗಿ ನನ್ನ ಕೋಣೆಗೆ ಬಂದು ಮಾತಾಡಿಸುವ ಧಾರ್ಷ್ಟ್ಯತೆಯನ್ನು ಪ್ರದರ್ಶಿಸಬಹುದೆಂಬುದನ್ನು ಅವನು ಎಣಿಕೆಗೆ ತೆಗೆದುಕೊಂಡಿರಲಿಕ್ಕಿಲ್ಲವೆಂದು ನಾನು ಲೆಕ್ಕ ಹಾಕಿದೆ. ಹಾಗಿರುತಿದ್ದರೆ ನನಗೆ ಮುನ್ಸೂಚನೆ ಅಥವಾ ಮುನ್ನೆಚ್ಚರಿಕೆಯನ್ನು ಅವನು ಕೊಡದಿರುತ್ತಿದ್ದಿಲ್ಲ. ಅಂತೂ ಪುನಃ ನಾನು ಅವನನ್ನು ಕಂಡಬಳಿಕ ತಾನೇ ನನ್ನ ಸಂಶಯ ಪರಿಹಾರವಾಗಬೇಕಿತ್ತು.

ಊಟ ಮುಗಿಸಿ ಹಿಂದಿರುಗುವ ತನಕವೂ ಈ ಯೋಚನೆ ನನ್ನನ್ನು ಸಂಪೂರ್ಣವಾಗಿ ಬಿಟ್ಟಿರಲಿಲ್ಲ. ಅಂಬುಜಮ್ಮಾಳ್ ಏನಾದರೂ ತನ್ನ ಬಲೆಗೆ ಹಾಕಿಕೊಂಡಾಳೆಂಬ ಅಂಜಿಕೆ ನನಗಿಲ್ಲದಿದ್ದರೂ ನನ್ನ ಅಭ್ಯಾಸಕ್ಕೆ ಅವಳಿಂದ ತೊಂದರೆಯಾಗಬಹುದೆಂಬುದು ಖಚಿತವಾಗಿತ್ತು. ದಿನವಿಡೀ ಅವಳು ಪದೇಪದೇ ಚಿಲ್ಲರೆಯ ನೆವನ ಇಲ್ಲವೇ ಬೇರೆ ನೆವನಗಳನ್ನು ಹೂಡಿ ನನ್ನ ಕೋಣೆಗೆ ಬಂದರೆ ನನಗೆ ಸಹಿಸುವುದು ಅಸಾಧ್ಯವಾಗಬಹುದೆಂದು ನನಗೆ ತೋರಿತು.

ಸ್ವಲ್ಪ ಹೊತ್ತಿನ ನಂತರ ಪುನಃ ಬಾಗಿಲುಬಡೆಯಿತು. ತುಸು ಕೋಪಾವೇಶದಲ್ಲೇ ಅದನ್ನು ತೆರೆದೆ. ಆದರೆ ಈಗ ನನ್ನೆದುರಲ್ಲಿದ್ದುದು ಅಂಬುಜಮ್ಮಾಳ್ ಅಲ್ಲ. ಒಬ್ಬ ತರುಣ. ಅವನು ಮತ್ತೊಂದು ಬಿಡಾರಕ್ಕೆ ಸೇರಿದವ.

"ಏನು?" ಎಂದು ನಾನು ದುರುಗುಟ್ಟಿ ನೋಡುತ್ತ ಪ್ರಶ್ನಿಸಿದೆ.

"ಕ್ಷಮಿಸಿ. ಬೆಂಕಿಪೆಟ್ಟಿಗೆ ಇದೆಯೆ? ಎಂದನವ.

ಮರುಮಾತಾಡದೆ ಬೆಂಕಿ ಪೆಟ್ಟಿಗೆಕೊಟ್ಟೆ. ಅವನು ಸಿಗರೇಟನ್ನು ತೋರಿಸುತ್ತ "ಬೇಕೆ?" ಎಂದ. ನಾನು ಬೇಡವೆಂದು ತಲೆಯಲ್ಲಾಡಿಸಿದೆ. ತನ್ನ ಸಿಗರೇಟನ್ನು ಉರಿಸಿ ಬೆಂಕಿಪೆಟ್ಟಿಗೆಯನ್ನು ನನ್ನ ಕೈಗಿತ್ತ.

" ನಿಮ್ಮ ಊರು? "

" ಮಂಗಳೂರು. "

"ನಾನು ಮಲಬಾರಿನವರೋ ಎಂದು ಭಾವಿಸಿದೆ. ನಾವೂ ಮಂಗಳೂರಿಗೆ ಸಮೀಪದವರೆ. ತಳಿಯಂಗಡಿ ನಿಮಗೆ ಗೊತ್ತುತಾನೇ? ಹೊಸದುರ್ಗ ದಾಟಿದ ಬಳಿಕ ಬರುತ್ತದೆ ಆ ಊರು. ನಾನು ಕೆಲಸ ಹುಡುಕುತಿದ್ದೇನೆ. ಇವತ್ತು ಒಂದು ಸಂದರ್ಶನ ಮುಗಿಸಿಬಂದೆ. ಅವರಿಬ್ಬರೂ ನನ್ನ ಕಸಿನ್ಸ್ ಸೆಕ್ರೆಟೇರಿಯೇಟ್‌ನಲ್ಲಿ ಕೆಲಸ ಮಾಡುತ್ತಾರೆ. "

"ಸರಿ" ಎಂದು ನಾನು ಸಂಭಾಷಣೆಯನ್ನು ನಿಲ್ಲಿಸುವ ಉದ್ದೇಶದಿಂದ ನುಡಿದೆ.

"ನಿಮಗೇನು ಕೆಲಸ?"

"ನನಗೆ ಕೆಲಸವಿಲ್ಲ. ಲಾ ಪರೀಕ್ಷೆಗೆ ಕುಳಿತುಕೊಳ್ಳಲಿದ್ದೇನೆ."

"ಮದ್ರಾಸಿನಲ್ಲಿ ಹೆಚ್ಚು ಸಮಯದಿಂದ ಇದ್ದೀರಾ?"

"ಐದಾರು ವರ್ಷಗಳಿಂದ."

"ಹಾಗಾದರೆ ಸಿಂಪ್ಸನ್ ಕಂಪೆನಿಯಲ್ಲಿ ನಿಮಗೆ ಯಾರಾದರೂಗೊತ್ತೆ? ಅಲ್ಲಿ ಒಂದು ನೌಕರಿ ಖಾಲಿಯಿದೆಯಂತೆ."

"ಇಲ್ಲ."

"ಕ್ಷಮಿಸಿ. ನಿಮಗೆ ಗೊತ್ತಿದೆಯೋ ಎಂದು ಕೇಳಿದೆ ಅಷ್ಟೆ. ನನ್ನ ಒಬ್ಬ ಕಸಿನ್ ಪೋರ್ಟ್‌ಟ್ರಸ್ಟಿನಲ್ಲಿದ್ದಾನೆ. ಅವನೂ ಯತ್ನಿಸುವೆನೆಂದಿದ್ದಾನೆ. ಆದರೆ ನೋಡಿ, ಈಗ ಎಷ್ಟು ಇನ್‌ಫ್ಲೂಯೆನ್ಸ್ ಮಾಡಿದರೂ ಸಾಲದಾಗುತ್ತದೆ. ಸ್ವತಃ ಮೆನೇಜಿಂಗ್ ಡೈರೆಕ್ಟರರ ಮಾತೇ ಅವರ ಕಂಪನಿಯಲ್ಲಿ ನಡೆಯುವುದಿಲ್ಲ."

"ಆಗಿರಬಹುದಪ್ಪಾ!"

"ನಿಮ್ಮ ಯಾರಾದರೂ ಸ್ನೇಹಿತರಿಗೂ ಸಿಂಪ್ಸನ್ ಕಂಪೆನಿಯಲ್ಲಿ ಯಾರೂ ಸ್ನೇಹಿತರಿಲ್ಲವೆ?"

"ನಾನು ಈ ವರೆಗೆ ವಿಚಾರಿಸಿಲ್ಲ."

"ಯಾರಾದರೂ ಇದ್ದರೆ ದಯವಿಟ್ಟು ವಿಚಾರಿಸಿ. ನೋಡಿ, ನಾನು ನಾಲ್ಕು ತಿಂಗಳಿಂದ ಯತ್ನಿಸುತಿದ್ದೇನೆ. ಇಪ್ಪತ್ತೈದು-ಮೂವತ್ತು ಇಂಟರ್‌ವ್ಯೂಗಳಾದುವು. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜನಿಂದಲೂ ಸುದ್ದಿಯಿಲ್ಲ. ನಾನು ತಂದಿದ್ದ ಹಣ ಎಂದೋ ಮುಗಿದು ಹೋಗಿ ಈಗ ಯಾರ್ಯಾರಿಂದ ಕಡ ತೆಗೆದುಕೊಂಡು ಜೀವಿಸುತ್ತಿದ್ದೇನೆ. ಆದರೆ ಎಷ್ಟು ದಿನ ಹೀಗೆ ಇರಬಹುದು? ಬಿ. ಎ. ಪಾಸಾಗುವಾಗ ಇಂಥ ಪರಿಸ್ಥಿತಿ ಮುಂದೆ ಬರಬಹುದೆಂಬುದನ್ನು ತಿಳಿದಿದ್ದರೆ ನಾನು ಕಲಿಯುತ್ತಲೇ ಇರಲಿಲ್ಲ."

"ಏನು ಮಾಡೋದು ? ಪಾಸಾಗುವುದು ಪಾಸಾಗಿ ಆಯಿತಲ್ಲ?"

"ನನ್ನಪ್ಪನಿಮ್ಮಮಂಗಳೂರ ಕಡೆ ಹೋಗಿ ದುಡಿಯುತಿದ್ದ.ಕಲ್ಲಿನ ಕಟ್ಟಡ ಕಟ್ಟುವುದರಲ್ಲಿ ನಿಪುಣನಾತ. ಆದರೆ ಈಗ ಅವನಿಗೆ ಕಣ್ಣು ಕಾಣಿಸುವುದಿಲ್ಲ. ಸುಣ್ಣ—ಸಿಮೆಂಟುಗಳ ಕೆಲಸವನ್ನು ಸದಾ ಮಾಡಿದುದರಿಂದ ದೃಷ್ಟಿ ಮಂದವಾಗಿದೆಯೆಂದು ಡಾಕ್ಟರರು ಹೇಳುತ್ತಾರೆ. ಅವನು ದುಡಿದ ಬಹು ಭಾಗ ನನ್ನ ವಿದ್ಯಾಭ್ಯಾಸಕ್ಕೇ ಖರ್ಚಾಯಿತು. ಊರಿನಲ್ಲಿ ದುಡಿದು ಸಂಪಾದಿಸಲು ಅವಕಾಶ ಕಡಿಮೆ. ನನ್ನ ತಾಯಿ ಏನೋ ಮುಸುರೆ ತಿಕ್ಕಿ ಸಂಸಾರ ನಡಿಸುತಿದ್ದಾಳೆ. ಈಗ ನಾನು ಸಂಪಾದಿಸಿ ಅವರನ್ನು ಕಾಪಾಡುವೆನೆಂದರೆ ನನ್ನ ಸ್ಥಿತಿ ಹೀಗಾಗಿದೆ ನೋಡಿ. ಅಪ್ಪನಂತೆ ನಾನೂ ಕಟ್ಟಡ ಕಟ್ಟುವ ಕೆಲಸ ಕಲಿತಿದ್ದರೆ ನಾನೂ ಹೇಗಾದರೂ ಸಂಪಾದಿಸುತಿದ್ದೆ."

ಅವನ ಕತೆ ನನಗೆ ಬೇಸರವನ್ನೇ ತಂದಿತು. ಲೋಕದಲ್ಲಿ ಕಷ್ಟವಿಲ್ಲದವರು, ನರಳದವರು, ಯಾರೂ ಇಲ್ಲವೆಂಬುದು ನನಗೆ ಗೊತ್ತು. ಏನಾದರೂ ಅವರಲ್ಲಿ ಭೇದವಿದ್ದರೆ ಬರೇ ಪ್ರಮಾಣದಲ್ಲಿ ಅಷ್ಟೆ. ಮಲಬಾರಿನ ಮಲೆಯಾಳಿಗಳು ನಮ್ಮ ಊರಿಗೆ ಬಂದು ಬೆವರು ಸುರಿಸಿ ದುಡಿಯುವುದನ್ನು ನಾನು ಸ್ವತಃ ಕಂಡವ. ಕೆಲವರು ಕಟ್ಟಡದ ಕೆಲಸದವರು, ಇನ್ನು ಕೆಲವರು ಮರದ ಕೆಲಸದವರು ಇವಲ್ಲದೆ, ಆಯುರ್ವೇದ ಪಂಡಿತರು, ಮಂತ್ರಮಾಟಗಳಲ್ಲಿ ಪರಿಣತರಾದ ಜ್ಯೋತಿಷ್ಯ ವೃತ್ತಿಯವರು ಎಲ್ಲ ನಮ್ಮಲ್ಲಿ ಸದಾ ಬಂದು ಹೋಗುತಿದ್ದವರು. ಅವರ ಕಷ್ಟಸಹಿಷ್ಣುತೆ ಮತ್ತು ಪ್ರಾಮಾಣಿಕತೆಗಳು ನಮಗೆಲ್ಲ ಅಚ್ಚರಿಯನ್ನುಂಟು ಮಾಡುತಿದ್ದವು. ಇಂಥ ಸ್ಥಿತಿಯಲ್ಲೂ ಅವರು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಪ್ರಯತ್ನವನ್ನು ಕೈ ಬಿಡುವುದಿಲ್ಲವಲ್ಲ ಎಂದು ಹಿಂದೆ ನಾನೇ ಹಲವು ಸಲ ಆಶ್ಚರ್ಯಪಟ್ಟುದಿತ್ತು. ಸ್ವತಃ ಅವರು ಕೂಡಾ ಸಂಸ್ಕೃತದ ಮಟ್ಟಿಗಾದರೂ ಸಾಕಷ್ಟು ವಿದ್ಯಾವಂತರೇ ಇರುತಿದ್ದರು.

"ನನ್ನ ಹೆಸರು ಕುರುಪ್, ಕುಂಞ ಕಣಕುರುಪ್."

ನಾನು ನಸುನಗುತ್ತ ಬಾಗಿಲು ಮುಚ್ಚಿದೆ. ಕುರುಪನ ಬಗ್ಗೆ ನನ್ನಲ್ಲಿ ಸಹಾನುಭೂತಿ ಮೂಡಿದರೂ ಅವನ ಸಂಬಂಧ ಅಷ್ಟೊಂದು ಹಿತಕರವಲ್ಲವೆಂದು ನನಗೆ ತೋರದಿರಲಿಲ್ಲ. ಮುಖ್ಯವಾಗಿ ಅವನೊಬ್ಬ ತಾಪತ್ರಯದ ಮನುಷ್ಯನೆಂಬುದು ಸ್ಪಷ್ಟವಾಗಿತ್ತು. ಅವನ ತಾಪತ್ರಯ ಪಿಡುಗಿನಂಥದ್ದು. ಅವನ ಮುಖವನ್ನು ನೋಡಿದರೇನೇ ಅದು ನನಗೆ ಕ್ಷಣ ಕಾಲವಾದರೂ ಹರಡುವುದು. ಅವನ ಸಂಕಷ್ಟದ ಕತೆ ಮನಸ್ಸನ್ನು ವ್ಯಗ್ರವನ್ನಾಗಿ ಮಾಡುವುದು. ಜೀವನದಲ್ಲಿ ನ್ಯಾಯದೊರಕುವ ಸಂಭವವಿಲ್ಲವೆಂಬ ಅಸಹನೀಯ ಭಾವನೆ ಉತ್ಸಾಹವನ್ನು ಹತ್ತಿಕ್ಕುವುದು. ಪಾಪ, ಪುಣ್ಯ, ಕರ್ಮಗಳ ಸಿದ್ಧಾಂತಗಳೆಲ್ಲ ಬರಿಯ ಸಿದ್ಧಾಂತಗಳೇ ಹೊರತು ಅವುಗಳಿಗೂ ನಿಜ ಜೀವನಕ್ಕೂ ಏನೂ ಸಂಬಂಧವಿಲ್ಲವೆಂದು ತೋರುವುದು. ಕುರುಪನ ತಂದೆಯು ಕಾಯಕವೇ ಕೈಲಾಸವೆಂದು ನಂಬಿ ಪರ ಊರಿಗೆ ಹೋಗಿ

ಬೆವರಿಳಿಸಿ ದುಡಿದವ. ಇಮಾರತಿ ಕಟ್ಟುವ ಕೆಲಸದಲ್ಲಿ ಅಸತ್ಯ ವಂಚನೆ ಮುಂತಾದ ಪಾಪ ಕೃತ್ಯಗಳನ್ನು ಮಾಡಲು ಅಷ್ಟೊಂದು ಅವಕಾಶವಿಲ್ಲ. ಏಕೆಂದರೆ ಒಮ್ಮೆ ಅವನು ಹಾಗೆ ಮಾಡಿದನೆಂದರೆ ಅವನಿಗೆ ಮತ್ತೆ ಅಲ್ಲಿ ಕೆಲಸ ಸಿಗದು. ಇಂಥ ಮನುಷ್ಯ ಸುಣ್ಣ—ಸಿಮೆಂಟುಗಳ ಮಧ್ಯೆ ಹಲವು ವರ್ಷ ದುಡಿದರೂ ಅದಕ್ಕೆ ಸಿಕ್ಕಿದ ಶಾಶ್ವತ ರೂಪದ ಪ್ರತಿಫಲವೆಂದರೆ ತನ್ನ ದೃಷ್ಟಿಯನ್ನು ಕಳೆದು ಕೊಂಡುದಾಗಿತ್ತು. ಇದು ಎಂಥ ಕರ್ಮಫಲ? ಚೈನಾ ಬಜಾರಿನಲ್ಲಿ, ಸಾಹುಕಾರ ಪೇಟೆಯಲ್ಲಿ ಎಲ್ಲ ವಂಚನೆ ಅಸತ್ಯಗಳು ನಿಮಿಷ ನಿಮಿಷವೂ ನಡೆಯುತ್ತಿವೆ. ಒಂದು ರೂಪಾಯಿ ಬೆಲೆಯ ಸರಕು ಹತ್ತು ರೂಪಾಯಿಗಳಿಗೆ ಮಾರಾಟವಾಗುತ್ತದೆ. ಒಂದು ರೂಪಾಯಿ ಸಾಲಕ್ಕೆ ಎಂಟಾಣೆಯವರೆಗೂ ಬಡ್ಡಿ ಪಡೆಯಲಾಗುತ್ತದೆ. ಆದರೆ ಇಂಥ ವ್ಯಾಪಾರಿಗಳ ಬೊಜ್ಜು ಬೆಳೆಯುವುದಲ್ಲದೆ ಅವರಿಗೆ ಒಂದಿಷ್ಟು ನೆಗಡಿ ಕೂಡಾ ಆಗುವುದಿಲ್ಲ. ಹಾಗೇನಾದರೂ ಕಾಹಿಲೆ ಬಂದರೂ ಅವರಿಗೆ ಚಿಕಿತ್ಸೆ ಮಾಡಲು ವೈದ್ಯ ಚಿಂತಾಮಣಿಗಳು ಸಿದ್ಧರಿದ್ದಾರೆ. ಪರೋಪಕಾರದಿಂದ ಪುಣ್ಯವೂ, ಪರಪೀಡೆಯಿಂದ ಪಾಪವೂ ಉಂಟಾಗುವುದೆಂಬ ತತ್ವ ಇಂಥ ಜನರ ವಿಷಯದಲ್ಲಿ ಅಷ್ಟೊಂದು ಸತ್ಯದ ತತ್ವವಾಗಿರಲಿಲ್ಲ. ಈ ದೃಷ್ಟಿಯಿಂದ ಈ ಕುಂಞ ಕಣ್ಣ ಕುರುಪ ಅನ್ಯಾಯಕ್ಕೊಳಗಾದವನೆಂಬುದು ಸ್ಪಷ್ಟವಾಗುತ್ತಿತ್ತು.

ಎರಡನೆಯದಾಗಿ ಅವನು ಹಣವಿಲ್ಲದವ. ಸ್ನೇಹಿತರಿಂದ ಕಡ ಪಡಕೊಂಡು ತಾನು ದಿನಗಳೆಯುತಿದ್ದೇನೆಂದು ಮೊದಲೇ ಅವನು ಒಪ್ಪಿಕೊಂಡಿದ್ದ. ನಾನೂ ಹೀಗಾಗಿ ಅವನ ಸ್ನೇಹಿತನಾದರೆ ನನ್ನಿಂದಲೂ ಅವನಿಗೆ ಹವಿರ್ಭಾಗ ಸಲ್ಲಬೇಕಾದೀತೆಂಬ ಭಯ ನನಗುಂಟಾಗಿತ್ತು. ಸ್ನೇಹಕ್ಕೆ ಹಣದ ಲೆಕ್ಕಾಚಾರ ಯಾವಾಗಲೂ ಅಡ್ಡ ಬರುವುದೆಂಬ ಸತ್ಯ ನನಗೆ ಗೊತ್ತಿದ್ದರೂ, ಒಮ್ಮೆ ಸ್ನೇಹಾಚಾರ ಬೆಳೆಯಿತೆಂದರೆ ನಾನು ನನ್ನ ಹಣದ ಹತೋಟಿಯನ್ನು ಕಳೆದುಕೊಳ್ಳುವೆನೆಂಬುದರ ಅರಿವೂ ಇತ್ತು. ಹಣವು ಚರಸ್ವತ್ತಾದ್ದರಿಂದ ಅದರ ಮೇಲೆ ಒಡೆತನವನ್ನು ಯಾರಿಗೂ ಸ್ಥಾಪಿಸಲಾಗದೆಂದು ನಾನು ಸ್ನೇಹಿತರೊಡನೆ ನುಡಿಯುತ್ತಿದ್ದ ಮಾತು ನನ್ನ ವ್ಯವಹಾರದ ಮಟ್ಟಿಗಾದರೂ ಕೇವಲ ತಮಾಷೆಯದ್ದಾಗಿರಲಿಲ್ಲ.

ಕುರುಪ ತನ್ನ 'ಕಸಿನ್ಸ್'ರೊಡನೆ ವಾಸಿಸುವ ಸಂಗತಿಯೂ ಸಂಶಯಕ್ಕೆಡೆಕೊಡುವಂಥದ್ದೇ ಆಗಿತ್ತು. 'ಕಸಿನ್ಸ್' ಎಂಬ ಪದದ ಅರ್ಥ ಇಂಗ್ಲೀಷ್ ಭಾಷೆಯಲ್ಲಿ ಬಹಳ ವಿಶಾಲವಾದುದು. ಪ್ರೇಯಸಿಗಳೂ ಈ 'ಕಸಿನ್ಸ್' ವರ್ಗಕ್ಕೆ ಸೇರುವದು ಅಪರೂಪವಲ್ಲವೆಂಬುದು ನನಗೆ ಗೊತ್ತಿತ್ತು. ಅದೂ ಮದ್ರಾಸಿನಂಥ ದೊಡ್ಡ ನಗರದಲ್ಲಿ ಇಂಥ ಕಸಿನ್ಸ್ ಸಂಬಂಧದೊಡನೆ ಬಾಳುವವರ ಸಂಖ್ಯೆಗೂ ಕಡಿಮೆಯಿರಲಿಲ್ಲ. ಕುರಪ್ ಅವನ ಈ ಎರಡು ಮಂದಿ ಕಸಿನ್ಸ್‌ಗಳಿಗೆ ಯಾವ ರೀತಿಯಿಂದ ಸಹಾಯ ಮಾಡಲು ಸೇರಿಕೊಂಡಿದ್ದಾನೆಂದು ಹೇಳಬರುವಂತಿರಲಿಲ್ಲ.

ಅಂತೂ ಕಿಟ್ಟು ಹೇಳಿದ ಏಕಾಂತತೆ ನನ್ನ ಕೋಣೆಯಲ್ಲಿದ್ದರೂ ಅದಕ್ಕೆ ಅನುಗುಣವಾದ ಪ್ರಶಾಂತತೆ ಅಲ್ಲಿರಲಿಲ್ಲವೆಂಬುದು ನನಗೆ ಅನುಭವವಾಗತೊಡಗಿತ್ತು.

ಸ್ವಲ್ಪ ತಡೆದು ಕುರುಪನಿಗೂ ಅಂಬುಜಮ್ಮಾಳ್‌ಳಿಗೂ ಕೆಳಗಡೆ ಏನೋ ವಾಗ್ವಾದವಾಗುವುದು ಕೇಳಿಸಿತು. ಆಕೆ ಶುದ್ಧವಾದ ತಮಿಳಿನಲ್ಲಿ ಮಾತಾಡುತಿದ್ದರೆ, ಅವನು ಮಲೆಯಾಳಿಯುಕ್ತವಾದ ತಮಿಳು ಅಥವಾ ತಮಿಳುಯುಕ್ತವಾದ ಮಲೆಯಾಳಿಯಲ್ಲಿ ಮಾತಾಡುತಿದ್ದ. ಅವರ ಮಾತಿನ ವೈಖರಿಯಿಂದಲೇ ಅವರಿಬ್ಬರಿಗೂ ಸರಿ ಬೀಳುತಿದ್ದಿಲ್ಲವೆಂಬುದನ್ನು ಅರಿತುಕೊಳ್ಳಬಹುದಿತು. ಅವರ ಮಾತುಗಳಿಗೆ ನಾನೇನೂ ಗಮನವೀಯದಿದ್ದರೂ ಅವರಿಬ್ಬರ ಮೇಲೂ ಇದ್ದ ನನ್ನ ತಾತ್ಸಾರಮಿಶ್ರವಾದ ಸಂದೇಹ ಭಾವನೆ ಮಾತ್ರ ಹೆಚ್ಚಿತು.

ಇಂಥ ಸನ್ನಿವೇಶದಲ್ಲಿ ಕಿಟ್ಟು ತನ್ನ ಮುಗ್ಧ ಹೆಂಡತಿಯನ್ನು ಕಟ್ಟಿಕೊಂಡು ಹೇಗೆ ಬಾಳ್ವೆ ಮಾಡಲು ನಿಶ್ಚಯಿಸಿದನೆಂಬುದೂ ನನಗೆ ಸ್ವಲ್ಪ ಆಶ್ಚರ್ಯಕರವಾದ ಪ್ರಶ್ನೆಯೇ ಆಗಿತ್ತು.

೩

ಕಿಟ್ಟು ಹೆಚ್ಚಾಗಿ ಸಂಜೆಗೆ ಕಚೇರಿಯಿಂದ ಮರಳಿದವನೇ ನನ್ನನ್ನು ಕಂಡು ಮತ್ತೆ ಕೆಳಗೆ ಹೋಗುತಿದ್ದ. ಪ್ರತಿಸಲವೂ ನನಗೇನಾದರೂ ಅನಾನುಕೂಲವಾಗಿತ್ತೇ ಎಂದು ಆಸ್ಥೆಯಿಂದ ಪ್ರಶ್ನಿಸುತಿದ್ದ. ಅವನ ಹೆಂಡತಿ ಅಪರೂಪವಾಗಿ ನನಗೆ ಕಾಣಸಿಗುತಿದ್ದಳು. ಅದೂ ನಾನು ಒಂದೋ ಹೊರಗೆ ಹೋಗುವಾಗ ಇಲ್ಲವೇ ಒಳಗೆ ಬರುವಾಗ. 'ನೀರೋ ಏನಾದರೂ ಬೇಕಾದರೆ ಕೆಳಗೆ ಕೇಳು' ಎಂದು ಕಿಟ್ಟು ಅಜ್ಞಾಪಿಸಿದ್ದರೂ ನಾನು ಆಕೆಯೊಡನೆ ಮಾತಾಡಿರಲಿಲ್ಲ; ಮುಖ್ಯವಾಗಿ ನನಗೆ ಏನೂ ಅಡುಗೆಕೋಣೆಯಿಂದ ಬೇಕಾಗದಿದ್ದುದೇ ಇದಕ್ಕೆ ಕಾರಣವಾಗಿತ್ತು. ಒಂದು ಫರ್ಲಾಂಗಿನೊಳಗೇ ಹೋಟೇಲು ಇದ್ದುದರಿಂದ ತಿನ್ನಲು, ಕುಡಿಯಲು ಯಾವ ಕಾಲದಲ್ಲಾದರೂ ನೆನೆದೊಡನೆ ಅಲ್ಲಿಗೆ ಹೋಗಲು ಸಾಧ್ಯವಿತ್ತು.


ಮೊದಲು ಒಂದೆರಡು ದಿನ ನಾನು ಆಕೆಯೊಡನೆ ಶಿಷ್ಟಾಚಾರಕ್ಕಾಗಿಯಾದರೂ ಹೊರಗಿನಿಂದ ಮಾತಾಡದಿದ್ದರೆ ಅವಳು ಅಪಾರ್ಥ ಕಲ್ಪಿಸಿಕೊಂಡಾಳು ಎಂದು ಭಾವಿಸಿದ್ದೆ. ಸ್ನೇಹಿತನ ಹೆಂಡತಿಯೂ ಸ್ನೇಹಿತೆಯಲ್ಲವೆ? ಸ್ನೇಹಿತನೊಡನೆ ಮಾತಾಡುವಷ್ಟು ಸಲುಗೆಯಿಂದಲ್ಲದಿದ್ದರೂ, ಒಮ್ಮೆ ಆದಪರಿಚಯ ಸ್ಥಿರವಾಗಿ ಉಳಿಯುವ ಬಗ್ಗೆ ಆಗಾಗ ಮೇಲಿಂದ ಮೇಲೆ ಮಾತಾಡಬೇಕು. ಆದರೆ ಹಾಗೆ ಮಾತಾಡಿದರೆ ಅವಳು ನನ್ನ ಉದ್ದೇಶದ ಬಗ್ಗೆ ತಪ್ಪು ಅಭಿಪ್ರಾಯವನ್ನು ಕಲ್ಪಿಸಿದರೆ ಅದರಿಂದ ನನ್ನ ಮನಸ್ಸಿನ ಸಮತೋಲನವೇ ತಪ್ಪಿ ನನ್ನ ಪರೀಕ್ಷೆಯ ಕೆಲಸಕ್ಕೂ ಧಕ್ಕೆ ಬರಬಹುದಿತ್ತು. ಕಿಟ್ಟು ಅವಳೊಡನೆ ನನ್ನ ವಿಚಾರವಾಗಿ ಏನು ಹೇಳಿದ್ದನೋ ಯಾರಿಗೆಗೊತ್ತು?

ಒಂದು ದಿನ ಸಂಜೆ ಕೆಳಗೆ ತುಂಬಾ ಗದ್ದಲ ಕೇಳಿಸಿತು. ಕಿಟ್ಟುವಿಗೂ ಅಂಬುಜಮ್ಮಾಳಿಗೂ ಜೋರಾಗಿ ವಾಗ್ಯುದ್ಧ ನಡೆಯುತ್ತಿತ್ತು. ಏನಿದು ಎಂದು ಸ್ವಲ್ಪ ನೋಡೋಣವೆಂದು ಕೆಳಗೆ ಮೆಟ್ಟಲಿನಲ್ಲಿ ನಿಂತು ಇಣುಕಿದೆ.

ಕಿಟ್ಟು ಬರುವಾಗ ಆಕೆ ಮನೆಯ ಹಜಾರಕ್ಕೆ ಸೆಗಣಿಸಾರಿಸುತಿದ್ದಳಂತೆ. ಅವನು ಬೂಟ್ಸು ಹಾಕಿದ ಕಾಲಿನಲ್ಲಿ ಅದನ್ನು ತುಳಿದುಕೊಂಡೇ ಒಳಗೆ ಬಂದನಂತೆ. ಹೀಗೆ ಆರಂಭವಾದ ಅವರ ಕಲಹ ಮಾತುಮಾತಿಗೂ ಹೊಸ ಪ್ರವೇಶಗಳನ್ನು ಪ್ರವೇಶಿಸುತ್ತಿತ್ತು. ಹೊಸ ಟೀಕೆಗಳನ್ನು ಹೊರತರುತ್ತಿತ್ತು.

"ಏನು ಗಂಡಸರೆಂದರೆ ಗಂಡಸರಂತೆ ವರ್ತಿಸಬೇಕು. ನಾನೊಬ್ಬ ಅನಾಥೆಯಿದ್ದೇನೆಂದು ಭಾವಿಸಿ ಇಚ್ಚೆ ಬಂದಂತೆ ನಡೆದುಕೊಳ್ಳಬೇಡಿ, ತಿಳಿಯಿತೆ? "

"ಸುಮ್ಮನೆ ನಾವು ಪ್ರತಿಮಾತಾಡೋದಿಲ್ಲವೆಂದು ಏನೇನೂ ಮಾತಾಡಬೇಡಿ. ನಾನಾದರೂ ಏನು ಅಪರಾಧ ಮಾಡಿದೆ? ಬಾಗಿಲಿನಿಂದ ಒಳಗೆ ಬಾರದೆ ಮತ್ತೆಲ್ಲಿಂದ ಬರಬೇಕು. ನಿಮ್ಮ ಸಾರಿಸುವ ಕೆಲಸವನ್ನು ಬೆಳಿಗ್ಗೆ ನಾವು ಏಳುವ ಮುಂಚೆಯೇ ಮಾಡಿಬಿಡಬಹುದಲ್ಲ? "



"ನಿನ್ನ ಇತ್ತೀಚಿನ ಸಾಹಸ ಯಾವುದಯ್ಯ?"
"ಧಾರಣೆ ನಾಸಿ ಸಿಕ್ಕಾಪಟ್ಟೆ ಏರಿರುವ ಈ ಕುಟ್ಟಿ ದಿನಗಳಲ್ಲಿ ಸಿಗುವ ಅಲ್ಪ ಸಂಬಳದಲ್ಲಿ ಜೀವನ ನಡೆಸುತ್ತಿರೋದು ಸಾರ್!"

"ನನ್ನ ಮನೆಯಲ್ಲಿ ನಾನು ಹಾಗೆ ಕೆಲಸ ಮಾಡಬೇಕು. ಹೀಗೆ ಕೆಲಸ ಮಾಡಬೇಕೆಂದು ಹೇಳಲು ನೀನ್ಯಾರು? ಹಾಗೆಲ್ಲ ನಿಮ್ಮ ಹೆಂಡತಿ ಜೊತೆ ಮಾತಾಡಬೇಕು. ಬಂದ ಸಮಯದಲ್ಲಿ ಇಲಿಯಂತೆ ಇದ್ದವರು ಈಗ ಒಮ್ಮೆಲೇ ಹುಲಿಯಂತಾಗಿದ್ದೀರಿ."

ಕಿಟ್ಟು ನಿಜವಾಗಿಯೂ ನಡುಗುತಿದ್ದ. ಅಂಬುಜಮ್ಮಾಳ ಧ್ವನಿ ನನಗೆ ಪ್ರತ್ಯೇಕ ಧ್ವನಿವರ್ಧಕ ಬೇಕಾಗಿರಲಿಲ್ಲ. ಆದರೂ ಅವಳೊಡನೆ ಪ್ರಾರಂಭಿಸಿ ಸಿಕ್ಕಿಬಿದ್ದಿದ್ದನೆಂಬುದು ಮಾತ್ರ ಸ್ಪಷ್ಟವಾಗಿತ್ತು. ಆ ಮಾತನ್ನು ನಿಲ್ಲಿಸಲು ಆಕೆ ಇಂಬು ಕೊಡುತಿದ್ದಿಲ್ಲ.

"ಇಲ್ಲಿ ನಾನೊಬ್ಬಳೇ ಇರೋದು, ನೀವು ಇಲ್ಲೇ ಬರಬೇಕು ಎಂದು ನನ್ನನ್ನು ಇಲ್ಲಿಗೆ ಬರಲು ಒತ್ತಾಯಪಡಿಸಿದುದು ಇದಕ್ಕಾಗಿಯೇ ತಾನೇ? ಇಲ್ಲವಾದರೆ ನಾನು ಬೇರೆ ಒಂದಲ್ಲ ಎರಡು ಒಳ್ಳೆಯ ಮನೆಗಳನ್ನು ಗೊತ್ತು ಮಾಡಿದ್ದೆ. ಅವುಗಳಲ್ಲಿ ಹೀಗೆ ಅಲ್ಲಿ ಹಾಯಬಾರದು ಇಲ್ಲಿ ನಡೆಯಬಾರದು ಎಂಬಿತ್ಯಾದಿ ಸೂತ್ರ ಬಂಧನವೇನೂ ಇದ್ದಿಲ್ಲ. ನಾನು ಬಂದೊಡನೆ ನೀವು ಬಾಡಿಗೆ ಏರಿಸಿದುದು ಮಾತ್ರವಲ್ಲ, ಹೀಗೆ ಬಾಯಿಗೆ ಬಂದಂತೆ ಬದರಲೂ ಆರಂಭಿಸಿದ್ದೀರಿ!"

"ಓಹ್! ನಾನು ಬನ್ನಿ ಎಂದು ಹೇಳಿದುದು ಇದಕ್ಕಾಗಿಯೆ? ಒಂದು ಕಡೆಯಿಂದ ನಿಮ್ಮ ಹೆಂಡತಿ ನನಗೆ ಬಯ್ಯುವುದು, ಇನ್ನೊಂದೆಡೆಯಿಂದ ನೀವು ಹೀಗೆ ಧಮಕಿ ಕೊಡೋದು. ನನ್ನನ್ನು ಕೇಳಲು ಯಾರೂ ಇಲ್ಲವೆಂದು ಭಾವಿಸಿದ್ದೀರಿ, ಹ್ಞ!"

"ಸುಮ್ಮನೆ ನಾಲಿಗೆ ಉದ್ದವಿದೆಯೆಂದು ಏನೇನೋ ಹೇಳಬೇಡಿ. ನನ್ನ ಹೆಂಡತಿಯ ಸುದ್ದಿ ತೆಗೆದರೆ ಜೋಕೆ!"

"ನಾನ್ಯಾಕೆ ನಿಮ್ಮ ಹೆಂಡತಿಯ ಗೋಜಿಗೆ ಹೋಗಬೇಕಪ್ಪ! ಅವರಿಗೆ ಮಾತಾಡಬೇಕೆಂದಿದ್ದರೆ ಜನವನ್ನು ಒದಗಿಸಿದ್ದೀರಲ್ಲ?"

"ಮುಚ್ಚು ಬಾಯಿ! ನಮ್ಮಿಬ್ಬರನ್ನು ಬಿಟ್ಟು ನನ್ನ ನೆಂಟರ ಕುರಿತೂ ಮಾತಾಡತೊಡಗಿದೆಯಾ? ನಾವು ನಿನ್ನ ಹಾಗೆ ಮರ್ಯಾದೆ ಇಲ್ಲದವರಲ್ಲ, ತಿಳಿಯಿತೆ? ನೀನು ಏನೆಂದು ಭಾವಿಸಿದ್ದೀ? ನಾನೊಬ್ಬ ಆಫೀಸರ. ನನ್ನ ನೆಂಟರು ವಕೀಲರು!"

"ಎಲ್ಲ ಗೊತ್ತಪ್ಪ ನನಗೆ! ನನ್ನ ಗಂಡನೂ ಅಫೀಸರರಾಗಿದ್ದರು! ಅವರೇನಾದರೂ ಒಂದು ಮನೆಯಲ್ಲಿ ಎರಡು ಮೂರು ಕೋಣೆಗಳನ್ನು ಬಾಡಿಗೆಗೆ ಹಿಡಿದು ಅದರಿಂದಲೂ ಒಂದು ಕೋಣೆಯನ್ನು ಬೇರೆಯವರಿಗೆ ಬಾಡಿಗೆಗೆ ಕೊಟ್ಟು ಹಣ ಮಾಡುತ್ತಿರಲಿಲ್ಲ. ನಾವು ಹೋದಲ್ಲೆಲ್ಲ ಇಡೀ ಮನೆಯನ್ನೇ ಬಾಡಿಗೆಗೆ ಪಡೆದು ಇರುತಿದ್ದೆವು. ಆಫೀಸರರಂತೆ, ಆಫೀಸರರು! ಹೆಂಡತಿಯೊಬ್ಬಳನ್ನೇ ಮನೆಯಲ್ಲಿ ಬಿಟ್ಟು ಹೋಗುವವರು!"

"ನನ್ನ ಸುದ್ದಿ ನಿಮಗೆ ಬೇಡ!" ಎಂದು ಕಿಟ್ಟುವಿನ ಹೆಂಡತಿ ಅಷ್ಟರಲ್ಲಿ ಅಳುದನಿಯಲ್ಲಿ ನಡುವೆ ಬಾಯಿ ಹಾಕಿದಳು. "ನಿಮ್ಮ ಹಾಗೆ ನಾಚಿಕೆ ಮರ್ಯಾದೆ ಬಿಟ್ಟು ನಮಗೆ ಮಾತಾಡಲಾಗಲಿಕ್ಕಿಲ್ಲ ತಿಳಿಯಿತೆ? ನಿಮ್ಮ ಹಣೆಬರಹ ಯಾರಿಗೆ ತಾನೇ ಗೊತ್ತಿಲ್ಲ? ಈ ಮನೆಗೆ ಯಾಕೆ ಬಂದಿರಪ್ಪ! ಎಂದು ಎಲ್ಲರೂ ನಮ್ಮನ್ನು ಕೇಳುತ್ತಾರೆ. ನಿಮ್ಮ ಹಾಗೆ ಕಾಯಿಪಲ್ಯ ಮಾರುವವರನ್ನು, ಹಾಲು ಮಾರುವವರನ್ನು ಎಲ್ಲ ಮನೆಯೊಳಗೆ ಕರೆದು ಚಕ್ಕಂದವಾಡುವುದಿಲ್ಲ ಇಲ್ಲಿ ಯಾರೂ, ಗೊತ್ತೆ? ಸ್ವಲ್ಪ ಅನಾನುಕೂಲವಾದರೂ ಹೆಂಗಸರೇ ಇರುವ ಮನೆ. ನನಗೆ ಬೇಸರ ಕಳೆಯಲೂ ಆದೀತೆಂದು ನಂಬಿ ಈ ಮನೆಯನ್ನು ಹಿಡಿಯಲು ನಾನು ಒಪ್ಪಿಗೆ ಕೊಟ್ಟದ್ದೆ. ಇಂಥ ದುಷ್ಟತನವನ್ನು ನಾನು ನಿಮ್ಮಿಂದ ನಿರೀಕ್ಷಿಸಿರಲಿಲ್ಲ! ನನ್ನ ಮಗಳಂತೆ ನೀನು ಎಂದು ನೀವು ಮೊದಲು ಹೇಳಿದ್ದ ಮಾತು ಈಗ ಏನಾಯಿತು? ನಿಮ್ಮ ಮಗಳಾದರೆ ಹೀಗೆ ನುಡಿಯುತಿದ್ದಿರಿ?"

"ಹೂಂ" ಎಂದು ಅಂಬುಜಮ್ಮಾಳ್ ಹಲ್ಲುಕಡಿದಳು. "ನನ್ನ ಮನೆ ಎಲ್ಲರಿಗೂ ಬೇಕು. ನಾನು ಮಾತ್ರ ಬೇಡವಾದವಳು. ಸಿಕ್ಕ ಸಿಕ್ಕವರನ್ನು ಮನೆಗೆ ಕರೆಯುವವಳು, ಅಲ್ಲವೇ? ನಿಮಗೆ ಬೇರೆಲ್ಲಾದರೂ ರಾಜ ರಾಣಿಯರಂತೆ ಇರಲು ನನ್ನ ಅಕ್ಷೇಪವಿಲ್ಲಪ್ಪ! ನನಗೆ ಬೇಕಾದ್ದು ಬಾಡಿಗೆ ಮಾತ್ರ!"

"ನಾವು ಬಂದು ಮೂರು ತಿಂಗಳೊಳಗೇ ಹೀಗೆ ಮಾಡಿದ ನೀನು ಮುಂದೇನು ಮಾಡಲಿಕ್ಕಿಲ್ಲ? ಏನು ಮಾಡೋದು ನಿನ್ನ ಕೃತ್ರಿಮ ನಡೆನುಡಿಗಳನ್ನು ನಂಬಿ ನಾವು ಬಂದು ಬಿಟ್ಟೆವು. ನಾನು ಬೇರೆ ನೋಡಿದ ಮನೆಗಳನ್ನು ಬಾಡಿಗೆಗೆ ಕೊಟ್ಟಾಗಿದೆ. ಈಗ ಬೇರೊಂದು ಮನೆ ಸಿಕ್ಕಿದರೆ ಕೂಡಲೇ ಹೋಗಿ ಬಿಡುತ್ತೇವೆ. ಅಷ್ಟರವರೆಗೆ ನಿನ್ನ ಆ ಕೊಳಕು ನಾಲಿಗೆಯನ್ನು ತಡೆಹಿಡಿ! ನನ್ನ ನೆಂಟರಿಗೂ ಅಸಹ್ಯವಾಗಿ ಕಾಣೀತು."

"ಅದೇ ನಾನು ಹೇಳಿದೆನಲ್ಲ? ನಿಮಗೆ ರಾಜರಾಣಿಯರಂತೆ ಇರಲು ಅರಮನೆಯ ಸೌಲಭ್ಯ ಇಲ್ಲಿ ಸಿಗಲಿಕ್ಕಿಲ್ಲ. ಇದು ನನ್ನ ಮುರುಕು ಮನೆ. ಇದನ್ನು ನನ್ನ ತಾಯಿ ಒಂದು ಕಪ್ ರಕ್ತವನ್ನು ಕುಡಿಸಿ ಒಂದು ಹನಿ ಮಾಡಿ ದುಡಿದು ಗಳಿಸಿದುದು. ಯಾರದಾದರೂ ತಲೆ ಹೊಡೆದು ಸಂಪಾದಿಸಿದುದಲ್ಲ. ನೀವು ಹೋದರೆ ನನಗೆ ಬೇರೆ ಯಾರೂ ಬಾಡಿಗೆಗೆ ಸಿಗಲಿಕ್ಕಿಲ್ಲವೆಂದು ಹೆದರುವುದು ಬೇಡ."

"ಯಾರನ್ನೇ ಬೇಕಾದರೂ ನೀನು ಕರೆ! ನಿನ್ನ ಮನೆಯನ್ನು ನಾವು ಖರೀದಿ ಮಾಡಲು ಬಂದವರಲ್ಲ."

"ನಾಲ್ಕು ಕಾಸೂ ಹೆಚ್ಚು ಸಿಗಬಹುದು" ಎಂದು ಥಕ್ಕನೆ ಅವಳು ನೆಲದ ಮೇಲೆ ಕುಸಿದು ಬಿದ್ದು ಅಳತೊಡಗಿದಳು.

ಇದನ್ನು ನೋಡಿ ಕಿಟ್ಟು ಒಳಗೆ ಹೋದ. ನಾನು ನನ್ನ ಕೋಣೆಗೆ ಬಂದೆ. ಈ ಗಲಭೆಯಿಂದ ನನ್ನ ಮನಸ್ಸು ಕದಡಿತು. ಅಂಬುಜಮ್ಮಾಳ ಸರ್ವವ್ಯಾಪೀ ನಾಲಿಗೆ ನನ್ನನ್ನು ಬಿಡಲಿಲ್ಲವಲ್ಲ! ಎಂದು ಅನಿಸಿತು. ತನ್ನ ಗುರಿ ಮುಟ್ಟಲು ಅಂಬುಜಮ್ಮಾಳ್ ಏನನ್ನು ಮಾಡಲೂ ಹೇಸದವಳೆಂಬುದು ನನಗೆ ಸ್ಪಷ್ಟವಾಯಿತು. ನಿಜವಾಗಿ, ಆಕೆ ... ರರು ಕೊಟ್ಟ ಬಾಡಿಗೆಯನ್ನು ತೆಗೆದುಕೊಂಡು ... ಕಿಟ್ಟನಾಗಲೀ, ಕುರುಪ್‌ಗಳಾಗಲೀ ಅವಳ ಗೋಜಿಗೆ ಹೋಗುವ ಜನರಲ್ಲ. ಆದರೆ ಸುಮ್ಮನಿರದಿರುವುದು ಅವಳ ಮೂಲಭೂತ ಗುಣವಾಗಿತ್ತು. ತಾನು ಸುಮ್ಮನಿದ್ದರೆ ಉಳಿದವರು ಸುಮ್ಮನಿದ್ದು ಮನೆ ... ತೆಯುಂಟಾಗಿ ತನ್ನ ಕಿವಿಗಳಿಗೆ ಧಕ್ಕೆ ತಗಲಬಹುದೆಂದು ಆಕೆ ಭಯಪಟ್ಟದ್ದಳೋ ಏನೋ!

ನನ್ನ ಅಭ್ಯಾಸದ ಪ್ರಯತ್ನಕ್ಕೆ ಈ ವಾತಾವರಣ ಅನುಕೂಲಕರವೇ? ಎಂಬ ಪ್ರಶ್ನೆ ನನ್ನಲ್ಲಿ ಪುನಃ ಉದ್ಭವಿಸಿತು. ಶಾಲೆ-ಕಾಲೇಜು ಪರೀಕ್ಷೆ ಎಂದು ಆಯುಷ್ಯದ ಒಂದು ಭಾಗವನ್ನು ಕಳೆದಾಗಿತ್ತು. ಇನ್ನು ಈ ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದರೆ ಇನ್ನೊಂದು ವರ್ಷ ಹಾಳು. ಇಲ್ಲವೇ ಈ ಅಭ್ಯಾಸವನ್ನು ನಿಲ್ಲಿಸಬೇಕಾದೀತು. ಅಂಬುಜಮ್ಮಾಳ ಪ್ರತಿಯೊಂದು ಚಲನವಲನವೂ ನನ್ನ ಗಮನವನ್ನು ಇನ್ನು ಸೆಳೆಯದಿರದು. ಹಾಗೆಯೇ ಮನೆಯಲ್ಲಿದ್ದ ಇತರರ ಬಗ್ಗೆಯೂ ನಾನು ಹೆಚ್ಚು ಎಚ್ಚರ ವಹಿಸಿ ನನ್ನ ಮನಸ್ಸನ್ನು ಹೋಳು ಮಾಡದಿರಲಾರೆ. ಇನ್ನೇನು ಕಿಟ್ಟನೊಡನೆ ಇದನ್ನೆಲ್ಲ ವಿವರಿಸಿ ಬೇರೆಲ್ಲಾದರೂ ಹೋಗುವುದೆಂದು ನಿಶ್ಚೈಸಿದೆ.

ಸ್ವಲ್ಪ ಹೊತ್ತಿನಲ್ಲೇ ಕಿಟ್ಟು ಒಂದು ಲೋಟ ಕಾಫಿ ತಂದು ನನ್ನ ಮುಂದಿಟ್ಟ.

"ಮನು ಮಹಾಶಯರಿಗೆ ಅರ್ಪಣೆ" ಎಂದು ನನ್ನ ಹೆಗಲಿಗೆ ಬಡಿದ.

ನಾನು,

"ಗಂಡು ಮಗು ಹುಟ್ಟಬೇಕಾದರೆ ಕೃಷ್ಣಸ್ವಾಮಿಗೆ ಅರ್ಪಣೆ ಮಾಡಬೇಕಲ್ಲದೆ ಮನುಷ್ಯ ಮಾತ್ರನಾದ ಮನುವಿಗೆ ಅರ್ಪಿಸಿದರೆ ಏನು ಪ್ರಯೋಜನ?"

ಎಂದು ನಕ್ಕೆ.

"ಇವತ್ತು ನಾನೇ ಸಕ್ಕರೆ ಹಾಕಿ ಕಲಸಿದ್ದೇನೆ. ಭಯವಿಲ್ಲದೆ ಕುಡಿದು ಬಿಡು. ನನ್ನ ಹೆಂಡತಿಗಿಂತ ನಾನು ಹಿರಿಯನಲ್ಲವೆ? ಆವಳಿಗಿನ್ನೂ ಮಕ್ಕಳಾಟಿಕೆ ಬಿಡಲಿಲ್ಲ."

ನಾನು ಉತ್ತರಿಸಲಿಲ್ಲ.

"ಹೆಂಡತಿಯೂ ಗಂಡನೂ ಒಂದೇ ವಯಸ್ಸಿನವರಾಗಿದ್ದರೆ ಎಷ್ಟು ಒಳ್ಳೆಯದು ಅಲ್ಲವೆ?" ಎಂದು ಅವನು ಮುಂದರಿದ.

"ಗಂಡನಿಗಿಂತ ಹೆಂಡತಿ ಹಿರಿಯಳಾಗಿದ್ದರೆ ಇನ್ನು ಒಳ್ಳೆಯದಲ್ಲವೆ? ಗಂಡನಿಗೆ ಆಕೆ ಬುದ್ಧಿ ಹೇಳಿ ಕಿವಿಹಿಂಡಲೂಬಹುದು."

"ಹುಂ, ಕಿವಿ ಹಿಡಿಯಬೇಕಾದರೆ ವಯಸ್ಸಿನ ಅಂತರ ಬೇಕೆ?"

"ವಯಸ್ಸು ಎಷ್ಟಾದರೂ ಮಕ್ಕಳಾಗುವ ತನಕ ಮಕ್ಕಳಾಟಿಕೆ ಬಿಡದು. ಈಗ ನೀನು ವಯಸ್ಸಿನಲ್ಲಿ ಹಿರಿಯನೆಂಬ ದೃಷ್ಟಿಯಿಂದ ಸುಮ್ಮನೆ ಜಂಭ ಕೊಚ್ಚಿಕೊಳ್ಳಬೇಡ. ಒಂದು ವೇಳೆ ನೀನು ಹೆಣ್ಣಾಗಿರುತ್ತಿದ್ದರೆ ಹೊರ್ಗ ಪರಿಚಯವಿಲ್ಲದ ಗಂಡಸೊಬ್ಬನೊಡನೆ ಬಾಳ್ವೆ ಮಾಡಲು ಶಕ್ಯವಿತ್ತೆ?"

“ನನಗೆ ಗೊತ್ತಯ್ಯ, ನೀನು ಯಾವಾಗಲೂ ನನ್ನ ವಿರೋಧವಾಗಿಯೇ ಮಾತಾಡುವವ.”

“ಕೇವಲ ಮಾತಿನ ಬಗ್ಗೆ ನಾನು ಹೇಳಿದುದಲ್ಲ. ನೀನು ಹೊರಿಸಿರುವ ಆಪಾದನೆ ಹುರುಳಿಲ್ಲದ್ದು ಎಂದಿಷ್ಟೇ ಸ್ಪಷ್ಟಪಡಿಸಿದೆ. ಆಕೆ ಅಷ್ಟು ವಿನಯಶಾಲಿಯಾದ್ದರಿಂದ ನಿನ್ನ ಮಾತು ನಡೆಯುತ್ತದೆ. ಬೇರೊಬ್ಬಳಾದರೆ ನಿನಗೆ ಪ್ರತ್ಯುತ್ತರವೀಯದೆ ಬಿಡುವಳೆ?”

“ಬೇರೊಬ್ಬಳೆಂದರೆ?”

‘ಅವಳ ಬದಲು ಇನ್ನೊಬ್ಬಳನ್ನು ಮದುವೆಯಾಗಿದ್ದರೆ.’

“ಹ್ಹೊ! ನಾವು ಆ ಹಳೆಯ ಕತೆಯ ಸಮೀಪಕ್ಕೇ ಬರುತಿದ್ದೇವಲ್ಲ? ನಿನ್ನ ಮನಸಿನಲ್ಲಿ ಈಗ ಏನಿದೆ ಹೇಳಬೇಕೆ? ಪದ್ಮಿನಿ ಅಲ್ಲವೆ? ನನ್ನಾಣೆ, ನಿಜ ಹೇಳು.”

“ಸರಿ. ಪದ್ಮಿನಿಯೇ ಎನ್ನೋಣ. ಅವಳೇನಾದರೂ ನಿನ್ನ ಹೆಂಡತಿಯಾಗುವುದು ಅಸಂಭವವಿರಲಿಲ್ಲ.”

“ಅವಳು ನನ್ನ ಹೆಂಡತಿಯಾದರೂ ನಾನು ಅವಳ ಗಂಡನಾಗುತಿದ್ದೆನೋ ಇಲ್ಲವೋ! ಹೇಳಲಾರೆ.”

“ಅದನ್ನು ನಾನು ಹೇಗೆ ಹೇಳಲಿ? ನನಗೆ ಗೊತ್ತಿದ್ದುದನ್ನು ಮಾತ್ರ ಹೇಳಿದೆ ಅಷ್ಟೆ. ಮದುವೆಯಾದ ಬಳಿಕ ಗಂಡ ಗಂಡನೇ ಹೆಂಡತಿ ಹೆಂಡತಿಯೇ.”

“ಅದರೂ ನಾನು ಪದ್ಮಿನಿಯನ್ನು ಮದುವೆಯಾಗಬೇಕಿತ್ತೆ? ನೀನೇ ಹೇಳು.”

“ಆಗಬಾರದಿತ್ತೆಂದು ಯಾರು ಹೇಳುತ್ತಾರೆ? ಅವಳನ್ನು ಮದುವೆಯಾಗುತ್ತಿದ್ದರೆ ಅವಳೂ ಏನಾದರೂ ಲೆಕ್ಚರರೋ ಅಥವಾ ಆಫೀಸರಳೋ ಆಗುತ್ತಿದ್ದಳು. ಇಂಥ ಸಣ್ಣ ಮನೆಯಲ್ಲಿ ನಿನ್ನನ್ನು ಇರಲು ಬಿಡುತಿದ್ದಿಲ್ಲ. ಅಂಗಡಿ ವ್ಯಾಪಾರವನ್ನೆಲ್ಲ ಅವಳೇ ಮಾಡುತಿದ್ದಳು. ನಿನ್ನ ಜವಾಬುದಾರಿ ಬಹುಮಟ್ಟಿಗೆ ಕಡಿಮೆಯಾಗುತ್ತಿತ್ತು. ಮನೆ ಕೆಲಸದ ಮಟ್ಟಿಗಾದರೂ ನಿಜವಾಗಿಯೂ ಅವಳು ನಿನ್ನ ಅರ್ಧಾಂಗಿಯಾಗುತಿದ್ದಳು. ಅಂದರೆ, ಉಳಿದರ್ಧವನ್ನು ಅರ್ಥಾತ್ ಮುಸುರೆ ತಿಕ್ಕುವುದು ಇತ್ಯಾದಿ ಕೆಲಸವನ್ನು ನೀನೇ ಮಾಡಬೇಕಾಗುತ್ತಿತ್ತೋ ಏನೋ!”

ಕಿಟ್ಟು ನಕ್ಕು “ಹಾಗಾದರೆ ನಾನು ವರ್ಸ್ಟ್ ಹಾಫ್ ಆಗುತಿದ್ದೆ ಅಲ್ಲವೆ?”

“ಅವಳು ಹೆಂಡತಿಯ ರಾಗುತಿದ್ದರೆ ಮಾತ್ರ ನನ್ನಂಥ ನಿನ್ನ ಅನಾಥ ಗೆಳೆಯರಿಗೆ ಆಶ್ರಯ ತಪ್ಪುತ್ತಿತ್ತು.”

“ಏಕೆ ಅವಳು ನಿನ್ನ ಸ್ನೇಹಿತೆಯೂ ಅಲ್ಲವೆ?”

“ಅದೇ ಕಾರಣದಿಂದ ನೀನು ನನ್ನನ್ನು ನಿನ್ನ ಮನೆಗೆ ಬರಗೊಡುತಿದ್ದಿಲ್ಲ. ಏಕೆಂದರೆ ಅವಳ ನಿಷ್ಠೆಯ ಬಗ್ಗೆ ನಿನಗೆ ಎಷ್ಟೆಂದರೂ ವಿಶ್ವಾಸವಿರುತಿದ್ದಿಲ್ಲ. ತನ್ನ ಸ್ನೇಹಿತರನ್ನೆಲ್ಲ ತನ್ನ ಗಂಡಂದಿರೆಂದು ಆಕೆ ಪರಿಗಣಿಸಬಹುದೆಂಬ ಸಂಶಯ ನಿನ್ನನ್ನು ಕಾಡಬಹುದಿತ್ತು.”

“ಇದು ಕೇವಲ ನಿನ್ನ ಹುಚ್ಚು ಕಲ್ಪನೆ. ನಾನೇನು ಅಂಥ ಹೆಡ್ಡನೆ? ನೀನೆಂಥವ ಎಂಬುದು ನನಗೆ ತಿಳಿಯದೆ?”

“ನೀನು ಹೆಡ್ಡನಾಗಿರದೆ ಅತಿ ಬುದ್ಧಿವಂತನಾಗಿದ್ದುದರಿಂದಲೆ ಹಾಗಾಗುತ್ತಿತ್ತು. ಹೆಡ್ಡನಾಗಿದ್ದರೆ ಅವಳೇನನ್ನು ಮಾಡಿದರೂ ನೀನು ಗಮನಿಸುತ್ತಿರಲೇ ಇಲ್ಲ. ನೋಡು, ನಿಜವಾಗಿ ಲೋಕದಲ್ಲಿ ಬುದ್ಧಿವಂತನಾಗಿರುವವನೇ ಅತ್ಯಂತ ಕಷ್ಟಜೀವಿ. ಅವನ ಸಕಲ ಇಂದ್ರಿಯಗಳೂ ಸದಾ ತೆರೆದಿರುತ್ತವೆ. ಬಾಹ್ಯ ಪ್ರಪಂಚದಲ್ಲಿ ನಡೆಯುವ ಪ್ರತಿಯೊಂದು ವ್ಯಾಪಾರವೂ ಅವನಲ್ಲಿ ಕ್ರಿಯೆ-ಪ್ರತಿಕ್ರಿಯೆಗಳನ್ನುಂಟುಮಾಡುತ್ತವೆ. ಅವನಿಗೆ ಪ್ರಪಂಚ ಉಂಟು-ಇಲ್ಲ. ಆದರೆ ಹೆಡ್ಡನಿಗೆ ಪ್ರಪಂಚ ಉಂಟು ಅಥವಾ ಇಲ್ಲ.”

“ನೀನು ವೇದಾಂತಿಗಳ ಭಾಷೆಯಲ್ಲಿ ಮಾತಾಡತೊಡಗಿದರೆ ನಾನೇನೂ ಹೆದರಲಾರೆ. ಪದ್ಮಿನಿಯನ್ನು ಮದುವೆಯಾಗಬೇಕೆಂದು ನಾನು ಬಯಸಿದ್ದೆನೆಂಬ ತಪ್ಪು ಅಭಿಪ್ರಾಯ ನಿನ್ನಲ್ಲಿ ನಾಟ ಹೋಗಿದೆಯಲ್ಲವೆ?”

“ನನ್ನಲ್ಲಿ ಯಾವ ಅಭಿಪ್ರಾಯವಿದ್ದರೇನು? ನೀನು ಆಯ್ಯೆಯಸ್ ಆಗಬೇಕು, ದೊಡ್ಡ ಅಧಿಕಾರಿಯಾಗಿ ದೇಶ ವಿದೇಶಗಳಲ್ಲಿ ಮೆರೆಯಬೇಕು ಎಂಬಿತ್ಯಾದಿ ಅಭಿಪ್ರಾಯಗಳು ಕೂಡಾ ನನ್ನಲ್ಲಿ ನಾಟ ಹೋಗಿವೆ. ಈ ಅಭಿಪ್ರಾಯಗಳು ನಿನ್ನಲ್ಲಿ ಯಾವ ಪ್ರತಿಕ್ರಿಯೆಯನ್ನೂ ಉಂಟು ಮಾಡುವುದಿಲ್ಲವಲ್ಲ? ಸುಮ್ಮನೆ ನಿನ್ನ ಮನಸಿನಮುಂಡಿಗೆಯನ್ನು ಹೊರತರಲು ನನ್ನನ್ನು ದೂಷಿಸಬೇಡ, ನನ್ನನ್ನು ಸಾಧನವನ್ನಾಗಿ ಮಾಡಬೇಡ.”

“ಪದ್ಮಿನಿಯನ್ನು ಹಾಗಾದರೆ ನಾನು ಇನ್ನೂ ಪ್ರೀತಿಸುತಿದ್ದೇನೆಯೆ?”

“ನಿನ್ನ ಮನಸ್ಸನ್ನು ಹೊಕ್ಕು ನೋಡುವ ಪರಕಾಯ ಪ್ರವೇಶದ ವಿದ್ಯೆ ನನಗೆ ತಿಳಿಯದು. ಆದರೆ ನೀನು ಇಷ್ಟು ಒತ್ತಾಸೆಯಿಂದ ಅವಳ ಬಗ್ಗೆ ಮತ್ತೂ ಮತ್ತೂ ಮಾತಾಡುವುದನ್ನು ನೋಡುವಾಗ ನನಗೆ ಹಾಗನ್ನಿಸುತ್ತದೆ.”

“ಹಾಗಾದರೆ ನಾನು ಇನ್ನು ಅವಳನ್ನು ಮದುವೆಯಾಗಬೇಕೆ?”

“ನೋಡು ನಾನು ಸಾಕ್ಷಾತ್ ಮದುವೆಯ ದೃಷ್ಟಿಯಿಂದಲೇ ಇದನ್ನು ಹೇಳುತ್ತಿಲ್ಲ. ಮದುವೆಯ ಸಂಸ್ಕಾರಕ್ಕಿಂತ ಮನಸ್ಸಿನ ಇಂಗಿತ ಎಷ್ಟೋ ಮಹತ್ವದ್ದು. ಗಂಡು ಹೆಣ್ಣುಗಳ ಪರಿಚಯ ಮದುವೆಯ ಗುರಿಯತ್ತ ಸಾಗುವುದು ಅಪರೂಪವಲ್ಲ. ಆದರೆ ನಮ್ಮ ಹಿಂದಿನ ಪದ್ಧತಿಯ ಮೇರೆಗೆ ಮದುವೆ ಮೊದಲು. ಪರಿಚಯ ಮತ್ತೆ.”

“ಪದ್ಮಿನಿಗೂ ನನಗೂ ಪರಿಚಯವಾದುದರಿಂದ ಇನ್ನು ಅದು ಮದುವೆಯಲ್ಲಿ ಪ್ರತಿಫಲಿಸಬೇಕು; ಅದಕ್ಕೆ ಬೇರೆ ದಾರಿಯಿಲ್ಲ, ಎಂದು ನೀನು ಹೇಳುತ್ತಿರುವುದೆ?”

“ಸದ್ಯದ ಪರಿಸ್ಥಿತಿಯಲ್ಲಿ ನಿಮ್ಮಿಬ್ಬರ ಮದುವೆ ಅಸಾಧ್ಯವೆಂದು ಕಾನೂನಿನ ದೃಷ್ಟಿಯಿಂದ ನಾನು ಹೇಳಬೇಕಾಗಿದೆ. ನಾನೀಗ ವಕೀಲಿ ಕಲಿಯುವುದರಿಂದಾಗಿ ಇಷ್ಟನ್ನು ಮಾತ್ರ ಹೇಳಬಲ್ಲೆ.”

“ಓಹ್! ನಿನ್ನೊಡನೆ ಏನೆಲ್ಲ ಇದೆ! ಒಂದು ಕಡೆ ವೇದಾಂತ, ಒಂದು ಕಡೆ ಮನಶ್ಶಾಸ್ತ್ರ, ಇನ್ನೊಂದೆಡೆ ಸಾಹಿತ್ಯ, ಈಗ ಕಾನೂನು. ಹ್ಹ! ಜ್ಯಾಕ್ ಆಫ್ ಆಲ್ ಟ್ರೇಡ್ಸ್ ಎಂದರೆ ನೀನೇ ಆಗಿರಬೇಕು!”

ನಾನೂ ನಕ್ಕೆ. ಆದರೆ ಕಿಟ್ಟು ಈ ಸಂಭಾಷಣೆಯ ಗತಿ ತಿರುಗಿಸಬೇಕೆಂದು ಇಚ್ಛಿಸಿ ಹೀಗೆ ಹಾಸ್ಯ ಮಾಡಿದನೆಂಬುದು ನನಗೆ ಗೊತ್ತಿತ್ತು. ಅವನ ಮನಸ್ಸಿನಲ್ಲಿ ಇದ್ದ ಭಾವನೆಯನ್ನು ಅವನಿಗೆ ಬಳಗಿಟ್ಟು



“ನಾನು ಪದ್ಮಿನಿಯನ್ನು ಮದುವೆಯಾಗಬೇಕಿತ್ತೇ?” ಕಿಟ್ಟು ಕೇಳಿದ.

ಕೊಳ್ಳಲೂ ಸಾಧ್ಯವಿರಲಿಲ್ಲ, ಹೊರಗೆ ಪ್ರಕಟಪಡಿಸಲೂ ಸಾಧ್ಯವಿರಲಿಲ್ಲ ಎಂಬುದು ಸ್ಪಷ್ಟವಾಗಿತ್ತು.

"ನಿಜ ಹೇಳಬೇಕಾದರೆ ಪದ್ಮಿನಿಯ ಮೇಲೆ ನಿನಗೂ ಅನುರಾಗ ವಿದೆ, ಅಲ್ಲವೆ? ನಿಜ ಹೇಳು"ಎಂದು ಕಿಟ್ಟು ಪುನಃ ಮಾತು ಮುಂದುವರಿಸಿದ.

"ನನ್ನ ಅನುರಾಗ-ಕಿನುರಾಗಗಳಿಂದ ಪ್ರಪಂಚ ಬದಲದಷ್ಟೆ? ಎಷ್ಟೆಂ-ದರೂ ನಾನು ನಿನಗಿಂತ ಹೆಚ್ಚು ವಿಶಾಲವಾದ ಕ್ಷೇತ್ರದಲ್ಲಿ ವಿಹರಿಸಿದವ. ನಿನ್ನಂತೆ ಪದಪೀಧರನಾಗುವವರೆಗೂ ಹಾಲು ಹಸುಳೆಯಂತೆ ಕೇವಲ ಪುಸ್ತಕಕ್ರಿಮಿಯಾಗಿ ಬಾಳಿದವನಲ್ಲ. ಅಷ್ಟು ಸುಲಭವಾಗಿ ನಾನು ಅನುರಾಗದ ಬಲೆಗೆ ಬೀಳುವವನಾಗಿದ್ದರೆ ನಾನಿನ್ನೂ ಇಷ್ಟು ಕಷ್ಟಪಟ್ಟು ಓದು ಮುಂದುವರಿಸಲು ಯತ್ನಿಸುತಿದ್ದಿಲ್ಲ. ಅನುರಾಗದಲ್ಲೇ ಒದ್ದಾ-ಡುತ್ತ ಒಡ್ಡ್ಯಾಡುತ್ತ ನನ್ನ ಹಳ್ಳಿಯಲ್ಲೇ ಇದ್ದುಬಿಡುತಿದ್ದೆ. ಆದರೆ ಪದ್ಮಿನಿ ಸಮಸ್ಯಾರೂಪವಾಗಿ ಕಾಣುತ್ತಿರುವುದು ನಿನಗೆ."

"ಒಹ್, ನಾನೇನು ಕಮಲಭಕ್ಷಕನಾಗಿ ಜೀವನ ಕಳೆದಿಲ್ಲ. ನಾನೂ ತುಂಬಾ ಕಷ್ಟಪಟ್ಟವ."

"ದೈಹಿಕ ಕಷ್ಟಕ್ಕೂ, ಮಾನಸಿಕ ಪರದಾಟಕ್ಕೂ ತುಂಬಾ ವ್ಯತ್ಯಾಸವಿದೆ, ಕಿಟ್ಟು. ನೀನೀಗ ತಾನೇ ಸ್ವತಂತ್ರ ಜೀವನವನ್ನು ಆರಂಭಿಸಿ ಹತ್ತವರಿಂದ ಸ್ವಾತಂತ್ರ್ಯ ಪಡೆದಿದ್ದೆ. ನಾನು ಏಳೆಂಟು ವರ್ಷ ವಯಸ್ಸಿನಲ್ಲೇ ಅಂಥ ಸ್ವಾತಂತ್ರ್ಯವನ್ನು ಗಳಿಸಿದವ. ಅದಿರಲಿ. ಪದ್ಮಿನಿಯ ವಿಷಯವನ್ನು ಮರೆತು ಬಿಡೋಣ. ನಾನಿನ್ನು ಇಲ್ಲಿ ಇರುವ ಒಂದು ತಿಂಗಳ ಅವಧಿಯಲ್ಲಿ ಅವಳು ಆಗಾಗ ನಮ್ಮ ಮಾತುಕತೆಗಳಲ್ಲಿ ಕಾಣಿಸಿಕೊಳ್ಳಲಿಕ್ಕುಂಟು."

"ನಾನಾಗಿ ಖಂಡಿತ ಮಾತಾಡಲಾರೆ."

"ನೋಡೋಣವಂತೆ. ಆದರೆ ಈ ತನಕ ನಮ್ಮ ಮಾತುಗಳಿಗೆ ಅವಳು ಕೇಂದ್ರವಾಗಿದ್ದಾಳೆ.ನಮ್ಮಎಲ್ಲಮಾತುಗಳೂ ಅವಳನ್ನು ಬಳಸುತ್ತವೆ ಅಷ್ಟೆ.

"ನೀನೇ ಅವಳ ಪ್ರಸ್ತಾಪ ತೆಗೆಯುತ್ತಿ."

"ನಾನು ಅಪ್ಪಿ ತಪ್ಪಿ ಅವಳ ಪ್ರಸ್ತಾಪ ತೆಗೆದರೂ ನೀನು ಆ ಮಾತಿನ ಎಳೆಯನ್ನು ಮತ್ತೂ ಏಕೆ ಎಳೆಯಬೇಕು? "

ಕಿಟ್ಟು ನಕ್ಕು ನನ್ನ ಪತ್ರಿಕೆಯನ್ನು ಬಿಡಿಸಿ ಓದಲಾರಂಭಿಸಿದ. ನಾನೂ ನನ್ನ ಪುಸ್ತಕ ಓದುವಿಕೆಯಲ್ಲಿ ಮಗ್ನನಾದೆ. ಬರಡು ಪಠ್ಯಪುಸ್ತಕ ವನ್ನೋದಿ ತಲೆಕೆಡಿಸಿಕೊಳ್ಳುತ್ತಿದ್ದ ನನಗೆ ಅವನ ಸಂಭಾಷಣೆ ಹಿತಕರವಾಗಿ ರುತ್ತಿತ್ತು. ಅವನಿಗೂ ಇಂಥ ಸಂಭಾಷಣೆ ನಡೆಸಲು ಯೋಗ್ಯವಾದ ವ್ಯಕ್ತಿಯ ಅಭಾವವಿತ್ತೆಂಬುದೂ ನನಗೆ ಸ್ಪಷ್ಟವಾಗುತ್ತಿತ್ತು.

ಆರೂವರೆ ಗಂಟೆ ಹೊತ್ತಿಗೆ ಕಿಟ್ಟು ಎದ್ದ.

"ಎಷ್ಟು ಓದುತ್ತೀಯೋ ಬೃಹಸ್ಪತಿ? ನಿನ್ನ ಓದಿಗೆ ಪರೀಕ್ಷೆಯ ಮುಂಚಿನ ರಾತ್ರಿ ಕಟ್ಟಿಟ್ಟದ್ದಲ್ಲ? ಸ್ವಲ್ಪ ತಿರುಗಾಡಿ ಬರೋಣ. ಪೇಪರಿಗೋ ಮಾರ್ಕೆಟಿಗೋ ಹೋಗುವ. ನನಗೂ ಆಯಾಸವಾಗಿದೆ. ಅಫೀಸಿನಲ್ಲಿ ಸುಪರಿಂಟೆಂಡೆಂಟರು ಸುಮ್ಮನೆ ನನ್ನ ಮೇಲೆ ಸಿಟ್ಟುಗೊಂಡು ವಾಗ್ಯುದ್ಧ ಮಾಡಿದರು. ನಾನೂ ಅವರನ್ನು ಮಾತಿನಲ್ಲಿ ಬಿಡಲಿಲ್ಲವೆನ್ನು. ಒಬ್ಬ ಹುಡುಗಿ ಸಹೋದ್ಯೋಗಿಯು ತಪ್ಪು ಲೆಕ್ಕ ಹಾಕಿದ್ದಳು. ಆ ತಪ್ಪನ್ನು ಬೇಕೆಂದೇ ಅವರು ನನ್ನ ಮೇಲೆ ಹೇರಿಸಲು ಯತ್ನಿಸಿದರು. ಅಷ್ಟು ಸರ್ವಿಸ್ ಆಗಿದ್ದರೂ ಅವರಿಗೆ ಆ ಹೊಸ ನೌಕರಳಿಗೆ ಗದರಿಸುವ ಧೈರ್ಯ ವಿರಲಿಲ್ಲ. ಆದರೂ ಎಲ್ಲರೆದುರು ಹೀಗೆ ಸುಮ್ಮನಾದರೂ ಗದರಿಸಿದರೆ ನಮಗೂ ಕೋಪ ಬರುವುದಿಲ್ಲವೆ? ಕಚೇರಿಯಿಂದ ಮತ್ತೆ ಹೊರಡುವತನ ಕವೂ ನನಗೆ ಇದೇ ತಲೆಯಲ್ಲಿ ಸುಳಿದಾಡುತ್ತಿತ್ತು. ಏನೂ ಕೆಲಸ ಮಾಡಲೂ ಆಗಲಿಲ್ಲ."

"ಎಷ್ಟೆಂದರೂ ಎಸ್. ಆಯ್. ರೈಲ್ವೇ ಎಂದರೆ ಸ್ಲೋ ಎಂಡ್ ಇರ್ರೆಗ್ಯುಲರ್ ರೈಲ್ವೇಯಲ್ಲವೆ ? ಮತ್ತೆ ಅದರ ಕಚೇರಿಯಲ್ಲಿ ದುಡಿಯುವ ನೀವಾದರೂ ಹೇಗೆ ಆ ಮಂದಗತಿಗೆ ಅಪವಾದವಾದೀರಿ, ಕಿಟ್ಟು! "

ನಾವಿಬ್ಬರೂ ನಕ್ಕೆವು. ನಾನು ಪುಸ್ತಕ ಮಡಚಿಟ್ಟು ಅಂಗಿ ತೊಟ್ಟು ಕೊಂಡು "ಹೊರಡೋಣ" ಎಂದೆ.

" ಏ ಸ್ವಲ್ಪ ತಲೆ ಬಾಚಿಕೊಳ್ಳೋ! ಕುದುರೆಯ ಬಾಲದಂತೆ ಕೂದಲು ನೇತಾಡುತ್ತಿದೆ."

ಎಂದು ಕಿಟ್ಟು ನಕ್ಕ.

" ನಾ ತಲೆ ಬಾಚಿದರೂ. ಬಾಚದಿದ್ದರೂ ಮದ್ರಾಸಿನಲ್ಲಿ ನನ್ನನ್ನು ಕೇಳುವವರಿಲ್ಲಯ್ಯ ! ನೀನಾದರೆ ಹೊಸ ಮದುಮಗ. ಮುಖಕ್ಕೆ ಸ್ನೋ, ಪೌಡರ್ ಹಚ್ಚಿಕೊಂಡು ತಲೆ ಬಾಚಿಕೊಳ್ಳಬೇಕು. "

ಎನ್ನುತ್ತ ತಲೆ ಬಾಚಿಕೊಂಡೆ. ದಾರಿಯಲ್ಲಿ ಪದ್ಮಿನಿ ಸಿಗಬಹುದೆಂದು ಕಿಟ್ಟುಸಿಗೆ ಕಾಣಬೇಕೆಂದು ತೋರಿದರೂ ನಾನು ಅದನ್ನು ಹೇಳಲಿಲ್ಲ. ಅಂದಿನವರೆಗೆ ಅವನ ಮನಸ್ಸು ಸಾಕಷ್ಟು ಕೆದರಿತ್ತೆಂಬುದು ನನಗೆ ಮನನವಾಗಿತ್ತು.

" ನಿಜ ಹೇಳ್ತೀನೆ, ನಾನೂ ತಲೆ ಬಾಚಿ, ಶೃಂಗರಿಸಿಕೊಂಡು ಹೋಗದಿದ್ದರೆ ನನ್ನ ಹೆಂಡತಿಗೆ ಒಪ್ಪಿಗೆಯಾಗುವುದಿಲ್ಲ. ನನ್ನನ್ನು ಕಾಡು ಮನುಷ್ಯ ಎಂದು ಆಕೆ ಕಾಣುತ್ತಾಳೆ."

ನಾನು ನಕ್ಕೆ.

" ತಮ್ಮ ಗಂಡಂದಿರು ಶೃಂಗಾರ ಮಾಡಿಕೊಂಡು ಹೋದರೆ ಇತರ ಹೆಂಗಸರನ್ನು ಆಕರ್ಷಿಸಬಹುದು ಎಂಬ ವಿಚಾರ ಹೆಂಡಂದಿರ ತಲೆಗೇ ಬರೋದಿಲ್ಲ."

" ತಾನು ಆಕರ್ಷಕ ಗಂಡನನ್ನೇ ವರಿಸಿದ್ದೇನೆಂದು ಜಗಜ್ಜಾಹೀರು ಮಾಡಿ ತೃಪ್ತಿ ಪಡೆಯಲು ಅವರು ಇಚ್ಛಿಸುತ್ತಿರಬೇಕು!ಅಂತೂ ಇದರಿಂದಾಗಿ ನಮ್ಮ ಶೃಂಗಾರ ದ್ರವ್ಯಗಳ ಉದ್ಯಮ ಭದ್ರವಾಗಿ ಬೇರೂರಿದೆನ್ನು. ಇನ್ನು ಗಂಡಂದಿರನ್ನು ಹೆಂಡಂದಿರು ಸೀರೆ ಉಡಿಸುವುದೊಂದೇ ಬಾಕಿ. ಉಳಿದ ತಮ್ಮ ಅಭ್ಯಾಸಗಳನ್ನೆಲ್ಲ ಗಂಡಂದಿರ ಮೇಲೆ ಹೇರಿದ್ದಾರೆ."

ಹೀಗೆನ್ನುತ್ತ ನಾವು ಮೆಟ್ಟಲಿಳಿದು ಹೋದೆವು. ಅಂಬುಜಮ್ಮಾಳ್ ದೂರದಿಂದ ನಮ್ಮನ್ನು ದುರದುರನೆ ನೋಡುತಿದ್ದುದು ನಮ್ಮಿಬ್ಬರ ಗಮನಕ್ಕೂ ಬಂತು.

"ಏನೋ! ಆಕೆ ನಿನ್ನನ್ನೇ ಏಕಾಗಿ ನೋಡುತ್ತಿದ್ದಳು? ನೀನೇನಾ ದರೂ ಅವಳನ್ನು ವಶೀಕರಣ ಮಾಡಿದ್ದಿಯಾ? " ಎಂದು ಕಿಟ್ಟು ಸ್ವಲ್ಪ ದೂರ ಹೋದೊಡನೆ ಹೇಳಿ ನಕ್ಕ.

"ಅವಳಿಗೆ ಕಣ್ಣುಗಳಿವೆ. ನೋಡಿದಳು. ಪಾಪ, ಆ ಮುದುಕಿಯ ಬಗೆಗೆ ಏನೇನು ಹೇಳುತ್ತಿಯಾ? ವೃದ್ಧನಾರೀ ಪತಿವ್ರತಾ ಎಂಬುದನ್ನಾ ದರೂ ಅರಿತು ನೀನು ಅವಳ ಮೇಲೆ ಸ್ವಲ್ಪ ಅಭಿಮಾನಪಡಬಾರದೆ? "

"ಶಹಭಾಸ್! ಈ ಮಾತನ್ನು ಅವಳು ಸ್ವತಃ ಕೇಳಿದರೆ ಒಮ್ಮೆಯೇ ಉಬ್ಬಿ ಆಕಾಶದಲ್ಲಿ ಹಾರಿ ಹೋಗಬಹುದು! ಆದರೆ ಒಂದು ಸಂಗತಿ: ಅವಳು ವೃದ್ಧನಾರಿಯೆಂದು ನಿನಗೆ ಹೇಳಿದವರಾರು? "

"ಅದಕ್ಕೆ ಬೇರೆಯಾರಾದರೂ ಹೇಳಬೇಕೆ? ನಮ್ಮ ಕಣ್ಣಿಗೇ ಗೋಚರಿಸುವುದಿಲ್ಲವೆ? ಇದರ ಮೇಲೆ ಅವಳ ಮಕ್ಕಳಿಗೆ ಕೂಡಾ ಮದುವೆ ಯಾಗಿದೆಯೆಂಬುದನ್ನು ಅವಳೇ ನನ್ನೊಡನೆ ಹೇಳಿದ್ದಾಳೆ. "

"ಸರಿ, ಸರಿ. ನಿಮ್ಮಿಬ್ಬರ ಪರಿಚಯ ಅಷ್ಟು ದೂರ ಮುಂದುವರಿದಿರ ಲಾರದೆಂದು ನಾನು ಎಣಿಸಿದುದು ತಪ್ಪಾಯಿತು. ಹಾಗಾದರೆ ನಿನ್ನೊಡ ನೆಯೂ ಆಕೆ ತನ್ನ ಕತೆಯನ್ನು ಹೇಳಿಯಾಗಿದೆ."

"ನಾ ಬಂದ ಮರುದಿನ ಕೋಣೆಗೆ ಬಂದು ಐದು ರೂಪಾಯಿ ಚಿಲ್ಲರೆ ಕೇಳಿದಳು. ಅದನ್ನು ಕೊಟ್ಟೆ. ಹಾಗೆಯೇ ನಾನೆಲ್ಲಿಯವನೆಂದು ತಿಳಿ ದೊಡನೆ, ಅವಳ ಗಂಡನೂ ಮಂಗಳೂರಲ್ಲಿ ಹಿಂದೆ ಇದ್ದನೆಂದು ಹೇಳುತ್ತ ಉಳಿದ ವಿಷಯಗಳನ್ನು ನುಡಿದಳು."

"ನಿನಗೆ ನಿಜವಾಗಿ ಏನೂ ತಿಳಿಯದು. ಹಾಗೆ ಹೇಳುವುದು ಅವಳ ವಾಡಿಕೆ. ಅವಳಿಗೆ ನಿಜವಾಗಿ ಮದುವೆಯಾಗಿರಲಿಲ್ಲವಂತೆ. ಆದರೆ ಮಕ್ಕಳಾದುದು ನಿಜವೆನ್ನು..."

"ಅಂತೂ ನಿನಗೆ ಅವಳ ವಿಷಯ ಹೆಚ್ಚು ಗೊತ್ತಿರಬಹುದೆಂಬು ದನ್ನು ನಾನು ಒಪ್ಪುತ್ತೇನೆ. ಈಗಂತೂ ಆಕೆ ಒಬ್ಬಳಾಗಿಯೇ ಇದ್ದಾಳಲ್ಲ?"

"ಹಾಗೆಂದು ನಾನೂ ನಂಬುತ್ತಿದ್ದೆ. ಆದರೆ ಮೊನ್ನೆ ಆ ಬೀಡಾ ಬೀಡಿ ಅಂಗಡಿಯ ನಾಯರ್ ಎಲ್ಲವನ್ನು ನನಗೆ ತಿಳಿಸಿದ. ಈಗಲೂ ಇಲ್ಲಿಗೆ ಒಬ್ಬ ವಯಸ್ಸಾದವ ಅಪರೂಪವಾಗಿ ಬರುತಿದ್ದಾನೆ. ಆದರೆ ಈಕೆ ದಿನಾ ಸಂಜೆ ಅವನಲ್ಲಿಗೆ ಹೋಗುತಿದ್ದಳಂತೆ. ಏನೋ ಮಾಜೀ ಪೋಲೀಸ ನಂತೆ."

"ನೀನು ಇದನ್ನು ಸಹಿಸಿರುವಿಯಲ್ಲ?"

"ನನ್ನಂಥವರು ಏನು ಮಾಡಬಹುದು, ಈ ಕಾಲದಲ್ಲಿ? ಇದೇ ಮನೆಗೆ ನಾನೀಗ ಮೂವತ್ತೈದು ರೂಪಾಯಿ ಕೊಡುತಿದ್ದೇನೆ. ನಾನಿದನ್ನು ಬಿಟ್ಟ ಮರುದಿನ ಕನಿಷ್ಠ ಪಕ್ಷ ಐವತ್ತು ರೂಪಾಯಿಯಾದರೂ ಬರುವುದ ರಲ್ಲಿ ಸಂಶಯವಿಲ್ಲ. ನನಗೂ ಐವತ್ತು ರೂಪಾಯಿಗಿಂತ ಕಡಿಮೆಗೆ ಬೇರೆ ಮನೆ ಸಿಗಲಾರದು. ಇದಾದರೋ ಇರಲಿಕ್ಕೆ ಅನುಕೂಲವಾಗಿದೆ. ಇಲೆ ಕ್ಟ್ರಿಕ್ ರೈಲು ಹಿಡಿಯಲು ಎರಡು ಫರ್ಲಾಂಗ್ ನಡೆದರೆ ಸಾಕು. ಇದನ್ನು

ಬಿಟ್ಟು ಎಲ್ಲೋ ರಾಯಪುರಂ, ವಾಷರ್‌ಮೇನ್ ಪೇಟೆ, ಪಲ್ಲಾವರಂ ಅಷ್ಟ್ಯಯರ್ ಮುಂತಾದ ದೂರದ ಪ್ರದೇಶಗಳಲ್ಲಿ ಮನೆ ಮಾಡಿದರೆ ನಾನು ಮುಂಜಾನೆಯೇ ಹೊರಡಬೇಕಾದೀತು. ಮನೆಯಲ್ಲಿ ಊಟ ಮಾಡಲೂ ಅವಕಾಶವಿರಲಿಕ್ಕಿಲ್ಲ. ಹಿಂದಿರುಗುವಾಗಂತೂ ರಾತ್ರಿಯಾದೀತು. ಇಲ್ಲವಾದರೆ ಆ ತೊಂದರೆಯಿಲ್ಲ. ಅದೊಂದೇ ನನಗೆ ಬೇರೆ ಉಪಾಯವಿಲ್ಲದಂತೆ ಮಾಡಿದೆ. ಮತ್ತೆ ಅವಳಾದರೂ ಏನು ಮಾಡಿಯಾಳು? ಈಗ ಆ ಮಲೆಯಾಳಿಗಳಿದ್ದಾರಲ್ಲ? ಅವರು ಬಂದು ಎರಡು ವರ್ಷ ಕಳೆಯಿತಂತೆ. ಮೂರು ಬಾರಿ ಈಕೆ ಐದೈದೇ ರೂಪಾಯಿ ಬಾಡಿಗೆ ಹೆಚ್ಚಿಸಿದಳಂತೆ. ಆದರೆ ಈಗ ಇನ್ನು ಹೆಚ್ಚಿಸಲು ಅವರು ಒಪ್ಪುತ್ತಿಲ್ಲ. ಅವರನ್ನು ಹೊರಗೆ ಹಾಕಲು ಅವಳಿಂದ ಆಗೋದಿಲ್ಲ."

"ಅದು ಸರಿ. ನಿನ್ನ ಹೆಂಡತಿ ಇದೀ ದಿನ ಅಲ್ಲೇ ಇರಬೇಕಾಗಿದಲ್ಲ? ಅದ್ದರಿಂದ ಅವಳಿಗೆ ಒಪ್ಪಿಗೆಯಾದರೆ ನೀನೇನು ಕಳವಳಪಡುವ ಕಾರಣವಿಲ್ಲೆನ್ನು. ಎಷ್ಟೆಂದರೂ ಹೆತ್ತವರಲ್ಲಿಂದ ಈಗತಾನೇ ಬಂದವಳಲ್ಲ?"

"ಅವಳಿಗೆ ಏನೂ ಅಸಮಾಧಾನವಿಲ್ಲ. ಒಂದು ವಿಧದಲ್ಲಿ ಅವಳಿಗೆ ಈ ಸ್ವತಂತ್ರ ವಾತಾವರಣ ಮೆಚ್ಚುಗೆಯನ್ನೇ ಉಂಟು ಮಾಡಿದೆ. ಇಲ್ಲಿ ಅತ್ತೆ ನಾದಿನಿಯರ ಉಪಟಳವಿಲ್ಲ. ನನಗೊಬ್ಬನಿಗೆ ಅನ್ನ ಮಾಡಿ ಹಾಕಿದರಾಯಿತು. ಅಂಬುಜಮ್ಮಾಳ್ ಇದಕ್ಕೆ ಅಡ್ಡ ಬರಲು ಸಾಧ್ಯವಿಲ್ಲವೆನ್ನು"

"ಅಷ್ಟಿದ್ದರೆ ಸಾಕು. ಹಾಗೆ ನೀನೂ ಹೊಸಬನಲ್ಲವೆ? ಹುಡುಗರಿಗೆ ಮೀಸೆ ಬರುವಾಗ ದೇಶ ಕಾಣದಂತೆ. ಹ್ಹ! ಹ್ಹ! ಒಟ್ಟನಲ್ಲಿ ನಾವು ಗಂಡಸರು ಜರೂರಿ ಬಿದ್ದರೆ ಮರದಡಿಯಲ್ಲೂ ಮರುಭೂಮಿಯಲ್ಲೂ ಜೀವಿಸಬಲ್ಲೆವೆಂದು ನನಗೆ ತೋರುತ್ತದೆ.ಆದರೆ ಹೆಂಗಸರಿಗೆ ಮಾತ್ರಅದು ಕಷ್ಟಸಾಧ್ಯ."

"ಹೂಂ, ಅದೆಲ್ಲ ನಮ್ಮ ಭಾವನೆ ಅಷ್ಟೇ. ಈಗ ಆ ನರ್ಸಿಸ್ ಕ್ವಾರ್ಟರ್ಸಿನ ಮುಂದಿರುವ ಬಯಲನ್ನು ನೋಡು! ಅಲ್ಲಿ ಗಂಡಸರು ಹೆಂಗಸರು, ಮಕ್ಕಳು ಎಂಬ ಭೇದವೆಲ್ಲಿದೆ? ಪ್ರಾಣಿಗಳಿಗೆ ಕೂಡಾ ಆ ರೀತಿಯಲ್ಲಿ ಜೀವಿಸುವುದು ಅಸಹ್ಯಕರವಾಗಿ ತೋರದಿರದು! ನಾವೇನೋ ಈ ವೈಟ್ ಕಾಲರ್ ಶ್ರೀಮಂತರು ಬಂಗಲೆಗಳಲ್ಲಿರಲು ಆಶಿಸುತ್ತೇವೆ. ಆದರೆ ಅವರ ಜೀವನಕ್ರಮವನ್ನು ನೋಡಿದ ಯಾರಾದರೂ ಕೂಡಲೇ ಮಾರ್ಕ್ಸ್‌ನ ವರ್ಗಸಮರ ಸಿದ್ಧಾಂತವನ್ನು ಒಪ್ಪದಿರಲಿಕ್ಕಿಲ್ಲ. ನೀನು, ಪದ್ಮಿನಿ, ನಾನು ಎಲ್ಲ ಬೂರ್ಜ್ವಾ ವರ್ಗದ ಸ್ಯಾಂಪಲ್‌ಗಳು. ಅದರಲ್ಲೂ ನಾವು ಅವನತಿಯ ದಾರಿಯಲ್ಲಿರುವ ಸ್ಯಾಂಪಲ್‌ಗಳು."

"ಏನೋ ಕಿಟ್ಟು? ಇನ್ನೇನು, ಜಿಂದಾಬಾದ್ ಮನೋಭಾವ ತಾಳಿಬಿಟ್ಟೆಯಾ?"

"ಇಲ್ಲಪ್ಪ! ನೋಡು ಕಾಲೇಜಿನಲ್ಲಿರುವಾಗ ನೀನೇ ಹೀಗೆನ್ನುತಿದ್ದಿಲ್ಲವೆ? ಅದಕ್ಕಾಗಿ ನಮ್ಮ ಕೇಂಬ್ರಿಜ್ ಪ್ರೊಫೆಸರರ ಶಹಭಾಸ್‌ಗಿರಿಯನ್ನು ಪಡೆಯುತ್ತಿದ್ದಲ್ಲವೆ? ಮಾರ್ಕ್ಸ್ ಮತ್ತು ಹೇಗಲರ ಸಿದ್ಧಾಂತಗಳ ಬಗ್ಗೆ ಬರೆದ ನಿನ್ನ ಪ್ರಬಂಧಕ್ಕಾಗಿಯೇ ಪದ್ಮಿನಿ ಕೂಡಾ ನಿನ್ನ ಮರೆ ಹೋಗಲಿಲ್ಲವೆ? ನೀನೀಗ ನನ್ನನ್ನು ಪರೀಕ್ಷಿಸುತಿದ್ದೀ ಅಷ್ಟೆ."

"ಪುಸ್ತಕದ ಬದನೆಕಾಯಿ ಎಂದಂತೆ ನಾವು ಓದಿದುಕ್ಕೂ ಇದಕ್ಕೂ ಏನು ಸಂಬಂಧವಿದೆ? ಸುಮ್ಮನೆ ನೀನು ಇದಕ್ಕಾಗಿ ತಲೆ ಹಾಳು ಮಾಡಿಕೊಳ್ಳಬೇಡ. ಹೇಗಾದರೂ ಈಗ ಒಂದು ನೌಕರಿ ಹಿಡಿದಿದ್ದಿ. ಮುಂದೆ ಅಯ್ಯೆಯಸ್‌ಗೆ ಏರುವ ಸಂಭವವೂ ಇದೆ. ಹೀಗಿರುವಾಗ ಸುಮ್ಮನೆ ಮಾರ್ಕ್ಸ್‌ನನ್ನು ನೆನೆಯಬೇಡ. ಆವೇಶ ಭರದಲ್ಲಿ ನಾವು ಏನನ್ನೂ ಮಾಡಬಾರದು. ಇಂಥ ವಿಚಾರಗಳು ನಿನ್ನ ಮನಸ್ಸಿನಲ್ಲಿವೆ ಎಂಬುದನ್ನು ಗುಪ್ತಚಾರರು ಕಂಡು ಹಿಡಿದರೆ ನಿನ್ನ ನೌಕರಿಯ ಭವಿತವ್ಯವೇ ಹಾಳಾದೀತು."

"ಅದೆಲ್ಲ ಬಿಡು.ಈಗ ನಮ್ಮನಾಯಕರಲ್ಲೊಬ್ಬನಾದ ರಾಮಚಂದ್ರನ್ ನನ್ನದೇ ಕಚೇರಿಯಲ್ಲಿದ್ದನಂತೆ. ಇಲ್ಲಿಂದಲೇ ಅವನು ಕೆಲಸ ಬಿಟ್ಟು ಕಾರ್ಮಿಕ ಚಳವಳಿಗೆ ಧುಮುಕಿದುದಂತೆ."

"ಸಾಕಯ್ಯ! ಇಷ್ಟು ನಿನಗೆ ಜನರಲ್ಲಿ ಅನುತಾಪವಿದ್ದರೂ ಆ ಬಡ ಅಂಬುಜಮ್ಮಾಳ್‌ಳನ್ನು ಮಾತ್ರ ಲೆನಿನನು ಜಾರ್ ಪ್ರಭುಗಳನ್ನು ದ್ವೇಷಿಸುತಿದ್ದಷ್ಟು ಉಗ್ರವಾಗಿ ನೀನು ದ್ವೇಷಿಸುತಿದ್ದೀಯಲ್ಲ? ಇದೇ ಪುಸ್ತಕದ ಬದನೆಕಾಯಿ."

"ನಿನಗೆ ಪದ್ಮಿನಿಯ ಜೊತೆಗೆ ಈಗ ಅಂಬುಜಮ್ಮಾಳೂ ಗಂಟು ಬಿದ್ದಳಲ್ಲ. ನನ್ನನ್ನು ಕೆಣಕಲು?"

"ನಾನೇಕೋ ನಿನ್ನನ್ನು ಕೆಣಕುತ್ತೇನೆ? ಬಾ,ಸ್ವಲ್ಪ ಐಸ್‌ಕ್ರೀಮನ್ನಾದರೂ ತಿಂದರೆ ನಿನ್ನ ತಲೆ ಬಿಸಿ ಇಳಿಯಬಹುದೋ ನೋಡೋಣ."

ಎನ್ನುತ್ತ ನಾನವನನ್ನು ಒಂದು ಹೋಟೇಲಿಗೆ ಕರೆದುಕೊಂಡ ಹೋದ.

೪

ಏಳೆಂಟು ದಿನ ಹೀಗೆಯೇ ಕಳೆದಿತ್ತು. ನನ್ನ ಓದು ಸಾಧಾರಣ ತೃಪ್ತಿಕರವಾಗಿಯೇ ಮುಂದರಿದಿತ್ತು. ಪರೀಕ್ಷೆಗೆ ಇನ್ನೂ ಮೂರು ವಾರಗಳಷ್ಟು ಸಮಯವಿದ್ದುದರಿಂದ ಆ ರವಿವಾರ ಸಂಜೆ ಕಿಟ್ಟು ಮತ್ತು ಅವನ ಹೆಂಡತಿಯನ್ನು ನಾನು ಸ್ಟ್ರೀಟ್ ಕಾರ್ ನೇಮ್ಡ್ ಡಿಸಯರ್ ಸಿನೀಮಾಕ್ಕೆ ಕರೆದುಕೊಂಡು ಹೋದೆ. ರೋಕ್ಸಿ ಸಿನಿಮಾ ಮಂದಿರ ನನಗೆ ತೀರ ಪರಿಚಯದ ಸ್ಥಳವಾಗಿದ್ದರೂ ಕಿಟ್ಟು ಹಿಂದೆ ಅಲ್ಲಿಗೆ ಹೋದದ್ದಿಲ್ಲವಂತೆ. ಸಿನಿಮಾ ನೋಡಿದೆವು. ವಿರಾಮದ ವೇಳೆಯಲ್ಲಿ ಕಾಫಿ ಕುಡಿದೆವು. ಹಿಂದೆ ಬರುವಾಗ ಚಿತ್ರದ ಕುರಿತು ಚರ್ಚಿಸಿದೆವು. ಆದರೆ ಕಿಟ್ಟುವಿಗೆ ಅವನ ಹೆಂಡತಿಗೆ ಗೊತ್ತಾದಷ್ಟು ಅದರ ಕತೆಯೂ ಗೊತ್ತಾಗಿರಲಿಲ್ಲ. ತನ್ನ ಹೆಂಡತಿ ತನ್ನನ್ನು ದೂಷಿಸಿಯಾಳೆಂದು ಹೆದರಿಯೋ ಏನೋ ಅವನು ಹಿಂದೆ ಬಂದವನು ನನ್ನನ್ನು ಟೀಕಿಸಲಿಲ್ಲ. ಆದರೂ ತಾನು ಹಿಂದೆ ತನ್ನೂರಾದ ಚಂಗಲ್ಪೇಟೆಯಲ್ಲಿ ನೋಡಿದ್ದ ತಮಿಳು ಚಿತ್ರಗಳನ್ನು ಅದರೊಡನೆ ಹೋಲಿಸಿ ಅವುಗಳನ್ನು ಹೊಗಳದಿರಲಾಗಲಿಲ್ಲ.

"ಮಾರ್ಲನ್ ಬ್ರ್ಯಾಂಡೋ ಅಂತೆ ಮಾರ್ಲನ್ ಬ್ರ್ಯಾಂಡೋ! ನಮ್ಮ ಟಿ. ಆರ್. ಮಹಾಲಿಂಗಂ ಎಲ್ಲಿ ಇವನೆಲ್ಲಿ? ಸಾವಿತ್ರಿ ಚಿತ್ರದಲ್ಲಿ ಸುಬ್ಬುಲಕ್ಷ್ಮಿ ನಾರದ ಪಾತ್ರವನ್ನು ನಾನೆಂದೂ ಮರೆಯಲಾರೆ. ನಿನ್ನ ಈ ವಿವಿಯನ್ ಲೀಯಂತೆ ವಿವಿಯನ್ ಲೀ! ಅಫೀಮು ತಿಂದವಳಂತೆ ವರ್ತಿಸುತಿದ್ದಾಳೆ."

"ಹೌದಪ್ಪ! ಆಕೆ ಬ್ರೂಹಿ ಮುಕುಂದೇತಿ ಪದ್ಯವನ್ನು ಹಾಡದಿರುವುದು ದೊಡ್ಡ ತಪ್ಪೆಂದು ನಿನಗೆ ತೋರುತ್ತಿರಬೇಕು."

"ಇಲ್ಲ, ಇಲ್ಲ, ನಾನು ತಮಾಷೆಗೆ ಹೇಳುತ್ತಿಲ್ಲ. ನಿಜವಾಗಿಯೂ ಒಂದು ಸಿನಿಮಾದಲ್ಲಿ ಒಂದು ಹಾಡು, ಒಂದು ನಾಟ್ಯ, ಒಂದು ಕತ್ತಿಕಾಳಗ, ಒಂದು ಜಂಪ್ ಇಲ್ಲದಿದ್ದರೆ ಅದು ಸಿನಿಮಾವೆ? ನೀನು ಮಿನಲ್ ಕೋಡಿಯನ್ನು ನೋಡಬೇಕಿತ್ತು!"

"ಮಿನಲ್‌ಕೋಡಿ ಮಾತ್ರವಲ್ಲ, ತಾಂಬರಮ್ಮಿನಲ್ಲಿರುವಾಗ ಟೆಂಟ್ ಥಿಯೇಟರಿನಲ್ಲಿ ಬೇತಾಳ ಉಗಳಂ ಕೂಡಾ ನೋಡಿದ್ದೇನೆ. ಅದಿರಲಿ, ನಮ್ಮೊಳಗೆ ಸಿನಿಮಾದ ಬಗ್ಗೆ ಮೂಲ ಭೂತವಾದ ಭೇದವಿದೆ."

"ನಿನ್ನಂಥ ಇಂಗ್ಲಿಷ್ ಸಿನಿಮಾ ಆರಾಧಕರು ಬ್ರಿಟಿಷರು ಭಾರತವನ್ನು ಬಿಟ್ಟು ಇಂಗ್ಲಂಡಿಗೆ ಹೋಗುವಾಗ ಅವರೊಡನೆಯೇ ಹೋಗಬೇಕಿತ್ತು."

"ನನ್ನಂಥವರೆಲ್ಲ ದೇಶಬಿಟ್ಟು ಹೋಗಿದ್ದರೆ ನಿನ್ನಂಥವರು ಮತ್ತೆ ಆಡುವ್ರೋಮೇ ಪಾಡುವ್ರೋಮೇ ಎಂದು ರಾಗವೆಳೆಯುತ್ತ ಪುಳಿ ಮೂಟೆಯಂತೆ ಏನೇನೋ ಅಭಾಸ ಕೃತ್ಯಗಳನ್ನು ಮಾಡಲಿಕ್ಕಿತ್ತು!"

"ಸಾಕೋ! ಸುಮ್ಮನೆ ಜಂಭ ಕೊಚ್ಚಬೇಡ!"

"ನಿನ್ನ ಹೆಂಡತಿಯೂ ಹೀಗೆಂದರೆ ಅವಳ ಮೇಲೆ ಕೋಪಗೊಳ್ಳಬೇಡ, ಏಕೆಂದರೆ ನಿನಗೆ ಅಯ್ಯೆಯ್ಯೆಸ್ಸಿಗೆ ತಮಿಳು ಚಿತ್ರಗಳಿಗಿಂತ ಇಂಗ್ಲಿಷ ಚಿತ್ರಗಳು ಹೆಚ್ಚು ಪ್ರಯೋಜನವಾಗಬಹುದು. ಅದರಲ್ಲಿ ಟೆನೆಸ್ಸಿ ವಿಲಿಯಮ್ಸ್ ಎಂದರೆ ಯಾರು, ವಿವಿಯನ್ ಲೀ ಎಂದರೆ ಯಾರು, ಸ್ಟ್ರೀಟ್ ಕಾರ್ ನೇಮ್ಡ್ ಡಿಸಯರ್ ಎಂದರೆ ಏನು ಎಂಬಿತ್ಯಾದಿ ಪ್ರಶ್ನೆಗಳನ್ನು ಪರೀಕ್ಷರು ಕೇಳಬಹುದು ವಿನಃ ತ್ಯಾಗರಾಜ ಭಾಗವತ ಸುಬ್ಬುಲಕ್ಷ್ಮಿ ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ, ವಾಳ್ಗ, ರಕ್ತಕಣ್ಣೀರ್ ಮಲೈಕಳ್ಳನ್ ಮುಂತಾದವುಗಳ ಬಗ್ಗೆ ಪ್ರಶ್ನೆಗಳು ಇರಲಾರವು."

ಕಿಟ್ಟನಿಗೆ ಇದು ಸರಿಯೆಂದು ಬಹುಶಃ ತೋರಿರಬೇಕು. ಏಕೆಂದರೆ ಅವನು ಮತ್ತೆ ಆ ವಿಷಯ ಚರ್ಚೆಯನ್ನು ಮುಂದರಿಸಲಿಲ್ಲ.

ಅಂದು ರಾತ್ರಿ ತಮ್ಮಲ್ಲೇ ಊಟ ಮಾಡಬೇಕೆಂದು ಮಕ್ಕಳಂತೆ ಅವನು ಚಂಡಿ ಹಿಡಿದ. ನಾನಿದು ಅಭ್ಯಾಸಕ್ಕೆ ಬಿದ್ದೀತೆಂಬ ಭಯದಿಂದ ಈ ಸೂಚನೆಯನ್ನು ಒಪ್ಪಲು ಸಿದ್ಧನಿರಲಿಲ್ಲ. ಆದರೂ ಅವನ ಬಲವಂತವಾದ ಒತ್ತಾಯಕ್ಕೆ ನಾನು ಕೊನೆಗೆ ಮಣಿಯಬೇಕಾಯಿತು. ಇದರಿಂದ ನನಗೇನೂ ಎಂಟಾಣೆಯೋ ಹತ್ತಾಣೆಯೋ ಉಳಿಯಬಹುದಾಗಿತ್ತು.

ಆಗೇನಾದರೂ ದೊಡ್ಡ ಉಳಿತಾಯವಲ್ಲ. ಸಿನಿಮಾಕ್ಕೆ ಸ್ನಾನಾಗಲೇ ಆರೇಳು ರೂಪಾಯಿ ಖರ್ಚು ಮಾಡಿಯಾಗಿತ್ತು. ಇನ್ನೇನು ಉಳಿದ ಹಣ ಪರೀಕ್ಷೆ ಮುಗಿಯುವತನಕ ಸಾಕಾದರೆ ಸಾಕಿತ್ತು. ನನ್ನ ಖರ್ಚಿನ ಬಾಬು ಗಳೂ ಹೆಚ್ಚಾಗೆ ಇಲ್ಲದ್ದರಿಂದ ಅದು ಸಾಧ್ಯವೂ ಇತ್ತು. ಈಗ ಕಿಟ್ಟನೊಡನೆ ಊಟ-ಕಾಫಿಗಳ ಸಹವಾಸವನ್ನು ನಡೆಸಿದರೆ ಅವನಿಗೆ ನಷ್ಟವಾಗುವುದ ರಲ್ಲಿ ಸಂಶಯವಿರಲಿಲ್ಲ. ಅವನು ತನಗೆ ಸಿಗುವ ನೂರೈವತ್ತು ರೂಪಾಯಿ ಗಳಲ್ಲಿ ತನ್ನ ಜೀವನ ಸಾಗಿಸಬೇಕಿತ್ತು. ಮನೆಬಾಡಿಗೆ, ಜೀನಸು, ಹಾಲು ಇತ್ಯಾದಿ ಲೆಕ್ಕಹಾಕುವಾಗ ತಿಂಗಳ ಅಂತ್ಯಕ್ಕೆ ಅವನೊಡನೆ ಒಂದೆರಡು ರೂಪಾಯಿಗಳಾದರೂ ಉಳಿದರೆ ದೊಡ್ಡದು. ಇಂಥವನ ಸಂಸಾರದ ಮೇಲೆ ನನ್ನ ಭಾರ ಬಿದ್ದರೆ ಅದಕ್ಕೆ ಧಕ್ಕೆ ಬರುವುದು ಖಂಡಿತ. ಇಂಥ ಇಕ್ಕ ಟ್ಟನ್ನು ಉಂಟುಮಾಡದೆ, ಕಿಟ್ಟನ ಸ್ವಾಭಿಮಾನಕ್ಕೆ ಕುಂದನ್ನು ತಾರದೆ ನಾನು ದಿನಗಳೆಯಬೇಕಿತ್ತು.

ನನಗೋಸ್ಕರ ಪೂರಿಯನ್ನು ಕಿಟ್ಟುವಿನ ಹೆಂಡತಿ ತಯಾರಿಸಿದ್ದಳು. ಸಾಂಬಾರು, ರಸಂ, ಇವುಗಳಲ್ಲದೆ ಕುಂಬಳಕಾಯಿಯ ಕೂಟು, ಹಪ್ಪಳ ಇವುಗಳೂ ಇದ್ದುವು. ಕಿಟ್ಟು ಸ್ವಲ್ಪ ಕಾಲ ಮಾತಾಡಲಿಲ್ಲ. ಆ ಮೇಲೆ ಪುನಃ ಸ್ಟ್ರೀಟ್ ಕಾರ್ ಸಿನಿಮಾದ ಸುದ್ದಿ ತೆಗೆದ.

"ನೋಡು, ಇವಳಿಗೆ ಕೂಡಾ ಆ ಚಿತ್ರ ಹಿಡಿಯಿತಂತೆ. ಅದರ ಕಥೆ ಚೆನ್ನಾಗಿ ಅರ್ಥವಾಯಿತಂತೆ!" ಎಂದ

"ಆಶ್ಚರ್ಯವೇನು?"

"ಅಲ್ಲ, ನಾವು ಮೂರು ಜನರಲ್ಲಿ ನಿಮಗಿಬ್ಬರಿಗೇ ಅದು ತಿಳಿಯಿತು. ನಿಜವಾಗಿ ಹೇಳಬೇಕಾದರೆ ಇಂಟರ್ವಲ್‌ನ ಮುಂಚೆ ನನಗೆ ಸ್ವಲ್ಪ ಹೊತ್ತು ನಿದ್ದೆ ಕೂಡಾ ಬಂದಿತ್ತು!"

ಕಿಟ್ಟನ ಹೆಂಡತಿ ಶಶಿಕಲ ನಕ್ಕಳು.

"ನೀನು ಅತ್ಯಂತ ಸುಖಜೀವಿ!"

ಎಂದು ನಾನು ಗಹಗಹಿಸಿದೆ. ಕಿಟ್ಟುವೂ ನಕ್ಕ.

"ಹೀಗೆ ಕತೆಕಟ್ಟುವುದಾದರೆ ನಮ್ಮ ಮದ್ರಾಸಿನಲ್ಲಿ ಸುಮಾರು ನೂರು ಟ್ರಾಮುಗಳಿವೆ. ಎಗ್ಮೋರ್, ಪರಶುವಾಕಂ, ರೋಯಪುರಂ, ಚಿಂತಾದ್ರಿ ಪೇಟೆ, ಮೈಲಾಪುರ ಟ್ರಾಮುಗಳ ಕುರಿತು ಎ ಸ್ಟ್ರೀಟ್ ಕಾರ್ ನೇಮ್ಡ್ ಎಗ್ಮೋರ್, ಎ. ಸ್ಟ್ರೀಟ್ ಕಾರ್ ನೇಮ್ಡ್ ಚಿಂತಾದ್ರಿ ಪೇಟೆ ಎಂಬಿತ್ಯಾದಿ ಚಿತ್ರಗಳನ್ನು ತಯಾರಿಸಬಹುದಲ್ಲ? ಅದರಲ್ಲೂ ಪರಶುವಾಕಂ ಟ್ರಾಮಿನಲ್ಲಿ ವೇಪರಿಯ ಆಂಗ್ಲೋ ಇಂಡಿಯನ್ ಡಿಸೈರ್‌ಗಳು ಬೇಕಾದಷ್ಟು ಮಂದಿ ಸಿಗಬಹುದು."

"ಕಥಾವಸ್ತು ಅಷ್ಟು ಸಾಮಾನ್ಯ ವಸ್ತುವನ್ನೊಳಗೊಂಡಿರುವುದ ರಿಂದಲೇ ಅದಕ್ಕೆ ಜೀವಕಳೆ ಬಂದಿದೆ" ಎಂದೆ ನಾನು.

"ಜೀವ ಕಳೆಯೂ ಆಯಿತು, ಕಥಾವಸ್ತುವೂ ಆಯಿತು. ಆ ಹೆಂಗಸಿಗೂ ತಲೆ ಸರಿಯಿಲ್ಲ. ಅವಳನ್ನು ಮೆಚ್ಚುವವರಿಗೂ ಸ್ವಲ್ಪ ಹಾಗೆಯೋ ಏನೋ!"

ನಾವು ಮೂವರೂ ನಕ್ಕೆವು.

ನಾನು ಮೂರೇ ಪೂರಿಯಲ್ಲಿ ಊಟ ಮುಗಿಸಿದೆ. ಕಿಟ್ಟು ನಾನು ಹೊಟ್ಟೆ ತುಂಬಾ ಉಣ್ಣಲಿಲ್ಲವೆಂದು ಒತ್ತಾಯಿಸಿದ. ಅವನ ಹೆಂಡತಿಯೂ ಪೂರಿಯ ತಟ್ಟೆಯನ್ನು ನನ್ನ ಎಲೆಯ ಮುಂದೆ ಹಿಡಿದುಕೊಂಡು ಸ್ವಲ್ಪ ಕಾಲ ನಿಂತಳು. ಆದರೆ ನಾನು ಎಲೆಯ ಮೇಲೆ ಎರಡು ಅಂಗೈಗಳನ್ನೂ ಅಡ್ಡ ಹಿಡಿದುದರಿಂದ ಅವಳಿಗೆ ಬಡಿಸಲಾಗಲಿಲ್ಲ.

"ಏನೋ? ಹೋಟೇಲಿನಲ್ಲಿ ಉಂಡವನಿಗೆ ಶಶಿಕಲ ಬಡಿಸುವಾಗ ನಾಚಿಕೆಯಾಗುತ್ತದೋ ಏನೋ! ಎಷ್ಟು ಹೇಳಿದರೂ ಹೋಟೇಲಿನ ತಿಂಡಿ ಯಷ್ಟು ಮನೆಯ ತಿಂಡಿ ರುಚಿಯಾದೀತೇ? "

"ಏಯ್! ಸುಮ್ಮನೆ ನಿನ್ನ ಮನೆಯ ಅಡುಗೆಯನ್ನು ದೂರಬೇಡ. ಬಹುಶಃ ನಿನಗೆ ಇದೇ ಅಭ್ಯಾಸವೆಂದು ತೋರುತ್ತದೆ. ತಿಂಡಿ, ಪಲ್ಯ, ಎಲ್ಲ ಎಷ್ಟು ರುಚಿಯಾಗಿವೆ! ಹೋಟೇಲಿನಲ್ಲಿ ಯಾರು ಇಷ್ಟು ರುಚಿಕರವಾಗಿ ಅನ್ನ ಪಲ್ಯ ತಯಾರಿಸುತ್ತಾರೆ? "ಎಂದು ಶಶಿಕಲಳನ್ನು ನೋಡಿದೆ. ಆಕೆಗೆ ನನ್ನ ಪ್ರಶಂಸೆಯ ಮಾತುಗಳನ್ನು ಕೇಳಿ ತುಸು ಲಜ್ಜೆಯಾಗಿರ ಬೇಕೆಂಬುದು ಸ್ಪಷ್ಟವಾಗಿತ್ತು. ಆಕೆಯ ಕೆನ್ನೆ ಕೆಂಪಾಗಿತ್ತು. ಮುಖವನ್ನು ಸೀರೆಯ ಸೆರಗಿನಲ್ಲಿ ಅಡಗಿಸಲು ಯತ್ನಿಸುತ್ತಿದ್ದಳು.

"ಹೊಸ ಕೈ ಬಾಯಿಗೆ ಒಳ್ಳೆಯದಂತೆ. ಹಳೆ ಕೈ ಹೊಟ್ಟೆಗೆ ಒಳ್ಳೆಯದಂತೆ. ನೀನು ಈ ಗಾದೆಯನ್ನು ಕೇಳಿದ್ದೀಯಾ? "

ಕಿಟ್ಟು ಹೀಗೆನ್ನುತ್ತ ನಕ್ಕಾಗ ಶಶಿಕಲ ನಗು ಮತ್ತು ನಾಚಿಕೆ ಗಳನ್ನು ತಡೆಯಲಾರದ ಬಾಗಿಲಿನ ಹಿಂದುಗಡೆ ಹೋಗಿ ನಿಂತಳು. ನಾನವ ಳನ್ನು ಪುನಃ ನೋಡಿದೆ.

"ನಿನಗೆ ಹೊಟ್ಟೆ ತುಂಬಿದಂತೆ ತಲೆಯಿಂದ ಅನೇಕ ವಿಚಾರಗಳು ಹೊರಬರುವಂತೆ ಕಾಣುತ್ತದೆ. ಬಹುಶಃ ಶಶಿಕಲಳ ಕೈಗುಣ ಅದಾಗಿರ ಬೇಕು. ಅವಳ ಕೈ ನಿನ್ನ ಹೊಟ್ಟೆಗೂ ತಲೆಗೂ ಒಳ್ಳೆಯದೆಂದು ಈಗ ಸ್ಪಷ್ಟವಾಗುತ್ತಿದೆ."

"ಒಳ್ಳೆ ಮಾತು ಆಡಿದಿ! ನೀನಿನ್ನು ವಕೀಲಿ ಆರಂಭಿಸಿದ ಮೇಲೆ ಹೆಂಗಸರ ಪರವಾಗಿಯೇ ವಕಾಲತು ನಡೆಸಲು ಯೋಗ್ಯ. ಏಳನೇ ಹೆನ್ರಿಯೋ ಎಂಟನೇ ಹೆನ್ರಿಯೋ ಡಿಫೆಂಡರ್ ಆಫ್ ಫೈತ್ ಎಂಬ ಬಿರು ದನ್ನು ಗಳಿಸಿದಂತೆ ನೀನೂ ಡಿಫೆಂಡರ್ ಆಫ್ ವಿಮೆನ್ ಎಂಬ ಬಿರುದನ್ನು ಸುಲಭವಾಗಿ ಗಳಿಸಬಲ್ಲೆ!"

"ಕೊಡುವವ ನೀನಾಗಿದ್ದರೆ ನನಗೆ ಅದು ದೊರೆಯಬಹುದು. ಇಲ್ಲ ವಾದರೆ ಅದಕ್ಕೂ ಹಿಂದೆ ಖಾನ್ ಬಹದೂರ್, ರಾವ್ ಬಹದೂರ್ ಮುಂತಾದವುಗಳಿಗೆ ವಸೀಲಿಬಾಜಿ ಮಾಡಿದಂತೆ ನಾನು ವಸೀಲಿಬಾಜಿ ಮಾಡ ಬೇಕಾದೀತು, ಎಷ್ಟಾದರೂ ಬಿರುದು ಕೊಡಬೇಕಾದವರು ಗಂಡಸರಲ್ಲ?"

"ಒಹ್! ನನ್ನ ವಸೀಲಿ ಬಾಜಿ ಏಕೆ? ನೀನು ಕೆಲವು ನಾಯಕರ ಕುರಿತಾದ ಲೇಖನಗಳನ್ನೋ ಆತ್ಮಚರಿತ್ರೆಗಳನ್ನೋ ಬರೆದು ಬಿಟ್ಟರೆ ಸಾಕು! ನಿನಗೆ ಬಿರುದಿನೊಡನೆ ಪ್ರಶಸ್ತಿ ಧನವೂ ದೊರೆಯಬಹುದು. ನಾ ಹೇಳಬೇಕಾದರೆ ನಿನ್ನಂಥ ಸ್ತ್ರೀ ಪ್ರಶಂಸಕರಿಗೆ, ಸ್ತ್ರೀ ಪಕ್ಷಪಾತಿಗಳಿಗೆ ಪದ್ಮಸ್ತ್ರೀ ಎಂಬ ಬಿರುದನ್ನು ಕೊಡುವುದೊಳ್ಳೆಯದು."

ನಾವು ಮೂವರೂ ಗೊಳ್ಳನೆ ನಕ್ಕೆವು.

"ಸಾಕಯ್ಯ! ನನಗೆ ಓದಲಿಕ್ಕಿದೆ. ನಿನಗೆ ಮುಂಜಾನೆ ಬೇಗನೆ ಏಳಲಿಕ್ಕಿದೆ. ಏಳೋಣ. ಶಶಿಕಲಾಳೂ ಊಟ ಮಾಡಲಿ."

ಎನ್ನುತ್ತ ನಾನು ಎದ್ದೆ. ಕಿಟ್ಟುವೂ ಎದ್ದ. ಇಬ್ಬರೂ ಕೈ ತೊಳೆದೆವು.

"ಸರಿ, ಗುಡ್ ನೈಟ್" ಎಂದನವ.

ನಾನು ಮಾಳಿಗೆಯ ಮೆಟ್ಟಲೇರಿದೆ. ಆಗ ಥಕ್ಕನೆ ಮೇಲಿನಿಂದ ಮಲೆಯಾಳಿಗಳ ಪೈಕಿ ಒಬ್ಬಳು ಮೆಟ್ಟಲಿನ ಮಧ್ಯದಲ್ಲಿ ಸಂಧಿಸಿದಳು. ಇಬ್ಬರಿಗೆ ಅಲ್ಲಿ ಹಾಯ್ದು ಹೋಗಲು ಸಾಕಷ್ಟು ಜಾಗವಿಲ್ಲದಿದ್ದರೂ ನಾನು ಗೋಡೆಗೆ ಒರಗಿ ನಿಂತು ಅವಳಿಗೆ ದಾರಿ ಮಾಡಿಕೊಟ್ಟೆ. ಆದರೂ ಅವಳ ತೋಳು ನನ್ನ ಹೆಗಲನ್ನು ಸ್ಪರ್ಶಿಸದಿರಲಿಲ್ಲ.

"ಎಕ್ಸ್‌ಕ್ಯೂಸ್ ಮಿ. ಸೋರಿ" ಎನ್ನುತ್ತ ಆಕೆ ಕೆಳಗಿಳಿದಳು.

ನಾನು ಕೋಣೆಗೆ ಹೋಗಿ ಕದ ಹಾಕಿಕೊಂಡೆ. ಅಂದು ರಾತ್ರಿ ಎರಡು ಗಂಟೆಯ ವರೆಗಾದರೂ ಓದಬೇಕೆಂದು ನಾನು ಮಾಡಿಕೊಂಡ ಪ್ರತಿಜ್ಞೆ ಮಾತ್ರ ಫಲಿಸಲಿಲ್ಲ. ಕೇವಲ ಒಂಭತ್ತುವರೆ ಕಳೆಯುವಾಗಲೇ ನನಗೆ ನಿದ್ದೆ ಬಂದಿರಬೇಕು.

ಬಾಗಿಲನ್ನು ಹೊರಗಿನಿಂದ ಬಡೆಯುವ ಸದ್ದು ಕೇಳಿ ತಾನೇ ನನಗೆ ಎಚ್ಚರವಾಯಿತು. ನಾನು ದೀಪ ನಂದಿಸದೆ ಪುಸ್ತಕವನ್ನು ಹಿಡಿಸಿ ಕುರ್ಚಿ ಯಲ್ಲೇ ನಿದ್ರಿಸಿದ್ದೆ. ಗಡಿಯಾರ ಎರಡು ಗಂಟೆ ತೋರಿಸುತ್ತಿತ್ತು. ನಾನು ಹೋಗಿ ಬಾಗಿಲನ್ನು ತೆರೆದೆ.

"ಒಹ್! ಕ್ಷಮಿಸಿ! ಎಚ್ಚರವಿದ್ದೀರೋ! ದೀಪ ಹಾಕಿಕೊಂಡೇ ನಿದ್ರಿಸಿದ್ದಿರೋ ಎಂದು ನಾನು ಬಾಗಿಲು ಬಡಿದೆ." ಎಂದು ಕುರುಪ್ ನಗುತ್ತ ನುಡಿದ. ನನಗೆ ಅವನ ಮಾತನ್ನು ಕೇಳಿ ಸ್ವಲ್ಪ ಕೋಪ ಬಂತು. ನಾನು ದೀಪ ಹಚ್ಚಿ ಮಲಗಿದರೇನು, ದೀಪ ಹಚ್ಚದೆ ಮಲಗಿದರೇನು ಎಂದು ನಾನು ಅವನನ್ನು ಗದರಿಸುವುದರಲ್ಲಿದ್ದೆ. ಆದರೂ ಅವನು ಸದುದ್ದೇಶದಿಂದಲೇ ಬಾಗಿಲು ಬಡಿದಿರಬಹುದೆಂದು ಭಾವಿಸಿ ಕೋಪ ವನ್ನು ನುಂಗಿಕೊಂಡೆ.

"ಬೆಂಕಿ ಪೆಟ್ಟಿಗೆ" ಎಂದು ಅವನು ಮುಂದರಿದ.

ಉಸಿರೆತ್ತದೆ ಬೆಂಕಿ ಪೆಟ್ಟಿಗೆಯನ್ನಿತ್ತೆ.

ಅವನು ಸಿಗರೇಟು ಉರಿಸಿ, ಪೆಟ್ಟಿಗೆಯನ್ನು ಹಿಂದೆ ಕೊಡಲು ಕೈ ಚಾಚಿದ.

"ಬೇಕಾದರೆ ಇಟ್ಟುಕೊಳ್ಳಿ. ಮುಂಜಾನೆ ಕೊಟ್ಟರೆ ಸಾಕು" ಎಂದೆ.

"ಥ್ಯಾಂಕ್ಸ್" ಎಂದನವ. ನಾನು ಬಾಗಿಲು ಮುಚ್ಚುವುದರಲ್ಲಿದ್ದೆ. ಆಗ ಪುನಃ ಹೇಳಿದ: "ನೋಡಿ, ನನಗೆ ನಿದ್ದೆಯೇ ಬರೋದಿಲ್ಲ. ನಾಳೆ

ಮುಂಜಾನೆ ಹತ್ತು ಗಂಟೆಗೆ ಕೋರ್ಪೋರೇಶನಿನವರು ಇಂಟ-ರ್‌ವ್ಯೂಗೆ ಕರೆದಿದ್ದಾರೆ. ಮೊನ್ನೆ ಅಲ್ಲಿಂದ ಕರೆ ಬಂದಂದಿನಿಂದ ನನಗೆ ನಿದ್ದೆಯೇ ಹತ್ತೋದಿಲ್ಲ."

"ಹೂಂ" ಎಂದು ನಾನು ಕಣ್ಣು ತಿಕ್ಕಿಕೊಳ್ಳುತ್ತ ನಿರುತ್ಸಾಹದಿಂದ ಹೂಂಗುಟ್ಟಿದೆ.

"ನೀವು ನಿದ್ದೆಯ ಮಬ್ಬಿನಲ್ಲಿದ್ದೀರಿ. ಕ್ಷಮಿಸಿ. ಆದರೆ ನಿಜವಾಗಿ ನಿಮ್ಮೊಡನೆ ಹೇಳಬೇಕಾದರೆ, ನನಗೆ ಆ ಕೆಲಸ ಸಿಗಲಾರದು ಎಂಬುದು ಖಚಿತವಾಗಿದೆ. ಒಬ್ಬ ಪಿಳ್ಳೆ ಎಂಬವ ಮೇಯರರನ್ನೇ ಹಿಡಿದು ಅವರಿಂದ ಮಾತು ಪಡೆದಿದ್ದಾನೆಂ-ಬುದು ಇಂದು ನನಗೆ ಗೊತ್ತಾಯಿತು. ಬೇರೆ ಎಲ್ಲಿಯೂ ನನಗೆ ಕೆಲಸ ಸಿಗುವ ಸಂಭವ ಸದ್ಯ ಇಲ್ಲ. ಇಂದು ಬರೇ ಒಂದು ಕಪ್ ಚಹ ಕುಡಿದು ಒಂದಾಣೆಯ ನೆಲಗಡಲೆ ತಿಂದಿದ್ದೇನೆ. ಆ ಬೀಡಾ ಅಂಗಡಿಯವನೇನೋ ಒಂದು ಪ್ಯಾಕೇಟು ಚಾರ್‌ಮಿನಾರ್ ಕೊಟ್ಟ. ಇಲ್ಲಿ ನನ್ನ ಕಸ್ಸಿನ್‌ಗಳಿಗೂ ನಾನಿದ್ದುದರಿಂದ ತುಂಬಾ ತೊಂದರೆಯಾಗಿದೆ.ಆ ಅಂಬುಜಮ್ಮಾಳ್ ತನ್ನ ದುಷ್ಟತನವನ್ನೆಲ್ಲ ಅವರ ಮೇಲೆ ತೋರಿಸುತ್ತಿದ್ದಾಳೆ. ಇಂದು ಒಬ್ಬಳು ಸ್ನಾನಕ್ಕೆಂದು ಬಚ್ಚಲು ಮನೆಗೆ ಹೋಗಿ ನೀರೆರೆದುಕೊಂಡು ಸಾಬೂನು ಹಚ್ಚಿಕೊಳ್ಳುವಾಗ ಹೊರಗಿನಿಂದಲೇ ನಲ್ಲಿಯನ್ನು ಆಕೆ ನಿಲ್ಲಿಸಿಬಿಟ್ಟಳಂತೆ! ಪಾಪ ನನ್ನ ಕಸಿನ್ ಮಾಧವಿ ಹಾಗೆಯೇ ಮೈಯನ್ನುಜ್ಜಿಕೊಂಡು ಬರಬೇಕಾಯಿತು! ನಮಗೆ ಮಲೆಯಾಳಿಗಳಿಗೆ ದಿನಕ್ಕೆರಡು ಬಾರಿಯಾದರೂ ಸ್ನಾನ ಮಾಡದೆ ಇರಲು ಸಾಧ್ಯವಿಲ್ಲ. ನಲ್ಲಿಗೆ ಕಾದು ಆಕೆ ಒದ್ದೆ ವಸ್ತ್ರದಲ್ಲೇ ಒಳಗೆ ಸ್ವಲ್ಪ ಕಾಲ ಇದ್ದುದರಿಂದ ಥಂಡಿಯಾಗಿಯೋ ಏನೋ ಅವಳಿಗೆ ಪಾಪ ಜ್ವರ ಬರಹತ್ತಿದೆ. ಅಂಬುಜಮ್ಮಾಳಿಗೆ ತಿಂಗಳಿಗೆ ಹತ್ತು ರೂಪಾಯಿ ಹೆಚ್ಚಿಗೆ ಬಾಡಿಗೆ ಕೊಡಲು ನಿರಾಕರಿಸಿದುದರ ಫಲ ಇದು. ಅದು ಆಕೆ ನನ್ನನ್ನು ಮುಂದಿಟ್ಟುಕೊಂಡು ಬಾಡಿಗೆ ಹೆಚ್ಚು ಕೇಳುತ್ತಾಳಂತೆ! ದುಷ್ಟ ಹೆಂಗಸು!"



"ಅಂಬುಜಮ್ಮ ನನ್ನ ಜೇಬಿಗೆ ಇಪ್ಪತ್ತೈದು ರೂಪಾಯಿ ಹಾಕಿ ನನ್ನನ್ನು ಮಂಚದ ಬಳಿಗೆ ಆಕೆ ಎಳೆದಳು." ಕುರುಪ್ ಹೇಳಿದ.

"ಸುಮ್ಮನೆ ಆಕೆಯನ್ನು ದೂಷಿಸುವುದೇಕೆ? ಬಾಡಿಗೆ ಹೆಚ್ಚು ಕೇಳಿದರೆ ಕೋರ್ಟ್ ಇಲ್ಲವೆ?"

"ಕೋರ್ಟಗೆ ಹೋದರೆ ಹತ್ತು ಕಾಸಿನ ಬೆಕ್ಕಿಗೆ ಐವತ್ತು ಕಾಸಿನ ಹಾಲೆಂದಂತೆ, ಹತ್ತು ರೂಪಾಯಿಗೆ ನೂರು ರೂಪಾಯಿ ಖರ್ಚು ಮಾಡಬೇಕು! ಅವರಿಬ್ಬರಿಗೆ ತಿಂಗಳಿಗೆ ಒಟ್ಟು ಇನ್ನೂರೈದು ರೂಪಾಯಿ ಸಿಗುತ್ತದೆ. ತಿಂಗಳಾಂತ್ಯದಲ್ಲಿ ಅವರು ದಿವಾಳಿ. ಮತ್ತೆಲ್ಲಿ ಅವರಿಗೆ ಕೋರ್ಟು? ನಿಜ ಹೇಳ್ತೇನೆ, ಆ ಮುದುಕಿಗೆ ತರುಣರ ಮೇಲೆ ಕಣ್ಣಿದೆ. ನನ್ನೊಡನೆ ಎಷ್ಟು ಚಕ್ಕಂದ ಮಾತಾಡುತ್ತಿದ್ದಳು ಗೊತ್ತೆ? ಒಂದೆರಡು ಸಲ ನನ್ನನ್ನು ಅಡುಗೆ ಕೋಣೆಗೆ ಕೊಂಡು ಹೋಗಿ ಚಹಾ ಕೂಡಾ ಕೊಟ್ಟಳು. ಒಮ್ಮೆ ಒಳಗೆ ಕರೆದು ಏನೋ ಎಲ್ಲ ಚೇಷ್ಟೆ ಮಾಡಿದಳು. ಆದರೆ ನಾನು ಅವಳಿಗೆ ಏನೂ ಅವಕಾಶವೀಯಲಿಲ್ಲ. ಅವಳ ಪೋಲೀಸ್ ಗೆಳೆಯನೂ ಮುದುಕನಾಗುತ್ತಿದ್ದಾನೆ."

ನನಗೆ ಫಕ್ಕನೆ ಸ್ಟ್ರೀಟ್ ಕಾರ್ ಸಿನಿಮಾದ ನೆನಪಾಯಿತು. ಅಂಬುಜಮ್ಮಾಳ್ ನನ್ನೊಡನೆಯೂ ಬಹಳ ವಿನಯದಿಂದ ಮಾತಾಡುತ್ತಿದ್ದುದೂ ಗಮನಕ್ಕೆ ಬಂತು.

"ನೋಡಿ, ನಿಮ್ಮೊಡನೆಯೂ ಮೊನ್ನೆ ಏನೋ ನೆವಹೂಡಿ ಮಾತಾಡುತ್ತಿದ್ದುದನ್ನು ಕಂಡೆ. ಸ್ವಲ್ಪ ಜಾಗ್ರತೆ. ಹೆಂಗಸರನ್ನೇ ನಂಬಬಾರದು. ಅದರಲ್ಲೂ ನಡುವಯಸ್ಸಿನ ಹೆಂಗಸರು ಅಪಾಯಕಾರಿಗಳು. ಏಕೆಂದರೆ ಅವರಿಗೆ ತಾವು ತಮ್ಮ ಆಕರ್ಷಣೆಗಳನ್ನೆಲ್ಲ ಕಳೆದುಕೊಂಡಿದ್ದೇವೆಂಬ ಪ್ರಜ್ಞೆ ಸದಾ ಪೀಡಿಸುತ್ತಿದೆ. ತಮ್ಮ ಯೌವ್ವನದ ನೆನಪು ಮರುಕಳಿಸುತ್ತದೆ."

"ಹೂಂ" ಎಂದು ನಿರುತ್ಸಾಹದಲ್ಲೇ ಹೇಳಿದೆ.

"ನಿಜ ಹೇಳ್ತೇನೆ. ನೀವು ಮಾತ್ರ ಯಾರೊಡನೆಯೂ ಹೇಳಿದರೆ ನನ್ನಾಣೆ. ಮೊನ್ನೆ ನನ್ನನ್ನು ಕೋಣೆಗೆ ಕರೆದು ಇಪ್ಪತ್ತೈದು ರೂಪಾಯಿಗಳನ್ನು ನನ್ನ ಜೇಬಿಗೆ ಹಾಕಿ ನನ್ನನ್ನು ಮಂಚದ ಬಳಿಗೆ ಆಕೆ ಎಳೆದಳು! ನಿಮ್ಮ ಸ್ನೇಹಿತರ—ಹೆಂಡತಿ ಪಾಪ ಒಳಗೆ ಕಿಟಕಿಯಿಂದ ಕೆಮ್ಮಿದರು. ಹಾಗಾಗಿ ನಾನು ಹೇಗೋ ಪಾರಾದೆ. ಅದರ ಮುಂಚೆ ಆಕೆ ನನ್ನನ್ನು ಬೆದರಿಸಿಯೂ ನೋಡಿದಳು. ತಾನೆಂದಂತೆ ಕೇಳದಿದ್ದರೆ ಒಮ್ಮೆಲೇ ಬೊಬ್ಬಿಡುವೆನೆಂದು ಪಿಸುಗುಟ್ಟಿದಳು. ಆದರೆ, ಕೆಮ್ಮಿನ ಶಬ್ದ ಕೇಳಿದೊಡನೆ ಆಕೆ ಗಾಬರಿಯಿಂದ ಬಿಚ್ಚಿಸಿದ್ದ ವಸ್ತ್ರವನ್ನು ಪುನಃ ಸುತ್ತಿಕೊಂಡಳು. ನಾನು ಅಷ್ಟರಲ್ಲಿ ಬಾಗಿಲು ತೆರೆದು ದೂರ ನಡೆದೆ. ಅಂದಿನಿಂದ ಆಕೆ ನನ್ನ ಕಸಿನ್‌ಗಳಿಗೆ ಕೊಡುವ ಪೀಡೆ ಹತ್ತು ಪಾಲು ಹೆಚ್ಚಾಗಿದೆ."

"ನಿನ್ನ ಕತೆ ನಂಬುವುದು ಕಷ್ಟ" ಎಂದೆ ನಾನು ಕೊನೆಗೆ, ಬೇರೇನೂ ಹೇಳಲಾರದೆ.

"ಛೇ! ನಾನೇನು ಸುಳ್ಳಾಡುತ್ತಿರುವೆನೆ? ಹಾಗೆ ಹೇಳಬೇಕಾದರೆ ನಾನೂ ಮದುವೆಯಾಗದವ. ಹೆಂಗಸರ ಹುಚ್ಚು ಉತ್ಕಟವಾಗಿರುವವ. ಅಂಬುಜಮ್ಮಾಳಿಗೆ ವಯಸ್ಸಾಗಿದ್ದರೂ ಸಾಧಾರಣ ರೂಪವಿದೆ. ಅವಳ ಮೈಕಟ್ಟು ಇಳಿದಿಲ್ಲ. ಅವಳು ಕೋಣೆಯಲ್ಲಿ ವಿವಸ್ತ್ರಳಾದಾಗ ನಿಜವಾಗಿಯೂ ನನ್ನ ಮನಸ್ಸಿನಲ್ಲಿ ಅಲ್ಲೋಲಕಲ್ಲೋಲವುಂಟಾಗಿತ್ತು. ಇದನ್ನೇಕೆ ಹೇಳುತಿದ್ದೇನೆಂದರೆ ನಾನು ಬೈರಾಗಿ ಎಂದು ನೀವು ತಿಳಿದುಕೊಳ್ಳಬಾರದೆಂದು. ನನ್ನ ವಯಸ್ಸಿನವ ಅಂಥ ತ್ಯಾಗ ಮಾಡಿದೆ, ಇಲ್ಲವೇ ಸಂಯಮ ಮಾಡಿದೆನೆನ್ನುವುದು ಪ್ರಕೃತಿ ವಿರುದ್ಧ ಹಾಗೂ ಆತ್ಮವಂಚನೆ ಎಂಬುದು ನನಗೂ ಗೊತ್ತಿದೆ. ಆದರೆ ನಮ್ಮ ಅಲ್ಲಿಯ ಬೀಡಾ ಬೀಡಿ ಅಂಗಡಿಯ ನಾಯರ್ ಇದ್ದಾನಲ್ಲ? ಅವನು ನಾನು ಬಂದ ಸಮಯದಲ್ಲೇ ನನಗೆ ಎಚ್ಚರಿಕೆ ನೀಡಿದ್ದ: ಅಂಬುಜಮ್ಮಾಳ್‌ನನ್ನು ಮುಟ್ಟಿದರೆ ಆಸ್ಪತ್ರೆವಾಸ ಖಂಡಿತವೆಂದು. ಆ ಭಯವೇ ನನ್ನನ್ನು ಅಂದು ಅವಳಿಂದ ರಕ್ಷಿಸಿತೆನ್ನಬಹುದು. ನಾಯರ್‌ನಂತೂ ಸ್ವತಃ ಅವಳ ಬಲೆಗೆ ಬಿದ್ದು ನರಳಿದವನಂತೆ."

"ನಿಮಗೆ ಮಲೆಯಾಳಿಗಳಿಗೆ ಇದೇ ಕೆಲಸ. ಬಾಯಿಗೆ ಬಂದುದನ್ನು ಹೇಳುವುದು. ಪಾಪ, ಆಕೆ ವಿಧವೆ ವಯಸ್ಸಾದವಳು!" ಎಂದೆ ನಾನು ಬೇಸರದ ಧ್ವನಿಯಲ್ಲಿ.

"ನಾ ಹೇಳಿದೆನಲ್ಲ, ನೀವು ನಂಬಲಾರಿರಿ ಎಂದು? ನೋಡಿ ಈಗ ಹೊಸದೊಂದು ಉಡುಪಿ ಹೋಟೇಲು ತೆಗೆದಿರುವರಲ್ಲ? ಅವರನ್ನು ಈಕೆ ತನ್ನ ಬಲೆಗೆ ಹಾಕಿಕೊಂಡು ಅವರಿಗೆ ಒಂದು ಸಾವಿರ ರೂಪಾಯಿ ಸಾಲ ಕೊಟ್ಟಳಂತೆ. ಅಂದಿನಿಂದ ಅವರು ಪಾಪ ದಿನಾ ನಾಯರ್ ಅಂಗಡಿಯ ಎದುರಿನಲ್ಲಿರುವ ನಾಯಿಡು ಡಾಕ್ಟರಲ್ಲಿ ಬಂದು ಇಂಜಕ್ಷನ್ ಚುಚ್ಚಿಸಿಕೊಳ್ಳುತಿದ್ದಾರೆ!"

"ನಿನಗೆ ಹೇಗೆ ಗೊತ್ತು."

"ನಾಯರೇ ಹೇಳಿದ. ಇವಳನ್ನವರು ಒಂದು ದಿನ ಮಹಾಬಲಿಪುರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಒಂದು ದಿನ ತಂಗಿ ಮರುದಿನ ಬಂದರಂತೆ. ಅದರ ಮರುದಿನದಿಂದ ಆರಂಭವಾದ ಇಂಜೆಕ್ಷನ್ ಚಿಕಿತ್ಸೆ ಇನ್ನೂ ನಡೆಯುತ್ತಲೇ ಇದೆ. ಇಷ್ಟೆಲ್ಲ ಗೊತ್ತಿಲ್ಲದಿದ್ದರೆ ನಾನೂ ಆಕೆಯಿಂದ ನೂರೋ ಇನ್ನೂರೋ ರೂಪಾಯಿಗಳನ್ನು ಹೊಡೆಯಲು ಹಿಂಜರಿಯುತಿದ್ದಿಲ್ಲ, ತಿಳಿಯಿತೆ? ಅದಿರಲಿ... ನಿಮ್ಮನ್ನು ಕರೆಯುವ ಮುಂಚೆ ಈ ರಾತ್ರಿ ಆತ್ಮಹತ್ಯ ಮಾಡಿಕೊಳ್ಳಬೇಕೆಂದು ನಿರ್ಧರಿಸಿದ್ದೆ. ಆದರೆ ಈಗ ನಿಮ್ಮೊಡನೆ ಇಷ್ಟು ಮಾತಾಡಿದುದರಿಂದ ಆ ವಿಷಮಸ್ಥಿತಿ ಮಾಯವಾದಂತೆ ತೋರುತ್ತದೆ. ಆತ್ಮಹತ್ಯೆ ಮಾಡಿಕೊಂಡರೂ ಕೇವಲ ಮೆಡಿಕಲ್ ಕಾಲೇಜಿಗೆ ಪ್ರಯೋಜನವಾದೀತು, ಶವ ಕೊಯ್ಯುವ ಅಭ್ಯಾಸಕ್ಕೆ."

ನನ್ನ ಮೈ ಝುಮ್ಮೆಂದಿತು: ಕುರುಪ್ ಅಷ್ಟೊಂದು ತಣ್ಣಗಾಗಿ, ಆವೇಶರಹಿತನಾಗಿ ಈ ಮಾತನ್ನು ಹೇಳಿದುದೇ ನನಗೆ ಅಸಾಧಾರಣವಾಗಿ ಕಂಡಿತು. ಒಂದು ಜೀವ, ಜೀವನವೆಂದರೆ ಎಷ್ಟು ಹಗುರಾಗಿ ಇವನಿಗೆ ಕಾಣುತ್ತದೆ. ಆತ್ಮಹತ್ಯೆ, ಶವ ಸಂಸ್ಕಾರಗಳ ಬಗ್ಗೆ ಎಷ್ಟು ಲಘುವಾಗಿ ಮಾತಾಡುತ್ತಾನೆ! ನಾನು ಎಂಥೆಂಥ ಸನ್ಯಾಸಿಗಳನ್ನೋ, ವಿರಾಗಿಗಳನ್ನೋ ಕಂಡಿದ್ದೆ; ಲೋಕವೆಂದರೆ ಮಾಯೆ, ಹೆಣ್ಣೆಂದರೆ ಮಾಯೆ, ಮಣ್ಣೆಂದರೆ ಮಾಯೆ ಎಂದು ತಾಸುಗಟ್ಟಲೆ ಉಪನ್ಯಾಸ ಕೊಟ್ಟು, ಮತ್ತೆ ಒಂದು ಚಿಕ್ಕ ಇರುವೆ ಕಡಿದರೆ ಜೀವ ಭಯದಿಂದ ಆಸ್ಪತ್ರೆಗೆ ಧಾವಿಸುವವರು ಅವರಲ್ಲಿ ವಿರಳರಿರಲಿಲ್ಲ. ಹೀಗಿರುವಾಗ ಜೀವನ್ಮುಕ್ತಿಯ ಅಂಚಿನಲ್ಲಿ ನಿಂತಿರುವ ಕುರುಪ್ ಮಹಾತ್ಯಾಗಿಯಾಗಿ ನನಗೆ ತೋರಿದ. ತನ್ನ ವಿದ್ಯೆ, ತನ್ನ ಯೌವನ, ತನ್ನ ಭವಿತವ್ಯಗಳನ್ನೆಲ್ಲ ನಶಿಸಲು ಸಿದ್ಧನಾದ ಲಯಕಾರಕ ಪ್ರವೃತ್ತಿ ಅವನದಾಗಿತ್ತು.

"ಇನ್ನಾದರೂ ನೀನು ಆತ್ಮಹತ್ಯೆ ಮಾಡಿಕೊಳ್ಳಬಯಸಿದರೆ?"

"ಇಲ್ಲ, ಸದ್ಯಕ್ಕೆ ಇಲ್ಲವೆಂದು ತೋರುತ್ತದೆ. ಏನೋ ಅಪರೂಪವಾಗಿ ನನಗ ಆ ಭಾವನೆ ಉಂಟಾಗುತ್ತದೆ ಅಷ್ಟೆ. ಚಿಕ್ಕವನಿದ್ದಾಗ ಒಮ್ಮೆ ನಾಪಾಸಾಗಿದ್ದೆ. ಆ ದಿನ ಬಾವಿಗೆ ಹಾರಿಯೇ ಬಿಡೋದೆಂದು ಬಾವಿಯ ಬಳಿ ಹೋಗಿ ಒಂದು ತಾಸು ನಿಂತಿದ್ದೆ. ಅಷ್ಟರಲ್ಲಿ ನನ್ನ ಅಮ್ಮ ಊಟಕ್ಕೆ ಕರೆದಳು. ಕೂಡಲೇ ಆ ಪ್ರವೃತ್ತಿ ಮಾಯವಾಯಿತು. ಮತ್ತೊಮ್ಮೆ ಮ್ಯಾಟ್ರಿಕ್ಯುಲೇಶನ್ ತರಗತಿಯಲ್ಲಿದ್ದಾಗ ಒಬ್ಬ ಸಹಪಾಠಿಣಿಯನ್ನು ಪ್ರೀತಿಸಿದೆ. ಅವಳೂ ಪ್ರತಿಯಾಗಿ ನನ್ನನ್ನು ಪ್ರೀತಿಸುತಿದ್ದಾಳೆಂದು ನನಗೆ ಅನ್ನಿಸಿತು. ಒಂದು ಸಂಜೆ ಆಕೆ ನಮ್ಮ ಮನೆಯಮುಂದೆ ಹಾದು ಹೋಗುತಿದ್ದಾಗ ನಾನವಳ ಹಿಂದೆಯೇ ಹೋದೆ. ಮುಂದೆ ಇದ್ದ ನಿರ್ಜನ ಪ್ರದೇಶದಲ್ಲಿ ಅವಳನ್ನು ನಾನು ತಬ್ಬಿ ಹಿಡಿದೆ. ಅವಳು ಆವಾಕ್ಕಾಗಿ ಬೊಬ್ಬೆ ಹಾಕಲು ಅವಳ ಮನೆಯವರು ಓಡಿ ಬಂದರು. ನಾನು ಓಡಿದರೂ ನನ್ನನ್ನು ಓಡಿಸಿಕೊಂಡು ಬಂದು ಹಿಡಿದು ನನಗೆರಡು ಥಳಿಸಿದರು. ಆ ರಾತ್ರಿ ರೈಲು ದಾರಿಯಲ್ಲಿ ಹೋಗಿ ಮಲಗಿದೆ. ಆದರೆ ವಿಸ್ಮಯವೆಂದರೆ ಅಂದು ರೈಲು ಬಂಡಿಯೇ ಬರಲಿಲ್ಲ! ಮರುದಿನ ಕೇಳುವಾಗ ಎಲ್ಲೋ ಒಂದೆಡೆ ಗಾಡಿ ಹಳಿ ತಪ್ಪಿ ಬಿದ್ದಿದುದರಿಂದ ರೈಲು ಸಂಚಾರವೇ ನಿಂತು ಹೋಗಿತ್ತು ಎಂದು ತಿಳಿಯಿತು. ಆದರೆ ಅಷ್ಟರಲ್ಲೇ ನನ್ನ ಆತ್ಮಹತ್ಯೆಯ ಗುಂಗು ಹಾರಿ ಹೋಗಿತ್ತು. ಇಂದಿನದು ಮೂರನೆಯ ಬಾರಿ."

"ನೋಡು ರಾಬರ್ಟ್ ಕ್ಲೈವ್ ಕೂಡಾ ನಿನ್ನಂತೆ ಬಾಲ್ಯದಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ್ದನಂತೆ. ಮತ್ತೆ ನಮ್ಮ ದೇಶವನ್ನೇ ಗೆದ್ದ. ನೀನೂ ಬಹುಶಃ ಅವನ ಹಾಗೆಯೇ ಮಹಾನ್ ಕಾರ್ಯವನ್ನು ಸಾಧಿಸಬಹುದು!" ಎಂದು ನಾನು ಅವನಿಗೆ ಹುಸಿ ಉತ್ಸಾಹದಲ್ಲಿ ಹೇಳಿದೆ.

ಅವನು ಮತ್ತೊಂದು ಸಿಗರೇಟನ್ನುರಿಸಿದ. ನನ್ನ ನಿದ್ದೆಯೂ ಮಾಯವಾಗಿತ್ತು.

"ನೀನೀಗ ಸ್ವಲ್ಪ ನಿದ್ರಿಸು. ನಾಳೆ ಇಂಟರ್‌ವ್ಯೂ ಇದೆಯಲ್ಲ? ಹುತ್ತೆಲ್ಲಾದರೂ ಅವರು ಇಂಟರ್‌ವ್ಯೂ ಮಾಡುವ ಮಧ್ಯದಲ್ಲೇ ನಿನಗೆ ನಿದ್ದೆ ಬಂದರೆ ಫಜೀತಿಯಾದೀತು. ನಿನಗೆ ಕೆಲಸ ಸಿಗಲೂಬಹುದು. ಸುಮ್ಮನೆ ಊಹಾಪೋಹದ ಮಾತುಗಳನ್ನು ಕೇಳಿ ಧೈರ್ಯಗೆಡಬೇಡ" ಎಂದೆ ನಾನು.

ಆಚೆ ಬದಿಯ ಕೋಣೆಯಿಂದ ಕೆಮ್ಮುವ ಮತ್ತು ನರಳಾಟದ ಧ್ವನಿ ಕೇಳಿಸಿತು.

"ಓಹ್! ಮಾಧವನಿಗೆ ಜ್ವರ ಜೋರಾಗಿದೆಯೆಂದು ತೋರುತ್ತದೆ, ಪಾಪ! ಆ ಪಿಶಾಚಿ ಅಂಬುಜಮ್ಮಾಳ್‌ಳ ಹೃದಯವೇ! ಆಕೆ ಮಣ್ಣು ಮುಕ್ಕಲಿ" ಎನ್ನುತ್ತ ಅವನು ಕೋಣೆಯತ್ತ ಸರಿದೊಡನೆ ನಾನು ಬಾಗಿಲು ಮುಚ್ಚಿಕೊಂಡೆ.

ತಾಸು ಮೂರಾಗಿತ್ತು. ಕೂಡಲೇ ನಿದ್ದೆ ಹತ್ತುವಂತಿರಲಿಲ್ಲ. ಕುರುಪನ ಚಿತ್ರವಿಚಿತ್ರ ಕತೆ ಕೇಳಿದ ಮೇಲೆ ಓದಲೂ ಹೆಚ್ಚು ಉತ್ಸಾಹವಿಲ್ಲ. ಅವನ ಜಿಗುಪ್ಸೆ-ನಿರುತ್ಸಾಹಗಳು ನನ್ನನ್ನು ಅಂಟಿಕೊಂಡಿದ್ದುವು ಎನ್ನುವುದರಲ್ಲಿ ಆಗ ಸಂಶಯವಿರಲಿಲ್ಲ. ಹೀಗೆಯೇ ಒಬ್ಬರ ಸಂತೋಷಕ್ಕೂ ಇನ್ನೊಬ್ಬರಿಗೆ ಅಂಟಿಕೊಳ್ಳುವ ಸ್ವಭಾವವಿರುತಿದ್ದರೆ ಲೋಕ ಎಷ್ಟು ಒಳ್ಳೆಯದಾಗಬಹುದಿತ್ತು! ಎಂದುಕೊಂಡು ಪುಸ್ತಕದ ಪುಟಗಳನ್ನು ಮಗುಚುತ್ತ ತುಸು ಹೊತ್ತಿನಲ್ಲೇ ನಿದ್ರಿಸಿದೆ.

೩

ನಾನು ಹೋಟೇಲಿನಲ್ಲಿ ಕಾಫಿ ತೀರಿಸಿ ರಸ್ತೆ ಇಳಿದಿದ್ದೇನಷ್ಟೆ. ಸರ್ರನೆ ಒಂದು ಕಾರು ಬಂದು ನನ್ನ ಬಳಿ ನಿಂತಿತು.

"ಗುಡ್‌ಮಾರ್ನಿಂಗ್ ಒಳಗೆ ಕುಳಿತುಕೊಳ್ಳಿ" ಎಂದು ಪದ್ಮಿನಿ ಕಾರಿನ ಬಾಗಿಲನ್ನು ಒಳಗಿಂದಲೇ ತೆರೆದು ಹಿಡಿದಳು

ನಾನು ಸ್ವಲ್ಪ ತಡವರಿಸಿದೆ.

"ನೋಡಿ, ಇವರು ಮಿಸ್ಟರ್ ಜಗದೀಶ್ ಅಯ್ಯಯಸ್. ಇವರು ನಮ್ಮ ಕ್ಲಾಸ್‌ಮೇಟ್ ರೈಟರ್, ಜರ್ನಲಿಸ್ಟ್ ಇತ್ಯಾದಿ ಮಾಸ್ಟರ್ ಆಫ್ ನನ್."

ಮಾಘಸ್ನಾನ ಮಾಡಿದಂತೆ ಹೇಗೋ ಕಾರಿನ ಒಳನುಗ್ಗಿದೆ. ಪದ್ಮಿನಿ ಧಡಾರನೆ ಬಾಗಿಲು ಮುಚ್ಚಿದಳು. ಕಾರು ಮುಂದರಿಯಿತು. ಕಾರಿನ ಚಿಕ್ಕ ಕನ್ನಡಿಯಲ್ಲಿ ನನ್ನ ಮುಖ ಕಡು ಕೆಂಪಾಗಿ ತೋರುತ್ತಿತ್ತು. ತಲೆ ಕೂದಲು ಕೆದರಿದ್ದು, ನಾಲ್ಕೈದು ದಿನಗಳಿಂದ ಬೆಳೆದ ಗಡ್ಡ ನನ್ನನ್ನು ಆಗತಾನೇ ಆಸ್ಪತ್ರೆ ಮಂಚ ಬಿಟ್ಟವನೋ ಅಥವಾ ಜೈಲಿನಿಂದ ಹೊರಬಿದ್ದವನೋ ಎಂದು ಸಂಶಯವನ್ನುಂಟುಮಾಡುವಂತಿತ್ತು. ಈ ರೂಪದಲ್ಲಿ ಪದ್ಮಿನಿಗೆ ನಾನು ಕಾಣಸಿಗಬಾರದಿತ್ತೆಂದು ನನ್ನನ್ನೇ ನಾನು ಹಳಿಸಿಕೊಂಡೆ.

ಜಗದೀಶ್ ಆಚೆ ಬದಿಯಲ್ಲಿದ್ದ, ಪದ್ಮಿನಿ ನಮ್ಮಿಬ್ಬರ ನಡುವೆ. ಅವನು ಅಯ್ಯಯಸ್ ಮಹಾಶಯ ಎಂದೊಡನೆಯೇ ನನ್ನ ಜಂಘಾಬಲವೆಲ್ಲ ಉಡುಗಿ ಹೋದಂತಾಗಿತ್ತು. ಅಯ್ಯಯಸ್ ಎಂದರೆ ಅಭಿನವ ಪಾಳೆಯಗಾರ. ಬೇಡ ಬೇಡವೆಂದರೂ ಅವನೆಲ್ಲಿ, ನಾನೆಲ್ಲಿ ಎಂಬ ತಾತ್ಸಾರ ಭಾವನೆ ನನ್ನಲ್ಲಿ ಮಿಂಚಿ ಹೋಗಿಯೇ ಬಿಟ್ಟಿತು. ಪದ್ಮಿನಿ ನನ್ನ ಬಗ್ಗೆ ಅಷ್ಟು ಪರಿಚಯ ಹೇಳಿದ್ದರೂ ಮತ್ತೆ ಅವನು ನನ್ನೊಡನೆ ತುಟಿ ಪಿಟಕ್ಕೆನ್ನಲಿಲ್ಲ. ಪದ್ಮಿನಿಯೂ ನನ್ನೊಡನೆ ಸ್ವಲ್ಪ ಕುಶಲ ಸಮಾಚಾರದ ಗಲಿಬಿಲಿ ಮಾತನಾಡಿ ಸುಮ್ಮನಾದಳು. ಹತ್ತು ನಿಮಿಷಗಳ ನಂತರ ಅವನನ್ನು ಸೆಕ್ರೇ-ಟೇರಿಯೇಟ್ ಬಳಿ ಇಳಿಸಿದಾಗ ನಾನು ನಿಜವಾಗಿಯೂ ದೀರ್ಘ ಶ್ವಾಸ ಬಿಟ್ಟೆ.

ಕಾರು ಮುಂದುವರಿಯಿತು.

"ಒಣ ಜಂಭದ ಕೋಳಿ!" ಎಂದು ಪದ್ಮಿನಿ ಉದ್ಗರಿಸಿದಳು.

ಅವಳೆಂದುದನ್ನು ನಾನು ಬಹುಶಃ ಒಪ್ಪಿಕೊಳ್ಳಬಹುದಿತ್ತು. ಆದರೆ ಅಂಥ ಜಂಭದ ಕೋಳಿಯನ್ನು ಅವಳು ತನ್ನ ಕಾರಿನಲ್ಲಿ ಕುಳ್ಳಿರಿಸಿ ಇಷ್ಟು ದೂರತಂದು ಬಿಡಬೇಕಾಗಿದ್ದ ಪ್ರಮೇಯವಾದರೂ ಏನು? ಅವರೊಳಗೆ ಕೇವಲ ಪರಿಚಯವಷ್ಟೇ ಇರುತಿದ್ದರೆ ಅವನಾಗಿ ಅವಳೊಡನೆ ಅಲ್ಲಿ ತಂದು ಬಿಡಲು ಕೇಳಿಕೊಳ್ಳುತ್ತಿದ್ದಿಲ್ಲ. ಅವಳು ಅವನನ್ನು ಒಂದು ವೇಳೆ ಹಾಗೆ ತನ್ನೊಡನೆ ಬರಲು ಸ್ವಾಗತಿಸಿದ್ದರೂ ಸ್ವಾಭಿಮಾನದಿಂದ ಅವನು ಅದನ್ನು ತಿರಸ್ಕರಿಸಬಹುದಿತ್ತು. ಅದ್ದರಿಂದ ಪದ್ಮಿನಿಯೇನೊ ದೊರಕದ ದ್ರಾಕ್ಷೆ ಹಣ್ಣು ಹುಳಿ ಎಂದು ಹಳಿದ ನರಿಯ ನೀತಿಯನ್ನನುಸರಿಸಿರಬೇಕು ಎಂಬುದು ನನಗೆ ಖಚಿತವಾಯಿತು.

"ಏನು, ಮನೆಯಲ್ಲಿ ಕಾಫಿ ಕುಡಿಯೋಣ, ಅಲ್ಲ ಇಲ್ಲಿ ಬೊಸೊಟ್ಟೋದಲ್ಲಿ ಕುಡಿಯಬೇಕೆ?"

"ನನಗೆ ಕಾಫಿಯೇ ಬೇಡವಪ್ಪ. ನಿಮಗೆ ಬೇಕೆಂದಾದರೆ ನಾನು ಬಿಟ್ಟು ಬರುತ್ತೇನೆ. ಆದರೆ ಒಂದು ಮಾತ್ರ ಬಿಲ್ ಕೊಡುವವ ನಾನು."

"ಕಾಫಿ ಕುಡಿಯದಿದ್ರೆ ನನ್ನ ಒಟ್ಟಿಗೆ ಏಕೆ ಬರಬೇಕು? ನನಗೇನಾದರೂ ಭಯವಾಗುವುದೆ?"

ಹೀಗೆಂದು ಹೇಳುತ್ತ ಅವಳು ನಗದಿರುತಿದ್ದರೆ ನನ್ನ ಮೇಲೂ ಏನೋ ಮುನಿಸಿರಬೇಕೆಂದು ಭಾವಿಸುತಿದ್ದೆ. ಆದರೂ ನನಗೆ ಅವಳೊಡನೆ ನಗಬೇಕೋ ಬೇಡವೋ ಎಂದು ಅನುಮಾನವಾಯಿತು.

"ಹಾಂ, ಅಂದ ಹಾಗೆ 'ಅಭೀಷ್ಟ'ದ ಹೆಸರು ಬಹಳ ಕೇಳುತ್ತಿದೆ. ಚಲೋ ಐಸ್ ಕ್ರೀಂ ಮಾಡ್ತಾರಂತೆ."

ಎಂದು ಡ್ರೈವರನನ್ನು ಕಾರು ನಿಲ್ಲಿಸಲು ಹೇಳಿದಳು.

ನಾವಿಬ್ಬರೂ ಕಾರಿನಿಂದ ಕೆಳಗಿಳಿದು 'ಅಭೀಷ್ಟ' ಹೋಟೇಲಿನ ಒಳ.. ಹೋದೆವು. ನಮ್ಮನ್ನು ಕಂಡೊಡನೆ ವೈಟರರು ಒಮ್ಮೆಲೇ ಕಕ್ಕಾಬಿಕ್ಕಿಯಾದಂತೆ ತೋರಿತು. ಎಲ್ಲರೂ ಪದ್ಮಿನಿಗೆ ಮೇಜು ತೋರಿಸುವವರೇ.

"ಸ್ಪೇಶಲ್ ರೂಂ" ಎಂದು ಆಜ್ಞಾಪಿಸಿದಳಾಕೆ.

ಒಬ್ಬ ವೈಟರ್ ಗಾಜಿನ ಬಾಗಿಲನ್ನು ದೂಡಿ ನಮ್ಮನ್ನು ಕೋಣೆಯೊಳಗೆ ಕರೆದುಕೊಂಡು ಹೋದ. ಪದ್ಮಿನಿ ತನ್ನ ವ್ಯಾನಿಟಿ ಬ್ಯಾಗನ್ನು ಮೇಜಿನ ಮೇಲಿಟ್ಟು ಕನ್ನಡಿಯ ಮುಂದಿದ್ದ ನಲ್ಲಿಯ ಬಳಿಗೆ ಹೋಗಿ ಮುಖ ತೊಳೆದಳು. ಅವಳು ತುಟಿಗೆ ಹಾಕಿದ್ದ ತೆಳ್ಳಗಿನ ಲಿಪ್‌ಸ್ಟಿಕ್‌ನ ಪರೆ ಸ್ವಲ್ಪ ಅಸ್ತವ್ಯಸ್ತವಾಯಿತು. ಅವಳ ಮುಂಗುರುಳುಗಳು ಜಡೆಯ ಹಿಡಿತ ತಪ್ಪಿ ಮುಖದ ಮೇಲೆ ಹರಿದಾಡತೊಡಗಿದುವು. ಅವಳು ವ್ಯಾನಿಟಿ ಬ್ಯಾಗನ್ನು ತೆರೆದು ಅದರಿಂದ ಶೃಂಗಾರ ದ್ರವ್ಯಗಳನ್ನು ಮತ್ತು ಬಾಚಣಿಕೆಯನ್ನು ತೆಗೆದುಕೊಂಡು ಒಂದು ದೊಡ್ಡ ಕನ್ನಡಿಯ ಬಳಿಗೆ ಹೋದಳು. ಆ ಕನ್ನಡಿ ನನ್ನ ಎದುರಿಗೇ ಇದ್ದುದರಿಂದ ನನಗೆ ಅದರಲ್ಲಿ ಅವಳ ಪ್ರತಿಬಿಂಬವನ್ನು ನೋಡದಿರುವುದು ಅಸಾಧ್ಯವಾಯಿತು.

ಪದ್ಮಿನಿಯನ್ನು ಅಷ್ಟೊಂದು ದಿಟ್ಟತನದಿಂದ ನೋಡುವ ಅವಕಾಶ ಅದೇ ಮೊದಲೆನ್ನಬಹುದು. ಕಾಲೇಜಿನಲ್ಲೇನೋ ನಾವು ಮೂರು ವರ್ಷ ಕಾಲ ಒಟ್ಟಿಗಿದ್ದೆವು. ಒಂದೆರಡು ಬಾರಿ ಒಟ್ಟಿಗೆ ಮಹಾಬಲಿಪುರಂ, ಕಂಜೀವರಂ ಮುಂತಾದೆಡೆ ಪ್ರವಾಸಕ್ಕೂ ಹೋಗಿದ್ದೆವು ನಮ್ಮ ಸಹಪಾಠಿಗಳೊಡನೆ. ಆದರೂ ನಾನು ಹೆಚ್ಚೊಂದು ಸಲಿಗೆಯಿಂದ ಅವಳೊಡನೆ ವರ್ತಿಸಿದವನಲ್ಲ. ಮಾತೇನೋ ಒಬ್ಬರನ್ನೊಬ್ಬರು ಚುಚ್ಚುವಂಥ ರೀತಿಯಲ್ಲಿ ಒಮ್ಮೊಮ್ಮೆ ನಡೆದುದಿತ್ತು. ಅದೂ ಲಘುವಿನೋದದ ಧಾಟಿಯಲ್ಲಿ. ಆದರೆ ನಾವಿಬ್ಬರೇ ಎಲ್ಲಾದರೂ ಸಂಧಿಸಿಬಿಟ್ಟೆನೆಂದರೆ ಅವಳೇ ಮಾತುಕತೆಯನ್ನು ಮುಂದುವರಿಸಬೇಕಾಗಿ ಬರುತ್ತಿತ್ತು. ನಾನು ಬಹಳ ಅಂಜುಬುರುಕನೆಂದು ಅವಳು ಕಿಟ್ಟುವಿನೊಡನೆ ಅನೇಕ ಬಾರಿ ಹೇಳಿದ್ದಳಂತೆ. ಒಂದೇ ಅರ್ಥದಲ್ಲಿ ಅವಳೆಂದುದು ನಿಜವೂ ಆಗಿತ್ತು. ಕಾಲೇಜುಗಳಲ್ಲಿ ಹುಡುಗ-ಹುಡಿಗಿಯರೊಡನೆ ನಡೆಯುವ ಸಲ್ಲಾಪವಂತೂ ಆಗ ಮನೆಮಾತಾಗಿತ್ತು: ನನ್ನನ್ನು ಮುಂದಕ್ಕೆ ಓದಲಿಕ್ಕೆ ಕಳಿಸಲು ಮನೆಯವರು ಹಿಂದೆ ಮುಂದೆ ನೋಡಲು ಇದೂ ಒಂದು ಕಾರಣವಾಗಿತ್ತೆಂದು ನನಗೆ ಕ್ರಮೇಣ ಗೊತ್ತಾಗಿತ್ತು. ಇದಲ್ಲದೆ ನಾನೊಬ್ಬ ದುರ್ಗುಣಿಯ..ಎಂದು ಹೆಸರು ಪಡೆದವ. ವಿದ್ಯಾರ್ಥಿ ರಾಜಕೀಯದಲ್ಲಲ್ಲದೆ ಹೊರಗಿನ ರಾ..ಕೀಯದಲ್ಲೂ ಅಲ್ಪಸ್ವಲ್ಪ ಭಾಗ ವಹಿಸಿದವ. ಇದರಿಂದಾಗಿ ಇತರರಿಗೆ ನನ್ನ ಮೇಲೆ ಸ್ವಲ್ಪ ಅಭಿಮಾನವೂ ಇತ್ತೆಂದು ಭಾವಿಸಿದ್ದೆ. ಹೀಗೆ ಕಷ್ಟಪಟ್ಟು ಸಂಯಮದ ಮೂಲಕ ಗಳಿಸಿದ ಅಭಿಮಾನವನ್ನು ಕಳೆದುಕೊಳ್ಳಲು ಒಂದು ಗಳಿಗೆ ಅಡ್ಡದಾರಿ ಹಿಡಿದರೆ ಸಾಕಾಗಬಹುದಿತ್ತು. ಆದ್ದರಿಂದಲೇ ನನ್ನ ಸಂಬಂಧಗಳು, ಅದೂ ಸಹಪಾಠಿಣಿಯರ ಸಂಬಂಧಗಳು ತೀರ ವಸ್ತುನಿಷ್ಠವಾಗಿದ್ದುವು. ನನ್ನ ಭಾವಾವೇಶಗಳಿಗೆ ಆಗ ನಾನು ಬಿಗುವಾಗಿ ತಡೆ ಹಾಕುತ್ತಿದ್ದೆ. ಈ ದೃಷ್ಟಿಯಿಂದ ಸಹಪಾಠಿಣಿಯರು ನನಗೆ ಅಂಜುಬುರುಕನೆಂದು ಕೊಟ್ಟ ವಿಶೇಷಣ ಸ್ವಾಗತಾರ್ಹವಾಗಿಯೇ ಇತ್ತು.

ಪದ್ಮಿನಿ ತುಟಿಗಳಿಗೆ ಮೆಲ್ಲನೆ ಲಿಪ್‌ಸ್ಟಿಕ್ ಬಣ್ಣವನ್ನು ತೀಡುತ್ತಿದ್ದಳು. ಅವಳ ಬೊಗಸೆಗಣ್ಣುಗಳ ಕಣ್ಣಾಲಿಗಳು ಉಲಿಯುತ್ತಿದ್ದಂತೆ ನನಗೆ ಭಾಸವಾಗುತ್ತಿತ್ತು. ಅವಳ ಬಾದಾಮಿ ಬಣ್ಣದ ಮುಖ ಶೃಂಗಾರ ಸಾಧನಗಳ ಸಹಾಯವಿಲ್ಲದೆಯೇ ಮೋಹಕವಾಗಿತ್ತು. ನೋಡ ಹೋದರೆ ಆ ನಸು ಗುಲಾಬಿ ಬಣ್ಣದ ರೂಜ್‌ನ ಪದರು ಅವಳ ಚೆಲುವಿಗೆ ಭಂಗ ತರುತ್ತಿತ್ತು. ಹುಬ್ಬುಗಳು ಸ್ವಲ್ಪ ದಪ್ಪವಿದ್ದು ಮೂಗಿನ ಬುಡದಲ್ಲಿ ಅವು ಒಂದನ್ನೊಂದು ಸಂಧಿಸಿದಂತೆ ಭಾಸವಾಗುತ್ತಿತ್ತು. ನೀಳವಾದ ಮೂಗು ಹೂವಿನ ಎಸಳಿನಂತೆ ಮೃದುವಾಗಿ ತೋರುತ್ತಿತ್ತು. ತುಟಿಗಳಲ್ಲಿ ಸದಾ ಒಂದು ತರಹದ ತುಂಟ ಮಂದಹಾಸ ನಲಿಯುತ್ತಿತ್ತು. ಕಿವಿಗಳೆರಡೂ ಹಬ್ಬಿದ ಮುಂಗುರುಳುಗಳ ಮಧ್ಯೆ ಅಡಗಿಹೋದಂತಿದ್ದುವು. ಅವಳುಟ್ಟಿದ್ದ ನಸು ಹಸಿರು ಬಣ್ಣದ ಸೀರೆಯ ಅಂಚುಗಳಿಂದ ಅವಳ ಮಾಂಸಭರಿತ ತೋಳುಗಳು ಹೊರಚಾಚಿದ್ದುವು. ಅವಳ ಮುಖ ಸೌಂದರ್ಯಮಯವಲ್ಲದೆ, ಸಲ್ಲಕ್ಷಣ ಭರಿತವೂ ಆಗಿತ್ತೆಂಬುದರಲ್ಲಿ ಸಂಶಯವಿರಲಿಲ್ಲ. ಆದರೂ ಆ ಜೊತೆಗೂಡುವಂತಿದ್ದ ಹುಬ್ಬುಗಳು ಅವಳ ಸೌಂದರ್ಯಕ್ಕೆ ಪೂರಕವಾಗಿದ್ದರೂ ಅವುಗಳಿಂದ ಅವಳ ಮನಸ್ಸಿನ ದರ್ಪ ಹೊರಸೂಸುವಂತೆ ಭಾಸವಾಗುತ್ತಿತ್ತು. ಈ ದರ್ಪಭಾವದಿಂದಾಗಿ ಅವಳ ಮುಖದಲ್ಲಿ ಸೌಜನ್ಯ



ಕ್ರಾಂತಿಲೂ ಹೆಚ್ಚಾಗಿ ಪ್ರಖರವಾದ ಕಠೋರತೆಯೇ ಪ್ರಕಾಶಗೊಳ್ಳುತ್ತಿತ್ತು. ಓದುಗಾಗಿ ಆಕೆಯ ರೂಪಲಾವಣ್ಯಗಳು ಪ್ರೇಕ್ಷಕನಿಗೆ ಎಟುಕಲಾರದ ಗಗನ ಕುಸುಮದಂತೆ ತೋರುತ್ತಿದ್ದರೆ ಆಶ್ಚರ್ಯವಿರಲಿಲ್ಲ. ಆದ್ದರಿಂದಲೇಯೋ ಏನೋ ನಾನು ಅವಳ ಸೌಂದರ್ಯವನ್ನು ಮುಖಾಮುಖಿ ನೋಡಿ ಆನಂದ ಪಡುವ ಬದಲು ಕಳ್ಳನಂತೆ ಕನ್ನಡಿಯಲ್ಲಿ ಆಕೆಯ ಪ್ರತಿಬಿಂಬವನ್ನು ಕಂಡು ತೃಪ್ತಿಪಟ್ಟೆ. ಇಲ್ಲದಿದ್ದರೂ ನನ್ನ ಪಾಲಿಗಂತೂ ಇನ್ನೂ ಅವಳು ಕನ್ನಡಿಯೊಳಗಿನ ಗಂಟೇ ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿರಲಿಲ್ಲ.

ಆಕೆ ಪೌಡರನ್ನು ಒರಸಿಕೊಂಡು ಹಿಂದಿರುಗಿ ಬಂದು ಶೃಂಗಾರ ಸಾಧನೆಗಳನ್ನೆಲ್ಲ ಬ್ಯಾಗಿನಲ್ಲಿ ಸೇರಿಸಿದಳು. ಅವಳು ಅಷ್ಟು ಸೂಕ್ಷ್ಮವಾಗಿ ತಲೆ ಬಾಚಿದ್ದರೂ ಒಂದೆಳೆ ಮುಂಗುರುಳು ಮಾತ್ರ ಇನ್ನೂ ಅವಳ ಕಣ್ಣ ಮುಂದೆ ಓಲಾಡುತಿತ್ತು.

"ಕೆಟ್ಟ ಕೂದಲು" ಎನ್ನುತ್ತ ಅವಳು ಅದನ್ನು ಕಿತ್ತೆಳೆದಳು. ಅದು ಅವಳ ಬೆರಳಲ್ಲಿ ಬಂತು. ಅದನ್ನು ಕೀಳುವಾಗ ಅವಳಿಗೊಂದಿಷ್ಟೂ ನೋವಾದಂತೆ ಅವಳ ಮುಖ ಭಾವದಿಂದ ತಿಳಿಯಲಿಲ್ಲ.

"ಏನೋ ಅದಕ್ಕೆ ತುರುಬಿನಲ್ಲಿ ಕುಳಿತು ಕುಳಿತು ಸಾಕಾಯಿತು. ಸ್ವಲ್ಪಗಾಳಿ ತಿನ್ನೋಣ. ಪೌಡರನ್ನು ಮೂಸೋಣ ಎಂದು ಅದು ಮನಸ್ಸು ಮಾಡಿದರೆ ಅದನ್ನು ಕಿತ್ತೊಗೆಯುವಷ್ಟು ಕ್ರೂರತನ ನಡೆಸುವುದೆ?"

ಎಂದು ನಾನು ವಿನೋದದಲ್ಲಿ ನುಡಿದೆ.

ಆಕೆ ಇದನ್ನು ಕೇಳಿ ಒಂದು ಕ್ಷಣ ನನ್ನನ್ನೇ ದಿಟ್ಟಿಸಿ ನೋಡಿದಳು. ಬಾಯಿಂದ ಜ್ವಾಲಾಮುಖಿ ಸ್ಫೋಟವಾಗುವುದೋ ಎಂದು ನಾನು ಬೆದರಿದೆ.

"ಕ್ರೌರ್ಯ, ಸೌಜನ್ಯ ಎಂದು ಸಾಧುಗಳಂತೆ ಹೇಳುವುದನ್ನು ನೀವು ಇನ್ನೂ ಬಿಟ್ಟಿಲ್ಲವೆ? ನೋಸವಾಯಿತು. ನೀವು ಅಮೇರಿಕದಲ್ಲೋ ಇಂಗ್ಲೆಂಡಿನಲ್ಲೋ ಹುಟ್ಟಬೇಕಿತ್ತು. ಸುಪ್ರಸಿದ್ಧ ಮನಃಶಾಸ್ತ್ರಜ್ಞರಾಗುತಿದ್ದಿರಿ. ಅದರಲ್ಲೂ ಹೆಂಗಸರ ಮನಸ್ಸನ್ನು ನೋಯಿಸಿ ಕೆಣಕುವ ವಿಜ್ಞಾನದಲ್ಲಿ ಅತ್ಯಂತ ಜನಪ್ರಿಯರಾಗುತಿದ್ದಿರಿ."

"ಬಹುಶಃ ಟೈಂ-ಲೈಫ್‌ಗಳಲ್ಲಿ ನನ್ನ ಚಿತ್ರಗಳು ಬರುತಿದ್ದವು. ರೀಡರ್ಸ್ ಡೈಜೆಸ್ಟಿನಲ್ಲಿ ನನ್ನ ಲೇಖನಗಳು ಬರುತಿದ್ದವು!"

ಈ ಉತ್ತರ ನಾನು ಕುರುಡನಂತೆ ಮುಂದೆ ನೋಡದೆ ಕೊಟ್ಟಿದ್ದೆ. ಇಂಥ ವಿಡಂಬನೆ ಅವಳನ್ನು ನಿರುತ್ತರಳನ್ನಾಗಿ ಮಾಡಬಹುದೆಂದು ನಾನು ನಂಬಿದ್ದೆ. ಇದರಿಂದ ಆಕೆಗೆ ನೋವಾಗುವ ಸಂಭವವೂ ಇರಲಿಲ್ಲ.

"ಓಹ್ ಈಗಲೂ ಟೈಂ-ಲೈಫ್ ಹುಚ್ಚು ಬಿಡಲಿಲ್ಲವೆ? ನೀವು ಸೋಶಲಿಸ್ಟರಂತೆ, ಮಾರ್ಕ್ಸ್‌ವಾದಿಗಳಂತೆ..."

"ಹಾಗೆಂದು ಯಾರು ನಿಮಗೆ ಹೇಳಿದರು?"

"ಹೇಳೋದೇಕೆ? ನೀವು ನನ್ನನ್ನು ಸೋಶಲಿಸ್ಟ ಪಕ್ಷದ ಸದಸ್ಯಳನ್ನಾಗಿ ಮಾಡಿರಲಿಲ್ಲವೆ, ಕಾಲೇಜಿನಲ್ಲಿ?"

"ಇದು ಹರಪ್ಪಾ ಮೊಹೆಂಜೊದಾರೋ ಕಾಲದ ಇತಿಹಾಸ. ಇವೆರಡಕ್ಕೆ ಭೇದವೆಂದರೆ ನನ್ನ ಸೋಶಲಿಸಮ್ಮಿಗೆ ನಾಲ್ಕು ವರ್ಷವಾಯಿತು. ಮೊಹೆಂಜೊದಾರೋ ನಾಗರಿಕತೆಗೆ ಐದು ಸಾವಿರ ವರ್ಷವಾಯಿತು. ಆದರೆ ಅದರಲ್ಲಿ ಅವಶೇಷಗಳಾದರೂ ಉಳಿದಿವೆ, ನನ್ನಲ್ಲಿ ಅವೂ ಇಲ್ಲ!"

"ನಾನಾಗಲೇ ನಿಮಗೆ ಹೇಳುತಿದ್ದೆನಲ್ಲ? ಆ ಸೋಶಲಿಸ್ಟ ವಿರೋಧಿ ಭಂಡವಲಶಾಹಿ ಹೆನ್ರಿಲೂಸನ ಪತ್ರಿಕೆಗಳ ಮೇಲೆ ನಿಮಗಿದ್ದ ವ್ಯಾಮೋಹಕ್ಕೂ ನಿಮ್ಮ ಸೋಶಲಿಸಮ್ಮಿಗೂ ಅಜಗಜಾಂತರವಿದೆಯೆಂದು? ಮೂಲಭೂತವಾಗಿ ಜಿಗುಪ್ಸೆಗೊಂಡ ಬೂರ್ಜ್ವಾ ನೀವು. ಆದ್ದರಿಂದ ಗೋಮುಖ ವ್ಯಾಘ್ರವಾಗಿಯೋ. ವ್ಯಾಘ್ರಮುಖ ಗೋವಾಗಿಯೋ ನೀವು ವರ್ತಿಸುತ್ತಿದಿರಿ."

"ನಿಮ್ಮ ರಾಜಕೀಯ ಶಾಸ್ತ್ರದ ಅಭ್ಯಾಸ ಕಾಲೇಜಿನಲ್ಲೇ ಕೊನೆಗೊಂಡಿರಬೇಕೆಂದು ನಾನು ಭಾವಿಸಿದುದು ತಪ್ಪಾಯಿತು. ಸೋಕ್ರೇಟೀಸ್, ಪ್ಲೇಟೋ, ಅರಿಸ್ಟಾಟಲ್, ಸಿಸಿರೋ, ಅಗಸ್ಟಿನ್...

"ಹ್ಯಾಬ್ಸ್, ಮ್ಯಾಕೆವೆಲ್ಲಿ, ಹೇಗೆಲ್, ಬೆಂಥಮ್ ಮಾರ್ಕ್ಸ್, ಮಿಲ್, ಲೆನಿನ್, ಸ್ಟಾಲಿನ್ ಹೂಂ ಮುಂದರಿಸಿ

"ಲಾಸ್ಕಿ"

"ನಿಮ್ಮ ಯೋಚನೆಯಲ್ಲಿ ನಾವೆಲ್ಲ ಬರೆ ಬಣ್ಣದ ಚಿಟ್ಟೆಗಳು, ಪರೀಕ್ಷೆಗಾಗಿ ಮಾತ್ರ ಓದುವವರೆಂಬ ತುಚ್ಛೀಕಾರವಿತ್ತಲ್ಲ? ನಾನು ನೀವು ಬರೆದ ಪ್ರಬಂಧಗಳನ್ನು ಕೇವಲ ಪರೀಕ್ಷೆಯಲ್ಲಿ ಪಾಸಾಗಲಿಕ್ಕೆಂದು ನಕಲು ಮಾಡಿಕೊಳ್ಳುತಿದ್ದೆನೆ? ನನಗೆ ನಿಮ್ಮ ಶೈಲಿ ಮತ್ತು ಸ್ವತಂತ್ರ ವಿಚಾರಸರಣಿಗಳು ಮೆಚ್ಚುಗೆಯಾಗುತಿದ್ದುವು."

"ಪುನಃ ಮೊಹೆಂಜೊದಾರೋ ಯುಗಕ್ಕೆ ನಾವು ತೆರಳುತಿದ್ದೇವಲ್ಲ?"

ಅಷ್ಟರಲ್ಲಿ ವೈಟರ್ ಬಂದು ನಮ್ಮ ಮಾತಿನ ಪ್ರವಾಹಕ್ಕೆ ತಡೆಹಾಕಿದ. ಮೇಜಿನ ಮೇಲಿದ್ದ ಮೆನು ಕಾರ್ಡನ್ನು ಆಕೆ ಪರಿಶೀಲಿಸಿದಳು. ನಾನು ಅವಳ ಕೇಶರಾಶಿಯನ್ನೇ ಈಕ್ಷಿಸುತಿದ್ದೆ. ನೀಳವಾದ ಆಕೆಯ ಬೈತಲೆ ಏಕೋ ನನಗೆ ಆಕರ್ಷಕವಾಗಿ ತೋರತೊಡಗಿತ್ತು.

"ಎರಡು ಟೊಮೆಟೋ ಸ್ಯಾಂಡ್‌ವಿಚ್‌ಗಳು ಎರಡು ವೆಜಿಟೇಬಲ್ ಕಟ್ಲೆಟ್‌ಗಳು. ಮತ್ತೇನಾದರೂ ಬಿಸ್ಕಿಟು ತಾ. ಇಬ್ಬರಿಗೂ ಕೊನೆಗೆ ಕಾಫಿ."

ವೈಟರ್ ಒಡನೆಯೆ ನನ್ನನ್ನು ಹಿಂದಿರುಗಿ ನೋಡುತ್ತ ಅಲ್ಲಿಂದ ಕಾಲ್ತೆಗೆದ. ನನ್ನಂತಹ ವೇಷಭೂಷಣ ಧರಿಸಿದ ಐದು ದಿನ ಗಡ್ಡ ತೆಗೆಯದ ಮಹಾಶಯ ಆ ಸ್ಪೆಷಲ್ ಕೋಣೆಗೆ ಬಂದುದು ಅದೇ ಮೊದಲ ಸಲವಾಗಿರಬಹುದಿತ್ತು.

"ನಿಮ್ಮಿಂದ ಖಂಡಿತ ಹೋಟೇಲಿನವರು ಕೋಣೆಯ ಬಾಡಿಗೆಯನ್ನು ಕೇಳಬಹುದೆಂದು ನನಗೆ ಸಂಶಯವಾಗುತ್ತಿದೆ" ಎಂದೆ ನಾನು ಒಣದನಿಯಲ್ಲಿ.

"ಇಲ್ಲ. ಆ ಬಗ್ಗೆ ನೀವು ಹೆದರಬೇಕಾಗಿಲ್ಲ."

"ಹಾಗಲ್ಲ, ಇಷ್ಟು ತಿಂಡಿಗಳನ್ನು ತರಿಸಿದರೆ ಅವುಗಳನ್ನು ಒಂದೇ ಬಾರಿ ತಿಂದು ಮುಗಿಸಲು ಸಾಧ್ಯವಾಗದು. ಅದನ್ನು ಮುಗಿಸಲಿಕ್ಕೆಂದೇ ಸಂಜೆಯತನಕವೂ ಇಲ್ಲೇ ಕುಳಿತುಕೊಳ್ಳಬೇಕಾದೀತು."

"ಹಾಗೆ ಉಳಿದರೆ ನಿಮಗೆ ಪಾರ್ಸಲ್ ಕಟ್ಟಿಕೊಡಲು ಹೇಳುತ್ತೇನೆ. ನೀವು ಹೆದರಬೇಡಿ."

"ಆದರೆ ಒಂದು ವಿಷಯದಲ್ಲಿ ನಾನು ಸಿಕ್ಕಿಬಿದ್ದೆನಲ್ಲ! ಬಿಲ್ ನಾನು ಕೊಡುವುದೆಂದು ನಿಮ್ಮನ್ನು ಒಪ್ಪಿಸಿದ್ದೆ. ನನ್ನೊಡನೆ ಇರುವುದು ಕೇವಲ ಒಂದು ರೂಪಾಯಿ ಚಿಲ್ಲರೆ."

"ಅಂತೂ ನೀವು ಸಂಪೂರ್ಣ ಇಂದು ಸೋತಂತಾಯಿತು. ನನಗೆ ಅದೇ ಬೇಕಾದುದು. ಆ ಜಗದೀಶನಂಥವರಲ್ಲಿರುವ ಒಣ ಜಂಭ ಬೇಡ."

ನಾನು ಗಟ್ಟಿಯಾಗಿ ನಗುತ್ತ ತಲೆಯನ್ನು ಮೇಜಿನ ಮೇಲೆ ಬಗ್ಗಿಸಿ ಕೈಗಳಲ್ಲಿ ಕಣ್ಣುಗಳನ್ನು ಮುಚ್ಚಿಕೊಂಡೆ. ಪದ್ಮಿನಿಯಲ್ಲಿದ್ದ ಆಕರ್ಷಕ ಅಂಶ ನನ್ನ ಮೇಲೆ ಪರಿಣಾಮ ಮಾಡಿತ್ತೆಂಬುದರಲ್ಲಿ ಸಂದೇಹವಿರಲಿಲ್ಲ. ಆಕೆಯ ಮುಖ ಒನಪು ಒಯ್ಯಾರಗಳನ್ನು ಕಂಡು ನಾನು ಮಾತ್ರ ಮುಗ್ಧನಾಗಿದ್ದೆ. ನನ್ನಲ್ಲುಂಟಾಗಿದ್ದ ಆವೇಶವನ್ನು ಅವಳಿಂದ ಸಂಪೂರ್ಣವಾಗಿ ಬಚ್ಚಿಡುವುದೇ ದೊಡ್ಡ ಕಷ್ಟದ ಕೆಲಸವಾಗಿತ್ತು. ಅದನ್ನು ಪ್ರಕಟಪಡಿಸಿದರೆ ಆಕೆ ಖಂಡಿತವಾಗಿ ನನ್ನನ್ನು ಹುಚ್ಚನೆನ್ನಬಹುದಿತ್ತು ಎಂದು ನಾನು ಹೆದರಿದ್ದೆ. ಬಹುಶಃ ಜಗದೀಶನಂಥವರನ್ನು ತನ್ನ ಕೈಗೊಂಬೆಯನ್ನಾಗಿ ಮಾಡಿಕೊಂಡವಳು ನನ್ನಂಥ ಬೀದಿ ಭಿಕಾರಿಯಂಥವನನ್ನು ಆಕೆ ಓಲೈಸುವ ಪ್ರಶ್ನೆಯೇ ಇರಲಿಲ್ಲವೆಂಬುದು ನನಗೆ ಖಚಿತವಾಗಿತ್ತು.

"ಇದೇನು ಶರಣು ಹೋಗುವ ಭಾರತೀಯ ವಿಧಾನವೆ? ಪಾಶ್ಚಾತ್ಯ ರೀತಿಯಲ್ಲಾದರೆ ನೀವು ಎರಡು ಕೈಗಳನ್ನೂ ಎತ್ತಿ ಹಿಡಿಯಬೇಕಿತ್ತು!"

ಎಂದು ಅವಳು ಘೊಳ್ಳನೆ ನಕ್ಕಳು. ನಾನೂ ಮನಸ್ಸು ಬಿಚ್ಚಿ ಹಿಂದೆ ಮುಂದೆ ವಾಲುತ್ತ ನಕ್ಕೆ. ಮನಸ್ಸನ್ನು ಆವರಿಸಿದ್ದ ಯಾವುದೋ ಒಂದು ಶೃಂಖಲೆ ಆ ನಗುವಿನ ಉಬ್ಬರದಲ್ಲಿ ಛಿದ್ರಛಿದ್ರವಾಗಿ ಹೋದ ಅವರ್ಣನೀಯ ಅನುಭವ ನನ್ನಲ್ಲುಂಟಾಯಿತು.

ನಾವು ಹೀಗೆ ನಗುತಿದ್ದಂತೆಯೇ ನಾನು ನನ್ನ ಕೈಗಳನ್ನು ಮೇಲಕ್ಕೆತ್ತಿದೆ.

"ಇನ್ನು ಬಿಳಿ ಪತಾಕೆ ಮಾತ್ರ ಬೇಕು!" ಎಂದೆ.

"ನಾನದನ್ನು ಕೊಡುತ್ತೇನೆ" ಎಂದು ಚೋಲಿಯೊಳಗಿಂದ ಕರವಸ್ತ್ರವನ್ನು ಸೆಳೆದು ಎದ್ದು ನಿಂತು ನನ ಮೇಲಕ್ಕೆತ್ತಿದ್ದ ಒಂದು ಬೆರಳಿಗೆ ಸಿಲುಕಿಸಿದಳು.

ಅವಳ ಉಸಿರು ನನ್ನ ಮುಖವನ್ನು ಅಪ್ಪಳಿಸಿ ಹಾಯ್ದುಹೋಯಿತು. ನನ್ನ ಮೂಗಿನ ಹೊಳ್ಳೆಗಳೊಳಗೆ ಅವಳು ಹಚ್ಚಿಕೊಂಡ ಪೌಡರಿನ ಸುಗಂಧ ತುಂಬಿತು.

"ಸರಿ, ಶರಣಾರ್ತಿಯನ್ನು ಸ್ವೀಕರಿಸಿದ್ದೇನೆ. ಇನ್ನು ಯುದ್ಧ ಕೈದಿಗಳಿಗೆ ಉಚಿತವಾದ, ಜಿನೀವಾ ಕನ್ವೆನ್ಶನನ್ವಯದ ಸತ್ಕಾರವನ್ನು ಮಾಡಲಾಗುತ್ತಿದೆ."

ಪುನಃ ಇಬ್ಬರೂ ಗಟ್ಟಿಯಾಗಿ ನಕ್ಕೆವು.

ಅಷ್ಟರಲ್ಲಿ ವೈಟರ್ ಸ್ಯಾಂಡ್‌ವಿಚ್‌ಗಳನ್ನು ತಂದಿಟ್ಟು ಹೋದ.

"ಯುದ್ಧ ಕೈದಿಗಳಿಗೆ ಬಂತಲ್ಲ ಆಹಾರ?"

ಎಂದು ಆಕೆ ಫೋರ್ಕ್ ಮತ್ತು ಚಾಕು ತೆಗೆದುಕೊಂಡಳು.

"ನಾನು ಯುದ್ಧ ಕೈದಿ ಎಂಬುದನ್ನು ನೀವೇ ಒಪ್ಪಿದ್ದೀರಿ. ಇನ್ನೇನು ನನಗೆ ಚಿತ್ರಹಿಂಸೆ ಕೊಡಲು ಆಯುಧಪಾಣಿಯಾದಿರೆ ?"

ನನ್ನ ಮಾತನ್ನು ಕೇಳಿದೊಡನೆ ಅವಳು ಫಕ್ಕನೆ ಫೋರ್ಕನ್ನು ನನ್ನ ಮುಖದತ್ತ ಚಾಚಿದಳು. ನಾನು ಆಕಸ್ಮಿಕ ಭಯದಿಂದ ತಲೆಯನ್ನು ಹಿಂದೆ ಬಗ್ಗಿಸಿದೆ.

"ಬ್ರೇವೋ! ನೀನು ಧೈರ್ಯಶಾಲಿ! ಹ್ಞಂ! ಸೆರೆಯಿಂದ ನಿಮ್ಮನ್ನು ಬಿಟ್ಟುಬಿಟ್ಟೆ. ಇನ್ನಾದರೂ ಸ್ಯಾಂಡ್‌ವಿಚ್ ಸ್ವೀಕರಿಸಿ. ನನಗಂತೂ ಹಸಿವಾಗುತ್ತದೆ. ಜಗದೀಶ ಒಂದು ಕಪ್ ಕಾಫಿ ಕೊಡಲೂ ಬಯಸಲಿಲ್ಲ! ಎಂಥ ಸ್ವಾರ್ಥಿ! ನಾನು ಅವನಿಗೋಸ್ಕರ ಅರ್ಧ ಗ್ಯಾಲನ್ ಪೆಟ್ರೋಲ್ ಖರ್ಚು ಮಾಡಿದೆ! "

ಆ ಕ್ಷಣದಲ್ಲಿ ನಿಜವಾಗಿಯೂ ನನಗೆ ಜಗದೀಶನ ಮೇಲೆ ಕೋಪ ಮೂಡಿತು. ಅವನಾಗ ನನ್ನೆದುರಲ್ಲಿರುತ್ತಿದ್ದರೆ ಒಂದೋ ಅವನು ನನ್ನ ಕೈಯ್ಯಲ್ಲಿ ಸಾಯುತ್ತಿದ್ದ ಇಲ್ಲವೇ ನಾನು ಅವನ ಕೈಯ್ಯಲ್ಲಿ ಸಾಯುತ್ತಿದ್ದೆ.

ನಾನೂ ಸ್ಯಾಂಡ್‌ವಿಚ್ಚನ್ನು ಫೋರ್ಕ್‌ನಲ್ಲಿ ಚುಚ್ಚಿ ಎಳೆ ಎಳೆಯಾಗಿ ಬಾಯಿಗಿಟ್ಟು ಜಗಿಯತೊಡಗಿದೆ. ಆದರೆ ನನ್ನ ಕಣ್ಣುಗಳು ಪದ್ಮಿನಿಯ ಮುಖದಿಂದ ಹೆಚ್ಚು ದೂರ ಸರಿಯಲು ನಿರಾಕರಿಸುತ್ತಿದ್ದುವು. ನಿಜವಾಗಿ ನನಗಿದೊಂದು ಸ್ವಪ್ನದಂತಾಗಿತ್ತು. ಪರೀಕ್ಷೆ, ವಕೀಲಿ ಇತ್ಯಾದಿ ಕೇವಲ ವ್ಯಾವಹಾರಿಕ ವಿಷಯಗಳು ಆಗ ನನ್ನಿಂದ ಅತ್ಯಂತ ದೂರದಲ್ಲಿದ್ದುವು. ಅವನ್ನು ನೆನೆದೊಡನೆ ಈ ಕ್ಷಣಭಂಗುರವಾಗಲಿದ್ದ ಕನಸು ಕೂಡಲೇ ತಿರುಕನ ಕನಸಿನಂತೆ ಅಂತ್ಯವಾಗಬಹುದಿತ್ತು.

ಕಟ್ಲೆಟ್ ಬಂತು. ಅವುಗಳನ್ನು ತಿಂದೆವು. ಆಮೇಲೆ ಕಾಫಿಯ ಕಿಟ್ಲಿ ಬಂತು.

"ಕಾಫಿ ಮಾಡುವುದು ಹೆಣ್ಣಿನ ಕೆಲಸ"

ಎನ್ನುತ್ತ ಆಕೆ ಮೆಲ್ಲನೆ ಸಕ್ಕರೆಯನ್ನು ಚಮಚದಲ್ಲಿ ನನ್ನ ಕಪ್ಪಿಗೆ ಸುರಿದಳು. ನಾನಾಗ ಇನ್ನೊಂದು ಚಮಚವನ್ನು ತೆಗೆದುಕೊಂಡು ಅದರಲ್ಲಿ ಸಕ್ಕರೆಯನ್ನು ಅವಳ ಕಪ್ಪಿಗೆ ಹಾಕಲು ಕೈಯನ್ನು ಮುಂದೆ ಚಾಚುವಾಗ ಅವಳ ಕೈಗೆ ನನ್ನ ಕೈ ತಗಲಿ ಚಮಚ ನನ್ನ ಕೈಯಿಂದ ಮೇಜಿನ ಮೇಲೆ ಬಿದ್ದು ಸಕ್ಕರೆ ಚೆಲ್ಲಿತು.

"ನೋಡಿ ನೀವು ಹೆಂಗಸನ್ನು ಎಷ್ಟೇ ವೀಕರ್ ಸೆಕ್ಸ್ ಎಂದು ಕರೆದರೂ ಚಮಚ ಹಿಡಿಯುವ ಕೈಬೆರಳು ಮಾತ್ರ ಆಕೆಯದು. ಗಂಡಸರದ್ದಕ್ಕಿಂತ ಹೆಚ್ಚು ಬಲವಾದುದು! ಇಲ್ಲವಾದರೆ ನಿಮಗೇಕೆ ಬೇಕಿತ್ತು ಈ ಕೆಲಸ!"

ಎನ್ನುತ್ತ ಚೆಲ್ಲಿದ್ದ ಸಕ್ಕರೆಯನ್ನು ಕರವಸ್ತ್ರದಿಂದ ಬದಿಗೆ ಒರಸಿದಳು. ನನಗೆ ಆಗಿದ್ದ ಅವಳ ಕೈಯ ಸ್ಪರ್ಶಸುಖ ಮಂಕು ಹಿಡಿಸಿತೆನ್ನಬಹುದು. ಏನಾದರೂ ನೆವನ ಹೂಡಿ ಇನ್ನೊಮ್ಮೆ ಅವಳ ಕೈಯ್ಯನ್ನು ಮುಟ್ಟಬೇಕೆಂದು ಮನಸ್ಸು ಉತ್ಕಟೇಚ್ಛೆಯನ್ನು ತಾಳುತ್ತಿತ್ತು.

ಅವಳೇ ಸಕ್ಕರೆ ಸುರಿದು ಮತ್ತೆ ಕಾಫಿಯ ಕಷಾಯವನ್ನು ಸುರಿದಳು. ನಾನು ಮತ್ತೆ ಯಾವುದರ ಗೋಜಿಗೂ ಹೋಗಲಿಲ್ಲ. ಅದರ ಮೇಲೆ ಹಾಲನ್ನು ಸೇರಿಸಿಯಾಯಿತು. ಅವಳ ಕಪ್ಪನ್ನು ಆಮೇಲೆ ಚಮಚದಲ್ಲಿ ಚೆನ್ನಾಗಿ ಕುಲುಕಿಸಿ ಕಾಫಿಯ ರುಚಿ ನೋಡಿದಳು.

"ಈಲಿಯಟ್ ನುಡಿದಿದ್ದನಲ್ಲ! ಕಾಫಿ ಚಮಚದಲ್ಲಿ ಜೀವನವನ್ನು ಅಳೆಯುವುದೆಂದು?"

ನಾನು ತುಂಬಾ ಯೋಚನಾಪರನಾದಂತೆ ನಟಿಸುತ್ತ ಗಂಭೀರವಾಗಿ, "ಈಲಿಯಟ್ ಪದ್ಮಿನಿಯೊಬ್ಬರ ಜೀವನವನ್ನು ಮಾತ್ರ ಅಳೆಯಬೇಕು, ನನ್ನ ಕಾಫಿ ಚಮಚದಿಂದ ನನ್ನ ಜೀವನವನ್ನು ಅಳೆಯಬಾರದು ಎಂದಿರುವನೆ?" ಎಂದೆ.

" ನಿಮ್ಮ ಈ ಸಮಸ್ಯೆ ನನಗೆ ಅರ್ಥವಾಗದಪ್ಪ! "

"ಅರ್ಥವಾಗದೆ? " ನಾನು ನಸುನಗುತ್ತ ಅವಳನ್ನೇ ನೋಡಿದೆ. ಅವಳೂ ನನ್ನನ್ನು ಜಿಜ್ಞಾಸೆಯಲ್ಲಿ ನೋಡಿದಳು. ನಾನೇನೋ ಮಹತ್ವದ ಹೇಳಿಕೆಯೊಂದನ್ನು ಮಂತ್ರಿಗಳು ನೀಡುವಂತೆ ಅಗಲೇ ನೀಡಲಿರುವೆ ಎಂದು ಆಕೆ ಭಾವಿಸಿದಳೋ ಏನೋ!

"ಅಲ್ಲ, ಇಂದು ನಿಮಗೇನಾಗಿದೆ? ಬೈರಾಗಿಯ ವೇಷ ಹಾಕಿಕೊಂಡಿದ್ದೀರಾದರೂ ಮನಸ್ಸು ಉಬ್ಬಿಹೋದಂತಿದೆ!"

"ಅಲ್ಲ ನೀವು ಕೇವಲ ನಿಮ್ಮ ಕಪ್ಪಿನಲ್ಲಿದ್ದ ಸಕ್ಕರೆಯನ್ನು ಮಾತ್ರ ಕಲಸಿದಿರಿ. ನನ್ನದನ್ನು ಹಾಗೆಯೇ ಬಿಟ್ಟುಬಿಟ್ಟಿರಿ. ಕಾಫಿ ತಯಾರಿಸುವುದು ನಿಮ್ಮ ಧರ್ಮವೆಂದು ಸಾರಿ ಹೀಗೆ ಸಕ್ಕರೆಯ ಕೈ ಬಿಡುವುದೇ? "

"ಇನ್ನು ಹೀಗೇ ಮುಂದರಿದರೆ ನಿಮ್ಮ ಕಾಫಿಯನ್ನೂ ನಾನೇ ಕುಡಿಸಬೇಕೆನ್ನುವಿರೋ ಏನೋ! "

ಎಂದು ಸಕ್ಕು ನನ್ನ ಕಪ್ಪಿನೊಳಗೆ ಚಮಚೆ ಹಾಕಿ ಕುಲುಕಿಸಿದಳು. ನಾನವಳ ಕೈಯನ್ನೇ ನೋಡುತಿದ್ದೆ. ಅವಳು ಒಂದು ಚಮಚ ಕಾಫಿಯನ್ನು ತೆಗೆದು ನನ್ನ ಬಾಯಿಯತ್ತ ತಂದಳು. ನಾನು ಬಾಯಿ ತೆರೆದೆ. ಅವಳು ಚಮಚದಲ್ಲಿದ್ದುದನ್ನು ಸುರಿದಳು.

"ಸಿಹಿ ಸಾಕೆ? "

ನಾನು ಬಾಯಿ ಚಪ್ಪರಿಸುತ್ತ "ಸಾಕಪ್ಪ!" ಎಂದು ಉದ್ಗರಿಸಿದೆ.

"ಅಂತೂ ನಿಮ್ಮನ್ನು ನಾನು ಕರೆದು ತಂದುದಕ್ಕಾಗಿ ನನ್ನಿಂದ ಎಲ್ಲ ಕೆಲಸವನ್ನೂ ಮಾಡಿಸಿದಿರಿ. "

"ಅದಕ್ಕೇ ವೀಕರ್ ಸೆಕ್ಸ್ ಎನ್ನೋದು. ಕೇವಲ ಬೆರಳುಗಳ ಶಕ್ತಿ-ಗಾಗಿ ಅಲ್ಲ. ನೋಡುವ ನಾನಾಗುತಿದ್ದರೆ ಹೀಗೆ ನನಗೆ ಅನುರಾಗವಿಲ್ಲದ ಹೆಂಗಸೊಬ್ಬಳ ಬಾಯಿಗೆ ಕಾಫಿ ಹೊಯ್ಯುತಿದ್ದೆನೆ? "

"ಆದರೆ ಅನುರಾಗವಿದ್ದ ಹೆಂಗಸಿನ ಪಾದಪೂಜೆಯನ್ನು ಕೂಡಾ ಮಾಡಬಲ್ಲಿರಿ, ಅಲ್ಲವೆ? ಈಗ ಸುಮ್ಮನೆ ಈ ಅನುರಾಗದ ಪ್ರಶ್ನೆಯನ್ನೇಕೆ ಎತ್ತಿದಿರಿ? ಆದಾಗ್ಯೂ ನಿಮ್ಮ ಮೇಲೆ ನನಗೆ ಅನುರಾಗವಿಲ್ಲವೆಂದವರಾರು?"

"ಒಂದು ಉಸುರಿನಲ್ಲಿ ನಾನು ಬೈರಾಗಿಯಂತಿದ್ದೇನೆನ್ನುತಿದ್ದೀರಿ. ಇನ್ನೊಂದು ಉಸುರಿನಲ್ಲಿ ನನ್ನ ಮೇಲೆ ಅನುರಾಗವಿದೆ ಎನ್ನುತ್ತೀರಿ! ಎಲ್ಲ ನಿಮ್ಮ ನಾಲಿಗೆಯ ಅನುಗ್ರಹ!"

ಅವಳು ನಸುನಕ್ಕು ಕಾಫಿ ಚೀಪಿದಳು. ನಾನು ಬಳಬಳನೆ ಅದನ್ನು ಕುಡಿದು ಕಪ್ಪನ್ನು ಕೆಳಗಿಟ್ಟೆ.

"ಪಾಪ! ನನ್ನ ಡ್ರೈವರ್! ಮರೆತೇಬಿಟ್ಟೆ! ಅವನನ್ನು ಮನೆಗೆ ಹೋಗಲಿಕ್ಕಾದರೂ ಹೇಳುತ್ತಿದ್ದೆ. ಆದರೆ ಇಲ್ಲಿ ಇಷ್ಟು ಹೊತ್ತು ನಾವಿಬ್ಬರೂ ಕಳೆಯುವೆವೆಂದು ನಾ ಭಾವಿಸಿರಲಿಲ್ಲ. ಅದೂ ಬೈರಾಗಿಯೊಡನೆ ಹ್ಹ!ಹ್ಹ!ಹ್ಹ!"

"ಇಂಥ ಶ್ರೀಮಂತ ಸೌಂದರ್ಯವತಿಯೊಡನೆ ನಾನಿರುವುದನ್ನು ಕಂಡು ಇಲ್ಲಿಂದಲೇ ಪೋಲೀಸರು ನನ್ನನ್ನು ಒಯ್ಯಬಹುದೋ ಏನೋ ಎಂದು ನಾನು ಅಂಜಿದೆ."

"ನನಗೆ ಗೊತ್ತು. ನಿಮ್ಮನ್ನು ನೀವೇ ಹೀಯಾಳಿಸಿಕೊಳ್ಳುವುದು ನಿಮ್ಮ ಸ್ವಭಾವವೇ. ಆ ಸ್ವಭಾವದ ಮೂಲಕವೇ ನೀವು ಮೋನಿಕಾಳನ್ನು ಹೆದರಿಸಿದುದೆಂದು ನನಗೆ ಗೊತ್ತಿದೆ. ಅವಳ ಮನೆಗೆ ಚಹ ಕುಡಿಯಲು ಹೋಗಲೊಪ್ಪಿ ಅಲ್ಲಿ ಬಾಗಿಲ ಬಳಿಗೆ ತಲುಪುತ್ತಲೇ ನೀವು ಏನೋ ನೆವನ ಹೇಳಿ ಅಲ್ಲಿಂದ ಹಿಂದೆ ಓಡಿಹೋದ ಕತೆ ನನಗೆ ಗೊತ್ತಿಲ್ಲವೆಂದು ಭಾವಿಸಿರುವಿರಾ? ಆ ಸ್ಫುರದ್ರೂಪಿ ಮೋನಿಕಾ ಎಲ್ಲಿ? ನಾನೆಲ್ಲಿ? ಬೇರೆಲ್ಲ ಅನುಕೂಲವಿರುತ್ತಿದ್ದರೆ ನಾನು ಎಂದೋ ನನ್ನನ್ನು ಮದುವೆಯಾಗಬೇಕೆಂದು ನಿಮ್ಮನ್ನು ಬೇಡುತ್ತಿದ್ದೆ, ಕಾಡುತ್ತಿದ್ದೆ."

"ಮತ್ತೆ ಕಿಟ್ಟು" ಎಂಬ ಮಾತು ನಾಲಿಗೆ ತುದಿಯವರೆಗೆ ಬಂದುದು ಹಿಂದಕ್ಕೇ ಹೋಯಿತು ಕನಸನ್ನು ಒಡೆದುಹಾಕಲು ನಾನು ಸಿದ್ಧನಿರಲಿಲ್ಲ.

ಪದ್ಮಿನಿ ನನ್ನ ಕೈಯ್ಯ ಮೇಲೆ ತನ್ನ ಕೈಯ್ಯನ್ನಿಟ್ಟು ನನ್ನನ್ನೇ ತುಸು ಹೊತ್ತು ನೋಡಿದಳು. ನಾನು ಅವಳ ಅಂಗೈಯನ್ನು ಹಿಂಡಿದೆ.

"ಒಂದು ಲೆಕ್ಕದಲ್ಲಿ ನಿಮ್ಮಂಥವರನ್ನು ನಾನು ವರಿಸದಿದ್ದುದೇ ಮೇಲಾಯಿತು. ನಿಮ್ಮನ್ನು ಮದುವೆಯಾಗುತಿದ್ದರೆ ನಾವಿಬ್ಬರು ಬರೇ ಮಾತಾಡುವ ರೋಗದಿಂದಲೇ ಕ್ಷಯರೋಗಿಗಳಂತೆ ನಿಶ್ಶಕ್ತರಾಗುತ್ತ ಬಂದು ಸಾಯಲಿಕ್ಕಿತ್ತೋ ಏನೋ!"

"ಅಷ್ಟು ಮಾತಾಡಲಿಕ್ಕೆ ವಿಷಯ ಬೇಕಲ್ಲ?"

"ಒಹ್! ವಿಷಯಕ್ಕೇನು ಕಡಿಮೆ? ಈಗ ನಾವು ಏನಾದರೂ ಒಂದು ವಿಷಯನಿಯಾಮಕ ಪಟ್ಟಿಯ ಆಧಾರದಲ್ಲಿ ಮಾತಾಡಿದೆವೆ?"

ಅಷ್ಟರಲ್ಲಿ ಬಿಲ್ ಬಂತು.

"ಹೊ ಮರೆತೆ!" ಎಂದು ಪದ್ಮಿನಿ ಹುಬ್ಬುಗಂಟಿಕ್ಕಿದಳು. "ಎರಡು ಚಾಕ್ಲೇಟ್ ಐಸ್‌ಕ್ರೀಂ."

ನನ್ನ ಹೋದ ಜೀವ ಬಂದಂತಾಯಿತು. ಇನ್ನು ಸ್ವಲ್ಪ ಸಮಯ ಅವಳ ಸಹವಾಸಕ್ಕೆ ತೊಂದರೆಯಿಲ್ಲ.

"ಅಂದಹಾಗೆ, ನೀವು ಪಾಮಿಸ್ಟ್ ಅಲ್ಲವೆ? ನನ್ನ ಕೈಯ್ಯನ್ನು



"...ನನ್ನ ಕೈಯನ್ನು ನೋಡಿ" ಎಂದು ಪದ್ಮಿನಿ ತನ್ನ ಕೈಗಳನ್ನು ನನ್ನ ಕೈಗಳ ಮೇಲಿಟ್ಟಳು.

ನೋಡಲು ಮಾತ್ರ ಸದಾ ನಿರಾಕರಿಸುತಿದ್ದೀರಿ. ನಮ್ಮ ಪ್ರೊಫೆಸರರು ಕೂಡಾ ಮಹಾಸಾಮುದ್ರಿಕ ಎಂದು ಪ್ರಶಂಸಿಸುತಿದ್ದರಲ್ಲ? ನೋಡುವ ಐಸ್ ಕ್ರೀಂ ಬರುವತನಕ ನನ್ನ ಕೈಯನ್ನು ನೋಡಿ,"

ಎಂದು ಆಕೆ ತನ್ನ ಎರಡು ಕೈಗಳನ್ನೂ ನನ್ನ ಕೈಗಳಮೇಲಿಟ್ಟಳು.

"ಇಷ್ಟು ಅವಸರದಲ್ಲಿ ಅದು ಸಾಧ್ಯವೆ? ಅದಕ್ಕೆ ತುಂಬಾ ಯೋಚಿಸಬೇಕು."

"ಆಗಲಿ, ಐಸ್ ಕ್ರೀಂ ಬರುವ ವರೆಗೆ ನೋಡಿ. ಮತ್ತೆ ಇನ್ನೊಂದು ದಿನ ನೋಡೋಣ."

ನಾನು ಅವಳ ಅಂಗೈಗಳನ್ನು ಸ್ವಲ್ಪ ತಿಕ್ಕಿ ಮುಖ್ಯವಾದ ಗೆರೆಗಳನ್ನು ಸ್ವಲ್ಪ ಹೊತ್ತು ಪರಿಶೀಲಿಸಿದೆ. ನಿಜವಾಗಿ, ನಾನುಕೈ ನೋಡುವ ಹುಚ್ಚನ್ನು ಎಂದೋ ಕಳೆದುಕೊಂಡಿದ್ದೆ. ಅಂಗೈ ತೋರಿಸಿ ಅವಲಕ್ಷಣ ಹೇಳಿಸಿಕೊಳ್ಳಲು ಹೆಚ್ಚಿನವರು ಉತ್ಸುಕರಾಗಿದ್ದರೂ ನನಗೇ ಕ್ರಮೇಣ ಅದರಲ್ಲಿ ಏಕೋ ಜಿಗುಪ್ಸೆ ಬಂದಿತ್ತು.

"ನಿಮಗೆ ಆಯುಷ್ಯ ಐವತ್ತಕ್ಕೆ ಕಡಿಮೆಯಿಲ್ಲ. ಆದರೆ ನಿಮ್ಮ ಚಂದ್ರಪರ್ವ ಮತ್ತು ಶುಕ್ರಪರ್ವಗಳು ಬಹಳ ಸಮಸ್ಯಾತ್ಮಕವಾದವುಗಳು. ಇಂಥ ಚಂದ್ರಪರ್ವವನ್ನು ನಾನು ನಿಜವಾಗಿಯೂ ಈತನಕ ಕಂಡಿಲ್ಲ. ಅದರ ಮೇಲೆ ಜ್ಞಾನರೇಖೆ ಹರಿಯುವುದು ಅಷ್ಟು ಒಳ್ಳೆಯದಲ್ಲ. ಏಕೆಂದರೆ ನಿಮ್ಮ ಪ್ರೇಮಜೀವನ..."

"ಅಥವಾ ಕಾಮಜೀವನ?"

"ನಾ ಹೇಳುವಾಗ ಅಡ್ಡ ಬರಬೇಡಿ. ನಿಮ್ಮ ಪ್ರೇಮಜೀವನ ಅತ್ಯಂತ ಕ್ಲಿಷ್ಟಕರವಾದುದು. ನಿಮ್ಮ ಗಂಡ ನಿಮ್ಮನ್ನು ಸಂಪೂರ್ಣ ಪ್ರೀತಿಸಿಯಾನೆಂದು ಹೇಳಲಾಗದು. ಶುಕ್ರಪರ್ವದಲ್ಲಿರುವ ಗೆರೆಗಳೂ ಇದನ್ನೇ ಸಮರ್ಥಿಸುತ್ತವೆ. ಸಂಶಯಪ್ರವೃತ್ತಿಯೇ ನಿಮ್ಮಲ್ಲಿರುವ ಮಹತ್ವದ ದೋಷ. ಸಂಶಯ ಎಲ್ಲವನ್ನೂ ಆಹುತಿ ತೆಗೆದುಕೊಳ್ಳುತ್ತದೆ. ಅದೂ ಬರೇ ಸಂಶಯವಲ್ಲ; ಮತ್ಸರಯುಕ್ತವಾದ ಸಂಶಯ ಇಲ್ಲವೇ ಸಂಶಯಯುಕ್ತವಾದ ಮತ್ಸರ. ಈ ಶುಕ್ರಮಂಡಲ ಚಿಹ್ನೆ ಮಾತ್ರ ನಿಮ್ಮ ಕೈಗೆ ಒಳ್ಳೆಯದು. ಅದೃಷ್ಟ ನಿಮ್ಮ ಕೈ ಬಿಡುವುದಿಲ್ಲ" ಎಂದು ನಾನು ಮಾತು ಮುಗಿಸಿದೆ.

"ನಿಮ್ಮದು ಹೇಳೋದು ಮುಗಿಯಿತೆ ? ಇನ್ನು ನಾನೊಂದೆರಡು ಪ್ರಶ್ನೆ ಕೇಳಲೆ?"

"ಪರವಾಯಿಲ್ಲ."

"ಸರಿ. ನನಗೆ ಮದುವೆ ಯಾವ ವಯಸ್ಸಿಗೆ ಆಗುತ್ತದೆ?"

ನಾನು ಆಯುಷ್ಯರೇಖೆಯನ್ನು ತೀಡಿ ಒತ್ತಿ ಹಿಡಿದೆ.

"ಈಗ ಇಪ್ಪತ್ತನಾಲ್ಕಲ್ಲವೆ?"

"ಹೌದು!" ಎಂದು ಕುತೂಹಲದಲ್ಲಿ ಉದ್ಗರಿಸಿದಳು. "ನಿಮಗೆ ಹೇಗೆ ಗೊತ್ತು? ಕಳೆದ ತಿಂಗಳಲ್ಲಿ ನನ್ನ ಜನ್ಮದಿನ ಕಳೆಯಿತು!"

"ಅವಸರಪಡಬೇಡಿ. ಅದೊಂದು ಕೇವಲ ಚಮತ್ಕಾರ. ಅದು ಸತ್ಯವಾಗಬೇಕಾದರೆ ಭವಿಷ್ಯವಾದಿಗೂ ಅದೃಷ್ಟ ಬೇಕೆನ್ನಿ. ಈಗ, ಮದುವೆ ನಿಮಗೆ ಇನ್ನು ಎರಡು ವರ್ಷಗಳಲ್ಲಿ ಆಗುವ ಸಂಭವವಿದೆ."

"ಸಂಭವ? ಅಂದರೆ ಆಗೋದಿಲ್ಲವೆಂದೇ?"

"ಆಗುತ್ತದೆ. ಸಂಭವವೆಂದರೆ ಆಗ ಮದುವೆಗೆ ನೀವು ಸಿದ್ಧರಾಗುತ್ತೀರಿ. ಅರ್ಥವಾಯಿತಲ್ಲ?"

ಆಕೆ ಸ್ವಲ್ಪ ಕಾಲ ಕಳವಳಗೊಂಡವಳಂತೆ ನನ್ನನ್ನೇ ನೋಡುತ್ತ ನನ್ನ ಕೈಯ್ಯನ್ನು ಬಿಗಿಯಾಗಿ ಹಿಡಿದಳು. ವೈಟರ್ ಐಸ್ ಕ್ರೀಂನ್ನು ತಂದಾಗಲೂ ಆಕೆ ನನ್ನ ಕೈಬಿಡಲಿಲ್ಲ. ಹೀಗೆಯೇ ಏಳೆಂಟು ನಿಮಿಷಗಳು ಕಳೆದುವು. ಐಸ್ ಕ್ರೀಂ, ವಾಟರ್ ಕ್ರೀಂ ಆಗಿ ಪರಿವರ್ತನೆಗೊಳ್ಳುತ್ತಿತ್ತು. ಆದರೆ ಇದು ನನಗೆ ನನ್ನ ಕನಸಿನ ರಾಜ್ಯದ ಪಟ್ಟಾಭಿಷೇಕ ದೃಶ್ಯದಂತಾಗಿತ್ತು.

ಮತ್ತೆ ನಿಟ್ಟುಸಿರು ಬಿಡುತ್ತ ಆಕೆ ಎರಡು ಚಮಚ ಐಸ್ ಕ್ರೀಂ ಮನಸ್ಸಿಲ್ಲದ ಮನಸ್ಸಿನಲ್ಲಿ ಬಾಯಿಗೆ ಇಟ್ಟಳು. ನನಗೆ ಒಂದೇ ಚಮಚ ಸಾಕಾಯಿತು. ಆದರೂ ಕಪ್ಪಿನಲ್ಲಿ ಅದನ್ನು ಅತ್ತಿತ್ತ ಕದಡುತ್ತ ಕುಳಿತೆ.

ಕೊನೆಗೆ ವ್ಯಾನಿಟಿ ಬ್ಯಾಗನ್ನು ಹಿಡಿದುಕೊಂಡು ಆಕೆ ಎದ್ದಳು. ನಾನೂ ಎದ್ದೆ. ಕೊನೆಯ ಬಾರಿಯೊಮ್ಮೆ ಆಕೆಯ ಕೈಯನ್ನು ಮುಟ್ಟಬೇಕೆಂಬ ನನ್ನ ಆಸೆ ಕ್ಷಣ ಕಾಲ ಮಿಂಚಿ ಮಾಯವಾಯಿತು.

ಕಾರಿನಲ್ಲಿ ನನ್ನನ್ನು ಕಿಟ್ಟುವಿನ ಮನೆಯ ಮುಂದೆ ಇಳಿಸಿದಳು.

"ಇಲ್ಲಿಯೇ ಇರುವಿರಾ?"

"ಮೂರು ವಾರ" ಎಂದೆ.

ಅವಳು ಮೌನವಾಗಿ ಮುಂದರಿದಳು. ನಾನು ಅವಳ ಕಾರು ಕಣ್ಮರೆಯಾಗುವ ವರೆಗೂ ರಸ್ತೆಯ ಬದಿಯಲ್ಲೇ ನಿಂತೆ. ಹಿಂತಿರುಗಿ ನೋಡುವಾಗ ಕಿಟ್ಟುವಿನ ಹೆಂಡತಿ ಶಶಿಕಲ ಕಿಟಕಿಯಿಂದ ಹೊರಗೆ ನೋಡುತ್ತ ನಿಂತುಕೊಂಡದ್ದು ನನ್ನ ಕಣ್ಣಿಗೆ ಬಿತ್ತು. ಪದ್ಮಿನಿಯನ್ನು ಆಕೆ ನೋಡಿರಬೇಕೆಂಬುದರಲ್ಲಿ ಸಂಶಯವಿರಲಿಲ್ಲ.

ಮರಳಿ ಕೋಣೆ ಸೇರಿದಾಗ ತಾನೇ ನನಗೆ ಪದ್ಮಿನಿಯ ಅಮಲು ಇಳಿದುದು. ಅಷ್ಟು ಕಾಲ ಒಟ್ಟಿಗಿದ್ದರೂ ಅವಳು ನಾನೇನು ಮಾಡುತಿದ್ದೇನೆ ನಾನೇಕೆ ಬಂದಿದ್ದೇನೆ ಎಂಬುದನ್ನಾಗಲೀ ಕೇಳದಿದ್ದುದು, ತಾನೇನು ಮಾಡುತಿದ್ದೇನೆಂಬುದನ್ನಾಗಲೀ ಹೇಳದಿದ್ದುದು ನನ್ನ ಗಮನಕ್ಕೆ ಆಗ ಬಂತು. ಕೂಡಲೇ, ಆಕೆ ಎಂಥ ಸ್ವಾರ್ಥಿ ಎಂದೂ ಶಪಿಸಿಯೂ ಶಪಿಸಿಬಿಟ್ಟೆ. ಮನಸ್ಸು ಇನ್ನೂ ತಿಳಿಯಾದಾಗ ನನ್ನ ಉತ್ಸಾಹ ಇಳಿದುಹೋಯಿತು. ಅದರ ಬದಲು ಜೀವನದ ವೈಫಲ್ಯದ ಬೃಹದಾಕಾರದ ಪ್ರಶ್ನೆ ನನ್ನ ಮುಂದೆ ಬೇತಾಳದಂತೆ ನಿಂತಿತು. ಅದನ್ನೋಡಿಸುವ ಭ್ರಮೆಯಲ್ಲಿ ಸಿಗರೇಟನ್ನು ಉರಿಸಿ ಅಂದಿನ ಪತ್ರಿಕೆಯನ್ನು ತೆರೆದೆ.

೬

ಮನಸ್ಸು ಪಳಗಬೇಕಾದರೆ ಅಪಾಯ ಸನ್ನಿಹಿತವಾಗಬೇಕೆಂಬುದು ನನ್ನ ಅನುಭವವಾಗಿತ್ತು. ಪರೀಕ್ಷೆಗೆ ವರ್ಷಾರಂಭದಿಂದಲೇ ಓದೋಣ ಎಂದರೆ ಆಗ ಮನಸ್ಸು ಒಪ್ಪದು. ಆದರೆ ಪರೀಕ್ಷೆ ನಾಳೆ ಇದೆ ಎಂದೊಡನೆ ಇಂದು ಓದಿದ್ದೆಲ್ಲ ನೆನಪಿನಲ್ಲಿ ಅಂಟಿಕೊಳ್ಳುವುದು. ನಿದ್ದೆ, ವಿಶ್ರಾಂತಿಗಳನ್ನು ಪಡೆಯುವ ಇಚ್ಛೆಯೂ ಆಗ ಇರದು. ಇಚ್ಛೆ ಬಂದಷ್ಟು ಸಲ ತಿನ್ನುವ, ಕುಡಿಯುವ ಅಭ್ಯಾಸ ಆಗ ಕುಂಠಿತವಾಗುವುದು. ಏನೋ

ಹಿಂದೆ ಅಪರೂಪವಾಗಿ ಸೇದುತಿದ್ದ ಸಿಗರೇಟುಗಳ ಸಂಖ್ಯೆ ಏರಬಹುದಿತ್ತು ಅಷ್ಟೆ. ಆದರೆ ಆಗಿನ ವಿಷಯಗಳಲ್ಲಿ ಮನಸ್ಸು ಆಗ ಗ್ರಹಣಶಕ್ತಿಯು ಉತ್ಕೃಷ್ಟಾವಸ್ಥೆಗೇರುತ್ತಿತ್ತು. ಎಂದೂ ಓದಿಗೆ ಮಿಕ್ಕ ತರಹ ಪತ್ರಿಕೆಗಳನ್ನು ಕೂಡಾ ಆಗ ಮುಟ್ಟಲು ಇಚ್ಛೆಯಾಗುತ್ತಿರಲಿಲ್ಲ.

ನನ್ನ ಅಭ್ಯಾಸದ ಹಿನ್ನೆಲೆಯೇ ಹಾಗಿತ್ತು. ಹೈಸ್ಕೂಲಿಗೆ ಹೋಗುತಿದ್ದಾಗ ನನಗೆ ಮನೆಗೆಲಸದಿಂದಾಗಿ ಹಗಲಲ್ಲಿ ಹೆಚ್ಚಾಗಿ ಓದಲು ಅವಕಾಶ ಸಿಗುತಿದ್ದಿಲ್ಲ. ಚಿಕ್ಕಂದಿನಿಂದ ಕ್ರಮವಾಗಿ ಪಾಠಗಳನ್ನು ಅಭ್ಯಸಿಸುತ್ತ ಬರುವ ಅಭ್ಯಾಸ ಹೀಗಾಗಿ ನನ್ನ ಕೈಬಿಟ್ಟಿತ್ತು. ಮುಂಜಾನೆ ಎಳೋದು, ಪೇಟೆಗೋ ಸಂತೆಗೋ ಹೋಗೋದು, ಸರಕೋ ಸಾಮಾನೋ ತರೋದು, ಮನೆಗೆ ಸಂಬಂಧಿಸಿದ ಲೆಕ್ಕಗಳನ್ನು ಬರೆದಿಡೋದು, ಸಾಲಗಾರರನ್ನು ಹುಡುಕೋದು, ಅವರ ಚಲನವಲನಗಳ ಬಗ್ಗೆ ವರದಿ ಮಾಡೋದು, ಮತ್ತು ಬಿಡುವಿದ್ದರೆ ಮನೆಯವರ ಮಕ್ಕಳನ್ನು ಆಡಿಸುವುದು, ಅವರನ್ನು ಹೇಗಾದರೂ ಕೂಗದಂತೆ ನೋಡಿಕೊಳ್ಳುವುದು-ಇತ್ಯಾದಿಗಳೇ ನನ್ನ ಮುಖ್ಯ ಕೆಲಸವಾಗಿದ್ದುವು. ಈ ಮಧ್ಯೆ ಪುಸ್ತಕಗಳನ್ನು ಓದುವ ಹವ್ಯಾಸವೂ ಬೆಳೆಯುತ್ತಿತ್ತು. ಶಾಲೆಯ ಗ್ರಂಥಭಾಂಡಾರದಿಂದ ವಾರಕ್ಕೆರಡು ಪುಸ್ತಕಗಳು ದೊರೆಯುತಿದ್ದುವು. ಸರ್ವಾಂಟಿಸ್‌ನ ಡಾನ್ ಕ್ವಿಕ್ಸೋಟ್, ಸ್ಕಾಟನ ವೇವರ್ಲಿ ಕಾದಂಬರಿಗಳು, ಡಿಕನ್ಸ್‌ನ ಪಿಕ್‌ವಿಕ್ ಪೇಪರ್ಸ್, ಗೋಲ್ಡ್‌ಸ್ಮಿತ್ತನ ವಿಕಾರ್ ಆಫ್ ವೇಕ್‌ಫೀಲ್ಡ್ ಮತ್ತು ಕಾನನ್‌ಡ್ಯಾಲನ ಶರ್ಲಕ್ ಹೋಮ್ಸ್-ಇಂಥ ಕೃತಿಗಳನ್ನು ರಾತ್ರಿ ಎಲ್ಲರೂ ಮಲಗಿದ ಬಳಿಕ ಓದಲು ಆರಂಭಿಸಿದರೆ ಮತ್ತೆ ಬೆಳಗಾಗುವುದೇ ತಿಳಿಯುತ್ತಿದ್ದಿಲ್ಲ. ಕಾರಂತ, ಕೃಷ್ಣರಾಯ, ವೆಂಕಟೇಶಾಚಾರ್ಯ, ಗಳಗನಾಥ ಇವರ ಕಾದಂಬರಿಗಳನ್ನು ಒಂದು ರಾತ್ರಿಯಲ್ಲಿ ಎರಡು-ಮೂರನ್ನೂ ಓದಿ ಮುಗಿಸಿದುದಿತ್ತು. ನಾನಿದ್ದ ಮನೆಯಲ್ಲಿ ದೀಪ ಉರಿಸುವುದರ ವಿರುದ್ಧ ನಿರ್ಬಂಧವಿದ್ದುದರಿಂದ ನಾನು ಈ ಓದಿಗಾಗಿ ಮನೆಯ ಹಿಂಭಾಗದ ಅಟ್ಟದ ಮೆಟ್ಟಲಲ್ಲಿ ಒಂದು ಚಿಮಣಿ ದೀಪವನ್ನು ಇಟ್ಟುಕೊಂಡು ಕುಳಿತೇ ಓದಬೇಕಾಗುತ್ತಿತ್ತು. ಅಲ್ಲಿ ಕಾಲು ಚಾಚಲು ಎಡೆಯಿಲ್ಲದ್ದರಿಂದ ನಿದ್ದೆ ಕೂಡಾ ಕುಳಿತಲ್ಲೇ ನನಗೆ ಬಂದುಬಿಡುತಿತ್ತು. ಹೀಗೆ ಅವಿರತವಾಗಿ ಓದುವ ಅಭ್ಯಾಸವನ್ನು ನಾನು ಸಿದ್ಧಿಸಿದ್ದುದರಿಂದಲೆ ನಾನು ಪರೀಕ್ಷೆಗಳನ್ನು ಎದುರಿಸಲು ಹೆದರುತಿದ್ದಿಲ್ಲ. ವಿಷಯ ಎಷ್ಟು ವಿಸ್ತೃತವಾಗಿದ್ದರೂ ನನಗೆ ನಿರಾಶಾವಾದ ಉಂಟಾಗುತ್ತಿರಲಿಲ್ಲ. ಮ್ಯಾಟ್ರಿಕ್ಯುಲೇಶನ್ ಕುಳಿತುಕೊಳ್ಳುವ ವರ್ಷ ನನಗೆ ವಿಷಮಜ್ವರದಿಂದಾಗಿ ಎರಡೋ ಮೂರೋ ತಿಂಗಳು ಶಾಲೆಗೆ ಹೋಗಲಾಗಲಿಲ್ಲ. ಪರೀಕ್ಷೆ ಆರಂಭವಾಗುವ ವಾರದಲ್ಲೇ ನಾನು ಹಳ್ಳಿಯ ನನ್ನ ಸಂರಕ್ಷಕರಲ್ಲಿಂದ ಹಿಂತಿರುಗಿದ್ದೆ. ಆದರು ಕೂಡಾ ಆ ಬಾರಿಯ ಪರೀಕ್ಷೆ ನನಗೆ ಕಷ್ಟವಾಗಲಿಲ್ಲ. ಏಕೆಂದರೆ ಆ ಒಂದು ವಾರದಲ್ಲಿ ನನಗೆ ರಾತ್ರಿ ನಿದ್ದೆಯೇ ಇರಲಿಲ್ಲ. ಎಲ್ಲ ಬಿಟ್ಟು ಕಂಠಪಾಠ ಮಾಡಬೇಕಾಗಿದ್ದ ಕನ್ನಡ ಮತ್ತು ಇಂಗ್ಲಿಷ್ ಪದ್ಯಗಳು ಪರೀಕ್ಷೆಯ ಹಿಂದಿನ ರಾತ್ರಿ ಅಲ್ಪವಿರಾಮ, ಪೂರ್ಣವಿರಾಮಗಳೊಡನೆ ಕಂಠಗತವಾಗಿದ್ದುವು! ನಿಜವಾಗಿಯೂ ಕೇಂದ್ರೀಕೃತ ಮನಸ್ಸಿಗಿದ್ದ ಅದ್ಭುತ ಶಕ್ತಿಯನ್ನು ಅಂದು ನಾನು ಕಂಡು ಚಕಿತನಾಗಿದ್ದೆ. ಮತ್ತೆ ನಾಲ್ಕು ವರ್ಷ ಮನೆಯಲ್ಲಿದ್ದು ಕಾಲೇಜಿಗೆ ಸೇರುವಾಗ ಇಂತೂ ವಿದ್ಯಾರ್ಥಿಗಳಲ್ಲಿರಬೇಕಾದ ಶಿಸ್ತಿನ ಓದಿನ ಅಭ್ಯಾಸ, ಪ್ರಾಧ್ಯಾಪಕರ ನೆರವು ಪಡೆದು ಪಾಠಗಳನ್ನು ಕಲಿಯುವುದೇ ಮುಂತಾದ ಸದ್ಗುಣಗಳು ನನ್ನಿಂದ ಸಂಪೂರ್ಣವಾಗಿ ಮಾಯವಾಗಿದ್ದುವು.

ಈಗಲಾದರೂ ಪರೀಕ್ಷೆಯು ಬೇಗೆ ತಾಗುತಿದ್ದಂತೆ, ಹಿಂದೂ ಶಾಸನ, ಪುರಾವೆ ಕಾಯಿದೆ, ರಾಜ್ಯಾಂಗ ಕಾಯಿದೆ, ಅಪರಾಧ ಶಾಸನ-ಇತ್ಯಾದಿ ಅಪಾರವಾದ ವಿಷಯಗಳು ಸುಲಭವಾಗಿ ನನ್ನ ಕರಗತವಾಗತೊಡಗಿದ್ದುವು. ನನ್ನ ಮನೋಸ್ಥೈರ್ಯವನ್ನು ಕಂಡು ನನಗೇ ಅಚ್ಚರಿಯಾಗುತ್ತಿತ್ತು. ಕಿಟ್ಟುವಿಗೂ ನಾನು ಹೆಚ್ಚಾಗಿ ಕಾಣಸಿಗುತ್ತಿರಲಿಲ್ಲ. ಹೋಟೇಲಿಗೆ ಹೋದರೂ ಅಲ್ಲಿ ನನ್ನ ಸ್ನೇಹಿತರಾದ ಒಡೆಯರ ಕಣ್ಣು ತಪ್ಪಿಸಿಕೊಂಡೇ ಹೊರಬೀಳುತಿದ್ದೆ. ಪತ್ರಿಕೆಗಳನ್ನು ಖರೀದಿ ಮಾಡೋದು ನಿಂತು ಹೋಯಿತು. ಆರ್ಘ ಮೈಲಿನೊಳಗಿದ್ದ ಕೊನ್ನೆಮಾರಾ ಲೈಬ್ರರಿಯನ್ನು ಸಂದರ್ಶಿಸುವ ಪ್ರಲೋಭನವನ್ನು ಯಶಸ್ವಿಯಾಗಿ ಹತ್ತಿಕ್ಕಿದ್ದೆ.

ಒಂದು ದಿನ ಬೆಳಗ್ಗೆ ನಾನು ಓದುತಿದ್ದಂತೆ ಹೊರಗೆ ದಢಾರನೆ ಬಿದ್ದ ಸದ್ದು ಕೇಳಿತು. ಅದರೊಡನೆ ಬಳೆಯ ಸದ್ದು ಮಿಶ್ರವಾದುದರಿಂದ ಯಾರೋ ಹೆಂಗಸಿಗೆ ಅಪಘಾತವಾಗಿರಬೇಕೆಂದು ಅವಸರದಲ್ಲಿ ಬಾಗಿಲು ತೆರೆದೆ. ಬಾಗಿಲಿನಿಂದ ಸ್ವಲ್ಪ ದೂರದಲ್ಲಿ ಮಾಧವಿ ಕುಟ್ಟಿ ಅಂಗಾತ ಬಿದ್ದಿದ್ದಳು. ಅವಳ ಕೈ ಬಳೆಗಳು ಚೂರುಚೂರಾಗಿ ಚೆಲ್ಲಿದ್ದುವು. ನಾನು ಗಾಬರಿಗೊಂಡು ಅವಳ ಬಳಿಗೋಡಿ ಕೈಗಳನ್ನು ಮುಟ್ಟಿ ನೋಡಿದೆ. ಅವಳಿಗೆ ಸ್ಮೃತಿ ತಪ್ಪಿತ್ತು. ನಾನು ನನ್ನ ಕೋಣೆಯಿಂದ ಒಂದಿಷ್ಟು ನೀರು ತಂದು ಅವಳ ಮುಖಕ್ಕೆ ಸಿಂಪಡಿಸಿ ಪ್ಯಾನನ್ನು ಅಲುಗಾಡಿಸಿದೆ. ಸ್ವಲ್ಪ ಕಾಲ ಅವಳಿಗೆ ಎಚ್ಚರವಾಗಲಿಲ್ಲ. ನಾನು ಕರೆಯಬೇಕಾದುದಾದರೂ ಯಾರನ್ನು? ಅಂಬುಜಮ್ಮಾಳ್‌ಗೂ ಇವಳಿಗೂ ಕರ್ಣಾರ್ಜುನ ಹಗೆ. ಶಶಿಕಲ ಇನ್ನೂ ಹೆಚ್ಚು ಗಾಬರಿಗೊಳ್ಳಬಹುದಲ್ಲದೆ ಅವಳಿಂದ ಸಹಾಯವೇನೂ ಸಿಗದು. ಕಿಟ್ಟು ಕಚೇರಿಗೆ ನಡೆದಾಗಿತ್ತು. ಕುರುಪ್ ಎರಡು ದಿನಗಳ ಹಿಂದೆ ಮದ್ರಾಸನ್ನು ತ್ಯಜಿಸಿ ಮುಂಬಯಿಗೆ ತೆರಳಿದ್ದ. ಅವನ ಪಯಣದ ಖರ್ಚಿಗೆ ನನ್ನಿಂದಲೂ ಹತ್ತು ರೂಪಾಯಿ ಸಂದಿತ್ತು.

ಮಾಧವಿ ಮತ್ತೆ ಹತ್ತು ನಿಮಿಷ ಕಳೆಯುವಾಗ ಸ್ವಲ್ಪ ಕಣ್ಣು ತೆರೆದು ನನ್ನನ್ನು ನೋಡಿದಳು. ಅವಳ ಕೈಗೆ ಗಾಜು ಬಳೆಗಳ ಚೂರಿನಿಂದ ಸ್ವಲ್ಪ ಗಾಯವಾಗಿದ್ದುದೂ ನನಗೆ ತೋರಿತು. ನನ್ನೊಡನಿದ್ದ ಒಂದು ಮುಲಾಮಿನ ಸೀಸೆಯನ್ನು ತಂದು ಆ ಗಾಯಕ್ಕೆ ಹಚ್ಚಿದೆ.

"ಏನು ಏಳಲಿಕ್ಕಾಗುದಿಲ್ವೆ? " ಎಂದು ಅವಳ ತಲೆಯನ್ನು ಹಿಡಿದು ಎತ್ತಲು ಯತ್ನಿಸಿದೆ.

ಮೆಲ್ಲನೆ ಅವಳು ತನ್ನ ಕೈಯ್ಯನ್ನು ನನ್ನ ಹೆಗಲಿನ ಮೇಲೆ ಇಟ್ಟು ಎದ್ದು ಕುಳಿತಳು.

"ತಲೆ ಭಾರವಾದಂತೆ ಭಾಸವಾಗುತ್ತದೆ."

"ಸರಿ, ನಿನ್ನ ಕೋಣೆಯಲ್ಲಿ ಮಲಗಿಬಿಡು" ಎನ್ನುತ್ತ ನಾನು ಅವಳ ಭುಜಗಳನ್ನು ಹಿಡಿದು ಎದ್ದುನಿಲ್ಲಿಸಿದೆ. ಮೆಲ್ಲನೆ ಅಲ್ಲಿಂದ ಆಕೆ ನನ್ನನ್ನು ಆಧರಿಸಿಕೊಂಡು ತನ್ನ ಕೋಣೆಯೊಳಗೆ ನಡೆದಳು.

"ಏನು, ಹಾಸಿಗೆ ಬಿಡಿಸಬೇಕೆ, ಅಲ್ಲ ನಿಮ್ಮಿಂದಲೇ ಸಾಧ್ಯವೆ?" ಎಂದು ಕೇಳಿದೆ.

"ನೀವು ಬಿಡಿಸಿದರೆ ಉಪಕಾರ" ಎಂದು ಗಂಟಲೊಳಗಿಂದ ನುಡಿದಳು.

ನಾನು ಹಾಸಿಗೆ ಹಾಸಿದೆ. ಅವಳು ಅದರಲ್ಲಿ ಮಲಗಿದಳು.

"ಕುಡಿಯಲಿಕ್ಕೇನಾದರೂ ಬೇಕೆ?" ಎಂದೆ.

"ಒಂದಿಷ್ಟು ನೀರು ಸಾಕು. ಅಗೊಳ್ಳಿ ಅಲ್ಲಿ ಹೂಜಿಯಲ್ಲಿದೆ," ಎಂದಳು.

ಹೂಜಿಯಿಂದ ಒಂದು ಲೋಟದಲ್ಲಿ ನೀರನ್ನು ಸುರಿದು ಅವಳ ಬಾಯಿಯ ಬಳಿ ತಂದೆ. ಅವಳು ಬಾಯಿ ತೆರೆದಳು. ಬಾಯಿಗೆ ಸುರಿದುದನ್ನು ಅವಳು ನುಂಗಿದಳು.

"ಏನು ಚಳಿಯಾಗುವುದೆ? ಹೊದಿಕೆ ಹೊದಿಸಬೇಕೆ? " ಎಂದು ಮತ್ತೆ ಪ್ರಶ್ನಿಸಿದೆ.

"ಚಳಿಯಿಲ್ಲ. ನಿಜವಾಗಿ ಸೆಕೆಯಾಗುತ್ತದೆ. ಸ್ವಲ್ಪ ಸೀರೆಯ ಗಂಟನ್ನು ಸಡಿಲಿಸುತ್ತೇನೆ" ಎನ್ನುತ್ತ ಸೊಂಟಕ್ಕೆ ಕೈ ಹಾಕಿ ಸೀರೆಯ ಗಂಟನ್ನು ಎಳೆದಳು. ಚೋಳಿಯ ಎರಡು ಗುಬ್ಬಿಗಳನ್ನು ತೆಗೆದು ಸೆರಗಿನಿಂದ ಗಾಳಿ ಬೀಸತೊಡಗಿದಳು.

"ಇನ್ನು ನಾ ಹೋಗುತ್ತೇನೆ. ಏನಾದರೂ ಔಷಧಿ ತಂದು ಕೊಡಬೇಕೆ? ಯಾರಿಗಾದರೂ ಹೇಳಬೇಕೆ?" ಎಂದು ಕೇಳಿದೆ. ನನಗೆ ಅಲ್ಲಿಂದ ಒಮ್ಮೆ ಹೋದರೆ ಸಾಕೆಂದಾಗಿತ್ತು.

"ಇಲ್ಲ, ನೀವು ಗಾಬರಿಪಡಬೇಡಿ. ಅಪರೂಪವಾಗಿ ನನಗೆ ಹೀಗೆ ಒಮ್ಮೊಮ್ಮೆ ಆಗುತ್ತಿದೆ. ಮೂರು ವರ್ಷಗಳ ಹಿಂದೊಮ್ಮೆ ಬಸ್ಸಿನಲ್ಲಿ ಹೋಗುತಿದ್ದಾಗ ಹೀಗೆಯೇ ಬಿದ್ದಿದ್ದೆ. ಡಾಕ್ಟರರು ಇದು ಏನೋ ಹಿಸ್ಟೇರಿಯಾ ಎನ್ನುತ್ತಾರೆ. ಇದಕ್ಕೆ ಔಷಧಿಯಿಲ್ಲವಂತೆ."

ನಾನು ಎದ್ದು ನಿಂತೆ.

"ಹೋಗಬೇಡಿ. ಸ್ವಲ್ಪ ಹೊತ್ತು ಇಲ್ಲಿ ಇರಿ. ನಿಮ್ಮ ಓದಿಗೆ ಬಹುಶಃ ತೊಂದರೆಯಾಗಬಹುದು. ನಿಮಗೆ ಪರೀಕ್ಷೆ ಇದೆಯೆಂದು ಕುರುಪ್ಪು ಹೇಳುತಿದ್ದ. ಪಾಪ, ಅವನು ಈಗ ಮುಂಬಯಿ ತಲಪಿರಬೇಕು."

"ಬಂದೆ ಈಗ"

ಎನ್ನುತ್ತ ನಾನು ನನ್ನ ಕೋಣೆಗೆ ಹೋಗಿ ಒಂದು ಪುಸ್ತಕವನ್ನು ಹಿಡಿದುಕೊಂಡು ಹಿಂದೆ ಬಂದು ಮಾಧವಿ ಕುಟ್ಟಿಯ ಬಳಿ ಕುಳಿತೆ. ಅವಳ ಹಣೆಯಲ್ಲಿ ಬೆವರೂರಿತ್ತು.

"ನಾನು ಗಾಳಿ ಬೀಸುತ್ತೇನೆ"

ಎರಡು ಬಿಂದು ಕಾಗದದ ಹಾಳೆಯಲ್ಲಿ ಗಾಳಿ ಬೀಸತೊಡಗಿದೆ.

"ನನ್ನ ಟವೆಲ್" ಎಂದು ಅವಳು ಬಟ್ಟೆಗಳ ರಾಶಿಯನ್ನು ತೋರಿಸಿದಳು. ನಾನು ಟವೆಲೊಂದನ್ನು ಹೆಕ್ಕಿ ಅವಳ ಕೈಗಿತ್ತೆ. ಅವಳು ಅದರಿಂದ ಮುಖವನ್ನು ಒರಸಿಕೊಂಡಳು.

"ಬೇಕಾದರೆ ಡಾಕ್ಟರಲ್ಲಿಗೆ ಹೋಗುತ್ತೇನೆ" ಎಂದೆ ನಾನು, ಅಲ್ಲಿಂದ ಹೇಗಾದರೂ ತಪ್ಪಿಸಿಕೊಳ್ಳಲು.

"ಬೇಡ. ನೀವು ಸ್ವಲ್ಪ ಇಲ್ಲಿ ಇದ್ದರೆ ಸಾಕು. ನನಗೇನೋ ಭಯವಾಗುತ್ತಿದೆ. ಆದ್ದರಿಂದ ಏಕಾಂತದಲ್ಲಿರಲು ಸಾಧ್ಯವಾಗುವುದಿಲ್ಲ. ಇದರ ಅವಸ್ಥೆ ಯಾವಾಗಲೂ ಹಾಗೆಯೇ."

"ಹೂಂ" ಎಂದೆ ನಾನು.

ಬೇರೊಂದು ಸನ್ನಿವೇಶದಲ್ಲಿ, ಬೇರೊಂದು ಕಡೆ, ಬೇರೊಂದು ಸಮಯದಲ್ಲಿ ನಾನು ಸ್ವೇಚ್ಛೆಯಿಂದಲೇ ಅವಳ ಬಳಿ ಎಷ್ಟು ಕಾಲ ಬೇಕಾದರೂ ಕುಳಿತುಕೊಳ್ಳಬಹುದಿತ್ತು. ಆದರೆ ಈಗ ನನಗೆ ಪರೀಕ್ಷೆ ಮುಖ್ಯವಾಗಿತ್ತು. ಅದರ ಮೇಲೆ ಅಂಬುಜಮ್ಮಾಳ್ ಅಥವಾ ಶಶಿಕಲ ಬಂದು ನಾವಿಬ್ಬರೂ ಒಟ್ಟಿಗಿರುವುದನ್ನು ನೋಡಿದರೆ ರಾದ್ಧಾಂತ ಎಬ್ಬಿಸಬಹುದೆಂಬ ಹೆದರಿಕೆ ಬೇರೆ. ಆದರೂ ಸೌಖ್ಯವಿಲ್ಲದವಳನ್ನು ಅವಳ ಇಚ್ಛೆಗೆ ವಿರುದ್ಧವಾಗಿ ಒಬ್ಬಂಟಿಗಳನ್ನಾಗಿ ಬಿಟ್ಟುಹೋಗುವಷ್ಟು ಕ್ರೌರ್ಯ ನನ್ನಲ್ಲಿರಲಿಲ್ಲ.

ಪುಸ್ತಕ ಬಿಡಿಸಿದರೂ ಮಾಧವಿಯ ಸೌಂದರ್ಯರಾಶಿ ಅವಳ ಮುಖದತ್ತನೇ ನನ್ನ ಕಣ್ಣನ್ನು ಸೆಳೆಯುತ್ತಿತ್ತು. ಅವಳ ಸೌಂದರ್ಯದಲ್ಲಿ ಕೃತ್ರಿಮತೆ ಇದ್ದಿಲ್ಲ. ದಟ್ಟನಾದ ನೀಳ ಕೇಶರಾಶಿಯ ಕಪ್ಪು ಬಣ್ಣ ಅವಳ ಮುಖದ ಶುಭ್ರವರ್ಣವನ್ನು ಇನ್ನೂ ಎದ್ದು ತೋರಿಸುತಿತ್ತು. ಮುಖದಲ್ಲಿ ಮಾದಕವಾದ ಕಿರುನಗೆ ಸುಳಿಯುತ್ತಿತ್ತು. ದೇಹ ಹೃಷ್ಟಪುಷ್ಟವಾಗಿತ್ತು. ಕೈಗಳು ಉರುಟುರುಟಾಗಿದ್ದುವು. ಅವಳ ಉಸಿರಿಗೆ ಎದೆ ಮೇಲೆ ಕೆಳಗೆ ಹೋಗುತ್ತಿತ್ತು. ಕುತ್ತಿಗೆಯಲ್ಲಿದ್ದ ಚಿನ್ನದ ರೋಪ್ ಚೈನು ಚೋಲಿಯ ಮೇಲೆ ಹೊರಳಾಡುತ್ತಿತ್ತು.

ಆದಕ್ಕೇ ನಾನು ಹೇಳಿದುದು ಬೇರೆ ಸನ್ನಿವೇಶ, ಬೇರೆ ಸಂದರ್ಭದಲ್ಲಾದರೆ ನಾನು ಎಷ್ಟು ಕಾಲವೂ ಬೇಕಾದರೆ ಅವಳ ಬಳಿ ಕುಳಿತುಕೊಳ್ಳುತಿದ್ದೆನೆಂದು. ಆದ್ದರಿಂದ ಈಗ ಮನಸ್ಸಿನ ಹರಿದಾಟವನ್ನು ನಿಲ್ಲಿಸುವುದು ಅಷ್ಟೊಂದು ಸುಲಭಸಾಧ್ಯವಿದ್ದಿಲ್ಲ. ಅದರಲ್ಲಿ ಎಷ್ಟೆಷ್ಟೋ ಕಲ್ಪನೆಗಳು ಬರುತ್ತಿದ್ದುವು, ಎಷ್ಟೋ ಕನಸುಗಳು ಕಾಣುತಿದ್ದವು. ಯಾವ ವಸ್ತುವೂ ಕಣ್ಣು ಮುಂದಿರದಿದ್ದರೂ ಮನಸ್ಸು ಕಲ್ಪನಾಲೋಕದಲ್ಲಿ ಬೇಕಾದಷ್ಟು ಸಂಚರಿಸಲು ಶಕ್ತವಾಗಿರುವಾಗ ಮಾಧವಿಯಂಥವಳ ಮಾದಕ ಸೌಂದರ್ಯದ ದೇಹರಾಶಿ ಕಣ್ಣ ಮುಂದಿರುವಾಗ ಮನಸ್ಸು ಚಂಚಲವಾಗಿ ತತ್ತರಿಸುತಿದ್ದರೆ ಏನೂ ಆಶ್ಚರ್ಯಪಡಬೇಕಾಗಿರಲಿಲ್ಲ. ಕಲ್ಪನೆಗೆ ಬೇಕಾದುದು ವಾಸ್ತವಿಕತೆಯ ಆಧಾರ, ಅಸ್ತಿವಾರ. ಅದೇ ಕಲ್ಪನೆಯ ಲಾಂಚಿಂಗ್ ಪ್ಯಾಡ್. ಆದ್ದರಿಂದ ನಾನಾಗ ನನ್ನ ಪ್ರಾಣಿ ಪ್ರವೃತ್ತಿಗಳನ್ನೆಲ್ಲ ಬಿಗಿ ಹಿಡಿಯಬೇಕಿತ್ತು.

ಮಾಧವಿ ತುಸು ಹೊತ್ತಿನಲ್ಲಿ ಕಣ್ಣು ಮುಚ್ಚಿದಳು. ಅವಳಿಗೆ ನಿದ್ದೆ ಬಂದಿರಬೇಕೆಂಬುದರಲ್ಲಿ ಸಂಶಯವಿರಲಿಲ್ಲ. ನಾನು ಮೆಲ್ಲನೆ ಅವಳ ಮುಖವನ್ನು ನಡುಗುವ ಬೆರಳುಗಳ ತುದಿಯಿಂದ ಸವರಿ ಅವಳಿಗೆ ನಿದ್ದೆಯ ಜೊಂಪು ಹಿಡಿದಿದೆಯೆಂದು ಖಚಿತ ಮಾಡಿಕೊಂಡು ಅಲ್ಲಿಂದ ಹೊರಬಿದ್ದೆ.

ನಾನು ನನ್ನ ಕೋಣೆಯತ್ತ ಹೋಗುವುದೂ ಅಂಬುಜಮ್ಮಾಳ್ ಕೆಳಗಿನಿಂದ ಪ್ರತ್ಯಕ್ಷವಾಗುವುದೂ ಏಕಕಾಲದಲ್ಲಾಯಿತು. ಅವಳಿಗೆ ನನ್ನನ್ನು ಕಂಡೊಡನೆ ತುಂಬಾ ಸಂಶಯವಾಗಿರಬೇಕೆಂಬುದರಲ್ಲಿ ಸಂಶಯವಿರಲಿಲ್ಲ.

"ಎಲ್ಲಿಂದ ಬರುತಿದ್ದೀರಿ?" ಎಂದಾಕೆ ಪ್ರಶ್ನಿಸಿದಳು.

"ಆ ದಿಕ್ಕಿನಿಂದ" ಎಂದು ನಾನು ಹಿಂಬದಿ ಕೈ ತೋರಿಸಿದೆ.

ನನ್ನ ಉತ್ತರ ಅವಳಿಗೆ ತುಸು ಗೊಂದಲವನ್ನುಂಟುಮಾಡಿರಬೇಕು. ಅವಳು ಮೆಲ್ಲನೆ ಮಾಧವಿಯ ಕೋಣೆಯ ಮುಂದೆ ಹೋಗಿ ಇಣಿಕಿ ಹಿಂದೆ ಬಂದಳು. ಅಷ್ಟರಲ್ಲಿ ನಾನು ನನ್ನ ಕೋಣೆ ಸೇರಿಯಾಗಿತ್ತು.

"ನೋಡಿ, ನಿಮ್ಮ ನೆಂಟರಿಗೆ ನಾನು ಇಡೀ ಮನೆಯನ್ನು ಬಾಡಿಗೆಗೆ ಕೊಟ್ಟಿಲ್ಲ. ನೀವು ನಿಮ್ಮ ಕೋಣೆಯನ್ನು ಬಿಟ್ಟು ಮನೆಯೊಳಗೆ ಸುತ್ತಾಡಬಾರದು. ಕೋಪ ಮಾಡಿಕೊಳ್ಳಬೇಡಿ. ಹಾಗೆ ಬೇಸರವಾದರೆ ಬೇಕಾದರೆ ಕೆಳಗೆ ನಾನಿದ್ದೇನೆ. ನನ್ನ ಕೋಣೆಗೆ ಬರಬಹುದು."

"ಮುಚ್ಚು ಬಾಯಿ, ಇಲ್ಲಿಂದ ನಡೆ!"

ನನ್ನ ಬಾಯಿಯಿಂದ ಈ ಶಬ್ದಗಳು ಹೇಗೆ ಸಿಡಿಗುಂಡಿನಂತೆ ಹೊರಬಿದ್ದುವೆಂದು ನನಗೇ ತಿಳಿದಿರಲಿಲ್ಲ. ಕಿಟ್ಟು ಬಾಡಿಗೆದಾರ, ನಾನು ಅವನ ಅತಿಥಿ, ನನ್ನಿಂದ ಗದರಿಸಿಕೊಂಡ ಅಂಬುಜಮ್ಮಾಳ್ ಅವನಿಗೆ ಪೀಡೆಕೊಡದಿರಲಾರಳೆಂಬ ಜಾಗರೂಕತೆಯೂ ನನ್ನಲ್ಲಿ ಉಳಿದಿರಲಿಲ್ಲ.

ಆದರೆ ಅಂಬುಜಮ್ಮಾಳ್ ನನ್ನ ಸ್ಫೋಟನದಿಂದ ಕೋಪಗೊಂಡಾಳೆಂಬ ನನ್ನ ನಿರೀಕ್ಷೆ ಮಾತ್ರ ಸುಳ್ಳಾಯಿತು. ಅವಳು ನನ್ನ ಸಿಡುಕಿನಿಂದಾಗಿ ತನ್ನ ಮನಸ್ಸಿನ ಸಮತೋಲನವನ್ನು ಕಳೆದುಕೊಳ್ಳದಿದ್ದುದನ್ನು ಕಂಡು ನನಗೆ ಮರುಕ್ಷಣದಲ್ಲೇ ವಿಸ್ಮಯವಾಯಿತು. ಅವಳ ನಸುನಗುವನ್ನು ನೋಡುವಾಗ ಅವಳಿಗೆ ಗದರಿಸುವುದಲ್ಲ, ನಾನು ಎರಡು ಏಟು ಕೊಟ್ಟು ಹೊರಗೆ ದಬ್ಬಿದರೂ ಆಕೆ ತನ್ನ ಸ್ಥಿತಪ್ರಜ್ಞೆಯನ್ನು ಕಳೆದುಕೊಳ್ಳುತಿದ್ದಿಲ್ಲವೋ ಏನೋ ಎಂದು ತೋರಿತು.

"ನೋಡಿ, ನಾನೆಂದುದು ಬೇರೆ ಯಾವುದಕ್ಕೂ ಅಲ್ಲ; ಆ ಮಲೆಯಾಳಿ ಹೆಂಗಸ[illegible] ಪ್ರಾಣಿಗಳಂಥವು. ಅಣ್ಣ-ತಮ್ಮ ಎಂದು ಯಾರ[illegible]ದು ಹಗಲು ರಾತ್ರಿ ಇಲ್ಲಿ ಇರಗೊಡುತ್ತವೆ. [illegible] ನನ್ನ ಮನೆಯನ್ನು ಸೂಳೆಗಾರಿಕೆಗಾಗಿ ಅವುಗಳಿಗೆ ಬಾಡಿಗೆ ಕೊಟ್ಟಿಲ್ಲ. ಅವುಗಳಿಂದಾಗಿ ನನ್ನ ಹೆಸರು ಕೂಡಾ ಹಾಳಾಗುತ್ತಿದೆ, ಏನು ಈ ಒಳಗೇ ಹಾಳಾಗಿದೆ ಎನ್ನಬಹುದು. ಮೊನ್ನೆ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ್ ನನಗೆ ಈ ಬಗ್ಗೆ ಗದರಿಸಿ ಕುಚೋದ್ಯ ಮಾಡಿ ನನ್ನಿಂದ ಹತ್ತು ರೂಪಾಯಿ ಕಸಕೊಂಡು ಹೋದ. ಕೊಡದಿದ್ದರೆ, ಪುಣ್ಯಾತ್ಮ ಖಟ್ಲೆ ಹಾಕುತ್ತಾನೆ; ನನ್ನ ಮರ್ಯಾದೆ ತೆಗೆಯುತ್ತಾನೆ. ಏನು ಮಾಡೋದು! ಈ ಬಾಡಿಗೆಯ ಕಾನೂನೊಂದು ಬೇರೆ. ಒಮ್ಮೆ ಒಬ್ಬ ಭಾಡೇದಾರ ಮನೆಯ ಒಳಹೊಕ್ಕನೆಂದರೆ ಅವನು ಒಡೆಯನಿಗಿಂತಲೂ ಭದ್ರವಾಗುತ್ತಾನೆ. ನಮ್ಮ ಕಷ್ಟ ಯಾರಿಗೆ ಗೊತ್ತಾಗಬೇಕು?"

ಹೀಗೆನ್ನುವಾಗ ಅಂಬುಜಮ್ಮಾಳ್‌ಳ ಸ್ವರ ಗದ್ಗದವಾಯಿತು. ಕಣ್ಣಿನಲ್ಲಿ ನೀರಿಳಿಯಿತು.

"ನಾನು ನನ್ನ ಜಾಗ್ರತೆ ತೆಗೆದುಕೊಳ್ಳುತ್ತೇನೆ. ನೀವು ನನ್ನ ಬಗ್ಗೆ ಅಂಜಬೇಕಾಗಿಲ್ಲ. ನಾನು ಸ್ವಲ್ಪ ಕಠಿನವಾಗಿ ಮಾತಾಡಿದೆನೆಂದು ಬೇಸರಿಸಬೇಡಿ. ನನ್ನ ಅಜ್ಜಿ ಬೇರಲ್ಲ, ನೀವು ಬೇರಲ್ಲ ನನಗೆ."

ನನ್ನ ಕೊನೆಯ ವಾಕ್ಯ ಆಕೆಯ ಹೆಣ್ಣು ಬುದ್ಧಿಯ ಅಭಿಮಾನವನ್ನು ಚುಚ್ಚಿರಬೇಕು. ಮತ್ತೆ ಅವಳು ಅಲ್ಲಿ ನಿಲ್ಲಲಿಲ್ಲ. ಅಂತೂ ಅವಳ ನಾಲಿಗೆಯಿಂದ ಇಷ್ಟು ಸುಲಭವಾಗಿ ಪಾರಾದುದು ನನಗೇ ಆಶ್ಚರ್ಯ



ಮಾಧವಿಯ ಸೌಂದರ್ಯರಾಶಿ ಅವಳ ಮುಖದತ್ತವೇ ನನ್ನ ಕಣ್ಣನ್ನು ಸೆಳೆಯುತ್ತಿತ್ತು.

ವೆನಿಸಿತು. ಅದೂ, ನಡುವಯಸ್ಸಿನ ಅವಳನ್ನು ನಾನೇನಾದರೂ ಬೇಕೆಂದೇ ನನ್ನ ಅಜ್ಜಿಗೆ ಹೋಲಿಸಿರಲಿಲ್ಲ. ಹೆಂಗಸಿನ ವಯಸ್ಸು ಕೇಳಬಾರದು ಎಂದು ಇದಕ್ಕಾಗಿಯೇ ಹೇಳುತ್ತಿರಬೇಕು ಎಂದು ನನಗನ್ನಿಸಿತು ಆಗ.

ನಾನು ಮಧ್ಯಾಹ್ನ ಊಟ ಮಾಡಿ ಹಿಂತಿರುಗುವಾಗ ದೊಡ್ಡ ಗದ್ದಲ ಮನೆಯೊಳಗಿಂದ ಕೇಳುತ್ತಿತ್ತು. ನಾನು ಒಳಬರುವಾಗ ಅಂಬುಜಮ್ಮಾಳ್ ಶಶಿಕಲಾಳೊಡನೆ ವಾಗ್ಯುದ್ಧ ನಡೆಸುತಿದ್ದಳು. ನನಗೆ ಅಲ್ಲಿ ನಿಂತು ಅವರ ವಿವಾದವೇನೆಂದು ತಿಳಿದುಕೊಳ್ಳುವ ಮನಸ್ಸಿರಲಿಲ್ಲ. ನಾನು ಹಾಗೆ ಅವರ ಜಗಳದಲ್ಲಿ ಆಸಕ್ತಿ ವಹಿಸುವೆನೆಂದು ತಿಳಿದರೆ ಅಂಬುಜಮ್ಮಾಳ್ ಇನ್ನೂ ಹೆಚ್ಚು ಕಿಡಿ ಕಾರಬಹುದಿತ್ತು. ಅವಳಿಗೆ ಸಮಾಧಾನ ಹೇಳುವಷ್ಟರಮಟ್ಟಿನ ತಮಿಳು ಶಬ್ದಸಂಪತ್ತೂ ನನ್ನಲ್ಲಿರಲಿಲ್ಲ. ಮೇಲೆ ಹೋಗಿ ಮೆಟ್ಟಲ ಹಿಂದೆ ಮರೆಯಾಗಿ ಅವರ ಜೈಯ್ವಾಟವನ್ನು ಸ್ವಲ್ಪ ಹೊತ್ತು ಆಲಿಸುವಾಗ ಏನೋ ಶಶಿಕಲಾ ಕಿಟಕಿಯಿಂದ ನೀರು ಚೆಲ್ಲಿದುದು ಅಂಬುಜಮ್ಮಾಳ್‌ಳ ಮೇಲೆ ಬಿದ್ದಿತಂತೆ. ಅಂಬುಜಮ್ಮಾಳ್ ಅದನ್ನು ಪರ್ವತವನ್ನಾಗಿ ಮಾಡಿ ಶಶಿಕಲಾ ತನ್ನ ಮೇಲೆ ಬುದ್ಧಿಪೂರ್ವಕವಾಗಿ ಉಗುಳಿದಳೆಂದು ಉರಿ ಕಾರುತ್ತಿದ್ದಳು.

ನಾನು ಮೇಲೆ ಹೋಗಿ ಬಾಗಿಲು ಹಾಕಿ ಕುಳಿತರೂ ಅವರ ಬಯ್ದಾಟ ಕಡಿಮೆಯಾಗುವಂತೆ ತೋರಲಿಲ್ಲ. ನಾನು ಶಶಿಕಲಾಳ ಪರವಾಗಿ ವರ್ತಿಸದೆ ನಿರ್ವಾಹವಿರಲಿಲ್ಲ. ಇಲ್ಲವಾದರೆ ಅವಳು ಮಾತ್ರವಲ್ಲ, ಕಿಟ್ಟು ಕೂಡಾ ನನ್ನ ಮೇಲೆ ಅಸಮಾಧಾನಗೊಳ್ಳಬಹುದಿತ್ತು. ಆದರೆ ಅಂಬುಜಮ್ಮಾಳ್‌ಳಿಗೆ ಪ್ರತ್ಯಕ್ಷವಾಗಿ ನೋವನ್ನುಂಟುಮಾಡುವ ಮನಸ್ಸೂ ನನಗಿರಲಿಲ್ಲ. ನಾನು ಪೆಟ್ಟಿಗೆಯಿಂದ ಒಂದು ಹೊಸ ಸಾಬೂನನ್ನು ಹಿಡಿದುಕೊಂಡು ಕೆಳಗೆ ಹೋಗಿ ಅದನ್ನು ಅಂಬುಜಮ್ಮಾಳ್‌ಳ ಕೈಗಿತ್ತೆ.

"ಏನಿದು?" ಎಂದು ಆಕೆ ಪ್ರಶ್ನಿಸಿದಳು.

"ಸಾಬೂನು" ಎಂದೆ ನಾನು ನಸುನಕ್ಕು.

"ನನಗೇಕೆ?"

"ಎಲ್ಲಾದರೂ ಶಶಿಕಲಾ ನಿಜವಾಗಿಯೂ ಉಗುಳಿದ್ದರೆ ಆ ಎಂಜಲನ್ನು ತೊಳೆದುಕೊಳ್ಳಲಿಕ್ಕೆ." ಎಂದು ಗಂಭೀರವಾಗಿ ನುಡಿದೆ.

ಶಶಿಕಲಾ ಘೊಳ್ಳನೆ ನಕ್ಕಳು. ಅಂಬುಜಮ್ಮಾಳ್‌ಳಿಗೂ ಆಗ ನಗು ತಡೆಯಲಾಗಲಿಲ್ಲ.

"ನೋಡಿ ನೀವು ಸ್ವಲ್ಪ ಗೊತ್ತಿದ್ದವರು. ಅವಳಿಗೆ ಸ್ವಲ್ಪ ಹೇಳಿ. ನನಗೆ ಸುಮ್ಮನೆ ಅವಳು ಪೀಡಿಸುತ್ತಿರಬಾರದು ಹೀಗೆ. ಮೊನ್ನೆ ನನ್ನ ಮೇಲೆ ಸಗಣಿ ಎಸೆದಳು. ನಾನು ಸುಮ್ಮನಿದ್ದೆ. ಅದರ ಮೊನ್ನೆ ಒಣಗಲಿಕ್ಕೆ ಹಾಕಿದ ನನ್ನ ಸೀರೆಗೆ ಹಳಸಿದ ಸಾಂಬಾರನ್ನು ಚೆಲ್ಲಿದಳು..."

"ಹೌದು, ಆಗ ತಾನೇ ಮಾಡಿದ ಬಿಸಿ ಬಿಸಿ ಸಾಂಬಾರನ್ನು ಹಾಗೆ ಚೆಲ್ಲಿ ಹಾಳುಮಾಡುವಷ್ಟು ಔದಾರ್ಯ ಅವಳಿಗಿರಬೇಕಲ್ಲ?" ಎಂದು ನಾನು ಅವಳ ಫಿರ್ಯಾದಿಯನ್ನು ಅರ್ಧದಲ್ಲೇ ನಿಲ್ಲಿಸಿದೆ.

ಶಶಿಕಲ ನಗುತ್ತ ಒಳಗೆ ಹೋದಳು.

ಅಂಬುಜಮ್ಮಾಳ್‌ಳ ಮುಖ ಕೆಂಪಾಗಿತ್ತು. ನನಗೂ ಗದರಿಸಿ ಬಿಡಬೇಕೆಂದು ಅವಳಿಗೆ ಉತ್ಕಟೇಚ್ಛೆಯಿತ್ತೆಂಬುದರಲ್ಲಿ ಸಂಶಯವಿರಲಿಲ್ಲ. ಆದರೆ ನನ್ನನ್ನು ಕೆಣಕಲು ಆಕೆ ಯಾಕೋ ಹಿಂಜರಿಯುತಿದ್ದಳು.

× × × ×

"ನಾನೇಕೆ ನಿಮ್ಮನ್ನು ಬಯ್ಯಲು ಹಿಂಜರಿಯುತಿದ್ದೇನೆ ಗೊತ್ತೆ?" ಎಂದಳು ಅಂಬುಜಮ್ಮಾಳ್ ತನ್ನ ಸೀರೆಯ ಸೆರಗನ್ನು ಬೆರಳಿಂದ ತೀಡಿಕೊಳ್ಳುತ್ತ.

"ನಾನು ಅತಿಥಿಯೆಂಬ ಕಾರಣಕ್ಕಾಗಿರಬಹುದು."

"ಹಾಗಾದರೆ ನಿಜ ಹೇಳಬೇಕೆ? ನನ್ನ ಗಂಡ ನಮ್ಮ ಮದುವೆಯಾಗುವಾಗ ನಿಮ್ಮಂತೆಯೇ ತೋರುತಿದ್ದರು. ನಿಮಗಿಂತ ಒಂದಿಷ್ಟು ಅವರು ಗಿಡ್ಡ, ಒಂದಿಷ್ಟು ಕಪ್ಪು ಅಷ್ಟೆ. ಮಾತಾಡುವುದೂ ನಿಮ್ಮಂತೆಯೇ. ಯಾವಾಗಲೂ ಸರಸವಾಡುವ ಸ್ವಭಾವದವರು. ಆದರೆ ನಿಮ್ಮಂತೆ ಯಾವಾಗಲಾದರೊಮ್ಮೆ ಅವರಲ್ಲೂ ಕೋಪ ಪುಟಿಸಿಡಿಯುತ್ತಿತ್ತು. ಹಾಗಾಗಿಯೇ ನಾನು ಆಗ ನಿಮ್ಮನ್ನು ಬೈದರೂ ನಾನು ಸಿಟ್ಟುಗೊಳ್ಳಲಿಲ್ಲ."

"ನಿಮ್ಮ ಗಂಡ ಬಹಳ ಸೌಮ್ಯ ಪ್ರವೃತ್ತಿಯವರಿದ್ದಿರಬೇಕು. ನನ್ನಂತಿರುತಿದ್ದರೆ ಅವರು ನಿಮ್ಮನ್ನು ಇಷ್ಟು ದಿನ ಬದುಕಲು ಬಿಡುತಿದ್ದಿಲ್ಲ. ಏನಿಲ್ಲದಿದ್ದರೂ ನಿಮ್ಮ ನಾಲಿಗೆಯನ್ನಾದರೂ ಅವರು ಯಾವುದಾದರೂ ರೋಗದ ನೆವ ಹೇಳಿ ಉಪಾಯದಿಂದಲಾದರೂ ಆಪರೇಶನ್ ಮಾಡಿ ಬಿಡಬಹುದಿತ್ತು."

"ನಿಮಗೆ ನಾನೇನು ಮಾಡಿದೆ! ನೀವು ನನ್ನನ್ನೇಕೆ ಮೆಚ್ಚುವುದಿಲ್ಲ? ಆ ಮಳೆಯಾಳಿ ಹುಡುಗಿಯರಂತೆ ಅಥವಾ ಆ ಅಯ್ಯಂಗಾರಿ ಹುಡುಗಿಯಂತೆ ನಾನು ತರುಣಿಯಾಗದಿರಬಹುದು. ಅವರಂತೆ ಮೈ ಕಾಣುವ ಸೀರೆ ಉಡದಿರಬಹುದು. ಮೊಲೆ ತೋರುವ ಚೋಳಿಗಳನ್ನು ಧರಿಸದಿರಬಹುದು, ಅವರಂತೆ ನಾನು ಪೌಡರ್ ಹಚ್ಚದಿರಬಹುದು, ಲಿಪ್‌ಸ್ಟಿಕ್ ಹಚ್ಚಿಸಿ ನನ್ನ ತುಟಿಗಳನ್ನು ಕೆಂಪಗೆ ಮಾಡದಿರಬಹುದು, ಅವರಂತೆ ಸಿನಿಮಾ ಹಾಡುಗಳನ್ನು ಸದಾ ಗೊಣಗುತ್ತಿರಲು ನನಗೆ ತಿಳಿಯದಿರಬಹುದು. ಅಷ್ಟೆಂದ ಮಾತ್ರಕ್ಕೆ ನನ್ನ ಹೆಣ್ತನ ನಶಿಸಿಹೋಯಿತೆ? ಅದು ನಿಮಗೆ ಗೋಚರಿಸದಿರದೆ? ನಿಮ್ಮ ಎಣಿಕೆಯಂತೆ ನಾನು ಮುದುಕಿಯಲ್ಲ. ನನ್ನ ವಯಸ್ಸು ಇನ್ನೂ ನಲ್ವತ್ತು ದಾಟಲ್ಲ."

"ನಿಮ್ಮ ವಯಸ್ಸು ನನಗೇಕೆ? ಅದರಿಂದಲೇ ನಿಮಗೆ ತೃಪ್ತಿಯಾಗುವುದಾದರೆ ನಿಮಗೆ ಇಪ್ಪತ್ತು ವರ್ಷ ಮೀರಿರಲಿಕ್ಕಿಲ್ಲವೆಂದು ನಾನು ಒಪ್ಪಿಬಿಡುತ್ತೇನೆ."

"ಕೇವಲ ಇಪ್ಪತ್ತು ರೂಪಾಯಿ ಖರ್ಚು ಮಾಡಿದರೆ ನಾನು ಈ ಮೂವರಿಗಿಂತಲೂ ಹೆಚ್ಚು ಶೃಂಗಾರವಾಗಬಲ್ಲೆ. ಆದರೆ ಇನ್ನು ನನಗೆ ಶೃಂಗಾರವೇಕೆ? ಯಾರಿಗಾಗಿ?"

"ಮತ್ತೆ ಇತರರು ಶೃಂಗಾರ ಮಾಡಿಕೊಂಡರೆ ನಿಮ್ಮ ಆಸ್ತಿ ಏನು ನಷ್ಟವಾಗುತ್ತದೆ?"

"ಅಲ್ಲ ನೀವು ಅವರ ಶೃಂಗಾರಕ್ಕೆ ಮಾರುಹೋಗಿದ್ದೀರೆಂದು ತೋರುತ್ತದೆ. ಅದಕ್ಕಾಗಿ ಹೀಗೆನ್ನುತ್ತೇನೆ."

"ನನಗೆ ಯಾರ ಶೃಂಗಾರದಿಂದ ಏನಾಗಬೇಕು?"

"ಮತ್ತೆ ನೀವೇಕೆ ಆ ಮಲೆಯಾಳಿ ಹುಡುಗಿಯೊಡನೆ ಅವಳ ಕೋಣೆಯಲ್ಲಿದ್ದಿರಿ?"

"ಕೋಣೆಯಲ್ಲಿದ್ದರೆ ಏನಾಯ್ತು? ಅಷ್ಟರಿಂದಲೇ ನಾನು ಅವಳ ಶೃಂಗಾರಕ್ಕೆ ಮಾರುಹೋದೆನೆಂದು ಭಾವಿಸುವಿರಾ? ಅದೇ ನಿಮ್ಮ ತಪ್ಪು. ನೀವು ಕುರುಪ್‌ನನ್ನು ಒಳಗೆ ಕರೆದಂತೆ, ನನ್ನನ್ನು ಆಕೆ ಕರೆಯಲಿಲ್ಲ!"

"ಹಾಂ! ಕುರುಪ್? ನಾನೇನು ವ್ಯಭಿಚಾರಿಣಿ ಎಂದು ಭಾವಿಸಿದ್ದೀರಾ?"

"ವ್ಯಭಿಚಾರಿಯಾಗಬೇಕಾದರೆ ವೃತ್ತಿ ಮುಖ್ಯವಲ್ಲ, ಚಿತ್ತ ಮುಖ್ಯ!"

"ಅಯ್ಯೋ! ನೀವೂ ಈ ಕತೆಗಳನ್ನು ನಂಬಿರುವಿರೆಂದು ಎಣಿಸಿರಲಿಲ್ಲ! ನೀವೆಲ್ಲ ಗಂಡಸರು ಹೀಗೆಯೇ. ನೀವು ಹಾಳಾ..."

ಫಕ್ಕನೆ ನನ್ನ ಕೆನ್ನೆಯ ಮೇಲೆ ಕೈಬೀಸಿದಂತಾಗಿ ನಾನು ಕಣ್ತೆರೆದೆ. ನಾನು ಬಿಡಿಸಿಟ್ಟಿದ್ದ ಪುರಾವೆ ಕಾಯಿದೆಯ ಪುಸ್ತಕ ಹಾಗೆಯೇ ಇತ್ತು. ದೀಪ ಉರಿಯುತ್ತಿತ್ತು. ಬಾಗಿಲು ತೆರೆದೇ ಇತ್ತು. ಗಂಟೆ ನೋಡುವಾಗ ಎರಡು ದಾಟ ಹದಿನಾರು ನಿಮಿಷ.

ಆದಕ್ಕೆ ಸರಿಯಾಗಿ ಕೆಳಗೆ ಮೆಟ್ಟಲನ್ನಿಳಿಯುವ ಅಥವಾ ಏರುವ ಸದ್ದೂ ಕೇಳಿಸಿತು. ಯಾರೋ ಕೆಮ್ಮಿದರು.

ನನಗೆ ಒಂದು ವಿಧದ ಭಯವೇ ಆಯಿತೆನ್ನಬಹುದಾಗ.

ದೀಪವಾರಿಸಿ ಮತ್ತೆ ನಿದ್ರಿಸಲು ಯತ್ನಿಸಿದೆ. ಆದರೆ ನಿದ್ದೆ ಬರಬೇಕಲ್ಲಿ? ನನಗೆ ಕಂಡುದು ಕನಸೋ ಅಥವಾ ಅಂಬುಜಮ್ಮಾಳ್ ಸ್ವತಃ ಬಂದು ನನ್ನೊಡನೆ ಅರೆ ನಿದ್ದೆಯಲ್ಲಿ ಸಂಭಾಷಿಸಿದ್ದಳೋ ಎಂಬುದು ನನಗೆ ಸಮಸ್ಯೆಯಾಯಿತು. ಇಲ್ಲವಾದರೆ ಸಾಮಾನ್ಯವಾಗಿ ಕನಸಿನಲ್ಲಿ ಅಷ್ಟು ಪರಿಣಾಮಕಾರಿಯಾದ, ಅಷ್ಟು ತರ್ಕಬದ್ಧವಾದ, ಸಂಭಾಷಣೆಯ ದೃಶ್ಯವನ್ನು ಕಾಣುವುದು ಅಪೂರ್ವ ಸಂಗತಿಯೇ ಎಂದು ನನಗೆ ತೋರುತ್ತಿತ್ತು. ನನ್ನ ಭಾವನೆಗಳನ್ನು ನಾನು ಎಷ್ಟು ಬಾರಿ ಎಷ್ಟು ವಿಧದಲ್ಲಿ ತಿರುವು ಮುರುವು ಮಾಡಿ ವಿಶ್ಲೇಷಿಸಿದರೂ ಇದಕ್ಕೆ ಸಮರ್ಪಕ ಪರಿಹಾರ ದೊರಕುವಂತಿರಲಿಲ್ಲ. ನನ್ನ ಕಲ್ಪನೆ ಇಷ್ಟು ಸ್ಪಷ್ಟವಾದ ಕನಸನ್ನು ಸೃಷ್ಟಿಸಿತೆ? ಅಥವಾ ನಾನೇನಾದರೂ ಸಂಮೋಹಿನಿ ನಿದ್ರೆಯಂಥ ನಿದ್ರಾವಸ್ಥೆಯಲ್ಲಿದ್ದಾಗ ಅಂಬುಜಮ್ಮಾಳ್ ನನ್ನೊಡನೆ ಸಂಭಾಷಣೆ ನಡೆಸಿದಳೆ? ಎಂಬುದು ತಿಳಿಯದಾಗಿತ್ತು. ಸಂಮೋಹಿನಿ ನಿದ್ದೆಯನ್ನು ಇತರರಲ್ಲಿ ಬರಿಸುವ ತಂತ್ರ ನನಗೆ ಅಪರಿಚಿತವಾಗಿರಲಿಲ್ಲ. ಸಿದ್ಧರಿದ್ದ ಅನೇಕರ ಮೇಲೆ ನಾನು ಪ್ರಯೋಗಿಸಿದುದಿತ್ತು. ಆದರೆ ಇತರರ ಪ್ರಯೋಗವಿಲ್ಲದೆ ತನ್ನಿಂದ ತಾನೇ ಸಂಮೋಹಿನಿ ನಿದ್ದೆ ಬರುವುದೆ? ಎಂಬುದು ನನಗೆ ತಿಳಿಯದಾಯಿತು.

ಪರರ ಇಂಗಿತವನ್ನು ತಿಳಿದುಕೊಳ್ಳುವ ಒಂದು ಗುಣವೂ ಕೆಲವರ ಮನಸ್ಸಿಗೆ ಇದೆ ಎಂಬುದನ್ನು ಓದಿದ್ದೆ. ಆದರೆ ಅದರಲ್ಲಿ ನನಗೆ ಹೆಚ್ಚಿನ ಶ್ರದ್ಧೆ ಇರಲಿಲ್ಲ. ಹಾಗೆಯೇ ಮನಸ್ಸು ಮನಸ್ಸುಗಳೊಳಗೆ ದೇಹಾತೀತ ವಾದ ಸಂಪರ್ಕ ಬೆಳೆಸಲೂ ಸಾಧ್ಯವಿದೆ ಎಂಬುದನ್ನೂ ನಾನು ಓದಿದ್ದೆ. ಯಾವುದೋ ಒಂದು ಕಾಲದಲ್ಲಿ ನಾನೂ ಈ ತಂತ್ರಗಳನ್ನು ಸಿದ್ಧಿಸಲು ಸ್ವಲ್ಪ ಅಭ್ಯಾಸಗಳನ್ನು ನಡೆಸಿ ಮತ್ತೆ ಬಿಟ್ಟುಬಿಟ್ಟೆ. ಹಾಗೆಂದು ನನಗೆ ಇಂಥ ಅತೀಂದ್ರಿಯ ಶಕ್ತಿಗಳಲ್ಲಿ ನಂಬಿಕೆಯಿರಲಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಆದರೆ ನನ್ನ ಮನಸ್ಸಿಗೆ ಇಂಥ ಇಂದ್ರಿಯಾತೀತ ಗುಣವಿರುತ್ತಿದ್ದರೆ ನಾನು ಈ ಸ್ಥಿತಿಯಲ್ಲಿರುತ್ತಿರಲಿಲ್ಲ, ಬಹುಶಃ.

೭

ಪರೀಕ್ಷೆಯ ಮುಂಚಿನ ರವಿವಾರ ನಾನು ಹೋಟೆಲಿನಿಂದ ಕಾಫಿ ಕುಡಿದು ಹಿಂತಿರುಗುತ್ತಿದ್ದೆ. ಅಂದೂ ಪದ್ಮಿನಿಯ ಕಾರು ನನ್ನನ್ನು ಹಾದು ಹೋಯಿತು. ಅವಳು ನನ್ನನ್ನು ನೋಡದಿದ್ದುದು ದೊಡ್ಡ ಪುಣ್ಯವೆಂದು ನನಗೆ ಕಂಡಿತು. ಇಲ್ಲವಾದರೆ ಅವಳು ಪುನಃ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರೆ ನನ್ನ ಮನಸ್ಸಿನ ಅಭ್ಯಾಸದ ನಿಷ್ಠೆಗೆ ಧಕ್ಕೆ ಬರ ಬಹುದಿತ್ತು.

ಅಲ್ಲಿಯೇ ಕ್ಷೌರದಂಗಡಿಗೆ ಹೋಗಿದ್ದ ಕಿಟ್ಟುವೂ ನನ್ನ ಸಂಧಿಸಿದ.

"ಏನಯ್ಯಾ ನೀನು ಪುನಃ ಗಡ್ಡ ಬೆಳೆಸುತ್ತಿಯಾ? ಬಹಳ ಓದು ಸಾಗುತ್ತಿರುವಂತೆ ತೋರುತ್ತದಲ್ಲ? ನಿನ್ನ ಕಣ್ಣುಗಳು ಗುಳಿಬಿದ್ದಿವೆ. ನಾನಿರುವಾಗ ಮನೆಯಲ್ಲಿ ನೀನು ನೋಡಸಿಕ್ಕುವುದೂ ಇಲ್ಲ!" ಎಂದನವ.

ನಾನು ನಸುನಕ್ಕೆ.

"ನೀನು ಈಗ ಪಡುವ ಶ್ರಮದ ಅರ್ಧದಷ್ಟು ಶ್ರಮವನ್ನು ಪಡು ತ್ತಿದ್ದರೆ ಈ ಒಳಗೆ ನೀನು ಐಯ್ಯೆಯಸ್ ಆಫೀಸರನಾಗಿ ಬರುತ್ತಿದ್ದಿ!"

"ಈಗ ಹಾಗಾದಿದ್ದುದೇ ಒಳ್ಳೆಯದಾಯಿತಲ್ಲ?" ಎಂದೆ ನಾನು. "ಅದ್ದರಿಂದಲೇ ನನಗೆ ನಿನ್ನ ಆತಿಥಿ ಸತ್ಕಾರವನ್ನನುಭವಿಸುವ ಸುಸಂದರ್ಭ ದೊರಕಿದೆ. ನನಗೆ ಇದರಿಂದಲೇ ತೃಪ್ತಿ ಹೆಚ್ಚೆಂದು ತೋರುತ್ತದೆ. ನನ್ನಲ್ಲಿ ಅಜ್ಞಾಸ್ವೀಕಾರದ, ಅಜ್ಞಾಪಾಲನೆಯ ಹನುಮಂತನ ಗುಣವಿಲ್ಲವೆಂದು ನನಗೆ ಗೊತ್ತು. ಅದ್ದರಿಂದ ಯಾವ ರೀತಿಯ ನೌಕರಿಯಲ್ಲಿಯೂ ನನಗೆ ಭವಿಷ್ಯ ಕಾದಿಲ್ಲವೆಂದು ಖಚಿತವಾಗಿದೆ."

ಕಿಟ್ಟು ತನ್ನ ಕಚೇರಿಯ ವ್ಯವಹಾರಗಳಲ್ಲಿ ತನಗುಂಟಾದ ಅಸಮಾ ಧಾನಗಳ ಯಾದಿಯನ್ನೇ ನನ್ನ ಮುಂದಿಟ್ಟ. ಡಿವಿಜನ್ ಎಂಜಿನಿಯರರ ಅಳಿಯನಾಗುವ ಮಾತು ಕೊಟ್ಟ ಒಬ್ಬ ಮಹಾಶಯನನ್ನು ಸುಪ ರಿಂಟೆಂಡೆಂಟಾಗಿ ನೇಮಿಸಿದರಂತೆ. ಈ ನೇಮಕಕ್ಕೆ ಒಂದು ವರ್ಷ ಹಿಂದಿದರೂ ಅವನು ಮದುವೆಯ ಪ್ರಸ್ತಾಪವನ್ನೇ ಎತ್ತಿಲ್ಲವಂತೆ. ಈಗ ಅವನ ಮೇಲೆ ಅವನು ಮದುವೆಯ ಪ್ರಸ್ತಾಪಕ್ಕೆ... ಕಚೇರಿಯಲ್ಲಿ ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ಅಪಾದನೆ ಹೂಡಿ ಅವನನ್ನು ಕೆಲಸದಿಂದ ಉಚ್ಚಾಟನೆ ಮಾಡಲಿದ್ದಾರಂತೆ. ಅವನ ನೇಮಕ ಇನ್ನೂ ಸ್ಥಿರಗೊಳಿಸಲ್ಪಡದ್ದರಿಂದ ಇದೇನೂ ಕಷ್ಟವಲ್ಲವಂತೆ. ಈಗ ಅವರ ಮಗಳನ್ನು ಮದುವೆಯಾಗಲು ಕಿಟ್ಟುವಿನ ಒಬ್ಬ ಸಹೋದ್ಯೋಗಿ ಕಾರ ಕೂನನೇ ಮುಂದೆ ಬಂದಿದ್ದಾನಂತೆ. ಅವನನ್ನು ಬೇರೊಂದು ಕಡೆ ವರ್ಗ ಮಾಡಿ ಅಲ್ಲಿ ಭಡತಿ ಕೊಡಿಸುವರಂತೆ. ಇದರಿಂದಾಗಿ ಕಚೇರಿಯಲ್ಲಿ ತುಂಬಾ ಅಸಮಾಧಾನದ ವಾತಾವರಣ ಉಂಟಾಗಿದೆಯಂತೆ. ಆದರೆ ರೈಲ್ವೇ ಬೋರ್ಡಿನಲ್ಲಿ ಎಂಜಿನಿಯರರ ಸಂಬಂಧಿಯೊಬ್ಬನು ಇದ್ದುದರಿಂದ ಅವರನ್ನು ತಡೆಗಟ್ಟಲು ಸಾಧ್ಯವಿಲ್ಲವಂತೆ.

"ಬಿ. ಎ. ಯಲ್ಲಿ ಎಂ. ಎಸ್. ಎಂ. ಮಾಡಿಯೂ ಕೊನೆಗೆ ಸಪ್ಲಿಮೆಂಟರಿಯಲ್ಲೇ ಥರ್ಡ್‌ಕ್ಲಾಸ್ ಗಳಿಸಿದ ಮಹಾಶಯ ಅವನು ಒಂದಕ್ಕೆ ಒಂದು ಕೂಡಿಸಿದರೆ ಎಷ್ಟೆಂದು ಕೇಳಿದರೆ ಮೂರು ಅಥವಾ ನಾಲ್ಕು ಎನ್ನಲೂ ಸಿದ್ಧ. ಅಂಥವ ಈಗ ಅಡಿಟರ್ ಆಗಲಿದ್ದಾನೆ! ನನ್ನಂಥವರ ಫಸ್ಟ್‌ಕ್ಲಾಸ್ ಎಮ್ಮೆ ಅಲ್ಲಿ ತೀರ ಅನಾವಶ್ಯಕ. ನಾವು ಕಾರಕೂನರಾಗಿಯೇ ರಿಟಾಯರ್ ಆಗಬೇಕಷ್ಟೆ!"


"ನೀನು ಹೇಳೋದನ್ನು ನಂಬಲಿಕ್ಕಾಗೋದಿಲ್ಲಯ್ಯ. ಅಯ್ಯಂಗಾರಿ ಗಳೆಲ್ಲ ಅತ್ಯಂತ ಬುದ್ಧಿವಂತರು ಎಂದು ಅಣ್ಣಾದೊರೆಯು ಬಾಯಿ ಯಿಂದಲೇ ನಾನು ಕೇಳಿದ್ದೇನೆ. ನಿಮ್ಮ ಜುಟ್ಟಿಗೆ ಹಗ್ಗ ಕಟ್ಟಿ ನೇತಾಡಿಸಿ ಓದುವಾಗ ನೀವು ನಿದ್ದೆಯಲ್ಲಿ ತೂಕಡಿಸದಂತೆ ನಿಮ್ಮ ಹೆತ್ತವರು ಹೇಗೆ ಯತ್ನಿಸುತ್ತಿದ್ದರೆಂಬುದನ್ನು ಪೆರಿಯಾರ್ ನಾಯಕರ್ ವರ್ಣಿಸುವುದನ್ನು ಕೇಳಿ ನಾನು ಹೊಟ್ಟೆ ತುಂಬಾ ನಕ್ಕಿದ್ದೆ. ಅದರೂ ಒಂದಕ್ಕೆ ಒಂದನ್ನು ಕೂಡಿ ಸಲಾರದ ಅಯ್ಯಂಗಾರಿಗಳೂ ಇದ್ದಾರೆಂದು ನೀವು ಹೇಳುತ್ತಿರುವುದು ಆಶ್ಚರ್ಯಕರ. ಬಹುಶಃ ಕೆಲಸ ತಪ್ಪಿಸಿಕೊಳ್ಳಲು ಹಾಗೆ ಅವನು ನಟಿಸು ತ್ತಾನೋ ಏನೋ!"

"ನೀನೂ ದ್ರಾವಿಡ ಕಳಗದವರಂತೆ ನುಡಿಯುತ್ತೀಯಲ್ಲ? ನೋಡು ನಮ್ಮ ಕಚೇರಿಯಲ್ಲೇ ಒಬ್ಬ ಹರಿಜನ ಕಾರಕೂನನಿದ್ದಾನೆ. ನಾವು ಒಂದು ದಿನದಲ್ಲಿ ಮಾಡುವಷ್ಟು ಕೆಲಸವನ್ನು ಅವನು ಒಂದೇ ತಾಸಿನಲ್ಲಿ ಮುಗಿಸಿ ಮತ್ತೆ ನಿನ್ನಂತೆ ಕತೆ—ಕಾದಂಬರಿಗಳನ್ನು ಓದುತ್ತಾ ಕುಳಿತುಕೊಳ್ಳು ತ್ತಾನೆ. ಅವನ ಕೆಲಸದ ಬಗ್ಗೆ ಟೀಕಿಸಲು ಯಾವ ಸುಪರಿಂಟೆಂಡೆಂಟ ರಿಗೂ ಧೈರ್ಯವಿಲ್ಲ. ಹೀಗಾಗಿ ದಡ್ಡರಿಗೆ ಜಾತಿಯೆಂಬುದಿಲ್ಲ ತಿಳಿಯಿತೆ? ಹಾಗೆಯೇ ಬುದ್ಧಿವಂತರಿಗೂ ಜಾತಿಯಿಲ್ಲ. ಈ ಎರಡು ವಿಧದವರು ಎಲ್ಲಾ ಜಾತಿಗಳಲ್ಲೂ ಹರಡಿ ಹೋಗಿದ್ದಾರೆ. ಮತ್ತೆ ಪೆರಿಯಾರರ ಪೊಲಿಟಿಕಲ್ ಫಿಲಾಸಫಿ ಕೇವಲ ಹಾಸ್ಯಾಸ್ಪದವಾದುದು. ಈಗ ನೋಡಿದರೆ ಅಣ್ಣಾ ದೊರೆಯನ್ನು ಮೀರಿಸುವ ಬರಹಗಾರರಾಗಲಿ, ಭಾಷಣಕಾರರಾಗಲಿ ತಮಿಳಿನಲ್ಲಿ ಎಷ್ಟು ಜನರಿದ್ದಾರೆ? ಮಗ ಬುದ್ಧಿಹೀನನಾದರೆ ಅವನ ಜುಟ್ಟಿಗಲ್ಲ ಕುತ್ತಿಗೆಗೆ ಹಗ್ಗ ಹಾಕಿ ಕಟ್ಟಿದರೂ ಅವನು ಬುದ್ಧಿವಂತ ನಾಗಲಾರ!"

"ನಾನೇನಾದರೂ ಪೆರಿಯಾರರ ಶಿಷ್ಯನೆಂದು ಭಾವಿಸಬೇಡ. ಆದರೆ ಈ ಊರಲ್ಲಿ ಜನಸಾಮಾನ್ಯರಲ್ಲಿರುವ ಪ್ರತೀತಿಯನ್ನು ನಿನ್ನ ಮುಂದಿಟ್ಟೆ, ಅಷ್ಟೆ. ಅಂತೂ ಎಲ್ಲ ಕಚೇರಿಗಳಲ್ಲೂ ನಡೆಯುವ ಸಾಮಾನ್ಯ ವ್ಯವಹಾರವಾಗಿರ ಬೇಕು ಇದು."

ನಾವು ಮನೆ ಸೇರಿದ ಮೇಲೂ ಕಿಟ್ಟು ಇನ್ನೂ ತನ್ನ ಸಹೋದ್ಯೋಗಿ ಗಳ ಅನೇಕ ಕತೆಗಳನ್ನು ಹೇಳಿದ. ಸರ್ಕಾರಿ ನೌಕರಿಗೆ ಇಷ್ಟು ಬರಹ ಮೂಲಕ ನೀತಿ ನಿಯಮಗಳಿದ್ದರೂ, ಅವರಲ್ಲಿಯೂ ವೈಯಕ್ತಿಕ ಪಕ್ಷ ಪಾತ, ದ್ವೇಷ-ವೈಷಮ್ಯಗಳಿಗೆ ಎಷ್ಟು ಮಹತ್ವವಿದೆ ಎಂಬುದನ್ನು ವಿವರಿ ಸಿದ. ಒಬ್ಬಳು ಸಿನಿಮಾ ನಟಿಯಾಗಲು ಒಂದು ಸ್ಟುಡಿಯೋ ಸೇರಿ, ಅಲ್ಲಿ ಒಂದೆರಡು ಚಿತ್ರಗಳಲ್ಲಿ ಚಿಕ್ಕ ಚಿಕ್ಕ ಪಾತ್ರಗಳಲ್ಲಿ ನಟಿಸಿ, ಮತ್ತೆ ನಿರು- ದ್ಯೋಗಿಯಾಗಿ ಕಚೇರಿಗಳಿಂದ ಕಚೇರಿಗೆ ಅಲೆದಾಡುತ್ತಿದ್ದವಳಾಗಿತ್ತು. ಹಾಗೆಯೇ ದಾರುಣವೂ ಆಗಿತ್ತು. ಅವಳು ತನ್ನ ಮನೆಯವರಿಂದ ಬಹಿಷ್ಕರಿಸಲ್ಪಟ್ಟು ಯಾರೋ ಒಬ್ಬ ಆಫೀಸರ ನೆರವನ್ನು ಮದುವೆಯಾಗಿ ಅವನ ಸೇವೆ ಯನ್ನು ಮಾತ್ರವಲ್ಲ ಅವನು ಮನೆಗೆ ಕರೆದುತರುವ ಇತರ ಗಿರಾಕಿಗಳ ಅಭೀಷ್ಟಕ್ಕೂ ತಲೆ ಬಾಗಬೇಕಿತ್ತಂತೆ.

ಹೀಗೆ ಮಾತುಕತೆ ನಡೆಯುತ್ತಿದ್ದಾಗ ಶಶಿಕಲಾ ಕೋಣೆಯೊಳಗೆ



"ಲಡ್ಡು ಇಷ್ಟು ಮೆತ್ತಗಿದೆಯಲ್ಲಾ! ಯಾರು ಮಾಡಿದ್ದೂ?"
ಅಜ್ಜಿ (ಕೂಡಲೇ): "ನಾನೇ ಮಾಡಿದೆ ಮಗಾ".

ಬಂದು ಅಂಬುಜವಮ್ಮಾಳ್ ನಲ್ಲಿಯಲ್ಲಿ ನೀರು ಬಾರದಂತೆ ಏನೋ ಕುತಂತ್ರ ಮಾಡಿದ್ದಾಳೆಂದು ಕಿಟ್ಟುವಿನೊಡನೆ ಹೇಳಿದಳು.

"ಏ! ನಾನಿನ್ನೂ ಸ್ನಾನ ಮಾಡಿಲ್ಲವಲ್ಲ! ಕ್ಷೌರ ಮಾಡಿಯಾಗಿದೆ."

"ಒಳಗೆ ಎರಡು ಪಾತ್ರೆಗಳಲ್ಲಿ ಸ್ವಲ್ಪ ನೀರಿದೆ. ಆದರೆ ನಿಮ್ಮ ಎಣ್ಣೆ ಸ್ನಾನಕ್ಕೆ ಸಾಲದು. ಎರಡು ಪಾತ್ರೆಗಳ ನೀರನ್ನು ಒಟ್ಟಿಗೆ ಕೂಡಿಸಿದರೂ ಒಂದು ಬಕೆಟ್ ಕೂಡಾ ತುಂಬಲಿಕ್ಕಿಲ್ಲ."

"ಅಂಬುಜಮ್ಮಾಳ್‌ಳ ಕೊಠಡಿಯಲ್ಲಿ ನೀರು ಬರುವುದಿಲ್ಲವೆ?" ಎಂದು ನಾನು ಪ್ರಶ್ನಿಸಿದೆ.

"ಅವಳು ಎಂಟು ಗಂಟೆಗೇ ಮನೆಗೆ ಕೀಲಿ ಹಾಕಿಕೊಂಡು ಹೊಸ ಸೀರೆಯುಟ್ಟುಕೊಂಡು ಹೊರಗೆ ಹೋಗಿದ್ದಾಳೆ. ಕೈಯ್ಯಲ್ಲೊಂದು ಪೆಟ್ಟಿಗೆಯೂ ಇತ್ತು. ಬಹುಶಃ ಮಗಳಲ್ಲಿಗೋ ಏನೊ!"

"ಸರಿ! ಅವಳು ಕೋಕ್ ತಿರುಗಿಸಿ ಕೀಲಿ ಹಾಕಿರಬೇಕು! ಕಿರಾತವರ್ಗದವಳು !"

ಎಂದು ಕಿಟ್ಟು ಕೋಪದಿಂದ ಸಿಡಿಮಿಡಿಗೊಂಡು ಕೆಳಗೆ ಹೋದ. ನಾನೂ ಅವನನ್ನು ಸರಿಸಿದೆ. ಎಷ್ಟೆಂದರೂ ಅವನ ಇಂಥ ತೊಂದರೆಗಳಲ್ಲಿ ನಾನೂ ಸಹಭಾಗಿಯಾಗಬೇಕಿತ್ತು. ಇಲ್ಲವಾದರೆ ಅವನು ನನ್ನಲ್ಲಿಟ್ಟಿದ್ದ ವಿಶ್ವಾಸಕ್ಕೆ ಬೆಲೆಯೆಲ್ಲಿ?

ನಾವು ನಲ್ಲಿಯನ್ನು ಪರೀಕ್ಷಿಸಿದೆವು. ಕೊಕ್‌ಗೆ ಕೀಲಿ ಹಾಕಿತ್ತು. ಕೀಲಿ ತೆಗೆದು, ಕೊಕ್ ತಿರುಗಿಸದೆ ನೀರು ಬರುವಂತಿರಲಿಲ್ಲ. ನಾವು ಇಷ್ಟೆಲ್ಲ ತನಿಖೆ ನಡೆಸುತಿದ್ದಾಗ ಮಾಧವಿ ಮತ್ತು ಅವಳ ತಂಗಿ ಸ್ನಾನದ ಮನೆಯಿಂದ ಹೊರಬಂದರು. ಮಾಧವಿಯ ತಲೆಕೂದಲಿನಲ್ಲಿ ಸಾಬೂನಿನ ನೊರೆ ಸ್ವಲ್ಪ ಕಾಣುತ್ತಿತ್ತು.

"ಏನು, ನಾಟಕಕ್ಕೆ ಮೇಕಪ್ ಮಾಡುತಿದ್ದಿರಾ ಬಚ್ಚಲು ಮನೆಯಲ್ಲಿ ?" ಎಂದು ನಾನು ನಕ್ಕು ಕೇಳಿದೆ. "ಕರೇ ಕೂದಲಿಗೆ ಸಾಬೂನಿನ ನೊರೆಯನ್ನು ಹಚ್ಚಿ ಬಿಳೀ ಕೂದಲು ಮಾಡುವುದು ಸಾಮಾನ್ಯವಾದ ಮೇಕಪ್ ಕಲೆ."

"ನಾವು ಒಳಗೆ ಸ್ನಾನ ಮಾಡುತಿದ್ದಾಗಲೇ ನೀರು ನಿಂತು ಹೋಯಿತು. ಅದು ಬರುವುದೋ ಎಂದು ಇಷ್ಟು ಹೊತ್ತು ಕಾದೆವು. ಈಗ ಸಾಬೂನಿನ ನೊರೆಯನ್ನು ಒರಸಿಕೊಂಡು ಬರಬೇಕಾಯಿತು"

ಎಂದು ಮಾಧವಿ ನಗುತ್ತಲೇ ಉತ್ತರಿಸಿದಳು. ಇತರ ಸಂದರ್ಭದಲ್ಲಾದರೆ ಕಿಟ್ಟು ನಮ್ಮ ನಡುವಿನ ಸಲುಗೆಯನ್ನು ಕಂಡು ಬೆರಗಾಗಬಹುದಿತ್ತು. ಆದರೂ ಶಶಿಕಲಳ ಮುಖದಲ್ಲಿ ಮಾತ್ರ ಏನೋ ಒಂದಿಷ್ಟು ಆಶ್ಚರ್ಯ ಹೊಳೆದಂತಾಯಿತು.

"ಇನ್ನೇನು ಮಾಡೋದು? ನಾವು ಈ ತಾಟಕಿಯ ಕೈಯ್ಯಲ್ಲಿ ಸಿಕ್ಕಿಬಿದ್ದೆವಲ್ಲ? ಬೇರೆ ಮನೆ ಹುಡುಕೋದು ಅನಿವಾರ್ಯವಾಯಿತೀಗ," ಎಂದು ಕಿಟ್ಟು ಸಿಡುಕಿನಲ್ಲಿ ಉದ್ಗರಿಸಿದ.

"ನೀನು ಸಿಟ್ಟು ಮಾಡಿ ಫಲವಿಲ್ಲ. ಮೊದಲು ನಿಮ್ಮಿಬ್ಬರೊಡನೆಯೂ ಇರುವ ಕೀಲಿ ಕೈಗಳ ಗೊಂಚಲುಗಳನ್ನು ತನ್ನಿ-ಆಮೇಲೆ ನೋಡುವ" ಎಂದೆ ನಾನು.

ಮಾಧವಿಯ ತಂಗಿ ಮೇಲೆ ಹೋಗಿ ಅವರ ಕೀಲಿ ಕೈಗಳ ಗೊಂಚಲನ್ನು ತಂದಳು. ಶಶಿಕಲಾ ಒಳಗಿನಿಂದ ಎರಡು ಗೊಂಚಲುಗಳನ್ನು ತಂದಳು. ನಾನು ಒಂದೊಂದೇ ಕೀಲಿ ಕೈಯ್ಯನ್ನು ತುರುಕಿಸಿ ನೋಡಿದೆ. ಆದರೆ ಕೀಲಿ ತೆಗೆಯುವುದು ಸಾಧ್ಯವಾಗಲಿಲ್ಲ. ಕೊನೆಗೆ ನನ್ನ ಪೆಟ್ಟಿಗೆಯ ಕೀಲಿಯ ನೆನಪಾಯಿತು. ಅದರ ಕೈಯನ್ನು ತಂದು ಕೀಲಿಯೊಳಗೆ ಹಾಕಿ ತಿರುಗಿಸಿದೆ. ಕೀಲಿ ತೆರೆಯಿತು.

"ಶಹಭಾಸ್!" ಎಂದು ಕಿಟ್ಟು ಚಿಕ್ಕ ಮಕ್ಕಳಂತೆ ಜಿಗಿಯುತ್ತ ಕೇಕೇ ಹಾಕಿದ. "ಅಂಬುಜಮ್ಮಾಳ್‌ಳ ತಂತ್ರವನ್ನೆದುರಿಸಲು ನೀನೇ ಸಮರ್ಥ."

"ಸಾಕೋ ನಿನ್ನ ಕಾಂಪ್ಲಿಮೆಂಟ್ಸ್. ಇನ್ನು ಸಾವಕಾಶವಾಗಿ ಎಣ್ಣೆ ತಿಕ್ಕಿಕೊಂಡು ಸ್ನಾನ ಮಾಡು."

ಎನ್ನುತ್ತ ನಾನು ಮೇಲೆ ನಡೆದೆ.



"ಅಂಬುಜಮ್ಮಾಳಿಗೆ ನಾನು ಹೆದರೋದಿಲ್ಲ" ಕಿಟ್ಟು ಹೇಳಿದ.

ನಾನು ತೋರಿಕೆಗೆ ತುಂಬಾ ಉತ್ಸಾಹದಲ್ಲಿದ್ದರೂ ಮನಸ್ಸಿನಲ್ಲಿ ಅವರ್ಣನೀಯವಾದ ಭಯವನ್ನು ತಾಳಿದ್ದೆ. ಅದು ನನ್ನ ಕುರಿತಾದ ಭಯವಲ್ಲದಿದ್ದರೂ ನನಗೂ ಅದಕ್ಕೂ ಅನ್ಯೋನ್ಯ ಸಂಬಂಧವಿತ್ತು. ಅದು ಕಿಟ್ಟುವಿನ ಬಗ್ಗಿನ ಭಯ. ಅವನು ಎಲ್ಲಿಯತನಕ ನೌಕರಿಯಲ್ಲಿರುತ್ತಾನೋ ಅಷ್ಟರತನಕ ಅಂಬುಜಮ್ಮಾಳ್‌ಳಂಥ ಕಟುಕ ಪ್ರವೃತ್ತಿಯ ಮನೆ ಮಾಲಕರ ಆಶ್ರಯದಲ್ಲೇ ದಿನಗಳೆಯಬೇಕಿತ್ತು. ಅಂಬುಜಮ್ಮಾಳ್ ಏನೋ ನೀರಿನ ಪೂರೈಕೆಯನ್ನು ತಡೆಹಿಡಿದಳು. ಅವಳು ಎಷ್ಟೆಂದರೂ ಅಬಲೆ. ಸಾಮ, ದಾನ, ದಂಡ, ಭೇದೋಪಾಯಗಳಲ್ಲಿ ಅವಳನ್ನು ಒಲಿಸಬಹುದು. ಆದರೆ ಅವಳಷ್ಟೇ ದುಷ್ಟ ಪ್ರವೃತ್ತಿಯ ಗಂಡಸು ಮನೆ ಮಾಲಿಕನಾಗಿದ್ದರೆ ಕಿಟ್ಟು ತನ್ನ ಮುಗ್ಧ ಹೆಂಡತಿಯೊಡನೆ ಹೇಗೆ ಅಂಥ ಮನೆಯಲ್ಲಿ ಮರ್ಯಾದೆಯಿಂದ ಮನಸ್ಸಿನ ಶಾಂತಿಯನ್ನು ರಕ್ಷಿಸಿ ಕಾಲಕಳೆಯಬಲ್ಲ? ಮನೆ ಮಾಲಕ ಎಂದರೆ, ಅವನು ತನ್ನ ಭಾಡೇದಾರರ ಮನೆಯಿಂದ ಕಳ್ಳತನ ಮಾಡಿಸಬಹುದು, ಅವರ ಮೇಲೆ ಅಪವಾದ ಹೊರಿಸಬಹುದು, ಅವರಿಗೆ ಅಪಮಾನ ಮಾಡಬಹುದು, ಅವರ ಜೀವನ ಸೌಲಭ್ಯಗಳಾದ ನೀರು, ದೀಪ ಮುಂತಾದುವನ್ನು ತಡೆಹಿಡಿಯಬಹುದು. ನಮ್ಮೂರಲ್ಲಿ ಒಬ್ಬ ಮನೆ ಮಾಲಕ ತಾನು ಬಾಡಿಗೆಗೆ ಕೊಟ್ಟಿದ್ದ ಮನೆಯವರನ್ನು ಖಾಲಿ ಮಾಡಿಸಲಿಕ್ಕಾಗಿ ಕೊಟ್ಟಿದ್ದ ಹಿಂಸೆಯ ಕತೆ ಆಗ ನೆನಪಾಯಿತು. ಮೊದಲು ಅವರನ್ನು ಅವನು ಹೀಗೆಯೇ ಹೆದರಿಸಿ ಓಡಿಸಲು ಯತ್ನಿಸಿದ. ಅದು ಸಫಲವಾಗದಿದ್ದಾಗ ಒಂದು ಕನ್ನಡಿ ಹಾವನ್ನು ಕೊಂದು ಬಾವಿಗೆ ಹಾಕಿದ. ಇದನ್ನು ಕಂಡ ಭಾಡೇದಾರರ ಕುಟುಂಬ ಕೂಡಲೆ ಮನೆ ಬಿಡಲೇಬೇಕಾಯಿತು.

ಸ್ನಾನ ಮಾಡಿ ಬಂದ ಕಿಟ್ಟುವಿನೊಡನೆ ನಾನು ಕಂಡಿದ್ದ, ಕೇಳಿದ್ದ ಇನ್ನೂ ಕೆಲವು ಘಟನೆಗಳನ್ನು ಹೇಳಿದೆ.

"ಒಬ್ಬ ಭಾಡೇದಾರ ರಾತ್ರಿ ಭೂತ ಪ್ರೇತಗಳ ಹೆದರಿಕೆ ತೋರಿಸಿ ಭಾಡೇದಾರರನ್ನು ಓಡಿಸಿದ. ಬಿಳೀ ವಸ್ತ್ರವೊಂದನ್ನು ಹೊದ್ದುಕೊಂಡು ಅವರೊಳಗೆ ಬ್ಯಾಟರಿ ದೀಪವನ್ನು ಹಚ್ಚಿ ಮಧ್ಯರಾತ್ರಿ ಕಿಟಕಿಯ ಬಳಿ ನಿಂತು ಬಾಗಿಲು ತಟ್ಟುತಿದ್ದ. ಒಂದೆರಡು ರಾತ್ರಿ ಹೀಗೆ ಕಳೆಯುವಾಗ ಮನೆಯೊಳಗಿದ್ದವರು ಕಿಟಕಿಯಿಂದ ಇಣಿಕಿದರು. ಕೂಡಲೇ ಮನೆಯೊಳಗೆ ಚೀರಾಟ ಕೇಳಬಂತು. ಮರುದಿನ ಬೆಳಗಾಗುವಾಗ ಅವರು ಬೇರೆ ಮನೆಗೆ ಹೋಗಿಯಾಗಿತ್ತು! ಇನ್ನೊಬ್ಬ ಮಹಾಶಯ ಭಾಡೇದಾರರ ಮನೆಯ ಬಾಗಿಲಲ್ಲೇ

ಮಲವಿಸರ್ಜನೆ ಮಾಡ[illegible]ದಗಿ ಅವರನ್ನು ಮನೆ ಬಿಡಿಸಿದ. ಮ[illegible]ಬ್ಬ ರಾತ್ರೋರಾತ್ರಿ ಎಳೆಂಟು ಕೂಲಿಯಾಳುಗಳನ್ನು ಗೊತ್ತು [illegible] ಯಾಗುವುದರೊಳಗೆ ಮನೆಯ ಹಂಚುಗಳನ್ನೆಲ್ಲ ತೆಗೆಸಿಬಿಟ್ಟ. ಅದೂ ಜಡಿ ಮಳೆಯ ಕಾಲದಲ್ಲಿ. ಭಾಡೇದಾರರು ಮುಂದೆ ಅವನ ಮೇಲೆ ಐಪ್ಲಿ ಹೂಡಿದರು. ಆದರೆ ಅವರು ಮರುದಿನವೇ ಬದಲಿಸಲೇಬೇಕಾಯಿತು. ಏಕೆಂದರೆ ಮಳೆಯ ನೀರು ಮನೆಯನ್ನೆಲ್ಲ ತುಂಬಿತು. ಮತ್ತೆ ಅವನಿಗೆ ತಿಂಗಳೊಂದಕ್ಕೆ ಐವತ್ತು ರೂಪಾಯಿ ಬಾಡಿಗೆ ಹೆಚ್ಚು ದೊರಕಿತು."

"ಆದರೆ ಅಂಬುಜಮ್ಮಾಳ್‌ಳಿಗೆ ನಾನು ಹೆದರೋದಿಲ್ಲ" ಎಂದ ಕಿಟ್ಟು. "ಹಾಗೆ ಅವಳು ನಮಗೆ ತ್ರಾಸ ಕೊಡತೊಡಗಿದ್ದರೆ ನನ್ನ ಸ್ನೇಹಿತ ಕಂದಸಾಮಿ ಪೋಲೀಸ್ ಇನ್ಸ್‌ಪೆಕ್ಟರನಿದ್ದಾನೆ. ಅವನನ್ನು ಕರೆದು ತಂದೇನು."

"ಪೋಲೀಸರ ಕೈಗೆ ಸಿಕ್ಕಿದರಾಯಿತು. ನಿನಗಾದರೂ ಅದರಿಂದ ಪ್ರಯೋಜನವೇನು?"

"ಹಾಗಾದರೆ ನಾನೂ ಮನೆ ಬದಲಿಸಬೇಕೆಂದು ನೀನು ಹೇಳುವುದೆ? ಎಂಥ ಸ್ತ್ರೀಪಕ್ಷಪಾತಿ ನೀನು! ನಿನ್ನ ಸಹಾನುಭೂತಿಗೆ ಸ್ಥಾನಾಸ್ಥಾನದ ವಿವೇಚನೆಯಿಲ್ಲ. ಅವಳು ಶಶಿಯನ್ನು ದೂಷಿಸಿದ್ದಾಳೆಂಬುದು ನಿನಗೆ ಗೊತ್ತೆ? ನಿನ್ನನ್ನು ನಾನು ಶಶಿಗೆ ಕಾವಲಿಗಾಗಿ ಕರೆತಂದಿರುವುದಂತೆ. ಮೊನ್ನೆ ಮುಸುರೆ ತಿಕ್ಕುವವಳೊಡನೆ ಆಕೆ ಹೇಳಿದ ಮಾತು ಮಾತ್ರ ಭಯಂಕರವಾದುದು. ನೀನೇನಾದರೂ ಗಾಬರಿಯಾಗಬೇಡ. ನಾನಿಲ್ಲದಾಗ ಶಶಿ ನಿನ್ನ ಕೋಣೆಗೆ ಬಂದು ಇರುವಳಂತೆ. ಸಾಮಾನ್ಯ ಮನುಷ್ಯನಾಗಿದ್ದರೆ ಇದನ್ನು ಕೇಳಿದೊಡನೆ ಒಂದೋ ಶಶಿಯನ್ನೋ ಇಲ್ಲವೇ ನಿನ್ನನ್ನೋ ಇಲ್ಲವೇ ಇಬ್ಬರನ್ನೋ ಕೊಂದು ಆತ್ಮಹತ್ಯೆ ಮಾಡಿಕೊಳ್ಳಬೇಕಿತ್ತು. ಆದ್ದರಿಂದಲೇ ನನಗೆ ಆಕೆಯ ಮೇಲೆ ಅಷ್ಟು ಹಠವಾಗಿದೆ"

"ನಿಮ್ಮಿಬ್ಬರ ಹಠದಿಂದ ಬೇರೆಯವರಿಗೆ ಲಾಭವಾಗದಿದ್ದರೆ ಸಾಕು."

"ಕಂದಸಾಮಿ ನಾನು ಚಂಡಲ್ಪೇಟೆಯಲ್ಲಿ ಒಟ್ಟಿಗೆ ಸಾಲೆಗೆ ಹೋಗುತ್ತಿದ್ದವರು. ಅವನಪ್ಪ ನನ್ನಪ್ಪನ ಕಕ್ಷಿಗಾರ. ಅವನು ನನ್ನಿಂದ ಹಣ ಸುಲಿಯಲಾರ."

"ನೋಡು, ಒಬ್ಬ ಎಷ್ಟು ಕಡೆ ಜಗಳ ಮಾಡಬಲ್ಲ? ಒಂದು ಕಡೆ ನಿನಗೆ ಕಚೇರಿ ಕೆಲಸ. ಇನ್ನೊಂದೆಡೆ ಇಲ್ಲಿ ಮನೆಯಲ್ಲಿ ಅಂಬುಜಮ್ಮಾಳ್‌ಳ ಧ್ಯಾನ. ಹೆಂಡತಿಗೆ ಅವಳು ಏನು ಮಾಡುತಿದ್ದಾಳೋ ಎಂಬ ಕುತೂಹಲ. ಬೇರೆ ಚಿಂತೆ ನಿನಗೆಷ್ಟಿದೆಯೋ ನನಗೆ ತಿಳಿಯದು. ಆದರೆ ಮನಸ್ಸಿಗೆ ಎಳ್ಳಷ್ಟೂ ಶಾಂತಿಯಿಲ್ಲದೆ ಜೀವನವನ್ನು ಹೇಗೆ ಸವಿಯಬಲ್ಲೆ? ನಿಮ್ಮಿಬ್ಬರಲ್ಲೂ ಈಗ ತಾರುಣ್ಯ ಉಕ್ಕಿ ಹರಿಯುತ್ತಿದೆ. ಈಗ ನಿಮ್ಮೊಳಗೆ ಬೆಳೆದ ಅನ್ಯೋನ್ಯತೆಯೇ ನಿಮ್ಮಿಬ್ಬರನ್ನು ಶಾಶ್ವತವಾಗಿ ಬಂಧಿಸುವ ಸಾಧನ. ಹೀಗಿರುವಾಗ ಇಂಥ ಸದಾ ಅನಿಶ್ಚಿತವಾದ ದ್ವೇಷಮಯ ವಾತಾವರಣದಲ್ಲಿ ನೀವು ಹೇಗೆ ಮನಬಿಚ್ಚಿ ವರ್ತಿಸಬಲ್ಲಿರಿ? ದ್ವೇಷ ಮತ್ತು ಪ್ರೀತಿಗಳು ಒಂದಕ್ಕೊಂದು ವಿರುದ್ಧವಾದವುಗಳು. ಅದರಲ್ಲೂ ದ್ವೇಷದ ಭಾವನೆ ಪ್ರಬಲ ಶಕ್ತಿಯದು. ಅದು ಇತರ ಸಾತ್ವಿಕ ಮನೋಭಾವನೆಗಳನ್ನೆಲ್ಲ ನುಂಗಿಬಿಡಬಲ್ಲಂಥದ್ದು."

"ಅದು ಏನೇ ಇದ್ದರೂ ಸರಿ;" ಕಿಟ್ಟುವೆಂದ. "ಇದು ಮಾರ್ಕ್ಸ್ ಹೇಳಿದ ವರ್ಗಸಮರದ ಒಂದು ಮುಖ. ಮಾಲಕ ಬಂಡವಲವರ್ಗದವ. ಭಾಡೇದಾರ ಕೂಲಿಕಾರ ವರ್ಗದವ. ನಮ್ಮ ವಿವಾದವನ್ನು ನಾನು ಈ ದೃಷ್ಟಿಯಿಂದ ನೋಡುತ್ತಿದ್ದೇನೆ. ಈಗೊಮ್ಮೆ ಬಂಡವಲವರ್ಗಕ್ಕೆ ನಾನು ಶರಣಾದೆನೆಂದರೆ ಅದರ ಪರಿಣಾಮವಾಗಿ ನನ್ನಲ್ಲಿ ದಾಸ್ಯಪ್ರವೃತ್ತಿ ಬೆಳೆಯುವುದು. ಇಂಥ ಪ್ರವೃತ್ತಿಯನ್ನು ಬೆಳೆಸಲು ನಾನು ಸಿದ್ಧನಿಲ್ಲ. ಅದು ನನ್ನ ಭವಿತವ್ಯಕ್ಕೇ ಮಾರಕ."

"ಸಾಂಕೇತಿಕವಾಗಿ ನೀನೆಂದುದು ನಿಜವೆಂದು ಭಾವಿಸಿದರೂ ನೀನು ಸೋಲುವ ಹೋರಾಟದಲ್ಲಿ ಏಕೆ ಭಾಗವಹಿಸಿ ನಿನ್ನ ಶಕ್ತಿಯನ್ನು ಅಪವ್ಯಯ ಮಾಡಬೇಕು? ನೀನೇನು ಮಾಡಿದರೂ ಅಂಬುಜಮ್ಮಾಳ್‌ಳ ಒಡೆತನಕ್ಕೆ ಕುಂದುಬಾರದು. ಮತ್ತೇನಾದರೂ ಭಾಡೇದಾರನನ್ನು ಮನೆಯೊಡೆಯನನ್ನಾಗಿ ಮಾಡುವ ಕ್ರಾಂತಿಕಾರಕ ಶಾಸನ ಬಂದೀತೆಂದು ನಿರೀಕ್ಷಿಸಲು ಸಾಧ್ಯವಿಲ್ಲ. ನಮ್ಮ ರಾಜ್ಯಾಂಗದಲ್ಲಿರುವ ಮೂಲಭೂತ ಹಕ್ಕುಗಳಿಗೆ ಅಂಥ ಕಾನೂನು ತೀರಾ ವ್ಯತಿರಿಕ್ತ. ಕಾನೂನು ನಿನಗೆ ಕೊಟ್ಟಿರುವ ಸೌಲಭ್ಯವೆಂದರೆ ನಿನ್ನ ಭಾಡೇದಾರಿಕೆಗೆ ಭದ್ರತೆ. ಅಷ್ಟೆ. ಮಾಲಕರಿಗೂ ಭಾಡೇದಾರರಿಗೂ ಒಳ್ಳೆಯ ಸಂಬಂಧವಿರುವ ವರೆಗೆ ಅದು ರಕ್ಷೆ. ಮಾಲಕ ಭಾಡೇದಾರನೊಡನೆ ಜಗಳಾಡಬಾರದು; ಪೀಡಿಸಬಾರದು ಎಂದು ಅದು ಹೇಳುವುದಿಲ್ಲ. ಮಾಲಕ ಬೇಕೆಂದೇ ನೀರು, ವಿದ್ಯುಚ್ಛಕ್ತಿ ಮುಂತಾದವುಗಳ ಪೂರೈಕೆಗೆ ಆತಂಕ ಮಾಡಿದರೆ ನೀನು ಕೋರ್ಟಿಗೆ ಹೋಗಬೇಕು. ಅಲ್ಲಿ ಅವನ ಮೇಲೆ ಅರ್ಜಿ ದಾಖಲ ಮಾಡಿ ಹುಕುಂ ಪಡೆಯಬೇಕು. ಇದೇನಾದರೂ ಒಂದೆರಡು ಗಂಟೆಯೊಳಗೆ ಆಗುವ ಕೆಲಸವಲ್ಲ. ನಿನಗಾದರೂ ಕಚೇರಿಗೆ ಹೋಗುವುದನ್ನು ಬಿಟ್ಟು ಕೋರ್ಟಿಗೆ ಹೋಗಲು ಎಲ್ಲಿ ಸಮಯವಿದೆ? ನಿಜವಾಗಿ ನೋಡಿದರೆ ಭಾಡೇದಾರಿಕೆಯ ಶಾಸನ ಭಾಡೇದಾರರನ್ನು ಶಾಶ್ವತವಾಗಿ ಭಾಡೇದಾರರನ್ನಾಗಿ ಮಾಡುತ್ತದೆ."

"ವಕೀಲನಾಗಲಿರುವ ನೀನು ಹೀಗೆಂದರೆ ನಿನಗೆ ಕಕ್ಷಿಗಾರರಾದರೂ ಹೇಗೆ ಸಿಕ್ಕಿಯಾರು? ಒಮ್ಮೆ ಭಾಡಿಗೆ ಹಿಡಿದೆನೆಂದರೆ ಮತ್ತೆ ಐದಾರು ವರ್ಷ ನಮ್ಮ ಹಕ್ಕನ್ನು ಅಲುಗಾಡಿಸಲು ಯಾರಿಗೂ ಸಾಧ್ಯವಿಲ್ಲವೆಂದು ನನ್ನಪ್ಪ ಹೇಳುತಿದ್ದರಲ್ಲ!"

"ಅಂದರೆ ಅದಕ್ಕೆ ಮಾಲಕ ತನ್ನ ಸಹಕಾರವೀಯಬೇಕು ಅವನು ಕೂಡಾ ಆ ಹೋರಾಟವನ್ನು ಕೋರ್ಟಿನೊಳಗೆ ಮಾತ್ರ ನಡೆಸಬೇಕು. ಅದರ ಬದಲು ಅವನು ದಿನಸಿಡೀ ನಿನ್ನನ್ನು ನಿನ್ನ ಮನೆಯವರನ್ನು ಬೆದರಿಸುತ್ತಾ, ಗದರಿಸುತ್ತಾ ಕುಳಿತರೆ ನೀನು ಹೇಗೆ ಸಹಿಸಬಹುದು? ನಿಜವಾಗಿ ಅಂಬುಜಮ್ಮಾಳ್‌ಳ ನಾಲಿಗೆಯೇ ಅವಳ ಪ್ರಚಂಡವಾದ ಆಯುಧವಾಗಿದೆ. ನಾಲಿಗೆಯೊಡನೆ ಹೀಗೆ ನೀರಿನ ನಲ್ಲಿಯನ್ನು ನಿಲ್ಲಿಸುವ ದುಷ್ಟ ಪ್ರವೃತ್ತಿಯೂ ಅವಳಲ್ಲಿದೆ. ಹೀಗೆ ಮಾಡಿದವಳು ನಾಳೆ ನಿನ್ನ ಹೆಂಡತಿ ಹೊರಗಿರುವಾಗ ಅವಳು ಮೆಲ್ಲನೆ ಕಿಟಕಿಯಿಂದ ನಿಮ್ಮ ಆಹಾರಕ್ಕೆ ವಿಷವನ್ನು ಕಲಿಸಬಹುದು! ಅದಕ್ಕೇ ನಾನು ಹೇಳಿದುದು, ಈ ಭಾಡೇದಾರಿ ಕಾನೂನಿನಿಂದ ಭಾಡೇದಾರಿ ವರ್ಗ ಸ್ಥಿರವಾಗಿ ಉಳಿಯುವುದೆಂದು. ನನಗೆ ಗೊತ್ತಿದ್ದವರಲ್ಲೇ ಕೆಲವರು ಕಾನೂನಿನ ಇಂಥ ಕೃತ್ರಿಮ ಭದ್ರತೆಯ ಆತ್ಮವಿಶ್ವಾಸವನ್ನು ತಾಳಿ ವರ್ಷಗಟ್ಟಲೆ ಸ್ವಂತ ಮನೆ ಖರೀದಿ ಮಾಡಲು ನಿರಾಕರಿಸಿದವರಿದ್ದಾರೆ. ಈಗ ಇಪ್ಪತ್ತೈದು ಸಾವಿರಕ್ಕೆ ಮಾರಾಟವಾಗುವ ಮನೆಗೆ ಕೇವಲ ಐದಾರು ವರ್ಷಗಳ ಹಿಂದೆ ಒರೇ ಐದಾರು ಸಾವಿರ ರೂಪಾಯಿ ಬೆಲೆಯಿದ್ದಾಗ ಅವರೊಡನೆ ಅಷ್ಟು ಹಣವಿದ್ದರೂ ಅವರವರಿಂದ ಮನೆ ಕೊಳ್ಳಲು ನಿರಾಕರಿಸಿದರು. ತಾವು ಹತ್ತು ರೂಪಾಯಿ ಭಾಡಿಗೆ ಕೊಡುತಿದ್ದೇವೆ. ಅದು ಎರಡು ಸಾವಿರ ರೂಪಾಯಿಯ ಬಡ್ಡಿಯಾಯಿತು. ಅದರ ಮೇಲೆ ಐದಾರು ಸಾವಿರ ರೂಪಾಯಿಗಳನ್ನೇಕೆ ನಾವು ವಿನಿಯೋಗಿಸಿ ನಷ್ಟಮಾಡಿಕೊಳ್ಳಬೇಕು ಎಂಬುದು ಅವರ ವಾದವಾಗಿತ್ತು. ಆದರೆ ಈಗ ಈ ಬೆಲೆಗಳು ನೆಗೆಯುತ್ತಿವೆ; ಹಣದ ಬೆಲೆ ಕುಸಿಯುತ್ತಿದೆ. ಮಾಲಕನ ಕೃಪೆಯೊಂದೇ ಅಂಥವರನ್ನು ರಕ್ಷಿಸಬೇಕಷ್ಟೆ. ಅದೂ ಹಿಂದೆ ಹತ್ತು ರೂಪಾಯಿ ಭಾಡಿಗೆ ಬರುತ್ತಿದ್ದ ಮನೆಗೆ ಈಗ ನೂರು ರೂಪಾಯಿ ಭಾಡಿಗೆ ಬರುವ ಸಂಭವವಿರುವಾಗ ಯಾವ ಮಾಲಕ ಸುಮ್ಮನಿದ್ದಾನು?"

"ನೀನು ನಿಜವಾಗಿಯೂ ಈ ವಿಷಯದಲ್ಲಿ ಒಂದು ಪ್ರಬಂಧ ಬರೆದರೆ ಪೀಎಚ್ಡಿ ಪಡೆಯಬಹುದು. ಆದರೆ ನೀನೆಂದುದರಲ್ಲೂ ತಥ್ಯವಿಲ್ಲವೆಂದು ನಾನು ಒಪ್ಪಿಕೊಳ್ಳದಿರಲಾರೆ. ನೀನು ಒಂದು ವಿಷಯವನ್ನು ಮಾತ್ರ ಮರೆತಿರುವಂತೆ ತೋರುತ್ತದೆ. ಇಂದಿನ ನನ್ನಂಥ ಭಾಡೇದಾರರು ಅದೂ ಇಷ್ಟು ಮಹತ್ವದ ನಗರದಲ್ಲಿ ವಾಸಿಸುವ ಭಾಡೇದಾರರು ತಾವು ಭಾಡೇದಾರರಾಗಿಯೇ ಸಾಯುವ ಸಂಭವ ಹೆಚ್ಚು. ಉದಾಹರಣೆಗೆ, ನನ್ನನ್ನೇ ತೆಗೆದುಕೊಳ್ಳು ಮೂವತ್ತೋ ನಲವತ್ತೋ ಸಾವಿರ ರೂಪಾಯಿಗಳನ್ನು ತೆತ್ತು ಸ್ವಂತ ಮನೆಯನ್ನು ಖರೀದಿಮಾಡುವ ಚೇತನ ನನ್ನಲ್ಲಿ ಎಂದಾದರೂ ಉಂಟಾದೀತೆಂದು ಹೇಳಲು ಸಾಧ್ಯವಿಲ್ಲ. ನನ್ನ ಪಗಾರದ ಉತ್ಪನ್ನದಿಂದಂತೂ ಇದು ಸಾಧ್ಯವೇ ಇಲ್ಲ. ಹೀಗಿರುವಾಗ ನಾನೀಗ ಭಾಡೇದಾರ ವರ್ಗದ ಶೀಲವನ್ನು ನನ್ನಲ್ಲಿ ಚೆನ್ನಾಗಿ ಬೆಳೆಸಿಕೊಳ್ಳಬೇಕು. ಅಂಬುಜಮ್ಮಾಳ್‌ಳಿಗೆ ಹೆದರಿ ಮನೆಬಿಟ್ಟರೆ, ಎಲ್ಲರೂ ನನಗೆ ಅಪಹಾಸ್ಯ ಮಾಡಲಿಕ್ಕಿಲ್ಲವೆ?"

"ನಾನು ನಿನ್ನ ಇಚ್ಛೆಯನ್ನು ವಿರೋಧಿಸಲಾರೆ, ಕಿಟ್ಟು". ಎಂದು ಸಮಾಧಾನದಿಂದ ಉತ್ತರಿಸಿದೆ. "ನಾನಂತೂ ಈ ಭಾಡೆದಾರಿ ಮನೆಯ ಜೀವನವನ್ನನುಭವಿಸಿದವನಲ್ಲ. ಆದರೆ ಭಾಡೇದಾರರು ಉದ್ಧಾರವಾಗುತ್ತಾರೆ, ಅವರಿಗೆ ಉಜ್ವಲ ಭವಿತವ್ಯವಿದೆ ಎಂದು ಮಾತ್ರ ನಾನು ನಂಬಲಾರೆ. ಏಕೆಂದರೆ ಇಂದು ಮನೆಯ ಮಾಲಕತ್ವದ ರೀತಿಯೇ ಬದಲುತ್ತಿದೆ. ಇಂದು ಮನೆ ಖರೀದಿ ಮಾಡುವವನಾರು? ಮಾಡಬಲ್ಲವನಾರು?

ಯಾಣೇಶ ಪಾಸಾಗಿದ್ದನೆ. ಯಥೇಷ್ಟ ಹಣ ಹೇಗಾಗುತ್ತದೆ? ಕಳ್ಳಸಂತೆ ವ್ಯಾಪಾರದಿಂದ ಮತ್ತು ಕಂಟ್ರಾಕ್ಟ್ ವ್ಯವಹಾರದಿಂದ. ಒಬ್ಬ ಐ. ಸಿ. ಎಸ್. ಅಧಿಕಾರಿ ಇಂದು ಹೆಚ್ಚೆಂದರೆ ಎರಡೊ ಮೂರೊ ಸಾವಿರ ಪಗಾರ ಪಡೆಯಬಹುದು. ನಮ್ಮ ಅಧ್ಯಕ್ಷರೇ ಆದರೂ ಆರೇಳು ಸಾವಿರ ಪಗಾರ ಗಳಿಸಬಹುದು. ಆದರೆ ಈ ಉತ್ಪತ್ತಿ ಎಲ್ಲಿ; ನಮ್ಮ ಇಂದಿನ ವ್ಯಾಪಾರಿಗಳ ಉತ್ಪತ್ತಿಯೆಲ್ಲಿ? ಹೀಗೆ ಸದಾಚಾರದ ದಾರಿಯನ್ನು ತ್ಯಜಿಸಿದವರೇ ಧನಿಕರಾಗಿ ಮನೆ ಮಾಲಕರಾದರೆ. ಭಾಡೇದಾರರಾದರೂ ಅಂಥವರಿಂದ ಎಂಥ ಸಾತ್ವಿಕ ವರ್ತನೆಯನ್ನು ನಿರೀಕ್ಷಿಸಬಹುದು?"

ಕಿಟ್ಟು ತುಸು ಹೊತ್ತು ಸುಮ್ಮನಿದ್ದ. ನನ್ನ ವಿಚಾರಸರಣಿ ಉಪನ್ಯಾಸದ ರೂಪವನ್ನು ತಾಳುತ್ತಿದೆ ಎಂದು ನಾನು ಶಂಕಿಸಿದೆ. ನಾನಂತೂ ಕಿಟ್ಟುವಿನ ಸಂಸಾರ ಜೀವನದಲ್ಲಿ ಆಕಸ್ಮಿಕವಾಗಿ ಕ್ಷಣಕಾಲ ಬೆರೆತುಕೊಂಡಿದ್ದೇನೆ. ಅಂತೆಯೇ ಅಲ್ಪಕಾಲದಲ್ಲೇ ನಾನು ಪುನಃ ಬೇರೆಯಾಗುತ್ತೇನೆ. ಕಿಟ್ಟುವನ್ನಾದರೂ ಭಾಡೇದಾರರ ವರ್ಗದಿಂದ ಕಿತ್ತಿಹಾಕುವಂಥ ಚೇತನ ನನ್ನಲ್ಲಿಲ್ಲ. ನನ್ನ ಮಾತುಗಳಿಂದ ಅವನ ಕಳವಳ ಇನ್ನೂ ಉಗ್ರವಾಗಬಹುದಿತ್ತಲ್ಲದೆ, ಬೇರೇನೂ ಪ್ರಯೋಜನವಾಗುವಂತಿರಲಿಲ್ಲ. ಆ ಮೊದಲೇ ನನ್ನಂತೆ ಅಥವಾ ನನಗಿಂತಲೂ ಆಳವಾಗಿ ಅವನು ಇವನ್ನೆಲ್ಲ ವಿಚಾರಿಸಿರಲೂಬಹುದು. ಆದ್ದರಿಂದ ಇಂಥ ಒಣ ಉಪನ್ಯಾಸದಿಂದ ಕಿಟ್ಟುವಿನ ಮನಸ್ಸು ನೋಯಲೂಬಹುದು ಎಂದು ಅಂಜಿದೆ.

"ನಾನು ಒಂದು ವೇಳೆ ಮನೆಯನ್ನು ಖರೀದಿ ಮಾಡಿದೆನೆಂದೇ ಹೇಳು. ಆದರೆ ನನಗೆ ವರ್ಗವಾಗುವುದಿಲ್ಲವೆ? ಹೋದಲ್ಲೆಲ್ಲ ಮನೆ ಖರೀದಿ ಹಿಡಿಯುವುದು ಸಾಧ್ಯವೆ? ಏನೋ ಕೆಲವು ಸ್ಥಳಗಳಲ್ಲಿ ನಮ್ಮ ಇಲಾಖೆಯ ಬಿಡಾರಗಳಿರಬಹುದೆನ್ನು. ನೀನೆನ್ನುವಂತೆ ಈ ನೌಕರಿಯಿಂದಾಗಿ ನಾನು ಶಾಶ್ವತ ಭಾಡೇದಾರನಾಗಿಯೇ ಇರಬೇಕಾಗುತ್ತದೆಂಬುದು ನಿಸ್ಸಂದೇಹ. ನೌಕರಿ ಬಿಟ್ಟರೆ ಇಷ್ಟು ಕಲಿತುದು ವ್ಯರ್ಥವಾಗುತ್ತದೆ."

"ನೌಕರಿ ಬಿಡೆಂದು ನಾನೆನ್ನಲಿಲ್ಲ."

"ಸರಿ. ನೋಡು ಮದುವೆಯ ಸಮಯ ಮಾವ ಹತ್ತು ಸಾವಿರ ರೂಪಾಯಿ ವರದಕ್ಷಿಣೆ ಕೊಟ್ಟರು. ಬೇಕಾದರೆ ಇನ್ನೂ ಒಂದಿಷ್ಟು ಹಣವನ್ನು ಮುಂದೆ ಕೊಡುತ್ತೇನೆಂದಿದ್ದರು. ಆದರೆ ಮದುವೆಯಾದ ಎರಡು ತಿಂಗಳಲ್ಲಿ ಆದರಿಂದ ಎಂಟು ಸಾವಿರ ರೂಪಾಯಿ ಮರಳಿ ತಕ್ಕೊಂಡರು. ಅವರಿಗೆ ತಿಂಗಳಿಗೆ ಎರಡು ಸಾವಿರ ಅಂದಾಜು ಪಗಾರ ಬರುತಿದ್ದರೂ ನಾಲ್ಕು ಮಗಳಂದಿರಿಗೆ ಮದುವೆ ಮತ್ತು ಎರಡು ಮಕ್ಕಳಿಗೆ ಉಚ್ಚ ವಿದ್ಯಾಭ್ಯಾಸಗಳಿಗಾಗಿ ಸುಮಾರು ಮೂವತ್ತು ಸಾವಿರ ರೂಪಾಯಿ ಸಾಲ ಮಾಡಿದ್ದಾರಂತೆ. ರಿಟಾಯರ್ ಆಗಲು ಇನ್ನು ಬರೆ ಒಂದು ವರ್ಷವಿದೆ. ಅವರಾದರೂ ಇಪ್ಪತ್ತು ಸಾವಿರ ರೂಪಾಯಿ ಕೊಡುತಿದ್ದರೆ ಏನಾದರೂ ಒಂದು ಸಣ್ಣ ವ್ಯಾಪಾರ ಆರಂಭಿಸುತಿದ್ದೆ."

"ಹುಂ! ನೀನಿನ್ನು ವ್ಯಾಪಾರ ಆರಂಭಿಸುತ್ತೀ!" ಎಂದು ನಾನು ಉದ್ಗರಿಸಿದೆ.

"ಅಂದ ಹಾಗೆ ಪದ್ಮಿನಿಯ ಮನೆಯ ಕಂಪೌಂಡಿನಲ್ಲೊಂದು ಔಟ್ ಹೌಸ್ ಇದೆಯಂತೆ" ಎಂದನವ.

"ನನಗೇನು?" ಎಂದು ನಿರಾಸಕ್ತಿಯನ್ನು ಪ್ರದರ್ಶಿಸಿದೆ.

"ಮೊನ್ನೆ ಅವಳು ಇಲ್ಲಿಗೆ ಬಂದಿದ್ದಳಂತೆ, ಅಲ್ಲವೆ?"

ನನ್ನನ್ನು ಸಂದಿಗ್ಧದಲ್ಲಿ ಹಾಕುವ ಪ್ರಶ್ನೆಯಾಗಿತ್ತದು. ಹೀಗೆ ಶಂಕೆಯನ್ನು ಪ್ರಚೋದಿಸಬಲ್ಲ ರೀತಿಯಲ್ಲಿ ಕಿಟ್ಟುವಿನದು ಎತ್ತಿದ ಕೈ. ಈಗ ನಾನು ಒಂದೋ ನಾವಿಬ್ಬರೂ ಭೇಟಿಯಾದುದನ್ನು ಹೇಳಬೇಕು. ಇಲ್ಲವಾದರೆ ನಾನು ಆಕೆಯನ್ನು ನೋಡಿಲ್ಲವೆಂದು ಸುಳ್ಳು ಹೇಳಬೇಕು; ಆದರೆ ಆ ಸುಳ್ಳು ಮಾತು ಎಷ್ಟರ ಮಟ್ಟಿಗೆ ಸಮರ್ಪಕವಾದೀತೆಂದು ಹೇಳಬರುವಂತಿರಲಿಲ್ಲ. ಒಂದೋ ಕಿಟ್ಟುವಿಗೆ ಶಶಿಕಲ ಈ ಸಂಗತಿ ಹೇಳಿರಲೂಬಹುದು, ಇಲ್ಲವೇ ಪದ್ಮಿನಿಯೇ ಸ್ವತಃ ಅವನನ್ನು ಭೆಟ್ಟಿಯಾದಾಗ ಅವಳೂ ಹೇಳಿರಬಹುದು. ಇನ್ನು ನಾನಾಗಿ ಅವಳ ಕಾರಿನಲ್ಲಿ ಸವಾರಿ ಮಾಡಿದುದಕ್ಕೆ ಏನು ವಿವರಣೆ ಕೊಡಬಹುದು?

"ಹೌದು ಬಂದಿದ್ದಳು" ಎಂದು ನೀರಸವಾಗಿ ಉತ್ತರಿಸಿದೆ.

"ನೀನೂ ಅವಳ ಕಾರಿನಿಂದ ಇಳಿದೆಯಂತಲ್ಲ?"

ಶಶಿಕಲಾ ಅವಳನ್ನು ಗುರುತು ಹಿಡಿದಿದ್ದಳೆಂಬುದು ಆಗ ನನಗೆ ನಿಶ್ಚಯವಾಯಿತು.

"ಹೌದು. ನಾನು ನೋಡಲಿಕ್ಕೆ ಬರುವಾಗ ರಸ್ತೆಯಲ್ಲಿ ಅವಳ ಕಾರು ಸಿಕ್ಕಿತು. ಅದರಲ್ಲ ಮೌಂಟ್ ರೋಡ್ ವರೆಗೆ ಹೋಗಿ ಹಿಂದೆ ಬಂದೆವು. ಅಷ್ಟೆ."

"ಆದರೆ ನನ್ನೊಡನೆ ಈ ವರೆಗೆ ಯಾಕೆ ಹೇಳಲಿಲ್ಲ ಕಳ್ಳ?" ಎಂದು ಕಿಟ್ಟು ನನ್ನ ಬೆನ್ನಿಗೆ ಲಘುವಾಗಿ ಅಪ್ಪಳಿಸಿದ. "ನೀನು ಪರೀಕ್ಷೆಗಾಗಿ ಬಂದುದೋ ಪದ್ಮಿನಿಗಾಗಿ ಬಂದುದೋ?"

"ಹೇಳುವುದೇನಿದೆ? ಉದಾಹರಣೆಗೆ ನಾನು ನಿನ್ನೊಡನೆ ಇಷ್ಟು ದಿನಗಳಿಂದ ಇದ್ದೇನೆ. ಇದನ್ನು ನನ್ನ ಸ್ನೇಹಿತರಿಗೆಲ್ಲ ತಿಳಿಸಿದ್ದನೆಯ? ನಿಜವಾಗಿ ಪದ್ಮಿನಿಗೆ ಕೂಡಾ ಇದನ್ನು ಹೇಳಿಲ್ಲ."

"ಅಲ್ಲ ಲೋಕದ ಎಲ್ಲ ಆಗುಹೋಗುಗಳ ಕುರಿತು ನಿನ್ನ ಲೆಕ್ಚರ್ ನಡೆಯುತ್ತಿರುವಾಗ ಈ ಸಂಗತಿಯನ್ನು ಹೇಳಿದ್ದರೆ ಏನಾಗುತ್ತಿತ್ತು? ನಾನು ಬೇಕೆಂದೇ ನಿನ್ನನ್ನು ಕೇಳಲಿಲ್ಲ. ಶಶಿ ಅಂದೇ ಸಂಜೆ ನನಗೆ ಹೇಳಿದ್ದಳು. ಅವಳು ನಮ್ಮ ಕಾಲೇಜಿನ ಗ್ರೂಪ್ ಫೋಟೋ ನೋಡಿ ಪದ್ಮಿನಿಯ ಗುರುತು ಹಚ್ಚಿದಳಂತೆ."

"ಅಬ್ಬ! ನಿನ್ನಷ್ಟೇ ದೊಡ್ಡ ಗುಪ್ತಚಾರಿಣಿ ನಿನ್ನ ಹೆಂಡತಿ. ಆ ಫೋಟೋ ನೋಡಿ ಗುರುತು ಹಿಡೆಯುವುದರ ಬದಲು ನನ್ನೊಡನೇ ಕೇಳುತಿದ್ದರೆ ನಾನು ಹೇಳಿಬಿಡುತಿದ್ದೆನಲ್ಲ? ನಿನ್ನ ಗಂಡನ ದೋಸ್ತಿಯೆಂದು?"

"ನನ್ನ ದೋಸ್ತಿಯಾದರೆ ನಿನ್ನನ್ನೇಕೆ ಕಾರಿನಲ್ಲಿ ಕರೆದುಕೊಂಡು ಹೋದಳು?"

"ಒಂದು ಕ್ಷಣ ಆಕೆ ನನ್ನನ್ನು ಕಾರಿನಲ್ಲಿ ಕುಳ್ಳಿರಿಸಿದರೆ ನಿಮ್ಮ ಹಳೇ ಬಾಂಧವ್ಯದ ಅಂಟು ಮಾಯವಾಗುವುದೇ? ಛೀ ಎಂಥ ಬುದ್ಧಿಹೀನ ನೀನು! ಈಗ ಬೇಕಾದರೆ ಪ್ರತಿಯಾಗಿ ನಿನಗೆ ಅವಳ ಔಟ್ ಹೌಸನ್ನೇ ಪ್ರವೇಶಿಸಬಹುದಲ್ಲ? ಅವಳು ನಿನ್ನಿಂದ ಬಹುಶಃ ಬಾಡಿಗೆ ಕೂಡಾ ಪಡೆಯಲಿಕ್ಕಿಲ್ಲ!"

"ಅವಳಪ್ಪ ಬಿಟ್ಟಾರೆ? ಒಳ್ಳೆಯ ಆಸಾಮಿ ಅವರು."

"ಹಾಗಾದರೆ ನಿನ್ನ ಸಂಶೋಧನೆ ಅಲ್ಲಿಯತನಕವೂ ನಡೆದಿದೆ ಎಂದಾಯಿತು."

"ಅವರ ಮನೆಯ ಬಳಿ ನನ್ನ ಸಹೋದ್ಯೋಗಿಯೊಬ್ಬ ಇದ್ದಾನೆ. ಅವನಿಗೆ ಅವರದೆಲ್ಲ ಗೊತ್ತು. ಅವನೇ ಔಟ್ ಹೌಸ್ ಖಾಲಿಯಾದ ಸುದ್ದಿ ಹೇಳಿದವ. ಒಂದು ವರಾಂಡ, ಒಂದು ಬೆಡ್ ರೂಮ್, ಒಂದು ಹಾಲ್, ಒಂದು ಅಡಿಗೆ ಮನೆ, ಬಚ್ಚಲು ಎಲ್ಲ ಇರುವ ಬೆಂಕಿಪೆಟ್ಟಿಗೆಯಂಥ ಕಟ್ಟಡವಂತೆ. ಬಾಡಿಗೆ ಮಾತ್ರ ಅರುವತ್ತು ರೂಪಾಯಿಯಂತೆ. ಹಿಂದಿನವರು ನಲ್ವತ್ತು ಕೊಡುತಿದ್ದರಂತೆ."

"ಆದರೆ ಅಲ್ಲಿ ಇರುವ ಎಲ್ಲಾ ವೈಶಿಷ್ಟ್ಯಗಳನ್ನು ಅವನು ನಿನಗೆ ಹೇಳಿರಲಿಕ್ಕಿಲ್ಲ."

"ಅಂದರೆ ನೀನೂ ಅದನ್ನು ನೋಡಿದ್ದೀಯಾ?"

"ಇಲ್ಲಪ್ಪ. ಅವಳ ಮನೆಯೆಲ್ಲಿಯೆಂಬುದೇ ನನಗೆ ಗೊತ್ತಿಲ್ಲ. ಆದರೆ ಅಲ್ಲಿ ದೊರಕುವ ಅವಳ ಸಾನ್ನಿಧ್ಯಕ್ಕಾಗಿ ನೀನು ಎಷ್ಟು ಬಾಡಿಗೆ ತೆರಲು ಸಿದ್ಧನಿದ್ದೀ ಎಂಬುದು ಮಾತ್ರ ನಿನ್ನ ಸಹೋದ್ಯೋಗಿಗೆ ಗೊತ್ತಿರಲಿಕ್ಕಿಲ್ಲ."

"ಏ ಸಾಕುಮಾಡೋ! ನನಗೆ ಈಗ ಮನೆಯಲ್ಲಿರುವ ಜಬ್ಬಳ ಭಾರವೇ ಸಾಕೋ ಸಾಕಾಗಿದೆ. ಇನ್ನು ಪದ್ಮಿನಿಯನ್ನು ಒಲ್ಮೆಸಿ ಏನು ಮಾಡಬಹುದು?"

"ಅವಳ ಔಟ್ ಹೌಸ್‌ನ ಸುದ್ದಿಯನ್ನು ನೀನೇ ತೆಗೆದವ. ನಾನು ಬೇಡ ಬೇಡವೆಂದರೂ, ನನ್ನನ್ನು ಕೆಣಕಿ ನನ್ನಿಂದ ಅವಳ ಸಮಾಚಾರವನ್ನು ನೀನೇ ಪಡೆದವ. ಈಗ ಸಾಕುಮಾಡಬೇಕೆನ್ನುವವನೂ ನೀನೇ."

ಕೆಳಗೆ ಯಾರೋ ಮಾತಾಡುತ್ತಿರುವುದು ಕೇಳಿತಾಗ.

"ಹಾಂ. ನಮ್ಮ ತಾಟಕಿ ಅಮ್ಮಾಳ್‌ಳ ಸವಾರಿ ಚಿತ್ತೈಸಿತೋ ಏನೋ. ಕೀಲಿ ತೆಗೆದ ಸಂಗತಿ ಅವಳಿಗೆ ತಿಳಿಯಲಿಕ್ಕಿಲ್ಲ. ಏನು ಮಾಡುತ್ತಾಳೋ ನೋಡ್ತೇನೆ" ಎಂದು ಅವನು ಕೋಣೆಯಿಂದ ಹೊರಹೋದ.

ಅಂತೂ ಅಂದಿನ ಅರ್ಧದಿನದ ಅಭ್ಯಾಸ ವ್ಯರ್ಥವಾಯಿತಲ್ಲ! ಎಂದು ನನಗೆ ಸ್ವಲ್ಪ ಕಸಿವಿಸಿಯಾಯಿತು. ಆದರೂ ಒಟ್ಟಿನಲ್ಲಿ ಕಿಟ್ಟುವಿಗೆ ನನ್ನಿಂದ ಸ್ವಲ್ಪವಾದರೂ ಅಂದು ಪ್ರಯೋಜನವಾಯಿತಲ್ಲ! ಎಂದು ಹೆಮ್ಮೆಪಟ್ಟೆ. ಆದರಲ್ಲೂ ಮಾಧವಿ ಮತ್ತು ಅವಳ ತಂಗಿಗೂ ನನ್ನಿಂದ ಉಪಕಾರವಾಯಿತೆಂಬುದನ್ನು ನಾನು ಮರೆಯಲು ಸಾಧ್ಯವಿರಲಿಲ್ಲ.

೮

ನನ್ನ ಪರೀಕ್ಷೆ ಮರುದಿನ ನಡೆಯಲಿತ್ತು. ನಾನು ಪರೀಕ್ಷೆಯ ವಿಷಯದ ಪುಸ್ತಕಗಳನ್ನು ಸಾಧಾರಣ ಮೇಲಿಂದ ಮೇಲೆ ನೋಡಿ ಮರುದಿನ ಸಾಕಷ್ಟು ಬೇಗ ಏಳಬೇಕೆಂದು ದೀಪ ನಂದಿಸಿ ಮಲಗಿದೆ. ಹಾಗೆಯೇ ನಿದ್ದೆಯ ಜೊಂಪು ಹಿಡಿಯಿತು.

ಪಕ್ಕದಲ್ಲೇ ಬಾಗಿಲು ಬಡಿಯುವ ಸದ್ದು ಕೇಳಿ ನನಗೆ ಪುನಃ ಎಚ್ಚರವಾಯಿತು. ಯಾರೋ ಮಾಧವಿಯ ನೆಂಟರು ಇರಬಹುದೆಂದು ಪುನಃ ಕಣ್ಣು ಮುಚ್ಚಿದೆ. ಆದರೆ ಅಷ್ಟರಲ್ಲಿಯೇ ಬೂಟ್ಸನ ಸಪ್ಪಳ ಮತ್ತು ಗದರಿಸುವ ಶಬ್ದ ಕೇಳಿ ನಾನು ಎದ್ದು ಸ್ವಲ್ಪ ಹೊತ್ತು ಆಲಿಸಿದೆ. ಅಂಬುಜಮ್ಮಾಳ್ ಬಾಗಿಲು ತೆಗಿಸಬೇಕೆಂದು ಒತ್ತಾಯಪಡಿಸುತ್ತಿದ್ದಳು. ನಾನು ಇದೇನೆಂದು ದೀಪ ಹಚ್ಚಿ ಬಾಗಿಲು ತೆರೆದೆ.

ಮಾಧವಿಯ ಕೋಣೆಯ ಹೊರಗೆ ಅಂಬುಜಮ್ಮಾಳ್ ಮತ್ತು ಒಬ್ಬ ಪೋಲೀಸು ಅಧಿಕಾರಿ ನಿಂತಿದ್ದರು. ಮಾಧವಿ ಕಣ್ಣುಜ್ಜಿಕೊಳ್ಳುತ್ತ ಬಾಗಿಲಿಗೆ ಬಂದು,

"ಯಾರದು?" ಎಂದು ಇಂಗ್ಲಿಷಿನಲ್ಲಿ ಗದರಿಸಿದಳು.

"ನಾನು ಪೋಲೀಸ್ ಇನ್‌ಸ್ಪೆಕ್ಟರ್. ನೀವು ಇಲ್ಲಿ ವ್ಯಭಿಚಾರ ಮಾಡುತ್ತಿರುವಿರೆಂದು ನನಗೆ ಸುದ್ದಿ ಸಿಕ್ಕಿದೆ. ಕೋಣೆಯೊಳಗೆ ಬೇರೆ ಯಾರಿದ್ದಾರೆಂದು ನನಗೆ ತನಿಖೆ ನಡೆಸಬೇಕಾಗಿದೆ."

"ಇದು ಸುಳ್ಳು" ಎಂದು ಮಾಧವಿ ಗುಡುಗಿದಳು. "ಕೋಣೆಯೊಳಗೆ ನನ್ನ ತಂಗಿಯ ಹೊರತು ಬೇರಾರೂ ಇಲ್ಲ."

"ನಾನು ನೀನೆಂದುದನ್ನು ನಂಬೋದಿಲ್ಲ. ಒಳಗೆ ತನಿಖೆ ನಡೆಸಲೇ ಬೇಕಾಗಿದೆ."

"ನಿಮ್ಮ ಸರ್ಚ್ ವಾರಂಟು ಎಲ್ಲಿದೆ ? ಅದನು ತೋರಿಸಿ," ಎಂದು ಆಕೆ ಪ್ರತಿಯಾಗಿ ಕೇಳಿದಳು.

"ಇದಕ್ಕೆ ವಾರಂಟು ಜರೂರಿ ಇಲ್ಲ. ನೀನೀಗ ಕೋಣೆಯೊಳಗೆ ಹೋಗಲು ಬಿಡದಿದ್ದರೆ ನಾನು ನಿನ್ನನ್ನು ದೂಡಿ ಒಳನುಗ್ಗಬೇಕಾಗುತ್ತದೆ."

ಹೀಗೆನ್ನುವಾಗ ನಾನೂ ಅವರ ಬಳಿಗೆ ಹೋಗಿದ್ದೆ. ಸೆರೆಯ ವಾಸನೆಯಲ್ಲಿ ಅಲ್ಲಿ ಮೂಗು ಮುಚ್ಚಿಕೊಳ್ಳಬೇಕಾಗಿತ್ತು. ಅಂಬುಜಮ್ಮಾಳ್‌ಳ ಕಣ್ಣುಗಳೂ ಕೆಂಪಾಗಿದ್ದುವು.

"ನಾವು ಬರೇ ಹೆಂಗಸರೆಂದು ಬಲಾತ್ಕಾರಮಾಡಿದರೆ ಜೋಕೆ ತಿಳಿಯಿತೆ? ನಮಗೂ ಬೇಕಾದವರು ಇಲ್ಲೇ ಪೋಲೀಸು ಇಲಾಖೆಯಲ್ಲಿ ಇರಬಹುದೆಂಬುದನ್ನು ಮರೆಯಬೇಡಿ. ಆದ್ದರಿಂದ ವಾರಂಟು ತೋರಿಸಿ, ಪಂಚರನ್ನು ಕರೆಸಿ. ನಿಮ್ಮ ಝಡತಿ ಕೊಟ್ಟು ಆ ಮೇಲೆ ಸರ್ಚ್ ನಡೆಸಿ" ಎಂದಳು ಮಾಧವಿ. ಅಷ್ಟರಲ್ಲಿ ಅವಳ ತಂಗಿಯೂ ಕಣ್ಣೊರಸಿಕೊಂಡು ಹೊರಗೆ ಬಂದಳು.

"ಅದೆಲ್ಲ ಕಾನೂನು ನೀವು ನನಗೆ ಹೇಳಿ ಕೊಡೋದು ಬೇಡ. ನನ್ನ ಡ್ಯೂಟಿ ಹೇಗೆ ಮಾಡಬೇಕೆಂಬುದು ನನಗೆ ಗೊತ್ತಿದೆ. ವಾರಂಟಂತೆ, ಪಂಚರಂತೆ ......"

"ಒಂದು ನಿಮಿಷ ಇನ್‌ಸ್ಪೆಕ್ಟರ್. ಈಗ ಬಂದೆ"

ಎಂದು ನಾನು ನನ್ನ ಕೋಣೆಯೊಳಗೆ ಓಡಿಹೋಗಿ ಅಲ್ಲಿದ್ದ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪುಸ್ತಕವನ್ನು ತಂದೆ.

"ಏನದು ? ನಿನಗೇನು ಇದರಲ್ಲಿ ಕೆಲಸ?" ಎಂದು ಇನ್‌ಸ್ಪೆಕ್ಟರ್ ನನಗೆ ಗದರಿಸಿದ.

"ಅಲ್ಲ, ನಿಮಗೆ ಪಂಚರು, ವಾರಂಟು ಇತ್ಯಾದಿಗಳ ವಿಚಾರವೇ ಗೊತ್ತಿಲ್ಲೆಂತ ಕಾಣುತ್ತದೆ. ಆದ್ದರಿಂದ ನಿಮಗೊಂದು ಪ್ರತಿ ಕ್ರಿಮಿನಲ್ ಪ್ರೊಸೀಜರ್ ಕೋಡನ್ನು ಉಡುಗೊರೆ ಕೊಡಲು ತಂದಿದ್ದೇನೆ. ದಯವಿಟ್ಟು ಇದನ್ನು ಸ್ವೀಕರಿಸಿ. ಪರಾಂಬರಿಸಿ. ಆಮೇಲೆ ಅದರಲ್ಲಿ ಬರೆದಂತೆ ನಿಮ್ಮ ಕರ್ತವ್ಯನಿರ್ವಹಣೆ ಮಾಡಿ" ಎನ್ನುತ್ತ ಪುಸ್ತಕವನ್ನು ಅವನ ಕಡೆಗೆ ಕೈಯಲ್ಲಿ ಚಾಚಿದೆ.

ಇನ್‌ಸ್ಪೆಕ್ಟರ್ ತುಟಿ ಕಚ್ಚಿ ನನ್ನನ್ನು ದುರದುರನೆ ನೋಡಿದ. ಕುಡಿದ ಅಮಲಿನಿಂದಾಗಿ ಅವನಿಗೆ ನೆಟ್ಟಗೆ ನಿಲ್ಲಲೂ ಆಗುತ್ತಿದ್ದಿಲ್ಲ. ಅಂಬುಜಮ್ಮಾಳ್ ಪತೆ ಬಗ್ಗಿಸಿದ್ದಳು.

"ನಿಮಗೇನೋ ಆರಾಮವಿಲ್ಲವ್ರೋ ಏನೋ ! ನೀವು ಆತ್ತಿತ್ತ ನಿಂತಲ್ಲೇ ವಾಲುತಿದ್ದೀರಲ್ಲ ? ಬೇಕಾದರೆ ಕುರ್ಚಿ ತಂದು ಕೊಡುತ್ತೇನೆ. ಕುಳಿತುಕೊಂಡು ಆರಾಮವಾಗಿ ಓದಿ. ಇಲ್ಲಿಂದ ಯಾರೂ ತಪ್ಪಿಸಿ ಓಡಿ ಹೋಗದಂತೆ ನಾನು ಬೇಕಾದರೆ ನೋಡಿಕೊಳ್ಳುತ್ತೇನೆ."

ಹೀಗೆನ್ನುವಾಗ ಮಾಧವಿ ತನ್ನ ಕೋಣೆಯೊಳಗಿಂದ ಒಂದು ಕುರ್ಚಿಯನ್ನು ಹೊರಗೆ ತಂದಿಟ್ಟಳು.

ನಾನು ನನ್ನ ಕೋಣೆಯ ಕೀಲಿಯನ್ನು ಮುಹಡಿಯಿಂದ ಕೆಳಗಿಳಿಯುವ ಬಾಗಿಲಿಗೆ ಹಾಕಿದೆ.

"ಸರಿ, ಇನ್‌ಸ್ಪೆಕ್ಟರರೇ ನೀವು ಇದನ್ನೋದಿಯಾಗುವ ತನಕ ಎಲ್ಲವೂ ಭದ್ರವಾಯಿತು. ಓದಿಯಾದ ಮೇಲೆ ನನಗೆ ಹೇಳಿ" ಎಂದೆ ನಾನು ಹುಸಿ ಗಾಂಭೀರ್ಯದ ಧ್ವನಿಯಲ್ಲಿ.

ಇನ್‌ಸ್ಪೆಕ್ಟರ್ ನನ್ನ ಮೇಲಿನ ಕೋಪವನ್ನು ಕಷ್ಟದಲ್ಲಿ ನುಂಗಿಕೊಂಡಂತೆ ತೋರಿತು. ಕುರ್ಚಿಯನ್ನು ಗರ್ರನೆ ಎಳೆದು ಅದರಲ್ಲಿ ಕುಳಿತುಕೊಂಡು ನನ್ನನ್ನೇ ಸ್ವಲ್ಪ ಹೊತ್ತು ನೋಡಿದ.

"ನಿನ್ನನ್ನೂ ಬಂಧಿಸಬಲ್ಲೆ ನಾನು ಗೊತ್ತೆ?" ಎಂದು ಕೊನೆಗೆ ನನ್ನನ್ನು ಪ್ರಶ್ನಿಸಿದ.

"ನೀವೇನು, ಬರೇ ಕಾನ್‌ಸ್ಟೇಬಲ್ ಕೂಡಾ ಉಗ್ರ ಅಪರಾಧಗಳಲ್ಲಿ ನನ್ನನ್ನು ಬಂಧಿಸಬಲ್ಲ. ಇದು ನಿಷ್ಠಾವಂತ ಪ್ರಜೆಗಳಾದ ನಾವು ಹುಟ್ಟುವಾಗಲೇ ಪಡೆದು ಬಂದಿರುವ ಮೂಲಭೂತ ಹಕ್ಕು."

"ನನ್ನ ಕರ್ತವ್ಯನಿರ್ವಹಣೆಗೆ ಅಡ್ಡಿ ಬಂದಿದೆಯೆಂದು ನಿನ್ನನ್ನು ಕೈದು ಮಾಡಬಲ್ಲೆ."

"ಅದನ್ನು ನಾನು ಮೊದಲೇ ಒಪ್ಪಿಕೊಂಡೆನಲ್ಲ? ನೋಡಿ, ನಾನೂ ನಿಷ್ಠಾವಂತ ಪ್ರಜೆ. ಕಾನೂನನ್ನಾಗಲೀ, ಅದನ್ನು ಚಲಾಯಿಸುವ ವ್ಯಕ್ತಿಗಳನ್ನಾಗಲೀ ನಾನು ಎಂದೂ ಆತಂಕ ಮಾಡುವವನಲ್ಲ. ಕಾನೂನಿನ ಮೇಲೆ ನಿಮಗೆ ಎಷ್ಟು ನಿಷ್ಠೆಯಿದೆಯೊ ಅದಕ್ಕಿಂತಲೂ ಹೆಚ್ಚಿನ ಪೂಜ್ಯಭಾವನೆ ನನಗಿದೆ. ಆದ್ದರಿಂದಲೇ ನೀವು ಅದಕ್ಕೆ ಅಪಚಾರವೆಸಗದಂತೆ ಕಾನೂನು ಪುಸ್ತಕವನ್ನೇ ನಿಮ್ಮಲ್ಲಿಟ್ಟದ್ದೇನೆ."

"ನಾವೇನಾದರೂ ಕಾನೂನು ಗೊತ್ತಿಲ್ಲದವರು, ಇಲ್ಲವೇ ಅದನ್ನು ಮುರಿಯುವವರು ಎಂದು ಭಾವಿಸಬೇಡಿ ಇನ್‌ಸ್ಪೆಕ್ಟರ್ ನಾವು ಸೆಕ್ರೆಟೇರಿಯೇಟ್‌ನಲ್ಲಿ ಕೆಲಸ ಮಾಡುವವರು. ನಿಮ್ಮದೇ ಹೋಂ ಡಿಪಾರ್ಟ್‌ಮೆಂಟಿನಲ್ಲೇ ಇದ್ದೇವೆ."

ಎಂದು ಮಾಧವಿ ಧ್ವನಿಗೂಡಿಸಿದಳು. ಇನ್‌ಸ್ಪೆಕ್ಟರನ ಹಣೆಯಲ್ಲಿ ಬೆವರು ಬಂತು. ಅಷ್ಟರಲ್ಲಿ ಕಿಟ್ಟು ಹೊರಗೆ ರಸ್ತೆಯಿಂದ ಕರೆಯುವುದು ಕೇಳಿತು. ಬೇಗನೆ ಅಲ್ಲಿ ಒಂದು ಚೀಟಿಯನ್ನು ಬರೆದು ಕಿಟಿಕಿಯಿಂದ ಅವನಿಗೆ ಎಸೆದೆ. ಅದನ್ನು ಹೆಕ್ಕಿಕೊಂಡು ಅವನು ತಲೆಯಲ್ಲಾಡಿಸಿ ಎದುರಿನ ಡಾಕ್ಟರರ ಮನೆಗೆ ಹೋದ.

ನಾನು ಪುನಃ ಇನ್‌ಸ್ಪೆಕ್ಟರನಿದ್ದಲ್ಲಿಗೆ ಹೋದೆ. ಅವನು ಬೆವರೊರಸಿಕೊಳ್ಳುತ್ತ ನಾನು ಕೊಟ್ಟಿದ್ದ ಪುಸ್ತಕದ ಹಾಳೆಗಳನ್ನು ಉಪಾಯವಿಲ್ಲದೆ ತಿರುವಿಹಾಕತೊಡಗಿದ. ಅಂಬುಜಮ್ಮಾಳ್ ನೆಲದ ಮೇಲೆ ಕುಳಿತುಕೊಂಡು ತೂಕಡಿಸತೊಡಗಿದಳು. ಮಾಧವಿ ಮತ್ತು ಅವಳ ತಂಗಿ ಸುಮ್ಮನೆ ನಿಂತಿದ್ದರು.

ಹೀಗೆಯೇ ಸುಮಾರು ಹದಿನೈದು ನಿಮಿಷ ಕಳೆದಿರಬಹುದು. ನನಗೆ ಈ ಉದ್ವೇಗದಲ್ಲಿ ಮರುದಿನದ ಪರೀಕ್ಷೆಯ ನೆನಪೂ ಮರೆತುಹೋಗಿತ್ತು. ಇನ್‌ಸ್ಪೆಕ್ಟರ್ ಎಷ್ಟು ಪುಟಗಳನ್ನು ತಿರುವಿಹಾಕಿದರೂ ಸೆರೆಯ ಗುಂಗಿನಲ್ಲಿ ಅವುಗಳ ಅಕ್ಷರಗಳಾದರೂ ಕಾಣುತಿದ್ದವೋ ಇಲ್ಲವೋ! ಹಾಗೆ ಒಂದು ವೇಳೆ ಅದನ್ನೋದಿದರೂ ಅಷ್ಟು ಸುದೀರ್ಘ ವಾಕ್ಯಗಳನ್ನೊಳಗೊಂಡ ನಿಬಂಧನೆಗಳ ಅರ್ಥವಾದರೂ ಆಗುವಷ್ಟು ಅವನಿಗೆ ವಿದ್ಯಾರ್ಹತೆ ಇತ್ತೆಂದು ಹೇಳುವುದೂ ಕಷ್ಟ. ಎಲ್ಲಕ್ಕಿಂತ ಮೇಲೆ ಐನೂರಕ್ಕಿಂತಲೂ ಹೆಚ್ಚು ನಿಬಂಧನೆಗಳನ್ನೊಳಗೊಂಡ ಆ ಪುಸ್ತಕದಿಂದ ಝಡತಿ ಬಗ್ಗೆ ಇದ್ದ ನಿಬಂಧನೆಗಳನ್ನು ಹುಡುಕಿ ತೆಗೆಯುವ ಕೆಲಸವಂತೂ ಅವನಿಗೆ ಹುಲ್ಲು ಮೆಟ್ಟೆಯಿಂದ ಸೂಜಿಯನ್ನು ಹುಡುಕಿ ತೆಗೆಯುವಷ್ಟೇ ದುಷ್ಕರವಾದ ಕೆಲಸವೆಂಬುದು ನನಗೆ ಖಚಿತವಾಗಿತ್ತು

ಒಂದೆರಡು ಸಲ ಕೆಮ್ಮಿದ. ಹಲವು ಬಾರಿ ಆಕಳಿಸಿದ. ಮತ್ತೆ ಗಂಟಲು ಕೆರೆದುಕೊಂಡ. ಅವನಿಗೆ ಈ ಸನ್ನಿವೇಶದಿಂದ ಹೇಗೆ ಪಾರಾಗುವುದೆಂದು ತೋಚುತ್ತಿರಲಿಲ್ಲವೆಂಬುದರಲ್ಲಿ ಸಂಶಯವಿರಲಿಲ್ಲ.

ತೋ... ಹಗಲಿಡೀ ಮಳೆ ಬಿಸಿಲೆನ್ನದೆ ಓಡ್ಯಾಡಿ ಅವರಿಗೆ ಸಾಕೋ ಸಾಕಾಗಿರಬೇಕು. ಅವರಿಗೆ ಸ್ವಲ್ಪ ಕಾಫಿ ಮಾಡಿಕೊಡಬಾರದೆ? ನಿಮ್ಮೊಡನೆ ಹಾಲಿರಬೇಕಲ್ಲ?"

ಎಂದು ನಾನು ವ್ಯಂಗ್ಯವಾಗಿ ನುಡಿಯಲು ಮಾಧವಿ ಘೊಳ್ಳನೆ ನಕ್ಕಳು. ಅವಳ ತಂಗಿಯೂ ನಗು ತಡೆಯಲಾರದೆ ಮುಖವನ್ನು ಸೆರಗಿನಿಂದ ಮುಚ್ಚಿಕೊಂಡಳು. ಇನ್ಸ್‌ಪೆಕ್ಟರ್ ಅರ್ಥಹೀನವಾಗಿ ನೆಲವನ್ನು ನೋಡತೊಡಗಿದ. ಅವನ ಮುಖದಲ್ಲಿ ಬೆವರಿಳಿಯತೊಡಗಿತು. ಕೊನೆಗೆ ತನ್ನ ಗಡಿಯಾರವನ್ನು ನೋಡಿದ.

"ಸರಿ, ಇಂದು ನಾನು ನಿಮಗೆಲ್ಲ ಮಾಫಿ ಬಿಟ್ಟಿದ್ದೇನೆ. ನನಗೆ ಬೇರೆ ಕೆಲಸಕ್ಕೆ ಹೋಗಬೇಕಾಗಿದೆ. ಇನ್ನು ಮುಂದೆ ಮಾತ್ರ ಹೀಗೆ ವರ್ತಿಸಿದರೆ ಜೋಕೆ! ನಾನು ಹೀಗೇ ಬಿಡುವವನಲ್ಲ. ನನಗೆ ನೀವು ಕಾನೂನು ಹೇಳಿಕೊಡುವ ಅವಶ್ಯವಿಲ್ಲ."

"ಇದು ಬಹಳ ದುಃಖದ ವಿಷಯ ಇನ್ಸ್‌ಪೆಕ್ಟರ್" ಎಂದೆ ನಾನು ವಿಡಂಬನೆಯ ಧ್ವನಿಯಲ್ಲಿ. "ನೀವಿಷ್ಟು ಕಷ್ಟಪಟ್ಟು ನಡುರಾತ್ರಿಯಲ್ಲಿ ನಮ್ಮನ್ನೆಬ್ಬಿಸಿಯೂ ಬರಿಗೈಯ್ಯಲ್ಲಿ ಹಿಂದೆ ಹೋಗಲು ಬಯಸಿದ್ದೀರಲ್ಲ?"

"ಏ! ನೀನೇನೋ ಬಫೂನ್‌ನಂತೆ ಮಾತಾಡುತಿದ್ದೀ. ನನ್ನ ಕೈಯ ರುಚಿ ನೋಡಬೇಕೆಂದಿದೆಯೆ? ಒಳ್ಳೆಯ ಮಾತಿನಿಂದ ಬಾಗಿಲಿನ ಕೀಲಿ ತೆಗಿ" ಎಂದು ಕುರ್ಚಿಯಿಂದೆದ್ದು ನನ್ನ ಬಳಿಗೆ ಜಿಗಿಯಲು ಯತ್ನಿಸುವಾಗ ನಾನು ಫಕ್ಕನೆ ಬದಿಗೆ ಹಾರಿ ಅವನ ಮೊಣಕಾಲನ್ನು ನನ್ನ ಕಾಲಿನಿಂದ ಮೆಲ್ಲಗೆ ತುಳಿದೆ. ಮೊದಲೇ ಅಮಲಿನಿಂದ ತನ್ನ ಕೈಕಾಲುಗಳ ಹಿಡಿತವನ್ನು ಕಳೆದುಕೊಂಡ ಅವನಿಗೆ ಈ ತುಳಿತ ಸಾಕಾಗಿತ್ತು. ಅವನು ಧೊಪ್ಪನೆ ನೆಲದ ಮೇಲೆ ಬಿದ್ದುಬಿಟ್ಟ.

"ಬಾಗಿಲು ತೆಗೆಯಿರಿ!"

ಎಂದು ಹೊರಗಿನಿಂದ ಸದ್ದು ಕೇಳಿತು. ಅದರೊಡನೆ ಮೋಟಾರಿನ ಬಾಗಿಲು ತೆರೆಯುವ ಹಾಕುವ ಗೊಂದಲವೂ ಕೇಳಿ ಬಂತು. ಏಣಿಯಲ್ಲಿ ಏರುವ ಶಬ್ದ ಕೇಳಿದೊಡನೆ ಮುಹಡಿಯ ಬಾಗಿಲಿಗೆ ಹಾಕಿದ್ದ ಕೀಲಿಯನ್ನು ತೆಗೆದು ಕದ ತೆರೆದೆ.

ಬೂಟ್ಸ್‌ಗಳ ಸಪ್ಪಳಕ್ಕೆ ಇನ್ಸ್‌ಪೆಕ್ಟರ್ ಕ್ಷಣಕಾಲ ಅವಾಕ್ಕಾದ. ಕಾಲುಗಳನ್ನೆಳೆದು ಏಳಲು ಅವನು ಪ್ರಯತ್ನಿಸುತಿದ್ದರೂ ಅವನಿಗೆ ಎದ್ದು ಕುಳಿತುಕೊಳ್ಳಲೂ ಸಾಧ್ಯವಾಗಲಿಲ್ಲ.

ಒಳಗೆ ಬಂದವರು ಅವನ ಮುಖಕ್ಕೆ ಲೈಟ್ ಹಾಕಿದರು.

ಸಲಾಮು ಹೊಡೆಯಲು ಯತ್ನಿಸಿದ.

"ಎರೆಸ್ಟ್ ಹಿಮ್,"

ಇಬ್ಬರು ಪೋಲೀಸರು ಆಗ ಮುಂದೆ ಬಂದು ಅವನನ್ನು ಹಿಡಿದರು.

ಅಂಬುಜಮ್ಮಾಳ್‌ಗೆ ಒಮ್ಮೆಲೇ ಎಚ್ಚರವಾಗಿ ಚೀರಾಡುತ್ತ ... ಓಡಿದಳು.

"ಅವಳನ್ನು ಹಿಡಿದು ತನ್ನಿ" ಎಂದು ಗರ್ಜಿಸಿದರು, ಪೋಲೀಸ್ ಸುಪರಿಂಟೆಂಡೆಂಟ್.

ಅವಳು ಮೆಟ್ಟಲಿಳಿಯುವಾಗ ಸೀರೆ ಕಾಲಿಗೆ ಸಿಕ್ಕಿಯೋ ... ಧೊಪ್ಪನೆ ಕೆಳಗೆ ಬಿದ್ದುದು ಕೇಳಿತು.

"ಆಚೆ ಮನೆಯಿಂದ ಇಬ್ಬರನ್ನು ಕರೆದು ತನ್ನಿ" ಎಂದರು ಸುಪರಿಂಟೆಂಡೆಂಟ್ ನಮಗೆ, "ಪಂಚನಾಮೆಯಾಗಬೇಕಲ್ಲ? ನೀವೆಲ್ಲ ಅಫೀಸ್ ಕೆಲಸ ಮಾಡುವವರು"ಎಂದು ಮಾಧವಿಯ ಕಡೆಗೆ ಕಣ್ಣುಹೊರಳಿಸಿದರು !

"ಅದು ಯಾರು ಮಾಧವಿಯೆ?" ಎಂದರು, ಚಕಿತರಾಗಿ "ನೀವು ಇಲ್ಲಿ ಇದ್ದೀರೆ ಮಕ್ಕಳೆ? ಇದು ನನಗೆ ಹೇಗೆ ಗೊತ್ತಾಗಬೇಕು? ಮೊನ್ನೆ ಒಂದು ದಿನ ನಿಮ್ಮ ಆಫೀಸಿಗೆ ಫೋನ್ ಮಾಡಿದ್ದೆ, ಕುಂಭಕೋಣಂ ಮೊನ್ನೆ ನೀವು ಇಲ್ಲಿದ್ದೀರೆಂದು ಬರೆದಿದ್ದ. ನನಗೆ ಹುಡುಕುಲು ಸಮಯವಾಗಲಿಲ್ಲ."

ಮಾಧವಿ ನಕ್ಕಳು.

"ನಾನೂ ನಿಮ್ಮಲ್ಲಿಗೊಮ್ಮೆ ಬರಬೇಕೆಂದಿದ್ದೆ. ಅಮ್ಮ ಹುಶಾರಿದ್ದಾರೆಯೆ? ಜಯಂತಿ ಹೇಗಿದ್ದಾಳೆ?"

ಒಮ್ಮೆಲೇ ಅಲ್ಲಿಯ ವಾತಾವರಣ ಬದಲಿಸಿತು. ಎರಡು ಹಳೇ ಸ್ನೇಹದ ಮಲೆಯಾಳಿ ಕುಟುಂಬಗಳು ಸಮಾಗಮವಾದಂತೆ ಕೆಲವು ನಿಮಿಷಗಳ ವರೆಗೆ ತೋರಿತು. ಅಂಬುಜಮ್ಮಾಳ್‌ಳನ್ನು ಹಿಡಿದುಕೊಂಡು ಪೋಲೀಸನೊಬ್ಬ ನಿಂತಿದ್ದ. ಕಿಟ್ಟು ಪಂಚರನ್ನು ಕರೆದು ತಂದಿದ್ದ. ಇನ್ಸ್‌ಪೆಕ್ಟರ್ ಯಾರನ್ನೂ ಕಣ್ಣೆತ್ತಿಯೂ ನೋಡುತ್ತಿರಲಿಲ್ಲ.

ಕೊನೆಗೆ ಸುಪರಿಂಟೆಂಡೆಂಟನಿಗೆ ಮಾಧವಿ ಅಲ್ಲಿ ನಡೆದುದನ್ನೆಲ್ಲ ಕೆಲವೇ ಮಾತುಗಳಲ್ಲಿ ವಿವರಿಸಿದಳು. ಅಂಬುಜಮ್ಮಾಳ್ ಮತ್ತು ಇನ್ಸ್‌ಪೆಕ್ಟರ-ರಿಬ್ಬರೂ ಸುಪರಿಂಟೆಂಡೆಂಟರ ಕಾಲಿಗೆ ಬಿದ್ದರು.

"ಏ ಕಂದಸಾಮಿ!" ಎಂದು ಸುಪರಿಂಟೆಂಡೆಂಟರು ಒದರಿದರು. "ನೀನಿನ್ನೂ ಹೆಡ್‌ಕಾನ್ಸ್‌ಟೇಬಲನಂತೆ ವರ್ತಿಸುತಿದ್ದೀ. ಇನ್ನೂ ನಿನಗೆ ನಾಚಿಕೆ ಎಂದರೇನೆಂಬುದು ಗೊತ್ತಿಲ್ಲ. ಹೆಂಡ ಕುಡಿಯೋದು ಸೂಳೆಗಾರಿಕೆ ಮಾಡೋದು, ಹೆಂಗಸರನ್ನು ಹೆದರಿಸುವುದು ಮುಂತಾದುವನ್ನು



"ಮುಚ್ಚು ಬಾಯಿ" ಎಂದು ಗರ್ಜಿಸಿದರು ಸುಪರಿಂಟೆಂಡೆಂಟರು

ಬಿಡಲು ನಿನಗೆ ಇನ್ನೂ ಕಾಲ ಬಂದಿಲ್ಲವಲ್ಲ! ನನ್ನ ಸೊಸೆಯರ ಮೇಲೆ ಕೈಮಾಡಲು ಇಂದು ಬಂದೆ. ನಾಳೆ ನನ್ನ ಹೆಂಡತಿ ಮಕ್ಕಳ ಮೇಲೂ ಕೈ ಮಾಡಲು ನೀನು ಹಿಂಜರಿಯುವವನಲ್ಲ! ನಿನ್ನ ಮೇಲೆ ಕ್ರಮ ಕೈಗೊಳ್ಳದಿದ್ದರೆ ನಮ್ಮಲ್ಲಿ ಪೋಲೀಸು ಇಲಾಖೆ ಇದ್ದೇ ಪ್ರಯೋಜನವಿಲ್ಲ! ಹುಂ ಪಂಚನಾಮಾ ಬರೆಯಿರಿ. ಓಹ್ ಡಾಕ್ಟರ್ ಚೆಟ್ಟಿಯಾರ್ ಇಲ್ಲೇ ಬಂದರಲ್ಲ! ನಿಮ್ಮಲ್ಲಿಂದಲೇ ಫೋನ್ ಬಂತು. ಇವನನ್ನು ಪರೀಕ್ಷಿಸಿ ಒಂದು ಸರ್ಟಿಫಿಕೇಟನ್ನು ಕೊಡಿ."

ಕಂದಸಾಮಿ ಗೋಳಿಡುತ್ತ ಹೊರಳಾಡಿದ.

"ಹಿಡಿದು ನಿಲ್ಲಿಸಿ ಅವನನ್ನು" ಎಂದು ಗುಡುಗಿದರು ಸುಪರಿಂಟೆಂಡೆಂಟ್.

"ಆಕೆಯನ್ನು ಪರೀಕ್ಷಿಸಿ ಸರ್ಟಿಫಿಕೇಟ್ ಕೊಡಿ. ಇಬ್ಬರೂ ಚೆನ್ನಾಗಿ ಕುಡಿದಂತಿದೆ ಡಾಕ್ಟರ್."

ಅಂಬುಜಮ್ಮಾಳ್ ಗೋಳೋ ಎಂದು ಅತ್ತಳು. ಆದರೆ ಇಬ್ಬರು ಕಾನ್‌ಸ್ಟೇಬಲ್‌ಗಳು ಅವಳ ರಟ್ಟೆಯನ್ನು ಅಮುಕಿ ಹಿಡಿದಿದ್ದರು.

"ನನ್ನಿಂದಾಗಿ ಇನ್‌ಸ್ಪೆಕ್ಟರ್ ಕಂದಸಾಮಿಗೆ ಶಿಕ್ಷೆಯಾಗಬೇಕೆ? ಅಯ್ಯೋ ಕ್ಷಮಿಸಿ! ನಾನಿನ್ನು ಯಾರಿಗೂ ತೊಂದರೆ ಕೊಡಲು ಹೋಗೋದಿಲ್ಲ. ನಿಮ್ಮ ಈ ಎರಡು ಹುಡುಗಿಯರನ್ನು ನನ್ನ ಮಕ್ಕಳಂತೆ ಕಾಪಾಡುತ್ತೇನೆ. ಅವರಿಂದ ಬಾಡಿಗೆ ಕೂಡಾ ಪಡೆಯೋದಿಲ್ಲ. ಇವರೆಲ್ಲ ಕೂಡಿ..." ಎಂದು ನನ್ನ ಕಡೆಗೆ ಬೆರಳು ತೋರಿಸುತ್ತಿದ್ದಂತೆಯೇ ಸುಪರಿಂಟೆಂಡೆಂಟರು ಅವಳ ಬಳಿಗೆ ಜಿಗಿದು, "ಮುಚ್ಚು ಬಾಯಿ" ಎಂದು ಗರ್ಜಿಸಿದರು.

ಅಂಬುಜಮ್ಮಾಳ್ ನಡುಗಿದಳು. ಅವಳೇ ಏನು, ನನ್ನ ಎದೆ ಕೂಡಾ ನಡುಗಿತು. ಅವರ ಬೂಟ್ಸಿನ ಒದೆತಕ್ಕೆ ಮಹಡಿ ಕೂಡಾ ಕಂಪಿಸಿತು.

× × × ×

ಮರುದಿನ ಸಂಜೆಗೆ ನಾನು ಪರೀಕ್ಷೆ ಮುಗಿಸಿ ಬರುವಾಗ ಕಿಟ್ಟು ಮನೆಯ ಹೊರಗೆ ರಸ್ತೆಯಲ್ಲಿ ನಿಂತಿದ್ದ. ಪರೀಕ್ಷೆಯಲ್ಲಿ ಹೇಗೆ ಬರೆದಿದ್ದೆನೆಂದು ಅವನು ಕೇಳಲು, ನಾನು ಪುಸ್ತಕಗಳನ್ನು ಕೋಣೆಯಲ್ಲಿಟ್ಟು ಬರುತ್ತೇನೆಂದು ಒಳಹೊಕ್ಕೆ.

ನಾನು ಮಹಡಿಯ ಮೆಟ್ಟಿಲನ್ನೇರುವಾಗ ಮೂಗಿಗೆ ಕೈಹಿಡಿದುಕೊಂಡೇ ಹೋಗಬೇಕಾಯಿತು. ಏನೋ ಕೂದಲನ್ನು ಸುಟ್ಟ ವಾಸನೆ ಮನೆಯಿಡೀ ತುಂಬಿತ್ತು. ಅಂಬುಜಮ್ಮಾಳ್‌ಳ ಕೊಠಡಿಯಿಂದ ಹೊಗೆ ಬರುತ್ತಿತ್ತು. ಅದರದೇ ಈ ವಾಸನೆ ಎಂಬುದರಲ್ಲಿ ಸಂಶಯವಿರಲಿಲ್ಲ. ನಾನು ಬೇಗನೆ ಕೋಣೆಗೆ ಹೋಗಿ ಪುಸ್ತಕಗಳನ್ನಿಟ್ಟು ಹಿಂತಿರುಗಿದೆ.

"ಸ್ವಲ್ಪ ಕಾಫಿ ಕುಡಿಯೋಣವೆ? ನನಗಂತೂ ಹಸಿವೆಯಿಂದ ಜೀವ ಹೋಗುತ್ತಿದೆ;" ಎಂದೆ.

"ಸರಿ. ಆದರೆ ಶಶಿಕಲಾ ಒಳಗೆ ಆ ವಾಸನೆಯನ್ನು ಹೇಗೆ ತಡೆಯುವಳೋ! ಅವಳನ್ನು ಕರೆಯುತ್ತೇನೆ."

"ಇನ್ನೂ ಒಳ್ಳೆಯದಾಯಿತು" ಎಂದೆ.

ಐದೇ ನಿಮಿಷದಲ್ಲಿ ಅವಳು ತಲೆ ಬಾಚಿ ಹೊಸ ಸೀರೆಯನ್ನುಟ್ಟುಕೊಂಡು ಹೊರಬಂದಳು. ಅವಳ ಮುಖ ಕೆಂಪು ಕೆಂಪಾಗಿತ್ತು. ಕಣ್ಣಿನಲ್ಲಿ ನೀರು ಒಸರಿದ್ದನ್ನು ಕಂಡು ನನ್ನ ಅಂತಃಕರಣ ಬಿರಿಯಿತು. ತಂದೆಯ ಮನೆಯಲ್ಲಿ ಸುಖವಾಗಿ ಬೆಳೆದ ಈ ಹೆಣ್ಣುಮಗಳನ್ನು ಒಮ್ಮೆಲೇ ಕಾಡಿನಲ್ಲಿ ಬಿಟ್ಟಿದ್ದ ಘೋರ ಕಲ್ಪನೆಯಾಯಿತು ನನಗಾಗ. ಇಂಥ ಸನ್ನಿವೇಶದಲ್ಲಿ ಹೆಣ್ಣು ಮಾತ್ರವಲ್ಲ, ಗಂಡಸು ಕೂಡಾ ಅಳಬಹುದಿತ್ತು.

ನಾವು ಮೌನವಾಗಿಯೇ ಹೋಟೇಲಿಗೆ ನಡೆದೆವು. ಹೋಟೇಲಿನ ಒಡೆಯರು ನಮ್ಮನ್ನು ಕಂಡೊಡನೆ ತಾವಾಗಿ ಎದ್ದು ಗಡಿಬಿಡಿಯಲ್ಲಿ ಒಳಗೆ ಹೋಗಿ ಒಂದು ಚಿಕ್ಕ ಕೋಣೆಯಲ್ಲಿ ನಮಗೆ ಕುಳಿತುಕೊಳ್ಳುವ ವ್ಯವಸ್ಥೆ ಮಾಡಿದರು. ನಾವು ಕುರ್ಚಿಗಳಲ್ಲಿ ಕುಳಿತುಕೊಳ್ಳುವುದೇ ತಡ, ತಿಂಡಿಗಳ ತಟ್ಟೆಗಳು ಒಂದೊಂದಾಗಿ ಬರತೊಡಗಿದುವು.

"ಏನಯ್ಯಾ, ಊರಿನವರೆಂದು ನಿನಗೆ ಬಹಳ ಸನ್ಮಾನ!" ಎಂದು ನನ್ನ ಕಿವಿಯಲ್ಲಿ ಪಿಸುಗುಟ್ಟಿದ.

ಹೋಟೇಲಿನ ಒಡೆಯರು ನಕ್ಕರು.

"ಕಳೆದ ರಾತ್ರಿ ನಿಮ್ಮಲ್ಲಿ ಬಹಳ ಗಲಾಟೆ ನಡೆಯಿತಂತೆ ಅಲ್ಲವೆ?" [illegible]

"ನಿಮಗೂ ಈ ಸುದ್ದಿ ಬಂತೆ?" ಎಂದು ನಾನು ನಕ್ಕೆ.

"ಸುದ್ದಿಯೇನು! ಹ್ವ! ಅಭಾರಾಟವೆನ್ನಿ. ಈ ಭಾಗದಲ್ಲಿ ಬಿಡಿ, ಇಡೀ ಮದ್ರಾಸೇ ಈ ಸುದ್ದಿಯನ್ನು ಮಾತಾಡುತ್ತಿದೆ! ಆ ದುಷ್ಟೆಗೆ ಹಾಗಾದುದು ದೇವರ ದಯೆಯಿಂದ. ಇಲ್ಲವಾದರೆ ನೀವೂ ಅಲ್ಲಿ ಹೋಗಿ ಸೇರಿಕೊಳ್ಳಬೇಕೆ? ಮಂಗಳೂರಿನ ಲಾ ಕಲಿಯುವ ವಿದ್ಯಾರ್ಥಿ ಇಷ್ಟೆಲ್ಲ ಮಾಡಿದ ಎಂದು ಎಲ್ಲರೂ ಹಿಗ್ಗಿಕೊಂಡಿದ್ದಾರೆ! ನನ್ನೊಡನೆ ಇಂದು ಸ್ವತಃ ಮತ್ತು ಫೋನಿನಲ್ಲಿ ಕಡಿಮೆಯೆಂದರೆ ಸುಮಾರು ನೂರು ಜನ ಈ ಘಟನೆಯ ಬಗ್ಗೆ ವಿಚಾರಿಸಿದರು!"

ಅಯಾಚಿತವಾಗಿ ಬಂದ ಈ ಪ್ರಶಂಸೆಯನ್ನು ಆಕ್ಷೇಪರಹಿತವಾಗಿ ಸ್ವೀಕರಿಸಲು ನಾನು ಸಿದ್ಧನಿರಲಿಲ್ಲ.

"ಇವರೇ ನನ್ನ ಅತಿಥೇಯರು, ಇವರೆಲ್ಲ ಒಟ್ಟು ಕೂಡಿ ಅಂಬುಜಮ್ಮಾಳ್‌ನಿಗೆ ನೀರು ಕುಡಿಸಿದರು."

"ನೋಡಿ, ನಾವು ಮಂಗಳೂರವರೆಂದರೆ ಬರೇ ನಿಷ್ಪ್ರಯೋಜಕರು, ಅಡಿಗೆ ಮಾಡಿ ಹಾಕಲು ಮಾತ್ರ ಯೋಗ್ಯರು ಎಂದು ಎಲ್ಲರೂ ಭಾವಿಸಿದ್ದಾರೆ. ನಾವು ಹೋಟೇಲಿನವರ ಸುದ್ದಿ ಬಿಡಿ ನಮ್ಮ ಊರಿನ ಡಾಕ್ಟರುಗಳಿಗೆ ಕೂಡಾ ಈ ತಮಿಳರೆಲ್ಲ ಮೋಸ ಮಾಡುತ್ತಾರೆ. ನಾವೆಲ್ಲ ಅಂಜುಬುರುಕರು ಬಲಾತ್ಕಾರಕ್ಕೆ ಹೆದರುವವರು ಎಂದು ಅವರು ಅಪಪ್ರಚಾರ ಮಾಡುತ್ತಿದ್ದಾರೆ. ಇದಕ್ಕೆ ನೀವು ಮಾಡಿದ ಉಪಾಯ ಅತ್ಯಂತ ಯೋಗ್ಯವಾದುದು. ಆ ಇನ್‌ಸ್ಪೆಕ್ಟರನ ಅವಸ್ಥೆ ಮುಗಿದಂತೆಯೇ ಎಂದು ಹೇಳುತ್ತಾರೆ. ಸುಪರಿಂಟೆಂಡೆಂಟ್ ಬಹಳ ನಿಷ್ಠಾವಂತರಂತೆ. ಅವನನ್ನು ಹತ್ತು ದಿನ ರಿಮಾಂಡಿನಿಂದ ಬಿಡುವುದಿಲ್ಲವಂತೆ. ಎಂಥ ಲಂಚಕೋರನೆಂದು ನೀವು ಭಾವಿಸಿದ್ದೀರಿ! ಈಗಾಗಲೇ ಜೈನಾ ಬಜಾರಿನಲ್ಲಿ ಎರಡು ಅಂಗಡಿಗಳನ್ನು ಹೆಂಡತಿಯ ಹೆಸರಲ್ಲಿ ಖರೀದಿ ಮಾಡಿದ್ದಾನೆ. ಮಕ್ಕಳ ಹೆಸರಿನಲ್ಲಿ ಎರಡು ಕಾರುಗಳನ್ನು ಬಾಡಿಗೆಗೆ ಇಟ್ಟಿದ್ದಾನೆ! ಹೆಡ್‌ಕಾನ್‌ಸ್ಟೇಬಲ್ ಆಗಿರುವಾಗಿನಿಂದ ಅವನು ನನಗೆ ಪರಿಚಿತ!"

"ಅವನು ನಮ್ಮೂರಿನವ" ಎಂದು ಕಿಟ್ಟು ದನಿಗೂಡಿಸಿದ.

"ಇಂಥ ದುರಾಚಾರಿಯಾಗಿದ್ದನೆಂದು ನಾನು ಭಾವಿಸಿರಲಿಲ್ಲ. ನಿನ್ನೆ ಮೊದಲು ನನಗೆ ಅವನ ಗುರುತೇ ಸಿಗಲಿಲ್ಲ.

"ಟ್ಯಾಕ್ಸಿಯವರು, ರಿಕ್ಷಾದವರು, ಹೋಟೇಲಿನವರು, ಸೂಳೆಯರು, ಬಸ್ ಡ್ರೈವರರು-ಎಲ್ಲ ಅವನಿಗೆ ಮಂತಿಗೆ ತೆರದಿಲ್ಲ. ನಾನೇ ಈ ಹೋಟೇಲಿಗೆ ಲೈಸನ್ಸ್ ಪಡೆಯಲು ಇನ್ನುರೈವತ್ತು ರೂಪಾಯಿ ಕೊಡಬೇಕಾಯಿತಲ್ಲದೆ ಅವನ ಭಾವನೆಂಟನಿಂದ ಹತ್ತು ಸಾವಿರ ರೂಪಾಯಿಯ ಇನ್ಸೂರೆನ್ಸ್ ಪಾಲಿಸಿ ಪಡೆಯಬೇಕಾಯಿತು."

"ಏನೇ ಇದ್ದರೂ ಇಂದು ನನಗೆ ಪರೀಕ್ಷೆಯಲ್ಲಿ ಉತ್ತರ ಬರೆಯಲು ನಿನ್ನೆ ರಾತ್ರಿಯ ಘಟನೆ ತುಂಬಾ ಅನುಕೂಲವಾಯಿತು. ಒಂದು ವಿಷಯದಲ್ಲಿ ಪೋಲೀಸು ಝುಡತಿಯನ್ನು ಕುರಿತಾದ ಮೂರು ಪ್ರಶ್ನೆಗಳಿದ್ದುವು. ಮತ್ತೊಂದರಲ್ಲಿ ಅಧಿಕಾರಿಯ ಕರ್ತವ್ಯನಿರ್ವಹಣೆಯ ಸಮಯ ಆತಂಕಿಸುವ ವಿಷಯವನ್ನೊಳಗೊಂಡ ಎರಡು ಪ್ರಶ್ನೆಗಳಿದ್ದುವು. ಅವುಗಳಿಗೆ ಉತ್ತರ ಬರೆಯುವುದು ನನಗೆ ಅತ್ಯಂತ ಸುಲಭವಾಯಿತು. ಒಂದು ಪ್ರಶ್ನೆಗೆ ನಿನ್ನೆಯ ಘಟನೆಯ ಹೆಸರನ್ನು ಅಲ್ಪ ಸ್ವಲ್ಪ ಬದಲಿಸಿ ಉದಾಹರಣೆ ಕೊಟ್ಟಿದ್ದೆ" ಎಂದೆ.

"ನಿಜವಾಗಿ ನೋಡಿದರೆ, ಇಂಥ ಏನಾದರೂ ದುರ್ಧರ ಪ್ರಸಂಗ ಅಲ್ಲಿ ನಡೆಯಬಹುದೆಂಬ ಅನುಮಾನ ನನಗೆ ಮೊದಲೇ ಇತ್ತು. ಆದ್ದರಿಂದಲೇ ನಿಮ್ಮನ್ನು ನಾನು ಎಚ್ಚರಿಸಿದ್ದೆ."

ನಮಗೆ ಏಳೆಂಟು ತಿಂಡಿಗಳನ್ನು ತಿಂದು ಹೊಟ್ಟೆ ತುಂಬಿತು. ಕಿಟ್ಟುವೂ ಜಾಮೂನ್, ಹಲ್ವ, ನೀರುಳ್ಳಿ ಊತಪ್ಪ, ವಡೆ, ಗೋಡಂಬಿ ಪಕೋಡ-ಇವನ್ನೆಲ್ಲ ತಿಂದು ತೇಗಿದ. ಶಶಿಕಲಾ ಮಾತ್ರ ಎರಡು ಮೂರು ತಿಂಡಿಗಳನ್ನು ಹಾಗೆಯೇ ಬಿಟ್ಟಿದ್ದಳು. ಕಿಟ್ಟುವಿಗೆ ಅವುಗಳನ್ನು ಖಾಲಿ ಮಾಡಲು ಹೇಳಿದೆ. ಅವನು ನನ್ನನ್ನೇ ಒತ್ತಾಯಪಡಿಸಿದ.

"ನಿನ್ನ ಹೆಂಡತಿ ತಿಂದು ಬಿಟ್ಟುದನ್ನು ಮುಗಿಸಲು ನೀನೇ ಹಕ್ಕುದಾರ. ಈ ಆಹಾರಾಭಾವದ ದಿನಗಳಲ್ಲಿ ತಿಂಡಿಗಳನ್ನು ಹಾಳು ಮಾಡಬಾರದಪ್ಪ!" ಎಂದು ನಾನು ನಕ್ಕೆ.

ಶಶಿಕಲಳ ಮುಖದಲ್ಲಿ ಅಂದು ಮೊದಲ ಬಾರಿ ನಗುವೊಂದು ಮಿಂಚಿತು.

"ಈಗ ಫಿಫ್ಟಿ ಪರ್ಸೆಂಟ್ ಲಾಯರ್ ಆಗುವಾಗಲೇ ಹಕ್ಕುಗಳ ಪ್ರಸ್ತಾಪ ಎತ್ತತೊಡಗಿದ್ದೀಯಲ್ಲ! ಇನ್ನು ಹಂಡ್ರೆಡ್ ಪರ್ಸೆಂಟ್ ಲಾಯರ್ ಆಗಿಬಿಟ್ಟರೆ ಮುಗಿಯಿತು!" ಎಂದು ಅವನು ಗಹಗಹಿಸಿದ.

"ಆದರೆ ಕಾನೂನು ನಿಷ್ಠಾವಂತರಿಗೆ ಮಾತ್ರ ಅನ್ವಯಿಸುತ್ತದೆ, ಅಂಬುಜಮ್ಮಾಳ್‌ಳಂಥವರಿಗಲ್ಲ. ನಿನ್ನೆ ರಾತ್ರಿ ಅಷ್ಟೆಲ್ಲ ನಡೆದು ಈಗ ಅವಳ ಮೇಲೆ ಖಟ್ಲೆಯಾಗಿದ್ದರೂ, ಇನ್ನೂ ತನ್ನ ಮೊಂಡುತನ ಬಿಟ್ಟಿಲ್ಲವಲ್ಲ? ಏನು ದುರ್ವಾಸನೆ! ನನಗಲ್ಲಿ ಉಸಿರು ತೆಗೆದುಕೊಳ್ಳಲಾಗಲಿಲ್ಲ" ಎಂದೆ ನಾನು.

"ಇಂದು ಅವಳು ಮಾಂಸ ಬೇಯಿಸುತ್ತಿದ್ದಾಳೆಂದು ತೋರುತ್ತದೆ. ನನ್ನೊಡನೆ ಬರುವ ಮುಂಚೆ ತಾನು ಶುದ್ಧ ಸಸ್ಯಾಹಾರಿ ಎಂದು ಮಾತು ಕೊಟ್ಟಿದ್ದಳು. ನಿನ್ನೆ ರಾತ್ರಿ ಕಂದಸಾಮಿಗೋಸ್ಕರ ಹೊರಗಿನಿಂದಲೇ ಮಾಂಸದ ಊಟ ತರಿಸಿದ್ದಳೆಂದು ತೋರುತ್ತದೆ. ಅವಳ ಮುದುಕ ಕೈಯ್ಯಲ್ಲಿ ರಡು ಬಾಟಲಿಗಳನ್ನೂ, ಒಂದು ಗಂಟನ್ನೂ ತಂದುದನ್ನು ನಾನು ಕಂಡಿದ್ದೆ. ಇಂದು ಸ್ವತಃ ತಾನೇ ತಯಾರಿಸುತ್ತಿದ್ದಾಳೆ ಇನ್ನಾದರೂ ನಾವು ಇರೋದು ಸಾಧ್ಯವಿಲ್ಲವಲ್ಲ?"

ಇಂಥ ಸಂದರ್ಭದಲ್ಲಿ ಮಾತ್ರ ಕಾನೂನಿನ ರಕ್ಷೆ ಕಿಟ್ಟುವಿಗೆ ದೊರೆಯಬಹುದೆಂದು ಹೇಳಲು ನನಗೆ ಸಾಧ್ಯವಿರಲಿಲ್ಲ. ಕಿಟ್ಟುವಾದರೂ ಇದನ್ನು ಸಹಿಸಬಹುದು. ಆದರೆ ಶಶಿಕಲಾ? ಅವಳು ಇಪ್ಪತ್ತನಾಲ್ಕು ತಾಸೂ ಮನೆಯೊಳಗಿರುವವಳು. ಅಂಬುಜಮ್ಮಾಳ್ ಅವಳಿಗೆ ಜ್ವಾಲಾಮುಖಿಯಂತಾಗಿದ್ದಳು. ನಾನೇನೋ ಮುಂದೆ ಕೆಲ ದಿನ ಇರಬಹುದು. ಆಮೇಲೆ ?

"ಆಮೇಲೆ ಏನಾಗುವುದೆಂಬುದನ್ನು ನೋಡಬೇಕು. ಬೇರೊಂದು ಮನೆ ಸಿಗಲೂಬಹುದು. ತನ್ಮಧ್ಯೆ ನನ್ನ ಮಾವ ತಮ್ಮೂರಿಗೆ ನನ್ನನ್ನು ವರ್ಗಾಯಿಸುವಂತೆ ಪ್ರಭಾವವನ್ನೂ ಬೀರಬಹುದು. ಆದರೆ ನಾನಾಗಿ ಅವರಿಗೆ ಬರೆಯುವುದು ಶಕ್ಯವಿಲ್ಲ. ಈ ಮನೆ ಬೇಡವೆಂದು ಅವರು ಮೊದಲೇ ಹೇಳಿದ್ದರು. ನಾನೇನೋ ಅವರ ಜಾತೀಯ ವಾದವನ್ನು ಖಂಡಿಸಿದ್ದೆ ಅವರೊಡನೆ"

ನಾವು ಹೊರಡುವಾಗ ಹೋಟೇಲಿನಲ್ಲಿ ಬಿಲ್ ಕೊಡಲು ಒಡೆಯರು ಸುತರಾಂ ಒಪ್ಪಲಿಲ್ಲ.

"ನಿಜ ಹೇಳಬೇಕೆ?" ಎಂದರವರು. "ಇಂದು ಮುಂಜಾನೆ ಅಂಬುಜಮ್ಮಾಳ್‌ಳನ್ನೂ ಕಂದಸಾಮಿಯನ್ನೂ ಹಿಡಿದುಕೊಂಡು ಹೋದ ಸುದ್ದಿಯನ್ನು ಕೇಳಿದೊಡನೆ ನಾನು ಹಾಲು ಕುಡಿದೆ."

"ಏನು ಇಂಜೆಕ್ಷನ್‌ಗಳು ಸಾಲದ್ದಕ್ಕೋ?"

ಈ ಪ್ರಶ್ನೆ ನನ್ನ ತುಟಿಯತನಕ ಬಂದರೂ ಸೌಜನ್ಯದ ದೃಷ್ಟಿಯಿಂದ ಅದು ತುಟಿಮೀರಲಿಲ್ಲ.

೬

ಏನಿದ್ದರೂ ಅಂಬುಜಮ್ಮಾಳ್ ಮಹಡಿಯೇರುವುದನ್ನು ಬಿಟ್ಟುಬಿಟ್ಟಳು. ಹಗಲಲ್ಲಿ ಅವಳ ಸುಳಿವೇ ಹೊರಗೆ ಕಾಣಸಿಗುತ್ತಿದ್ದಿಲ್ಲ. ಕಂದಸಾಮಿ ಅವಳಿಂದ ನೂರು ರೂಪಾಯಿ ಹೊಡೆದಿದ್ದನೆಂದು ನನಗೆ ಬೀಡಾಬೀಡಿ ಅಂಗಡಿಯ ನಾಯರ್ ಹೇಳಿದ. ಆದರೆ ಕಂದಸಾಮಿ ಈಗ ಇಂಜೆಕ್ಷನ್ ಚಿಕಿತ್ಸೆಯನ್ನು ಜೈಲಿನೊಳಗೇ ಮಾಡಿಸಿಕೊಳ್ಳುತ್ತಿದ್ದಾನಂತೆ. ಈ ಸುದ್ದಿ ನಾಯರನ ಕಲ್ಪನೆಯಾಗಿರಬಹುದೆಂದೂ ನನಗನ್ನಿಸದಿರಲಿಲ್ಲ.

× × ×

"ನೋಡಿ ಆ ಇನ್ಸ್‌ಪೆಕ್ಟರ್ ಅಂದು ರಾತ್ರಿ ಎರಡು ರಾತ್ರಿ ಅವಳ ಕೋಣೆಯಲ್ಲಿದ್ದ. ನಾನವನನ್ನು ಒಂಭತ್ತೂವರೆ ಗಂಟೆಗೇ ಕಂಡಿದ್ದೆ," ಶಶಿಕಲಾ ನನ್ನೊಡನೆ ಹೇಳಿದ್ದಳು.

"ಈಗ ನೀನೂ ಹಾಗೆಯೇ ಬಂದಿರುವಿಯಲ್ಲ!" ಎಂದು ನಾನು ಅವಳಿಗೆ ಪ್ರಶ್ನಿಸುತ್ತಿದ್ದೆನೋ ಏನೋ! ಆದರೆ ಮನೆಯಲ್ಲಿ ಯಾರೂ ಇಲ್ಲದಾಗ ಅವಳು ನನ್ನ ಕೋಣೆಯೊಳಗೆ ಬಂದುದು ಅಷ್ಟೊಂದು ನನಗೆ ಹಿತಕರವೆನಿಸಲಿಲ್ಲ.

ಕೋಣೆಯ ಚಿಲಕವನ್ನು ಒಳಗಿನಿಂದ ಹಾಕಿಕೊಂಡಾಗಲಂತೂ ಅವಳ ವರ್ತನೆ ನನಗೆ ಗಾಬರಿಯನ್ನೇ ಉಂಟುಮಾಡಿತು. ಹೇಳುವುದು ಶಾಸ್ತ್ರ ತಿಕ್ಕುವುದು ಗಾಳ ಎಂಬ ಸೂತ್ರಕ್ಕೆ ಎಲ್ಲಿ ಬಲಿಯಾಗುವೆನೋ ಎಂದು ಮನಸ್ಸಿನೊಳಗೇ ಕಂಪಿಸಿದ

ಕಂಪಿಸಲು ಕಾರಣವಿಲ್ಲದಿರಲಿಲ್ಲ. ಒಂದು ದ್ರೋಹದ ಭಯದ ಕಂಪನ. ಕಿಟ್ಟು ನನ್ನ ಮೇಲೆ ಇಟ್ಟ ವಿಶ್ವಾಸ ಸಂಪೂರ್ಣವಾಗಿ ಆ ಕ್ಷಣದಲ್ಲಿ ಸುಳ್ಳಾಗಬಹುದಿತ್ತು. ಅದರ ಬದಲು ಅಂಬುಜಮ್ಮಾಳ್ ಹೀಗೆನ್ನುತ್ತಿದ್ದಳಂತೆ ಎಂದು ಅವನು ನುಡಿದುದೇ ಸತ್ಯವಾಗಬಹುದಿತ್ತು. ನನ್ನ ಬಾಳು ಒಮ್ಮೆಲೇ ಕರ್‍ರಗಾಗುವ ಸಂಭವ ಕಾದಿದೆಯೆಂದು ನಾನು ಉದ್ವಿಗ್ನನಾದ

ಶಶಿಕಲಾಳ ಸೌಂದರ್ಯರಾಶಿಯೂ ನನ್ನಲ್ಲಿ ಕಂಪನವನ್ನುಂಟು ಮಾಡಿತು. ಯೌವ್ವನದ ಕುರುಹುಗಳು ಅವಳ ಮುಖದಲ್ಲಿ, ಅಂಗಾಂಗಗಳಲ್ಲಿ ಎಲ್ಲೆಲ್ಲೂ ತಾಂಡವವಾಡುತ್ತಿದ್ದುವು.ಅವಳಂಥ ಸ್ಫುರದ್ರೂಪಿಯನ್ನು ಪಡೆದ ಕಿಟ್ಟು ಧನ್ಯನೆಂದು ನಾನು ಮೊದಲೇ ಭಾವಿಸಿದ್ದೆ. ಇಂದು ಕರ್‍ರಗಿನ ಕಾಂಜೀವರಂ ರೇಶ್ಮೆ ಸೀರೆಯನ್ನುಟ್ಟಿದ್ದ ಆಕೆ ತನ್ನ ದೇಹದ ಗೌರವರ್ಣವನ್ನು ಪ್ರಾಮುಖ್ಯವಾಗಿ ತೋರ್ಪಡಿಸುತ್ತಿದ್ದಳು. ಅವಳ ಏರಿಳಿಯುತ್ತಿದ್ದ ಉಬ್ಬಿದ ಎದೆ, ಅವಳ ಭಾರವಾಗಿ ತೋರುತ್ತಿದ್ದ ಚೆಂದುಟಿ, ಕಾಮನ ಬಿಲ್ಲಿನಂಥ ಹುಬ್ಬುಗಳನ್ನು ಧರಿಸಿದ್ದ ಅಗಲ ಕಿರಿದಾದ ಕಣ್ಣುಗಳು ಸರ್ವತ್ಯಾಗಿ ಸಂತನನ್ನೂ ಸಂಸಾರಿಯಾಗುವಂತೆ ಬಲಾತ್ಕರಿಸಲು ಸಾಕಾಗಿದ್ದುವು. ಅವಳು ಹೀಗೆ ಏಕಾಕಿಯಾಗಿ ಬಂದುದುದರಿಂದ ನನ್ನ ಜೀವನದಲ್ಲಿ ಎಲ್ಲೋ ತಲೆಮರೆಸಿಕೊಂಡಿದ್ದ ವೈಫಲ್ಯಭಾವನೆಯನ್ನು ಕ್ಷಣಕಾಲ ಪ್ರಜ್ವಲಿಸಿದುದರಲ್ಲಿ ಆಶ್ಚರ್ಯವಿರಲಿಲ್ಲ. ಅವಳು ಹೆಣ್ಣು ನಿಜ. ನಾನು ಗಂಡು ನಿಜ. ನಮ್ಮೊಳಗೆ ಪರಸ್ಪರ ಆಕರ್ಷಣೆ ಬೆಳೆಯುವುದು ಸ್ವಾಭಾವಿಕವೇ. ಆದರೆ ಅಂಥ ಆಕರ್ಷಣೆಯನ್ನು ತಿರಸ್ಕರಿಸಿ ಪ್ರಲೋಭನವನ್ನು ಹತ್ತಿಕ್ಕುವುದೂ ಮನುಷ್ಯರಿಗೆ ಸ್ವಾಭಾವಿಕವೇ ಎಂದೂ ನನಗೆ ತೋರದಿರಲಿಲ್ಲ. ಆಕೆ ಚಿಕ್ಕ ವಯಸ್ಸಿನವಳು. ಏನೋ ಕ್ಷಣ ಕಾಲದ ಮಳೆಯ ಕಾರ್ಮೋಡದಂಥ ಪ್ರವೃತ್ತಿ ಅವಳಲ್ಲಿ ಕವಿದಿರಬಹುದು. ಅಂಥ ಪ್ರವೃತ್ತಿಯ ದುರುಪಯೋಗವನ್ನು ವಿವೇಚನಾವಂತನು ಪಡೆಯಬಹುದೆ? ಥಕ್ಕನೆ ನನಗೆ ಆಗ ಪದ್ಮಿನಿಯ ನೆನಪಾಯಿತು.

"ಏನು ನಿಮಗೆ ಆ ಪದ್ಮಿನಿಯ ಮೇಲೆ ಅಷ್ಟೊಂದು ಹುಚ್ಚೆ? ನನಗೆಲ್ಲ ಹೇಳಿದ್ದಾರೆ ನಿಮ್ಮ ಗೆಳೆಯ" ಎಂದು ಶಶಿಕಲಾ ನನ್ನ ಬಳಿ ಬಂದು ನಕ್ಕಳು.

"ಮನುಷ್ಯರೆಲ್ಲ ಒಂದಲ್ಲ ಒಂದು ಕಾಲದಲ್ಲಿ ಹುಚ್ಚರಾಗುತ್ತಾರೆ. ನಾನೂ ಅಷ್ಟೆ, ನೀನೂ ಅಷ್ಟೆ" ಎಂದು ನಸುನಕ್ಕೆ.

ಅವಳು ಮೇಜಿನ ಮೇಲೆ ಬಾಗುವಾಗ ಅವಳ ಸೆರಗು ಜಾರಿತು. ಆದರೆ ಅವಳದಕ್ಕೆ ಗಮನವಿತ್ತಂತೆ ತೋರಲಿಲ್ಲ.

"ನಿಮ್ಮ ಮಧ್ಯದಿಂದ ನಾನಿಂದು ರಾತ್ರಿ ಊರಿಗೆ ಹೋಗುತ್ತೇನೆ," ಎಂದು ಬಿಯ್ಯಾರದಿಂದ ನುಡಿದಳು.

"ಹೌದೆ?" ಎಂದು ನಾನು ಚಕಿತನಾಗಿ ಕೇಳಿದೆ. ಆದರೆ ನನ್ನ ವಿಸ್ಮಯವನ್ನು ಪ್ರಕಟಪಡಿಸಲು ನಾನು ಸಿದ್ಧನಿರಲಿಲ್ಲ. ಆಕೆಯ ಉಸಿರಿನ ಕಂಪನ ನನ್ನಲ್ಲಿ ಹೆದರಿಕೆಯನ್ನು ಹುಟ್ಟಿಸಿತ್ತು. "ನಾನು ಪರೀಕ್ಷೆ ಮುಗಿದ ಬಳಿಕ ಕಿಟ್ಟುವನ್ನೂ ನಿನ್ನನ್ನು ಕರೆದುಕೊಂಡು ಹೋಗಿ ಭರ್ಜರಿ ಊಟ ಕೊಡಬೇಕೆಂದಿದ್ದೆ ಪಾಪ, ಕಿಟ್ಟುವನ್ನು ನೀನು ಒಬ್ಬಂಟಿಗನಾಗಿ ಮಾಡುತ್ತೀಯಲ್ಲ? ನಿನ್ನ ಮೇಲೆ ಎಷ್ಟು ಗಾಢವಾದ ಪ್ರೇಮವಿದೆ ಅವನಿಗೆ!"

ಹೀಗೆಂದೊಡನೆ ಅವಳು ನೆಟ್ಟಗೆ ನಿಂತು ಸೀರೆಯ ಸೆರಗನ್ನು ಸರಿಪಡಿಸಿಕೊಂಡಳು. ಮುಖ ಬಿಳುಪೇರಿತು.

"ಅವರ ಪ್ರೇಮದಿಂದಲೇ ಇಷ್ಟೆಲ್ಲ ಆಯಿತು. ಇನ್ನು ನಾನೀ ಮನೆಯಲ್ಲಿರಲಾರೆ. ನಿಮ್ಮ ಪದ್ಮಿನಿಯ ಹುಚ್ಚು ಅವರಿಗೆ ಇನ್ನೂ ಬಿಟ್ಟಿಲ್ಲ ತಿಳಿಯಿತೆ? ನಾನೇನೋ ಒಂದು ಗೊಂಬೆಯೆಂದು ಅವರು ಭಾವಿಸಿದಾರೆ" ಎಂದು ಅಳುದನಿಯಲ್ಲಿ ನುಡಿದಳು

ನಾನು ಅವಾಕ್ಕಾದೆ. ಅವಳು ಅತೃಪ್ತ ಹುಡುಗಿ ಎಂದು ಹಿಂದೆ ನಾನೆಂದೂ ಭಾವಿಸಿರಲಿಲ್ಲ. ಆದರೆ ಕಿಟ್ಟು ಇನ್ನೂ ಪದ್ಮಿನಿಯ ಹುಚ್ಚಿನಲ್ಲಿದ್ದಾನೆಂಬುದು ಮಾತ್ರ ನನ್ನ ಊಹೆಗೆ ಅನ್ಯವಾಗಿತ್ತು. ಇಂಥ ಹುಚ್ಚಿನಲ್ಲಿ ಈ ಹುಡುಗಿಯ ಗತಿಯೇನು?

"ನಾನು ಹೋದವಳು ಹಿಂದೆ ಬರಬೇಕಾದರೆ ಅವರು ಪರಸ್ಥಳಕೆ



"ಕಿಟ್ಟುವೊಬ್ಬನನಲ್ಲದೆ ಇತರರನ್ನು ಪ್ರೀತಿಸಬಾರದು"
ಎಂದು ನಾನು ಶಶಿಕಲಾಳಿಂದ ವಚನ ತೆಗೆದುಕೊಂಡೆ.

ವರ್ಗ ಮಾಡಿಸಿಕೊಳ್ಳಬೇಕು. ಈ ಊರಲ್ಲಿರುವತನಕ ನಾನು ಅವರಿಗೆ ಸವತಿಯೇ ಸೈ."

"ಏ ಹುಚ್ಚಿ!" ಎಂದು ನಾನು ಗದರಿಸುವ ಧ್ವನಿಯಲ್ಲಿ ಆಕೆಯ ಭುಜದ ಮೇಲೆ ಕೈಯಿಟ್ಟು ನನ್ನ ಉದ್ವೇಗವನ್ನು ನುಂಗಿಕೊಂಡು ನುಡಿದೆ. "ನೀನು ಕಿಟ್ಟುವನ್ನು ಸಂಪೂರ್ಣ ಅಪಾರ್ಥ ಮಾಡಿಕೊಂಡಿದ್ದೀ. ಅವನನ್ನು ನಾನು ಕಳೆದ ಐದು ವರ್ಷಗಳಿಂದ ಬಲ್ಲೆ. ಅವನಂಥ ಮುಗ್ಧ ಮನಸ್ಸಿನ ಮಮತಾಮಯಿಗಳು ಸಿಗೋದು ದುರ್ಲಭ. ಬರೇ ತೋರಿಕೆಯ ಸ್ನೇಹಕ್ಕಾಗಿಯಾದರೆ ನಾನೇಕೆ ಈಗ ನಿಮ್ಮಲ್ಲಿ ಬರುತಿದ್ದೆ? ನನ್ನೊಡನೆ ಕಲಿಯುತಿದ್ದವಳು ಪದ್ಮಿನಿಯೊಬ್ಬಳೇ ಅಲ್ಲ. ಅವಳಿಗಿಂತ ಸುಂದರಿಯರೂ ಇದ್ದರು. ಆದರೆ ಕಿಟ್ಟು ನಮ್ಮ ಮುಂದೆ ಎಂಥ ಹುಸಿ ಪರಾಕ್ರಮವನ್ನು ತೋರಿಸಿದರೂ. ಅವರ ಮುಂದೆ ಇಲಿಯಂತಾಗುತಿದ್ದ ಸ್ವಭಾವದವ. ಈಗ ನೀನೆನ್ನುವಂತೆ ಅವನಲ್ಲಿ ಪದ್ಮಿನಿಯ ಗುಂಗು ಕೌಮಾರ್ಯ ಜೀವನದ ಅವಶೇಷವಾಗಿ ಉಳಿದಿರಬಹುದು. ಅದು ಕ್ರಮೇಣ ಮಾಯವಾಗುವಂಥದ್ದು. ನಿನ್ನ ಪ್ರೇಮ ಪ್ರಬಲವಾಗಿದ್ದರೆ ಅವನು ಲೋಕವನ್ನೇ ಮರೆಯಬಲ್ಲನೆಂಬುದು ನನಗೆ ಗೊತ್ತು. ನೀನು ಎಂಥ ಚೆಲುವೆ! ನೀನೆಲ್ಲಿ, ಆ ಪೌಡರ್ ಮುದ್ದೆ ಪದ್ಮಿನಿ ಎಲ್ಲಿ!"

ಶಶಿಕಲಾ ನನ್ನ ಕೋಣೆಯೊಳಗೆ ಬರುವಾಗ ಈ ಮಾತುಗಳನ್ನು ನನ್ನಿಂದ ನಿರೀಕ್ಷಿಸಿದ್ದಳೋ ಇಲ್ಲವೋ ಎಂಬುದು ನನಗೆ ಇಂದಿಗೂ ಬಿಡಿಸಲಾರದ ಸಮಸ್ಯೆಯಾಗಿದೆ. ಆದರೆ ನನ್ನ ಮಟ್ಟಿಗೆ ಹೇಳುವುದಾದರೆ ಅಂದು ನನ್ನಲ್ಲಿ ಉಂಟಾದ ಕ್ಷಣಿಕ ಮನೋಸ್ಥೈರ್ಯವೇ ಕಿಟ್ಟುವಿನ ಸಂಸಾರಕ್ಕೆ ರಕ್ಷೆಯಾಯಿತೆಂದಿಷ್ಟು ಮಾತ್ರ ಹೇಳಬಲ್ಲೆ. ನನ್ನ ಮಾತುಗಳಲ್ಲಿ ಶಶಿಕಲಾಳಿಗೆ ತುಸು ಅತಿನಾಟಕತೆಯ ಅಂಶ ತೋರಿದ್ದರೆ ಆಶ್ಚರ್ಯವಿರಲಿಲ್ಲ.

"ಹಾಗಾದರೆ ನಾನು ಹೋಗಬಾರದೆನ್ನುವಿರಾ? ಈ ಅಂಬುಜಮ್ಮಾ-ಳ ಮಧ್ಯೆ ನಾನು ಹೇಗೆ ದಿನಗಳೆಯಬೇಕು? ನಿನಗೆ ನಾನು ಮಿಂಡನನ್ನು ಕರೆದು ತರುತ್ತೇನೆ; ನಿನ್ನ ಜುಟ್ಟು ಹಿಡಿದು ಎಳೆಸುತ್ತೇನೆ ಎಂದು ಆಕೆ ಒಮ್ಮೆ ನುಡಿದುದು ನನ್ನ ಎದೆಯಲ್ಲಿ ಸದಾ ಡವಡವಿಸುತ್ತಿದೆ."

"ಹಾಗಲ್ಲ!" ಎಂದೆ ನಾನು ಸಂತೋಷದಿಂದ. ಅವಳ ಕಾರ್ಮೋಡ ಮೆಲ್ಲನಾಗಿ ಕರಗಿತೆಂದು ನನಗೆ ಸ್ಪಷ್ಟವಾಯಿತು. "ನೀನು ಹೋದವಳೇ ನಿನ್ನ ತಂದೆಯೊಡನೆ ಹೇಳಿ ಕೂಡಲೇ ಕಿಟ್ಟುವನ್ನು ನಿಮ್ಮೂರಿಗೇ ವರ್ಗ ಮಾಡಿಸು. ನಾನಿಲ್ಲಿ ಇನ್ನು ಒಂದು ವಾರ ಇರಬಹುದು. ಅವನಿಗೆ ಬೇಸರವಾಗದಂತೆ ಆದಷ್ಟು ನೋಡಿಕೊಳ್ಳುತ್ತೇನೆ."

"ಸರಿ" ಎಂದು ಅವಳು ಬಿಸುಸುಯ್ದಳು. ಅದರಲ್ಲಿ ಆಶಾಭಾವವಿತ್ತೋ ನಿರಾಶಾಭಾವವಿತ್ತೋ ನನಗೆ ತಿಳಿಯದು.

"ಆದರೆ ಒಂದು ಮಾತು. ನೀನೆಂದೂ ಕಿಟ್ಟನನ್ನು ದ್ವೇಷಿಸುವುದಿಲ್ಲವೆಂದು ನನಗೆ ವಚನ ಕೊಡಬೇಕು" ಎಂದು ನಾನು ಅಂಗೈ ಚಾಚಿದೆ. "ಸರಿ" ಎಂದು ನನ್ನ ಅಂಗೈ ಮೇಲೆ ಅವಳು ತನ್ನ ಅಂಗೈಯನ್ನು ಇಟ್ಟಳು.

"ಅವನನ್ನೊಬ್ಬನಲ್ಲದೆ ಇತರರನ್ನು ಪ್ರೀತಿಸಬಾರದು."

"ಸರಿ" ಎಂದು ತನ್ನ ಕೈ ತೆಗೆದಳು.

ನಾನಾಕೆಯನ್ನು ಕಂಡುದು ಅದೇ ಕೊನೆಯ ಬಾರಿ. ಅವಳ ಕಣ್ಣಲ್ಲಿ ಜಿನುಗುತಿದ್ದ ಆ ಕಣ್ಣೀರನ್ನು ನೆನೆದರೆ ಈಗಲೂ ನನ್ನ ಕಣ್ಣಲ್ಲಿ ತೇವಬಾರದಿಲ್ಲ.

× × × ×

ಸಂಜೆ ನಾನು ಬಸ್ಸಿನಲ್ಲಿ ಬಂದು ಟ್ರಿಪ್ಲಿಕೇನ್‌ನಲ್ಲಿ ಇಳಿದು ಬಂಗಾಳ ಅಖಾತದ ಬಳಿಗೆ ಹೋಗುತಿದ್ದೆನಷ್ಟೆ. ಹಿಂದಿನಿಂದ ಯಾರೋ ಚಪ್ಪಾಳೆ ಹೊಡೆದಂತಾಯಿತು. ತಿರುಗಿ ನೋಡುವಾಗ ಮಾಧವಿ ನನ್ನ ಬೆನ್ನು ಹತ್ತಿಬಂದಿದ್ದಳು. ನಾನು ನಿಂತೆ.

"ಏನ್ರೀ ನಿಮ್ಮ ಪರೀಕ್ಷೆ ಮುಗಿಯಿತೆ?" ಎಂದು ನಕ್ಕಳವಳು. "ತಿರುಗಾಡಲಿಕ್ಕೆ ಹೊರಟಂತೆ ಕಾಣುತ್ತದೆ. ಪಾಸಾಗುವಿರಾ?"

"ಹೂಂ" ಎಂದೆ. "ಈ ತನಕ ಪಾಸ್. ಇನ್ನೆರಡು ವಿಷಯಗಳಿವೆ. ಅವುಗಳಲ್ಲಿ ಏನಾಗುವುದೆಂದು ನೋಡಬೇಕು."

"ನೀವೆಲ್ಲಿ ಹೋಗುತ್ತೀರಿ? ಸ್ವಲ್ಪ ಮೆರಿನಾ ಕ್ಯಾಂಟೀನಿಗೆ ಹೋಗೋಣ, ಆಗದೆ? ನಾನೂ ಸಂಜೆಯ ಚಹಾ ಕುಡಿಯಲಿಲ್ಲ."

"ಏಯ್ ಹೆಂಗಸರೊಟ್ಟಿಗೆ ನಾನು ಚಹ ಕುಡಿಯುವಂಥವನೆ?" ಎಂದು ಗಂಭೀರವಾಗಿ ನುಡಿದೆ.

ಮಾಧವಿಯ ಮುಖದಿಂದ ನಗುವಿನ ಛಾಯೆ ಮಾಯವಾಯಿತು.

"ನನ್ನೊಡನೆ ಹೆಂಗಸರು ಚಹಾ ಕುಡಿಯಬೇಕು!" ಎಂದು ಕ್ಷಣ ಕಾಲ ಕಳೆದು ಹೇಳಿದೆ.

ಅವಳು ಘೊಳ್ಳನೆ ನಕ್ಕಳು.

"ಕಾವು ಮತ್ತು ಥಂಡಿಗಳೆರಡೂ ನಿಮ್ಮಲ್ಲಿ ಬೆರಕೆಯಾಗಿರುವಂತೆ ತೋರುತ್ತದೆ. ಎಂಥವರು ನೀವು! ಬನ್ನಿ ಈ ಕಡೆ, ಕ್ಯಾಂಟೀನಿಗೆ."

"ಕ್ಯಾಂಟೀನಿನ ಮುಗಿಲು ಮಾಳಿಗೆಗೆ ಏರಿದೆವು. ಪ್ರಬಲವಾದ ಸಮುದ್ರ ಗಾಳಿ ಬೀಸುತ್ತಿತ್ತು.

"ಸಮುದ್ರದ ಗಾಳಿ ತಿನ್ನುವ ಅಭ್ಯಾಸ ನಿಮಗೆ ಮಂಗಳೂರಲ್ಲೂ ಇರಬೇಕು ಅಲ್ಲವೆ?" ಎಂದಳವಳು ಕುರ್ಚಿಯಲ್ಲಿ ಕುಳಿತುಕೊಂಡು.

"ಆದರೆ ಹೆಂಗಸರ ಗಾಳಿಯೊಡನೆ ಕಲುಷಿತವಾದ ಸಮುದ್ರ ಗಾಳಿಯನ್ನು ತಿನ್ನುವುದು ಇದೇ ಮೊದಲ ಬಾರಿ ಎನ್ನಬಹುದು."

"ಏನ್ರಿ ಹೆಂಗಸರಿಗೆ ಬೇರೆ ಗಾಳಿ. ಗಂಡಸರಿಗೆ ಬೇರೆ ಗಾಳಿ ಎಂದಿದೆಯೆ? ಹೆಂಗಸರೆಂದರೆ ಈ ಲೋಕಕ್ಕೆ ಸೇರಿದವರಲ್ಲ, ಇನ್ನೊಂದು ಲೋಕದವರು ಎಂದು ನೀವು ಗ್ರಹಿಸಿದ್ದೀರೋ ಏನೋ! ಹೆಂಗಸರೂ ಗಂಡಸರಂತೆ ತಾಯಿಯ ಹೊಟ್ಟೆಯಲ್ಲೇ ಹುಟ್ಟಿದವರು ತಿಳಿಯಿತೆ? ಅವರೂ ಗಂಡಸರಂತೆ ಉಂಡೇ ಬದುಕುವವರು."

"ಈ ಗುಟ್ಟು ನನಗೆ ತಿಳಿದಿರಲಿಲ್ಲ ಈತನಕ!"

ಇಬ್ಬರೂ ಘೊಳ್ಳನೆ ನಕ್ಕೆವು.

"ನೀವು ಇನ್ನೂ ತಿಳಿಯದಿರಬಹುದಾದ ಎಷ್ಟು ಸಂಗತಿಗಳಿವೆಯೋ ಯಾರಿಗೆ ಗೊತ್ತು? ಆ ಹೊಲಸು ಪೋಲೀಸ್ ಇನ್‌ಸ್ಪೆಕ್ಟರ್‌ನಂಥವರಿಗೆ ಅಷ್ಟು ವರ್ಷ ನೌಕರಿಯಲ್ಲಿದ್ದರೂ ತಾನು ಮನೆ ಝಡತಿಯನ್ನು ಹೇಗೆ ಮಾಡಬೇಕೆಂದು ಗೊತ್ತಿರಲಿಲ್ಲ ಅಲ್ಲವೆ? ಗಂಡಸರಾದ ನೀವೂ ಅವನಂಥ ವರೇ. ಗೊತ್ತಿಲ್ಲದಿದ್ದರೂ ಗೊತ್ತಿದೆ ಎಂದು ತೋರಿಸಿಕೊಳ್ಳುತ್ತ ಇನ್ನು ಮುಂದೆ ಕೊರ್ಟುಗಳಲ್ಲಿ ಕೋಳಿಯಂತೆ ಅಟ್ಟಹಾಸ ಮಾಡುವಿರಿ!"

"ನನ್ನ ಮಟ್ಟಿಗೆ ಅರಿವೇ ತಪ್ಪೆಂದು ತೋರುತ್ತದೆ," ಎಂದೆ ನಾನು ವ್ಯಂಗ್ಯವಾಗಿ. "ಅರಿವು ಜ್ಞಾನ ಎಂಬಿತ್ಯಾದಿಯಾಗಿ ನಿಮ್ಮಂಥವರು ಹೇಳುತ್ತಾರಲ್ಲ? ಅದೇನು? ಅದಕ್ಕೆ ಕೈಕಾಲುಗಳಿವೆಯೆ? ಅದಕ್ಕೆ ರೂಪವಿದೆಯೆ? ಅದನ್ನು ಕೊಳ್ಳಲಾಗುವುದೆ? ನಿಮ್ಮ ಋಷಿಗಳೆಲ್ಲ ಜ್ಞಾನತೃಷೆ ಎಂಬ ಬಾಯಾರಿಕೆಯಲ್ಲೇ ನೀರು ಕುಡಿಯದೆ ಸಾಯುತ್ತಾರೆ ನಿಜವಾಗಿ ಏನನ್ನೂ ತಿಳಿಯದಿರುವುದೇ ಜ್ಞಾನವೆನ್ನಬೇಕು."

"ಏನು ಶಂಕರಾಚಾರ್ಯರ ಭಾಷೆಯಲ್ಲಿ ಮಾತಾಡುತ್ತೀರಲ್ಲ! ಸಾಕು ಬಿಡಿ. ನಿಮಗೆ ಫ್ರುಟ್ ಸಲಡ್ ಮತ್ತು ಪೀಚ್ ಮೆಲ್ಬಾ ಹೇಳ್ತೀನೆ. ಬಟಾಟೆ ಚಿಪ್ಸ್ ಬೇಕೆ? ನನಗೊಂದು ಅಮ್ಲೆಟ್ ಹೊಡೆಯಬೇಕು ಆಫೀಸಿನಲ್ಲಿ ಬರೆದು ಬರೆದು ಸಾಕಾಗಿದೆ."

ವೈಟರ್ ನಿರ್ಗಮಿಸಿದ. ಉಳಿದ ಟೇಬಲ್‌ಗಳಿಗೂ ಜನರು ಬರಲಾರಂಭಿಸಿದ್ದರು.

"ಅಮ್ಲೆಟಿಗೂ ಬರೆಯೋದಕ್ಕೂ ಏನು ಸಂಬಂಧ? ಇದು ಜ್ಞಾನಾಂಗಕ್ಕೆ ಸೇರಿದುದೆ?"

"ಹಾಗಾದರೆ ಹೇಳ್ತೀನೆ ಅಮ್ಲೆಟ್ ಎಂದರೆ ಕೋಳಿ ತತ್ತಿಯಿಂದ ತಯಾರಿಸುವಂಥದ್ದು ಅದರಲ್ಲಿ ವಿಟಮಿನ್, ಪ್ರೊಟೀನ್, ಸ್ಟಾರ್ಚ್ ಎಲ್ಲ ಇವೆ. ಹುಲ್ಲು ತಿನ್ನುವ ನಿಮಗೆ ಅದರ ರುಚಿ ಹೇಗೆ ಗೊತ್ತಾಗಬೇಕು?"

ವೈಟರ್ ಆಮ್ಲೆಟನ್ನು ತಂದು ಅವಳ ಮುಂದಿಟ್ಟು ಹೋದ

"ನೋಡಿ ಇದರಿಂದ ಒಂದು ತುಂಡು ತಿಂದು ನೀವು ರುಚಿ ನೋಡಬೇಕು. ಒಮ್ಮೆ ತಿಂದರೆ ನೀವು ಬಿಡೋದಿಲ್ಲ," ಎಂದು ಆಕೆ ಚಾಕುವಿನಿಂದ ಅದನ್ನು ಅರ್ಧ ಕೊಯ್ದು ಫೋರ್ಕ್‌ನಲ್ಲಿ ಎತ್ತಿದಳು.

ನಾನು ತಮಾಷೆಗೆ ವಾಂತಿ ಮಾಡುವಂತೆ ವಾಕರಿಕೆ ಮಾಡಿದ.

"ಏನ್ರೀ ತತ್ತಿಯೆಂದರೆ ಸಸ್ಯಾಹಾರವೆಂದು ಅಹಿಂಸಾ ಪರಮೋ—ಧರ್ಮದ ಜೈನ ಮಂತ್ರಿಗಳೇ ಮೊನ್ನೆ ಘೋಷಿಸಿದ್ದಾರಲ್ಲ? ನೀವು ವಾಕರಿಕೆ ತರುತ್ತೀರಿ!"

"ನಾನು ತತ್ತಿಯಂಥ ಸಣ್ಣ ನಿರ್ಜೀವ ವಸ್ತುವನ್ನು ಸಸ್ಯವೆಂದು ಭಾವಿಸುವಷ್ಟು ಹೆಡ್ಡನಲ್ಲ" ಎಂದು ನಾನು ನಕ್ಕೆ, "ಕೋಳಿ ಹುಳ ಹುಪ್ಪಡಿಗಳನ್ನು ತಿನ್ನುವ ಮಾಂಸಾಹಾರಿ ಎಂಬುದು ನನಗೆ ಗೊತ್ತಿದೆ. ಆಡು. ಕುರಿ ಮುಂತಾದುವು ಮಾತ್ರ ಶುದ್ಧ ಸಸ್ಯಾಹಾರವೆನ್ನಬಹುದು ಅವು ಸ್ವತಃ ಸಸ್ಯಾಹಾರಿಗಳಾದ್ದರಿಂದ ಹೀಗೆ ಹೇಳುತ್ತೇನೆ"

"ಒಳ್ಳೆ ತರ್ಕ" ಎಂದಳಾಕೆ ನಗುತ್ತ "ಆದರೆ ಈಗ ನನ್ನ ಸ್ನೇಹಿತೆಯರಲ್ಲೇ ಅನೇಕರು ಅಮ್ಲೆಟ್ ತಿಂದರೆ ದೋಷವಿಲ್ಲವೆಂದು ಅಭಿಪ್ರಾಯಪಟ್ಟು ತಮ್ಮ ಮನೆಯಲ್ಲೇ ತಯಾರಿಸಲು ಆರಂಭಿಸಿದ್ದಾರೆ."

"ಅವರಲ್ಲಿ ಕೆಲವರು ವಸ್ತ್ರ ಬಿಚ್ಚಿ ಕುಣಿಯುವವರೂ ಇರಬಹುದು ನಾನೂ ಅವರನ್ನನುಸರಿಸಬೇಕೆ?"

ಮಾಧವಿ ಮತ್ತೆ ತುಸು ಹೊತ್ತು ಮಾತಾಡಲಿಲ್ಲ. ಎರಡು ಆಮ್ಲೆಟಗಳನ್ನು ಗಪ ಗಪನೆ ತಿಂದು ನೀರು ಕುಡಿದಳು. ನಾನು ಬೇಕೋ ಬೇಡವೋ ಎಂದು ಫ್ರುಟ್ ಸಾಲಡಿನಿಂದ ಒಂದೆರಡು ತುಂಡು ಹಣ್ಣುಗಳನ್ನು ತಿಂದು ಪೀಚ್ ಮೆಲ್ಬಾವನ್ನು ಕೊಳವೆಯಲ್ಲಿ ಹೀರಿದೆ

ಬಿಲ್ ತಂದಾಗ ಅವಳೇ ಹಣ ಕೊಟ್ಟಳು ನಾನು ಪ್ರತಿಭಟಿಸಲೇ ಇಲ್ಲ. ನನ್ನ ಸಲಿಗೆಯ ಮಾತು ಅವಳಿಗೆ ಸ್ವಲ್ಪ ಚುಚ್ಚಿರಲೂ ಸಾಕೆಂದು ಎಣಿಕೆ ಹಾಕುತ್ತ ಸಮುದ್ರದ ಅಲೆಗಳನ್ನೇ ನೋಡುತ್ತಿದೆ

"ಇನ್ನು ಹೋಗೋಣ!" ಎಂದು ಆಕೆ ತನ್ನ ವ್ಯಾನಿಟಿ ಬ್ಯಾಗನ್ನೂ ಕೊಡೆಯನ್ನೂ ಎತ್ತಿಕೊಂಡು ಹೊರಟಳು. ಕೆಳಗಿಳಿಯುವಾಗ ಅವಳು ನಿಂತು "ಮುಂದೆ ಹೋಗಿ" ಎಂದು ನನಗೆ ದಾರಿ ಮಾಡಿದಳು. ನಾನು ತುಟಿ ಪಿಟಕ್ಕೆನ್ನದೆ ಕೆಳಗಿಳಿದು ಈಜುಕೊಳವನ್ನು ನೋಡುತ್ತ ಹೊರ ನಡೆದ.

"ನಿಮಗೇನು ಈಜಾಡಬೇಕಿತ್ತೆ?" ಎಂದು ಅವಳು ಪ್ರಶ್ನಿಸಿದಳು

"ನನಗೆ ಈಜಲು ಬರೋದಿಲ್ಲ," ಎಂದೆ

ಮೌನವಾಗಿ ನಾವು ಮಳಲಿನಲ್ಲಿ ಹೆಜ್ಜೆ ಹಾಕಿದವು ಒಂದೆಡೆ ನನ್ನ ಬೂಟ್ಸಿನೊಳಗೆ ಸೇರಿಕೊಂಡಿದ್ದ ಮಳಲ ಕಣಗಳನ್ನು ತೆಗೆಯಲು ನಿಂತೆ. ಅವಳೂ ನಿಂತಳು. ನಾನು ಪುನಃ ಹೊರಟೆ!

"ನಿಮಗೆಲ್ಲಿ ಹೋಗಬೇಕಾಗಿದೆ?" ಎಂದು ಕೇಳಿದಳು. ನಾವು ಮರಿನಾ ರಸ್ತೆಯನ್ನು ಸಮೀಪಿಸುತ್ತಿದ್ದಾಗ

"ನಾನು ಹೊರಟಿದ್ದು ಯುನಿವರ್ಸಿಟಿ ಲೈಬ್ರರಿಗೆಂದು. ಆದರೆ ಬಸ್ಸಿನಲ್ಲಿ ಜಾಗ ಸಿಗಲಿಲ್ಲ. ಇನ್ನು ಹೀಗೆಯೇ ತಿರುಗಾಡಿ ನೆಹ್ರೂ ಹೋಟೇಲಿನಲ್ಲೊ ಏನಾದರೂ ಉಂಡು ಹಿಂತಿರುಗುತ್ತೇನೆ."

ನನ್ನ ಮಾತಿನಿಂದ ಸರಸದ ಅಂಶ ಮಾಯವಾದುದು ಅವಳಿಗೆ [illegible] ದಿರಬೇಕು.

"ಅಷ್ಟೇ ತಾನೇ! ನನಗೂ ನಿಮ್ಮ ಸಾಂಬಾರ್ ಊಟ ಮಾಡಬೇಕೆಂದು ಆಸೆಯಿದೆ. ನಾನು ಹೋಟೇಲಿನಲ್ಲಿ ಉಣ್ಣದೆ ಯುಗವಾಯಿತು. ನಾನು ನಿಮ್ಮ ಅತಿಥಿಯಾಗುತ್ತೇನೆ ಒಪ್ಪಿಗೆಯೆ?" ಎಂದಳವಳು.

"ಸರಿ. ಎಂಟು ಗಂಟೆಗೆ ನಾನು ಹೋಟೇಲಿಗೆ ಹೋಗುತ್ತೇನೆ ಅಲ್ಲಿಗೆ ಆಗ ಬನ್ನಿ" ಎಂದು ಒಣದನಿಯಲ್ಲಿ ಉತ್ತರಿಸಿದೆ

"ಒಹ್ಹೋ! ಈಗ ಗೊತ್ತಾಯಿತು ನಿಮ್ಮ ಗುಟ್ಟು. ನನ್ನನ್ನು ಹೇಗಾದರೂ ಇಲ್ಲಿಂದ ಈಗೊಮ್ಮೆ ಪಾರ್ಸೆಲ್ ಮಾಡಬೇಕೆಂದು ನಿಮ್ಮ ಇಚ್ಛೆಯೆ? ಹ್ಹ! ಹ್ಹ!" ಎಂದು ಅಣಕಿಸಿದಳು.

"ಕ್ಷಮಿಸಿ. ನಿಮ್ಮ ತಂಗಿಗೂ ಊಟವಾಗಬೇಕಲ್ಲ? ಹಾಗೆ ಮನೆಗೆ ಹೋಗಿ ಬನ್ನಿ ಎಂದೆನಷ್ಟೆ" ಎಂದೆ.

"ಎಂಥ ಅಗಾಧ ಯೋಚನೆ!" ಎಂದು ಅವಳು ವ್ಯಂಗವಾಗಿ ನಗುತ್ತ ತಲೆಗೆ ಹೊಡೆದುಕೊಂಡಳು "ನನ್ನ ತಂಗಿ ಏನಾದರೂ ಮೊಲೆಯುಣ್ಣುವ ಮಗುವೆ? ಅವಳು ಅವಳ ಗೆಳತಿಯರೊಡನೆ ಸಿನಿಮಾಕ್ಕೆ ಹೋಗಿದ್ದಾಳೆ. ಇನ್ನು ಊಟ ತೀರಿಸದೆ ಆಕೆ ಹಿಂತಿರುಗೋದಿಲ್ಲ. ಆದ್ದರಿಂದ ನೀವು ಅವಳ ನೆವನವನ್ನೆತ್ತಿ ಪ್ರಯೋಜನವಿಲ್ಲ."

"ನಾನು ಮತ್ತೇನು ಮಾಡಬೇಕೆನ್ನುವಿರಿ?"

"ನಾನೀಗ ಅಮ್ಲೆಟ್ ತಿಂದೆನಲ್ಲ? ಅದು ಕರಗಬೇಕಾದರೆ ಸಾನ್ ಥೋಮ್ ಬೀಚ್ ತನಕ ನಾವು ನಡೆಯಬೇಕು ಅಲ್ಲಿಂದ ಹಿಂದಿರುಗುವಾಗ ಊಟಕ್ಕೆ ಸಮಯವಾಗುತ್ತದೆ."

ಇದು ನನ್ನೆಣಿಕೆಯನ್ನು ಮೀರಿದ ಕಾರ್ಯಕ್ರಮವಾಗಿತ್ತು

"ಸಾನ್ ಥೋಮ್ ಬೀಚೇ ಏಕೆ?" ಎಂದೆ "ಅಡೆಯಾರ್ ತನಕವೂ ಹೋಗಿ ನಾವು ಇನ್ನೊಂದು ಜನ್ಮದಲ್ಲಿ ಊಟಕ್ಕೆ ಹೋಗಬಹುದಲ್ಲ?"

ನನ್ನ ಮನೋಲ್ಲಾಸ ಪುನಃ ಚೇತರಿಸಿಕೊಂಡುದು ಅವಳಿಗೆ [illegible] ಯಿತು

"ನೋಡಿ ಆ ದಿನ ಕಂದಸ್ವಾಮಿಗೆ ಕಲಿಸಿದ ಹಾಗಿಲ್ಲ ತಿಳಿಯಿತೆ?" ಎಂದಳು ನನ್ನ ಬೆನ್ನನ್ನು ಮೃದುವಾಗಿ ತಟ್ಟಿ "ಸಂಜೆ ಸ್ವಲ್ಪ ಹೀಗೆ ಗೊತ್ತುಗುರಿಯಿಲ್ಲದ ಅಲೆದಾಡಿದರೆ ಮನಸ್ಸೂ ಹಗುರಾಗುತ್ತದೆ"

"ಆದರೆ ನನ್ನ ಹೊಟ್ಟೆಯಲ್ಲಿ ಅಮ್ಲೆಟ್ ಇಲ್ಲವಲ್ಲ! ನನ್ನ ಹೊಟ್ಟೆಯಾದರೂ ಹಗುರವಾಗಿಯೇ ಇದೆ ಮನಸ್ಸಿನ ಚಿಂತೆ ನಿಮಗೇಕೆ? ಮನಸ್ಸು ಭಾರವಾಗಿದೆಯೆಂದು ಕಾಲುಗಳಿಗೆ ಪಾಪ ಶ್ರಮ ಕೊಡಬೇಕೆ?"

ಬಾಯಿಯಲ್ಲಿ ಹೀಗೆ ನಾನು ಹೇಳುತ್ತಿದ್ದರೂ ನಾವು ಕ್ವೀನ್ ಮೇರೀಸ್ ಹಾಸ್ಟೆಲನ್ನು ದಾಟಿ ಮುಂದರಿದಾಗಿತ್ತು ಅಲ್ಲಿ ಹುಡುಗಿಯರ ಮತ್ತು ಹುಡುಗರ ಗುಂಪುಗಳು ಎಂದಿನಂತೆ ಸಭೆ ಸೇರಿದ್ದವು ನನ್ನ ಪರಿಚಯಸ್ಥರೊಬ್ಬಿಬ್ಬರಿಗೆ ದೂರದಿಂದಲೇ ನಮಸ್ಕಾರ ಮಾಡಿದೆ ಮಾಧವಿ ತನ್ನ ಪರಿಚಯದವರನು ಒಬ್ಬಿಬ್ಬರೊಡನೆ ಕುಶಲ ಪ್ರಶ್ನೆ ಮಾಡಿ ಮುಂದರಿದಳು

"ಇದು ಕ್ಯೂಎನ್ನಿಪ್ಪ ಗೊತ್ತೆ?" ಎಂದು ನಕ್ಕಳಾಕೆ.

"ಮದ್ರಾಸಿನಲ್ಲಿ ನಾನಿರೋದು ಆರನೇ ವರ್ಷ ಗೊತ್ತೆ?" ಎಂದೆ ನಾನು

ಸಮುದ್ರದ ಗಾಳಿಗೆ ಮುಖವನ್ನೊಡ್ಡುತ್ತ ಅದರ ಅಲೆಗಳ ಆರ್ಭಟವನ್ನು ಕಿವಿಗೆ ಹಾಕಿಕೊಳ್ಳದೆ ಮುಂದುವರಿದೆವು. ನನ್ನ ವಿದ್ಯಾಭ್ಯಾಸ, ನನ್ನ ಗತಜೀವನದ ಇತಿಹಾಸದ ಸಾರಾಂಶವನ್ನು ಆವಳಿಗೆ ಮತ್ತೆ ತಿಳಿಸಿದೆ. ಆವಳೂ ಕ್ವೀನ್ಸ್ ವಿದ್ಯಾರ್ಥಿನಿಯಂತೆ. ನಮಗೆ ಕೆಲವು ಮಂದಿ ಸಾಮಾನ್ಯ ಪರಿಚಿತರಿದ್ದರೆಂಬುದೂ ಆಗ ತಿಳಿಯಿತು

"ನಾನೂ ವಿದ್ಯಾರ್ಥಿನಿಯಾಗಿದ್ದಾಗ ಏನು ಸೊಟ್ಟ ಮೋರೆ ಮಾಡಿಕೊಂಡು ಇಲ್ಲಿ ಚಿಟ್ಟೆಯಂತೆ ಮೆರೆದಾಡುತ್ತಿದ್ದೆ! ಈಗ ನನ್ನ ಸೀರೆ ರವಿಕೆಗಳನ್ನು ಶುಚಿಯಾಗಿ ತೊಳೆಯಲೂ ನನ್ನಿಂದಾಗೋದಿಲ್ಲ!"

ನಾನು ನಕ್ಕೆ: "ನೀವು ವಸ್ತ್ರ ಧರಿಸಿದರೂ ಒಂದೇ ಧರಿಸದಿದ್ದರೂ ಒಂದೇ. ನಿಸರ್ಗಸುಂದರಿ ಹಿಮಾಲಯ ಪರ್ವತಕ್ಕೆ ಪೌಡರ್ ಹಚ್ಚಬೇಕೆ?"

"ಸಾಕ್ರೀ. ನಿಮಗೇನು ಸೀರೆ ಧರಿಸೋದರ ಮಾತೇ ಬರುತ್ತಿದೆ? ಈಗ ನಿಮ್ಮೂರಲ್ಲಿ ಸೂರ್ಯ ಮುಳುಗುವ ದೃಶ್ಯದ ನೆನಪಾಗುತ್ತಿದೆಯೆ? ಹೆಂಗಸರೊಡನೆ, ಅದೂ ಮದುವೆಯಾಗದ ತರುಣಿಯೊಡನೆ ಹೇಗೆ ಮಾತಾಡಬೇಕೆಂಬುದೇ ನಿಮಗೆ ಗೊತ್ತಿಲ್ಲವೆ?"

ಅವಳ ಸರಸದ ಧಾಟಿಯಲ್ಲದಿದ್ದರೆ ನಾನು ಈ ಮಾತು ಕೇಳಿ ಒಮ್ಮೆಲೇ ಅವಾಕ್ಕಾಗುತಿದ್ದೆ, ಏಕೆ, ಕೂಡಲೇ ಹಿಂದಿರುಗುತಿದ್ದೆ. ಆದರೆ ವ್ಯಂಗ್ಯ—ವಿಡಂಬನೆಗಳಲ್ಲಿ ಆಕೆ ಚತುರಳೆಂಬುದು ನನಗೆ ತಿಳಿದಿತ್ತು. ಆದರೂ ಅವಳ ಮನೋಭಾವವನ್ನು ಪರೀಕ್ಷಿಸಲೆಂದು ನಾನು ತುಸು ಕಾಲ ಸುಮ್ಮನಾದೆ. ಅನಾವಶ್ಯಕ್ಕಾಗಿ ಅವಳೊಡನೆ ಮನಸ್ತಾಪ ಮಾಡಿಕೊಳ್ಳಲು ನನಗೆ ಇಚ್ಛೆಯಿರಲಿಲ್ಲ, ಮಾತ್ರವಲ್ಲ, ಅವಳೊಡನೆ ಅಲ್ಲಸಲ್ಲದ ರೀತಿಯ ಸಂಬಂಧ ಬೆಳೆಸುವ ಆಸೆಯೂ ಇರಲಿಲ್ಲ. ಆದ್ದರಿಂದ ಒಂದು ಹೆಜ್ಜೆ ಮುಂದಿಟ್ಟರೆ ಎರಡು ಹೆಜ್ಜೆ ಹಿಂದಿಡುತ್ತಿದ್ದೆ. ನಾವು ಎಷ್ಟೇ ಆಪ್ತರಾದರೂ ನಾವು ಬೇರೆ ಬೇರೆ ಪ್ರಪಂಚಗಳಿಗೆ ಸೇರಿದವರೆಂಬುದು ನನಗೆ ಗೊತ್ತಿತ್ತು. ಆದ್ದರಿಂದ ಈ ಕ್ಷಣಿಕ ಬಾಂಧವ್ಯಕ್ಕೆ ನಾನು ಮಹತ್ವ ಕೊಡುವಂತಿರಲಿಲ್ಲ-ಮಾಧವಿಯಿಂದ ಎಷ್ಟು ಆಕರ್ಷಿಸಲ್ಪಟ್ಟರೂ ಸಿಕ್ಕ ಸಿಕ್ಕ ವಸ್ತುಗಳ ರುಚಿ ನೋಡುವ ಪ್ರವೃತ್ತಿ ನನ್ನ ಸ್ವಭಾವಕ್ಕೆ ವಿರುದ್ಧವಾಗಿತ್ತು.

ಮೈಲಾಪುರದ ದೀಪಗಳು ಉರಿಯುವುದು ದೂರದಿಂದ ಕಾಣತೊಡಗಿದವು. ನಾವು ಮೌನವಾಗಿ ಸುಮಾರು ಎರಡು ಮೈಲಿ ನಡೆದೆವೆಂದು ಆಗ ತಾನೇ ನನಗೆ ಹೊಳೆದುದು. ಕತ್ತಲೆ ದಟ್ಟವಾಗುತ್ತಿತ್ತು. ಮಾಧವಿಯ ಮುಖ ನನಗೆ ಮಸಕಾಗಿ ತೋರುತ್ತಿತ್ತು. ಆಕೆಗೆ ನನ್ನ ನಡಿಗೆಯ ವೇಗ ತುಸು ವೇಗವಾಗಿ ಕಂಡಿರಬೇಕು. ಬುಸುಗುಟ್ಟುತ್ತ ಅವಳು ಹೆಜ್ಜೆ ಹಾಕುತ್ತಿದ್ದುದನ್ನು ನೋಡಿ ನನಗೆ ಸ್ವಲ್ಪ ಕನಿಕರವೂ ಆಯಿತು.

"ಯು ಆರ್ ಅಂಡರ್ ಎರೆಸ್ಟ್" ಎಂದು ಪಕ್ಕನೆ ಅವಳು ನನ್ನ ಭುಜವನ್ನು ಹಿಡಿದು ಜಗ್ಗಿ ಮಳಲ ರಾಶಿಯಲ್ಲಿ ಕುಳ್ಳಿರಿಸಿ ತಾನೂ ಕುಳಿತಳು. ಗಾಳಿ ಬೋಂಯ್ ಬೋಂಯ್ ಎಂದು ಬೀಸುವಾಗ ನಾನೇ ಹಾರಿ ಹೋಗುತ್ತೇನೋ ಎಂದು ಭಾಸವಾಗುತ್ತಿತ್ತು. ನಾನು ಬೂಟ್ಸಿನೊಳಗೆ ಹೊಕ್ಕಿದ್ದ ಮಳಲ ಕಣಗಳನ್ನು ತೆಗೆಯುತ್ತಿದ್ದಂತೆ ಅವಳು ನನ್ನ ಕಿವಿಯನ್ನು ಹಿಡಿದೆಳೆದಳು.

"ಏ ತುಂಟ!" ಎಂದು ನಾನು ಉದ್ಗರಿಸಿದೆ.

× × × ×

ಕೋಣೆಯ ಕೀಲಿ ತೆಗೆಯುವಾಗ ಕಿಟ್ಟು ಕೆಳಗಿನಿಂದ ಓಡಿ ಬಂದ.

"ಏನಯ್ಯ? ಎಲ್ಲಿ ಸವಾರಿ ಬಿಟ್ಟದ್ದಿ? ನೀನು ಊರಿಗೇ ವಾಪಸ್ ಹೋದಿಯೆಂದು ನಾನು ಭಾವಿಸಿದೆ," ಎಂದು ನನ್ನ ಬೆನ್ನ ಮೇಲೆ [illegible]. ಆಗ ನನ್ನ ಅಂಗಿಯ ಮೇಲಕ್ಕೆ ಮಡಚಿದ ಕೈಯಿಂದ [illegible] ಕೆಳಗೆ ಸುರಿಯಿತು

"ಏ ಮಹಾಶಯ [illegible]"

"ಸಾರ್ [illegible] ಬೀಚಿಗೆ ಹೋಗಿದ್ದೆ. [illegible]



ಮೂಗು ತವೆಯುಂಟಾದಾಗ!

ಕುಳಿತೆ, ಸ್ವಲ್ಪ ಹೊತ್ತು ಒರಗಿದೆ. ಜೋರಾಗಿ ಗಾಳಿ ಬೀಸುತ್ತಿತ್ತು. ಹಾಗೆ ಅಂಗಿಯಲ್ಲಿ ಉಸುಕು ಬಿದ್ದಿರಬೇಕು!"

"ಬಹುಶಃ ಆ ಉಸುಕಿಗೆ ಅಂಟು ಬೆರಸಿಟ್ಟಿದ್ದರೋ ಏನೋ!"

ಮಾಧವಿಯ ಕೋಣೆಯಿಂದ ಫಕ್ಕನೆ ಕಿಲಕಿಲನೆ ನಗುವುದು ಕೇಳಿಸಿತು.

"ಹ್ಞೊ!" ಎಂದು ಕಿಟ್ಟು ಒಮ್ಮೆಲೆ ದನಿ ಇಳಿಸಿದ. "ಮಲೆಯಾಳಿ ಹುಡುಗಿಯರಿಗೆ ಸಹಿತ ಇದು ಆಶ್ಚರ್ಯಕರವಾಗಿ ತೋರುತ್ತಿರಬೇಕು. ಸುಮ್ಮನೆ ಅವರಿಗೆ ತೊಂದರೆ ಬೇಡ. ಶಶಿಕಲಾ ತಂದೆಯ ಮನೆಗೆ ಹೋದಳು. ಅವಳನ್ನು ರೈಲಿನಲ್ಲಿ ಕುಳ್ಳಿರಿಸಿ ಬಂದೆ. ನಿನ್ನೊಡನೆ ಹೋಗುತ್ತೇನೆಂದು ಹೇಳಲಿಕ್ಕಾಗಲಿಲ್ಲವಲ್ಲ! ಎಂದು ಅಸಮಾಧಾನದಿಂದಿದ್ದಳು."

"ಹಾಗಾದರೆ ಇನ್ನು ಪದ್ಮಿನಿಯ ಕನಸು ಕಾಣಲಿಕ್ಕೆ ನಿನಗೆ ಅವಕಾಶ ಸಿಕ್ಕಿತಲ್ಲ!"

"ಏ ಸಾಕೋ! ಚೆನ್ನಾಗಿ ಓದಿ ಪಾಸಾಗು."

೧೦

"ಪಾಸಾಗುತ್ತೇನೋ ಇಲ್ಲವೋ, ನಾನು ಹೇಗೆ ಹೇಳಲಿ? ನನಗಾದರೂ ಪಾಸಾಗದೇ ಇದ್ದರೆ ಒಳ್ಳೆಯದೆಂದು ತೋರುತ್ತದೆ ನನಗೆ" ಎಂದು ಪದ್ಮಿನಿಗೆ ಹೇಳಿದೆ.

"ಉದರವೈರಾಗ್ಯವೆಂದು ನಿಮ್ಮ ಕನ್ನಡದ ಪುರಂದರದಾಸರು ಹೇಳಿದ್ದಾರಲ್ಲ? ಹಾಗೆಯೇ ನೀನೂ ಹೇಳುತ್ತಿರುವಂತೆ ತೋರುತ್ತದೆ. ಯಾರಾದರೂ ಇಷ್ಟು ಕಷ್ಟಪಟ್ಟು ಕೊನೆಗೆ ಇಂಥ ನಿರಾಸಕ್ತಿಯನ್ನು ತೋರುವರೆ?" ಎಂದು ನಕ್ಕಳವಳು.

ಕಿಟ್ಟು ಕೆಳಗಿನಿಂದ ತಾನೇ ಸ್ವತಃ ತಯಾರಿಸಿದ ಪುಳಿಯೋಗರೆ ಮತ್ತು ಕಾಫಿಯನ್ನು ಹಿಡಿದುಕೊಂಡು ನನ್ನ ಕೋಣೆಯೊಳಗೆ ಹೊಕ್ಕಿದ. ಪದ್ಮಿನಿಯನ್ನು ನೋಡಿಯೋ ಅಲ್ಲ, ಲೋಟ ಬಿಸಿಯಾಗಿಯೋ ಅಂತೂ ಕಾಫಿ ಎಲ್ಲ ನನ್ನ ಮೇಲೆ ಚೆಲ್ಲಿ ಲೋಟ ಕೆಳಗೆ ಬಿತ್ತು. ಪದ್ಮಿನಿಯೂ ಫಕ್ಕನೆ ದೂರಕ್ಕೆ ಕುರ್ಚಿ ಸರಿಸಿದಳು.

"ಏ ಶೋಂಬೇರಿ ನಾನಿಂದು ಹೊರಡುವಾಗ ನೀನು ಮಾಡಿದ ಕಾಫಿಯ ಅವಶೇಷವನ್ನೂ ಕೊಂಡು ಹೋಗುವ ಹಾಗೆ ಮಾಡಿಬಿಟ್ಟೆಯಲ್ಲವೆ? " ಎಂದು ನಗುತ್ತ ಹೇಳಿದೆ. "ಈ ತಪ್ಪಿಗಾಗಿ ನೀನು ಶಿಕ್ಷೆ ಅನುಭವಿಸಬೇಕಾಗಿದೆ. ಕೆಳಗೆ ಹೋಗಿ ಒಂದು ಲೋಟದ ಬದಲು ಎರಡು ಲೋಟ ಕಾಫಿ ತಾ."

ಪದ್ಮಿನಿ ಕಿಟ್ಟನನ್ನು ನೋಡಿ ನಕ್ಕಳು.


Telegram : "BELLSPIN"

Telephone: 407 (Office)
419 (Factory)

BELLARY SPINNING & WEAVING CO., LTD.

7, Balaji Rao Road, **BELLARY**

NEW MILLS WITH LATEST MODERN MACHINERY
12,320 SPINDLES CAPACITY
STARTED PRODUCTION
COTTON YARN



PRODUCING 20 COTTON YARN
ENQUIRIES SOLICITED

HEARTIEST DEEPAVAL
GREETINGS TO ALL

H. LINGA REDDY, B. A., B. L.
Chairman

G. SITARAMA REDDY
Managing Director



"ಇನ್ನು ಇಲ್ಲಿದ್ದು ಪ್ರಾಣ ಕಳೆದುಕೊಳ್ಳಬೇಡಿ. ನಮ್ಮ ಔಟ್‌ಹೌಸನ್ನು ಅಪ್ಪನೊಡನೆ ಹೇಳಿ ಕೊಡಿಸುತ್ತೇನೆ" ಪದ್ಮಿನಿ ಕಿಟ್ಟುವಿಗೆ ಹೇಳಿದಳು.

"ಏನಯ್ಯ! ಕಾಫಿ ತರೋದೆಂದರೆ ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸ್ ಹೊಡೆದಂತಲ್ಲ, ತಿಳಿಯಿತೆ?"

ಕಿಟ್ಟನಿಗೆ ಮಾತೇ ಬರದಾಯಿತು. ನೆಲಕ್ಕೆ ಬಿದ್ದ ಲೋಟವನ್ನು ತೆಗೆದುಕೊಂಡು ಅವನು ಕೆಳಗೆ ಹೋದ. ನಾನು ನನ್ನ ಮುಂಡನ್ನು ಬದಲಿಸಬೇಕಿತ್ತು.

"ನನ್ನ ವಸ್ತ್ರ ಬದಲಿಸುತ್ತೇನೆ. ಆಚೆ ನೋಡಿ. ಇಲ್ಲಿ ಬೇರೆ ಸ್ಥಳವಿಲ್ಲ" ಎಂದು ಗತ್ಯಂತರವಿಲ್ಲದೆ ಪದ್ಮಿನಿಗೆ ನಾನು ವಿನಂತಿಸಬೇಕಾಯಿತು. "ಇಲ್ಲವಾದರೆ ಒಂದು ಕ್ಷಣ ಹೊರಗೆ ನಿಲ್ಲಿ."

"ಸಾಕಯ್ಯ, ನಿಮ್ಮ ತಮಾಷೆ!" ಎಂದು ಅವಳು ನಾನೆಂದುದಕ್ಕೆ ಎಳ್ಳಷ್ಟು ಮಹತ್ವ ಕೊಡದವಳಂತೆ ನಕ್ಕಳು. "ಆ ಬಾಗಿಲನ್ನು ಮಾತ್ರ ಮುಚ್ಚಿಕೊಳ್ಳಿ."

"ನಾನು ಕೇವಲ ಶಿಷ್ಟಾಚಾರಕ್ಕಾಗಿ ಹಾಗೆ ಹೇಳಿದೆ, ಅಷ್ಟೆ. ಅಪಾರ್ಥ ಗ್ರಹಿಸಬೇಡಿ."

"ನಿಮ್ಮ ಮೇಲೆ ನನಗೆ ಅಷ್ಟು ವಿಶ್ವಾಸವಿಲ್ಲದಿದ್ದರೆ ನಾನೊಬ್ಬಳೇ ನಿಮ್ಮ ಕೋಣೆಗೆ ಈಗ ಬರುತಿದ್ದೆನೆ? ಅಪಾರ್ಥದ ಪ್ರಶ್ನೆಯೇ ಇಲ್ಲಿಲ್ಲ. ನಾನೇನು ಕಿಟ್ಟುವಿನಂತೆ ಅಪ್ರಬುದ್ಧಳೆ?"

ನಾನು ವಸ್ತ್ರ ಬದಲಾಯಿಸಿ ಹಳೆಯ ಗಜೇಟಿನ ಚಿಂದಿ ಮಾಡಿ ನೆಲವನ್ನು ಒರಸಿದೆ. ಪದ್ಮಿನಿಯೂ ಒಂದು ತುಂಡು ಕಾಗದದಲ್ಲಿ ತಾನು ಕುಳಿತಲ್ಲಿ ಒರಸಿದಳು ಇಷ್ಟಾಗುವಾಗ ಕಿಟ್ಟು ಕಾಫಿ ಮತ್ತೊಂದು ತಟ್ಟೆಯಲ್ಲಿ ಪುಳಿಯೋಗರೆ ಮತ್ತು ಬಿಸ್ಕತ್ತುಗಳನ್ನು ತಂದು ಮೇಜಿನ ಮೇಲಿಟ್ಟ.

"ಅಯ್ಯಂಗಾರಿ ಆಗಿ ನೀವು ಹುಟ್ಟಿದ್ದು ಸಾರ್ಥಕವಾಯಿತು," ಎಂದಳು ಪದ್ಮಿನಿ ನಗುತ್ತ. "ಅಡುಗೆ ಭಟ್ಟನ ಕೆಲಸದಲ್ಲೂ ಹಿಂದಿಲ್ಲವೆಂಬುದು ಸಿದ್ಧವಾಯಿತು. ನೀವೇನು ಅಡುಗೆ ಕೋಣೆಯಲ್ಲೇ ಕಾಫಿ ಕುಡಿಯುವವರತೆ! ನನ್ನೊಡನೆ ಕುಡಿದರೆ ಮೈಲಿಗೆಯಾಗಬಹುದೋ ಏನೋ!"

ಕಿಟ್ಟು ಸಂಪೂರ್ಣವಾಗಿ ಪೆಚ್ಚಾಗಿಬಿಟ್ಟಿದ್ದನೆಂಬುದರಲ್ಲಿ ಸಂದೇಹವಿರಲಿಲ್ಲ. ಮುಖ್ಯವಾಗಿ, ಅವನಿಗೆ ಪದ್ಮಿನಿ ಬಂದುದೇ ಆಶ್ಚರ್ಯ. ಕಾಫಿ ತನ್ನ ಕೈಯಿಂದ ಚೆಲ್ಲಿ ಹೋದುದು ಅವನಿಗೆ ನಾಚಿಕೆಯನ್ನುಂಟುಮಾಡಿತ್ತು. ಕೂಡಲೇ ಅವನು ಕೋಣೆಯಿಂದ ಹೊರಗೆ ನಡೆದ.

ನಾವು ಪುಳಿಯೋಗರೆ ತಿನ್ನತೊಡಗಿದೆವು. ಆಗ ಕಿಟ್ಟುವಿನ ಮನೆ ಮಾಲಕಳ ಕಥೆ ಹೇಳಿದೆ.

"ಓಹ್! ಆ ಕಥೆ ಇಲ್ಲಿ ನಡೆದುದೆ?" ಎಂದು ಮೂಗಿನ ಮೇಲೆ ಬೆರಳನ್ನಿಟ್ಟಳು. "ಯಾರೋ ಮಂಗಳೂರಿನ ಲಾ ಸ್ಟುಡೆಂಟ ಎಂದು ಪತ್ರಿಕೆಯಲ್ಲಿ ಬರೆದಿತ್ತು. ಛೆ! ಕಿಟ್ಟು ಇಂಥ ಮನೆಯಲ್ಲಿ ಹೇಗಿರುತ್ತಾನೆ? ನೀವಾದರೂ ಇಂದು ಹೋಗುವವರು."

"ಅದೇ ನಾನು ನಿಮ್ಮೊಡನೆ ಕೇಳಬೇಕೆಂದಿದ್ದೆ, ನಿಮ ಮನೆಯ ಒಂದು ಔಟ್ ಹೌಸ್ ಖಾಲಿಯಿದೆಯಂತೆ ಅಲ್ಲವೆ?"

"ಹೌದು ಹೌದು" ಎಂದು ಆಕೆ ಉತ್ಸಾಹದಲ್ಲಿ ಹೇಳಿದಳು. "ನಮ್ಮ ಸಹಪಾಠಿಗಳಿಗೆ ನಾವು ಅಷ್ಟಾದರೂ ಉಪಕಾರಮಾಡದಿದ್ದರೆ ಹೇಗೆ? ಈಗಲೇ ಇದನ್ನು ಮುಗಿಸಿ ಹೋಗೋಣ. ಅವನೂ ಬರಲಿ."

ಇದು ಒಳ್ಳೆಯ ವ್ಯವಸ್ಥೆ ಹೌದೋ ಅಲ್ಲವೋ ಎಂದು ನನಗೆ ಖಚಿತವಾಗಿ ಹೇಳಲಿಕ್ಕಾಗದಿದ್ದರೂ ಇದರಿಂದಾಗಿ ಕಿಟ್ಟುವಿನ ಸ್ಮೃತಿಭ್ರಮೆ ಮಾಯವಾಗಬಹುದೆಂದು ನಾನು ಬಗೆದೆ. ಎಷ್ಟೆಂದರೂ ಪದ್ಮಿನಿಗೆ ಕಿಟ್ಟುವಿನ ಮೇಲೆ ಅಭಿಮಾನವಿರಲಿಲ್ಲ; ಅದರ ಬದಲು ತಿರಸ್ಕಾರ ಭಾವನೆಯೇ ಹೆಚ್ಚಾಗಿತ್ತು. ಇಂಥ ಮನಸ್ಥಿತಿಯಲ್ಲಿ ಅವಳು ಅವನನ್ನು ತನ್ನ ಬಲೆಗೆ ಹಾಕಿಕೊಳ್ಳಲು ಬಯಸಿಯಾಳೆಂದು ಹೇಳಲು ನನಗೆ ಆಧಾರವಿರಲಿಲ್ಲ. ಆದರೆ ಈ ವ್ಯವಸ್ಥೆ ಅವನು ಅಂಬುಜಮ್ಮಾಳ್‌ಳ ಭಾಡೇದಾರನಾಗಿ ಇನ್ನೂ ಉಳಿಯುವುದಕ್ಕಿಂತ ಸಾವಿರ ಪಾಲು ವಾಸಿ ಎಂದು ಎಣಿಕೆಹಾಕಿದೆ.

ಕಿಟ್ಟುವನ್ನು ಕಾಫಿ ಮುಗಿದ ಬಳಿಕ ನಾನೇ ಹೋಗಿ ಸಮಾಧಾನಪಡಿಸಿ ಮೇಲೆ ಕರೆದು ತರಬೇಕಾಯಿತು.

"ಏ ಫಸ್ಟ್ ಕ್ಲಾಸ್! ನಿಮ್ಮ ಜಂಭ ಸಾಕು. ಇನ್ನು ಇಲ್ಲಿದ್ದು ಪ್ರಾಣ ಕಳೆದುಕೊಳ್ಳಬೇಡಿ. ನಮ್ಮದು ಔಟ್ ಹೌಸಾದರೂ ಇದಕ್ಕಿಂತ ಎಷ್ಟೋ ಅನುಕೂಲವಾಗಿದೆ. ನಾನದನ್ನು ಅಪ್ಪನೊಡನೆ ಹೇಳಿಕೊಡಿಸುತ್ತೇನೆ."

ಕಿಟ್ಟು ಈ ಬಾರಿ ಹಲ್ಲು ಕಿರಿದು ತಲೆಯಲ್ಲಾಡಿಸುವಷ್ಟು ಧೈರ್ಯ ಮಾಡಿದ. ಪದ್ಮಿನಿ ಪದ್ಮಿನಿ ಎಂದು ಹಗಲಿರುಳೂ ಕನವರಿಸುತ್ತ ತನ್ನ ಹೆಂಡತಿಗೂ ಪೀಡೆ ಕೊಟ್ಟ ಈ ಮಹಾಶಯ ಈಗ ಸಾಕ್ಷಾತ್ ಪದ್ಮಿನಿಯೇ ಬಂದಿರುವಾಗ ಅವನು ಸಂಪೂರ್ಣ ಮೂಕವಾದುದು, ಮಾತು ಮತ್ತು ಕೃತಿಗಳ, ಕಲ್ಪನೆ ಮತ್ತು ವಾಸ್ತವಿಕತೆಯ ಮಧ್ಯೆ ಇದ್ದ ಅಂತರದ ಪರಮಾವಧಿಯನ್ನು ವ್ಯಕ್ತಪಡಿಸುತ್ತಿತ್ತು. ಅವನಪ್ಪ ಸತ್ತರೆ ಕೂಡಾ ಅವನು ಇಷ್ಟೊಂದು ಚಿಂತಾಕ್ರಾಂತನಾಗುತಿದ್ದನೋ ಎಂದು ಹೇಳಲಾಗದಿತ್ತು.

ಸುದೈವದಿಂದ ಪದ್ಮಿನಿಗೆ ಅವನ ಇಂಗಿತ ತಿಳಿಯದಿದ್ದುದು ಈ ಸಂದರ್ಭದಲ್ಲಿ ಅನುಕೂಲವೇ ಆಗಿತ್ತು. ಇಲ್ಲವಾದರೆ ಪರಿಸ್ಥಿತಿ ವಿಪರೀತಕ್ಕಿಟ್ಟುಕೊಳ್ಳಬಹುದಿತ್ತು. ಆದರೂ ಅವಳ ಮನೆಯಲ್ಲಿ ಸುರಕ್ಷಿತನಾಗಿರಬಹುದೆಂಬ ಊಹೆ ಮಾತ್ರ ಇದರಿಂದಾಗಿ ಇನ್ನೂ ದೃಢವಾಯಿತು.

"ಹೋಗಿ ಅಂಗಿ ಹಾಕಿಕೊಂಡು ತಯಾರಾಗಿ. ಮತ್ತೆ ಅಪ್ಪ ಎಲ್ಲಾದರೂ ಕಚೇರಿಗೆ ಹೋದಾರು" ಎಂದಳು ಪದ್ಮಿನಿ ಕಿಟ್ಟುವಿಗೆ.

ಅವನು ಕೆಳಗೆ ಹೋದ.

"ಆ ಬಾಗಿಲು ಮುಚ್ಚು"

ಎಂದು ನನ್ನನ್ನು ಅಜ್ಞಾಪಿಸಿದಳು. ನಾನು ಹುಸು ಅಚ್ಚರಿಯಿಂದ ಕದ ಹಾಕಿದೆ.

"ನನ್ನ ಕೈಯನ್ನು ಪೂರ್ಣ ನೋಡಿ ಹೇಳುತ್ತೇನೆ ಎಂದು ಮಾತು ಕೊಟ್ಟಿದ್ದಿರಲ್ಲ ನೀವು?" ಎಂದು ಅಂಗೈ ಚಾಚಿದಳು.

"ಕೈ ನೋಡುವುದರಲ್ಲಿ ಪೂರ್ಣ, ಅಪೂರ್ಣವೆಂದಿಲ್ಲ. ನಿಜವಾಗಿ ಹೇಳಬೇಕಾದರೆ ಅದರಲ್ಲಿ ಕಾಣುವುದಕ್ಕಿಂತಲೂ ಇಂಗಿತವನ್ನರಿತು ಯೋಚಿಸುವುದು ಮುಖ್ಯ. ಅದಿರಲಿ, ನಾನು ಆ ದಿನ ನಿಮ್ಮ ಕೈ ನೋಡುವ ಮನಸ್ಸಿಲ್ಲದೆ ಹಾಗೆ ಹೇಳಿದೆ. ಆದರೂ ಕೂಡಾ ನನಗೆ ತಿಳಿದುದನ್ನೆಲ್ಲ ನನಗೆ ಹೊಳೆದುದನ್ನೆಲ್ಲ ಹೆಚ್ಚು ಕಡಿಮೆ ಅಂದೇ ಹೇಳಿದ್ದೇನೆಂದು ನೆನಪು. ನಿಮಗಾದರೂ ಅದಕ್ಕಿಂತ ಹೆಚ್ಚು ಏನು ತಿಳಿಯಬೇಕಾಗಿದೆ?"

"ನಾನೂ ನಿಮ್ಮೊಡನೆ ಒಂದು ನಿಜ ಸಂಗತಿ ಹೇಳಬೇಕಾಗಿದೆ. ಜಗದೀಶನನ್ನು ಅಂದು ನೀವು ನೋಡಿದಿರಲ್ಲ? ಅವನನ್ನೇ ಮದುವೆಯಾಗಬೇಕೆಂದು ನನ್ನಪ್ಪ ಚಡಪಡಿಸುತಿದ್ದಾರೆ. ಈ ಬಗ್ಗೆ ನಿಮಗೆ ಏನನ್ನು ಹೇಳಲು ಸಾಧ್ಯವಿದೆ?"

ನನಗೆ ತಿಳಿದಂಥ ರೇಖೆಗಳನ್ನೂ ಚಿಹ್ನೆಗಳನ್ನೂ ಅವಳ ಅಂಗೈಗಳಲ್ಲಿ ಪರೀಕ್ಷಿಸಿದೆ. ಸೂಕ್ಷ್ಮವಾಗಿ ಕೆಲವು ತಾಳಮೇಳಗಳನ್ನು ಜೋಡಿಸಿ ತಲೆದೂಗಿಸಿದೆ.

"ಏನು ಆಗುವುದೆಂದು ನಿಮ್ಮ ಅಭಿಪ್ರಾಯ?"

ಒಡನೆಯೇ "ಹೌದು" ಎಂದು ಉದ್ಗರಿಸಿದೆ. ಏಕೆಂದರೆ ಅವಳ ಪ್ರಶ್ನೆಯಲ್ಲೇ ಉತ್ತರ ಅಡಕವಾಗಿತ್ತೆಂಬುದು ನನಗೆ ಖಚಿತವಾಗಿತ್ತು.

ನಾವು ಮೂವರೂ ಮತ್ತೆ ಅವಳ ಮನೆಗೆ ಹೋದೆವು. ಕಿಟ್ಟು ಮನೆಯನ್ನು ನೋಡಿ ತನ್ನ ಮೆಚ್ಚಿಗೆ ವ್ಯಕ್ತಪಡಿಸಿದ. ಬಾಡಿಗೆಯ ಪ್ರಶ್ನೆ ಬಂತು. ನಾನು ಆ ವಿಷಯದಲ್ಲಿ ಸ್ವಲ್ಪ ಮಧ್ಯಸ್ತಿಕೆ ಮಾಡಿದೆ. ಕೊನೆಗೆ ನಲ್ವತ್ತು ರೂಪಾಯಿಗೆ ಕೊಡಲು ಅವಳ ತಂದೆ ಒಪ್ಪಿದರು. ಬೇರೆಯವರಿಗೆ ಎಂಭತ್ತು ರೂಪಾಯಿಗಳಿಗೂ ಅದನ್ನು ಕೊಡಲು ನಿರಾಕರಿಸಿದ್ದರಂತೆ.

ನನ್ನ ತಲೆಯ ಮೇಲಿನಿಂದ ದೊಡ್ಡ ಭಾರ ಇಳಿದಂತಾಗಿತ್ತು. ಪುನಃ ಕಿಟ್ಟನಲ್ಲಿಗೆ ಹಿಂದಿರುಗುವಾಗ, ನನ್ನನ್ನು ಇನ್ನೊಂದು ವಾರ ಇದ್ದು ಹೋಗಬೇಕೆಂದು ಒತ್ತಾಯಪಡಿಸಿದರೂ ನಾನು ಕೇಳಲಿಲ್ಲ.

ಮತ್ತೆ ನಾನು ನನ್ನ ಪೆಟ್ಟಿಗೆ ಹಾಸಿಗೆಗಳನ್ನು ಕಟ್ಟಿ ಸಿದ್ಧಪಡಿಸಿಟ್ಟು ಕಿಟ್ಟನೊಡನೆ ಚೈನಾ ಬಜಾರಿಗೆ ಹೋದೆ. ಅಲ್ಲಿ ಸ್ವಲ್ಪ ಖರೀದಿ ಮುಗಿಸಿ, ಕಾಫಿ ಕುಡಿದು ಬೇಗನೆ ಹಿಂದಿರುಗಿದೆವು. ಕಿಟ್ಟು ರಿಕ್ಷಾ ಕರೆದುತಂದ. ಮಾಧವಿಯ ಕೋಣೆಗೆ ಕೀಲಿ ಹಾಕಿತ್ತು. ನಾವು ರಿಕ್ಷಾದಲ್ಲಿ ಕುಳಿತುಕೊಳ್ಳುವಾಗ ಅಂಬುಜಮ್ಮಾಳ್ ಒಳಗಿನಿಂದಲೇ ನೋಡುತಿದ್ದಳು.

ನನ್ನೊಡನೆ ಇನ್ನೂ ಹದಿನೈದು ರೂಪಾಯಿಗಳು ಹೆಚ್ಚಿಗೆ ಉಳಿದಿದ್ದುವು. ಒಂದು ಹೊಸ ನಿಘಂಟನ್ನು ರೈಲ್ವೇ ಸ್ಟೇಶನಿನಲ್ಲಿ ಖರೀದಿ ಮಾಡಿ ಅದನ್ನು ಕಿಟ್ಟುವಿಗೆ ಉಡುಗೊರೆಯಾಗಿತ್ತೆ. ಅವನು ಅದನ್ನು ಸ್ವೀಕರಿಸಲು ನಾನು ಬಹಳ ಒತ್ತಾಯ ಮಾಡಬೇಕಾಯಿತು.

ರೈಲು ಬಂಡಿಯಲ್ಲಿ ನಾನು ಕುಳಿತೆ.

"ಏ ನಿನ್ನ ದೋಸ್ತಿ ಬರುತಿದ್ದಾಳೆ!" ಎಂದ ಕಿಟ್ಟು.

ನಾನು ತಲೆಯನ್ನು ಹೊರಗೆ ಹಾಕಿ ಇಣಿಕಿದೆ.

ಪದ್ಮಿನಿ ಓಡ್ಯೋಡಿ ಬರುತಿದ್ದಳು. ನಾನೂ ಆಗ ಕೆಳಗಿಳಿದು ಅವಳ ಬಳಿಗೆ ಹೋದೆ.

"ಇಷ್ಟು ಬೇಗನೆ ಹೊರಡುವಿರೆಂದು ನಾನೆಣಿಸಿರಲಿಲ್ಲ. ನಾನು ಮನೆಗೆ ಹೋದಾಗ ಆ ಹೆಂಗಸು ನನ್ನೊಡನೆ ಮಾತಾಡಲೇ ಇಲ್ಲ. ಕೊನೆಗೆ ನೀವಿಬ್ಬರೂ ರಿಕ್ಷಾದಲ್ಲಿ ಸಾಯಲಿಕ್ಕೆ ಹೋದಿರೆಂದಳು ಸಿಡುಕಿನಲ್ಲಿ" ಎಂದಳು

"ಅಷ್ಟಾದರೂ ಹೇಳಿದಳಲ್ಲ! ಅವಳಿಗೆ ಧನ್ಯವಾದ ಹೇಳು, ಕಿಟ್ಟು, ನಾಳೆ ಹೊರಡುವಾಗ" ಎಂದು ನಾ ನಕ್ಕೆ.

"ನಿಮ್ಮ ಪರೀಕ್ಷೆ ನಂಬರ್ ಎಷ್ಟು" ಎಂದು ವ್ಯಾನಿಟಿ ಬ್ಯಾಗಿನಿಂದ ನೋಟ್ ಪುಸ್ತಕ ತೆಗೆದಳು.

ಇವಳಿಗೆ ಇಷ್ಟಾದರೂ ನನ್ನ ಮೇಲೆ ಆಸಕ್ತಿಯಿದೆಯಲ್ಲ! ನಾನಿವಳು ನೂರಕ್ಕೆ ನೂರು ಸ್ವಾರ್ಥಿ ಎಂದು ಭಾವಿಸಿದ್ದು ತಪ್ಪು ಎಂದು ಆಗ ತೋರಿತು.

ಸಂಖ್ಯೆಯನ್ನು ಬರೆದು ಕೊಟ್ಟು ಹೇಳಿದೆ: "ಸಾಧ್ಯವಾದರೆ ಇನ್ನು ಮೂರು ತಿಂಗಳಲ್ಲಿ ಇಲ್ಲಿಗೆ ಬಾರದಿಲ್ಲ. ಮತ್ತೆ ಒಂದು ವರ್ಷ ನಿಮ್ಮ ಸಾಂಬಾರ್-ರಸಂ ನಗರದಲ್ಲಿ ಕಳೆಯಬೇಕಾಗುವುದು. ಹಾಗೆ ಬಂದವ ಕಿಟ್ಟು ನಿಮ್ಮ ಮನೆಯಲ್ಲೇ ವರ್ಗವಾಗದೆ ಉಳಿದರೆ ಅವನೊಡನೇ ಇರುತ್ತೇನೆ."

"ಬಹಳ ಸಂತೋಷ. ಅಗತ್ಯ ಬನ್ನಿ. ಗುಡ್ ಲಕ್" ಎಂದು ಪದ್ಮಿನಿ ನನ್ನ ಕೈ ಹಿಡಿದು ಕುಲುಕಿ ಘೊಳ್ಳನೆ ನಕ್ಕಳು.

ಪದ್ಮಿನಿಯ ಇಂಥ ಬಿಚ್ಚು ಮನಸ್ಸಿನ ವರ್ತನೆ ನನಗೆ ಸೋಜಿಗವಾಗಿಯೇ ತೋರುತ್ತಿತ್ತು. ಅವಳ ಒಟ್ಟುಗೂಡಿದ ಹುಬ್ಬಿನ ಸಾಮುದ್ರಿಕ ಲಕ್ಷಣ ಅದಕ್ಕೆ ವ್ಯತಿರಿಕ್ತವಾಗಿತ್ತು

ನಾವು ಹೀಗೆಯೇ ನಗೆಯಾಡುತಿದ್ದಾಗ ಮಾಧವಿ ಒಂದು ಕಾಗದದ ಕಟ್ಟನ್ನು ಎತ್ತಿಕೊಂಡು ಬಂದು ನನ್ನ ಕೈಗಿತ್ತಳು.

"ಏನು ಪಳಯಂಗಡಿ ಸ್ಟೇಶನ್ ಮಾಸ್ಟರರಿಗೆ ಕೊಡಲಿಕ್ಕಾಗಿಯೆ?" ಎಂದು ನಾನು ಕೊಂಕು ಮಾತಾಡಿದೆ.

ಮಾಧವಿ ನಕ್ಕಳು: "ಅದರಲ್ಲಿ ಬರೆದ ವಿಳಾಸ ನೋಡಿ ಬಟವಾಡೆ ಮಾಡಿದರೆ ಸಾಕು" ಎಂದು ಅವಳು ನುಡಿದಾಗ ಗಂಭೀರಳಾಗಿದ್ದ ಪದ್ಮಿನಿಗೂ ತಡೆಯಲಾರದಷ್ಟು ನಗು ಬಂತು.

ಕಿಟ್ಟನ ಕಣ್ಣಿನಲ್ಲಿ ಮಾತ್ರ ಏನೋ ಶಂಕೆ ಮೂಡಿತ್ತು. ನನಗೆ ಮಾಧವಿಯೊಡನೆ ಅಷ್ಟೊಂದು ಪರಿಚಯವಾಗಿತ್ತೆಂಬುದು ಅವನಿಗೆ ತಿಳಿದಿರಲಿಲ್ಲ. ನಾನಂತೂ ಲೋಕದಲ್ಲಿದ್ದವರೆಲ್ಲರ ಸಂಶಯ ನಿವಾರಣೆ ಮಾಡುವ ಅತಿಮಾನುಷ ಪಾತ್ರಹಿಸಲು ಸಿದ್ಧನಿರಲಿಲ್ಲ.

"ನಿಮ್ಮ ವಿಳಾಸ?" ಎಂದಳು ಮಾಧವಿ.

ಅವಳಿಗೆ ಬರೆದು ಕೊಡುವುದನ್ನು ಕಂಡು ಪದ್ಮಿನಿಯೂ ವಿಳಾಸ ಕೊಡಬೇಕೆಂದಳು. ಇಬ್ಬರಿಗೂ ಕೊಟ್ಟೆ.

ಕುಶಲ ಪ್ರಶ್ನೆಗಳಿಗೇನೂ ಕಡಿಮೆಯಿರಲಿಲ್ಲ. ರೈಲು ಹೊರಡಲು ಇನ್ನೂ ಅರ್ಧತಾಸಿತ್ತು. (ಮಾಧವಿ ಎಂದಿದ್ದಳು. "ಏನಾದರೂ ಫಾಯರ್ ಮೆನ್ ನೌಕರಿಗೆ ಸೇರಿದ್ದಿರೋ ಎಂದು ಭಾವಿಸಿದೆ. ನೀವು ನಾಲ್ಕು ಗಂಟೆಗೇ ಮನೆ ಬಿಟ್ಟದ್ದೀರೆಂದು ತಿಳಿದು!")

ಒಂದನೇ ಗಂಟೆ ಹೊಡೆದರು.

ಕ್ರಶ್ ಪಾನೀಯದ ಕೈಗಾಡಿಯನ್ನು ನಿಲ್ಲಿಸಿ ಎಲ್ಲರಿಗೂ ಒಂದೊಂದು ಸ್ಪೆನ್ಸರ್ ಕ್ರಶ್ ಕೊಡಲು ಹೇಳಿದೆ. ("ಹಣವಿದೆಯಲ್ಲ? ಎಲ್ಲಾದರೂ ಮರೆತು ಬಿಟ್ಟಿಲ್ಲ ತಾನೇ?" ಎಂದು ಪದ್ಮಿನಿ ವ್ಯಂಗ್ಯವಾಗಿ ನಕ್ಕಳು) ಮತ್ತೊಬ್ಬನಿಂದ ಕೇಕ್ ಖರೀದಿ ಮಾಡಿ ಅವರಿಗೆ ಕೊಟ್ಟೆ

ಅವರದನ್ನು ತಿನ್ನುತ್ತಿರುವಾಗ ಎರಡನೆಯ ಗಂಟೆ ಬಡಿಯಿತು. ಗಾರ್ಡನ ಸೀಟಿ ಕೇಳಿಸಿತು. ಎಂಜಿನ್ 'ಕೂ' ಎಂದು ಶಿಳ್ಳು ಹಾಕಿತು

"ಒಳಗೆ ಕುಳಿತುಕೊಳ್ಳಿ ಇಲ್ಲದಿದ್ದರೆ ಲೆಫ್ಟ್ ಲಗ್ಗೇಜ್ ಆಗಿ ಬಿಟ್ಟೀರಿ ಜೋಕೆ?" ಎಂದು ಮಾಧವಿ ನನಗೆ ಪರಿಹಾಸ್ಯ ಮಾಡಿದಳು.

"ಪರವಾಯಿಲ್ಲ. ನೀವು ನನ್ನನ್ನು ಹಾಗೇ ಲೆಫ್ಟ್ ಲಗೇಜಾಗಿಯೇ ಉಳಿಯಲು ಬಿಡಲಿಕ್ಕಿಲ್ಲವಲ್ಲ!" ಎಂದು ನಗುತ ಗಾಡಿಯೊಳಗೆ ಹೋಗಿ ಕುಳಿತೆ

ಕಿಟ್ಟನನ್ನು ಯಾರೋ ಕರೆದಂತಾಯಿತು

"ಹೋ! ನನ್ನ ಮಾವ ಬಂದರು!" ಎಂದು ಕಿಟ್ಟು ಉದ್ಗರಿಸುವಷ್ಟರಲ್ಲೇ ಅವರು ಅವನ ಬಳಿಗೆ ಬಂದರು.

"ನಿನಗೆ ನಮ್ಮಲ್ಲಿಗೆ ವರ್ಗವಾಗಿದೆ, ಈಗ ತಾನೇ ಆರ್ಡರ್ ಮಾಡಿಸಿದೆ" ಎಂದರವರು

"ಹೌದೆ?" ಎಂದ ಕಿಟ್ಟು ಪದ್ಮಿನಿಯತ್ತ ಕಣ್ಣು ಹಾಯಿಸಿ ಮತ್ತೆ ಸ್ವಲ್ಪ ತಡವರಿಸುತ್ತ ನನ್ನನ್ನು ಅವರಿಗೆ ಪರಿಚಯ ಮಾಡಿಸಿದ

ನಾನವರಿಗೆ ನಮಸ್ಕರಿಸುತ್ತಿರುವಾಗ ಮೂರನೆ ಗಂಟೆ ಬಡಿಯಿತು. ಗಾರ್ಡ್ ಶಿಳ್ಳು ಹೊಡೆದ. ಎಂಜಿನ್ ಕೂ ಎಂದಿತು. ಗಾಡಿ ಒಂದಿಷ್ಟು ಹಿಂದೆ ಸರಿದು ಝುಗ್ ಝುಗ್ ಎಂದು ಮುಂದೆ ಸರಿಯತೊಡಗಿತು

ನಾನು ಪದ್ಮಿನಿಗೂ ಕಿಟ್ಟನಿಗೂ ನಮಸ್ಕರಿಸಿದೆ. ಮಾಧವಿಯೇನೋ ಬೆರಳನ್ನು ತುಟಿಗೆ ಮುಟ್ಟಿಸಿ ನಕ್ಕಳು. ಅವಳ ನಗುವಿನೊಡನೆ ಅಡಕ


ವಾಗಿದ್ದ ವೇದನೆ ನನಗೆ ಮಾತ್ರ ಅರ್ಥವಾಗಬೇಕಿತ್ತಷ್ಟೆ. ಪದ್ಮಿನಿಯನ್ನು ಪುನಃ ನೋಡುವಾಗ ಅವಳ ಕಣ್ಣೊರಸಿಕೊಳ್ಳುತ್ತಿರುವುದು ತೋರಿತು. ಏನೋ ಕಲ್ಲಿದ್ದಲ ಧೂಳ ಅವಳ ಕಣ್ಣಿನೊಳಗೆ ಬಿತ್ತೋ ಎಂದು ನಾನು ಭಾವಿಸಿದರೂ ಅದನ್ನು ಖಚಿತ ಮಾಡಿಕೊಳ್ಳುವುದು ಸಾಧ್ಯವಿರಲಿಲ್ಲ.

ಝುಕ್ ಝುಕ್ ಝುಕ್ ಎನ್ನುತ್ತ ಗಾಡಿ ಪಟ್ಟೆಯಿಂದ ಪಟ್ಟೆಗೆ ಬದಲುತ್ತ ಮುಂದರಿಯುತ್ತಿತ್ತು. ಮದ್ರಾಸಿನ ದೀಪಗಳು ದೂರ ದೂರ ವಾಗುತ್ತ ಬಂದವು. ಅವುಗಳನ್ನು ನಾನು ಕಂಡುದು ಮೊದಲ ಬಾರಿ ಯಾಗಿರಲಿಲ್ಲ. ಆದರೆ ಈ ಬಾರಿ ನನ್ನ ಒಂದು ಅಂಶವನ್ನು ಅಲ್ಲಿ ಬಿಟ್ಟು ಹೋಗುತಿದ್ದೇನೆಂಬ ಅವರ್ಣನೀಯ ಅನುಭವವಾಗುತಿತ್ತು. ಕಣ್ಣುಗಳು, ಮುಖಗಳು ಎಲ್ಲ ನನ್ನ ಪರೀಕ್ಷೆಯ ಪರಿಣಾಮದ ಕುತೂಹಲವನ್ನು ಎಲ್ಲೋ ಮೂಲೆಪಾಲು ಮಾಡಿದ್ದುವು. ನಿಜವಾಗಿ ನೋಡಿದರೆ ನಾನೆ-ಲ್ಲಿಂದ ಹೊರಟೆನೆಂಬ ಪರಿವೆ ಮಾತ್ರ ನನ್ನನ್ನು ಮುಳ್ಳಿನಂತೆ ಚುಚ್ಚುತ್ತಿತ್ತಲ್ಲದೆ ನಾನೆಲ್ಲಿಗೆ ಹೋಗುತಿದ್ದೇನೆಂಬುದರ ಗೊಡವೆಯೇ ಇದ್ದಿಲ್ಲ.

ಅರಕೋಣಂ ದಾಟುವುದರೊಳಗೇ ನಾನು ಹಾಸಿಗೆ ಹಾಸಿ ಮೇಲಿನ ಹಲಗೆಗೆ ಹತ್ತಿದೆ. ಆದರೆ ಅಲ್ಲಿ ಕೈಕಾಲುಗಳನ್ನು ಚಾಚಿ ಮಲಗಿದ್ದರೂ ಸುಮಾರು ಹೊತ್ತು ನಿದ್ದೆ ಹತ್ತಲಿಲ್ಲ. ರೈಲು ಬಂಡಿಯ ಚಕ್ರಗಳ ಝುಕ್ ಝುಝುಕ್ ಝುಕ್ ಝುಝುಕ್ ಸದ್ದು ಜೇರೆ ಜೇರೆ ಶಬ್ದಗಳ ಪ್ರಾಸವನ್ನು ಕೂಡಿಸುವ ಭ್ರಮೆಯನ್ನುಂಟುಮಾಡುತ್ತಿತ್ತು.

"ಪದ್ಮಿನಿ ಶಶಿಕಲ ಪದ್ಮಿನಿ ಶಶಿಕಲ" ಎಂದು ಒಮ್ಮೆ ನನಗೆ ಭಾಸ ವಾಗುತಿದ್ದರೆ "ಮಾಧವಿ-ಪದ್ಮಿನಿ ಮಾಧವಿ-ಪದ್ಮಿನಿ" ಎಂದು ಚಕ್ರಗಳು ಉಲಿಯುತಿದ್ದಂತೆ ಇನ್ನೊಮ್ಮೆ ಹೊಳೆಯುತಿತ್ತು.

ಶಬ್ದಗಳು ಕೇಳುತ್ತಿದ್ದವು. ರೂಪಗಳು ತೋರುತಿದ್ದುವು. ಸ್ಮರಣೆಯ ರಂಗಸ್ಥಳಗಳಲ್ಲಿ ಅವುಗಳು ನಲಿಯುತಿದ್ದುವು, ನಗೆಯಾಡುತ್ತಿದ್ದವು, ಉಲಿಯುತಿದ್ದವು. ಅವುಗಳ ಮಧ್ಯೆ ರೈಲಿನ ಶಬ್ದದ ಪ್ರಜ್ಞೆ ಮೆಲ್ಲ ಮೆಲ್ಲನೆ ಜಾರುತ್ತಿತ್ತು. ದೇಹ ಅಲುಗಾಡುವ ಗೊಡವೆ ನನಗಾಗ ಇರಲಿಲ್ಲ. ಅದರ ಬದಲು ಮನಸ್ಸು ಅಲುಗಾಡುತ್ತಿದೆ ಎಂಬ ಕಲ್ಪನೆಯ ವೇದನೆಯೊಡನೆಯೇ ನಿದ್ದೆ ಜೋಂಪು ನನ್ನ ಕಣ್ಣುಗಳನ್ನು ಆವರಿಸಿತು.



"ಸ್ವಾಮಿ, ಡಾಕ್ಟ್ರೆ ನಾನೆಲ್ಲೊ ಇಲ್ಲಿ ನೆಗಡಿಗೆ ಒಳ್ಳೇ ಔಷಧಿ ಸಿಗುತ್ತೆ ತಗೊಳ್ಳೋಣಾಂತ ಬಂದಿದ್ದೆ..."

ಮುದ್ದೆ ಮುಗ್ಗಿದ ಮೊರಂಬು

ಟರ್ಕಿಶ್ ಟವಲಿನಿಂದ ಒದ್ದೆಯಾದ ಕಪ್ಪು ರೇಷ್ಮೆಯಂತಿರುವ ತಲೆಗೂದಲನ್ನು ಮೆದುವಾಗಿ ತಿಕ್ಕುತ್ತ, ಶೋಭಾ ಅಟ್ಟದ ಮೇಲಿನ ತನ್ನ ಕೋಣೆಗೆ ಬಂದಾಗ. ಸ್ಯಾಂಡಲ್ ಸೋಪಿನ ಜತೆ, ಶಾಂಪುವಿನ ಮಧುರವಾದ ಪರಿಮಳ ಇನ್ನೂ ಹರಿದು ಬರುತ್ತಲಿತ್ತು. ನೀಳವಾದ ಕೇಶರಾಶಿಯನ್ನು ಆರಲು, ಹಾಗೇ ಬೆನ್ನಮೇಲೆ ಇಳಿಯುಬಿಟ್ಟು—'ಸಂಕ್ಷಿಪ್ತ ಮೇಕ್ ಅಪ್' ಮುಗಿಸಿ ಏಳುತ್ತಿದ್ದಂತೆ, ಕೆಳಗಿನಿಂದ ಕೂಗು ಕೇಳಬಂತು. 'ಬಂದೆ' ಎಂದವಸರದಿಂದ ತಲೆಯಮೇಲೆ ಸೆರಗು ಹೊದ್ದುಕೊಂಡು, ಕುಣಿಯುವ ಗತಿಯಲ್ಲಿ ಮೆಟ್ಟಿಲ ಮೇಲೆ ಕಾಲಿಟ್ಟು ಕೆಳಗೆ ನೋಡಿದರೆ ತಂದೆಯ ಜತೆ ಇನ್ನಾರದೋ ಅಪರಿಚಿತ ಮುಖ! ಕೆಳಗಿಳಿಯುತ್ತಿದ್ದ ಎಡಗಾಲು ಹಾಗೆ ತಡೆದು, ಹಿಂದಿರುಗಿ ಅದೇ ಗತಿಯಲ್ಲಿ ತನ್ನ ಕೋಣೆ ಸೇರಿದ್ದಳು ಅಸ್ತವ್ಯಸ್ತವಾದ ತನ್ನ ವೇಷವನ್ನು ಅಪರಿಚಿತರೆದುರು ತೋರಿಸಲು ನಾಚಿಕೆಯಾಗಿ!

"ಕರೆದದ್ದು ನಿನ್ನನ್ನಲ್ಲ, ನನ್ನನ್ನು! ಅದೂ ನಿನ್ನ ಸಲುವಾಗಿಯೇ! ಸಂಜೆ ನಾಲ್ಕು ಗಂಟೆಗೆ ಇಚಲಕರಂಜಿಯವರು ನೋಡಲಿಕ್ಕೆ ಬರ್ತಾರಂತೆ. ಅದೇ ಹೇಳಿದರು."—ಅನಂತರ ಕೋಣೆಗೆ ಬಂದ ತಾಯಿ, ಮಗಳಿಗೆ ಪೂರ್ವತಯಾರಿ 'ನೋಟೀಸು' ಕೊಟ್ಟು, ಉನ್ಮುಕ್ತವಾಗಿ ಹಾರಾಡುತ್ತಿರುವ ಆಕೆಯ ತಲೆಗೂದಲನ್ನು ಬಂಧಿಸಿ, ರಿಬ್ಬನ್ ಬಿಗಿದು, "ಹಿಂದೆ ಮಾಡಿದಂತೆ ಏನಾದರೊಂದು ಹೆಸರಿಡಬೇಡ! ಎಷ್ಟಾದರೂ ಗಂಡಸು ಮಕ್ಕಳು..." ನಕ್ಕು ಎಚ್ಚರಿಕೆ ನೀಡಿ, ಹಿಂದಿರುಗಿ ನಡೆದಾಗ ಮಾತೃಹೃದಯಕ್ಕೆ ತೃಪ್ತಿಯಾಗಿರಬೇಕು—ತುಂಬಿ ಬೆಳೆದ ಮಗಳನ್ನು ಕಂಡು.

ಶೋಭಾಳಿಗೂ ನಗು ತಡೆಯಲಿಲ್ಲ ಹಿಂದಿನ ಪ್ರಸಂಗಗಳು ಸ್ಮರಣೆಗೆಬಂದು. ಈ ಮೊದಲು ಒಂದಿಬ್ಬರು 'ವರ'ಗಳು ಒಮ್ಮೆ, ಮರಿಯಾನೆಯಾಕಾರದ ವಕೀಲನೊಬ್ಬ, ಇನ್ನೊಮ್ಮೆ ನಂದೀಕೋಲಿನಂತೆ ನೀಟಾಗಿ ಬೆಳೆದ ಲೆಕ್ಚರರ್ ಇನ್ನೊಬ್ಬ, ಕನ್ಯಾರ್ಥಿಗಳಾಗಿ ಬಂದಿದ್ದರು. ಅವರನ್ನು ಕಂಡು ಗೇಲಿ ಮಾಡಿದ್ದಳು ಶೋಭಾ, ತಾಯಿ—ಅಣ್ಣನೆದುರು. "ದೇವರು ಕೊಟ್ಟಿದ್ದು, ಹಾಗೆಲ್ಲ ಗಂಡುಮಕ್ಕಳಿಗೆ ಹೆಸರಿಡಬಾರದು" ಎಂದು ಪಾರ್ವತಮ್ಮ ಮಗಳಿಗೆ ತಿಳಿ ಹೇಳಿದ್ದರೂ ನಗು ತಡೆದಿರಲಿಲ್ಲ ಆಕೆಗೆ. 'ವಧು' ಮೆಚ್ಚಿ ಹೋದ ವರಗಳಿಗೆ ಉಪಾಯವಾಗಿ ಮಗಳ ಮುಂದಿನ ಶಿಕ್ಷಣದ ನೆಪವೊಡ್ಡಿ ಆ ಸಂಬಂಧಗಳನ್ನಷ್ಟಕ್ಕೆ ನಿಲ್ಲಿಸಿದ್ದರು ಶಂಕರಪ್ಪ, ಮಗಳ ಮುಖವನ್ನರಿತು.

ರೂಪಸಿಯಾದ ಮಗಳನ್ನು ವರಗಳಿಗೆ ಕೊಡಲು ಸಾಧ್ಯವೆ? ಅದೂ ಸಾಕಷ್ಟು ಸಂಪತ್ತಿನಿಂದ ಮನೆ, ತುಂಬಿತುಳುಕುತ್ತಿರುವಾಗ, ಸುಂದರಿ ಸುಶಿಕ್ಷಿತೆಯಾದ ಸುಸಂಸ್ಕೃತ ಸಾಹುಕಾರರ ಏಕಮಾತ್ರ ಪುತ್ರಿಯ 'ಮದುವೆ' ಮಾತಿನರ್ಥ ಅಷ್ಟೇನು ಗಡುಚಾದುದಲ್ಲ; ಕೈಯಲ್ಲಿ ತಲೆ ಹೊತ್ತು ಕೂಡ್ರುವ ಸಮಸ್ಯೆಯೂ ಆಗಿರಲಿಲ್ಲ.

ಕೆಳಪಡಸಾಲೆಯಲ್ಲಿ ನಡೆದ ತಂದೆ—ತಾಯಿಗಳ ಚರ್ಚೆಯಿಂದ, ವಧುಪರೀಕ್ಷೆಗಾಗಿ ಬರಲಿರುವ ವರಮಹಾಶಯನ ಚರಿತ್ರೆ ಅಷ್ಟಿಷ್ಟು ಅಭ್ಯಾಸವಾದಂತಾಗಿತ್ತು, ಇನ್ನು ಮುಂದೆ ಪ್ರದರ್ಶನದ ಗೊಂಬೆಯಾಗಲಿರುವ ಶೋಭಾಳಿಗೆ. ವರ—ಇಚಲಕರಂಜಿ ಪ್ರಭು ವೀವ್ಹಿಂಗ್ ಮಿಲ್ಸ್ ಮಾಲಿಕರ ಮೂರನೆಯ ಮಗ, ಕಾಲೇಜ ಕಟ್ಟೆಯೇರಿ, ಇಳಿದು ಮಿಲ್ಸ್ ಮ್ಯಾನೆಜ್‌ಮೆಂಟನಲ್ಲಿದ್ದಾನೆ. ನಗರ ಹೊರವಲಯದಲ್ಲಿ ಬಂಗ್ಲೆ, ಅದರ ಬದಿಗೆ ಕಾಟೇಜು, ಅದರಲ್ಲಿ ಕಾರು, ಕಾರ್ ಸಾರಥಿಯಾಗಿ ವರನೇ ಬರುವವ... ಇತ್ಯಾದಿ ಇತ್ಯಾದಿ.

ದು. ನಿಂ. ಬೆಳಗಲಿ

ಕಪಾಟು ತೆರೆದು ಯಾವ ಸೀರೆ ಆರಿಸಬೇಕೋ ತಿಳಿಯದು. ಕೆಂಪು ಜಾರ್ಜೆಟ್ ಬಿಟ್ಟು, ಹೂವಿನ ಜರ್ಲಿನ್ ಹಾಗೇ ಸರಿಸಿ, ಮೊನ್ನೆ ಅಣ್ಣ. ಸಾಂಗಲಿ ಅಂಗಡಿಯಿಂದ ಕಳಿಸಿದ, ಹೊಸದಾಗಿ ಮಾರ್ಕೆಟ್ಟಿಗೆ ಬಂದ ತಿಳಿ ಗುಲಾಬಿ ಟ್ಯಾರಿನ್‌ದಲ್ಲಿ ಸರಿಬೆರೆತ ವಿಸ್ಕಾಸ್ ರೇಯಾನ್ ತೆಗೆದು. ಎದೆಗೆ ಹಿಡಿದು ಕನ್ನಡಿ ನೋಡಿದಾಗ, ಅದೇನೋ ಮಧುರವಾದ ಅನುಭವ. ಅದಕ್ಕೆ ಸರಿ ಹೊಂದುವ ಗೇಣುದ್ದ ಚೋಳಿ ಆರಿಸಿದ್ದಾಯಿತು. ತನಗೆ ಪ್ರಿಯವಾದ ಮಾದರಿಯಲ್ಲಿ ಕೇಶವನ್ನು ಬಂಧಿಸಿ, ಗುಲಾಬಿ ಮುಖಕಿಷ್ಟು ಲೆಕ್ಮೋಕಿಲೋಮಿನ್ ಸವರಿ, ಟೆಂಡರ್ ಪಿಂಕ್ ತುಟರಂಗನ್ನು ಸವಿದು. ಹಣೆಗೆ ಕುಂಕುಮವಿಟ್ಟು ಸೀರೆಯನ್ನು ತಿದ್ದಿ ತೀಡುವುದರಲ್ಲಿ ತಾಯಿ ಬಂದು, ಮಗಳ ಕೊರಳಲ್ಲಿ ಬಂಗಾರಸರ ಹಾಕಿ, ತಲೆಗೆ ಮಲ್ಲಿಗೆಮಾಲೆಯನ್ನು ಮುಡಿಸಿದ್ದಳು.

ಕೆಳಗೆ ಬಂದು ಬಣ್ಣದ ಮಣೆಯ ಮೇಲೆ ಎಲ್ಲರೆದುರು, ಸಾಂಪ್ರದಾಯದಂತೆ ಕುಳಿತಾಗ, ಒಂದರೆಕ್ಷಣ ಅದೆಂತಹುದೋ ನಡುಕ, ನಾಚಿಕೆ ಶೋಭಾಳಿಗೆ. ಎದೆಗಟ್ಟಿ ಮಾಡಿಕೊಂಡು, ಪತ್ರಿಕೆಯಲ್ಲಿ ಫೋಟೋ ಕಂಡಂತೆ ಎಡದಿಂದ ಬಲಕ್ಕೆ ಎದುರು ನೋಡಿದಾಗ ಕೈಯಲ್ಲಿ ಬೆತ್ತ ಹಿಡಿದು ಒಂದು ಸೋಫಾದ ಮೇಲೆ ಮಂಡಿಸಿದ, ಮಧ್ಯ ವಯಸ್ಸು ಮೀರಿದ ಸದೃಢ ಗೃಹಸ್ಥನಿಗೆ ಹತ್ತಿಕೊಂಡು ಕುಳಿತ ನಡು ವಯಸ್ಸು ಮುಟ್ಟುತ್ತಿರುವ ಸುಂದರ ಗೃಹಿಣಿ. ಇನ್ನೊಂದರಲ್ಲಿ ತಂದೆಯ ಜತೆ, ಅದಾರೋ ನೆಹರೂ ಶರ್ಟಿನ ಏಜನ್ಸಿ ಮಾಡನಂತಹ ಕಾಣಿ. ಅವರ ಹಿಂದೆ ನಡುಮನೆಯ ಬಾಗಿಲಿಗೆ ಹೊಂದಿ ತಾಯಿ. ಮತ್ತೊಂದು ಸೋಫಾದ ಮೇಲೆ ತನ್ನ ವಯಸ್ಸಿನ ತರುಣ. ಕುಂದುರೆಮುಖದಲ್ಲಿ ಅತಿಯಾದ





ಮೇಕಪ್. ಅಪಾಯಕಾರಕ ಬಣ್ಣದ ಸೀರೆಯಲ್ಲಿ ಸಿ.ರಾದ ಶರೀರ ಕ್ಲೋಜ ಕಾಲರ್ ಬ್ಲೌಜು. ವರಮಹಾಶಯನ ಸಹೋದರಿ ಇರಬೇಕು ಆಕೆಯ ಪಕ್ಕದಲ್ಲಿ ಚೂಪು ತುದಿಯ ಕಪ್ಪು ಬೂಟ್ಸು. ಕೆಂಪು ಹೂವಿನ ನೈಲಾನ್ ಸಾಕ್ಸು ಹಸಿರು ಟ್ವೀರಿನ್ ಪ್ಯಾಂಟು, ಅದೇ ಕೋಟು ಕಾಲರ್ ಮಧ್ಯ ಇಳಿಬಿದ್ದ ಕೆಂಪು ಟೈ, ಅಲಗುತ್ತಿರುವ ಗದ್ದ. ಅಗಲವಾದ ಬಾಯಿ, ನೀಳವಾದ ಮೂಗು, ಶ್ವೇತ ಮುಖಬಣ್ಣದಲ್ಲಿ ಕಪ್ಪು ಕಣ್ಣು- ಕಣ್ಣು! ಹಾಂ-ಅಹುದಲ್ಲ... ಅವೇ ಕಣ್ಣು! ನಿಸ್ಸಂದೇಹವಾಗಿ ಅವೇ! ತತ್ ಕ್ಷಣ ಶೋಭಾಳ ಚಿಗುರೆಗಂಗಳು ಕೆಳಗಿಳಿದು. ತುಟ ಕಚ್ಚಿ, ಎಡಗೈಯಲ್ಲಿನ ಬಳಿ ತೀಡಹತ್ತಿದಳು

ನೆಹರೂ ಶರ್ಟಿನ ಮಧ್ಯಸ್ಥ ಕೇಳಿದ ಪ್ರಶ್ನೆಗಳಿಗೆ ಮೊಟಕಾಗಿ ಉತ್ತರಿಸಿದ್ದಳು. ತಾಯಿ ಉಡಿಯಲ್ಲಿ ಫಲ ಹಾಕಿ, ಕುಂಕುಮ ಇಟ್ಟಬಳಿಕ ಮಣೆಯ ಮೇಲಿಂದ ಎದ್ದು ನಡೆದಾಗ ನಿರೀಕ್ಷಿಸುತ್ತಿದ್ದ ಆಕೆಯ ದೃಷ್ಟಿ ತನ್ನತ್ತ ಬೀಳದೆ, ಇನ್ನಷ್ಟು ತುಟಕಚ್ಚಿದ ಭರಕ್ಕೆ ನೋವು ಮಾಡಿಕೊಂಡಿದ್ದೇ ಫಲಿಸಿದ್ದು. ವರನಾಗಲು ಬಂದ ಮಹಾಶಯನಿಗೆ ಚಟುವಟಿಕೆಯಿಂದ ಎಲ್ಲರಿಗೆ ಚಹವನ್ನ ಕೊಡುತ್ತಿದ್ದಂತೆ. ಶೋಭಾಳ ಮುದುಡಿದ ಮುಖ ಬಿಚ್ಚಿರಲಿಲ್ಲ ಪಾರ್ವತಮ್ಮನಿಗೆ ಅದಾಗದು. ಮಗಳಿಗೆ ಕಣ್ಸನ್ನೆ ಮಾಡಿದರೂ ಯಾವ ಪರಿಣಾಮವಾಗಿರಲಿಲ್ಲ ಅವರೆಲ್ಲ ಹೊರಟು ನಿಂತಾಗ. ತಂದೆಯ ಮಾತಿನಂತೆ ಕೈಜೋಡಿಸಿ, ಎಲ್ಲರಿಗೂ ಅನ್ನಯಿಸುವಂತೆ ನಮಸ್ಕರಿಸಿದಳು ಆದರೆ. ಬಾಗಿರಲಿಲ್ಲ ಕೊನೆಗೂ ಆತನ ಬಯಕೆಗೆ ಯಶಸ್ಸು ಲಭಿಸಿದ್ದಿಲ್ಲ

× × ×

ಒಂದೆರಡು ಪಿರಿಯಡ್ ತಪ್ಪಿಸಿ. ಗೆಳತಿ ವಿಭಾವರಿ ಚೋಪದಾರಳ ಜತೆ ಹಿಚ್‌ಕಾಕನ ಬರ್ಡ್ಸ್' ಮ್ಯಾಟನಿಗಾಗಿ ನಿಲ್ದಾಣಕ್ಕೆ ಬಂದಾಗ ಅದೇ ರೈಲು ಬಂದು ಉಸಕರಿಸಿತ್ತು ಲೇಡಿಜ್ ಕಂಪಾರ್ಟಮೆಂಟನಲ್ಲಿ ಇನ್ನೂ ಐದಾರು ಜನ ವಿದ್ಯಾರ್ಥಿನಿಯರಿದ್ದರು. ಇನ್ನೇನು ರೈಲು ಬಿಡಬೇಕು, ಅದಕ್ಕೂ ಮುಂಚೆ ಅತ್ತಿತ್ತ ಓಡಾಡುತ್ತಿರುವ ಕಾಮರ್ಸ ಕಾಲೇಜ ವಿದ್ಯಾರ್ಥಿಗಳು ಗಾಡಿತಪ್ಪಿ ಹೋಗುವದೇನೋ ಎನ್ನುವ ಅವಸರದಲ್ಲಿ ಏರಿದವರಂತೆ, ವಿದ್ಯಾರ್ಥಿನಿಯರಿದ್ದ ಕಂಪಾರ್ಟಮೆಂಟ ಸೇರಿದ್ದರು. ವಿಶ್ರಾಮಬಾಗ ನಿಲ್ದಾಣದಲ್ಲಿಯ ವಿದ್ಯಾರ್ಥಿಗಳ ಅವಸರ ಎಲ್ಲ ವಿದ್ಯಾರ್ಥಿನಿಯರು ಅರಿತ ಮಾತೇ. ಬಾಗಿಲಿಗೆ ಹೊಂದಿನಿಂತ ಅಮೇರಿಕನ್ ಕೌಬಾಯ್ ವೇಷದಲ್ಲಿದ್ದ ಅವರು. ಪ್ಯಾಂಟಿನ ಜೇಬಿನಲ್ಲಿ ಕೈಬೆರಳು ಸೇರಿಸಿ, ಅದೇನೋ ಮಾತಿನಲ್ಲಿದ್ದರು. ಮುಖದ ಯಾವ ಅಂಗಾಂಗಗಳಿಗೂ ಪರಸ್ಪರ ಸಹಕಾರವಿಲ್ಲದಂತೆ ಬಾಯಿ ಏನನ್ನೋ ಮಾತಾಡುತ್ತಿದ್ದಂತೆ, ಕಿವಿ ಇನ್ನೇನೋ ಬಯಸಿ, ಕಣ್ಣು ಮತ್ತೇನನ್ನೋ ಕಾಣಲು ಇಚ್ಛಿಸುತ್ತಿದ್ದವು

ಬೆಂಚಿನತುದಿಗೆ ಕುಳಿತ ಶೋಭಾಳ ಸೀರೆಯ ಅಂಚು ಪಾದವನ್ನು ಮರೆಮಾಡಿ ಕೆಳಗೆ ಹರಿದಿತ್ತು. ಅಂಬೆಗಾಲಿಕ್ಕುವ ಮಗು ನೇಕ್ಕೆ ಹರಿದಾಡುವಂತೆ. ಒಬ್ಬರ ಬೂಟುಗಾಲಿನ ಹತ್ತಿರ ಅದರ ಅಂಚು ಹಬ್ಬಿದ್ದು ಅದೇನೋ ಕುಚೋದ್ಯ ಅವರಿಗೆ. ಅದನ್ನು ಶೋಭಾ ಗಮನಿಸಿದಂತಿರಲಿಲ್ಲ ಗೆಳತಿಯ ಜತೆ ಹರಟೆಯಲ್ಲಿ ಮಗ್ನಳಾಗಿದ್ದಳು ಸೀರೆಯ ಸೆರಗು ಜಗ್ಗಿದಂತಾಗಿ ಕೆಳಗೆ ನೋಡಿದರೆ. ಬೂಟಿನ ಮುದ್ರೆಯನ್ನು ರಾಡಿಬಣ್ಣದಲ್ಲಿ ನಿಚ್ಚಳವಾಗಿ ಅಚ್ಚೊತ್ತಿ ಕಾಲು ಸರಿದಿತ್ತು ಬೆರಳಿನಿಂದ ಅಂಚನ್ನು ಜಾಡಿಸುತ್ತ ಕೆಂಗಣ್ಣಿನಿಂದ ಅವನತ್ತ ನೋಡಿದರೆ ಹೂಲಾಹೂಪ್ ತಿರುಗಿಸುತ್ತಿದ್ದಂತೆ ನಡುಮಣಿಸಿ ಜೇರಿಲೇವಿಸ್‌ನ ನಗೆಯಲ್ಲಿ ಭಾಗಿಯಾಗಿದ್ದರು ಅವರು.

"ಥೂ. ನಾಚಿಕೆಯಿಲ್ಲದವ!"- ಅವರ ಹಹಾ ಹಿಹೀ ಹು ಹೂವಿನಲ್ಲಿ ಆಕೆಯ ಮಧುರ ವಾಣಿಯ ಬಿರುಸು ಅದಲ್ಲಿ ಕೇಳಬೇಕು!

ಬಾಲ್ಕನಿ ಟಿಕೆಟ್ ಪಡೆದು. 'ಜೀ' ಸಾಲಿನ ಆರನೇ ಸೀಟನಲ್ಲಿ ಕುಳಿತಾಗ. ಪಕ್ಕದಲ್ಲಿ ಅದೇ ನಾಚಿಕೆಯಿಲ್ಲದ 'ರೋಮಿಯೋ ಪ್ರತಿಷ್ಠಾಪಿಸಿರಬೇಕೆ? ತಿಗಣೆಗಳ ಕಾಟದಲ್ಲಿ ಇನ್ನೊಂದು ತೊಂದರೆ! ಹಿಚ್‌ಕಾಕ್ ಚಿತ್ರಿಸಿದ ಪಕ್ಷಿಗಳ ದಾಳಿಗಿಂತ ಈ ಮನುಷ್ಯ ಮೃಗದ ದಾಳಿಯೇ ಭಯಂಕರವಾಗಿ ಕಂಡಿತ್ತು ಶೋಭಾಳಿಗೆ. ಥಿಯೇಟರಿನಿಂದ ಹೊರಬಂದು, ಶುದ್ಧ ಹವೆ ಉಸಿರಾಡಿಸುವತನಕ ಸಮಾಧಾನವಿರಲಿಲ್ಲ ಆಕೆಗೆ.

ಅಂದಿನ ಪ್ರಸಂಗ ಅಷ್ಟಕ್ಕೇ ನಿಂತಿದ್ದರೆ. ಭವಿಷ್ಯತ್ತು ಬದಲಾಗಬಹುದಿತ್ತೇನೋ! ಕಾಮರ್ಸ ಎರಡನೇ ವರ್ಷದಲ್ಲಿ ಓದುತ್ತಿದ್ದ 'ಥೂ ನಾಚಿಕೆಯಿಲ್ಲದ' ಆತ, ಪೆಂಡ್ಯುಲಂದಂತೆ ತನ್ನ ಕಾಲೇಜಿಗೂ ವಿಲ್ಲಿಂಗಡನ್ ಕಾಲೇಜಿಗೂ ಕ್ರಮವಾಗಿ ಸರಿದಾಡ ಹತ್ತಿದ. ದಾರಿಯಲ್ಲಿಯ ಕೀಟಲೆಯಂತೂ ಅತಿಯಾಗಿತ್ತು. ಒಮ್ಮೆ ಕಾಲೇಜಿನಿಂದ ಮನೆಗೆ ಬಂದ ಬಳಿಕ ಬಿಳೀ ವಾಯಲ್ ಸೀರೆ ಬದಲಿಸಿ ಮಡಿಸುವಾಗ ನೋಡಿದರೆ, ಬೆನ್ನ ಹಿಂದಿನ ಭಾಗಕ್ಕೆ ಕೆಂಪು ತುಷಾರ ಕಂಡಿತ್ತು. 'ಆತ' ನಿಲ್ದಾಣದಲ್ಲಿ 'ಪಾನ್' ಮೆಲ್ಲುತ್ತಿದ್ದುದು ಆಕೆಯ ಸ್ಮರಣೆಗೆ ಬಂದಿತು. ಮನೆಯಲ್ಲಿ ಅಣ್ಣನಿಗೆ ಹೇಳಲು ಅಧೈರ್ಯ. ತಂದೆ ತಾಯಿಗೆ ಗೊತ್ತಾದರೆ ಕಾಲೇಜಿಗೆ ಕೊನೆ ವಂದನೆ ಸಲ್ಲಿಸಿ, ಮನೆಗೆ ಶರಣು ಬರಬೇಕು. ಅದೂ ಸಾಂಗಲಿಯಲ್ಲಿನ ಮನೆಗಲ್ಲ, ನೀರಸವಾದ ರಬಕವಿಯ ಮನೆಗೆ.

"ಇಂಥ ಮಂಗನಾಟಕ್ಕೆ ಯಾವ ಬೆಲೆ ಕೊಡಬಾರದು. ಪ್ರತಿಕ್ರಿಯೆಯನ್ನೂ ತೋರಿಸಬಾರದು. ಕುಣಿದು, ಕುಣಿದು ಕಾಲು ಸೋತ ಬಳಿಕಾದರೂ ನೆಲ ಹಿಡಿಯುತ್ತಾರಲ್ಲ"--ಗೆಳತಿ ವಿಭಾವರಿಯ ತತ್ತ್ವ.

ಪಿ. ಡಿ. ಪರೀಕ್ಷೆ ಸಮೀಪಿಸಿದಂತೆ. ಅಭ್ಯಾಸ ಭಾರವಾಗಿ ಕಂಡಿತು ಶೋಭಾಳಿಗೆ. ಅಲ್ಲಿಯ ಮರಾಠಿ ಮಾಧ್ಯಮಕ್ಕೆ ಹೊಂದಿಕೊಳ್ಳಲಾರದೆ, ಕನ್ನಡದವಳಾದ ಆಕೆಗೆ ಇಂಗ್ಲೀಷ ಮಾಧ್ಯಮ ಹೊರೆಯಾಗಿತ್ತು. ಹೀಗಾಗಿ ಕಾಲೇಜಿಗೆ ಸೇರುವಾಗಿನ ಉತ್ಸಾಹ, ಕೊನೆಗೆ ಉಳಿದಿರಲಿಲ್ಲ. ಪರೀಕ್ಷೆಯಲ್ಲಿ ಒಂದರಡು ಪೇಪರ, ಅಷ್ಟಕ್ಕಷ್ಟೇ ಆದ ಬಳಿಕ ಪರೀಕ್ಷೆಗೇ 'ಸಲಾಂ' ಸಲ್ಲಿಸಬೇಕಾಯಿತು.

ಸಾಂಗಲಿಯಲ್ಲಿ ಒಂದೆರಡು ತಿಂಗಳು ಅತ್ತಿಗೆ ಪ್ರಭಾಳ ಜತೆಗೂಡಿ, ಅಡುಗೆಗೆ ಕೈಹಾಕಿದಾಗ ಕೈಸುಟ್ಟು ಮುಖ ಕಪ್ಪಿಟ್ಟು. ತಾಳದೆ ಊರಿಗೆ ಮರಳಿದ್ದಳು ತಾಯಿ ಹತ್ತಿರ. ಮಗಳ ಬರವು ಪಾರ್ವತಮ್ಮನಿಗೂ ಸಂತಸ. ಸೀರೆಯ ವ್ಯಾಪಾರಕ್ಕಾಗಿ ರಬಕವಿ-ಸಾಂಗಲಿಗೆ ಎಡತಾಕುತ್ತಿರುವ ಗಂಡನಿಗೆ, ಬೆಳೆದ ಮಗಳ ಮದುವೆಯ ಬಗೆಗೆ

ಹೇಳುತ್ತಿರುವುದು ಹೊಸ ಮಾತಾಗಿರಲಿಲ್ಲ. ಶಂಕರಪ್ಪನವರೂ ಅತ್ತಿತ್ತ ಕಣ್ಣಿಟ್ಟು 'ವರ' ಸಂಶೋಧಿಸುತ್ತಿರುವಾಗ, ತಮ್ಮ ಸ್ನೇಹಿತರೇ ಆದ ಇಚಲಕರಂಜಿಯ ಮೂಲಂಗಿ ಆನಂದಪ್ಪನವರ ಮಗ ಕಾಣಿಸಿದ್ದು. ಮನೆತನ ಎಲ್ಲ ರೀತಿಯಿಂದ ಪರಿಪೂರ್ಣವಾಗಿ ಕಂಡಿತ್ತು ಶಂಕರಪ್ಪನಿಗೆ. ಭಾವೀ ಅಳಿಯ ಅನುರೂಪನಾಗಿ ಕಂಡಿದ್ದ ಪಾರ್ವತಮ್ಮನಿಗೆ. ಕ್ಯಾಡೀಲಾಕ್ ಕಾರನ್ನು ಒಳ್ಳೇ ಆಢ್ಯತೆಯಿಂದ ಓಡಿಸಿಕೊಂಡು ಬಂದ ಆ 'ನಾಯಕ'ನ ಮುಖ, "ಥೂ, ನಾಚಿಕೆಯಿಲ್ಲದವ" ನದಾಗಿ ಕಂಡಿತ್ತು ವಧುವಾಗಬೇಕಾದ ಶೋಭಾಳಿಗೆ.

ಮಗಳ ಮುಖಭಾವವನ್ನರಿತ ಶಂಕರಪ್ಪ, ಈ ಮನೆತನದ ಬಗೆಗೆ ಒತ್ತಾಯಪಡಿಸುತ್ತಲಿರುವ ಹೆಂಡತಿಗೆ ತಿಳಿಹೇಳಿ, ಇಚಲಕರಂಜಿಗೆ ಪತ್ರ ಬರೆದಿದ್ದರು ಮಗಳನ್ನು ಮತ್ತೆ ಮುಂದೆ ಓದಿಸುವುದಾಗಿ ಇದೇ ನೆವ ಸರಿಯಾಗಿ ಕಂಡಿತ್ತು. ಲಿಂಗಣ್ಣನೂ ಇದಕ್ಕೆ ಅನುಮೋದನೆ ಇತ್ತಿದ್ದ.

ಪತ್ರ ಓದಿ ಆನಂದಪ್ಪ, "ಅಂ, ಇದೇನು? ಹೆಣ್ಣು ಕೊಡುವುದಾಗಿ ತಾನೇ ಕೇಳಲು ಬಂದಿದ್ದ ಶಂಕರಪ್ಪ!" ಎಂದು ಅಚ್ಚರಿಪಟ್ಟಂತೆ, ಮೂರನೆಯ ಮಗ ಕಳವಳಗೊಂಡಿದ್ದ. ಆನಂದಪ್ಪನವರಿಗೆ ಸೋಜಿಗವಾಗಿದ್ದರೆ, ಅದು ಬೇರೆ ಮಾತು. ಅವರ ಆತ್ಮಾಭಿಮಾನಕ್ಕೆ ಬಲವಾದ ಏಟು ಬಿದ್ದಂತಾಗಿತ್ತು.

"ಈ ಮೊದಲೇ ಈ ಸಂಬಂಧವಾಗಿ ಮಾತನಾಡದಿದ್ದರೆ ಒಳ್ಳೆಯದಿತ್ತು. ಅದೆಲ್ಲ ಬಿಟ್ಟು, ಮದುವೆಯಾದಂತೆಯೇ ಮಾತನಾಡಿ, ಮಗಳನ್ನು ತೋರಿಸಿ, ಏನಾದರೂ ನೆವ ಹೇಳಿ ಸಂಬಂಧ ಕಡಿಯುವದೆಂದರೆ? ನಮ್ಮ ಮಗನಲ್ಲಿ ಮನೆತನದಲ್ಲಿ ಅದಾವ ಕುಂದು ಕಂಡ ಶಂಕರಪ್ಪ!"- ಆನಂದಪ್ಪ ಒದರಾಡಿದ್ದರು, ಹೆಂಡತಿ ಮಕ್ಕಳ ಮುಂದೆ.

× × ×

ಎಂದಿನಿಗಿಂತ ಶೋಭಾ ಉತ್ಸಾಹದಿಂದ ಓಡಾಡುತ್ತಿದ್ದಳು. ಪ್ರತಿಸಲದಂತೆ ಈ ಸಲ ಮಾತ್ರ 'ವಧು ಪರೀಕ್ಷೆ' ಪ್ರಸಂಗದಲ್ಲಿ ಅತಿಯಾದ ಅಲಂಕಾರ ಮಾಡಿಕೊಳ್ಳದೆ ತೀರ ಸಾದಾ ರೀತಿಯಲ್ಲಿದ್ದಳು 'ವರ'ನಾಗಿ ಬಂದ ತರುಣನತ್ತ ದೃಷ್ಟಿ ಬೀರಿದಾಗ ಇನ್ನು ಉಲ್ಲಸಿತಳಾಗಿದ್ದಳು. ಆತನ ಆಕರ್ಷಕ ವ್ಯಕ್ತಿತ್ವದಲ್ಲಿ ಅದೆಂತಹದೋ ಸಮ್ಮೋಹ ತುಂಬಿ ತುಳುಕುತಲಿದ್ದಿತು. ಯಾರೂ ಅರಿಯದಂತೆ, ಮೂಕವಾಗಿ ಪರಸ್ಪರ ದೃಷ್ಟಿ ಸಂದೇಶಗಳ ವಿನಿಮಯದಲ್ಲಿ, ಕಣ್ಣಲ್ಲಿ ಮೂಡಿದ ಸಮ್ಮತಿ ಸೂಚಕವಾದ ಆತನ ಆಶಯ ಕಂಡಂತೂ ಇನ್ನೂ ಅಗಲವಾಗಿತ್ತು ಎದೆ.

ವಧು ಪರೀಕ್ಷಾ ಸಮಿತಿ ಊರಿಗೆ ಮರಳಿ, ಒಪ್ಪಿಗೆಯಾದ ವರದಿ ಒಪ್ಪಿಸಿದಾಗ ಬಂಗಾರ ಒಪ್ಪಿದ ಮೋಡದಂತೆ ಹಗುರಾಗಿ ಹನಿಯಲ್ಲಿ ತೇಲಿದ್ದಳು ಶೋಭಾ. ಶಂಕರಪ್ಪನವರಿಗೆ ಹೆಮ್ಮೆಯಾದಂತೆ, ಪಾರ್ವತಮ್ಮನಿಗೆ ಸಂತೋಷವಾಗಿತ್ತು. ವ್ಯಾಪಾರ ಮೂಲಕ ಪರಿಚಯಸ್ಥ ಮನೆತನವೇ, ಶಹಾಪುರ 'ಸಂಪಾ ಹೊಜಯರಿ ವರ್ಕ್ಸ್' ಮಾಲಿಕರಾದ ಶರಣಪ್ಪನವರದು. ಪಂಜಾಬಿ ಹೊಜಯರಿ ಕೂಡ ಸ್ಪರ್ಧೆ ಸಾಗಲಾರದೆ ಇಳಿಮುಖವಾದ ಉದ್ಯೋಗಕ್ಕಿಂತ ಹೆಚ್ಚಿಗೆ, ತಮ್ಮ ಮನಸ್ಸನ್ನು ಮಗನ ಶಿಕ್ಷಣದತ್ತ ಹೊರಳಿಸಿದ್ದರು ಶರಣಪ್ಪ. ಒಬ್ಬನೇ ಮಗನಾದ ಮಲ್ಲಿಕಾರ್ಜುನ ಕೂಡ, ಮೊದಲೇ ಮೇಧಾವಿ ಎನಿಸಿಕೊಂಡವ. ಕರ್ನಾಟಕ ಮೆಡಿಕಲ್ ಕಾಲೇಜಿನಿಂದ ಪ್ರತಿಭಾನಂತ ವಿದ್ಯಾರ್ಥಿಯಾಗಿ ಹೊರಬಂದು ಹೌಸ್ ಸರ್ಜನ್ ಆಗಿ ಕೆಲಸ ಮಾಡುತ್ತಿದ್ದ.

"ಹತ್ತು ಸಾವಿರ ವರದಕ್ಷಿಣೆ, ಅಳಿಯನಿಗೆ ಆ ಕಾರು ಬೇರೆ, ಅಲ್ಲದೆ ಮನೆಯ ಮುಂದೆ ಅಕ್ಕಿಕಾಳು ಹಾಕಿಕೊಡುತ್ತೇನೆ" ಎಂದು ಶಂಕರಪ್ಪ ಹೇಳಿದ್ದರು ಶಹಪುರಕ್ಕೆ ಹೋದಾಗ.

"ನೀವೇನೂ ಬೇರೆಯವರಲ್ಲ, ಅಳಿಯ ನಿಮ್ಮವನೇ. ಆತನ ಯೋಗ್ಯತೆಗೆ ತಕ್ಕ ಮರ್ಯಾದೆ ಮಾಡುವುದು ನಿಮಗೇ ಸೇರಿದ್ದು. ನಮ್ಮ ಸೊಸೆ ಮೈಮೇಲೆ ತಕ್ಕಷ್ಟು ಬಂಗಾರ ಹಾಕುತ್ತೇನೆ. ತಕ್ಕ ಅರಿವೆ ತೆಗೆಸುತ್ತೇನೆ"- ಡಾಕ್ಟರನ ತಾಯಿ ಬೀಗತನ ಸಮ್ಮತಿಸಿ, ತನ್ನ ಅಭಿಪ್ರಾಯ ತಿಳಿಸಿದ್ದರು

"ಎಲ್ಲ ಸರಿ ಹೋದ ಮೇಲೆ ಕೊಡುಕೊಳ್ಳುವದೇನು? ನಾವೂ ದೀಪಾವಳಿ ಮುಗಿಸಿ, ನಿಶ್ಚಯ ಕಾರ್ಯಕ್ಕೆ ಬರುತ್ತೇವೆ ವೈಶಾಖದಲ್ಲಿ ಮದುವೆ ಇಟ್ಟರಾಯಿತು" ಎಂದಿದ್ದರು ಶರಣಪ್ಪ.

ದಿನದಿನಕ್ಕೂ ಒಂದು ಚಂದ, ಒಂದು ಅಂದ ಶೋಭಾಳ ಅಲಂಕಾರ.

"ಓ ಡಾಕ್ಟರರ ಮಿಸೆಸ್ ಬಂದರು!"

"ಡಾಕ್ಟರರಿಗೆ ತಕ್ಕ ಮೇಕ್‌ಅಪ್!"- ಇನ್ನೊಬ್ಬಳು ಮೊದಲಿನವಳಿಗೆ ದನಿಗೂಡಿಸಿದಳು. ಗೆಳತಿಯರೆಲ್ಲ ಒಂದೆಡೆ ಸೇರಿದರೆ ಕೇಳುವುದೇನು? ಒಂದು ರೀತಿಯ ಸಂತಸ ಮೆತ್ತಿದಂತೆ ಮಧುರ ಅನುಭವ ಅವಳಿಗೆ. ಇದೆಲ್ಲ ಕೇಳಿ, "ನೀವೆಲ್ಲ ಹೀಗೆ ಹುಚ್ಚುಚ್ಚಾರ ಮಾತಾಡಬಾರದು" ಹುಸಿ ಮುನಿಸಿನಿಂದ ಅವರ ನಗೆ ಮಾತಿಗೆ ತಡೆಯುಂಟು ಮಾಡಿದರೂ, ಅದೇ ರೀತಿ ಅವರು ಇನ್ನೂ ಹೆಚ್ಚಾಗಿ ತನ್ನ ಬಗೆಗೆ ಆಡಬೇಕೆಂಬುದೇ ಅಂತರ್ಯದಾಸೆ ಭಾವೀ ಜೀವನದ ಬಗೆಗೆ ಕನಸು ಕಾಣುತ್ತಿರುವ ತರುಣಿಯರ ಸಹಜ ಭಾವನೆ.

"ಈಗಷ್ಟೇ ನೀನು ನಮ್ಮ ಕೈಯಲ್ಲಿ ಸಿಗುವವಳು. ನಾಳೆ ಕೊರಳಿಗೆ ತಾಳಿ ಬಿಗಿದರೆ..."

"ಅಲ್ಲ ಬಾಹುಬಂಧನವೆನ್ನು"- ಇನ್ನೊಬ್ಬಳು ಕಾದಂಬರಿ ಪದವನ್ನು ಪ್ರಯೋಗಿಸಿದ್ದಳು ಅವಿವಾಹಿತ ತರುಣಿಯರ ಹೊಸದಲ್ಲದ ಚರ್ಚೆ ಸಾಗುತ್ತಿತ್ತು. ನಾಲ್ವರು ಒಂದೆಡೆ ಸೇರಿದಾಗ

× × ×

ಅಂಗಡಿಪೂಜೆ, ಪಾಡ್ಯ ಎಲ್ಲ ಮುಗಿದ ಬಳಿಕ, ಒಂದು ಒಳ್ಳೆಯ ದಿನವನ್ನು ನೋಡಿ, ಶರಣಪ್ಪನವರಿಗೆ ನಿಶ್ಚಿತಾರ್ಥಕ್ಕೆ ಬರಲು ಸೂಚಿಸಿ ಬರೆದಿದ್ದರು ಶಂಕರಪ್ಪ. ಮನೆಯಲ್ಲಿ ಪೂರ್ವತಯಾರಿಗೆಂದು ಪ್ರಭಾಳನ್ನು ಕಳಿಸಿಕೊಟ್ಟಿದ್ದ ಲಿಂಗಣ್ಣ. ನಿಶ್ಚಯದಿನ ತಾವು ಬರುವುದಾಗಿ ಹಿಂದೆ ಉಳಿದಿದ್ದ. ಶಹಪುರದಿಂದ ಉತ್ತರ ಬರಲು ವಿಲಂಬವಾಗಿತ್ತು. ಎಲ್ಲ ಸಿದ್ಧತೆ ಮಾಡಿಕೊಂಡು ಕುಳಿತಾಗ, ಶರಣಪ್ಪನವರ ಪತ್ರ ಬಂದು ಗಾಬರಿಗೊಳಿಸಿತ್ತು ಶಂಕರಪ್ಪನನ್ನು. "ಮಗ ಮತ್ತೆ ಅಭ್ಯಾಸ ಮಾಡಲು ಮುಂಬಯಿಗೆ ಹೋಗಬೇಕೆಂದಿದ್ದಾನೆ. ಈಗ ಮದುವೆ ಬೇಡ" ಎಂದು ಕುತೂಹಲಿಯಾಗಿ ಬಾಯಿತೆರೆದು ಕೇಳುತ್ತಿದ್ದ ಹೆಂಡತಿಗೆ ಪತ್ರದ ವಿವರ ತಿಳಿಸಿ, "ಈ ವಿಷಯ ಅತ್ತಿತ್ತ ಹೇಳಬೇಡ. ನಾನೇ ನೋಡಿಕೊಂಡು ಬರುತ್ತೇನೆ." ಎಂದು ಶಹಪುರದಾರಿ ಹಿಡಿದಿದ್ದರು ಶಂಕರಪ್ಪ.

ಗಂಡ ಬರುವತನಕ ಸಮಾಧಾನವಿಲ್ಲ ಪಾರ್ವತಮ್ಮನಿಗೆ. ತಂದೆ ಅವಸರದಿಂದ ಹೋದ ಕಾರಣ ಶೋಭಾಳಿಗೆ ತಿಳಿಯದಂತೆ, ಅಕ್ಕಯ ಮುಖಭಾವ ಪ್ರಭಾಳಿಗೆ ಅರ್ಥವಾಗಿರಲಿಲ್ಲ ಮರುದಿನ ಶಂಕರಪ್ಪ ಇನ್ನೂ ಮುಖ ಚಿಕ್ಕದು ಮಾಡಿಕೊಂಡು ರಬಕವಿಗೆ ಮರಳಿದ್ದರು.

"ಅದೇನು, ಸಮಾಚಾರ?"



"ಹುಡುಗನ ಮುಂದಿನ ಅಭ್ಯಾಸವಲ್ಲ ಏನೆಲ್ಲ ಅವರಿಗೆ ನನ್ನ ಹುಡಿಗಿ ಬೇಡವಾಗಿದ್ದಾಳೆ."

"ಮೊದಲು ಬೇಕಾದವಳು ಈಗೇಕೆ ಬೇಡ? ನಮ್ಮ ಶೋಭಿಗೆ ಏನಾಗಿದೆಯಂತ...?"

"ಏನು ಹೇಳುವದು? ಆಕೆಗೆ 'ಬಿಳುಪು' ಇದೆಯಂತೆ ಅದೂ ಕಾಣದ ಭಾಗದಲ್ಲಿ..."

"ಆಂ! ಬಿಳುಪು! ಯಾರು ಹೇಳಿದರು?"

"ಇಚಲಕರಂಜಿಗೆ ಹೋದಾಗ ಶರಣಪ್ಪನಿಗೆ ಹೇಳಿದನಂತೆ ಅನಂದಪ್ಪ ನಮ್ಮ ಸಂಬಂಧವನ್ನ ಇದೇ ಕಾರಣಕ್ಕೆ ಬಿಟ್ಟನಂತೆ..." ಕಾಲ ಕೆಳಗಿನ ನೆಲ ಈ ರೀತಿ ನಡುಗುತ್ತದೆಂದು ಅವರಿಬ್ಬರೂ ಭಾವಿಸಿರಲಿಲ್ಲ

ಹೆಣ್ಣಾದ ಪಾರ್ವತಮ್ಮನ ಮಾತಂತಿರಲಿ ಗಂಡು, ಅದರಲ್ಲಿಯೂ ಗಂಡೆದೆಯ ಶಂಕರಪ್ಪ, ಸಿಡಿಲಿನಂತೆ ಬಂದ ಮಿಥ್ಯಾರೋಪ ಕೇಳಿ ತತ್ತರಿಸಿದ್ದರು.

"ಅದಾರು ಹೇಳುತ್ತಾರೆ ನನ್ನ ಮಗಳಿಗೆ ಬಿಳುಪು ಇದೆಯಂತ! ಬಂದು ನೋಡಿ ಸಿದ್ದ ಮಾಡಲಿ ಹೆಣ್ಣು ಕೊಡಲಾರದಕ್ಕೆ ಸುಳ್ಳು ಹೇಳಿ ಬೇರೆಯವರ ಮಕ್ಕಳ ಜೀವನ ಹಾಳು ಮಾಡುವದೇ?" ಬೆಂಕಿಯಾಗಿ ಪಾರ್ವತಮ್ಮ ಕೂಗಾಡಿದ್ದಕ್ಕೆ

"ಇದೆಲ್ಲ ಬಾಯಿಬಿಟ್ಟು ಒದರಾಡಬೇಡ ಈ ಸಂಗತಿ ಮತ್ತೊಬ್ಬರ ಕಿವಿಗೆ ಬಿದ್ದರೆ, ಇಲ್ಲದಿದ್ದರೂ ಇದೆಯಂತ ಅರ್ಥಮಾಡಬಹುದು. ಇದು ಮರ್ಯಾದೆಯಿಂದಿರಲಿ ಮುಂದೆ ನಾ ನೋಡುತ್ತೇನೆ" ಧರ್ಮಪತ್ನಿಗೆ ಅಭಯನೀಡುತ್ತಿದ್ದ ಶಂಕರಪ್ಪನವರಿಗೆ 'ನೀವೆಷ್ಟು ಧೈರ್ಯದಿಂದ ರುವಿ?' ಎಂದು ಅವರ ಅಂತರಾತ್ಮ ಅಪಹಾಸ್ಯಗೈಯುತ್ತಿತ್ತು.

ದೊಡ್ಡ ನಗರವಾದರೆ ಆ ಮಾತು ಬೇರೆ. ರಬಕವಿಯಂತಹ ಊರಿನಲ್ಲಿ ಸೋರಿಹೋದ ಸುದ್ದಿ ತುಂಬೆಲ್ಲ ಪಸರಿಸುವುದಕ್ಕೆ ತಡವಿಲ್ಲ. "ಶಂಕರಪ್ಪನ ಮಗಳಿಗೆ ಬಿಳುಪು ಇದೆ. ಅದಕ್ಕೇ ಇಚಲಕರಂಜಿ, ಶಹಪೂದವರು ಬಿಟ್ಟರು" ಎಂಬ ಸಮಾಚಾರ ಗಾಳಿ ಮಾತಿನಲ್ಲಿ ಕಿವಿಯಿಂದ ಕಿವಿಗೆ ಸಂದುಗೊಂದು ಹರಡಿದಂತೆ ಹೌಹಾರಿಹೋದ ಶೋಭಾಳಿಗೆ ಮನೆಹೊರಗೆ ಮುಖ ತೋರಿಸಲು ಜೀವದ ಸುತ್ತ ಬಂದಿತು. ಎಲ್ಲರೂ ತನ್ನತ್ತ ಅಪಹಾಸ್ಯಗೈಯುತ್ತಿರುವಂತೆ ಭಾವನೆ

ಅಣ್ಣ ಬಂದು ತಂಗಿಯನ್ನು ಸಾಂಗಲಿಗೆ ಕರೆದೊಯ್ದಾಗ, ಅಲ್ಲಿಯಾದರೂ ಅದೆಷ್ಟು ದಿನ ಹಾಯಾಗಿ ಇರಬಹುದು? ಶೋಭಾಳ ಬಗೆಗೆ ಅತ್ತಿಗೆಗೆ ಕನಿಕರ. "ಹೀಗೆ ಚಿಂತಿ ಮಾಡಿದರೆ ಇನ್ನಷ್ಟು ಸೊರಗುವಿ ಶೋಭಾ! ನೀಲಿಗೆಟ್ಟ ಮಾತಗಳನ್ನ ಮನಸ್ಸಿಗೆ ಹಚ್ಚಿಕೊಳ್ಳಬಾರದು."

"ಇಲ್ಲ ವೈನಿ, ಅದೇನಿಲ್ಲ! ಆದರೆ ಮನುಷ್ಯರ ಸ್ವಾರ್ಥ..."

"ಹುಂ, ಎರಡನೆಯವರ ಜೀವನ ಹಾಳು ಮಾಡುವದೂ ಒಂದು ಸಂತೋಷ. ಈಗ, ಅದೇ ಆನಂದಪ್ಪ ಅದೇ ಡಾಕ್ಟರನಿಗೆ ತನ್ನ ಮಗಳನ್ನು ಕೊಡುತ್ತಾನಂತೆ. ಹೀಗೆ ಸ್ವಾರ್ಥದಿಂದ ಹಾನಿ ಮಾಡಿದಂತೆ ಲಾಭವನ್ನೂ ಗಳಿಸುತ್ತಾರೆ..." ಗಂಡನಿಂದ ಕೇಳಿದ ಸುದ್ದಿಯನ್ನು ಪ್ರಭಾ ಹೇಳುತ್ತಿದ್ದಂತೆ, ಶೋಭಾಳ ಕಣ್ಣೆದುರು ಆ ಕುದುರೆಯ ಮುಖ ನಿಂತಿತ್ತು! ಅದಾವ ಚೆಂದನ್ನ ಚೆಲುವೆ? ಆದರೇನು ಆಕೆಯೂ ತನ್ನಂತೆ ಹೆಣ್ಣಲ್ಲವೆ? ಬೇಕು ಬೇಡಗಳಿವೆಯಲ್ಲ!

ಯಾವ ಅಲಂಕಾರದಲ್ಲಿಯೂ ಮನಸ್ಸಿರಲಿಲ್ಲ ಶೋಭಾಳಿಗೆ. ಹೊತ್ತು ಹೋಗದೆ ತನ್ನ ಗೆಳತಿಯರಿಗೆ ಭೇಟಿಯಾಗಿ ನಕ್ಕು ಮಾತನಾಡಿ ಮನಸ್ಸಿನ ನೋವು ಮರೆಯಲು ಯತ್ನಿಸಿದರೂ ಇನ್ನೂ ಸ್ವಚ್ಛಂದವಾಗಿ ವಿಹರಿಸುತ್ತಿರಲಿಲ್ಲ.

"ಗಡಹಿಂಗ್ಲಜದವರು ಆನಂದಪ್ಪನ ಮಗನಿಗೆ ಹೆಣ್ಣುಕೊಟ್ಟು ಮದಾವೆಮಾಡಿ ಕೊಟ್ಟರು.



ಇನ್ನು ಮುಂದೆ ಆನಂದಪ್ಪ ಮಗಳ ಮದುವೆ ತನ್ನ ಮನೆಮುಂದೆ ಮಾಡಿಕೊಡುವವ..." ಲಿಂಗಣ್ಣ ಹೆಂಡತಿಗೆ ಹೇಳಿದ ಸುದ್ದಿ ಶೋಭಾಳ ಕಿವಿಗೆ ಬಿತ್ತು ಯಾರ ಮದುವೆ ನಿಲ್ಲುತ್ತದೆ? ಹುಟ್ಟಿದವರಿಗೆ ದೇವರು ಜತೆಮಾಡಿ ಇಟ್ಟೇ ಇರುತ್ತಾನೆ. ಆದರೆ ತನ್ನದು? ಎದೆಕೊರೆಯುವ ಪ್ರಶ್ನೆ ಮಗಳಿಗೆ ಏನೂ ಕುಂದಿಲ್ಲ, ಬೇಕಾದರೆ ಲೇಡಿ ಡಾಕ್ಟರರಿಂದ ಪರೀಕ್ಷಿಸಬಹುದೆಂದು ತಂದೆ ಢಾಣಾಡಂಗುರವಾಗಿ ಹೇಳುತ್ತಿದ್ದುದು ಇನ್ನೂ ನಾಚಿಗ್ಗೇಡು ಸಂಗತಿ. ಮಿಥ್ಯಾಪವಾದಕ್ಕೆ ಬಲಿಯಾಗಿ. ಲಜ್ಜೆಬಿಟ್ಟು ಪರರೆದುರು ಶಿಲಾಮೂರ್ತಿಗಳಂತೆ ವಿವಸ್ತ್ರಳಾಗಿ ನಿಲ್ಲಬೇಕೆ? ಇದೂ ಒಂದು ಪ್ರದರ್ಶನವೆ? ಇದಾವ ಅಪರಾಧ? ಯಾತಕ್ಕಾಗಿ? ಮನಸ್ಸಿಗೆ ಬಾರದ ಗಂಡನ್ನು ಅಲ್ಲಗಳೆದುದರ ಪ್ರತೀಕಾರವೆ? ಸುಖವಾಗಿ ಸಾವು ಬಂದರೆ ಎಂಥ ಸಂತೋಷ! ಇಷ್ಟೆಲ್ಲ ವಿಚಾರಿಸಿದಾಗ ತಲೆಸಿಡಿದು ಹೋಗುವಂತಹ ಅನುಭವ.

× × ×

ವಿಭಾವರಿಯ ಸೋದರತ್ತೆ ಮನೆಯಲ್ಲಿಯ ಸತ್ಯನಾರಾಯಣ ಪೂಜೆಗಾಗಿ ಆಕೆ, ಗೆಳತಿ ಶೋಭಾಳನ್ನು ಕರೆತಂದಿದ್ದಳು ಮಿರಜಕ್ಕೆ. ಪೂಜೆತೀರಿಸಿ, ಸಾಯಂಕಾಲ ಇಬ್ಬರೂ ಮಾರ್ಕೆಟ್ಟನಿಂದ ಸಿಟಿಬಸ್ ಹಿಡಿದು ಸಾಂಗಲಿಗೆ ನಡೆದಿದ್ದರು. ಹಾಸ್ಪಿಟಲ್ ಹತ್ತಿರ ಶೋಭಾಳ ಪಕ್ಕದಲ್ಲಿಯ ತೆರವಾದ ಸ್ಥಾನವನ್ನು ಆಕ್ರಮಿಸಿದ ಆಸಾಮಿ ಅವಸರದಿಂದ ಕುಳಿತ ಭರದಲ್ಲಿ ಆತನ ಬೂಟಗಾಲು ಆಕೆಯ ಮೃದುಕಾಲಿಗೆ ಬಲವಾಗಿ ಹತ್ತಿರಬೇಕು. ಇದಾವ ಮೃಗ? ಎಂದು ತೀಕ್ಷ್ಣ ದೃಷ್ಟಿಯಿಂದ ಆತನತ್ತ ನೋಡುತ್ತಿದ್ದಂತೆ ಆತ "ಸಾರಿ. ಪ್ಲೀಜ್ ಎಕ್ಸಕ್ಯೂಜ್ ಮಿ..." ಎಂದು ವಿನೀತನಾಗಿ ಕೇಳುತ್ತಿದ್ದಂತೆ ಆಕೆಯ ಮುಖ ಕಂಡು "ಓ ನೀವೇ?" ಎಂದು ಉದ್ಗರಿಸಿದ

ಸ್ನೇಹಿತೆಯು ಇನ್ನೊಂದು ಬದಿಗಿದ್ದ ವಿಭಾ, ಪಿಳಿಪಿಳಿ ಕಣ್ಣುಬಿಡುತ್ತ ನೋಡುತ್ತಿದ್ದಳು, ಆ ಪ್ರಸಂಗ ಅರಿವಾಗದೆ ಆತನ ಮುಖ ತಿಳಿದ ಬಳಿಕ ಶೋಭಾಳ ಎದೆಗುಂಡಿಗೆ ಹಾರಿದಂತಾಗಿ ಕುಸಿದಿದ್ದಳು. ಗೆಳತಿಯ ಪಕ್ಕಕ್ಕೆ. ರಾಮಮಂದಿರಕ್ಕೆ ಬಸ್ ಇಳಿದು ಮನೆಯತ್ತ ನಡೆದಾಗ, ಶೋಭಾಳ ಜೀವನದಲ್ಲಿ ಜೀವ ಇನ್ನೂ ಬಂದಂ-ತಿರಲಿಲ್ಲ.

"'ಲವ್ ಬರ್ಡಿ'ನಂತೆ ಹಾಗೇಕೆ ಸಾಯುತ್ತೀಯೆ? ಏನಾಯಿತು ಹೇಳು..." ಎಂದು ವಿಭಾ ನಗೆಯಾಡಿದಾಗ ಸುಳ್ಳೊಂದನ್ನು ಹೇಳಿ, ಆ ಸಮಯ, ಗೆಳತಿಯಿಂದ ಪಾರಾಗಿದ್ದಳು ಶೋಭಾ.

ಮರುದಿನ ಅಣ್ಣ ಅಂಗಡಿಗೆ ಹೋದಾಗ, ಅತ್ತಿಗೆಗೆ ವ್ಯಾಟನಿ ನೆವ ಮುಂದೆಮಾಡಿ ಏಕಾಂ-ಗಿಯಾಗಿ ಶೋಭಾ ಮಿರಜಕ್ಕೆಬಂದಿದ್ದಳು, ಅದಾವುದೋ ಶಕ್ತಿಯು ಎಳೆತಕ್ಕೆಸಿಕ್ಕು. 'ವಾನ್ ಲೆಸ್' ಆಸ್ಪತ್ರೆಹತ್ತಿರ ಬಸ್ಸು ನಿಂತಾಗ, ಒಳ ಕಂಪೌಂಡಿನಲ್ಲಿ ಶ್ವೇತ ವಸ್ತ್ರಧಾರಿ ಮಲ್ಲಿಕಾರ್ಜುನ ಡಾಕ್ಟರ್ ಅದಾರ ಜತೆಯಲ್ಲಿಯೋ ಸಂಭಾಷಿಸುತ್ತಿರುವುದು ಕಣ್ಣಿಗೆಬಿತ್ತು. ಅಲ್ಲಿಯೇ ಬಸ್ಸಿನಿಂದಿಳಿದು ಕೆಲ ನಿಮಿಷ ಹೊರಗೆ ನಿಂತಳು. 'ಓ, ಆತ ವಾನ್ ಲೆಸ್ ಆಸ್ಪತ್ರೆಯಲ್ಲಿ ನೌಕರಿಗೆ ಸೇರಿದ್ದಾನೆ. ಅದೇ ನಿನ್ನೆ ಬಸ್ಸಿನಲ್ಲಿ ಭೇಟಿಯಾದದ್ದು '—ಅಲ್ಲಿ ಬಹಳ ಹೊತ್ತು ನಿಲ್ಲಲಾರದೆ, ಎಲ್ಲ ದೃಷ್ಟಿಗಳ ಗುರಿ ತಡೆಯದೆ, ಅಲ್ಲಿಂದ ಸರಿದು ಹಾಗೇ ಸಾಂಗಲಿಗೆ ಇನ್ನೊಂದು ಬಸ್ಸಿನಿಂದ ಮರಳಿದ್ದಳು. ತನ್ನ ಹುಚ್ಚುತನ ಕಂಡು ತನಗೇ ನಗು ಅನಂತರ

ಇನ್ನೊಮ್ಮೆ ಸದಾಸುಖ ಥಿಯೇಟರಿನ ಎದುರು ಭೇಟಿ. ಅದೇನೋ ಬಯಕೆ ಆತನ ಕಣ್ಣಿಗೆ. ಎಂಥದೋ ಆತುರ ಆತನ ತುಟಿಗೆ!

ಹಿಂದಿನ ಪ್ರಸಂಗ ಸ್ಮರಣೆಗೆ ಬಂದರೆ. ಆತನ ಬಗೆಗೆ ತಿರಸ್ಕಾರ. ತಾತ್ಸಾರ ತುಂಬಿತುಳುಕು-

ತ್ತಿದೆ. ಕುದುರೆ ಮುಖದವಳು ಆತನ ಬಗೆ ಗಣ್ಣನ್ನು ಹೇಗೆ ತುಂಬಿದಳೋ ಸೋಜಿಗದ ಸಂಗತಿ! ಮತ್ತೆ ಅದೇ ವಿಚಾರ.

× × ×

ತಂದೆಯ ತಂತಿ, ಕಂಡು ಲಿಂಗಣ್ಣ, ಅವಸರದಿಂದ ರಬಕವಿಗೆ ತೆರಳಿದ್ದ. ಹಿನ್ನೆಲೆಯ ವಿಷಯದ ಬಗೆಗೆ ಶೋಭಾಳಂತೆ ಪ್ರಭಾವತಿಗೂ ಕುತೂಹಲ. ಅದೇಕೊ ವಿವಂಚನೆ. ಮರುದಿನ ಸಾಯಂಕಾಲ ಲಿಂಗಣ್ಣ ಮರಳಿ ಬಂದಾಗ ಆತನ ಗೆಲುವಾದ ಮುಖಕಂಡು ಅವರಿಬ್ಬರ ಎದೆಯ ದುಗುಡ ಮಾಯವಾಗಿತ್ತು.

"ಶರಣಪ್ಪ ತಾನೇಬಂದಿದ್ದು ವಿಚಿತ್ರಸಂಗತಿ!"

"ಒಬ್ಬನೇ ಬರಲಿಕ್ಕೆ ಮುಖವಿರಲಿಲ್ಲ. ತನ್ನ ಮೊದಲಿನ ತಪ್ಪನ್ನು ಒಪ್ಪಿಕೊಳ್ಳುವದಕ್ಕೆ ಒಂದಿಬ್ಬರ ಹಿರಿಯರನ್ನು ಕರೆತಂದಿದ್ದ."

"ಅವರ ಮನಸ್ಸು ಹೇಗೆ ಬದಲಾಯಿಸಿತೋ? ಇಚಲಕರಂಜಿಯಲ್ಲಿ ನಿಶ್ಚಯ ಸಹ ಮಾಡಿದ್ದರಂತಲ್ಲ !!

"ಅದೇನೂ ಸರಿಯಾಗಿ ತಿಳಿಯಲಿಲ್ಲ. ಭಿನ್ನಾಭಿಪ್ರಾಯದಿಂದ ನಿಶ್ಚಯ ಮುರಿಯಿತೆಂದು ಶರಣಪ್ಪ ಕಾರಣ ಕೊಟ್ಟರು. ಅಲ್ಲದೆ ಆ ಪ್ರಸಂಗ ಕೆದಕಿ ಕೇಳುವಂತೆ ಇರಲಿಲ್ಲ ನೋಡು.'

"ಕರಾರು ಏನೇನು?"

"ಅವೇ ಈ ಮೊದಲು ಯಾವ ರೀತಿ ಹೇಳಿತ್ತೋ ಅವೇ. ಶರಣಪ್ಪನವರಿಗೆ ಪಶ್ಚಾತ್ತಾಪವಾಗಿತ್ತು. ಅವ್ವ ಬಿಳುಪಿನ ಬಗೆಗೆ ಪರೀಕ್ಷಿಸೆಂದರೂ ಅದರ ಬಗೆಗೆ ಯಾರೂ ಮಾತನ್ನತ್ತಲಿಲ್ಲ. ಮರುವಿಚಾರಕ್ಕೆ ಆತನ ಮಗ ಡಾಕ್ಟರನ ಒತ್ತಾಯವೆಂದು ಕಾಣುತ್ತದೆ..."

"ಏನಾದರಾಗಲಿ ಶೋಭಾಳ ನಸೀಬು ಚೆನ್ನಾಗಿದೆ."

ಊಟ ಮುಗಿಸಿ ಲಿಂಗಣ್ಣ ಹೊರಗೆ ಹೋದ ಬಳಿಕ ಪ್ರಭಾವತಿಗೆ, ಪತ್ರಿಕೆಯಲ್ಲಿ ಮುಖ ಮುಚ್ಚಿಕೊಂಡು ನಗುತ್ತಿರುವ ಶೋಭಾಳನ್ನು ಕಂಡು ಆಕೆಯ ಕಳ್ಳತನ ತಿಳಿಯಿತು. ನಾದಿನಿಯ ಗಲ್ಲ ಹಿಂಡಿದಂತೆ ಮಾಡಿ ಪ್ರಭಾ ಆಕೆಯ ಸೌಭಾಗ್ಯಕ್ಕೆ ತನ್ನ ಹಾರ್ದಿಕ ಹರಕೆಯನ್ನು ಸಲ್ಲಿಸಿದಳು.

ರಾಹು ಬಿಟ್ಟ ಚಂದ್ರನಂತೆ ಶೋಭೆಗೊಂಡಿತ್ತು ಶೋಭಾಳ ತುಂಬು ಮುಖ.

× × ×

ಯಾವ ಆಡಂಬರವಿಲ್ಲದೆ ಹಿತಮಿತವಾಗಿ ಕಡಪಟ್ಟ ಬಸವಣ್ಣದೇವರ ಗುಡಿಯಲ್ಲಿ ಮಂಗಳ ತಲೆಗಿಷ್ಟು ಅಕ್ಕೀಕಾಳು ಸುರಿದಾಗ, ಎದೆಭಾರ ಹಗುರಾಗಿತ್ತು. ಶಂಕರಪ್ಪ ಪಾರ್ವತಮ್ಮನವರಿಗೆ ಅವಸರದಲ್ಲಿ ಮುಹೂರ್ತ ನಿಯಮಿಸಿದ್ದು ಮನೆಯ ಮುಂದೆ ಮಾಡಲಿಕ್ಕೆ ಆಗಿರಲಿಲ್ಲ

ಮರುವಾರ ಸಂಪ್ರದಾಯದಂತೆ, ಶಹಪುರದಲ್ಲಿ ಹೆಣ್ಣನ್ನು ಮನೆತುಂಬಿಸಿಕೊಳ್ಳುವ ಕಾರ್ಯ ಮುಗಿದ ಬಳಿಕ ಮರುದಿನ ಬೆಂಗಳೂರಿಗೆ ಪ್ರಯಾಣ ಬೆಳೆಸಿದ್ದರು. ಮಲ್ಲಿಕಾರ್ಜುನ-ಶೋಭಾ. ಒಂದು ತಿಂಗಳ ರಜೆಯಲ್ಲಿ ದಕ್ಷಿಣ ಭಾರತ ಸುತ್ತು ಹಾಕಬೇಕೆಂಬಾಸೆ ಮಲ್ಲಿಕಾರ್ಜುನನಿಗೆ "ಎಡಪಕ್ಕ"ವನ್ನು ಭದ್ರ ಮಾಡಿಕೊಂಡು.

ಹೊಸ ಪ್ರಯಾಣದ ಸವಿ ಅಪರೂಪವಾಗಿ ಕಂಡಿತ್ತು ನವವಧುವಿಗೆ. ಹೊಟೆಲುಗಳ ಸ್ವಾಗತ-ಸತ್ಕಾರ ವಿನೂತನ ಆಕೆಗೆ.

ಉಟ ಮುಗಿಸಿ ಕೋಣೆಗೆ ಬಂದು ವಿಶ್ರಮಿಸಿದ ಬಳಿಕ ಕಾಲು ನೋವು ಕಂಡುಬಂದಿತು. ವೃಂದಾವನ ಹೂದೋಟ ಹತ್ತೆಂಟು ಸಲ ಸುತ್ತಿದರೂ— ಕಾಲುಗಳಿದ್ದ ಕಲ್ಪನೆ ಬಂದಿರಲಿಲ್ಲ. ಈಗ ಮೃದುವಾಗಿ ಕಾಲು ತಿಕ್ಕಿಕೊಳ್ಳುತ್ತ. ಯಾವುದೋ ಸವಿನೆನಹುವಿನಲ್ಲಿ ಮುಳುಗಿದ್ದಳು ಶೋಭಾ. ರೇಡಿಯೋ ಸಂಗೀತ ಕೇಳುತ್ತಿದ್ದ ಗಂಡ ತನ್ನ ಮುಖವನ್ನೇ ನಿಟ್ಟಿಸುತ್ತಿರುವುದನ್ನು ಕಂಡು ಇನ್ನೂ ಲಜ್ಜೆ ಶೋಭಾಳಿಗೆ. ಅನತಿದೂರದಿಂದ ಅಪರಿಚಿತ-ಪರಿಚಿತಳೆಂತಿರುವ ಹೆಂಡತಿಯ ಮುಗ್ಧ ಸೌಂದರ್ಯ ಸ್ವಾದಿಸುವುದರಲ್ಲಿಯೂ ಒಂದು ರೀತಿಯ ಮಹದಾನಂದ ಮಲ್ಲಿಕಾರ್ಜುನನಿಗೆ.

ಶೋಭಾ ಮೆದುವಾಗಿ ನಕ್ಕಳು.

"ಅದೇನು ನಗೆ?"- ಸಮೀಪಿಸಿದ ಮಲ್ಲಿಕಾರ್ಜುನ.

"ಕುದುರೆ ಮುಖದವಳು ಅದೇಕೆ ಬೇಡವಾದಳೆಂದು..." ಮೆಲ್ಲಗೆ ತುಟಿಕಚ್ಚಿದಳು.

"ಆ ನಿನ್ನ ಪ್ರತಿಸ್ಪರ್ಧಿಯೇ! ಅದೂ ಒಂದು ಕತೆ. ಕೇಳುವ ಬಯಕೆ ಕಾಣುತ್ತದೆ! ಅಲ್ಲವೆ? ಕೇಳು. ಆಕೆಯ ಅಣ್ಣನ ಮದುವೆ ಮುಗಿಸಿ. ನಾನೂ ಇಚಲಕರಂಜಿಗೆ ಹೋಗಿದ್ದೆ. ಹೊಸ ದಂಪತಿಗಳು ಪನ್ಹಾಳಾಗಡಕ್ಕೆ ಕಾರಿನಲ್ಲಿ ನಡೆದಾಗ,ಆನಂದಪ್ಪ ನನಗೂ ಹೋಗಲು ಹೇಳಿದ, ಮಗಳನ್ನೂ ಕಳಿಸಿದ. ಐತಿಹಾಸಿಕ ಪ್ರಸಿದ್ಧ ಆ ಕೋಟೆಯನ್ನು ನೋಡುವ ಬಯಕೆ ಮೊದಲಿನಿಂದಲೂ ಇತ್ತು. ಹೋದೆವು. ತಿರುಗಾಡುತ್ತ ಬಾಘ್‌ದರವಾಜಾ ಹತ್ತಿರ ನಡೆದಾಗ ಆಕೆ ಕಾಲು ಜಾರಿ ಕೆಳಗೆ ಉರುಳಿದಳು..."

"ಆಗ ನೀವೊಬ್ಬರೆ ಇದ್ದಿರಬೇಕು..."- ಮುಖಕ್ಕೆ ಸೆರಗು ಹಾಕಿಕೊಂಡು ನಕ್ಕಳು ಶೋಭಾ.

"ನಿನ್ನ ಮಾತಿನ ಅರ್ಥವಾಯಿತು. ಎಷ್ಟಾದರೂ ನೀನೂ ಹೆಂಗಸು ನೋಡು. ಸಂಶಯ ಅಲ್ಲವೆ..."

-ನಕ್ಕು ಆಕೆಯ ಕೆನ್ನೆ ಹಿಂಡಿ ಕಥೆ ಮುಂದುವರಿಸಿದ:

"ಆ ದಂಪತಿಗಳೂ ಅಲ್ಲಿಯೇ ಇದ್ದರು. ಆಕೆಯನ್ನು ಎತ್ತುವ ಅವಸರದಲ್ಲಿ ,ಆಕೆಯ ಮೊಳಕಾಲ ಕೆಳಗೆ ಬಿಳೇ ಕಲೆ ಕಂಡಿತು. ಅದೇನೆಂದು ಸಹಜ ಕೇಳಿದಾಗ, 'ಚಿಕ್ಕವಳಿದ್ದಾಗಿನ ಗಾಯದ ಗುರುತು' ಎಂದು ತಿದ್ದಿದ ಆಕೆಯ ಅಣ್ಣ. ಡಾಕ್ಟರನಾದ ನನಗೇ ಕಲಿಸಲು ಬಂದ ಅವರ ರೀತಿ ಕಂಡು ನನಗೆ ನಗು ಬಂತು. ಆಕೆ ಯಾವಾಗಲೂ ಕ್ಲೋಜ್ ಕಾಲರ್ ಬ್ಲೌಜ್ ಧರಿಸುವ ಉಪಾಯವೂ ತಿಳಿಯಿತು. ತೊನ್ನುರೋಗ ಆಕೆಯ ಕಾಲಿನಂತೆ ಕುತ್ತಿಗೆಗೂ ಹಬ್ಬಿತ್ತು."

ಶೋಭಾ ಮರೆಯಾಗಿ ದೊಡ್ಡ ಕಣ್ಣು ಬಿಡುತ್ತ ಆಲಿಸುತ್ತಿದ್ದಳು.

"ನೀವು ಅವರ ಸಂಬಂಧ ತಿರಸ್ಕರಿಸಿದಾಗ, ಮಾತ್ಸರ್ಯದಿಂದ ನಿನ್ನ ಮೇಲೆ ಬಿಳುಪಿನ ಆರೋಪವಿಟ್ಟದ್ದು ಆ ಸಂದರ್ಭದಲ್ಲಿ ನನಗೆ ನೆನಪಾಯಿತು. ಅದು ತಮ್ಮ ಮಗಳಿಗಿದ್ದು, ಸುಲಭವಾಗಿ ಅದೇ ಆರೋಪ ನಿನಗೆ ತಿರುಗಿಸಿದರು."

"ಅದಾವ ಮಾತಿನಿಂದ ಹೇಳುವಿರಿ-?"

"ಡಾಕ್ಟರನಾದ ನನಗೆ ಹೊಸದಾಗಿ ಸೈಕಾಲಜಿ ಅಭ್ಯಾಸ ಮಾಡಬೇಕಿಲ್ಲ."

"ತಿಳಿಯಿತು ನಿಮ್ಮ ಸೈಕಾಲಜಿ. ಅಂದು ಬಸ್ಸಿನಲ್ಲಿ ಭೇಟಿಯಾದ ಬಳಿಕ..."

"ಆ ಭೇಟಿಯೇ ತಂದೆಯವರನ್ನು ಮತ್ತೆ ನಿಮ್ಮನೆಗೆ ಕಳಿಸುವಂತೆ ಮಾಡಿತು. ಅಂದು ಮಿರಜದಿಂದ ಸಾಂಗಲಿಗೆ ಬರುವತನಕ, ಬದಿಯಲ್ಲಿದ್ದ ನಿನ್ನ ಹೃದಯದ ಪ್ರತಿಯೊಂದು ಸ್ಪಂದನ ಅಭ್ಯಾಸ ಮಾಡಿ..."

"ಸ್ಟೆಥೆಸ್ಕೋಪ್ ಇಲ್ಲದೆಯೆ?"-ಹುಬ್ಬು ಎತ್ತರಿಸಿ ಅಚ್ಚರಿಗೊಂಡವಳಂತೆ, ಕಣ್ಣು ಇನ್ನೂ ದೊಡ್ಡದಾಗಿ ಮಾಡಿದಳು.

"ಹೆಣ್ಣಿನ ಹೃದಯ ಪರೀಕ್ಷಿಸಲು ಅದೇನೂ ಕಾರಣವಿಲ್ಲ. ಕಣ್ಣಿದ್ದರಾಯಿತು ಸಾಕು. ಈ ಗೊಂಬೆ ಮತ್ತೆಲ್ಲಿ ಕೈತಪ್ಪಿ ಹೋಗುವದೋ ಎಂಬ ಭಯದಿಂದ ಮುಂದಿನ ಏರ್ಪಾಡು ಮಾಡಬೇಕಾಯಿತು."

"ಅದೆಲ್ಲಿಗೆ ಹೋಗುತ್ತಿತ್ತು? ಇನ್ನೆಲ್ಲಿ ಹೋಗಬಾರದೆಂದೇ ನೀವು 'ಸಿಕ್ಕಾ' ಬೇರೆ ಹಾಕಿದ್ದೀರಲ್ಲ..."

-ಹುಸಿ ಮುನಿಸು ಮೂಗಿನ ತುದಿಯಿಂದ ಮುಖತುಂಬ ಪಸರಿಸಿತು.

"ನೀ ಹೇಳುವದೂ ಸರಿ. ಒಮ್ಮೊಮ್ಮೆ ತಿಳಿಯದೆ ಮಾಡಿದ ಅಪರಾಧಗಳು ಅನಿರೀಕ್ಷಿತ ಕಲ್ಯಾಣ ಮಾಡುತ್ತವೆ ಆ ಮುದ್ರೆ ಮೂಡಿದ್ದರಿಂದಲೇ ಈ ಗೊಂಬೆ ಮತ್ತೆಲ್ಲಿ ಹೋಗಲಿಲ್ಲ. ಕೈತಪ್ಪಿ ಹೋಗಿದ್ದರೆ ನನಗೆ ತುಂಬಾ ಹಾನಿಯಾಗುತ್ತಿತ್ತು."

"ಹುಂ. ಸೋಲನ್ನರಿಯದ ಡಾಕ್ಟರರು! ಇರಲಿ ಆಗ ಮೇಲಿಂದ ಮೇಲೆ ಸಾಂಗ್ಲಿಗೇಕೆ ಬರುತ್ತಿದ್ದಿ?"

"ಅಂದು ಹಾಸ್ಪಿಟಲ್ ಕಂಪೌಂಡ ಹೊರಗೆ ಕಳ್ಳರಂತೆ ನಿಂತು ಅದೇನೋ ಮೂಕ ಸಂದೇಶ ಕೊಟ್ಟಿದ್ದೆಯಲ್ಲ!"

ಇನ್ನಿಷ್ಟು ನಾಚಿ ಶೋಭಾ ಮುಖಮುಚ್ಚಿಕೊಳ್ಳಲು ಯತ್ನಿಸುತ್ತಿದ್ದರೆ-ಮಲ್ಲಿಕಾರ್ಜುನನ ಬಿಗಿಯಾದ ಬಂಧನದಿಂದ ಆಕೆಯ ಕೈಗಳು ಸುಲಭವಾಗಿ ಪಾರಾಗಬೇಕಲ್ಲ! ಹೇಗೂ ಆತ ಸೋಲನ್ನರಿಯದ ಡಾಕ್ಟರನಲ್ಲವೆ ?

ವೃಂದಾವನದ ಕಾವೇರಿ ಕಟ್ಟೆಯಲ್ಲಿನ ಬುಗ್ಗೆ ನೆಗೆದಂತೆ, ಇನ್ನೂ ಹೆಚ್ಚಿಗೆ ಚಿಮ್ಮುತ್ತಿತ್ತು ಸಂತಸದ ಸುಧೆಯಿಂದ-ನವವಧುವಿನ ಎದೆಬುಗ್ಗೆ.

ದಿ ಮೈಸೂರು ಆಯರ್ನ್ ಮತ್ತು ಸ್ಟೀಲ್ ಲಿಮಿಟೆಡ್

ಭದ್ರಾವತಿ

ತಂತಿ: '**ಮೈಸಯರ್ನ್**' ಫೋನ್: **೨೭**

ದಕ್ಷಿಣ ಭಾರತದ ಬರ್ಮಿಂಗ್‌ಹ್ಯಾಮ್ ಎಂದು ಪ್ರಸಿದ್ಧಿ ಹೊಂದಿದ ಭದ್ರಾವತಿಯಲ್ಲಿ ಸ್ಥಾಪಿತವಾದ **ದಿ ಮೈಸೂರು ಅಯರ್ನ್ ಮತ್ತು ಸ್ಟೀಲ್ ಲಿ**, ಕಾರಖಾನೆಯು ಮೈಸೂರು ರಾಜ್ಯದಲ್ಲಿ ಪ್ರಪ್ರಥಮ ಮತ್ತು ಅಗ್ರಗಣ್ಯ ಉದ್ದಿಮೆಯಾಗಿದೆ. ಉಕ್ಕಿನ ಉತ್ಪಾದನೆಗೆ ಅತ್ಯವಶ್ಯವಾದ ವಿದ್ಯುತ್ ಶಕ್ತಿಯಿಂದ ಕಬ್ಬಿಣ ಅದಿರು ಕರಗಿಸಿ **'ಪಿಗ್ ಆಯರ್ನ್'**ದ ಉತ್ಪಾದನೆಯನ್ನು ಉತ್ಕೃಷ್ಟಗುಣದ **'ಚಾರಕೋಲ್ ಪಿಗ್ ಅಯರ್ನ್'**ನ್ನು ಮತ್ತು **'ಫೆರೊಸಿಲಿಕಾನ್'**ನ್ನು ತಯಾರಿಸುವುದೆಂದರೆ ಈ ಕಾರಖಾನೆಯು ಮಾತ್ರ. ಇಲ್ಲಿಯ ಉತ್ಪಾದನೆಯು ಇಡೀ ದೇಶದ ಅಗತ್ಯವನ್ನು ಪೂರೈಸುತ್ತವಲ್ಲದೆ ಯು. ಕೆ, ಯು. ಎಸ್. ಎ., ಹಾಲೆಂಡ್, ಪಶ್ಚಿಮ ಜರ್ಮನಿ, ಜಪಾನ, ಆಸ್ಟ್ರೇಲಿಯಾ ಹಾಗೂ ಇತರ ಅನೇಕ ವಿದೇಶಗಳಿಗೆ ನಿರ್ಯಾತವಾಗುತ್ತಿದ್ದು ರಾಷ್ಟ್ರಕ್ಕೆ ಅತ್ಯಗತ್ಯವಾದ ವಿದೇಶ ವಿನಿಮಯ ಸಂಪಾದನೆಯಲ್ಲಿ ವಿಶಿಷ್ಟ ಪಾತ್ರವನ್ನು ವಹಿಸುತ್ತಿದೆ.

ಅಲಾಯ್ ಮತ್ತು ಸ್ಪೆಶಲ್ ಸ್ಟೀಲ್ ಪ್ಲ್ಯಾಂಟ್ ಆಸ್ಟ್ರಿಯಾದ ಮೆಸರ್ಸ್ ಬೊಹ್ಲರ್ ಮತ್ತು ಕಂ., ಇವರೊಡನೆ ಸಹಕಾರದಿಂದ ಕೆಲಸ ಮಾಡುವದರಿಂದ ಅತಿ ಕ್ಷಿಪ್ರದಲ್ಲಿಯೇ ೭೭೦೦೦ ಟನ್‌ಗಳಷ್ಟು ವಿವಿಧ ಅಲಾಯ ಮತ್ತು ವಿಶಿಷ್ಟ ಉಕ್ಕುಗಳನ್ನು ತಯಾರಿಸಬಹುದಾಗಿದೆ. ಈಗ ವಾರ್ಷಿಕ ಒಟ್ಟು ಮಾರಾಟ ೧೧·೦೪ ಕೋಟಿ ಇರುತ್ತದೆ.

ಕೆಳಗಿನ ಇತರ ವಸ್ತುಗಳನ್ನೂ ಸಹ ' ದಿ ಮೈಸೂರು ಅಯರ್ನ್ & ಸ್ಟೀಲ್ ಲಿ. ಭದ್ರಾವತಿ, ಇಲ್ಲಿ ಉತ್ಪಾದಿಸಲಾಗುತ್ತದೆ—

- **ಮೈಲ್ಡ್ ಸ್ಟೀಲ್ ಸೆಕ್ಶನ್‌ಗಳು**
- **ಬೇಲಿಂಗ್ ಹೂಪಗಳು**
- **ಚಾಮುಂಡಿ ಬ್ರ್ಯಾಂಡ್ ಪೋರ್ಟಲಂಡ್ & ಸ್ಲ್ಯಾಗ್ ಸಿಮೆಂಟ್**
- **ಕಾಸ್ಟ್ ಆಯರ್ನ್ ಪೈಪುಗಳು ಮತ್ತು ಸ್ಪೇಶಲ್‌ಸಳು**
- **ಕ್ಯಾಸ್ಟ್ ಅಯರ್ನ್ ಸ್ಪನ್ ಪೈಪುಗಳು**

ಸ್ಟೀಲ್ ಕಾಸ್ಟಿಂಗ್ಸ್:

- ಮ್ಯಾಂಗನೀಜ್ ಸ್ಟೀಲ್ ಕಾಸ್ಟಿಂಗ್ಸ್
- ಕಾಸ್ಟ್ ಸ್ಟೀಲ್ ಕಾಸ್ಟಿಂಗ್ಸ್
- ಗ್ರಾಯಿಂಡಿಂಗ್ ಮಿಡಿಯಾ
- ಹಾಯ್ ಕಾರ್ಬನ್ ಸಿಲ್ವೇ ಕಾಸ್ಟಿಂಗ್ಸ್
- ಹೀಟ್ ರೆಜಿಸ್ಟಿಂಗ್ ಸ್ಟೀಲ್ ಕಾಸ್ಟಿಂಗಗಳು

ಶಾಖಾ ಕಚೇರಿಗಳು

ಲಕ್ಷ್ಮೀ ಬಿಲ್ಡಿಂಗ್,
ಸರ್ ಪಿ. ಎಂ. ರೋಡ್, ಫೋರ್ಟ್
ಮುಂಬಯಿ—೧
ಫೋನ್: ೨೬೧೩೭೮

ವ್ಹ್ಯಾನಗಾರ್ಡ್ ಹೌಸ್,
೧೧/೧೨ II ಲೈನ್ ಬೀಚ್
ಮದ್ರಾಸ—೧
ಫೋನ್: ೨೩೬೯೭

೧೭೪, ಗಾಂಧೀನಗರ
ಬೆಂಗಳೂರು—೯
ಫೋನ್: ೨೩೮೮೯

ಮಹಾಕವಿ ಕಾಳಿದಾಸನ ಸ್ತ್ರೀ ಪಾತ್ರಗಳು

ಮಹಾಕವಿ ಕಾಳಿದಾಸನ ವೈಯಕ್ತಿಕ ಜೀವನ ಆಂಗ್ಲ ಸಾಹಿತ್ಯದ ಶ್ರೇಷ್ಠ ಕವಿ ಶೇಕ್ಸ್ಪಿಯರನ ಜೀವನದಷ್ಟೇ ನಿಗೂಢವಾಗಿದೆ. ಒಟ್ಟು ಎಷ್ಟು ಜನ ಕಾಳಿದಾಸರಿದ್ದರು ಎಂದು ನಿರ್ಧರಿಸುವದು ಕೂಡ ಸಂಶೋಧಕರಿಗೆ ಸಾಧ್ಯವಿಲ್ಲದಾಗಿದೆ. "ಕಿಮು ಕಾಳಿದಾಸತ್ರಯಿ" ಎಂದು ರಾಜಶೇಖರ ಕವಿ ಹೇಳುತ್ತಿರುವದನ್ನು ನೋಡಿದರ ಕಾಳಿದಾಸ ಹೆಸರಿನ ಮೂವರು ಕವಿಗಳು ಇದ್ದರೆಂದು ತೋರುತ್ತದೆ.

ಕಾಳಿದಾಸನ ಕೃತಿಗಳೆಂದು ಸಂಶೋಧಕರೂ ವಿಮರ್ಶಕರೂ ನಿರ್ಧರಿಸಿರುವ ಕೃತಿಗಳು ಏಳು 'ಋತುಸಂಹಾರ' 'ಮೇಘದೂತ' ಎರಡು ಲಘು ಕಾವ್ಯಗಳು; 'ಕುಮಾರ ಸಂಭವ' ಮತ್ತು 'ರಘುವಂಶ' ಮಹಾಕಾವ್ಯಗಳು; 'ಮಾಲವಿಕಾಗ್ನಿಮಿತ್ರ', 'ವಿಕ್ರಮೋರ್ವಶೀಯ' ಮತ್ತು 'ಅಭಿಜ್ಞಾನಶಾಕುಂತಲ' ನಾಟಕಗಳು. ಈ ಏಳು ಕೃತಿಗಳಲ್ಲಿ ಸಹ ನಾಟಕಗಳನ್ನು ಬರೆದ ಕಾಳಿದಾಸನೂ ಕಾವ್ಯಗಳನ್ನು ಬರೆದ ಕಾಳಿದಾಸನೂ ಬೇರೆಬೇರೆ; ಮತ್ತು ಕಾವ್ಯಗಳಲ್ಲಿಯೂ ರಘುವಂಶದ ಕರ್ತೃವೇ ಬೇರೊಬ್ಬ ಕಾಳಿದಾಸ ಎಂದು ಹಲವಾರು ವಾದವಿವಾದಗಳಿವೆ.

ಮೇಲೆ ಹೇಳಿದ ಏಳು ಕೃತಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಅವುಗಳಲ್ಲಿಯ ಸ್ತ್ರೀ ಪಾತ್ರಗಳು ಇಪ್ಪತ್ತು–ಇಪ್ಪತ್ತೈದಕ್ಕಿಂತ ಕಡಿಮೆಯಾಗುವದಿಲ್ಲ. ತೀರ ಅಮುಖ್ಯ ಪಾತ್ರಗಳನ್ನು ಬಿಟ್ಟು ಪ್ರಧಾನ ಪಾತ್ರದ ನಾಯಿಕೆಯರು ಗೌಣ ಪಾತ್ರದ ಅಪ್ಸರಸಿಯರು, ಆನುಷಂಗಿಕ ಹಿತೈಷಿಣಿಯರು ಇಷ್ಟನ್ನೇ ಎತ್ತಿಕೊಂಡರೂ ಹತ್ತು ಹದಿನೈದು ಪಾತ್ರಗಳಾಗುತ್ತವೆ. ಇವೆಲ್ಲವುಗಳ ಕೂಲಂಕಷ ವಿಮರ್ಶೆಯೂ ಈ ಪುಟ್ಟ ಬರೆಹದಲ್ಲಿ.

"ತಿತೀರ್ಷುರ್ದುಸ್ತರಂ ಮೋಹಾತ್
ಉಡುಪೇನಾಸ್ಮಿ ಸಾಗರಮ್"

(ದಾಟಲಾರದ ಕಡಲನ್ನು ತೆಪ್ಪದೊಳು ದಾಟಲಿಕೆ ಬಯಸುವೆನು ಮರುಳಿನಂತೆ) ಎಂದು ಕಾಳಿದಾಸನೇ ಹೇಳಿರುವಂತ ಹುಚ್ಚು ಹಂಬಲವಾದೀತು.

ವಿಷಯವನ್ನು ಮುಂದುವರಿಸುವ ಮೊದಲು ಓದುಗರ ಅವಗಾಹನೆಗಾಗಿ ಒಂದೆರಡು ವಿವರಗಳನ್ನು ಸ್ಪಷ್ಟಮಾಡುವದು ಅವಶ್ಯ. ಒಂದು ಈ ಸ್ತ್ರೀ ಪಾತ್ರ ಪರಿಚಯವನ್ನು ಎಲ್ಲ ಕೃತಿಗಳ ರಚನೆಯ ಕಾಲಾನುಕ್ರಮವಾಗಿ ತೆಗೆದುಕೊಂಡಿಲ್ಲ ಎರಡು. ಕವಿ ಕೃತಿಗಳಲ್ಲಿ ಕಾವ್ಯ...ನಾಟಕ ಎಂದು ಎರಡು ಭಾಗಗಳನ್ನು ಮಾಡಿಕೊಂಡು ಕಾಲಾನುಕ್ರಮವನ್ನು ಸಾಧಿಸಿದೆ. ಮೂರು: ನಾಯಿಕಾ ಪರಿಚಯದಲ್ಲಿ ರೂಪ, ಗುಣ, ಜೀವನದಲ್ಲಿಯ ಸಮಸ್ಯೆಗಳು ಮತ್ತು ಪರಿಹಾರ ಇಷ್ಟನ್ನೇ ಸ್ಥೂಲವಾಗಿ ವಿವರಿಸಿದೆ.

ಋತುಸಂಹಾರ

ಇದೊಂದು ಲಘುಕಾವ್ಯ. ಭಾರತದಲ್ಲಿ ವರ್ಷ ವರ್ಷವೂ ಚಕ್ರಾಕಾರವಾಗಿ ಬರುತ್ತಿರುವ ವಸಂತ ಗ್ರೀಷ್ಮ ಮುಂತಾಗಿ ಆರು ಋತುಗಳ ಸಮುಯದ ನಿಸರ್ಗವರ್ಣನೆಗಳ ಭಾವಗೀತ ಸಂಕಲನವೆಂದರೂ ಸರಿಯೇ. ಈ ಕವನಗಳಲ್ಲಿ ಕಾಳಿದಾಸನ ಪ್ರತಿಭೆ, ಬಿಗುವು ಬೆಡಗುಗಳು ಒಡೆದು ತೋರುತ್ತಿಲ್ಲವಾದ ಕಾರಣ ಇದು ಕಾಳಿದಾಸ ರಚಿತವಲ್ಲವೆಂದು ಹೇಳುತ್ತಾರೆ. ಇದರಲ್ಲಿ ಗೊತ್ತಾದ ಕತೆಯಿಲ್ಲ. ನಾಯಕ...ನಾಯಿಕೆಯರಿಲ್ಲ ಕವಿಯೊಬ್ಬ ತನ್ನ ಪ್ರೇಯಸಿಯ ಇದಿರಿಗೆ ನಿಸರ್ಗದ ರಮಣೀಯತೆಯನ್ನು ಬಣ್ಣಿಸಿದಂತಿದೆ.

ಮೇಘದೂತ

ಇದು ಸುಂದರವಾದ ಮತ್ತು ಸತ್ತ್ವಪೂರ್ಣವಾದ ಖಂಡಕಾವ್ಯ. ಇದರಲ್ಲಿ ಕತೆ ಬಹಳ ಚಿಕ್ಕದು. ಕುಬೇರನ ಸೇವಕ ಯಕ್ಷನೊಬ್ಬ ತನ್ನ ಮೋಹದ ಮಡದಿಯನ್ನು ಅಗಲಬರಲಾರದ ನಿತ್ಯಕರ್ಮದಲ್ಲಿ ತಪ್ಪುತ್ತಾನೆ. ಕುಪಿತನಾದ ಕುಬೇರ ಶಿಕ್ಷೆಯೆಂದು ಒಂದು ವರ್ಷ ಗಡಿಪಾರು ಶಿಕ್ಷೆಕೊಡುತ್ತಾನೆ. ಗಡಿದಾಟಿ ರಾಮಗಿರಿಯಲ್ಲಿದ್ದ ಯಕ್ಷ ಮೇಘವೊಂದರ ಮೂಲಕ ತನ್ನ ಹೆಂಡತಿಗೆ ಕುಶಲ ಸಂದೇಶವನ್ನು ಕಳಿಸುತ್ತಾನೆ. ಇದಿಷ್ಟೇ ವಸ್ತು ಮಂದಾಕ್ರಾಂತ ವೃತ್ತದ ೧೨೦ ಪದ್ಯಗಳನ್ನು ಒಳಗೊಂಡಿದೆ. ಈ ಕಾವ್ಯದಲ್ಲಿ ಯಕ್ಷಿಯೇ ಕಥಾನಾಯಿಕೆ. ಅದೊಂದೇ ಪ್ರಮುಖ ಸ್ತ್ರೀಪಾತ್ರ.

ತನ್ವೀ ಶ್ಯಾಮಾ ಶಿಖರಿದಶನಾ
ಪಕ್ವಬಿಂಬಾಧರೋಷ್ಠೀ
ಮಧ್ಯೇ ಕ್ಷಾಮಾ ಚಕಿತ ಹರಿಣೀ
ಪ್ರೇಕ್ಷಣಾ ನಿಮ್ನನಾಭಿಃ।

ಶ್ರೀಮತಿ ವನಮಾಲಾ ಆಚಾರ್

ಶ್ರೋಣೀಭಾರಾದಲಸಗಮನಾ
ಸ್ತೋಕನಮ್ರಾ ಸ್ತನಾಭ್ಯಾಂ
ಯಾ ತತ್ರ ಸ್ಯಾತ್ ಯುವತಿ ವಿಷಯೇ
ಸೃಷ್ಟಿರಾದ್ಯೇವ ಧಾತುಃ ।

ಈ ಪಾತ್ರದಲ್ಲಿ ಯಕ್ಷ ಪತಿಪರಾಯಣೆಯಾದ ಸುಂದರ ಸ್ತ್ರೀ ಎನ್ನುವದು ಎದ್ದು ಕಾಣುತ್ತದೆ. ಯಕ್ಷ ಮನದನ್ನೆಯನ್ನಗಲಿ ಬಹುದೂರ ಹೋಗಿದ್ದಾನೆ. ಯಕ್ಷಿಯ ದೇಹ ಅಲಕಾವತಿಯಲ್ಲಿದೆ. ಮನಸ್ಸು ಮಾತ್ರ ಪತಿಯನ್ನು ಹಿಂಬಾಲಿಸಿದೆ. ಆಕೆಯ ದೈನಂದಿನ ಚಟುವಟಿಕೆಗಳಲ್ಲಿ ಪತಿಪರಾಯಣತೆ ಎದ್ದು ಕಾಣುತ್ತದೆ. ಸ್ತ್ರೀಯ ಘನತೆಗೆ ಸೌಂದರ್ಯವೊಂದೇ ಸಾಲದು. ಸೌಂದರ್ಯಕ್ಕೆ ಜೊತೆಯಾಗಿ ಸದ್ಗುಣಗಳೂ ಬೇಕು. ಪತಿಪರಾಯಣತೆ ಪ್ರಥಮ ಸದ್ಗುಣ. ಈ ಬಗೆಗೆ ಕಾಳಿದಾಸ ಯಕ್ಷನ ಸಂದೇಶದಲ್ಲಿ ದೂತನಾದ ಮೇಘಕ್ಕೆ ಹೀಗೆ ಹೇಳಿಸಿದ್ದಾನೆ:

"ಅವಳು ಪತಿವ್ರತೆ. ಪತಿಭಕ್ತಿಪರಾಯಣೆ ನನ್ನ ಅಗಲಿಕೆಯಿಂದ ಕಂದಿ ದುಃಖದಿಂದ ಬೆಂದು ಸೊರಗಿ ಹೋಗಿರಬಹುದು. ಅತ್ತು ಅತ್ತು ಅವಳ ಕಣ್ಣು ಕೆಂಪಾಗಿರಬಹುದು. ನಿಟ್ಟುಸಿರಿನ ಬಿಸಿಯಿಂದ ತುಟಿ ಬಣ್ಣಗೆಟ್ಟಿರಬಹುದು. ಅಲಂಕಾರವಿಲ್ಲದೆ ಮಾಸಲು ಬಟ್ಟೆಯನ್ನು ಉಟ್ಟಿರಬಹುದು. ನೀನು ಅಲ್ಲಿ ಹೋದಾಗ ಪೂಜೆ ಮಾಡುತ್ತಿದ್ದಾಳು. ನನ್ನ ಚಿತ್ರವನ್ನು ಬರೆದು ನೋಡುತ್ತಿರಬಹುದು. ಪಂಜರದಲ್ಲಿರುವ ಗಿಳಿಯೊಡನೆ ನನ್ನನ್ನೇ ಕುರಿತು ಮಾತನಾಡುತ್ತಿರಬಹುದು ಅಥವಾ ನನ್ನ ಬಗೆಗೆ ತಾನೇ ರಚಿಸಿದ ಹಾಡನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ವೀಣೆಯಲ್ಲಿ ನುಡಿಸುತ್ತಿರುವಾಗ ಅವಳ ಕಂಬನಿಯಿಂದ ತೋಯ್ದು ತಂತಿಗಳು ಸರಿಯಾಗಿ ಪ್ರತಿಕ್ರಿಯಿಸದಿರಲು ನಿರಾಶೆಯಾಗಿ ಮೂರ್ಛೆ ಹೋಗಿರಬಹುದು. ಇಲ್ಲವೆ ನನ್ನ ಆಗಮನದ ದಿವಸಗಳು ಎಷ್ಟು ಉಳಿದವು, ಎಂದು ಎಣಿಕೆ ಹಾಕುತ್ತಾ ಹೊಸತಿಲ ಮೇಲೆ ಹೂಗಳನ್ನಿಡುತ್ತಿದ್ದಾಳು. ಇಲ್ಲವೆ ಕೃಷ್ಣಪಕ್ಷದ ಕೊನೆಕೊನೆಗೆ ಪೂರ್ವದಿಕ್ಕಿನಲ್ಲಿ ಎಲ್ಲಿಯೋ ಒಂದು ಕಡೆ ಮಸಕಾಗಿ ಕಾಣುವ ಚಂದ್ರನಂತೆ ಕಳೆಗೆಟ್ಟು ಮಲಗಿರಬಹುದು. ಬಸವಳಿದು ನಿದ್ದೆ ಹೋಗಿದ್ದರೆ ನಿನ್ನ ಗುಡುಗಿನಿಂದ ಅವಳ ನಿದ್ದೆಯನ್ನು ಕೆಡಿಸಬೇಡ. ಅವಳನ್ನು ಮೃದುವಾಗಿ ಎಚ್ಚರಿಸಿ ನೀನು ನನ್ನ ಗೆಳೆಯನೆಂದೂ, ನಾನು ಸುಖವಾಗಿರುವೆನೆಂದೂ ತಿಳಿಸು. ಈ ನನ್ನ ಪ್ರಿಯವಾರ್ತೆಯೇ ಅವಳಿಗೆ ಬದುಕಿನ ಸಂಜೀವನವಾದೀತು........"

ಕುಮಾರಸಂಭವ

ಸಂಸ್ಕೃತದ ಪಂಚ ಮಹಾಕಾವ್ಯಗಳಲ್ಲಿ ಕುಮಾರಸಂಭವ ಕಾವ್ಯವೂ ಪರಿಗಣಿತವಾಗಿದೆ. ತಾರಕಾಸುರನ ಹಾವಳಿಯಿಂದ ಸಂತ್ರಸ್ತವಾದ ಸಮಸ್ತ ಲೋಕಗಳನ್ನು ಉದ್ಧರಿಸುವ ಸಲುವಾಗಿ ಪರಶಿವ—ಪಾರ್ವತಿಯರ ವಿವಾಹವಾಗುವದು. ಅದರಿಂದ ಕುಮಾರಸ್ವಾಮಿಯ ಉತ್ಪತ್ತಿ. ಮತ್ತು ಆತನಿಂದ ತಾರಕಾಸುರನ ಸಂಹಾರ ಇದಿಷ್ಟು ಕಾವ್ಯದ ತಿರುಳು.

ಇದರಲ್ಲಿ ಮುಖ್ಯವಾದ ಸ್ತ್ರೀಪಾತ್ರಗಳು: ಪಾರ್ವತಿದೇವಿ ಮತ್ತು ರತಿದೇವಿ. ಗೌಣಪಾತ್ರಗಳೆಂದರೆ ಪಾರ್ವತಿಯ ಸಖಿಯರು.

ಪಾರ್ವತೀದೇವಿ

ಸೌಂದರ್ಯದ ಮೂರ್ತಿಮಂತ ಅವತಾರವೇ ಪಾರ್ವತೀದೇವಿ ಎಂದು ಶಾಸ್ತ್ರಪುರಾಣಗಳು ಬಣ್ಣಿಸಿವೆ. ಕಾಳಿದಾಸನಿಗಂತೂ ಅವಳು ತನ್ನ ಇಷ್ಟದೇವತೆಯಾದ ಕಾಳೀಮಾತೆಯ ಸೌಮ್ಯ ಸ್ವರೂಪ. ಅದರಿಂದ ಅವನ ಭಕ್ತಿಯ ಹೊನಲು ಉಕ್ಕೇರಿ ಹರಿದಿದೆ.

ಹಿಮವಂತ ರಾಜನಿಗೂ ಮೇನಕಾ ರಾಣಿಗೂ ಮಗಳಾದ ಪಾರ್ವತಿಯ ಶೈಶವ ಸೌಂದರ್ಯವನ್ನು ಬಣ್ಣಿಸುವಾಗ ಆ ಸುಂದರ ಶಿಶುವಿನ ತಾಯ್ತಂದೆಗಳು ಕೂಡಾ ಹೇಗೆ ಧನ್ಯರಾದರು ಎಂಬುದನ್ನು ಸೊಗಸಾಗಿ ಬಣ್ಣಿಸಿದ್ದಾನೆ. "ತೊಳತೊಳಗುವ ಕಾಂತಿಯಿಂದ ಬೆಳಗುವ ದೀಪದಂತೆ, ಮಂದಾಕಿನಿಯಿಂದ ಮೆರಗುವಡೆದ ಗಗನದಂತೆ, ಸುಸಂಸ್ಕೃತವಾಣಿಯಿಂದ ವಿಭೂಷಿತನಾದ ವಿದ್ವಾಂಸನಂತೆ ಆ ಹಿಮವಂತನೂ ಪವಿತ್ರನೂ ಪರಿಶೋಭಿತನೂ ಆದನು."

ರವಿಕಿರಣಗಳಿಂದ ಅರಳಿದ ಅರವಿಂದದಂತೆ ಪಾರ್ವತಿಗೆ ಯೌವನ ಪ್ರಾಪ್ತವಾಗುತ್ತದೆ. ಅವಳ ನಖಶಿಖಾಂತ ಅಂಗಾಂಗಗಳನ್ನು ಕಾಳಿದಾಸ ತನ್ನದೇ ಆದ ವಾಗ್ವೈಖರಿಯಲ್ಲಿ ಬಣ್ಣಿಸಿದ್ದಾನೆ.

"ಚೆಲುವಿಕೆಯನ್ನೆಲ್ಲಾ ಒಂದೇ ಕಡೆ ಒಟ್ಟಾಗಿ ನೋಡಬೇಕೆಂಬ ಹಬ್ಬಯಕೆಯಿಂದ ಬ್ರಹ್ಮದೇವ ಸರ್ವಶ್ರೇಷ್ಠ ಉಪಮಾನ ವಸ್ತುಗಳನ್ನು ಸಂಗ್ರಹಿಸಿಕೊಂಡು ಅವುಗಳನ್ನು ತಕ್ಕ ತಕ್ಕ ಸ್ಥಳಗಳಲ್ಲಿ ಸರಿಯಾದ ಉಪಮಾನಗಳನ್ನು ಹೊಂದಿಸಿ ಇವಳನ್ನು ರಚಿಸಿದನೋ ಏನೋ!"

ಪಾರ್ವತಿ ಪೂರ್ವಜನ್ಮದಲ್ಲಿ ದಕ್ಷಬ್ರಹ್ಮನ ಮಗಳು ದಾಕ್ಷಾಯಣಿಯಾಗಿ ಶಿವನನ್ನು ಮದುವೆಯಾಗಿರುತ್ತಾಳೆ. ತಂದೆ ಗಂಡನನ್ನು ಯಜ್ಞಕ್ಕೆ ಕರೆಸದೆ ಅಪಮಾನ ಮಾಡಿದನೆಂದು ದಾಕ್ಷಾಯಣಿ ಅಗ್ನಿಕುಂಡದಲ್ಲಿ ಸುಟ್ಟುಕೊಂಡು ಸತ್ತ ಮೇಲೆ ಪರಶಿವ ವಿರಾಗಿಯಾಗಿ ಯೋಗಸಮಾಧಿಯಲ್ಲಿರುತ್ತಾನೆ. ಆ ಸಮಯದಲ್ಲಿ ಅಕಸ್ಮಾತ್ ಗಿರಿರಾಜನಲ್ಲಿ ಬಂದ ನಾರದ ಗಿರಿಜೆಯ ಪೂರ್ವಜನ್ಮದ ವಿವರಗಳನ್ನು ತಿಳಿಸಿ ಪರಮೇಶ್ವರನಿಗೇ ಮದುವೆ ಮಾಡಬೇಕೆಂದು ಹೇಳುತ್ತಾನೆ. ಶಿವನ ಯೋಗಸಮಾಧಿಯನ್ನು ಇಳಿಸಿ ಅವನನ್ನು ಮದುವೆಗೆ ಮನವೊಲಿಸುವದಕ್ಕಾಗಿ ಹಿಮವಂತ ಮಗಳನ್ನು ಪರಮೇಶ್ವರನ ಸೇವೆಗೆ ನಿಲ್ಲಿಸುತ್ತಾನೆ.

ಪಾರ್ವತಿ ಮಹಾರಾಜನ ಮಗಳಾದರೂ ಸಾತ್ವಿಕ ವೇಷದಿಂದಲೇ ಶಿವನ ಸೇವೆಗೆ ತೊಡಗುತ್ತಾಳೆ. ಕ್ರಮಕ್ರಮವಾಗಿ ಶಿವ ಬಹಿರ್ಮುಖನಾಗುತ್ತ ಪಾರ್ವತಿಯತ್ತ ಒಲಿಯುತ್ತಿರುತ್ತಾನೆ.

ಪಾರ್ವತಿ ಶಿವನ ಸನ್ನಿಧಿಯಲ್ಲಿದ್ದಾಗ ಸಮಯ ಸಾಧಿಸಿ ಕಾಮ ಹೂಬಾಣಗಳನ್ನು ತೊಡೆಯುತ್ತಾನೆ ಶಿವನಿಗೆ. ತನ್ನ ತಪಸ್ಸನ್ನು ಕೆಡಿಸಿದ ಕಾಮನನ್ನು ಶಿವ ಸುಟ್ಟು ಬೂದಿ ಮಾಡುತ್ತಾನೆ. ತನ್ನ ಸೌಂದರ್ಯ, ಸೇವೆಗಳಾಗಲಿ, ತಂದೆಯ ಬಿನ್ನಹವಾಗಲಿ ಫಲಕಾರಿಯಾಗಲಿಲ್ಲವೆಂದು ಪಾರ್ವತಿಯ ಸಾತ್ವಿಕ ಅಭಿಮಾನಕ್ಕೆ ಪೆಟ್ಟು ಕೊಟ್ಟಂತೆ ಆಗುತ್ತದೆ. ಪರಿಣಾಮವಾಗಿ ಮಹಾದೇವನ ಮನಸ್ಸೊಲಿಸಲು ಗೌರೀಶಿಖರದಲ್ಲಿ ಕಠಿಣ ತಪೋನಿರತೆಯಾಗುತ್ತಾಳೆ. ವಾಯುಸೇವನಮಾತ್ರದಿಂದಲೇ ಜೀವಧಾರಣೆ ಮಾಡಿ ತಪಸ್ಸನ್ನಾಚರಿಸುವದರಿಂದಲೇ ಪಾರ್ವತಿ ದೃಢನಿರ್ಧಾರದ ಆತ್ಮಾಭಿಮಾನದ ಸ್ತ್ರೀ ಎಂದು ಗೊತ್ತಾಗುತ್ತದೆ. ಪಾರ್ವತಿಯ ಸಾತ್ವಿಕ ಅಭಿಮಾನ ಸಂಯಮಗಳಿಗೆ ಮನಸೋತು ಪರಶಿವ ಮೊದಲು ಕಪಟವೇಷದಿಂದ ಬಂದು ಬೇಕೆಂದೇ ಶಿವನನ್ನು ಜರಿದು ಮಾತನಾಡಿ ಅವಳನ್ನು ಸಿಟ್ಟಿಗೆಬ್ಬಿಸಿ ಕೊನೆಗೆ ನಿಜರೂಪದಿಂದ ಪ್ರಕಟನಾಗಿ.

"ಅದ್ಯ ಪ್ರಭೃತಿ ಅವನತಾಂಗಿ ತವಾಸ್ಮಿ ದಾಸಃ ಕ್ರೀತಃ ತಪೋಭಿಃ" (ನಿನ್ನ ತಪಸ್ಸಿನ ಬೆಲೆಯಿಂದ ಕೊಂಡುಕೊಂಡ ದಾಸ ನಾನು) ಎಂದು ಹೇಳುತ್ತಾನೆ. ಇಲ್ಲಿಗೆ ಪಾರ್ವತಿಯ ದೃಢನಿರ್ಧಾರದ ಪರಿಣಾಮವಾಗಿ ಅವಳ ಪ್ರೇಮಾರಾಧನೆ ಫಲಿಸಿತು.

ರತಿದೇವಿ

ರತಿದೇವಿಯ ಸೌಂದರ್ಯವರ್ಣನೆಗೆ ಇಲ್ಲಿ ಅವಕಾಶವಿಲ್ಲ. ಆದರೆ ಲೋಕದಲ್ಲಿ ಸ್ತ್ರೀ ಸೌಂದರ್ಯದ ಸರ್ವಶ್ರೇಷ್ಠ ಉಪಮಾನಕ್ಕೆ "ರತಿಯಂತೆ" ಎಂದು ಹೇಳುವದುಂಟು. ರತಿದೇವಿ ಸೌಂದರ್ಯಕ್ಕೆ ಶೋಭಿಸುವಂತೆ ಪತಿಭಕ್ತಿಪರಾಯಣೆಯೂ ಆಗಿದ್ದಾಳೆ. ಹರನ ಉರಿಗಣ್ಣಿನಿಂದ ಕಾಮದಹನವಾಗುತ್ತಲೇ ರತಿ ಮೂರ್ಛಿತಳಾಗುತ್ತಾಳೆ. ಅದೇ ದುಃಖದಲ್ಲಿಯೇ ಮದನನ ಮಿತ್ರನಾದ ವಸಂತನನ್ನು ನೆನೆದು, "ವಸಂತಾ ನಿರಾಧಾರಳಾದ ನನಗೆ ಅಗ್ನಿಪ್ರವೇಶಕ್ಕೆ ಅನುಕೂಲ ಮಾಡಿ ಕೊಟ್ಟು ನನ್ನನ್ನು ಪತಿಯೊಡನೆ ಕೂಡಿಸು" ಎಂದು ಕೇಳುತ್ತಾಳೆ. ಪತಿಯ ಬಗೆಗೆ ರತಿಯ ಅನನ್ಯ ಭಕ್ತಿಯನ್ನು ಕವಿ ಕರುಣ ರಮಣೀಯವಾಗಿ ಚಿತ್ರಿಸಿದ್ದಾನೆ.

ಕುಮಾರಸಂಭವದ ಚತುರ್ಥ ಸರ್ಗದ "ರತಿವಿಲಾಪ" ಇಡೀ ಕಾವ್ಯದಲ್ಲಿಯೇ ಹೃದ್ಯಭಾಗವಾಗಿದೆ.

ರಘುವಂಶ

ರಘುವಂಶದಲ್ಲಿ ಮುಖ್ಯವಾದ ಸ್ತ್ರೀಪಾತ್ರಗಳೆಂದರೆ ದಿಲೀಪರಾಜನ ಹೆಂಡತಿ ಸುದಕ್ಷಿಣಾದೇವಿ. ವಿದರ್ಭ ರಾಜಕುಮಾರಿಯೂ ಅಜಮಹಾರಾಜನ ಹೆಂಡತಿಯೂ ಆದ ಇಂದುಮತಿ ಮತ್ತು ಲೋಕಪಾವನೆಯಾದ ಶ್ರೀರಾಮಚಂದ್ರನ ಪತ್ನಿ ಸೀತಾಮಾತೆ

ಸುದಕ್ಷಿಣಾದೇವಿ: ಸುದಕ್ಷಿಣಾದೇವಿ ಪರಮ ಪತಿವ್ರತೆ; ಸುಂದರಿಯೂ ಅಹುದು. ಮಕ್ಕಳಿಲ್ಲದ ಕೊರಗಿನಿಂದ ವ್ರತನಿಯಮಗಳನ್ನು ಪಾಲಿಸಿ ರಘುವಿಗೆ ಜನ್ಮವಿತ್ತು ಜೀವನದ ಸಾರ್ಥಕತೆ ಪಡೆಯುತ್ತಾಳೆ.

ಇಂದುಮತಿ: ಇಂದುಮತಿಯ ಸೌಂದರ್ಯ ವರ್ಣನೆ ಕವಿ ಹೊಸದೊಂದು ಹಾದಿಯನ್ನೇ ಹಿಡಿದಿದ್ದಾನೆ. ಅವಳ ಅಂಗಾಂಗಗಳನ್ನು ವರ್ಣಿಸುವ ಬದಲು ಅವಳ ಸ್ವಯಂವರಕ್ಕೆ ಭಾರತದ ನಾನಾ ಭಾಗಗಳಿಂದ ಬಂದ ಅರಸುಗಳನ್ನು ವರ್ಣಿಸಿದ್ದಾನೆ. ರೂಪ ಗುಣ ಶ್ರೇಷ್ಠರಾದ ಇಂಥ ಹಲನಾರು ಜನ ಅರಸರು ಇಂದುಮತಿಗೆ ಮರುಳಾಗಬೇಕಾದರೆ ಅವಳು ರತಿಯನ್ನೂ ಮೀರಿಸುವ ಚೆಲುವನ್ನೂ ಪಡೆದಿರಬೇಕೆಂದು ಸಹಸಾ ಊಹಿಸಬಹುದಾಗಿದೆ. ಸ್ವಯಂವರಕ್ಕೆ ಮಗಧ, ಅಂಗ, ಅವಂತಿ, ಮಾಹಿಷ್ಮತಿ, ಶೂರಸೇನ, ಕಳಿಂಗ, ಪಾಂಡ್ಯ ಮೊದಲಾದ ದೇಶಗಳ ಅರಸರು ಬಂದಿದ್ದರು. ಇಂದುಮತಿ ಸ್ವಯಂವರ ಮಂಟಪಕ್ಕೆ ಬಂದಾಗ ಅವರೆಲ್ಲರ ಸ್ಥಿತಿ ಏನಾಯಿತು, ಹೇಗಾಯಿತು ಎಂಬುದನ್ನು ಕವಿ ಸ್ವಲ್ಪದರಲ್ಲೇ ಸ್ವಾರಸ್ಯವಾಗಿ ಹೀಗೆ ಚಿತ್ರಿಸಿದ್ದಾನೆ-

ತಸ್ಮಿನ್ ವಿಧಾನಾತಿಶಯೇ ವಿಧಾತುಃ
ಕನ್ಯಾಮಯೇ ನೇತ್ರಶತೈಕಲಕ್ಷ್ಯೇ
ನಿಪೇತುರಂತಃ ಕರಣೈರ್ನರೇಂದ್ರಾಃ
ದೇಹೈಃ ಸ್ಥಿತಾ ಕೇವಲಮಾಶನೇಷು॥

(ಬ್ರಹ್ಮದೇವನ ಸಂಪೂರ್ಣ ಸೌಂದರ್ಯ ಸೃಷ್ಟಿಯಂತಿರುವ ಮತ್ತು ನೆರೆದ ರಾಜರ ನೂರಾರು ನೇತ್ರಗಳಿಗೆ ಒಂದೇ ಗುರಿಯಾದ ಆ ಕನ್ಯಾಮಣಿಯಲ್ಲಿ ಅರಸುಗಳೆಲ್ಲ ಹೃದಯರೂಪದಿಂದ ಸೇರಿದರು; ಆಸನಗಳಲ್ಲಿ ಹೃದಯವಿಲ್ಲದ ಅವರ ದೇಹಗಳು ಮಾತ್ರ ಕುಳಿತಿದ್ದವು.)

ಮುಂದೆ ಇಂದುಮತಿಯ ಮರಣಾನಂತರ ವಶಿಷ್ಠ ಶಿಷ್ಯನೊಬ್ಬ ಬಂದು ಅವಳ ಪೂರ್ವಜನ್ಮ ವೃತ್ತಾಂತವನ್ನು ಅಜರಾಜನಿಗೆ ಹೇಳುತ್ತಾನೆ. "ತೃಣಬಿಂದು ಮುನಿಯ ಘೋರ ತಪಸ್ಸನ್ನು ಕೆಡಿಸುವದಕ್ಕಾಗಿ ಇಂದ್ರ, ಹರಿಣೀ ಎಂಬ ಅಪ್ಸರೆಯನ್ನು ಕಳಿಸಿದ. ಅವಳೇ ಮುನಿಶಾಪದಿಂದ ಇಂದುಮತಿಯಾಗಿ ಹುಟ್ಟಿದ್ದಳು. ಈಗ ಉಃಶಾಪವಾಯಿತು. ಹೊರಟುಹೋದಳು."

ಇಂದುಮತಿ ಶಾಪಗ್ರಸ್ತ ಅಪ್ಸರೆಯಾಗಿದ್ದರೂ ಮಾನವ ಜನ್ಮ ತಾಳಿದ ಮೇಲೆ ಪರಮಪತಿವ್ರತೆಯಾಗಿ ಪ್ರಾಮಾಣಿಕ ಜೀವನ ನಡೆಸುತ್ತಾಳೆ. ಒಮ್ಮೆ ಅಜರಾಜ-ಇಂದುಮತಿಯರು ಉದ್ಯಾನದಲ್ಲಿ ವಿಹರಿಸುತ್ತಿರುವಾಗ ಗಗನಮಾರ್ಗದಲ್ಲಿ ಬರುತ್ತಿರುವ ನಾರದರ ವೀಣೆಯ ಮೇಲಿನ ಪುಷ್ಪಮಾಲೆ ಇಂದುಮತಿಯ ಎದೆಯ ಮೇಲೆ ಬೀಳುತ್ತದೆ. ಅಷ್ಟು ಮಾತ್ರಕ್ಕೇ ಆ ಕೋಮಲೆ ಅಸುನೀಗುತ್ತಾಳೆ.

ಬದುಕೇ ಬೇಡಾದ ಅಜರಾಜ ಅವಳೊಡನೆ ಸರಸವಾಡಿದ ಗತಜೀವನವನ್ನೆಲ್ಲ ನೆನೆದು ಕಣ್ಣೀರು ಕೋಡಿ ಹರಿಸುತ್ತಾನೆ. ಅಜವಿಲಾಪದಲ್ಲಿ ಬರುವ ಇಂದುಮತಿಯ ವರ್ಣನೆ ಹೀಗಿದೆ:

ಗೃಹಿಣೀ ಸಚಿವಃ ಸಖೀ ಮಿಥಃ ಪ್ರಿಯಶಿಷ್ಯಾ,
ಲಲಿತೇ ಕಲಾವಿಧೌ
ಕರುಣಾವಿಮುಖೇನ ಮೃತ್ಯುನಾ ಹರತಾ
ತ್ವಾಂ ವದ ಕಿಂ ನ ಮೇಹೃತಮ್

(ನೀನು ನನಗೆ ಹೆಂಡತಿ, ಮಂತ್ರಿ, ರಹಸ್ಯ ಸಖಿ, ಲಲಿತಕಲಾಭ್ಯಾಸದಲ್ಲಿ ಪ್ರಿಯಶಿಷ್ಯೆಯಾಗಿದ್ದೆ. ಇಂಥ ನಿನ್ನನ್ನು ನಿಷ್ಕರುಣೆಯಾದ ಮೃತ್ಯು ಅಪಹರಿಸಿದ ಮೇಲೆ, ನನ್ನದಾದ ಯಾವುದನ್ನು ಅಪಹರಿಸಲಿಲ್ಲ?)

ಈ ಪದ್ಯದಲ್ಲಿರುವ ಗೃಹಿಣೀ, ಸಚಿವ, ಮಿಥಃ ಸಖಿ, ಲಲಿತಕಲಾ ಶಿಷ್ಯೆ-ಒಂದೊಂದು ಶಬ್ದವೂ ಇಂದುಮತಿಯ ಆತ್ಮಯೋಗ್ಯತೆಯ ಆಧಿಕ್ಯವನ್ನು ಒಡೆದು ತೋರಿಸುತ್ತವೆ. ಇಂದುಮತಿಯ ರೂಪದಿಂದ ಪತಿವಶೀಕರಣದ ಸಾತ್ವಿಕ ವ್ಯಕ್ತಿತ್ವವನ್ನು. ಆದರ್ಶ ಗೃಹಿಣಿಯನ್ನು ಸ್ತ್ರೀ ಸಮಾಜದ ಮುಂದಿರಿಸಿದ್ದಾನೆ ಕವಿ.

ಸೀತಾದೇವಿ

ಲಕ್ಷ್ಮೀದೇವಿಯ ಅಪರಾವತಾರವೇ ಸೀತಾದೇವಿ ಎಂದಾಗ ಆಕೆಯ ಚೆಲುವನ್ನು ಬಣ್ಣಿಸಬೇಕೆ? ಅವಳು ಶ್ರೀರಾಮಚಂದ್ರನ ಪತ್ನಿಯೆಂದು ಆಕೆಯ ಗುಣಗಳನ್ನು ಬಣ್ಣಿಸಬೇಕಾಗಿಲ್ಲ. ಆದರೆ ಸೀತಾಮಾತೆಯ ಜೀವನ ದುರಂತಗಳ ಪರಂಪರೆಯಲ್ಲಿಯೇ ಕೊನೆಗೊಳ್ಳುತ್ತದೆ. ಹಾಗಿದ್ದಾಗಲೂ ಆಕೆಯ ಪತಿಭಕ್ತಿಗೆ ಅಣುಮಾತ್ರವೂ ಕುಂದು ಬಂದಿಲ್ಲ. ತಾನು ತುಂಬು ಬಸಿರಿಯಿದ್ದಾಗ ತನ್ನನು ಅನಾಥೆಯಂತೆ ಅಡವಿಗಟ್ಟಿದ ಪತಿಯಲ್ಲಿಯೂ ಅನ್ಯಾಯವನ್ನು ಆರೋಪ ಮಾಡಲಿಲ್ಲ. ಭೂದೇವಿಯ ಮಡಿಲಲ್ಲಿ ಮರೆಯಾಗುವ ಕೊನೆಯ ಕ್ಷಣದ ವರೆಗೂ ರಾಮನಲ್ಲಿ ಅನನ್ಯಭಕ್ತಿಯಿಂದಿರುತ್ತಾಳೆ.

ಹುಡುಗಿಯ ವಿಷಯದಲ್ಲಿ



ಕಾಲೇಜು ಸೇರಲೆಂದನು ಅವಳ ತಂದೆ.
ಮೊನ್ನೆಯೇ ಪ್ರಿನ್ಸಿಪಾಲರ ನೋಡಿ ಬಂದೆ.
ಗಂಡು ಹುಡುಕಿದರೆ ಒಳಿತೆನ್ನುವಳು ತಾಯಿ.
ಶೀಘ್ರದಲಿ ಸವಿಯಾಗಬೇಕಂತೆ ಬಾಯಿ.

— ದಿನಕರ ದೇಸಾಯಿ

ಸೀತೆಯ ಪಾತ್ರವನ್ನು ಕೂಲಂಕಷವಾಗಿ ತೂಗಿ ನೋಡಿದಾಗ ರಾಮಾಯಣ ಕಾಲದ ಸ್ತ್ರೀಗೂ ಮಹಾಭಾರತದ ಸ್ತ್ರೀಗೂ ಇರುವ ಅಂತರ ಗೊತ್ತಾಗುತ್ತದೆ. ಎಂತಹ ಅನ್ಯಾಯ ಪತಿಯಿಂದ ನಡೆದಾಗಲೂ ತನ್ನ ದುರ್ದೈವಕ್ಕಾಗಿ ದೈವವನ್ನೇ ಹಳಿದು ಕೈಚಲ್ಲುತ್ತಾಳೆ ರಾಮಾಯಣದ ಸೀತಾದೇವಿ, ಮಹಾಭಾರತದ ದ್ರೌಪದಿ ಧರ್ಮರಾಜನಿಂದ ತಪ್ಪು ಘಟಿಸಿದಾಗ "ಹೆಂಡತಿಯನ್ನು ಪಣಕ್ಕೆ ಹಚ್ಚಲು ನಿಮಗೆ ಏನು ಅಧಿಕಾರವಿದೆ?" ಎಂದು ಕೇಳುವ ವರ್ಚಸ್ಸನ್ನು ಪಡೆದಿದ್ದಾಳೆ.

ಕಾಳಿದಾಸನ ನಾಟಕೀಯ ಸ್ತ್ರೀ ಪಾತ್ರಗಳು

ಮಾಲವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ ಮತ್ತು ಅಭಿಜ್ಞಾನಶಾಕುಂತಲ ಇವು ಕಾಳಿದಾಸನ ಮೂರು ನಾಟಕಗಳು. ಇವುಗಳ ಲೇಖನ ಸಮಯವೂ ಇದೇ ಕ್ರಮದಲ್ಲಿರಬೇಕು. ಪ್ರತಿಭೆ ನಾಟ್ಯಕಲಾ ಪ್ರೌಢಿಗಳ ದೃಷ್ಟಿಯಿಂದ ತೂಗಿ ನೋಡಿದಾಗ ಮಾಲವಿಕಾಗ್ನಿಮಿತ್ರ ಅಲ್ಲಲ್ಲಿ ಕಾಣಸಿಗುವ ದೋಷಗಳಿಂದಾಗಿ ಈ ನಾಟಕ ಕಾಳಿದಾಸನ ಪ್ರಥಮ ಕೃತಿಯೆಂದು ಪರಿಗಣಿಸಲ್ಪಡುತ್ತದೆ.

ಮಾಲವಿಕಾಗ್ನಿಮಿತ್ರ

ಈ ನಾಟಕದಲ್ಲಿ ಮಾಲವಿಕಾ ನಾಯಿಕೆ. ಧಾರಿಣೀ, ಇರಾವತಿ, ಪರಿವ್ರಾಜಿಕೆ, ಕೌಶಿಕಿ ಇವರು ಉಪಪ್ರಧಾನ ಪಾತ್ರಗಳು ಬಕುಲಾವಲಿಕೆ, ನಿಪುಣಿಕೆ ಗೌಣಪಾತ್ರಗಳು.

ಮಾಲವಿಕಾಗ್ನಿಮಿತ್ರ ಶೃಂಗಾರಪ್ರಧಾನ ನಾಟಕ ಅಗ್ನಿಮಿತ್ರ- ಮಾಲವಿಕೆ- ನಾಯಕ ನಾಯಕಿಯರು ಮಾಲವಿಕೆ ಮೊತ್ತಮೊದಲಿಗೆ ನರ್ತಕಿಯಾಗಿ ಅರಸನ ಸಮುಖದಲ್ಲಿ ಬರುತ್ತಾಳೆ. ಅರಸು ಅವಳ ಅಂಗಾಂಗ ಸೌಷ್ಠವವನ್ನು ಮನವಾರೆ ಬಣ್ಣಿಸುತ್ತಾನೆ. ಇಲ್ಲಿ ಕಾಳಿದಾಸ ಕವಿಯ ಸ್ತ್ರೀಸೌಂದರ್ಯ ವರ್ಣನೆ ಬಹಳ ಚಿತ್ತಾಕರ್ಷಕವಾಗಿದೆ.

ಮಾಲವಿಕೆ ಸುಂದರಿಯಾದ ರಾಜಕುಮಾರಿ. ಆದರೆ ದುರ್ದೈವದಿಂದಾಗಿ ಪಟ್ಟಮಹಿಷಿ ಧಾರಿಣಿಗೆ ದಾಸಿಯಾಗಿದ್ದಾಳೆ. ಏಕೆಂದರೆ, ಮಾಲವಿಕೆ ತನ್ನ ಅಣ್ಣ ಮಾಧವಸೇನನೊಡನೆ ಅಗ್ನಿಮಿತ್ರನ ರಾಜಧಾನಿಗೆ ಬರುತ್ತಿರುವಾಗ ವಿದರ್ಭರಾಜ ಅಣ್ಣನನ್ನು ಸೆರಹಿಡಿಯುತ್ತಾನೆ. ಆ ಗೊಂದಲದಲ್ಲಿ ಮಾಲವಿಕೆ ಕಾಣೆಯಾಗುತ್ತಾಳೆ. ಮಾಧವಸೇನನ ಮಂತ್ರಿ ಸುಮತಿ ಮಾಲವಿಕೆಯನ್ನು ತಂಗಿ (ಪರಿವ್ರಾಜಿಕೆ) ಕೌಶಿಕಿಯನ್ನೂ ಬೇರೆಡೆ ಸಾಗಿಸಿ ಕಾಪಾಡುತ್ತಾನೆ. ದಾರಿಯಲ್ಲಿ ಹಾದಿಗಳ್ಳರ ಕೈಗೆ ಸಿಕ್ಕುಬಿದ್ದು ಕಾದಾಡುತ್ತ ಪ್ರಾಣನೀಗುತ್ತಾನೆ. ಕೌಶಿಕಿ ಹೇಗೋ ಪಾರಾಗುತ್ತ ಅಗ್ನಿಮಿತ್ರನ ಆಸ್ಥಾನಕ್ಕೆ ಮಾಲವಿಕೆಯೊಡನೆ ಬರುತ್ತಾಳೆ. ಬಂದಮೇಲೆ ಮಾಲವಿಕೆ ರಾಜಕನ್ಯೆ ಎಂದು ಮಹಾರಾಣಿ ಧಾರಿಣಿಗೆ ಹೇಳುವದೇ ಇಲ್ಲ. ಏಕೆಂದರೆ, ಮಾಲವಿಕೆಯ ಭವಿಷ್ಯದಲ್ಲಿ ಒಂದು ವರ್ಷ ದಾಸಿಯಾಗುವ ದುರ್ದೈವವನ್ನು ಸಹಿಸಿದ

[illegible]

ಮಾಲವಿಕೆ

ನಾಟಕದಲ್ಲಿ ಮಾಲವಿಕೆ ಯೌವನದ ಹೊಸತಿಲಲ್ಲಿ ಕಾಲಿಡುತ್ತಿರುವ "ಮುಗ್ಧ ನಾಯಿಕೆ" ಹೃದಯದಲ್ಲಿ ಯೌವನದ ಮಧುರ ಭಾವನೆಗಳೇಳುತ್ತಿದ್ದರೂ ಅದನ್ನು ಹೊರಗೆ ತೋರಿಸಲಾರದ ಮುಗ್ಧೆ. ಅಲ್ಲದೆ ದಾಸ್ಯದಲ್ಲಿದ್ದ ಕಾರಣ ಮನಸ್ಸಿನ ಭಾವನೆಗಳನ್ನೆಲ್ಲ ಹೊರಗೆಡಹಲೂ ಅಳುಕು ಆದರೂ ಸಿಕ್ಕ ಸಮಯದ ಸದುಪಯೋಗ ಮಾಡಿಕೊಳ್ಳುವ ಸ್ತ್ರೀ ಸಹಜ ಸಮಯ ಸಾಧಕತೆ ಇದೆ ಅವಳಲ್ಲಿ. ಅರಸನೆದುರು ಸಾಭಿನಯ ಸಂಗೀತ ಪ್ರದರ್ಶನ ಮಾಡುವಾಗ-

"ವಿಷ ಸ ಚಿರದೃಷ್ಟಃ ಕಥಮುಪನೇತವ್ಯೋ
ನಾಥ ಮಾಂ ಪರಾಧೀನಾಂ ತ್ವಯಿ ಗಣಯ
ಸತೃಷ್ಣಾಮ್॥

(ಬಹುಕಾಲದ ಮೇಲೆ ನೋಡುತ್ತಿರುವೆ ಆದರೆ, ಆಕರ್ಷಿಸುವುದು ಹೇಗೆ? ಪ್ರಿಯನೇ, ಅಸಹಾಯಕಳಾದ ನಾನು ನಿನ್ನಲ್ಲಿ ಪೂರಾ ಆಶೆಯನ್ನು ಇಟ್ಟುಕೊಂಡಿರುವೆನೆಂದು ತಿಳಿ) ಹೀಗೆ ಹಾಡಿನಲ್ಲಿ ಸೂಚ್ಯವಾಗಿ ತನ್ನ ಮನದಿಂಗಿತವನ್ನು ತಿಳಿಸುತ್ತಾಳೆ. ಇದಕ್ಕೆ ಕಾರಣ ಅವಳಿಗೆ ತನ್ನ ಸೌಂದರ್ಯದ ಬಗೆಗೆ ಅತ್ಮಾಭಿಮಾನ ಆತ್ಮವಿಶ್ವಾಸಗಳಿವೆ.

ಮಾಲವಿಕೆ ಪದ್ಮಿನೀ ಜಾತಿಯ ಸುಂದರಿ. ಅವಳ ಪಾದಸ್ಪರ್ಶವಾಗುತ್ತಲೇ ಅಶೋಕ ವೃಕ್ಷ ಹೂ ಬಿಡುತ್ತದೆ. ಈ ಕಾರ್ಯನಿರ್ವಹಣೆಯಿಂದ ಸುಪ್ರೀತಳಾದ ಧಾರಿಣೀದೇವಿ ಮಾತು ಕೊಟ್ಟಂತೆ ಮಾಲವಿಕೆಯನ್ನು ಅರಸು ಅಗ್ನಿಮಿತ್ರನಿಗೆ ಮದುವೆ ಮಾಡುತ್ತಾಳೆ. ಮಾಲವಿಕೆ ತನ್ನ ಮುಗ್ಧತೆಯಿಂದಾಗಿ ಎರಡನೆಯ ರಾಣಿ ಇರಾವತಿಯ ಅಸೂಯೆಗೆ ಮೂಲವಾಗಿ. ಅವಳು ಧಾರಿಣೀದೇವಿಗೆ ಹೇಳಿ ಬಂಧನಲ್ಲಿಡಿಸಿದಾಗಲೂ ರಾಜಗಾಂಭೀರ್ಯದಿಂದ ಮರುಮಾತಿಲ್ಲದೆ ಸಹಿಸಿಕೊಳ್ಳುತ್ತಾಳೆ. ಎಷ್ಟೆಂದರೂ ರಾಜಕುಮಾರಿಯಲ್ಲವೇ?

ಧಾರಿಣೀದೇವಿ

ಧಾರಿಣೀದೇವಿ ನಾಟಕದ ನಾಯಕ ಅಗ್ನಿಮಿತ್ರನ ಪಟ್ಟಮಹಿಷಿ. ಸೌಂದರ್ಯವತಿಯೂ ಹೌದು. ಪ್ರತಿವರ್ಷವೂ ತನ್ನ ಸಿಂಗರಿಸಿದ ಪಾದಗಳಿಂದ ಅಶೋಕ ವೃಕ್ಷವನ್ನು ಒದೆದು ಕುಸುಮಿಸುತ್ತಿದ್ದುದು ಅವಳ ಸೌಂದರ್ಯಕ್ಕೆ ಸಾಕ್ಷ್ಯ.

ಆದರೂ ಅವಳಿಗೆ ತನ್ನ ಸೌಂದರ್ಯದ ಬಗೆಗೆ ದುರಭಿಮಾನವೂ ಇಲ್ಲ. ಪತಿ ತನ್ನೊಬ್ಬಳಲ್ಲೇ ಅನುರಕ್ತನಾಗಿರಬೇಕೆಂಬ ಹಟವೂ ಇಲ್ಲ. ಆದರ್ಶ ಭಾರತನಾರೀಮಣಿ ಆಕೆ. ಭಾಸಕವಿಯ ವಾಸವದತ್ತೆಯಷ್ಟೇ ಹೃದಯದ ಹಿರಿಮೆ ತೋರಿ ಇರಾವತಿಯನ್ನು ಮದುವೆಯಾಗಲು ಒಪ್ಪಿಗೆ ಕೊಟ್ಟಿದ್ದಾಳೆ. ಹೀಗಿದ್ದರೂ ಪತಿಯ ಸ್ವಚ್ಛಂದ ಪ್ರವೃತ್ತಿಗೆ ಅವಕಾಶ ಕೊಡಲಾರಳು ಎಂತೆಯೇ ಅರಸು ಚಿತ್ರದಲ್ಲಿ ಮಾಲವಿಕೆಯನ್ನು ನೋಡಿ "ಇವಳು ಯಾರು?" ಎಂದು ಕುತೂಹಲ ತೋರಿಸಿದಾಗ ಉತ್ತರ ಕೊಡುವದಿಲ್ಲ. ಹಾಗೆಯೇ, ಅರಸನ ಎದುರು ಮಾಲವಿಕೆಯ ನೃತ್ಯಪ್ರದರ್ಶನವನ್ನು ಒಮ್ಮೆಲೆ ಒಪ್ಪುವುದಿಲ್ಲ. ಆ ನಂತರವೂ ಮಾಲವಿಕೆಯ ನೃತ್ಯಪ್ರದರ್ಶನ ವಿದೂಷಕ ಅರಸು ಇಬ್ಬರೂ ಸೇರಿ ನಡೆಸಿದ ಗತ್ತುಗಾರಿಕೆ ಎಂದು ತಿಳಿದಾಗ "ಇಲ್ಲಿ ತೋರಿಸುವ ಬುದ್ಧಿಧೂರ್ತತೆಗಳನ್ನು ರಾಜಕಾರ್ಯದಲ್ಲಿ ನನ್ನ ಅರಸು ತೋರಿದ್ದರೆ ಎಷ್ಟೊಂದು ಚೆನ್ನಾಗಿರುತ್ತಿತ್ತು..." ಎಂದು ತನ್ನದೇ ಆದ ಸೌಮ್ಯ ಕೊಂಕು ಮಾತಿನಲ್ಲಿ ಹೇಳುತ್ತಾಳೆ.

ಹೆರವರ ಗುಣವನ್ನು ತುಂಬುಹೃದಯದಿಂದ ಗೌರವಿಸುವ ದೊಡ್ಡ ಗುಣ ಧಾರಿಣಿಯದು. ಉಯ್ಯಾಲೆಯಿಂದ ಬಿದ್ದು ತನ್ನ ಕಾಲು ನೋವಾದಾಗ ಮಾಲವಿಕೆಗೆ ಅಶೋಕ ವೃಕ್ಷಕ್ಕೆ ಹೂ ಬಿಡಿಸುವ ಕಾರ್ಯವನ್ನು ಒಪ್ಪಿಸಿ, ವೃಕ್ಷ ಹೂತಾಗ ತನ್ನ ವಚನದಂತೆ ಮಾಲವಿಕೆಯ ಇಷ್ಟಾರ್ಥ ಪೂರೈಸಿ ಅರಸನಿಗೆ ಮದುವೆ ಮಾಡುತ್ತಾಳೆ.

ಅಸೂಯಾಪರಳಾದ ಎರಡನೆಯ ರಾಣಿ ಇರಾವತಿಯ ಇಚ್ಛೆಯನ್ನು ಗೌರವಿಸಲು ಅವಳ ಹೇಳಿಕೆಯಂತೆ ಮಾಲವಿಕೆಯನ್ನು ಬಂಧನದಲ್ಲಿಡುತ್ತಾಳೆ. ಬೇಕುಬೇಕೆಂದೇ ಹಾವು ಕಚ್ಚಿತು ಎಂದು ವಿದೂಷಕ ಹುಯಿಲೆಬ್ಬಿಸಿದಾಗ ಪ್ರಾಣಿದಯಾಪರಳಾದ ರಾಣಿ ನಾಗಮುದ್ರೆ ಇರುವ ತನ್ನ ಉಂಗುರವನ್ನು ಕೊಟ್ಟುಬಿಡುತ್ತಾಳೆ. ಆದರಿಂದಲೇ ವಿದೂಷಕನ ಪ್ರಯತ್ನದಿಂದಾಗಿ ಮಾಲವಿಕೆಯ ಬಿಡುಗಡೆಯಾಗುತ್ತದೆ. ಇದರಿಂದ ಅವಳಿಗೆ ಅಸಮಾಧಾನವೇನೂ ಇಲ್ಲ ಅಂತಹ ಪರೋಪಕಾರಿ ಜೀವನ ಅವಳದು. ಒಟ್ಟಾರೆ, ಪತಿಪರಾಯಣತೆ, ಗುಣಗೌರವ, ಪರಹಿತಚಿಂತನೆ, ಆತ್ಮಗೌರವದ ಮಾದರಿಯ ಮೂರ್ತಿ' ಧಾರಣೀದೇವಿ.

ಇರಾವತಿ

ಚಿಕ್ಕರಾಣಿಯಾದ ಇರಾವತಿ ರೀತಿನೀತಿಗಳಲ್ಲಿ ಧಾರಣೀದೇವಿಗೆ ಸಂಪೂರ್ಣ ವಿರುದ್ಧ. ಮಾಲವಿಕೆಯನ್ನು ತಿರಸ್ಕರಿಸುವದರಲ್ಲಿ, ಪತಿಯ ಸ್ವಚ್ಛಂದ ವೃತ್ತಿಯನ್ನು ಹೀಯಾಳಿಸುವದರಲ್ಲಿ ಸ್ವಂತ ಸೌಂದರ್ಯದ ದುರಭಿಮಾನ ತೋರುವದರಲ್ಲಿ ತೀರ ಸಂಕುಚಿತ ಮನಸ್ಸು ತೋರಿಸುತ್ತಾಳೆ ಧಾರಣೀದೇವಿಗಿರುವ ರಾಜಗಾಂಭೀರ್ಯ ಅವಳಲ್ಲಿಲ್ಲ. ಒಂದು ಪ್ರವೇಶದಲ್ಲಿ ಮದ್ಯಪಾನ ಮಾಡಿ ಓಲಾಡುತ್ತಲೇ ಪ್ರವೇಶಿಸುತ್ತಾಳೆ ಮೂರ್ತಿಮಂತ ಮಾತ್ಸರ್ಯ ಅವಳು. ಎಂತೆಯೇ ಕವಿ ನಾಟಕದ ಕೊನೆಗೆ ಮಾಲವಿಕೆ ಅಗ್ನಿಮಿತ್ರರ ಮಧುರ ಸಮ್ಮಿಲನದ ಪ್ರಸಂಗದಲ್ಲಿ ಅವಳನ್ನೂ ರಂಗದ ಮೇಲೆ ತಂದಿಲ್ಲ.

ಪರಿವ್ರಾಜಿಕೆ ಕೌಶಿಕೆ

ಪರಿವ್ರಾಜಿಕೆ ಕೌಶಿಕೆ ಧಾರಿಣೀದೇವಿಯ ಅಂತಃಪುರದಲ್ಲಿ ಸನ್ಮಾನ್ಯಳು ಅವಳ ಅಗಾಧ ಪಾಂಡಿತ್ಯ, ಸರಳ ಸ್ವಭಾವ, ಸದಾಚಾರ, ವಿಚಾರಗಳ ಬಗೆಗೆ ಅರಸು ಮೊದಲು ಮಾಡಿಕೊಂಡು ಎಲ್ಲರೂ ಅವಳನ್ನು ಗೌರವಿಸುತ್ತಾರೆ ಆದ್ದರಿಂದಲೇ, 'ಹರದತ್ತ' ಮತ್ತು 'ಗಣದಾಸ' ನಾಟ್ಯಾಚಾರ್ಯರ ನಾಟ್ಯಕಲೆಯ ಸ್ಪರ್ಧೆಯ ನಿರ್ಣಯ ಕೊಡಲು ಅವಳನ್ನೇ ನಿಯಮಿಸುತ್ತಾರೆ ಈ ನಾಟ್ಯ ಸ್ಪರ್ಧೆಯ ನಿಮಿತ್ತವಾಗಿ ಮಾಲವಿಕೆ– ಅಗ್ನಿಮಿತ್ರರ ಪ್ರಥಮ ಮಿಲನವಾಗುತ್ತದೆ.

ಮಾಲವಿಕೆ ಕೌಶಿಕೆಗೆ ಚಿರಪರಿಚಿತಳು ಅವಳ ಅರಸನ ಮಗಳು. ಮಾಲವಿಕೆ ಒಂದು ವರ್ಷ ಕಾಲ ದಾಸಿಯಾಗಿ ದುಡಿಯಬೇಕಾದ ಕುಯೋಗವಿದೆಯೆಂದು ಸಿದ್ಧಪುರುಷನೊಬ್ಬ ಹೇಳಿದ್ದುದು ಕೌಶಿಕೆಗೆ ಗೊತ್ತಿತ್ತು. ಆದರಿಂದಾಗಿ ವರ್ಷ ಕಳೆಯುವವರೆಗೂ ಧಾರಿಣೀದೇವಿಯ ದಾಸಿಯಾಗಿ ಮಾಲವಿಕೆ ದುಡಿಯುತ್ತಿದ್ದಾಗ ಅವಳ ನಿಜ ವೃತ್ತಾಂತವನ್ನು ಯಾರಿಗೂ ಹೇಳುವದಿಲ್ಲ. ಸ್ವಜನ ಹಿತಚಿಂತನೆಯ ಗಂಭೀರ ಸ್ವಭಾವ ಅವಳದು. ಅರಸನಿಗೂ ಆಗಾಗ ಅಪ್ತಾಲೋಚನೆಯನ್ನು ಹೇಳುತ್ತಿದ್ದುದರಿಂದ ಅವಳನ್ನು ಪಂಡಿತಾ ಕೌಶಿಕೀ ಎಂದು ಎಲ್ಲರೂ ಗೌರವಿಸುತ್ತಾರೆ.

ಕೌಶಿಕೆಯ ಪಾತ್ರ ನೋಡಿದಾಗ ಅಂದಿನ ಕಾಲದ ಸ್ತ್ರೀಯರಿಗೆ ಸಮಾಜದಲ್ಲಿ ಎರಡೇ ಸ್ಥಾನಗಳಿದ್ದುವು ಎಂದು ಗೊತ್ತಾಗುತ್ತದೆ. ಗೃಹಿಣಿಯಾಗಬೇಕು ಇಲ್ಲವೆ ಜ್ಞಾನವತಿಯಾಗಿರಬೇಕಾದರೆ ಸನ್ಯಾಸಿನಿಯಾಗಬೇಕು. ಗೃಹಿಣಿಯಾಗಿಯೂ ವಿದ್ಯಾವತಿಯಾಗಿರುವದು ಇಂದಿನಂತೆ ಅಂದು ಸಾಧ್ಯವಿರಲಿಲ್ಲ.

ಗೌಣಪಾತ್ರಗಳು

ಗೌಣಪಾತ್ರಗಳಾದ 'ಬಕುಲಾವಲಿಕೆ' ಮಾಲವಿಕೆಗ ಆಪ್ತಸಖಿ. 'ನಿಪುಣಿಕೆ' ಇರಾವತಿಯ ನಂಬಿಗೆಯ ದಾಸಿ. ಇಬ್ಬರೂ ತಮ್ಮ ತಮ್ಮ ಒಡತಿಯರ ಒಲವನ್ನನುಸರಿಸಿ ನಡೆಯುತ್ತಾರೆ ಅಷ್ಟೇ.

ವಿಕ್ರಮೋರ್ವಶೀಯ

ವಿಕ್ರಮೋರ್ವಶೀಯ ಐದು ಅಂಕಗಳ ಶೃಂಗಾರ ಪ್ರಧಾನ ನಾಟಕ. ನಾಟಕದ ನಾಯಿಕೆ ಉರ್ವಶಿ ಒಬ್ಬ ಅಪ್ಸರೆ. ತಪಸ್ಸನ್ನು ಕೆಡಿಸಲು ಸುರಲೋಕದಿಂದ ಬಂದ ಅಪ್ಸರೆಯರನ್ನು ಹೀಯಾಳಿಸಲು 'ನಾರಾಯಣ ಋಷಿ' ತನ್ನ ತೊಡೆಯಿಂದ ಇವಳನ್ನು ಹುಟ್ಟಿಸಿದ್ದಾನೆ. ರಾಕ್ಷಸನೊಬ್ಬನಿಂದ ತನ್ನನ್ನು ಪಾರುಮಾಡಿದ ಮಾನವ ಅರಸು ಪುರೂರವನಲ್ಲಿ ಅನುರಾಗ ಅಂಕುರಿಸಿ ಪ್ರೇಮದಿಂದ ದಿಗ್ಭ್ರಾಂತಳಾಗುತ್ತಾಳೆ ದೇವಲೋಕದಲ್ಲಿ ಸರಸ್ವತೀದೇವಿ ರಚಿಸಿದ 'ಲಕ್ಷ್ಮೀಸ್ವಯಂವರ' ನಾಟಕದಲ್ಲಿ ಲಕ್ಷ್ಮಿಯ ಪಾತ್ರ ವಹಿಸಿದಾಗ 'ನನಗೆ ಪುರುಷೋತ್ತಮನಲ್ಲಿ ಅನುರಾಗವಿದೆ' ಎನ್ನುವ ಬದಲು 'ನನಗೆ ಪುರೂರವನಲ್ಲಿ ಅನುರಾಗವಿದೆ' ಎಂದು ಬಾಯಿ ತಪ್ಪಿ ಹೇಳುತ್ತಾಳೆ. ಈ ಅಪಪ್ರಯೋಗದಿಂದ ಕೋಪಗೊಂಡ ಭರತಮುನಿ 'ಭೂಲೋಕಕ್ಕೆ ಹೋಗು' ಎಂದು

ಶಾಪಕೊಡುತ್ತಾನೆ. "ನಿನ್ನ ಮತ್ತು ಪುರೂರವನ ಸಂತಾನದರ್ಶನ ಅರಸನಿಗಾಗುವವರೆಗೆ ಅಲ್ಲಿದ್ದು ಆ ಮೇಲೆ ದೇವಲೋಕಕ್ಕೆ ಮರಳಿ ಬಾ" ಎಂದು ಇಂದ್ರ ಮರುಕ ತೋರಿಸಿ ಋಷಿಯ ಶಾಪವನ್ನು ತಿದ್ದುತ್ತಾನೆ

ಊರ್ವಶೀ ಭೂಲೋಕಕ್ಕೆ ಬಂದು ಅರಸನೊಡನೆ ಸಂಸಾರ ಮಾಡಿ ಮಗುವಾಗುತ್ತಲೇ ಮಗುವನ್ನು ಚ್ಯವನ ಋಷಿಯ ಆಶ್ರಮದಲ್ಲಿಟ್ಟು ತಂದೆ ಮಗನ ಮುಖ ನೋಡದ ಹಾಗೆ ಬೆಳೆಸುತ್ತಾಳೆ. ಕೊನೆಗೂ ತಂದೆ—ಮಕ್ಕಳ ಮಿಲನವಾದಾಗ ಊರ್ವಶಿಯು ಹೃದಯ ಮನದನ್ನನ್ನಗಲಿ ಹೋಗಬೇಕಲ್ಲ ಎಂದು ದುಃಖದಿಂದ ಬಿರಿಯುತ್ತಿದೆ ಇಂದ್ರ ಆಗ ಬಂದು ಸಂದೇಶ ಕಳಿಸಿ ದಾನವರನ್ನು ಸದೆಬಡಿಯಲು ಅರಸನ ಸಹಾಯ ಕೋರಿ ಕೊನೆಯವರೆಗೆ ಊರ್ವಶಿ ಪುರೂರವನೊಡನೆಯೇ ಇರುವಂತೆ ತಿಳಿಸುತ್ತಾನೆ. ಒಟ್ಟಾರೆ ನಾಟಕ ಸುಖಾಂತವಾಗುತ್ತದೆ.

ಊರ್ವಶಿ ದೇವಲೋಕದ ಅಪ್ಸರೆ ಅವಳ ಅಲೌಕಿಕ ಸೌಂದರ್ಯವನ್ನು ಬಣ್ಣಿಸಲು ಕವಿಯ ಕಲ್ಪಕತೆಯೂ ಹೊಯ್ದಾಡಿದಂತಿದೆ. ಅದಕ್ಕೇ-

"ಇವಳನ್ನು ಸೃಷ್ಟಿಸಿದ ಪ್ರಜಾಪತಿ ಯಾರಿರಬಹುದು? ಕಾಂತಿಪ್ರದನಾದ ಚಂದ್ರನೋ ಅಥವಾ ಶೃಂಗಾರ ರಸಜೀವಿಯಾದ ಮನ್ಮಥನೋ ಇಲ್ಲವೆ ಪುಷ್ಪಸಮೃದ್ಧಿ ಕಾರಣನಾದ ವಸಂತನೋ ಹಾಗಿಲ್ಲವಾದರೆ ವೇದಾಭ್ಯಾಸ ಜಡನೂ ವಿಷಯ ಲಂಪಟತೆಯಿಂದ ದೂರವೂ ಆದ ಆ ವೃದ್ಧ (ನಾರಾಯಣ ಮುನಿ) ಮುನಿ ಇಂತಹ ಸೌಂದರ್ಯ ರಾಶಿಯನ್ನು ಸೃಷ್ಟಿಸಲು ಹೇಗೆ ಶಕ್ತನಾದನು?"

ಎಂದು ಹೇಳಿದ್ದಾನೆ ಕವಿ.

ಹೀಗೆ, ಊರ್ವಶಿಸೌಂದರ್ಯದ ಪುತ್ಥಳಿಯಾಗಿದ್ದುದೇನೋ ಸರಿಯೇ, ಆದರೆ ಕಥಾನಾಯಿಕೆಯರಲ್ಲಿ ಇರಬೇಕಾದ ಉದಾತ್ತತೆ ಅವಳಲ್ಲಿಲ್ಲ. ಊರ್ವಶಿ ಪ್ರೌಢಾ ನಾಯಿಕೆ ಎಂದರೆ ವಿಷಯ ಸುಖವನ್ನನುಭವಿಸಿದ ಮಧ್ಯ ವಯಸ್ಸಿನ ಪ್ರೌಢೆ.

ಭೂಲೋಕದಲ್ಲಿ ಅರಸು ಪುರೂರವನೊಡನೆ ಅವಳ ಭೋಗಜೀವನ ಸಾಗುತ್ತದೆ. ಆದರೆ ಊರ್ವಶಿಯಲ್ಲಿ ಆದರ್ಶ ಮಹಿಳೆಯಲ್ಲಿರಬೇಕಾದ ಯಾವ ಗುಣಗಳೂ ಇಲ್ಲ. ಪತ್ನಿಯಾಗಿ, ತಾಯಿಯಾಗಿ ಹೆಣ್ಣು ಜೀವನದಲ್ಲಿ ಮಹತ್ವದ ಪಾತ್ರವಾಡಬೇಕಾಗುತ್ತದೆ. ಊರ್ವಶಿ ಎರಡೂ ಪಾತ್ರದಲ್ಲಿಯೂ ಸೋಲುತ್ತಾಳೆ ಎಂದರೆ, ಈ ಎರಡೂ ಪಾತ್ರದಲ್ಲಿಯೂ ಅವಳ ವರ್ತನೆ ಅನಾದರಣೀಯವಾಗಿದೆ.

ಯಾವ ಅಡ್ಡಿ ಆತಂಕವೂ ಇಲ್ಲದೆ ಅರಸನೊಡನೆ ಭೋಗಜೀವನವನ್ನು ನಡೆಸುತ್ತಿದ್ದರೂ ಅವಳು ಮತ್ಸರದಿಂದ ತನ್ನ ಜೀವನದಲ್ಲಿ ತಾನೇ ತೊಂದರೆ ತಂದುಕೊಳ್ಳುತ್ತಾಳೆ. ಪತಿಪತ್ನಿಯರು ಗಂಧಮಾದನ ಪರ್ವತದ ಮೇಲೆ ವಿಹರಿಸುತ್ತಿದ್ದಾಗ ಪುರೂರವ ವಿದ್ಯಾಧರಿಯೊಬ್ಬಳನ್ನು ದಿಟ್ಟಿಸಿನೋಡಿದನೆಂದು ಮತ್ಸರದಿಂದ ಕೋಪಗೊಂಡು ದೂರಹೋಗಿ ಮರೆತು ಸ್ತ್ರೀಯರಿಗೆ ಪ್ರವೇಶವಿಲ್ಲದ 'ಕುಮಾರವನ' ಸೇರಿ, ವನದ ಪ್ರಭಾವದಿಂದ ಲತೆಯಾಗಿ ಮಾರ್ಪಡುತ್ತಾಳೆ. ಪ್ರೇಯಸಿಯ ಅಗಲಿಕೆಯಿಂದ ಹುಚ್ಚನಾದ ಅರಸು ಸಂಜೀವಿನಿ ಮಣಿಯನ್ನು ಧರಿಸಿ ಅಕಸ್ಮಾತ್ತಾಗಿ ಆ ಬಳ್ಳಿಯನ್ನು ಅಪ್ಪಿಕೊಂಡಾಗ ಮತ್ತೆ ಊರ್ವಶಿಗೆ ನಿಜರೂಪ ಬರುತ್ತದೆ. ಪತಿಯ ಮನಸ್ಸನ್ನು ಅರಿತು ಅವನ ಭಾವನೆಗಳಿಗೆ ಬೆಲೆಕೊಡುವ ಸ್ತ್ರೀ ಸಹಜ ಉದಾತ್ತತೆಯಿಲ್ಲ ಅವಳಲ್ಲಿ.

ಊರ್ವಶಿಯ ಪಾತ್ರದ ವಿಮರ್ಶೆ ಮಾಡ ಹೋದರೆ ಅವಳು ಆದರ್ಶ ನಾಯಿಕೆಯ ಪಟ್ಟಕ್ಕೆ ಅನುರೂಪಳಲ್ಲವೆಂದೇ ಹೇಳಬೇಕು. ಸಂತಾನದರ್ಶನದಿಂದ ಪುರೂರವನನ್ನು ಅಗಲಿರಲಾರದೇ, ತನ್ನ ವಿಷಯಸುಖವನ್ನು ಕೊನೆಗೊಳಿಸುವ ಇಷ್ಟವಿಲ್ಲದೆ, ಮಗುವನ್ನೇ ಋಷಿಯ ಆಶ್ರಮದಲ್ಲಿಟ್ಟು ಬೆಳೆಸಿದ ಅವಳ ಹೃದಯಹೀನ ವರ್ತನೆ ತಾಯ್ತನಕ್ಕೇ ಅಪಮಾನ. ಆದರೂ ದೇವಲೋಕದ ಅಪ್ಸರೆಯಾಗಿದ್ದರೂ ಕೊನೆಯವರೆಗೂ ಪುರೂರವನೊಬ್ಬನನ್ನೇ ಪ್ರೇಮಿಸಿದ್ದು ಆದರಣೀಯವೇ ಎನ್ನಬೇಕು!

ಕಾಶೀ ರಾಜಪುತ್ರಿ ಔಶೀನರಿದೇವಿ

ಔಶೀನರಿದೇವಿ ಪುರೂರವನ ಪಟ್ಟದರಾಣಿ ಪರಮ ಪತಿವ್ರತೆ. ಊರ್ವಶಿಯಲ್ಲಿ ಅರಸು ಅನುರಕ್ತನಾಗಿದ್ದುದು ತಿಳಿಯುತ್ತಲೇ ಮಾತ್ಸರ್ಯಗ್ರಸ್ತಳಾಗಿ ಬಿರುನುಡಿಯನ್ನೂ ಆಡುತ್ತಾಳೆ. ಇದು ಮಾನವತಿಯರಾದ ಸ್ತ್ರೀಯರಿಗೆ ಸಹಜವೇ ಆದರೂ ಪತಿಗೆ ಬಿರುನುಡಿಯನ್ನಾಡಿದೆನಲ್ಲಾ ಎಂದು ಮರುಗಿ, ಚಂದ್ರವ್ರತದ ನೆಪದಿಂದ ಪತಿಯನ್ನು ಪ್ರಸನ್ನೀಕರಿಸಿಕೊಂಡು ಅವನ ವಿಲಾಸ ಜೀವನದ ಹಾದಿಯಿಂದ ಕಣ್ಮರೆಯಾಗಿಬಿಡುತ್ತಾಳೆ. ತಿರುಗಿ ರಂಗದ ಮೇಲೆ ಬರುವದೇ ಇಲ್ಲ.

ಔಶೀನರಿದೇವಿ ಔದಾರ್ಯದಲ್ಲಿ ಧಾರಿಣೀದೇವಿಯ ಪ್ರತಿರೂಪದಂತಿದ್ದರೂ, ಆಕೆಗಿರುವ ವರ್ಚಸ್ಸಿಲ್ಲ ಊರ್ವಶಿಯ ಪಾತ್ರದ ವಿಲಾಸ ವೈಭವಗಳಲ್ಲಿ ಔಶೀನರಿಯ ಪಾತ್ರಪೋಷಣೆಗೆ ಕವಿ ಮನಸ್ಸುಗೊಟ್ಟಿಲ್ಲ ಒಟ್ಟಾರೆ, ಔಶೀನರಿದೇವಿ ವೈದಿಕ ಸಂಪ್ರದಾಯದ ಮುತ್ತೈದೆಯಂತೆ ತೋರಿ ಅಡಗುತ್ತಾಳೆ.

ಅಭಿಜ್ಞಾನ ಶಾಕುಂತಲ

ಶಾಕುಂತಲದಲ್ಲಿ ಕಾಳಿದಾಸನ ಪ್ರತಿಭೆ ಪರಿಪಕ್ವವಾಗಿದೆ; ಪೂರ್ಣಸ್ವರೂಪ ಹೊಂದಿದೆಯೆಂದು ಜಗತ್ತಿನ ವಿದ್ವಾಂಸರೆಲ್ಲ ಒಪ್ಪುತ್ತಾರೆ. ಶಕುಂತಲೆಯನ್ನು ಕುರಿತು ಜರ್ಮನಿಯ ಕವಿ Goethe,

"Wouldst thou the young year's blossoms and the fruits of its decline,

And all by which the soul is charmed; enraptured, feasted, fed?

Wouldst thou the earth and heaven itself in one soul name combine!

I name thee. O Shakuntala, and all at once is said''

ಎಂದು ಬಾಯ್ತುಂಬ ಹೊಗಳಿ ಮೆಚ್ಚುಗೆ ಸೂಚಿಸಿದ್ದಾನೆ.

ಶಕುಂತಲೆ

ಶಕುಂತಲೆ ಅಪ್ಸರೆ ಮೇನಕೆಯ ಮಗಳು. ಅಂತೆಯೇ ಅವಳ ಸೌಂದರ್ಯ ಬಣ್ಣನೆಗೆ ನಿಲುಕದಾಗಿದೆ. ಚೆಲುವಿನ ಸಿರಿವನೆ ಅವಳು. ಅವಳ ಅಂಗಸೌಷ್ಠವವನ್ನು ಕವಿಸಮ್ರಾಟ್ ಕಾಳಿದಾಸ ಹೀಗೆ ಬಣ್ಣಿಸುತ್ತಾನೆ.

ಚಿತ್ರೇ ನಿವೇಶ್ಯ ಪರಿಕಲ್ಪಿತ
ಸತ್ತ್ವಯೋಗಾ
ರೂಪೋಚ್ಚಯೇನ ಮನಸಾ
ವಿಧಿನಾ ಕೃತಾನು
ಸ್ತ್ರೀರತ್ನ ಸೃಷ್ಟಿರಪರಾ
ಪ್ರತಿಭಾತಿ ಸಾ ಮೇ
ಧಾತುರ್ವಿಭುತ್ವಮನುಚಿಂತ್ಯ
ವಪುಶ್ಚ ತಸ್ಯಾಃ

(ಬ್ರಹ್ಮ ಅವಳ ದೇಹವನ್ನು ಸೃಷ್ಟಿಸುವಾಗ ಒಮ್ಮೆಲೇ ರಚನೆಗೆ ದುಡುಕದೆ ಮೊದಲು ಸುಂದರವಾದ ಚಿತ್ರವನ್ನು ಬರೆದ. ಮನಸ್ಸು ತೃಪ್ತಿಯಾದ ಮೇಲೆ ಅದರಲ್ಲಿ ಜೀವಕಳೆತುಂಬಿದ. ಅದರಿಂದಲೇ ಈ ಲೋಕೋತ್ತರ ಸ್ತ್ರೀರತ್ನ ಸೃಷ್ಟಿಯಾಗಿರಬೇಕು.)


ದುಷ್ಯಂತ ಶಕುಂತಲೆಯನ್ನು ಕಂಡಾಗ ಅವಳು ನಾರುಮಡಿಯನ್ನು ಉಟ್ಟು ಗಿಡಕ್ಕೆ ನೀರೆರೆಯುತ್ತಿರುತ್ತಾಳೆ. ಆ ವಿರಾಗಿಣಿಯ ವೇಷವನ್ನು ಕೂಡ ಕವಿ ಅನುರಾಗದ ದೃಷ್ಟಿಯಿಂದಲೇ ನೋಡುತ್ತಾನೆ:

"ಹಾವಸೆಯಿಂದ ಸುತ್ತುವರಿದ ಕಮಲವೂ, ಕಪ್ಪುಕಲೆಯಿಂದ ಚಂದ್ರನೂ ಕಳೆಗೊಳ್ಳುವಂತೆ ಇವಳು ನಾರುಮಡಿಯನ್ನು ಉಟ್ಟಿದ್ದರೂ ಮತ್ತಷ್ಟು ಸುಂದರವಾಗಿಯೇ ತೋರುತ್ತಾಳೆ. ಸ್ವಭಾವತಃ ಸುಂದರವಾಗಿರುವವರಿಗೆ ಯಾವುದೂ ಅಲಂಕಾರವೇ ಅಲ್ಲವೆ?"

ದುಷ್ಯಂತ ಕಣ್ವಾಶ್ರಮಕ್ಕೆ ಕಾಲಿಟ್ಟಾಗ ಮೊತ್ತಮೊದಲಿಗೆ ಶಕುಂತಲೆ ಅವನನ್ನು ನೋಡುತ್ತಾಳೆ. ಅರಸನನ್ನು ನೋಡುತ್ತಲೇ ಅನುರಾಗ ಹುಟ್ಟಿದಾಗ ಅವಳಿಗೇ ಆಶ್ಚರ್ಯ. ಆಶ್ರಮ ಜೀವನಕ್ಕೆ ವಿರೋಧವಾದ ವಿಕಾರಕ್ಕೆ ಒಳಗಾಗುತ್ತಿರುವೆನಲ್ಲ ಎಂದು ತನ್ನಷ್ಟಕ್ಕೇ ಮಾತನಾಡಿಕೊಳ್ಳುತ್ತಾಳೆ. ಈ ಅರಿವು ಇರಬೇಕಾದರೆ ಶಕುಂತಲೆ ಮಾಲವಿಕೆಯಂತೆ ಮುಗ್ಧೆಯಲ್ಲ. ಹದಿನೆಂಟರ ತರುಣಿ. ಅವಳಿಗೆ ಸ್ತ್ರೀಸಹಜ ಲಜ್ಜೆಯಿದೆ; ಆರ್ಯಸ್ತ್ರೀಯ ಪಾವಿತ್ರ್ಯವಿದೆ. ಆಂಗ್ಲ ಸಾಹಿತ್ಯದಲ್ಲಿ ಶೇಕ್ಸ್‌ಪಿಯರ್ ಕವಿಯ ಜೂಲಿಯೆಟ್ ಸ್ತ್ರೀಸೌಂದರ್ಯಕ್ಕೆ, ಸ್ತ್ರೀಪಾತ್ರಕ್ಕೆ ತಿಲಕಪ್ರಾಯಳೆಂದು ತಿಳಿಯುತ್ತೇವೆ. ಕಾಳಿದಾಸನ ಶಕುಂತಲೆ ಜೂಲಿಯೆಟ್‌ಗಿಂತ ಶ್ರೇಷ್ಠಳೆಂದು ವಿದ್ವಾಂಸ Frazer ಹೀಗೆ ಹೇಳಿದ್ದಾರೆ:

"Gentler, more winning in her grace, more youthful than Gretchen or Juliet" She. (Shakuntala) has a deeper note, a more human charm than either. Eastern, subtle, evasive, throbbing with love veilted with reserve, there yet grows within her a passionate seething love for the King which she tries to stifle but from which she can find no peace.''

ಆಧುನಿಕ ಆಭರಣ



ವಂಕಿ ಎನ್ನುವುದು ಆಧುನಿಕ ಆಭರಣ,
ಇದರಿಂದ ಎಲ್ಲೆ ಮೀರುವುದಿಲ್ಲ ಜನನ,
ಐದು ವರ್ಷಕ್ಕೊಮ್ಮೆ ಬೇಕಾದ ಹಾಗೆ
ಒಂದೊಂದು ಮುರಿ ಹಾಕಿ ಸುಖಿಸುವಳು ರಾಧೆ.

— ದಿನಕರ ದೇಸಾಯಿ

ಕಣ್ವರ ಸಾಕುಮಗಳು ಶಕುಂತಲೆ ತಂದೆಯಿಲ್ಲದಾಗ ಅರಸು ದುಷ್ಯಂತನೊಡನೆ ಗಾಂಧರ್ವ ವಿವಾಹ ಮಾಡಿಕೊಳ್ಳುತ್ತಾಳೆ. ಎಂದರೆ, ಸ್ತ್ರೀಗೆ ಅಂದಿನ ಕಾಲಕ್ಕೆ ತನ್ನ ಪತಿಯನ್ನು ಪ್ರೌಢಳಾದ ಮೇಲೆ ತಾನೇ ಆರಿಸಿಕೊಳ್ಳುವ ಸ್ವಾತಂತ್ರ್ಯವಿತ್ತು; ಬಾಲ್ಯವಿವಾಹ ಬಳಕೆಯಲ್ಲಿರಲಿಲ್ಲ. ಎಂದು ಗೊತ್ತಾಗುತ್ತದೆ. ಗಾಂಧರ್ವವಿವಾಹದ ನಂತರ ದುಷ್ಯಂತನನ್ನೇ ಅನನ್ಯಮನಸ್ಕಳಾಗಿ ಚಿಂತಿಸುತ್ತಾ ಕಣ್ವರು ತನ್ನನ್ನು ಅತಿಥಿಸತ್ಕಾರಕ್ಕೆ ನೇಮಿಸಿದ್ದನ್ನು ಕೂಡಾ ಮರೆಯುತ್ತಾಳೆ. ದುರ್ವಾಸ ಮುನಿ ಬಂದಾಗ ಅವನ ಆದರಕ್ಕೆ ಕುಂದು ಬಂದು "ಯಾವನನ್ನು ಕುರಿತು ನೀನು ಇಷ್ಟು ಅನನ್ಯಮನಸ್ಕಿನಿಂದ ಚಿಂತಿಸುತ್ತಿರುವೆಯೋ ಅವನು ನಿನ್ನನ್ನು ಮರೆತು ಬಿಡಲಿ" ಎಂದು ಶಾಪ ಕೊಡುತ್ತಾನೆ. ಶಾಪದ ಪರಿಣಾಮವಾಗಿ ಬೇಗನೇ ಕರೆಸಿಕೊಳ್ಳುತ್ತೇನೆಂದು ಹೇಳಿಹೋದ ಅರಸು ಶಕುಂತಲೆಯನ್ನು ಸಂಪೂರ್ಣವಾಗಿ ಮರತೇಬಿಡುತ್ತಾನೆ. ಗರ್ಭಿಣಿಯಾದ ಶಕುಂತಲೆಯನ್ನು ಕಣ್ವರು ಶಿಷ್ಯರ ಸಮೇತ ಕಳಿಸಿಕೊಡುತ್ತಾರೆ. ಮರವಿನ ಫಲವಾಗಿ ಅರಸು ಅವಳನ್ನು ಸ್ವೀಕರಿಸುವದಿಲ್ಲ ಹಿರಿಯರ ನೆರವಿಲ್ಲದೆ ತಾನೇ ಮಾಡಿಕೊಂಡ ಮದುವೆಯ ಕಹಿ ಫಲವನ್ನು ಅನುಭೋಗಿಸಲಿ ಎಂದು ಋಷಿ ಶಿಷ್ಯರೂ ಸಹಾನುಭೂತಿಯನ್ನು ತೋರಿಸದೆ ಹೊರಟು ಹೋಗುತ್ತಾರೆ. ಹೀಗೆ ಎಲ್ಲರಿಂದಲೂ ಪರಿತ್ಯಕ್ತಳಾದ ಶಕುಂತಲೆ ದುಃಖದಿಂದ ಅಳುತ್ತಿರುವಾಗ ತಾಯಿ ಮೇನಕೆ ಬೆಳಕಿನ ರೂಪದಿಂದ ಬಂದು ಎತ್ತಿಕೊಂಡು ಹೋಗುತ್ತಾಳೆ. ಇಲ್ಲಿಗೆ ಐದು ಅಂಕಗಳಲ್ಲಿ ಪ್ರಥಮದರ್ಶನ ಪ್ರಣಯ ಜೀವನದ ನಾಟಕ ದುರಂತವಾಗುತ್ತದೆ

ಅರಸು ಶಕುಂತಲೆಯನ್ನು ಮರೆತ ಕಾರಣ ಅವಳು ತನ್ನ ಪ್ರಣಯದ ಮಧುರ ಸನ್ನಿವೇಶಗಳನ್ನು ನೆನಪು ಮಾಡತೊಡಗಿದಾಗ ಯಾವಳೋ ಹೆಂಗಸು ತನ್ನ ಸ್ತ್ರೀ ಸಹಜ ಕುಟಿಲತೆಯಿಂದ ಕಥೆ ಕಟ್ಟುತ್ತಿದ್ದಾಳೆಂದು ತಿಳಿದು ಅರಸು ಹಾಸ್ಯ ಮಾಡಿದಾಗ, ಶಕುಂತಲೆ ಕೋಪದಿಂದ ಅನಾರ್ಯ ಎಂದೇ ಸಂಬೋಧಿಸುತ್ತಾಳೆ ಇಷ್ಟೊಂದು ಆತ್ಮಗೌರವ, ಧೈರ್ಯಗಳಿರುವ ಶಕುಂತಲೆ ಅವನ ಅಧಿಕಾರಕ್ಕೆ ಆಹ್ವಾನವಿತ್ತು, "ಸರಿ. ನನ್ನನ್ನು ಬೇಕಾದರೆ ಸೆರೆಮನೆಯಲ್ಲಿಟ್ಟು ನನ್ನ ತಂದೆಯನ್ನು ಕರೆಯಿಸಿ ವಿಷಯದ ಇತ್ಯರ್ಥ ಮಾಡುವದು ರಾಜಧರ್ಮ. ಹಾಗೆ ಮಾಡು" ಎಂದು ಹೇಳಬಹುದಿತ್ತು. ಆದರೆ. ಅದೊಂದನ್ನು ಮಾಡದೆ ಕಾಳಿದಾಸನ ಶಕುಂತಲೆ ಸಾಮಾನ್ಯ ಹೆಂಗಸಿನಂತೆ ಧೈರ್ಯಗುಂದುತ್ತಾಳೆ. ದುರ್ವಾಸನ ಶಾಪ ಬರೀ ಶಕುಂತಲೆಯ ವಿಷಯಕ್ಕೆ ಅಷ್ಟೇ ಸಂಬಂಧಿಸಿದುದು. ಆದರೆ, ಅರಸು. ಅನುಸೂಯೆ. ಪ್ರಿಯಂವದೆ, ಕಣ್ವರ ಆಶ್ರಮ ಎಲ್ಲವನ್ನೂ ಹೇಗೆ ಮರೆತ ಎಂಬುದೇ ದೊಡ್ಡ ಸಮಸ್ಯೆ.

ಮುಂದಿನ ಎರಡು ಅಂಕಗಳಲ್ಲಿ ಕಠಿಣ ವ್ರತಸ್ಥಳಾದ ಶಕುಂತಲೆ ತಪಸ್ವಿನಿಯ ಜೀವನವನ್ನು ಸಾಗಿಸುತ್ತ, ಲೋಕೋತ್ತರ ಕೀರ್ತಿಶಾಲಿಯಾದ ಮಗನೊಡನೆ ತನ್ನ ಮನದನ್ನ ದುಷ್ಯಂತ ಮಹಾರಾಜನನ್ನು ಮರಳಿ ಸೇರಿಕೊಳ್ಳುತ್ತಾಳೆ. ಹೀಗೆ ಈ ನಾಟಕ ಸುಖಾಂತವಾಗುತ್ತದೆ.

ಮೊದಲಿನ ಐದಂಕಗಳ ದುರಂತ ನಾಟಕಕ್ಕೂ ಮುಂದಿನ ಎರಡು ಅಂಕಗಳ ಸುಖಸನ್ನಿವೇಶಗಳಿಗೂ ಶಕುಂತಲೆಯೇ ನಾಯಿಕೆಯಾಗಿ, ತನ್ನ ದುಡುಕಿನಿಂದ ದುರಂತ ಸಹಿಸಿ ಲೌಕಿಕರಿಗೆ ಆದರ್ಶವಾಗುವಂತೆ ಅವಳನ್ನು ಸೃಷ್ಟಿಸಿದ್ದಾನೆ ಕಾಳಿದಾಸ ಮಹಾಕವಿ !

ಶಕುಂತಲೆಯ ಪಾತ್ರದ ವೈಶಿಷ್ಟ್ಯಕ್ಕೆ ಅವಳ ಬೇರೆ ಬೇರೆ ಕೆಲವು ಗುಣಗಳನ್ನು ಇಲ್ಲಿ ಹೇಳಬೇಕು. ತಪೋವನ ಕನ್ಯೆಯಾಗಿದ್ದರೂ ಆಕಸ್ಮಿಕವಾಗಿ ಒದಗಿದ ಪುರುಷ ಸಂಪರ್ಕದಿಂದ ವಿಚಲಿತಳಾದರೂ ಪೂರ್ತಿ ಮೈಮರೆಯುವದಿಲ್ಲ. ಸ್ತ್ರೀಸಹಜವಾದ ಆತ್ಮಗೌರವವನ್ನು ತೋರಿಸಿ ಸಖಿಯರು ಹೊರಟು ಹೋದಾಗ ತಾನೂ ಹೋಗಲೆಳಸಿದಾಗ ಅರಸು ಅವಳನ್ನು ತಡೆಯುತ್ತಾನೆ. ಆಗ, "ಪೌರವ ರಕ್ಷ ವಿನಯಮ್ ಮದನ ಸಂತಪ್ತಾಪಿ ನ ಖಲು ಆತ್ಮನಃ ಪ್ರಭವಾಮಿ

(ಪುರುವಂಶದ ಅರಸೇ ನಿನೆಯುವನ್ನು ನೀರು ವದು ಬೇಡ. ಮದನ ಪೀಡಿತಳಾದರೂ ಸಹ ನನ್ನ ಹೂಣೆ ಪೂರ್ತಿ ನನ್ನದಲ್ಲ) ಎಂದು ಹಿರಿಯರ ಬಗೆಗೆ ಗೌರವ ತೋರುತ್ತಾಳೆ. ತಪೋವನದ ಸಾತ್ತ್ವಿಕ ವಾತಾವರಣದಲ್ಲಿ ಬೆಳೆದು ಬಂದ ಅವಳ ಹೃದಯದ ಸ್ನೇಹ ಸೌಹಾರ್ದಗಳನ್ನೂ ಮರೆಯುವಂತಿಲ್ಲ. ವನಜ್ಯೋತ್ಸ್ನೆ ಎಂಬ ಬಳ್ಳಿಯನ್ನು ಬೆಳೆಸಿ ಅದನ್ನು ಸಹಕಾರ ವೃಕ್ಷಕ್ಕೆ ಅಂಟಿಸಿ ನಿತ್ಯವೂ ಅದಕ್ಕೆ ಆರೈಕೆ ಮಾಡುವದು; ಹರಿಣ ಶಿಶುವನ್ನು ಮಗುವಿನಂತೆ ಲಾಲನೆ ಪಾಲನೆಮಾಡುವುದು; ಪತಿಗೃಹಕ್ಕೆ ತೆರಳುವ ಉತ್ಸಾಹದಲ್ಲಿ ಕೂಡ ಅದನ್ನು ಮರೆಯದಿರುವದು; ಸಖಿಯರೊಡನೆ ಏಕಜೀವಿಯಾಗಿ ವರ್ತಿಸುವದು, ಸಾಕುತಂದೆಯ ವಿಷಯವಾಗಿ ಅವಳಿಗಿರುವ ಉತ್ಕಟ ಪ್ರೇಮ ಸಂಸ್ಮರಣೀಯ ಗುಣಗಳಾಗಿವೆ. ಪತಿ ತನ್ನನ್ನು ತಿರಸ್ಕರಿಸಿದರೂ ಅವನನ್ನೇ ನಂಬಿ ತಾಪಸ ಜೀವನ ನಡೆಸಿದ ಅವಳ ಪತಿಭಕ್ತಿ ಆದರ್ಶವಾಗಿದೆ.

ಗೌತಮಿ

ಆರ್ಯ ಗೌತಮಿ ವಿರಾಗಿಣಿಯಾಗಿದ್ದರೂ ವೃದ್ಧೆಯಾದ ಅವಳು ಆಶ್ರಮವಾಸಿಗಳೆಲ್ಲರನ್ನೂ ಮಕ್ಕಳಂತೆ ನೋಡಿಕೊಳ್ಳುತ್ತಾಳೆ. ಅವರ ಯೋಗಕ್ಷೇಮವನ್ನು ಚಿಂತಿಸುತ್ತಾಳೆ. ಆದರೂ ಅವಳ ಕಣ್ಣು ತಪ್ಪಿ ಶಕುಂತಲೆಯ ಅಚಾತುರ್ಯ ನಡೆದು ಹೋದಾಗ ಕೆಡುಕೆನಿಸಿದರೂ 'ಶಕುಂತಲೆ ಯೋಗ್ಯನನ್ನೇ ಹೊಂದಿಕೊಂಡಿದ್ದಾಳೆ' ಎಂದು ಸಮಾಧಾನ ಮಾಡಿಕೊಳ್ಳುತ್ತಾಳೆ. ಶಕುಂತಲೆಯನ್ನು ಪತಿಗೃಹಕ್ಕೆ ಕರೆದುಕೊಂಡು ಹೋದಾಗ "ಅಃ ತಾಪಸ ವೃದ್ಧೇ" ಎಂದು ದುಷ್ಯಂತ ಜರಿದಾಗಲೂ ಸಹಿಸಿಕೊಂಡು ಶಕುಂತಲೆಯ ಹಿತ ಚಿಂತನವನ್ನೇ ಅನುಲಕ್ಷಿಸಿ ಅರಸನ ಮನಸ್ಸನ್ನು ತಿರುಗಿಸಲು ಪ್ರಯತ್ನಿಸುತ್ತಾಳೆ. ತಿರಸ್ಕೃತಳಾದ ಶಕುಂತಲೆ ಎದೆಬಿರಿಯುವಂತೆ ಗೋಳಾಡುವಾಗ 'ಅಯ್ಯೋ ಮುಂದೆ ನನ್ನ ಮಗುವಿನ ಗತಿಯೇನು?" ಎಂದು ಗೌತಮಿಯೂ ಕಣ್ಣೀರು ಹರಿಸುತ್ತಾಳೆ. ವಿರಾಗಿಣಿಯಾಗಿದ್ದರೂ ಲೌಕಿಕ ಅನುಭವವುಳ್ಳ ದಿವ್ಯ ಜೀವನ ಗೌತಮಿಯದು!


ಅನುಸೂಯಾ-ಪ್ರಿಯಂವದೆ

ಇವರಿಬ್ಬರೂ ಶಕುಂತಲೆಯ ಪ್ರಿಯ ಸಖಿಯರು. ಅನಸೂಯೆ ಮಾತಿನಲ್ಲಿ ಗಂಭೀರವಾದರೆ ಪ್ರಿಯಂವದೆ ವಾಚಾಳಿ-ವಿನೋದಿನಿ.

ಅನಸೂಯೆ ಯಾವಾಗಲೂ ಶಕುಂತಲೆಯ ಹಿತಚಿಂತನೆ ಮಾಡುತ್ತಾಳೆ. ಅಚಾತುರ್ಯದಿಂದ ಮುಗ್ಧೆಯಾದ ಶಕುಂತಲೆ ಕಷ್ಟಕ್ಕೀಡಾಗಬಹುದೆಂದು ಮೊದಲೇ ಊಹಿಸಿ ಯಾವಾಗಲೂ ಅವಳನ್ನು ನೆರಳಿನಂತೆ ಕಾಯುತ್ತಾಳೆ. ಆದರೂ ಒಂದು ಗಳಿಗೆ ಅವಳು ಕಣ್ಮರೆಯಾದಾಗ ದುರ್ವಾಸರು ಬಂದು ಶಾಪ ಕೊಡುತ್ತಾರೆ. ತತ್ಕ್ಷಣ ಅನಸೂಯೆ ಅವರ ಪಾದ ಹಿಡಿದು, "ಗುರುತಿನ ವಸ್ತು ದರ್ಶನದಿಂದ ಅವನಿಗೆ ಅವಳ ನೆನಪಾಗಲಿ" ಎನ್ನುವ ಉಃಶಾಪ ಪಡೆಯುತ್ತಾಳೆ. ಎಂತೆಯೇ ಕಳೆದು ಹೋದ ಉಂಗುರದ ದರ್ಶನದಿಂದ ದುಷ್ಯಂತ ಶಕುಂತಲೆಯರ ಪುನರ್ಮಿಲನವಾಗುತ್ತದೆ. ಈ ಅಪ್ರಿಯವನ್ನು ಹೇಳಿ ಗೆಳತಿಯ ಮನನೋಯಿಸುವ ಇಷ್ಟವಿಲ್ಲದೆ, ಶಕುಂತಲೆ ಪತಿ ಗೃಹಕ್ಕೆ ಹೊರಟಾಗ, 'ಅರಸು ನಿನ್ನನ್ನು ಮರೆತರೆ ಈ ಉಂಗುರವನ್ನು ತೋರಿಸು' ಎಂದು ಪರ್ಯಾಯವಾಗಿ ಎಚ್ಚರಿಸುತ್ತಾಳೆ. ಶಕುಂತಲೆಯ ಹಿತಚಿಂತನೆಯೇ ಜೀವನದ ಗುರಿಯಾಗಿರುವ ಸ್ನೇಹ ಸೌಹಾರ್ದದ ಗಂಭೀರಮೂರ್ತಿ ಅನಸೂಯೆ.

ಪ್ರಿಯಂವದೆ

ಬೇಸರ ಕಳೆಯುವಂತೆ ವಿನೋದದ ಪ್ರಿಯವಾದ ಮಾತನ್ನಾಡುತ್ತಾಳೆ-ಪ್ರಿಯಂವದೆ. ಪ್ರೇಮ ಪೀಡಿತಳಾದ ಶಕುಂತಲೆಯನ್ನು ಕೀಟಲೆ ಮಾಡಿ ಅವಳ ಮುಖವನ್ನು ಆರಕ್ತವರ್ಣವನ್ನಾಗಿ ಮಾಡುವದೆಂದರೆ ಪ್ರಿಯಂವದೆಗೆ ಬಹಳ ಅಚ್ಚುಮೆಚ್ಚು. ಅವಳ ಮಾತಿನಲ್ಲಿ ಅಸತ್ಯಕ್ಕೆ



ಸ್ಪದವಿಲ್ಲ. "ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯಾತ್" ಎನ್ನುವಂತೆ ಆದರ್ಶ ವಿನೋದಿನಿ ಅವಳು. ಪ್ರಿಯಂವದೆ-ಅನಸೂಯೆಯರಂತೆ ಕಾಳಿದಾಸನ ಬೇರೆ ಯಾವ ನಾಟಕದ ಗೌಣ ಪಾತ್ರಗಳೂ ಓದುಗರ ಮನಸ್ಸಿನಲ್ಲಿ ನೆಲೆಯೂರಿ ನಿಲ್ಲುವದಿಲ್ಲ

ಕಾಳಿದಾಸ ಮಹಾಕವಿ ಮಾಲವಿಕೆ, ಉರ್ವಶಿ ಹಾಗೂ ಶಕುಂತಲೆಯರ ಪಾತ್ರಗಳಲ್ಲಿ ಸ್ತ್ರೀಯ ವ್ಯಕ್ತಿತ್ವದ ಮೂರು ರೂಪಗಳನ್ನು ಚಿತ್ರಿಸಿದ್ದಾನೆ

ಮಾಲವಿಕಾಗ್ನಿಮಿತ್ರದ ಮುಗ್ಧಾ ನಾಯಿಕ ಮಾಲವಿಕೆ ಲೌಕಿಕ ಜೀವಿ. ದುರ್ದೈವದಿಂದಾಗಿ ರಾಜಕುಮಾರಿಯಾಗಿದ್ದರೂ ಅರಮನೆಯ ಅಂತಃಪುರದ ದಾಸಿಯಾಗಿ ಅಲ್ಲಿಯ ವಿಲಾಸ ವೈಭವಗಳನ್ನು ಕಂಡು ತಾನೂ ಅದನ್ನು ಪಡೆಯಲು ಕಾತರಿಸುತ್ತಾಳೆ. ದೈವಾನುಕೂಲದಿಂದ ಕೊನೆಗೆ ಅದನ್ನು ಪಡೆಯುತ್ತಾಳೆ. ಆದರೆ, ಅವಳ ಲೌಕಿಕ ಪ್ರೇಮ ಲೌಕಿಕವಾಗಿಯೇ ಉಳಿಯುತ್ತದೆ. ವಿಕ್ರಮೋರ್ವಶೀಯದ ಉರ್ವಶಿ ಅತಿಮಾನವ (Superhuman) ಜೀವಿ. ಆದರೆ. ಇಂದ್ರಿಯ ಚಾಪಲ್ಯಕ್ಕೆ ಒಳಗಾಗಿ ದೇವಲೋಕದ ದಿವ್ಯಪ್ರೇಮವನ್ನು ಮಾನವರ ಸಾಮಾನ್ಯ ಕಾಮಜೀವನವನ್ನಾಗಿ ಮಾರ್ಪಡಿಸುತ್ತಾಳೆ: ಅಧಃಪತಿತಳಾಗುತ್ತಾಳೆ. ಶಾಕುಂತಲದ ಮಧ್ಯಮಾ ನಾಯಿಕೆ ಶಕುಂತಲೆಯ ಪ್ರೇಮ ಉರ್ವಶಿಯ ಪ್ರೇಮಕ್ಕೆ ಸಂಪೂರ್ಣ ವಿರುದ್ಧವಾದದ್ದು. ದುಡುಕಿ ಗಾಂಧರ್ವ ವಿವಾಹ ಮಾಡಿಕೊಂಡು ಅದರ ಕಹಿಫಲವನ್ನುಂಡ ಮೇಲೆ ಪಶ್ಚಾತ್ತಾಪದ ಅಗ್ನಿಯಲ್ಲಿ ಬೆಂದು ಪರಿಶುದ್ಧಳಾಗುತ್ತಾಳೆ. ತನ್ನ ತಾಪಸ ಜೀವನದ ಪ್ರಭಾವದಿಂದ ಮಾನವ ಲೋಕದ ಕಾಮವನ್ನು ದೇವಲೋಕದ ದಿವ್ಯಪ್ರೇಮವನ್ನಾಗಿ ಮಾರ್ಪಡಿಸುತ್ತಾಳೆ.

ಪ್ರೇಮ ಜೀವನ ಮಾನವರಿಗೆ ನಿಸರ್ಗದತ್ತವಾಗಿ ಬಂದ ಬಯಕೆ. ಪ್ರತಿಯೊಬ್ಬ ಬರೆಹಗಾರನೂ ಪ್ರೇಮದ ಕಥಾವಸ್ತುವನ್ನೇ ಆಧರಿಸಿ ಕಥೆ ಹೆಣೆಯುತ್ತಾನೆ. ದೈವಿಕ ಬೆಂಬಲವಿದ್ದರೆ ಜೀವನ ಸುಖಾಂತವಾಗಬಹುದು ಇಲ್ಲದಿದ್ದರೆ ದುಃಖಾಂತವಾಗಿ ಪರಿಣಮಿಸಬಹುದು. ಶೇಕ್ಸ್ಪಿಯರ್ ಮಹಾಕವಿ ಕೂಡ ಇದೇ ಕಥಾವಸ್ತುವನ್ನೇ ಗುರಿಯಾಗಿಟ್ಟುಕೊಂಡು ಎಲ್ಲ ನಾಟಕಗಳನ್ನು ಬರೆದಿದ್ದಾನೆ. ಕಾಳಿದಾಸನ ನಾಯಿಕೆಯರಂತೆಯೇ ಶೇಕ್ಸ್ಪಿಯರನ ಜೂಲಿಯೆಟ್ ಪೋರ್ಶ್ಯಾ. ರೋಜಲಿಂಡ್, ಒಫೀಲಿಯಾ, ಇಮೋಜೆನ್, ಪರ್ಡಿಟಾ, ಡೆಸ್ಡಿಮೋನಾ ಇವರೆಲ್ಲ ಸ್ತ್ರೀಯ ವ್ಯಕ್ತಿತ್ವದ ಒಂದೊಂದು ರೂಪವನ್ನು ಬಿಂಬಿಸುತ್ತಾರೆ. ಆದರೆ, ಇವರೆಲ್ಲ ಬುದ್ಧಿಜೀವಿಗಳು; ಗಂಡಸಿನ ಸಮಾನವಾಗಿ ನಿಲ್ಲುವ ಎದೆಗಾರಿಕೆಯಿದೆ ಇವರಲ್ಲಿ. ಕಾಳಿದಾಸನ ನಾಯಿಕೆಯರಂತೆ ಆದ ಅನ್ಯಾಯವನ್ನು ಮರುಮಾತಿಲ್ಲದೆ ಸಹಿಸುವ ನಾಯಿಕೆಯರು ಡೆಸ್ಡಿಮೋನಾ, ಹರ್ಮಿಯಾನಿಯಂಥ ಒಬ್ಬಿಬ್ಬರು ಅಷ್ಟೇ. ಇದಕ್ಕೆ ಕಾರಣ ಸ್ತ್ರೀಯ ವ್ಯಕ್ತಿತ್ವದ ಬಗೆಗೆ ಪಾಶ್ಚಾತ್ಯ ಪೌರ್ವಾತ್ಯ ವಿಚಾರಗಳು ಬೇರೆ ಬೇರೆಯಾಗಿದ್ದುದು. ಪೌರ್ವಾತ್ಯರ ಕಲ್ಪನೆಯಲ್ಲಿ ಆಗ ಸ್ತ್ರೀ ಬುದ್ಧಿಜೀವಿಯಾಗಿ ಗಂಡಸಿನ ಸರಿಸಮಾನವಾಗಿ ನಿಲ್ಲಲು ಅವಕಾಶವಿರಲಿಲ್ಲ. ಇದಕ್ಕಿಂತ ಪರದಲ್ಲಿ ಉಜ್ವಲ ಸ್ಥಾನ ಗಳಿಸುವದು ಭಾರತೀಯ ತತ್ತ್ವಜ್ಞಾನದ ತಿರುಳು.

ಅದಕ್ಕೆಂದೇ ಕಾಳಿದಾಸ ದೇಹದ ಹಂಬಲನ್ನೇ ಗುರಿಯಾಗಿಟ್ಟುಕೊಳ್ಳದೆ ಸಂಯಮ, ಸ್ವಾರ್ಥತ್ಯಾಗ, ಸದಾಚಾರಗಳಲ್ಲಿ ಮಾನವಜೀವನದ ಕಾಮವನ್ನು ಸ್ವರ್ಗೀಯ ಪ್ರೇಮವನ್ನಾಗಿ ಮಾರ್ಪಡಿಸಿಧವರ ಬಾಳು ಸುಖ-ಶಾಂತಿ ಸಮೃದ್ಧಿ ಹೊಂದುವದು ಅದರಲ್ಲಿಯೂ ಪುರುಷನಲ್ಲಿ ಪೌರುಷದ ಪ್ರವೇಶ ಮಾಡಿಸಬಲ್ಲ ಶಕ್ತಿರೂಪಿಣಿಯಾದ ಸ್ತ್ರೀಯ ಹೊಣೆಗಾರಿಕೆ ಹೆಚ್ಚಿನದು; ಅದು ಶಾಸ್ತ್ರ ಸಮ್ಮತವೂ ಆಹುದು. ಇದನ್ನೇ ತನ್ನ ಕಾವ್ಯ-ನಾಟಕಗಳಿಂದ ಸಾಮಾಜಿಕರ ಮನದ ಮೇಲೆ ಬಿಂಬಿಸುವದೇ ಕಾಳಿದಾಸನ ಸ್ತ್ರೀ ಪಾತ್ರ ಸೃಷ್ಟಿಯ ರಹಸ್ಯ.



ಸೀರೆ ತುಂಬ ಉದ್ದವಾಗಿತ್ತು, ಅದಕ್ಕೋಸ್ಕರ...



ಸೀತೆಯೋ ಅಲ್ಲ ಉಳಿದವರು

—ಉಷಾ ಕುಲಕರ್ಣಿ

ರಾಜಮ್ಮ, ಮನೆಗೆ ರೂಪ-ಆಕಾರ ಕೊಟ್ಟ ಸೊಸೆಗೆ ಇನ್ನುಳಿದ ಕೆಲಸ ಒಪ್ಪಿಸಿ, ಹಾಸಿಗೆಯಲ್ಲಿ ಬಿದ್ದುಕೊಂಡು ಹಾ...ಹಾ...ಎನ್ನುವಂತೆ ನಿದ್ದೆಯಲ್ಲಿ ಕಣ್ಣಳೆದಿತ್ತು. ಎಲ್ಲೋ ತಟ್ಟನೆ ಎಚ್ಚರಗೊಳಿಸಿದಂತೆ...ಅವರ ಕಣ್ಣೆವೆಗಳು ತೆರೆಯಲು ಯತ್ನಿಸಿದವು. ಇನ್ನೂ ನಿದ್ದೆಯ ಮಂಪರು-ಕಣ್ಣಿನಲ್ಲೇ ತೂಗುತ್ತಿದೆ. ದಣಿದ ದೇಹ ವಿಶ್ರಾಂತಿ ಬಯಸುತ್ತಿದೆ. ಹಾಸಿಗೆಯಲ್ಲಿದ್ದ ಮೈ, ಅತ್ತಿತ್ತ ಹೊರಳಿತೇ ವಿನಾ "ಏಳಬೇಕು" ಎಂದುದಕ್ಕೆ ಒಪ್ಪಿಕೊಳ್ಳಲಿಲ್ಲ. ಆಲಸ್ಯ ಕಣ್ಣಿಗೆ ಮಂಜು ಕವಿಸಿದೆ. ಹೊರಗಡೆ ತೆಂಗಿನ ಸೋಗೆಯ ಚಾಮರ ಬೀಸಿದ ಸದ್ದು, ಹಿತವಾದ ಗಾಳಿ... ಮೈ ಭಾರವಾಗಿ ಜಡವಾಗಿದೆ...ಇನ್ನು ಮಲಗುವ ಆಸೆ!

ಆದರೆ ಪುಟ್ಟ ಕೈಗಳು ಮತ್ತೆ ಮತ್ತೆ ಎಚ್ಚರಗೊಳಿಸುತ್ತಲೇ ಇವೆ.

"ಕಣ್ಣೇಕೊ ಬಾಡುತ್ತದೆ. ಒಂದು ಕ್ಷಣ ಬಿಟ್ಟು ಬರ್ತೇನೆ. ನೀ ಆಡಿಕೊಂಡಿರು ಪುಟ್ಟು... ಅವಳಿಗೆ ಹೋಗೆನ್ನು...ಕ್ಷಣ ಕಣ್ಮುಚ್ಚಿದರೂ ಈ ಹಾಡು!" ತನ್ನನ್ನು ಎಬ್ಬಿಸುತಿದ್ದ ಮೊಮ್ಮಗಳು ಅಲನಾಗೆ, ರಾಜಮ್ಮ ಹೇಳಿದರು.ಬೊಂಬಾಯಿಯ ಕಿರುಚಾಟ. ಗದ್ದಲವನ್ನು ಬಿಟ್ಟು ವಿಶ್ರಾಂತಿಗೆಂದು ಇಲ್ಲಿ ಬಂದು ಎರಡು ದಿನಗಳು ಒಂದು ಕ್ಷಣವೆನ್ನುವಂತೆ ಕಳೆದಿದೆ. ಅಷ್ಟರಲ್ಲಿ ತನ್ನನ್ನು ನೋಡಬಯಸುವ ಹೆಣ್ಣು ಯಾರಿರಬಹುದು? ಉದಾಸೀನಭಾವ ಮನಸ್ಸನ್ನೇ ವ್ಯಾಪಿಸಿ. ರಾಜಮ್ಮಗೆ ಮತ್ತೆ ಯೋಚಿಸುವ ಅವಕಾಶವನ್ನೇ ಕೊಡಲಿಲ್ಲ.

"ದೊಡ್ಡಮ್ಮ...ಅವಲು ನಿಮ್ಮನ್ನ ಕೇಳ್ತಾಲೆ. ನಂಗೆ ಬಿಚಿ ಬಿಚಿ ಉಲಿಕಡ್ಲೆ ಕೊತ್ತು...ಸೀತೂ ಬಂದಿದ್ದಾಲೆ ಎಂದು ಹೇಳಮ್ಮ..."

ಅಚೆ ಮಗ್ಗುಲಾಗಿ ಮಲಗಿದ್ದ ರಾಜಮ್ಮಗೆ "ಸೀತೂ" ಕಿವಿಗೆ ಬಿತ್ತು. ತಟ್ಟನೆ ಎದ್ದು ಕುಳಿತರು. ಮೆಲ್ಲನೆ ಮನಸ್ಸು ನುಡಿ[illegible]ತು.

"ನನ್ನ ಸೀತೂವೇ ಮತ್ತೆ!" ಕಣ್ಣುಜ್ಜುತ್ತ ಹೊರಗೆ ಬಂದರು.

ವೆರಾಂಡಾದ ಮೂಲೆಯಲ್ಲಿ ಹುರಿಕಡ್ಲೆ, ಅಕ್ರೋಟು, ಗೇರುಬೀಜದ ವಡೆ, ತುಂಬಿದ್ದ ಡಬ್ಬಿ ಎದುರಿಗಿಟ್ಟುಕೊಂಡು ಕುಳಿತಿದ್ದಳು ಸೀತೂ. ರಾಜಮ್ಮ ದಿಟ್ಟಿಸಿ ನೋಡಿದರು. ಮುಖ ಹಿಗ್ಗಿ—ಕಣ್ಣರಳಿತು.

"ಸೀತೂ...!"

"ಅನುಮಾನವಾಯ್ತೆ ಅಕ್ಕ? ನಿಮ್ಮ ಸೀತೂ ಹೀಗೆ ಹೇಗಾದ್ಲು ಎಂತ?"

"ಇಷ್ಟು ವರುಷ ಎಲ್ಲಿ ಅಡಗಿದ್ದೆ? ಹೇಗಿದ್ದೆ? ಏನಾಗಿಬಿಟ್ಟದೆ ನಿನ್ನ ಬಣ್ಣ? ರೂಪ?"

"ನಿಮ್ಮ ಮಡಲಲ್ಲಿದ್ದೆ. ನಿಮ್ಮ ಕೈಯೂಟ ಅದಕ್ಕೆ ಆ ರೂಪ ಆ ಬಣ್ಣ ಇತ್ತು! ಈಗ ಯಾರಿದ್ದಾರೆ ಹೇಳಿ ನನ್ನ ಕೇಳೋರು..."

ಸೀತೂನ ಕಣ್ಣಲ್ಲಿ ಕಂಬನಿ ತುಳುಕಾಡಿತು. ರಾಜಮ್ಮ ಮೆಲ್ಲನೆ ಸೆರಗಿನ ತುದಿಯಿಂದ ತಮ್ಮ ಕಣ್ಣೊರಸಿಕೊಂಡರು. ಆ ದಿನಗಳ-ನೆನಪು ಕಣ್ಣೆದುರು ಸುಳಿದು ಹೋಯಿತೇನೊ?

"ನಮ್ಮೊಂದಿಗೆ ಬಾ ಎಂದೆ. ಕಣ್ಣು ತಪ್ಪಿಸಿಕೊಂಡೆ. ಬಂದಿದ್ದರೆ ಬಂಗಾರಿನಂತಿರುತಿದ್ದೆ. ಹಟ! ನಿನ್ನ ಹಟಕ್ಕೇ ಈ ಗತಿಯಾದೆ. ಹುರಿಕಡ್ಲೆ ಮಾರೋ ಕೆಲಸಕ್ಕಿಂತ...ಎಲ್ಲಿಯಾದ್ರೂ ಅಡಿಗೆಗೆ ನಿಂತಿದ್ದರೆ..."

"ಅವರು ಹೇಳಿದಾಗೆ ಕೇಳಿಕೊಂಡು—ಹಾಕಿದಷ್ಟು ತಿಂದುಕೊಂಡು ಇರೋದಕ್ಕಿಂತ...ಈ ಕೆಲಸಾ ಸಾವಿರ ಪಾಲಿಗೆ ಬೇಕಕ್ಕ...ನಿಮ್ಮ ಮನೆ ಹೋದ ಮೇಲೆ, ಇನ್ನೊಂದು ಮನೆಯ ನೀರು ನಾ ಕುಡಿದೇನೆ?"

ರಾಜಮ್ಮಗೆ—ಈ [illegible] ಹೆಣ್ಣು ಸೀತೂನ ಸ್ವಭಾವ ಹೊಸದೆ? ಆದರೆ, ಆ ಮುಖ-ಕೃಶವಾದ ದೇಹ ಕಂಡಾಗ ಅವರ ಮನ ಮುಮ್ಮಲ ಮರುಗಿತು.

"ಅಕ್ಕ...ಕಿಟ್ಟಣ್ಣನ, ಗೋಪೂನ್ನ,ನೋಡಲು ಕಣ್ಣು ಆಸೆಪಡುತ್ತಿದೆ. ಏನಾದರೂ ಮದುವೆ—ಗಿದುವೆ!"

"ನಿನ್ನ ಕಿಟ್ಟಣ್ಣಗೆ ಮದುವೆಯಾಗಿ, ಅದೋ ಅಲ್ಲಿ ಆಡುತ್ತಿದೆಯಲ್ಲ ಆ ಮಗು! ನೀನು ಕೈತುಂಬ ಹುರಿಕಡ್ಲೆ ಕೊಟ್ಟೆಯಲ್ಲ, ಅವನದೇ ಅಚ್ಚು!"

ಸೀತೂನ ಕಣ್ಣುಗಳು ಮಿಂಚಿದವು. ಸುಖ ಅವಳ ತುಟಿಯಲ್ಲಿ ಉಕ್ಕಿ ಬಂತು. ತುಂಬಿದ ತೃಪ್ತಿ ಅವಳಿಗಾಗಿರಬೇಕು!

ರಾಜಮ್ಮ ಒಳಕ್ಕೆ ಹೊರಟರು. ನಾಲ್ಕಾರು ನಿಮಿಷಗಳಲ್ಲಿ ಗೋಪಿಕೃಷ್ಣ ಸೀತೂನೆದುರಿಗೆ ಬಂದು ನಿಂತ!

ಮಾತಿಲ್ಲ-ಕತೆಯಿಲ್ಲ-ತೆರೆದ ಬಾಯಿಂದ ಸೀತೂ ದಿಟ್ಟಿಸಿ ನೋಡಿದಳು ಮಾತ್ರ! ತನ್ನ ಕೈಯಾರೆ ಹಾಲನ್ನು ಉಣಿಸಿ, ಬಿಸಿಯ ನೀರಲ್ಲಿ ಮಿಯಿಸಿದ ಈ ಮೈ ತನ್ನೆತ್ತರವನ್ನು ಮೀರಿ ನಿಂತ ಗೋಪಿಕೃಷ್ಣನನ್ನ ಕಣ್ತುಂಬ ನೋಡುತ್ತಲೇ ಅಳು ಬಂದುಬಿಟ್ಟಿತು. ಬಂದಿದ್ದ ಕಂಬನಿ ಒರಸಿಕೊಳ್ಳುತ್ತ, ಕೇಳಿದಳು ಸೀತೂ,

"ಕಿಟ್ಟಣ್ಣಾ...ಈ ಸೀತೂನ್ನ ಮರೆತಿಯಾ? ನನ್ನ ನೆನೆಪಾದರೂ ಉಂಟೇ?"

ಗೋಪಿಗೆ ಎಲ್ಲವೂ ನೆನಪು. ಸೀತಕ್ಕನನ್ನು ಅವನು ಮರೆಯಲುಂಟೇ? ಮೆಲ್ಲನೆ ಮುಂದಕ್ಕೆ ಬಂದು ಅವಳೆದುರು ಚಿಕ್ಕ ಮಗುವಿನಂತೆ ಕುಳಿತು, ಅವಳ ರಟ್ಟೆ ಹಿಡಿದು "ಆ" ಎಂದು ಬಾಯಿ ತೆರೆದ ಗೋಪಿ! ಸೀತೂ ಅಷ್ಟೇ ತ್ವರೆ

ಯಾಗಿ ಹಿಡಿ ಹುರಿಕಡ್ಲೆಯನ್ನ ಅವನ ಬಾಯಿಗಿಟ್ಟಳು. ಹಸಿದು ಕಂಗಾಲಾದ ಕರುವಿನಂತೆ ಗೋಪಿ ಕರಕರನೆ ಹುರಿಕಡ್ಲೆ ತಿಂದುಬಿಟ್ಟ. ಮತ್ತೆ ಕತ್ತೆತ್ತಿ ಜೋರಾಗಿ ಕರೆದ.

"ಪ್ರಣತಿ...ಪ್ರಣತಿ..."

ತುಂಬ ಜಾಣ್ಮೆಯಿಂದ ಸಿಂಗರಿಸಿಕೊಂಡು, ಸೀರೆಯುಡುತಿದ್ದ ಪ್ರಣತಿಗೆ ಪತಿಯ ಜೋರಿನ ಕರೆ ಕೇಳಿಸಿತು. ನಿರಿಗೆ ಕೈಯಲ್ಲಿರುವಾಗಲೇ ಹೊರಕ್ಕೆ ಬಂದುಬಿಟ್ಟಳು. ಗೋಪಿ ತಟ್ಟನೆ ಕುಳಿತಲ್ಲಿಂದ ಎದ್ದು ಅವಳ ಕೈಹಿಡಿದೆಳೆದು ಸೀತೂನ ಎದುರಿಗೆ ನಿಲ್ಲಿಸಿ ಕೇಳಿದ—

"ಸೀತಕ್ಕ...ಇಕೋ ಇಲ್ಲಿದ್ದಾಳೆ ನಿನ್ನ ಸೊಸೆ! ಹೇಗಿದ್ದಾಳೆ ಹೇಳು? ಚೆಲುವಿನಲ್ಲಿ ಯಾರು ಹೆಚ್ಚು? ಇದ್ದುದನ್ನು ಇದ್ದ ಹಾಗೆ ಹೇಳಬೇಕು ಮತ್ತೆ!"

ಪ್ರಣತಿಗೆ ಏನೋ ಒಂದು ಬಗೆಯ ಹಿಡಿತಡೆ. ಕಡಲೆ ಮಾರುವ ಹೆಂಗಸಿನ ಬಳಿಯಲ್ಲಿ ತನ್ನಾತ ಇಷ್ಟೊಂದು ಸಲಿಗೆ ಕೊಟ್ಟು ತನ್ನನ್ನು ಎಳೆತಂದು, ಆ ಕೊಳಕು ಹುರಿಕಡ್ಲೆ ತಿನ್ನುವುದು ಹಿಡಿಸಲಿಲ್ಲ...

—ತನ್ನ ಸ್ನೇಹಿತೆಯರಿಗೆ ಪರಿಚಯ ಮಾಡಿಕೊಡಲು ತಾನೇ ಯತ್ನಿಸಿದಾಗ,

"ನಾನೇನು ಪ್ರದರ್ಶನಕ್ಕಿಟ್ಟ ಗೊಂಬೆ ಎಂದುಕೊಂಡಿಯಾ? ನೋಡು ಮತ್ತೆ! ಅಷ್ಟೂ ಗೋಪಕನ್ನಿಕೆಯರನ್ನು ಕೈ ಹಿಡಿದು ನಿನ್ನ ಬಿಟ್ಟುಬಿಟ್ಟೇನು!" ಎಂದು ಕೊಂಕು ನುಡಿದು ಪಾರಾಗುತಿದ್ದ ತನ್ನಿನಿಯನಲ್ಲಿ ಎಂದಿಲ್ಲದ ಈ ಬದಲಾವಣೆ ಪ್ರಣತಿಗೆ ಅಚ್ಚರಿ-ಅಸಹನೆ!

ಆದರೆ ಪ್ರತಿ ಆಡುವಂತಿಲ್ಲ! ಹಿಡಿದಿದ್ದ ಕೈಯನ್ನು ಬಿಡಿಸಿಕೊಳ್ಳುವ ಯತ್ನಪಟ್ಟಳು.

"ಕರ್ಪೂರದ ಗೊಂಬೆ! ಕೃಷ್ಣಗೆ ತಕ್ಕ ರಾಧೆ! ಕಣ್ತುಂಬ ನೋಡಿದೆ. ಕಿಟ್ಟಣ್ಣ ಈ ಸುಖ ನೋಡದೆ ಹೇಗೆ ಕಣ್ಮುಚ್ಚಿಯೇನು? ಇಷ್ಟು ದೊಡ್ಡ ಮನುಷ್ಯನಾದ್ರೂ ಈ ಬಡ ಸೀತೂನ್ನ ಮರೆತಿಲ್ಲ..."

ರಾಜಮ್ಮ ನಡುವೆ ಕೇಳಿದ್ರು.

"ಸೀತೂ ಇಷ್ಟು ವರುಷಗಳ ನಂತರ ನಿನಗೆ ನಾವಿಲ್ಲಿ ಬರೋದು ಹ್ಯಾಗೆ ಗೊತ್ತು?"

"ಅಕ್ಕ...ತಲೆಯಲ್ಲಿ ಹುರಿಕಡ್ಲೆ ಎತ್ತಿಕೊಂಡು ತಿರುಗಿದ್ರೂ ಮನಸ್ಸಿನಲ್ಲಿ ನಿಮ್ಮನ್ನ ಮರೆಯಲಾಗಲೇ ಇಲ್ಲ. ದಿನವೂ ಒಂದೇ ಆಸೆ! ಒಂದಲ್ಲ ಒಂದು ದಿನ ನಾನು ಎಲ್ಲರನ್ನು ಕಣ್ತುಂಬ ನೋಡ್ತೇನೆ ಎಂದೂ ಮೊನ್ನೆ ಈಚೆ ಮಾರಲು ಬಂದಾಗ-ಈ ಮನೆಗೆ ಸುಣ್ಣ-ಬಣ್ಣ ಕೊಡುತಿದದ್ದನ್ನು ಕಂಡು ತಡೆಯಲಾರದೆ ಕೇಳಿದೆ. ನನ್ನ ಕಿಟ್ಟಣ್ಣನ ನೋಡೋ ಭಾಗ್ಯ ಇತ್ತು...ಅಮೃತ ಸುರಿದಂತೆ ಕಿವಿಗೆ ಬಿತ್ತು. ನೀವೆಲ್ಲ ಬರೋ ಸುದ್ದಿ"



ಗೋಪಿಕೃಷ್ಣ ಕೆಲಸದ ರಂಗನನ್ನು ಕರೆದು ಹೇಳಿದ.

"ಈ ಹುರಿಕಡ್ಲೆ ಡಬ್ಬಿಯನ್ನೆತ್ತಿ ಒಳಕ್ಕೆ ಹೋಗು." ಹಾಗೆ ಸೀತೂನ ರಟ್ಟೆ ಹಿಡಿದೆತ್ತಿ, "ಒಳಕ್ಕೆ ನಡೆ ಸೀತಕ್ಕಾ--ಇನ್ನ ಈ ಮಾರೋ ಕೆಲಸ ಮಾಡಿದ್ರೆ ನನ್ನಾಣೆ. ಈ ಬಾರಿ ನಿನ್ನ ಹೆಡಿಮುರಿ ಕಟ್ಟಿ ಬೊಂಬಾಯಿಗೆ ಕರೆದೊಯ್ಯುವೆ...ನೋಡ್ತೇನೆ ಆಗ ಹೇಗೆ ಹಟ ಮಾಡ್ತಿಯೊ?"

ರಾಜಮ್ಮಗೆ ಮಗನ ಮಾತಿನಿಂದ ಉಂಡಷ್ಟೇ ತೃಪ್ತಿಯಾಗಿತ್ತು. ಆ ಮಾತಿಗೆ ದನಿಗೂಡಿಸಿ ನುಡಿದರು.

"ನಡೆ ಸೀತೂ... ನನ್ನ ಕೈಯೂಟ ತಿನ್ನದೆ ಏಷ್ಟೋ ವರುಷಗಳಾದವು. ಕಣ್ಣನಾಶೆ ತೃಪ್ತಿಪಟ್ಟಂತೆ, ಒಡಲೂ ತುಂಬಲಿ...ಏಳು...ಏಳು..."

* * *

ಬೊಂಬಾಯಿಯ ಯಾಂತ್ರಿಕ ಜೀವನದಲ್ಲಿ ದಣಿದ ಮನಸ್ಸಿಗೆ ವಿಶ್ರಾಂತಿ ದೊರೆಯಲೆಂದು ಗೋಪಿಕೃಷ್ಣ ತನ್ನ ಹುಟ್ಟೂರಾದ ಮಂಗಳೂರಿಗೆ ಕುಟುಂಬ ಸಮೇತನಾಗಿ ಬಂದು ಆಗಲೇ ಒಂದು ತಿಂಗಳು ಕ್ಷಣ ಎನ್ನುವಂತೆ ಮುಗಿದು ಹೋಯಿತು. ಅಪ್ಪರು-ಇಷ್ಟರು ಬಂದು ಉಂಡು ತಿಂದು ತೇಗಿಯಾಯಿತು. ಮನೆ ಮದುವೆಯ ಗದ್ದಲವನ್ನು ಮೀರಿಸಿದಂತಾಗಿತ್ತು. ಎಲ್ಲರನ್ನು ನೋಡುವ ಹಂಬಲವಿದ್ದ ಕಣ್ಣನಾಸೆಯೂ ಹಿಂಗಿತು. ಮನ ಸುಖದ ಹೊಳೆಯೇ ಹರಿದಿತ್ತು.

-ಸೀತೂ ಮತ್ತೆ ಚೇತರಿಸಿಕೊಂಡಿದ್ದು ರಾಜಮ್ಮನ ಕಣ್ಣಿಗೆ ಗೋಚರಿಸದೆ ಹೋಗಲಿಲ್ಲ. ದಿನವೂ ಅವರ ಮನದಲ್ಲಿ ಒಂದೇ ಯೋಚನೆ-ಸೀತೂನ್ನ ಈ ಬಾರಿ ತಮ್ಮೊಂದಿಗೆ ಉಪಾಯದಿಂದಲಾದರೂ ಕರೆದೊಯ್ದರಾಯಿತು. ಈ ಮನೆಯೊಂದಿಗೆ ಒಂದಾಗಿ ಬೆರೆತ ಅವಳು ಬೇರೆಲ್ಲಿ ಬದುಕಲು ಸಾಧ್ಯ?'

ಪುನಃ ಹೊರಡುವ ದಿನ ಬಂತು. ರಾಜಮ್ಮ, ಗೋಪಿ, ಪ್ರಣತಿ-ಯಾರ ಮಾತಿಗೂ ಸೀತೂ ಬೊಂಬಾಯಿಗೆ ಬರಲೊಪ್ಪಲಿಲ್ಲ. ಈ ಊರು, "ಈ ನೆಲ ಬಿಟ್ಟು ಹೇಗೆ ಬರಲಿ?"

ಕೈತುಂಬ ಹಣ-ಸೀರೆ-ರವಕೆ ಗೋಪಿ, ತನ್ನ ಕೈಗಿತ್ತು ಬೊಂಬಾಯಿಗೆ ಹೊರಟಾಗ, ಕಣ್ಣಿನ ಕಂಬನಿಯಲ್ಲೇ ಅವರೆಲ್ಲರನ್ನು ಬೀಳ್ಕೊಟ್ಟಳು ಸೀತೂ! ಅವಳಾಸರೆಗಿದ್ದುದು ಹುರಿಕಡ್ಲೆಯ ಡಬ್ಬಿ!

* * *

ಮುಂದೆ ನಾಲ್ಕು ತಿಂಗಳು ಕಳೆದಿತ್ತು ಮಾತ್ರ!

ಬೊಂಬಾಯಿಗೆ ಬಂದ ಗೋಪಿಯ ಭಾವಮೈದುನ ದಿನೇಶ ತಂದ ಸುದ್ದಿಗೆ ಮೌನ ಆವರಿಸಿತು. ಮನೆಗೆ ಸಂಜೆ ಆಫೀಸಿನಿಂದ ಮರಳಿದ ಗೋಪಿಕೃಷ್ಣ ವಿಷಯ ತಿಳಿದು ಸೋಫಾದಲ್ಲಿ ಕುಸಿದುಬಿಟ್ಟ.

"ಸೀತೂ ತೀರಿಕೊಂಡಳು...ಆ ದಿನದ ಅವಳ ಕಣ್ಣೀರು ಕೊನೆಯದಾಗಿತ್ತು ಅದೇ ಊರು-

ಅದೇ ನೆಲದಲ್ಲಿ ಅವಳು ಉಳಿದು ಬಿಟ್ಟಳು."

ದಿನೇಶನಿಗೆ ಅಂದು ತನ್ನ ಕೋಣೆಯ ಆಚೆ ಕಂಪೌಂಡಿನ ಅಂತೋನಿಯವರ ಹೊರ ಜಗುಲಿಯಲ್ಲಿ ಸೀತೂ ಪ್ರಜ್ಞಾಶೂನ್ಯಳಾಗಿ ಬಿದ್ದದ್ದೂ ಕಂಡಿತಂತೆ. ಅವನಿಗೆ ಹಿಂದೆ ಅಕ್ಕ ಊರಿಗೆ ಬಂದಾಗ ಮನೆಯಲ್ಲೇ ಈ ಸೀತೂನ ಮುಖ ಕಂಡ ನೆನಪು...ಅದೇ ನೆನಪು ಅವಳಲ್ಲಿಗೆ ಧಾವಿಸುವಂತೆ ಮಾಡಿತು. ಕಣ್ಣಿಗೆ ನೀರು ತಟ್ಟಿ ಎಚ್ಚರಗೊಳಿಸಿ, ತನ್ನಲ್ಲಿದ್ದ ಬಿಸಿಯ ಸ್ವಲ್ಪ ಹಾಲನ್ನು ಕುಡಿಸಿದನಂತೆ. ಅಷ್ಟರಲ್ಲಿ ಅಂತೋನಿಯವರ ಪತ್ನಿ ಹೊರಕ್ಕೆ ಬಂದು ತಾವೂ ದಿನೇಶನಿಗೆ, ಸೀತೂನ್ನ ಎತ್ತಿ ಜಮಖಾನೆಯಲ್ಲಿ ಮಲಗಿಸಲು ಸಹಕರಿಸುತ್ತ ವಿಷಯ ತಿಳಿಸಿದರಂತೆ. "ಈ ಸೀತಕ್ಕಾ...ಕಾಲಿನ ಬಲಹೋಗೋವರೆಗೆ ಒಂದು ಕ್ಷಣ ಒಂದೆಡೆ ನಿಲ್ಲದ ಹೆಂಗಸು. ಊರಿಗೆ ಊರೇ ಗುರುತು...ಹೈಸ್ಕೂಲಿನ ಹುಡುಗಿಯರು, ಕಾನ್ವೆಂಟಿನ ಮಕ್ಕಳು, ದೇವಸ್ಥಾನ, ಇಗರ್ಜಿ, ಎಲ್ಲಿ ಹೋದರೂ ಈ ಸೀತಕ್ಕನ ಗುರುತೇ ಗುರುತು. ಆದರೆ ಯಾರಲ್ಲೂ ಹಣಕ್ಕೆ ಕೈಚಾಚಿದ್ದೂ ನಾನೀ ಎರಡು ತಿಂಗಳಲ್ಲಿ ಕಾಣಲಿಲ್ಲ. ಅಂದು ಇಗರ್ಜಿಯಿಂದ ಮರಳಿ ಬರುತ್ತಿದ್ದಾಗ-ಸೀತಕ್ಕಾ ಕಾಲಿಗೆ ನೋವೆಂದು ಕುಂಟುತ್ತಿದ್ದಾಗ ನಾನೇ ಕೈಹಿಡಿದು ನಮ್ಮ ಮನೆಯ ಹೊರ ಜಗಲಿಯಲ್ಲಿ ಇದ್ದುಬಿಡು ಎಂದೆ. ಸೀತಕ್ಕ ಅದಕ್ಕೆ ಒಪ್ಪಿಕೊಂಡಳು. ಆದರೆ ಒಂದು ಹನಿ ನೀರು ಒಂದು ಅನ್ನದ ನೆನಪೂ ಅವಳಿಗೆ ಬೇಕಿರಲಿಲ್ಲ. ತಾನೇ ಅನ್ನ ಬೇಯಿಸಿ, ಉಪ್ಪು-ಮೆಣಸನ್ನು ನಂಜಿಕೊಂಡು ಊಟ ಮುಗಿಸುತ್ತಿದ್ದಳು. ನನ್ನ ಮಕ್ಕಳಿಗೆ ಮಾತ್ರ ಹುರಿಗಾಳು ಬೆಲೆಗೆ ಕೊಡಲಿಲ್ಲ. ಮಕ್ಕಳನ್ನು ಎಲ್ಲಿಯೇ ಕಾಣಲಿ... ಅವರಿಂದ ಹಣ ಕೇಳಲು ಅವಳಿಗೆ ಮನಸ್ಸು ಬಾರದು...ಕೊಟ್ಟರೆ-ಕೊಟ್ಟರು ಇಲ್ಲ ಎಂದರೆ ಮತ್ತೆ ಮಾತಿಲ್ಲ ಇವಳ ಬಾಯಿಯಲ್ಲಿ. ಸಂಜೆಯಾದರೆ ಹುಡುಗರ ಹಿಂಡೇ ಬರುತ್ತದೆ. ಈ ನಾಲ್ಕು ದಿನಗಳಲ್ಲಿ ಸೀತಕ್ಕ ತುಂಬ ನಿಃಶಕ್ತಿಯಾಗಿದ್ದಾಳೆ. ಏನು ಮಾಡಲಿ ನಾನು? ಉಪವಾಸದಿಂದಲೇ ಈ ಗತಿ ಬಂದಿದೆ. ಬಾಯಿಯ ಸಹಾನುಭೂತಿ ಬಿಟ್ಟರೆ ಇನ್ನೇನು ಮಾಡಬಲ್ಲೆ?"

ಅಂತೋನಿಯವರ ಪತ್ನಿ ಲೂಸಿಯ ಅಸಹಾಯಕತೆಯ ಅರಿವು ದಿನೇಶನಿಗೆ ಆಗದಿರಲಿಲ್ಲ. ಆದರೆ ಮಾತು ಕೇಳಿದ ಅವನಿಗೆ ಸೀತಕ್ಕನ ಬಗ್ಗೆ ಅಭಿಮಾನ ಉಕ್ಕಿದರೂ ಈ ಉಪವಾಸಕ್ಕೆ ಪರಿಹಾರವೇನು? ತಾನು ಓದಲು ಬಂದ ವಿದ್ಯಾರ್ಥಿ. ತನ್ನ ರೂಮಿನಲ್ಲಿ ಇನ್ನೊಬ್ಬ ಸಹಪಾಠಿ. ಸೀತಕ್ಕನ್ನ ಅವನು ಹೇಗೆ ಉಪಚರಿಸಬಲ್ಲ? ಸೀತಕ್ಕನ ಉಸಿರು ನಿಧಾನ ಸಾಗಿತ್ತು. ಹೊದಿಕೆಯನ್ನು ಮೈಗೆ ಬೆಚ್ಚಗೆ ಹೊದಿಸಿ, ಮೆಲ್ಲನೆ ತನ್ನ ರೂಮಿನತ್ತ ಕಾಲೆಳೆದ.

ಮಾರನೆ ದಿನ ದಿನೇಶ ಬೆಳಗಿನಲ್ಲೇ ಮತ್ತೆ ಅಂತೋನಿಯವರ ಕಂಪೌಂಡಿನೊಳಕ್ಕೆ ಬರುತ್ತ, ಅವನ ಕಣ್ಣಿಗೆ ಬಿದ್ದದ್ದೂ-ಮಕ್ಕಳ ಹಿಂಡು ದಿನವೂ ಹುರಿಕಡ್ಲೆಯ ಡಬ್ಬಿಯಿಂದ ಮುಷ್ಟಿ ಕಡ್ಲೆ ತಿಂದರೂ ಗದರಿಸದೆ, ನಗುತ್ತ ಕುಳಿತಿರುತ್ತಿದ್ದ ಸೀತಕ್ಕ-ಇಂದು ಜಮಖಾನೆಗೆ ಅಂಟಿಕೊಂಡು ಮಲಗಿದ್ದು ಅವುಗಳಿಗೆ ನೋಪಸ್ಸಿತ್ತಿದೆ.

ಸ್ಕೂಲಿಗೆ ಹೋಗುವ ಮೊದಲು ಸೀತಕ್ಕನ್ನ ನೋಡಲು ಧಾವಿಸಿ ಬಂದಿದ್ದವು. ದಿನೇಶ ಒಂದು ಕ್ಷಣ ನಿಂತು ನೋಡಿದ. ಆ ಪುಟ್ಟ ಹೃದಯಗಳಲ್ಲಿ ಇಷ್ಟೊಂದು ಪ್ರೀತಿಯ ಸೆಲೆ ಚಿಮ್ಮಿಸಿದ್ದ ಸೀತಕ್ಕನಿಗಾಗಿ ಅವನೆದೆಯಲ್ಲೂ ಅಂತಃಕರಣದ ತೆರೆ ಉಕ್ಕಿಬಂತು. ತೀರ ಸಮೀಪಕ್ಕೆ ಹೋಗಿ ಬಾಗಿ ನೋಡಿದ. ಮಲಗಿದ್ದ ಸೀತೂ. ಮೆಲ್ಲನೆ ಕಣ್ತೆರೆದಳಂತೆ. ದಿನೇಶನ ಮುಖದ ಗುರುತು ಕಣ್ಣುಗಳಿಗೆ ಪರಿಚಿತವಾಗಿ ಕಂಡಿತೇನೋ... ನಿಧಾನವಾಗಿ ಸೀತೂ ಅವನ ಕೈಹಿಡಿದು, ಮೆಲ್ಲನೆ ನುಡಿದಳಂತೆ.

"ಮಗಾ...ಅಕ್ಕಾ...ಕಿಟ್ಟಣ್ಣಾ- ಗೋಪು...ಗೆ ಹೇಳು...ಅವರ ಸೀತೂ...ಹೊರಟು ಹೋದ್ಲು ಅಂತಾ ... ಕುಡಿಯಲು ... ನೀರು ಬೇಕು... ನೀರು..."

ದಿನೇಶ ಗಾಬರಿಯಾದ...ನೀರು ಕೇಳುತ್ತಿದ್ದಾಳೆ. ಬಾಯಾರಿದ ಬಾಯಿಗೆ ತಕ್ಷಣ ನೀರು ಬೇಕು. ತನ್ನ ರೂಮು ಸ್ವಲ್ಪ ದೂರದಲ್ಲಿ... ಹಿಂದು ಮುಂದಿನ ಆಲೋಚನೆಗೆ ಈಗ ಸಮಯವಿಲ್ಲವೆಂದ ಅವನು ಅಂತೋನಿಯ ಮನೆಯೊಳಕ್ಕೆ ಹೋಗಿ ಕೇಳುವ ಅವಸರದಿಂದ ಒಳಕ್ಕೆ ನೋಡಿದಾಗ-ಸೀತೂ ಅವನ ಗದ್ದವನ್ನು ತನ್ನೆಡೆಗೆ ಬಹು ಪ್ರಯಾಸದಿಂದ ತಿರುಗಿಸಿ, ನಿಧಾನವಾಗಿ ನುಡಿದಳು.

"ಮಗಾ...ನೀನೇ ನೀರು ಕೊಡಲಾರಿಯಾ? ನಿನ್ನ ಹತ್ತಿರ ನೀರು..."

ದಿನೇಶನ ಕಂಠ ತುಂಬಿ ಬಂತಂತೆ. ಸೀತೂನ್ನ ಅಲ್ಲಿಯೇ ಬಿಟ್ಟು ತನ್ನ ರೂಮಿಗೆ ಧಾವಿಸಿ ಚೆಂಬು ನೀರು ತಂದು, ಎರಡು ಗುಟುಕು ಸೀತೂನ ತೆರೆದ ಬಾಯಿಗೆ ಹಾಕಿದ. ಸೀತೂನ ಒಣಗಿದ ತುಟಿಯಲ್ಲಿ ನೀರು ತುಳುಕಾಡಿತು. ಕಣ್ಣಿನಲ್ಲಿ ತೃಪ್ತಿ ಕಂಡ ದಿನೇಶ ನೆಮ್ಮದಿಯ ನಿಟ್ಟುಸಿರುಬಿಟ್ಟ.

ಆದರೆ ಮಾರನೆ ದಿನ ಅಂತೋನಿಯವರ ಕಂಪೌಂಡಿನಲ್ಲಿ ಜನ ಸಂತೆಯಂತೆ ನೆರೆದಿದ್ದರು. ಪಾದ್ರಿಗಳ ತಂಡವೇ ಬಂದಿತ್ತು. ಎಲ್ಲ ಜಾತಿಯೂ ಅಲ್ಲಿ ಕೂಡಿತ್ತು. ಹೆಂಗಸರು-ಮಕ್ಕಳು ಬಹುಭಾಗ ಅಲ್ಲಿತ್ತು. ಸೀತೂ ರಾತ್ರಿಯೇ ಕಣ್ಮುಚ್ಚಿದ್ದಳು. ಮಕ್ಕಳ ಪಾಲಿಗೆ ಆ ಹುರಿಕಡ್ಲೆಯ ಸೀತೂ ಇನ್ನಿಲ್ಲವಾಗಿದ್ದಳು. ಮನೆ ಮನೆಗೆ ಹೋಗಿ ಮನೆಯ ಮಕ್ಕಳ ಕ್ಷೇಮ ಸಮಾಚಾರ ತಿಳಿಸುವ ಸೀತೂನ್ನ, ಗೃಹಿಣಿಯರು ಇನ್ನು ಕಾಣರು...ಆ ಹರಟೆ-ಅವಳ ಪ್ರೀತಿಯ ಒತ್ತಾಯ ಯಾವುದೂ ಇನ್ನಿಲ್ಲ...ಆದರೆ ಈ ಸಂಭ್ರಮ ಈ ವೈಭವಕ್ಕೆ ಕಾರಣ!

ಕ್ರಿಸ್ತನನ್ನು ಶಿಲುಬೆಗೇರಿಸಿದ ಪವಿತ್ರ ದಿನ! ಕ್ರಿಸ್ತ ಕಣ್ಮುಚ್ಚಿದ ಆ ಘಳಿಗೆ! ಸೀತೂ ತೀರಿಕೊಂಡಿದ್ದಳು. ಆ ಎಲ್ಲ ಘಳಿಗೆ ಕೂಡಿ ಬಂದಿತ್ತು. ಸೀತೂನ ಕೊನೆಯಲ್ಲಿ! ಸಕಲ ಮರ್ಯಾದೆಯೊಂದಿಗೆ ಸೀತೂನ ಶವದ ಮೆರವಣಿಗೆ ನಗರದ ಪ್ರಮುಖ ಬೀದಿಯಲ್ಲಾಯಿತು. ಸೀತೂನ ಮರಣ ಎಂಥ ಯೋಗಾಯೋಗ?

ಸೀತೂ...ನನ್ನ ಸೀತೂ...ಎಂಥ ಹಟ ನಿನ್ನದು...ಸಾವಿನಲ್ಲೂ ನಮ್ಮ ನೀರಲ್ಲಿ ನಿನ್ನ ಆಸೆಯಿತ್ತೆ? ಆ ನೀರಿಗಾಗಿ ನೀನಿಷ್ಟು ದಿನ ಬದುಕಿ ಉಳಿದೆಯಾ? ನೀನು ಊರು-ನೆಲ ಬಿಡಲಾರೆ ಎಂದೆ. ಅದರಂತೆ ನಡೆದೂ ಬಿಟ್ಟೆ... ಕೊನೆಗೂ ಅಕ್ಕನನ್ನ ಬಿಟ್ಟೇ ಹೊರಟು ಬಿಟ್ಟೆ... ರಾಜಮ್ಮ ತಡೆಯಲಾರದೆ ಅಳುತ್ತ ನುಡಿದರು.

"ಅಮ್ಮಾ...ಸೀತಕ್ಕ ಎಂಥ ಪುಣ್ಯಜೀವಿ ಮನುಷ್ಯ ಸತ್ತಾಗ ನೋಡಿದರೆ ತಿಳಿಯುತ್ತದೆ ಎನ್ನುತ್ತಾರೆ. ಯಾರೂ ದಿಕ್ಕಿಲ್ಲದೆ ಇದ್ದ ಸೀತಕ್ಕ ಸಾವಿನಲ್ಲಿ ಇಂಥ ವೈಭವ ಪಡೆಯಬೇಕಾದರೆ ಅವಳು ಮಾಡಿದ ಪುಣ್ಯವಲ್ಲದೆ ಇನ್ನೇನು? ನನ್ನ ಕೈ ನೀರು ಕೊನೆಗಾಲಕ್ಕೆ ಇರಬೇಕೆಂದು ಅವ



ಅತ್ಯುತ್ತಮವಾಗಿ ಎಲ್ಲಾ ಬಗೆಯ ಬ್ಲಾಕುಗಳನ್ನು ತಯಾರಿಸುವ

ಕ್ಲಿಕ್ ಅಂಡ್ ಕೋ

2, ರೆಸಿಡೆನ್ಸಿ ರಸ್ತೆ, ಬೆಂಗಳೂರು-25

FOR *Better Blocks* IN....

LINE

HALF-TONE

& COLOUR

ಇವರು ತಮ್ಮ

ಮಾನ್ಯ ಪ್ರೋತ್ಸಾಹಕರಿಗೂ

ಹಿತೈಷಿಗಳಿಗೂ, ಸ್ನೇಹಿತರಿಗೂ

ದೀಪಾವಳಿ

ಶುಭಾಶಯಗಳನ್ನು ಕೋರುವರು





Phone: 73307

KLIC
& CO.

2, RESIDENCY ROAD
BANGALORE

ಪ್ರತಿಯೊಂದು ಜಿಲ್ಲೆಯಲ್ಲಿ ನಮ್ಮ ಆರ್ಡರ್ ಕ್ಯಾನ್ವಾಸ್ ಮಾಡಲು ಕಮೀಶನ್ ಮೇಲೆ ಏಜಂಟರು ಬೇಕಾಗಿದ್ದಾರೆ.
ವಿವರಗಳಿಗೆ ಇಂದೇ 15 ಪೈಸೆ ಸ್ಟಾಂಪಿಟ್ಟು ಬರೆಯಿರಿ :—

ಕ್ಲಿಕ್ & ಕಂಪನಿ, 2 ರೆಸಿಡೆನ್ಸಿ ರೋಡ, ಬೆಂಗಳೂರು-25

ಆಸೆ ಇತ್ತು. ದಿನೇಶ ಪೂರೈಸಿದ. ಸಂತಸದಿಂದಲೇ ಕಣ್ಮುಚ್ಚಿದಳು". ಗೋಪಿಕೃಷ್ಣ ಇಷ್ಟು ನುಡಿಯುತ್ತಿದ್ದಂತೆ ಎದ್ದು ಹೊರಕ್ಕೆ ಹೋಗಿಬಿಟ್ಟ. ರಾಜಮ್ಮಗೆ ತುಂಬ ವೇದನೆ! ಅವರ ಕಣ್ಮುಂದೆ ಎಲ್ಲ ಹಿಂದಿನ ದಿನಗಳು! ಆ ಮಾತು ಕತೆ-ಸುಖ-ದುಃಖ, ಕೊಚ್ಚಿಕೊಂಡು ಬಂದವು.

ಸೀತೂನ್ನ ಕಂಡ ಮೊದಲ ದಿನ-

ತಾನು ಅದೇ ಚೊಚ್ಚಲು ಮಗು ಗೋಪಿಯೊಂದಿಗೆ ಪತಿಯ ಮನೆಗೆ ಬಂದಾಗ-ಒಂದು ಸಂಜೆ ಭಾವ ಒಂದು ಹುಡುಗಿಯನ್ನ ಕರೆತಂದು ತನ್ನೆದುರು ನಿಲ್ಲಿಸಿ, ನುಡಿದರು.

"ಈ ಹುಡುಗೀನ ನಿನ್ನ ಮನೆ ಕೆಲಸಕ್ಕೆ ತಯಾರ- ಮಾಡು. ಮಗುವನ್ನು ನೋಡಿಕೊಳ್ಳುವಳು. ತಂದೆ-ತಾಯಿ ಇಲ್ಲದೆ ಅನಾಥೆ, ಮಂಗಲ ಸೂತ್ರ ಕಟ್ಟಿದ ಗಂಡ ಯಾವುದೋ ತುರುಕರ ಹೆಣ್ಣಿನೊಂದಿಗೆ ಓಡಿಹೋಗಿದ್ದಾನೆ. ಪಾಪ ಏನಿಸಿತು. ಕೆಲಸಕ್ಕೆ ಗಟ್ಟಿಮುಟ್ಟಾಗಿದ್ದಾಳೆ. ಆದೀತಲ್ಲವೇ?"

ತಾನು ಅವಳನ್ನು ಕಂಡಾಗಲೇ ಏನೋ ಒಂದು ಬಗೆಯ ಪ್ರೀತಿ ಕಂಡಿತ್ತು. ಲಕ್ಷಣವಾದ ಹುಡುಗಿ. ಇದಕ್ಕೂ ಇಷ್ಟು ಬೇಗ ಮಂಗಲ-ಸೂತ್ರದ ಬಂಧನ ಬಿಡುಗಡೆಯಾಯಿತೇ ಎಂದು ಮನಸ್ಸು ಖಿನ್ನಗೊಂಡಿತ್ತು. ಅವಳನ್ನು ಕರೆದು ಕೇಳಿದ್ದೆ. "ನಿನ್ನ ಹೆಸರು?"

"ಸೀತೂ..."

"ನನ್ನಲ್ಲೇ ಇರ್ತಿಯಾ?"

ಹುಡುಗಿ ಮುದ್ದೆಯಾಗಿ ನಿಂತವಳು ತನ್ನ ಮಾತು ಮುಗಿಯುತ್ತಲೇ ಓಡಿ ಬಂದು ನನ್ನೆರಡು ಕಾಲುಗಳನ್ನು ಗಟ್ಟಿಯಾಗಿ ಹಿಡಿದು ಅಳುತ್ತ ನುಡಿದಳು.

"ಅಕ್ಕಾ... ಅಪ್ಪ ಅಮ್ಮ ನನಗಿಲ್ಲ...ನಾಳೆ ಆ ಗಂಡ ಬಂದನೆಂದು ನನ್ನ ಹೊರಗಟ್ಟಬೇಡಿ... ನಿಮ್ಮನೆಯಲ್ಲಿ ಒಂದು ಹಿಡಿ ಅನ್ನ-ತುಂಡು ಬಟ್ಟೆ ಕೊಡಿ... ಮನೆಗೆಲಸ ನನಗಿರಲಿ... ಹೊರಗೆ ಮಾತ್ರ ಹೋಗೆನ್ನಬೇಡಿ..."

—ಮುಂದೆ ಯಾವ ಮನೆಗೆಲಸಕ್ಕೂ ತನಗವಳು ಅವಕಾಶವನ್ನೇ ಕೊಡಲಿಲ್ಲ. ಅಡಿಗೆ, ಪಾತ್ರೆ-ಬಟ್ಟೆ-ಮಕ್ಕಳ ಸ್ನಾನ... ಎಲ್ಲವನ್ನೂ ತಾನೆ ಮಾಡಬೇಕು. ಮಾತು ತುಂಬ ಕಡಿಮೆ. ಹೆಣ್ಣಿಗೆ ಇರಬೇಕಾದ ಕೆಲಸದಲ್ಲಿಯ ಚುರುಕು-ಚತುರತೆ ಬಿಟ್ಟರೆ- ಹೆಣ್ಣಿನ ಮತ್ತೊಂದು ವಿಷಯದಲ್ಲಿ ಅವಳೊಂದು ಕಲ್ಲು! ಗಂಡಿನ ಬಗೆಗೆ ಅವಳಲ್ಲಿ ಯಾವ ಆಕರ್ಷಣೆಯನ್ನು ತಾನೆಂದೂ ಕಾಣಲೇ ಇಲ್ಲ...

ಆದರೆ ಅವಳ ಹಟಮಾರಿ ಸ್ವಭಾವ! ತಾನೇ ಅದಕ್ಕೆ ಮಣಿಯಬೇಕಾದ ಪ್ರಸಂಗ ನೆನಪಿಗೆ ಬಂತು.

ಒಂದು ದಿನ ಅತಿಥಿಗಳು ಬಂದರೆಂದು ತಾನೇ—ಅವಳು ಪಾತ್ರೆ ತಿಕ್ಕಲು ಕುಳಿತಾಗ ತರಕಾರಿ ಹೆಚ್ಚಿಟ್ಟು- ಮಸಾಲೆ ಅರೆಯಲು ಕುಳಿತಾಗ ಸೀತೂ ತೊಳೆದ ಪಾತ್ರೆಯೊಂದಿಗೆ ಒಳಕ್ಕೆ ಬಂದದ್ದೂ ತಾನು ಅರೆಯುವ ಕಲ್ಲೆದುರು ಕುಳಿತದ್ದೂ ಕಂಡು ರೇಗಿ ಕೇಳಿದ್ದಳು "ಏನಕ್ಕಾ... ಸೀತೂ ಸತ್ತಿದ್ದಾಳೆಯೇ? ನನ್ನ ಅಡಿಗೆ ರುಚಿಯಾಗೋದಿಲ್ಲವೇ? ಬೇಡಾದ್ರೆ ಬಿಡಿ...ನಾನಿನ್ನು ಒಂದು ಕಡ್ಡಿ ಮುಟ್ಟದ್ರೆ ಕೇಳಿ" ಇಷ್ಟು ನುಡಿದ ಸೀತೂ ಪಾತ್ರೆಗಳನ್ನು ಅಲ್ಲಿಯೇ ಇರಿಸಿ ಗೋಪಿನ್ನ ಎತ್ತಿಕೊಂಡು ಹೋಗಿ ಬಿಟ್ಟಳು.

ಈಗ ಬರಬಹುದು...ಇನ್ನೊಂದು ಘಳಿಗೆಗೆ ಬರಬಹುದು ಎಂದು ತಾನು ಕಾದೇ ಕಾದು, ಶಪಿಸಿ ಕೊನೆಗೆ ಮನೆಯ ಎಲ್ಲ ಕೆಲಸ ಕಾರ್ಯವನ್ನು ಮಾಡಿ ಮುಗಿಸಿ ಅತಿಥಿಗಳ ಊಟ ಉಪಚಾರ ಮುಕ್ತಾಯವಾದರೂ ಸೀತೂ-ಮಗು ಮನೆಗೆ ಬರಲಿಲ್ಲ. ಗೋಪಿಯ ಅಪ್ಪ. ಅತಿಥಿಗಳು ಹೊರಟು ಹೋದ ತಕ್ಷಣ ತನಗೇ ಚೆನ್ನಾಗಿ ಬೈದುಬಿಟ್ಟದ್ದರು.

"ಅವಳ ಮೊಂಡು ಬುದ್ಧಿ ನಿನಗೆ ಹೊಸತೇ? ಎತ್ತಿನಂತೆ ದುಡಿಯುವುದೊಂದೇ ಗೊತ್ತು ಅವಳಿಗೆ. ನಡುಮಧ್ಯೆ ಕೈ ಇಟ್ಟೆ...ಈಗ ಅನುಭವಿಸು..." ನೆರವಾಗಲು ಹೋಗಿ, ನಿಂತಿದ್ದ ನೆಲವೇ ಬಾಯಿ ಬಿಟ್ಟಂತಾಗಿತ್ತು ತನ್ನ ಸ್ಥಿತಿ! ಸಂಜೆ ಅಲ್ಲಿ- ಇಲ್ಲಿ ಹುಡುಕಿದ ಮೇಲೆ, ಕೃಷ್ಣ ದೇವಸ್ಥಾನದ ಹೊರಾಂಗಣದಲ್ಲಿ ಗೋಪಿನ್ನ ಮಲಗಿಸಿಕೊಂಡು ಸೀತೂ ಕುಳಿತಿದ್ದಳಂತೆ.

ಅಂತೂ ರಾತ್ರಿಗೆ ಮನೆಗೆ ಬಂದಳು ಅವಳು. ಬಂದವಳೇ ತನ್ನ ಕಾಲುಗಳನ್ನು ಬಿಗಿಯಾಗಿ ಹಿಡಿದುಕೊಂಡು, ಅಳುತ್ತ ನುಡಿದಿದ್ದಳು- "ನಂದು ತಪ್ಪಾಯಿತಕ್ಕ...ಮಗೂಗೆ ಅನ್ನವಿಲ್ಲದಂತೆ ಮಾಡಿದೆ. ಇಡೀ ದಿನ ಬರಿಯ ಬಾಳೆಹಣ್ಣು. ಹಸಿವೆಯಲ್ಲೇ ಮಗೂ ಮಲಗಿದೆ. ಮೊದಲು ಇಷ್ಟು ಅನ್ನ-ಹಾಲು ಕೊಡಿ."

ಮಲಗಿದ್ದ ಗೋಪಿನ್ನ, ಸೀತೂ ಎಚ್ಚರಗೊಳಿಸಿ, ಮುಖ ತೊಳೆಸಿ ತನ್ನ ತೊಡೆಯಲ್ಲಿ ಕುಳ್ಳಿರಿಸಿಕೊಂಡು ಊಟ ಮಾಡಿಸಿದಳು.

ಆಗ ತಡೆಯಲಾರದೆ ತಾನೆಂದಿದ್ದೆ-

"ಸೀತೂ...ಇಲ್ನೋಡು ಈ ನಿನ್ನ ಹಟ ಒಳ್ಳೆಯದಕ್ಕಲ್ಲ...ನೀನು ಹೀಗೆ ಮಾಡಿದ್ರೆ ನನಗೆ ನಿಜವಾಗ್ಲೂ ತುಂಬ ದುಃಖವಾಗುತ್ತದೆ ನೋಡು..."

"ಹೌದಕ್ಕಾ...ನನಗೂ...ನೀವು ಕೆಲಸ ಮಾಡೋದು ನೋಡಿದ್ರೆ ಅಷ್ಟೇ ದುಃಖವಾಗುತ್ತದೆ. ನನಗೆ ತಡೆಯಲಾರದೆ ಹಟ ಬಂದು ಬಿಡ್ತದೆ. ನಾನಿರುವಾಗ ನೀವು ಒಂದು ಕಡ್ಡಿ ಎತ್ತಿ ಇಲ್ಲಿಂದ ಅಲ್ಲಿಗೆ ಇಡಬಾರದು. ಹಾಗೆಂದು ಮಾತು ಕೊಡಿ...ಅಂದ್ರೆ ಊಟ ಮಾಡ್ತೇನೆ. ಇಲ್ಲಾಂದ್ರೆ ಹೀಗೆ ಸಾಯ್ತೇನೆ."

"ಇದೊಳ್ಳೆ ಗ್ರಹಚಾರ ಎಂದು ತಾನು ನಗುನಗುತ್ತ ಒಪ್ಪಿಕೊಂಡು ಸೀತೂನ್ನ ಊಟಕ್ಕೆಬ್ಬಿಸಿದ್ದರು.

ಗೋಪಿ, ಗೋಪೂ-ಸ್ಕೂಲಿಗೆ ಹೋಗುತ್ತಿದ್ದ ದಿನಗಳಲ್ಲಿ ಅವರ ತುಂಟತನ,ಉಪದ್ರಕ್ಕೆ ಬೇಸರಗೊಂಡು ತಾನು ಏಟು ಕೊಟ್ಟರೆ ಆ ದಿನ-ಸೀತೂ ಉಪವಾಸ! ಮೌನವ್ರತ!

ಅದೊಂದು ದಿನ ಗೋಪೂ ಸ್ಕೂಲಿನ ಸ್ಪೋರ್ಟ್ಸ್‌ಡೇ (S portsday)ಗೆ ಖರ್ಚು ಮಾಡಲು ಹೆಚ್ಚು ಹಣ ಕೇಳಿದಾಗ, ಬೇಕಾಗುವಷ್ಟೇ ಹಣ ಅವನ ಕೈಯ್ಯಲ್ಲಿರಿಸಿ, ಮುಂದಿನ ಅವನ ತಕರಾರಿಗೆ ಮಣಿಯದೆ. ಮಾರ್ಕೆಟ್ಟಿಗೆ ಹೋಗಿದ್ದೆ. ಮರಳಿ ಮನೆಯ ಮೆಟ್ಟಿಲು ಏರುತ್ತಿದ್ದಂತೆ ಗೋಪಿ ತನ್ನ ಕೈಹಿಡಿದೆಳೆದು ಅವಸರ ಅವಸರವಾಗಿ ಹೇಳಿದ್ದ.

"ಅಮ್ಮಾ...ಗೋಪೂ...ನಿನ್ನೆಲ್ಲ ಸಿಲ್ಕ್-ಜರಿಯ ಸೀರೆಗಳನ್ನೆಲ್ಲ ಚರಂಡಿ ನೀರಿನಲ್ಲಿ ಮುಳುಗಿಸಿ ಬಿಟ್ಟಿದ್ದಾನೆ...ಬೇಕಾದ್ರೆ..."

ಮುಂದಿನ ಅವನ ಮಾತನ್ನು ಕೇಳಲು ತಾನಲ್ಲಿ ನಿಂತಿರಲಿಲ್ಲ. ಒಂದೇ ನೆಗತಕ್ಕೆ ಹಿಂಬದಿ ಬಾಗಿಲಿಗೆ ಓಡಿ ನೋಡಿದಾಗ-ಸೀತೂ ಎಲ್ಲ ಸೀರೆಗಳನ್ನು ಒಗೆದು ಕಟ್ಟಿದ್ದ ತಂತಿಯಲ್ಲಿ ಒಣಗಲು ಹಾಕಿದ್ದಳು. ಭಯಗೊಂಡಿದ್ದ ನನ್ನ ಮನ, ನಿಧಾನವಾಗಿ ನಿಟ್ಟುಸಿರಿಟ್ಟಿತು.

ದಿನಗಳು ಸಾಗಿದವು. ಸೀತೂಗೆ ಈ ಮನೆ-ಮಕ್ಕಳಲ್ಲಿರುವ ಪ್ರೀತಿ, ವಾತ್ಸಲ್ಯ ಕಂಡಾಗ-ತನ್ನ ಸ್ವಾರ್ಥಕ್ಕೆ ಮಣಿಯದೆ-ಈ ಹೆಣ್ಣಿನ ಬದುಕಿನಲ್ಲೂ ಸುಖ ಮರಳಿ ಬರಬಾರದೇ ಎಂದುಕೊಂಡು ತನ್ನವರ ಜೊತೆಯಲ್ಲಿ ತಾನೇ ಮಾತುಕತೆಯಾಡಿದ್ದು ನೆನಪಿಗೆ ಬಂತು.

"ಅವರೂ" ಅಲ್ಲಿ-ಇಲ್ಲಿ ವಿಚಾರಿಸಿ, ಸೀತೂಗೆ ಒಬ್ಬ ಗಂಡನ್ನ ಹುಡುಕಿದರು.

ಸೀತೂಗೆ ಈ ವಿಷಯ ತಿಳಿಯಿತು. ಮತ್ತೆ ಮೌನವ್ರತ-ಹಿತ್ತಲಲ್ಲಿಯ ತೆಂಗಿನ ಮರದಡಿ ಕುಳಿತುಬಿಟ್ಟಳು. ತಾನೇ ಅಲ್ಲಿಗೆ ಹೋದಾಗ ಅಳುತ್ತಿದ್ದ ಅವಳು ಮೆಲ್ಲನೆ ನುಡಿದಳು.

"ಅಕ್ಕಾ ಈ ಮನೆಯಿಂದ ನನ್ನ ಹೊರಗೆ ಕಳಿಸೋದಿಲ್ಲೆಂದು ನೀವೇ ಮಾತು ಕೊಟ್ಟಿರಿ. ಆ ಮಾತು ಮರೆತುಹೋಯಿತೇ? ಬೇಡಾದ್ರೆ ಹೇಳಿ ಬಿಡಿ. ಬಾವಿಗೆ ಬಿದ್ದು ಪ್ರಾಣ ಬಿಡುತ್ತೇನೆ. ಗಂಡ ಎಂದು ಮಾತ್ರ ಹೇಳಬೇಡಿ."

"ಹುಚ್ಚಿ...ಇಡೀ ಜನ್ಮವೆಲ್ಲ ಹೀಗೆ ಮನೆಗೆಲಸ ಮಾಡುತ್ತ ಇರ್ತಿಯಾ? ನಿನ್ನದೆನ್ನುವ ಮನೆ, ಮಕ್ಕಳು..."

"ಈ ಮನೆ ಈ ಮಕ್ಕಳು ಹಾಗಾದ್ರೆ ನನ್ನದಲ್ಲ! ಇಲ್ಲಕ್ಕಾ...ಈ ಮನೆ ನನ್ನದು. ಇಲ್ಲಿಯೇ ನಾನು ಪ್ರಾಣಬಿಡೋವಳು. ನನ್ನದು ರಾಕ್ಷಸಗಣ-ಗಂಡನ್ನ ಕೊಂದುಬಿಡುತ್ತೇನಂತೆ. ಅಪ್ಪ, ಅಮ್ಮ ಸತ್ತಾಗ "ಅವರೇ" ಬಂದು ಹೇಳಿದ್ರು, "ಸೀತೂ ನೋಡು ನಾನಿನ್ನು ಹೆಚ್ಚು ದಿನ ಬದುಕೋದಿಲ್ಲ. ನನ್ನದು ದೇವಗಣ. ನಿನ್ನದು ರಾಕ್ಷಸಗಣ! ನಿನ್ನೊಟ್ಟಿಗೆ ಇದ್ರೆ ನಾನು ಸತ್ತೆ ಹೋಗ್ತೇನೆ. ಅಂತೇ ಅವರು ಹೊರಟು ಹೋದ್ರು..."

-ಎಂಥ ಸುಳ್ಳಿನ ಜಾಲ! ತಾನು ಹೆಣ್ಣೊಂದರ ಜೊತೆಗೆ ಓಡಿ ಹೋಗುವ ಮುನ್ನ-ತಿಳಿಯದ ಸೀತೂಗೆ ಎಂಥ ಅಪಚಾರ ಬಗೆದಿದ್ದ!

ಆದರೆ ತಾನೆಷ್ಟು ತಿಳಿಸಿ ಹೇಳಿದರೂ ಸೀತೂ "ಬೇಡ" ಎನ್ನುವ ಹಟ ಬಿಡಲೇ ಇಲ್ಲ. ಅವಳಿಗೆ ಗೋಪಿ, ಗೋಪೂ ಸರ್ವಸ್ವ-ತನ್ನ ಪೂಜೆ ಮುಗಿಯುತ್ತಿದ್ದಂತೆ ದೇವರ ಪ್ರಸಾದಕ್ಕೆ ಕೈಯೊ

ಡ್ಡಲು ಅವಳಿಂದೂ ಮರೆತಿರಲಿಲ್ಲ! ಯೌವ್ವನದ ಮಾದಕ ಮನಸ್ಸು ಸೀತೂನ ಬದುಕಿನಲ್ಲಿ ಯಾವ ವ್ಯತ್ಯಾಸವನ್ನೂ ಮಾಡಲಿಲ್ಲ. ದಿನಗಳು ವರುಷಗಳು ಮಾತ್ರ ಬದಲಾಗುತ್ತಲೇ ನಡೆದವು.

ತನ್ನ ಬಾಳಿನಲ್ಲಿ ಬತ್ತಿನೊಂದಿದ ಆ ಕ್ರೂರ ದಿನ!

ಎಂದೂ ಯಾರ ಮುಂದೆಯೂ ಬಾರದ ಸೀತೂ "ಅವರ" ಪಾದಗಳಿಗೆ ತಲೆ ಇಟ್ಟು ಬಿಕ್ಕಿ ಬಿಕ್ಕಿ ಅತ್ತಿದ್ದಳು. ದುಃಖದ ಮಡುವಿನಲ್ಲಿ ಬಿದ್ದಿದ್ದ ತನ್ನನ್ನು ಸಂತೈಸಿ ಮಕ್ಕಳನ್ನು ತಬ್ಬಿಗೊಳಿಟ್ಟಳು. ಸೀತೂ ತನ್ನ ಬರಡಾದ ಬದುಕಿನಲ್ಲಿ ಆಸರೆಯಾಗಿ ನಿಂತಳು.

ಮುಂದೆ ಮಕ್ಕಳಿಬ್ಬರು ಕೆಲಸಕ್ಕೆಂದು ಬೊಂಬಾಯಿ ದಾರಿ ತುಳಿದಾಗ ತನಗೆ ನಾಲ್ಕು ಕೈಯ ನೆರವು ನೀಡಿದಳು. ರಾಮ-ಲಕ್ಷ್ಮಣರಂತೆ ಚೆಲುವಿನ ಕಣಿಗಳಾಗಿ ಊರಿಗೆ ಬಂದಾಗ ಗೋಪಿ-ಗೋಪೂನ ತಟ್ಟೆಯಲ್ಲಿದ್ದ ಮಿಕ್ಕಿದ್ದ ಅನ್ನವನ್ನು ಉಂಡಳು. ಆ ಸುಖ ಅವಳ ಬೆಂದು ಬಾಡಿದ್ದ ಕಣ್ಣುಗಳಲ್ಲಿ ಮಿಂಚಿದವು ಆದರೆ? ಬೊಂಬಾಯಲ್ಲೇ ನೆಲೆಸುವ ನಿರ್ಧಾರ ಗೋಪಿ ತಿಳಿಸಿದಾಗ ಸೀತೂ ಮತ್ತೆ ಹಿತ್ತಲ ತೆಂಗಿನ ಮರದಡಿಯಲ್ಲಿ ಅಳುತ್ತಿರುವ ಸದ್ದು ಕೇಳಿಸಿತು.

"ಸೀತೂ ಸಾಮಾನು ಕಟ್ಟಿ ಹೊರಡುವ ಅವಸರದಲ್ಲಿರಬೇಕಾದ ನೀನು ಅಳುತ್ತ ಕುಳಿತು ಬಿಟ್ಟೆಯಲ್ಲ? ಏಕೆ? ನಿನ್ನ ಬಿಟ್ಟು ಹೋಗುವೆನೆಂದುಕೊಂಡಿಯಾ?"

"----"

"ನಾನು ಭಾಷೆ ಕೊಟ್ಟಿಲ್ಲವೇ? ಏಳು ಸಮಯ ಬಹಳಿಲ್ಲ..."

"ಅಂತೂ ನನ್ನ ಒಂಟಿಯನ್ನಾಗಿ ಮಾಡಿ ಅಕ್ಕಾ ನೀವು ಹೊರಟುಬಿಟ್ಟರಿ..."

ಸೀತೂ ಬಿಕ್ಕಿ ಬಿಕ್ಕಿ ಅತ್ತುಬಿಟ್ಟಳು.

"ಇಲ್ಲ... ಸೀತೂ ನೀನೂ ಬರಲೇಬೇಕು. ನಿನ್ನ ಬಿಟ್ಟು ನಾನೆಲ್ಲಿ ಹೋಗಲಿ?"

"ಈ ನೆಲ-ಈ ಊರು ಬಿಟ್ಟು ನಾ ಬರಲಾರೆ ಅಕ್ಕಾ...ಅಲ್ಲಿ ಯಾವ ಜಾತಿಯವರೋ ಯಾರ ಸೀರೆಯೋ...ಇಲ್ಲಕ್ಕ ನಾನು ಖಂಡಿತಕ್ಕೂ ಬರಲಾರೆ..."

"ಸೀತೂ ಹಟ ಮಾಡಬೇಡ. ಇದು ಆಟವಲ್ಲ! ನೀನು ಖಂಡಿತಕ್ಕೂ ಹೊರಡಲೇಬೇಕು. ನಿನಗೆ ನನ್ನಾಣೆ ಇದೆ..."

ಅಂದು ಕಠೋರವಾಗಿಯೇ ತಾನು ನುಡಿಯಬೇಕಾಯಿತು. ಸೀತೂನ್ನ ಒಂಟಿಯನ್ನಾಗಿ ಮಾಡಿ ತಾನು ಹೋಗಲು ಇಚ್ಛಿಸಲಿಲ್ಲ. ಮನೆಯ ಸಾಮಾನುಗಳನ್ನು ಮಾರಿಯಾಯಿತು. ಕೆಲವು ಪಾತ್ರೆ, ದೇವರ ಪೂಜೆಯ ಪೆಟ್ಟಿಗೆ ಉಳಿದಿತ್ತು. ಸೀತೂನ ಕಣ್ಣಿನಲ್ಲಿ ನೀರು ತೊಟ್ಟಿಕ್ಕುತ್ತಲೇ ಇತ್ತು.

ಆದರೆ ತನಗೆ ಒಂದೇ ದೃಢವಾದ ನಂಬಿಕೆ. ಸೀತೂ ಬಂದೇ ಬರುವಳು. ಬಾರದಿದ್ದಲ್ಲಿ ಉಪಾಯವಾಗಿ ಕರೆದೊಯ್ಯಲೇಬೇಕು. ಗೋಪಿಗೂ ಅದೇ ಮನಸ್ಸು. ಒತ್ತಾಯ, ಇಲ್ಲವೇ ಉಪಾಯ.

ಮೂರನೇ ದಿನ ಹೊರಡುವುದೆಂದು ಗೊತ್ತಾಗಿತ್ತು. ಆಪ್ತರಿಗೆಲ್ಲ ಹೇಳಿಯಾಗಿತ್ತು.

ಮನೆಯಲ್ಲಿ ಮಾತ್ರ ಸೀತೂ ಕಾಣಲಿಲ್ಲ. ಹಿತ್ತಲ ತೆಂಗಿನಮರದಡಿ, ನಿಂಬೆ ಗಿಡ, ಪೇರಳೆ ಮರ, ಎದುರಿನ ತುಲಸಿ ಕಟ್ಟೆಯ ಆಚೆ, ಅಲ್ಲಿ-ಇಲ್ಲಿ ಎಲ್ಲೆಡೆಯಲ್ಲೂ ಹುಡುಕಿಯಾಯಿತು. ಕೃಷ್ಣದೇವಸ್ಥಾನಕ್ಕೂ ಜನ ಕಳಿಸಿಯಾಯಿತು. ಅವಳ ಆಕಾರ ರೂಪ ಉಟ್ಟ ಬಟ್ಟೆಯ ರೂಪರೇಷೆ ಜನಕ್ಕೆ ತಿಳಿಸಿಯಾಯಿತು. ಸೀತೂ ಕಾಣಲೇ ಇಲ್ಲ. ಹಿತ್ತಲ ಬಾವಿಯಲ್ಲೂ ಹಣಿಕಿಯಾಯಿತು. ಮನದಲ್ಲಿ ಇಲ್ಲಸಲ್ಲದ ಯೋಚನೆ. ಎಷ್ಟೋ ವರುಷಗಳಿಂದ ಎಡೆಬಿಡದೆ ಒಡಹುಟ್ಟಿದ ತಂಗಿಗಿಂತಲೂ ಪ್ರೀತಿ-ವಾತ್ಸಲ್ಯದಿಂದ ಒಡಾಡಿ ಪರಊರಿಗೆ ಹೊರಡುವ ತನ್ನನ್ನು ಬಿಟ್ಟು ಅಗಲಿದ ಸೀತೂಗಾಗಿ ತಾನೇ ಅತ್ತುಬಿಟ್ಟಿದ್ದೆ. ಗೋಪಿ ಇನ್ನೊಮ್ಮೆ ಬಂದು ಅವಳನ್ನು ಹುಡುಕಿ ಬೊಂಬಾಯಿಗೆ ಕರೆತರುವುದಾಗಿ ಭರವಸೆ ಇತ್ತ.

• • • •

ಸೀತೂ ಮಾತ್ರ ಬೊಂಬಾಯಿಗೆ ಬರಲೇ ಇಲ್ಲ. ಅಷ್ಟು ವರುಷಗಳ ದೀರ್ಘ ಅವಧಿಯಲ್ಲಿ ಕಳೆದ ತಿಂಗಳಲ್ಲಿ ಕಂಡದ್ದೇ ಸೀತೂನ್ನ! ಅದೇ ಕೊನೆಯ ಭೇಟಿ. ಕೊನೆಗಾಲದ ಆಶೆ-ಪ್ರೀತಿಯನ್ನು ಪೂರೈಸಲು ಸೀತೂ ಬಂದಿದ್ದಾಳೇನೊ? ಕಣ್ತುಂಬ ತನ್ನನ್ನು-ಗೋಪಿ-ಗೋಪೂ ಮನೆಯ ಶೋಭೆಯನ್ನು ನೋಡಿ ಹಸಿದಿದ್ದ ಮನಸ್ಸು-ಒಡಲನ್ನು ತೃಪ್ತಿಪಡಿಸಿಕೊಂಡು, ಇನ್ಯಾವ ಆಶೆ, ಆಕಾಂಕ್ಷೆಯನ್ನು ಉಳಿಸಿಕೊಳ್ಳದೆ, ಊರು, ನೆಲ, ಬಿಡದೆ ಅಲ್ಲೇ ಉಳಿದಳು. ಎಂಥ ಸ್ವಾಭಿಮಾನ. ಎಂಥ ಹಟ ಸೀತೂನದು?

ಗಡಿಯಾರದ ಪ್ರತಿ ಸೆಕೆಂಡುಗಳೂ ರಾಜಮ್ಮನ ಕಿವಿಗೆ ನಿಚ್ಚಳವಾಗಿ ಕೇಳುತ್ತಿದೆ. ನಿದ್ದೆ ಬಾರದು...ನೆನಪೇ ನೆನಪುಗಳು. ಎಲ್ಲ ಈಗ ನಡೆದಂತೆ...ಸೀತೂ ಮತ್ತೆ ಕರೆಯುತ್ತಾಳೇನೊ ಎನ್ನುವ ಭಾವನೆ...ಜೀವನದ ಯಾವ ರಸ ನಿಮಿಷ, ಸುಖ-ದುಃಖ, ಬೇಕು-ಬೇಡಗಳನ್ನು ಕಾಣದೆ-ಪ್ರೀತಿಯ ನೆರೆಯೊಂದನ್ನೇ ನಂಬಿ ನಡೆದ ಸೀತೂನ ಆತ್ಮ ಎಂಥ ಮುಕ್ತಜೀವ!

ಬೆಳಗ್ಗಿನಲ್ಲಿ ಎದ್ದು ರಾಜಮ್ಮ, ಮಗನ ಕೋಣೆಯ ಬಾಗಿಲು ಮೆಲ್ಲನೆ ತಟ್ಟಿದರು. ಗೋಪಿ ಗಡಬಡಿಸಿಕೊಂಡು ಎದ್ದು ಬಂದು ಬಾಗಿಲು ತೆರೆದ.

"ಏನಮ್ಮಾ...ರಾತ್ರಿಯೆಲ್ಲ ನಿದ್ದೆ ಇಲ್ಲದೆ ಕಳೆದಿದ್ದೀಯಾ? ಕಣ್ಣುಗಳು ಕೆಂಪಾಗಿವೆ. ಇನ್ನೂ ಸ್ವಲ್ಪ ಮಲಗಿ ಎದ್ದರಾಗುತ್ತಿರಲಿಲ್ಲವೇ? ನನ್ನ ಎಚ್ಚರಗೊಳಿಸಿದೆ...ಏನಾದರೂ ಜರೂರಿನ ಕೆಲಸವಿತ್ತೇನಮ್ಮ?"

"ಎಚ್ಚರ-ನಿದ್ದೆಯಲ್ಲೂ ಸೀತೂ ಬಂದು ಬಿಟ್ಟಿದ್ದಳು. ಅವಳದೇ ನೆನಪು. ಸಂಜೆ ಆಫೀಸು ಮುಗಿದೊಡನೆ ನೇರಾಗಿ ಮನೆಗೆ ಬಂದು ಬಿಡು... ಪ್ರಣತಿ-ನಾನೂ ಸಿದ್ಧವಾಗಿರುತ್ತೇವೆ. ದೇವಸ್ಥಾನಕ್ಕೆ ಹೋಗಿ ಬರಬೇಕಾಗಿದೆ. ಅವಳ ಆತ್ಮಕ್ಕೆ ಶಾಂತಿ ದೊರತಿದೆ...ಆದರೂ ನನ್ನ ಮನಸ್ಸಿಗೆ ಸಮಾಧಾನ ಬೇಕಲ್ಲವೇ? ಮತ್ತೆ ನೀನು ಮರೆತು ಕ್ಲಬ್ಬಿಗೆ ಹೋಗಿ ಬಿಡಬೇಡ..."


"ಇಲ್ಲಮ್ಮಾ...ಇಂದಿನ ನಿನ್ನ ಮಾತು ಮರೆಯಲಾರೆ. ಸೀತಕ್ಕ ಹಾಲನ್ನ ಉಣಿಸಿದನ್ನು ನಾನೆಂತು ಮರೆತೇನು? ಆ ಜೀವ ಬಹು ದೊಡ್ಡದು" ಹೀಗೆ ನುಡಿದು ಮತ್ತೆ ತಲೆ ಎತ್ತದೆ ಮುಖ ತೊಳೆದುಕೊಳ್ಳಲು ಬಚ್ಚಲಿಗೆ ನಡೆಯುತ್ತಿದ್ದ ಅವನ ಕಣ್ಣಾಲಿಗಳಲ್ಲಿ ನೀರು ತುಂಬಿದ್ದನ್ನು ರಾಜಮ್ಮ ಗಮನಿಸಿ ನಿಡಿದಾದ ನಿಟ್ಟುಸಿರಿಟ್ಟರು.



ಮಳೆಯ ನೀರು ಪರ್ವತಗಳ ಮೇಲೆ ಸುರಿದು ಅಲ್ಲಿಂದ ಕೆಳಗಿಳಿಯುತ್ತ ಕೊಳ್ಳಗಳಲ್ಲಿ, ಬಯಲುಗಳಲ್ಲಿ ಮತ್ತು ಹೊಂಡಗಳಲ್ಲಿ ಬಂದು ಮುಟ್ಟುವುದು ಎಷ್ಟು ಸತ್ಯವೊ ಅಷ್ಟೇ ಒಳ್ಳೆಯ ವಿಚಾರಗಳು ಮೊದಲು ಶ್ರೇಷ್ಠ ಪುರುಷ ತಲೆಗಳಲ್ಲಿ ಹುಟ್ಟಿ ಅಲ್ಲಿಂದ ಒಂದು ವರ್ಗದಿಂದ ಇನ್ನೊಂದು ವರ್ಗಕ್ಕೆ ತಲುಪುತ್ತ ಕೊನೆಗೆ ಜನಸಾಮಾನ್ಯರ ವರೆಗೆ ತಲುಪಿ ಕ್ರಾಂತಿಗೆ ಜನ್ಮವೀಯುತ್ತವೆ ಎಂಬುದೂ ಸತ್ಯವಾಗಿದೆ.

...ಎಮರ್ಸನ್

ಉದಯನ-ವಾಸವದತ್ತಾ



ವತ್ಸದೇಶದ ಅರಸು ಸಹಸ್ರಾನಿಕನು ತನ್ನ ಮಗ ಉದಯನನಿಗೆ ಪಟ್ಟಗಟ್ಟಿ ವಾನಪ್ರಸ್ಥಾಶ್ರಮಿಯಾಗುತ್ತಾನೆ. ಆದರೆ ವೀಣಾವಾದನದಲ್ಲಿ ಮತ್ತು ಕಾಡಾನೆಗಳನ್ನು ಪಳಗಿಸುವಲ್ಲಿ ನಿಷ್ಣಾತನಾದ ಉದಯನ ರಾಜ್ಯಭಾರವನ್ನು ಮಂತ್ರಿ ಮತ್ತು ಸೇನಾಪತಿಗಳಿಗೊಪ್ಪಿಸಿ ತನ್ನ ಕಲಾವಿಹಾರದಲ್ಲಿ ಮಗ್ನನಾಗುತ್ತಾನೆ. ಆದರೂ ಅವನಿಗೆ ಉಜ್ಜಯನಿಯ ದೊರೆ ಚಂಡಮಹಾಸೇನನ ನಲ್ಲುವರಿ ವಾಸವದತ್ತೆಯದೇ ಕನಸು.......

ಚಂಡಮಹಾಸೇನ ಸಹ ಉದಯನನೇ ತನಗೆ ತಕ್ಕ ಅಳಿಯನೆಂದು ತಿಳಿದಿದ್ದನಾದರೂ ಎರಡೂ ರಾಜಮನೆತನಗಳ ನಡುವೆ ಬಹಳ ದಿನಗಳಿಂದ ಬೆಳೆದುಬಂದಿದ್ದ ಹಗೆತನ ಅಡ್ಡ ಬರುತ್ತದೆ. ಅಂತೆಯೇ, ಚತುರ ಯೋಜನೆಯೊಂದನ್ನು ರೂಪಿಸಿ, ಉದಯನನು ಸಾಮಾನ್ಯವಾಗಿ ಬೇಟೆಗೆಂದು ಬರುವ ವಿಂಧ್ಯಗಿರಿಯ ಒಂದು ತಾಣದಲ್ಲಿ ದೊಡ್ಡದೊಂದು ಕೃತಕ ಆನೆಯನ್ನು ತಂದಿರಿಸಿದನು. ದೂತರಿಂದ ಅದನ್ನು ತಿಳಿದ ಉದಯನನಿಗೆ ಆ ಆನೆಯನ್ನು ಬಂಧಿಸುವ ಆಸೆಯಾಯಿತು.





ಅರಸನ ವಿಚಾರ ಮಂತ್ರಿ ಯೌಗಂಧರಾಯಣನಿಗೆ ಹಾಗು ಸೇನಾಪತಿ ರುಮಣ್ವತರಿಗೆ ಹಿಡಿಸಲಿಲ್ಲ. ಆದರೆ ಅವರ ಹಿತವಚನವನ್ನೂ ಮೀರಿ ಉದಯನ ಆ ಗಜರಾಜನನ್ನು ಸೆರೆಹಿಡಿಯಲೆಂದು ಏಕಾಕಿಯಾಗಿ ನಡೆದ. ಚಂಡಮಹಾಸೇನನ ಪ್ರಚಂಡ ಪಟ್ಟದಾನೆ ನಡಾಗಿರಿಗೆ ಈ ಆನೆ ಯೋಗ್ಯ ಎದುರಾಳಿಯಾಗುವದೆಂದೂ, ಆದರಿಂದ ಅವನನ್ನು ಪರಾಭವಗೊಳಿಸಿ ವಾಸವದತ್ತೆಯನ್ನು ಪಡೆಯಬಹುದೆಂದೂ, ಅವನು ಬಗೆದ. ಆದರೆ ಆ ಆನೆಯನ್ನು ಉದಯನ ಸಮೀಪಿಸುತ್ತಲೆ ಅದರೊಳಗಿಂದ ಹೊರಬಿದ್ದ ಉಜ್ಜಯನಿಯ ಸೈನಿಕರು ಅವನನ್ನು ಬಂಧಿಸಿದರು.

ಚಂಡಮಹಾಸೇನನು ಮಾತ್ರ ಉದಯನನನ್ನು ಸೆರೆಯಾಳೆಂದು ಕಾಣದೆಯೇ ಆದರದಿಂದ ಸ್ವಾಗತಿಸಿದನಾದರೂ ಅವನು ಮುನಿದೇ ಇದ್ದ. ಆದರೆ ತನ್ನ ಕುವರಿ ವಾಸವದತ್ತೆಗೆ ವೀಣೆ ಹೇಳಿಕೊಡುವಂತೆ ಚಂಡಮಹಾಸೇನ ಉದಯನನಿಗೆ ವಿಧಿಸಿದಾಗ ಅವನ ಮುನಿಸು ಕರಗಿಹೋಯಿತು. ಈ ಸುಮಧುರ 'ಶಿಕ್ಷೆ'ಯನ್ನು ಉದಯನ ಹೃನ್ಮನಗಳಿಂದಲೇ ಸ್ವಾಗತಿಸಿದ; ತನ್ನನ್ನೇ ತಾನು ಮರೆತ.





ಅರಸ ಉದಯನನ ಬಂಧನದ ಸುದ್ದಿ ಸೇವಕರ ಮೂಲಕ ಅವನ ಮಂತ್ರಿ, ಸೇನಾನಿಗಳಿಗೆ ತಿಳಿದಾಗ ಮೊದಲು ಅವರು ಹೌಹಾರುತ್ತಾರಾದರೂ ನಂತರ ಮಂತ್ರಿ ಯೌಗಂಧರಾಯಣನಿಗೆ ಒಂದು ಯೋಜನೆ ಹೊಳೆಯುತ್ತದೆ. ವಿದೂಷಕನನ್ನು ಸಂಗಡ ಕರೆದುಕೊಂಡು ಉಜ್ಜಯನಿಗೆ ವೇಷ ಮರೆಸಿಕೊಂಡು ಅವನು ತೆರಳುತ್ತಾನೆ. ನಗರದಲ್ಲೆಲ್ಲ ತಮ್ಮ ಹಾಸ್ಯ, ನರ್ತನಗಳಿಂದ ಜನಪ್ರಿಯತೆ ಗಳಿಸಿದ ಅವರು ಸಹಜವಾಗಿಯೇ ಅರಮನೆಯಲ್ಲೂ ಪ್ರವೇಶ ದೊರಕಿಸಿದಾಗ ಉದಯನನು ಅವರನ್ನು ಗುರುತಿಸಿ ಆನಂದದಿಂದ ಮಾತಾಡಿಸುತ್ತಾನೆ.

ಅಲ್ಲಿಂದ ಪಾರಾಗಿ ಹೋಗುವ ಯೋಜನೆಯನ್ನು ಮಂತ್ರಿ ಯೌಗಂಧರಾಯಣನು ಅರಸು ಉದಯನನಿಗೆ ಅರಹುತ್ತಾನೆ. ಉದಯನನೊಂದಿಗೆ ಹೊರಟುಬರಲು ವಾಸವದತ್ತೆಯೂ ಸಮ್ಮತಿಸುತ್ತಾಳೆ. ಅನಂತರ ಅವರಿಬ್ಬರೂ ಭದ್ರಾವತಿಯೆಂಬ ಹೆಣ್ಣಾನೆಯನ್ನೇರಿ ಉಜ್ಜಯನಿಯಿಂದ ಹೊರಡುತ್ತಾರೆ. ಅದನ್ನು ಕಂಡು ವಾಸವ-ದತ್ತೆಯ ಅಣ್ಣ ಪಾಲಕ ಗಂಡಾನೆ ನಳಾಗಿರಿಯನ್ನೇರಿ ಅವರನ್ನು ಹಿಂಬಾಲಿಸಿದ. ನಳಾಗಿರಿಯು ಭದ್ರಾವತಿಯನ್ನು ಸಮೀಪಿಸಿತಾದರೂ ಅವೆರಡೂ ಪರಸ್ಪರ ಅನುರಕ್ತ-ರಾಗಿದ್ದುದರಿಂದ ನಳಾಗಿರಿಯು ಭದ್ರಾವತಿಯ ಮೇಲೆ ಹಲ್ಲೆ ಮಾಡಲೊಪ್ಪಲಿಲ್ಲ.







ಆಗ ವಾಸವದತ್ತೆಯ ಇನ್ನೊಬ್ಬ ಸಹೋದರ ಗೋಪಾಲಕನು ಹಿಂದಿರುಗುವಂತೆ ಪಾಲಕನ ಮನವೊಲಿಸಿದ. ಪ್ರೇಮಿಗಳ ಪಲಾಯನಕ್ಕೆ ಅವನು ಸಹಮತನಾಗಿದ್ದ. ವಿಂಧ್ಯದಲ್ಲಿ ಅಲೆದಲೆದ ನಂತರ ಈ ರಾಜಪ್ರಣಯಿಗಳು ಕೊನೆಗೆ ಸೇನಾಪತಿ ರುಮಣ್ವತನನ್ನು ಕಂಡರು. ಅವನು ಸೇನಾಬಲದ ರಕ್ಷೆಯಲ್ಲಿ ಅವರನ್ನು ರಾಜಧಾನಿ ಕೋಸಾಂಬಿಗೆ ಕರೆದೊಯ್ದನು. ಅಲ್ಲಿ ಸಡಗರವೇ ಸಡಗರ.

ಚಿತ್ರ: ಬಿ. ಕೆ. ರಾವ್

ಅವರ ಹಿಂದಿನಿಂದಲೇ ಚಂಡಮಹಾಸೇನನ ಹಾಗೂ ವಾಸವದತ್ತೆಯ ತಾಯಿ ಅಂಗಾರವತಿಯರ ಮಂಗಲ ಆಶೀರ್ವಾದಗಳನ್ನು ಹೊತ್ತ ಗೋಪಾಲಕ ಅಲ್ಲಿಗೆ ಬಂದ. ಕೋಸಾಂಬಿಯ ಅರಮನೆಯಲ್ಲಿ ನಡೆದ ಉದಯನ-ವಾಸವದತ್ತೆಯರ ವಿವಾಹದ ವೈಭವ ಅಜ-ಇಂದುಮತಿಯರ ಮದುವೆಯ ಸಡಗರವನ್ನೂ ಮೀರಿಸಿ ಪ್ರಜೆಗಳನ್ನೆಲ್ಲ ಸಂತೋಷಸಾಗರದಲ್ಲಿ ತೇಲಿಸಿತು.





ದಶಗ್ರೀವನಿಗೆ ಹತ್ತು ತಲೆಗಳಿದ್ದುವೆ?

ಎಂಬೆನ್ನ ಬಿರುದವನರೀರೈದು ತಲೆಯೆಂದು
ಚಿತ್ರಿಪರ್! ದಶರಥನನಂತು ನಾವ್ ಚಿತ್ರಿಪೆವೆ?
ಪತ್ತುತೇರೊಳ್ ಸತ್ತ್ವಸೂಳೆದು ಕಾಲ್ಗಳನಿಟ್ಟು
ಚರಿಸುವರೋಲ್ ಬಣ್ಣಿಪ್ಪೆವೇಂ?

— 'ಕುವೆಂಪು' ಅವರ ಶ್ರೀರಾಮಾಯಣ ದರ್ಶನಂ

ರಾವಣನಿಗೆ ಹತ್ತು ತಲೆಗಳೂ ಇಪ್ಪತ್ತು ಕೈಗಳೂ ಇದ್ದವೆಂಬುದು ಸಾಮಾನ್ಯ ನಂಬಿಕೆ. ಇದಕ್ಕೆ ಸಾಮಾನ್ಯ ವಿವೇಕ ಅಥವಾ ತರ್ಕವೊಂದನ್ನು ಬಿಟ್ಟರೆ ಮಿಕ್ಕೆಲ್ಲ ಆಧಾರಗಳೂ ದೊರೆಯುತ್ತವೆ.

ಮೂಲರಾಮಾಯಣವನ್ನು ಬರೆದ ವಾಲ್ಮೀಕಿಯು ರಾವಣನನ್ನು ದಶಕಂಠನೆಂದೂ ದಶಗ್ರೀವನೆಂದೂ ವರ್ಣಿಸಿರುವುದು ಈ ನಂಬಿಕೆ ಬೆಳೆಯಲು ಕಾರಣವಾಗಿರಲು ಸಾಕು. ಅದೇ ರಾಮಾಯಣದಲ್ಲಿಯೇ ಒಂದು ಕಡೆ ಉಲ್ಲೇಖಿಸಿದಂತೆ ರಾವಣನು ಮೊದಲು ಹತ್ತು ಸಹಸ್ರ ವರ್ಷ ತಪಸ್ಸು ಮಾಡಿದನಂತೆ. ಆಗ ಒಂದೊಂದು ಸಹಸ್ರ ವರ್ಷ ಮುಗಿದಾಗಲೂ ತನ್ನ ಒಂದೊಂದು ತಲೆಯನ್ನು ಕಡಿದು ಯಜ್ಞಕುಂಡದಲ್ಲಿ ಹೋಮ ಮಾಡುತ್ತಿದ್ದನಂತೆ. ಈ ರೀತಿ ಒಂಬತ್ತು ತಲೆಗಳು ಹೋಗಿ ಇನ್ನು ಕೊನೆಯ ತಲೆಯನ್ನು ಕಡಿಯಲು ಸಿದ್ಧನಾದಾಗ ಬ್ರಹ್ಮದೇವರು ಪ್ರತ್ಯಕ್ಷನಾಗಿ ಅವನಿಗೆ ವರ ನೀಡಿದನಂತೆ. ಈ ಘಟನೆ ನಡೆದಾಗ ರಾಮನು ಇನ್ನೂ ಹುಟ್ಟಿರಲಿಲ್ಲ ಕೂಡ. ಅಂದರೆ ರಾಮನಕಥೆಯಲ್ಲಿ ರಾವಣನ ಪ್ರವೇಶವಾದಾಗ ಅವನಿಗೆ ಹತ್ತು ತಲೆಗಳಿರುವುದು ಸಾಧ್ಯವಿಲ್ಲ. ಆಗ ಅವನಿಗೆ ಒಂದೇ ತಲೆಯಿತ್ತು.

ನಾಟಕಗಳಲ್ಲಿ ಚಲಚ್ಚಿತ್ರಗಳಲ್ಲಿ ರಾವಣನ ವೇಷವನ್ನು ಹಾಕಿದಾಗ ಪಾತ್ರಧಾರಿಯ ಮುಖಕ್ಕೆ ಮತ್ತೆ ಒಂಭತ್ತು ಕೃತ್ರಿಮ ತಲೆಗಳನ್ನೋ ಚಿತ್ರಗಳನ್ನೋ ಜೋಡಿಸುತ್ತಾರೆ. ಆದರೆ ಇದರಲ್ಲಿ ಕೂಡ ಒಂದು ಅಸಂದಿಗ್ಧತೆ ಇದೆ. ಪಾತ್ರಧಾರಿಯ ಮುಖದ ಒಂದು ಕಡೆಗೆ ಐದು ಮುಖಗಳೂ ಇನ್ನೊಂದು ಕಡೆಗೆ ನಾಲ್ಕು ಮುಖಗಳೂ ಜೋಡಿಸಲ್ಪಡುತ್ತವೆ. ಐದು ಯಾವ ಕಡೆಗೆ ಮತ್ತು ನಾಲ್ಕು ಯಾವ ಕಡೆಗೆ ಇರಬೇಕೆಂಬ ಬಗ್ಗೆ ಯಾವುದೇ ನಿಖರವಾದ ಶಾಸ್ತ್ರಾಧಾರ ಇಲ್ಲವೆ ಉಲ್ಲೇಖ ಇದ್ದಂತಿಲ್ಲ.

ರಾವಣನಿಗೆ ದಶಶಿರನೆಂದೂ ದಶಮುಖನೆಂದೂ ಹೆಸರಿರುವದರಿಂದ ಅವನಿಗೆ ಹತ್ತು ತಲೆಗಳನ್ನು ಮಾಡುತ್ತಾರೆ. ಅವನಿಗೆ ದಶಕಂಠ, ದಶಗ್ರೀವನೆಂದೂ ಹೇಳುತ್ತಾರಲ್ಲ! ಅಂದ ಮೇಲೆ ಅವನಿಗೆ ಹತ್ತು ಕಂಠಗಳನ್ನು ಏಕೆ ಮಾಡುವದಿಲ್ಲ? ಅವನ ಒಂದೇ ಕತ್ತು ಹತ್ತು ತಲೆಗಳನ್ನು ಹೊರುತ್ತಿತ್ತೆ? ಕತ್ತುಗಳು ಸಹ ಹತ್ತು ಇರುವುದು ನಿಜವಾಗಿದ್ದರೆ ಆ ಹತ್ತು ಕತ್ತುಗಳನ್ನು ಹೊರುವ ಅವನ ಹೆಗಲು ಎಷ್ಟಿರಬಹುದು? ಅದಕ್ಕೆ ಇನ್ನೂ ಇಪ್ಪತ್ತು ಕೈಗಳು ಬೇರೆ ಅಂಟಿಕೊಳ್ಳಬೇಕಲ್ಲ.

ರಾವಣನ ಇನ್ನೊಂದು ಹೆಸರಿಗೆ ಇದ್ದ ಈ ದಶ ಎಂಬ ಉಪಸರ್ಗ ರಾಮನ ತಂದೆಯ ಹೆಸರಿಗೂ ಇತ್ತು. ಆದರೆ ಅಲ್ಲಿ ಅದರ ಅರ್ಥವನ್ನು ಅಲಂಕಾರಿಕವಾಗಿ ಮಾಡಲಾಗಿದೆ. ಅವನು ಹತ್ತು ದಿಶೆಯಲ್ಲಿ ರಥಗಳನ್ನು ಏಕಪ್ರಕಾರವಾಗಿ ನಡೆಸಬಲ್ಲ ಸಾಮರ್ಥ್ಯ ಉಳ್ಳವನೆಂದು ಹೇಳಲಾಗಿದೆ. ಹಾಗೆಯೇ ದಶಶಿರ ಅಥವಾ ದಶಗ್ರೀವ ಎಂದರೆ ಹತ್ತು ದಿಕ್ಕುಗಳಲ್ಲಿ ತನ್ನ ತಲೆಯನ್ನು ಎತ್ತರವಾಗಿಯೇ ಇಟ್ಟುಕೊಳ್ಳುವ ಸಾಮರ್ಥ್ಯ ಉಳ್ಳವನು ಎಂದು ಅರ್ಥ ಮಾಡಿದರೆ ಆಗುತ್ತಿರಲಿಲ್ಲವೆ? ವಾಲ್ಮೀಕಿ ಮಾತ್ರ ಹಾಗೆಲ್ಲಿಯೂ ಅರ್ಥ ಕೊಟ್ಟಿಲ್ಲ. ರಾಮಾಯಣದ ಇತರ ಭಾಷ್ಯಕಾರರೂ ಇಂಥ ಅರ್ಥ ಹಚ್ಚುವ ಸಾಹಸಕ್ಕೆ ಇಳಿದಿಲ್ಲ.

ಅಯೋಧ್ಯೆ ಭಾರತದ ಉತ್ತರ ತುದಿಯಾದರೆ ಲಂಕೆ ದಕ್ಷಿಣ ತುದಿಯ ಆಚೆ. ಇವುಗಳ ನಡುವಿನ ಅಂತರ ಸಾವಿರಾರು ಮೈಲಿಗಳಷ್ಟು. ಆಸೇತು ಹಿಮಾಚಲ ಒಂದೇ ಸಂಸ್ಕೃತಿಯ ಮಾತನ್ನು ನಾವು ಆಡಿದರೂ ಸ್ಥಾನಿಕ ಭೇದಭಾವಗಳು ಸಾಕಷ್ಟಿರುವದನ್ನು ನಾವು ಇಂದೂ ಕಣ್ಣಾರೆ ನೋಡುತ್ತಿದ್ದೇವೆ. ಅಂದಿನ ಪರಿಸ್ಥಿತಿ ಹಾಗಿರಬೇಡ? ಈ ವಿಸ್ತಾರ ಪ್ರದೇಶದಲ್ಲಿ ಅನೇಕ ಬೇರೆ ಬೇರೆ ಜನಾಂಗಗಳು ಬೇರೆ ಬೇರೆ ಭಾಷೆಗಳನ್ನಾಡುತ್ತ ಬೇರೆ ಬೇರೆ ಮಟ್ಟದಲ್ಲಿ ತಮ್ಮ ನಾಗರೀಕತೆಗಳನ್ನು ಬೆಳೆಸಿಕೊಂಡಿದ್ದಿರಬಹುದು. ಆಗಾಗ ಅವುಗಳ ಪರಸ್ಪರ ಪರಿಚಯವೂ ಆಗುತ್ತಿರಬಹುದು. ಆದರೆ ಅಯೋಧ್ಯೆಯ ಭಾಷೆ, ನೀತಿ ಪದ್ಧತಿಗಳೇ ಲಂಕೆಯ ವರೆಗೂ ಇದ್ದವೆಂದು ಹೇಳಲಿಕ್ಕಾಗದು. ಇರಲಿಲ್ಲವೆಂದು ಹೇಳುವದಕ್ಕೆ ರಾಮಾಯಣದಲ್ಲಿಯೇ ಅನೇಕ ಉದಾಹರಣೆಗಳು ಸಿಗುತ್ತವೆ.

ಆರ್ಯಪೂರ್ವ ದ್ರಾವಿಡ ಜನಾಂಗದ ಸಂಸ್ಕೃತಿ ಮತ್ತು ಭಾಷೆಗಳ ಬಗ್ಗೆ ನಮ್ಮಲ್ಲಿ ಇನ್ನೂ ಸಾಕಷ್ಟು ಸಂಶೋಧನೆ ನಡೆಯಬೇಕಾಗಿದೆ. ಆದರೂ ರಾಮಾಯಣದಲ್ಲಿ ಉಲ್ಲೇಖಿತವಾಗಿರುವ ವಾನರ, ರಾಕ್ಷಸ ಮೊದಲಾದ ಹೆಸರುಗಳು ಆಯಾ ಪ್ರದೇಶದಲ್ಲಿ ವಾಸಿಸುತ್ತಿದ್ದ ಸ್ಥಳೀಯ ಜನಾಂಗ ಇಲ್ಲವೆ ಗುಂಪುಗಳನ್ನು ನಿರ್ದೇಶಿಸುವವೆಂದು ನಂಬಲು ಸಾಕಷ್ಟು ಕಾರಣಗಳಿವೆ. ಈ ಭಿನ್ನ ಭಿನ್ನ ಜನ ಇಲ್ಲವೆ ಗುಂಪುಗಳ ಭಾಷೆ ರೀತಿ, ನೀತಿಗಳು ಭಿನ್ನವಾಗಿದ್ದು ಅವು ಪರಸ್ಪರರಿಗೆ ಅಪರಿಚಿತವೂ ವಿಚಿತ್ರವೂ ಆಗಿ ಕಂಡಿರಲು ಸಾಕು. ಆರ್ಯ ಕುಲದವನಾದ ವಾಲ್ಮೀಕಿಯು ವಾನರ ಮತ್ತು ರಾಕ್ಷಸ ಕುಲದವರನ್ನು ಕಂಡ ದೃಶ್ಯವು ರಾಮಾಯಣವೆಂದು ಹೇಳುವುದು. ಅದೇ ರೀತಿ ಒಬ್ಬ ವಾನರ ಇಲ್ಲವೆ ರಾಕ್ಷಸಕುಲದ ಕವಿ ಆರ್ಯರ ಬಗ್ಗೆ ಬರೆದಿದ್ದರೆ ಅಥವಾ ಬರೆದುದು ಇಂದು ಸಿಕ್ಕರೆ ಅದು ಆರ್ಯರ ಬಗ್ಗೆ ತೀರ ಭಿನ್ನವಾದ ಚಿತ್ರವನ್ನು ಕೊಡಬಹುದು.

ಆರ್ಯರು ಬೇರೆ ಜನಾಂಗದ ಹೆಸರುಗಳನ್ನು ತಮ್ಮ ಭಾಷೆಗೆ ತೆಗೆದುಕೊಳ್ಳುವಾಗ ಅವುಗಳಿಗೆ ತಮ್ಮ ಸಂಸ್ಕಾರ ಕೊಟ್ಟಿರುವ ಅನೇಕ ಉದಾಹರಣೆಗಳುಂಟು. ಆರ್ಯರ ಶಬ್ದಗಳೂ ಹೊರಗೆ ಹೋದಾಗ ಈ ರೀತಿ ರೂಪಾಂತರ ಹೊಂದಿದ್ದುಂಟು. ಇಲ್ಲಿಯ ಪುರು ಗ್ರೀಕರಲ್ಲಿ ಪೋರಸ್ ಆದ. ಸಿಂಧುನದಿ ಇಂಡಸ್ ಆಯಿತು. ಅಲ್ಲಿಯ ಅಲೆಕ್ಝಾಂಡರನು ಸಂಸ್ಕೃತದಲ್ಲಿ ಅಲಕ್ಷೇಂದ್ರನಾದ, ಷೇಕ್ಸ್‌ಪಿಯರನು, ಶಕ

ಸುರೇಂದ್ರ ದಾನಿ

ಪ್ರಿಯನಾದ ವನ್ಯಾಕ್ಸ್‌ಮುಲ್ಲರನು ಮೋಕ್ಷಮುಲ್ಲರ ನಾದ ಆದ್ದರಿಂದ ಆರ್ಯೇತರ ಹೆಸರುಗಳಾದ ಸುಗ್ರೀವ, ದಶಗ್ರೀವ ಮೊದಲಾದವುಗಳು ಆಯಾ ಜನಾಂಗದ ಭಾಷೆಯಲ್ಲಿ ಈ ಧ್ವನಿಗೆ ಹತ್ತಿರವಾದ ಬೇರೆ ಶಬ್ದಗಳಿರಬೇಕು

ತೆಲಗು ಭಾಷಾ ಶಾಸ್ತ್ರಜ್ಞರಾದ ಡಾ ಜಿ ಸೀತಾ ಪತಿ ಎಂಬವರು ಮಧ್ಯಪ್ರದೇಶದ 'ಸವರ' ಎಂಬ ಕಾಡು ಜನಾಂಗದ ಬಗ್ಗೆ ಅಭ್ಯಾಸ ನಡಸಿ ಬರೆದುದ ರಲ್ಲಿ ಇವರೇ ಪುರಾಣ ಕಾಲೀನ ಶಬರ ಜನಾಂಗ ವಿರಬಹುದೆಂಬ ಅನುಮಾನಕ್ಕೆ ಬಂದಿದ್ದಾರೆ. ಮತ್ತು ಗೋದಾವರಿ ನದಿಯ ಹೆಸರು ಮೂಲ ಸಂಸ್ಕೃತವಲ್ಲವೆಂದೂ ಈ ಜನಾಂಗದಲ್ಲಿ ಗೋದಾ ಎಂಬ ಶಬ್ದಕ್ಕೆ ವಿಶಾಲ ಎಂಬ ಅರ್ಥವಿದೆಯೆಂದೂ 'ವರಿ' ಎಂಬ ಶಬ್ದಕ್ಕೆ ನದಿಯೆಂದೂ ಹೇಳಿದ್ದಾರೆ. ಹೀಗೆ ಗೋದಾವರಿ ಎಂಬ ಸವರ ಜನಾಂಗದ ಶಬ್ದವನ್ನೇ ಆರ್ಯರು ತಮ್ಮ ಭಾಷೆಯಲ್ಲಿ ಸೇರಿಸಿಕೊಂಡಿದ್ದಾರೆ.

ಇದೇ ರೀತಿ ಕಾವೇರಿ ನದಿಯ ಹೆಸರಿನ ಮೂಲವನ್ನು ಹುಡುಕಿದರೆ ಅದಕ್ಕೂ ಇದೇ ರೀತಿ ಸ್ಥಳೀಯ ಜನಾಂಗದ ಭಾಷೆಯ ಅರ್ಥ ದೊರೆಯಬಹುದೋ ಏನೋ !

ಪಿ. ಟಿ. ಶ್ರೀನಿವಾಸ ಅಯ್ಯಂಗಾರರು ಬರೆದಿರುವ "ಹಿಸ್ಟರಿ ಆಫ್ ದಿ ತಮಿಳ್ಸ" ಎಂಬ ಪುಸ್ತಕದಲ್ಲಿ 'ಕುಈ' ಎಂಬ ಕಾಡು ಜನಾಂಗದ ಉಲ್ಲೇಖ ಬರುತ್ತದೆ ಅವರ ಈ ಕುಈ ಭಾಷೆ ದ್ರಾವಿಡ ವರ್ಗದ್ದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಈ ಜನರು ಗ್ರಾಮರಕ್ಷಣೆಗೆ ಒಬ್ಬ ಹೆಣ್ಣು ದೇವತೆಯಿರುವಳೆಂದು ನಂಬುತ್ತಿದ್ದರಂತೆ ತಾವು ಅಜಾಗರೂಕರಿರುವಾಗ ಈ ದೇವತೆ ತಮ್ಮ ಊರನ್ನು ಕಾಯುವಳೆಂದು ಅವರ ನಂಬಿಕೆ ಲಂಕಾಪಟ್ಟಣದ ರಕ್ಷಣೆಗೆ ಲಂಕಿಣಿ ಎಂಬ ಹೆಂಗಸೊಬ್ಬಳು ಇದ್ದಳೆಂಬ ವರ್ಣನೆ ಇದಕ್ಕೆ ಸಮೀಪವಾಗಿಲ್ಲವೆ ? ಈ ಜನರು ಯುದ್ಧಕ್ಕೆ ಹೋಗುವಾಗ ನಾನಾತರದ ಕಾಡು ಮತ್ತು ಭೀಕರ ಪ್ರಾಣಿಗಳ ಮುಖವಾಡಗಳನ್ನು ಧರಿಸಿಕೊಂಡು ಹೋಗುತ್ತಿದ್ದರೆಂಬುದನ್ನು ಶ್ರೀ ಅಯ್ಯಂಗಾರರು ಶೋಧಿಸಿದ್ದಾರೆ. ರಾಕ್ಷಸರು ನಾನಾರೂಪಧಾರಿಗಳು ; ವಿವಿಧ ರೀತಿಯ ಮುಖವುಳ್ಳವರು ಎಂದು ರಾಮಾಯಣದಲ್ಲಿ ವರ್ಣನೆ ಬರುವದಕ್ಕೆ ಇದು ಅರ್ಥ ಒದಗಿಸುತ್ತದೆ

ದಶಗ್ರೀವ ಸುಗ್ರೀವ ಮೊದಲಾದ ಹೆಸರುಗಳಿಗೆ ಸಮೀಪದ ಪದಗಳು ಕುಈ ಭಾಷೆಯಲ್ಲಿ ಇರುವದು ಸಹ ಕಂಡುಬಂದಿದೆ. ವಾನರ ಮತ್ತು ರಾಕ್ಷಸ ಪಂಗಡಗಳಲ್ಲಿಯ ಹೆಸರುಗಳು ಈಗ ನಮಗೆ ಆರ್ಯ ಭಾಷೆಯಾದ ಸಂಸ್ಕೃತದಲ್ಲಿ ಸರಿಯಾದ ಅರ್ಥ ಕೊಡುವಂತೆ ಕಂಡು ಬಂದರೂ ಅವು ಮೂಲತಃ ಸಂಸ್ಕೃತ ಭಾಷೆಯವಲ್ಲವೆಂಬುದನ್ನು ನಾವು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು ಅವುಗಳನ್ನು ಆರ್ಯರು ತಮ್ಮ ನಾಲಿಗೆ ಮತ್ತು ಸಂಸ್ಕಾರಗಳಿಗೆ ತಕ್ಕಂತೆ ಪರಿಷ್ಕರಿಸಿಕೊಂಡಿರಬಹುದು ಮದ್ರಾಸಿನಲ್ಲಿಯ ಹ್ಯಾಮಿಲ್ಟನ್ ಬ್ರಿಜ್ ಎಂಬ ಸೇತುವೆ ಸ್ಥಳೀಯ ಜನರ ಬಾಯಲ್ಲಿ ಅಪಭ್ರಂಶಗೊಂಡು ಅಂಬ್ರಟನ್ ಬ್ರಿಜ್ ಎಂದಾಗಿ ಕಾಲ ಕ್ರಮೇಣ ಅದು ಮತ್ತೆ ಇಂಗ್ಲಿಷಿಗೆ ಭಾಷಾಂತರಗೊಂಡು 'ವಾಶರ್‌ಮನ್ ಬ್ರಿಜ್' ಎಂದು ಕರೆಯಲ್ಪಡುತ್ತಿದೆ. ದಶಗ್ರೀವ ಸುಗ್ರೀವಗಳಿಗೆ ನಾವು ಇಂದು ಹೇಳುತ್ತಿರುವ ಅರ್ಥ ಹೀಗಿರುವ ಸಂಭವವಿದೆ

ಬಂಧುಗಳು



ಸಾಲಾಗಿ ಬರಲು ಮೊದಲಾಗುವರು ಬಂಧುಗಳು
ಸಿರಿತನವು ಬಂದು ಬಡತನವು ಸರಿದಿರಲು.
ಬಿರುಗಾಳಿ ಭೋರೆಂದು
ಮುಂಗಾರ ಮಳೆ ಬಂದು
ಕೆರೆ ತುಂಬಿ, ವಟಗುಟ್ಟಬಹುದು ಕಪ್ಪೆಗಳು !

—ಎಸ್. ದಿವಾಕರ್

ಕುಈ ಭಾಷೆಯಲ್ಲಿ ದಶಗ್ರೀವ ಎಂಬ ಒಂದು ಶಬ್ದವಿದೆ ಅದಕ್ಕೆ ಪೀಡೆ ಕೊಡುವವನು ಎಂದರ್ಥವಿದೆ ರಾವಣನು ಪ್ರಜಾಪೀಡಕನಾಗಿದ್ದನೆಂಬುದರಲ್ಲಿ ಯಾವ ಸಂದೇಹವೂ ಇಲ್ಲ ವಾಲ್ಮೀಕಿಯ ರಾವಣ ಎಂಬ ಶಬ್ದಕ್ಕೂ ಇದೇ ಮಾದರಿಯ ಅರ್ಥ ಹೇಳುತ್ತಾನೆ; ಲೋಕವನ್ನೆಲ್ಲ ಅಳಿಸುವವನು ಎಂದು

ಕುಈ ಭಾಷೆಯಲ್ಲಿ ಗೀವ ಎಂಬ ಪ್ರತ್ಯಯವುಳ್ಳ ಇನ್ನೂ ಅನೇಕ ಶಬ್ದಗಳಿರುವುದು ಕಂಡು ಬಂದಿದೆ ಉದಾ: ವೇಪಗಿವ=ಹೊಡೆಯುವವ, ಬಂಡೀಗೀವ=ಆಪತ್ತಿನಲ್ಲಿ ನೂಕುವವ

ಇದರಂತೆಯೇ ಅಸಿ ಎಂಬ ಪ್ರತ್ಯಯವೂ ಕುಈ ಭಾಷೆಯಲ್ಲಿರುವುದು ಕಂಡು ಬಂದಿದೆ ಇದನ್ನು ವ್ಯಕ್ತಿವಾಚಕವಾಗಿ ಉಪಯೋಗಿಸಲಾಗುವದು. ದಶ+ಅಸಿ ಅಂದರೆ ಪೀಡಿಸುವವನು ಎಂದರ್ಥ. ಈ ರೀತಿ ದಶಗೀವ ಮತ್ತು ದಶಾಸಿ ಎಂಬ ಕುಈ ಪದಗಳು ಆರ್ಯರ ಬಾಯಲ್ಲಿ ಮತ್ತು ಸಾಹಿತ್ಯದಲ್ಲಿ ದಶಗ್ರೀವ ಮತ್ತು ದಶಾಸ್ಯ ಎಂದಾಗಿ ಅದಕ್ಕೆ ಹತ್ತು ಕಂಠ ಮತ್ತು ಹತ್ತು ತಲೆಗಳುಳ್ಳವನೆಂಬ ಅರ್ಥವನ್ನು ಒದಗಿಸಿರಬಹುದು.

— ಆಧಾರದಿಂದ

Khatau
voiles



- ನಾರಿಯರಿಗೆ ಹಬ್ಬದೂಟ
- ಕಣ್ಣು ಕೊರೆಯುವ ಹೊಳಪು
- ಮಿನಗುವ ವಜ್ರಪ್ರಾಯ
- ವರ್ಣರಂಜಿತ
- ಮನಮೋಹಕ—

ಖಟಾವ್ ವಾಯಿಲ್ಸ್

ದಿ ಖಟಾವ್ ಮ್ಯಾಕಂಜಿ ಸ್ಪಿನಿಂಗ ಆ್ಯಂಡ ವೀವಿಂಗ ಕಂಪನಿ ಲಿಮಿಟೆಡ್.

ಮುಖ್ಯ ಕಚೇರಿ:— ಲಕ್ಷ್ಮಿ ಬಿಲ್ಡಿಂಗ ಬಲ್ಲಾರ್ಡ ಇಸ್ಟೇಟ್ ಮುಂಬಯಿ- 1. ಗಿರಣಿಗಳು:— ಹೈನ್ಸ್ ರೋಡ, ಬಾಯಕಲಾ ಮುಂಬಯಿ— 27.


ಠೋಕ ದರದ ಅಂಗಡಿ:— ಗೋವಿಂದ ಚೌಕ, ಮುಮಲ್ಜಿ ಜೇಠಾ ಮಾರ್ಕೆಟ್, ಮುಂಬಯಿ— 2

⁂ ಜೊತೆಯಾಗುವ 'ಕಾಶ್ಮೀರಾ'ರವಕೆ ಮತ್ತು 'ಪ್ರಿನ್ಸೆಸ್'ಗಳನ್ನು ಕೇಳಿ

ಸರ್ವರಿಗೂ ದೀಪಾವಳಿಯ ಶುಭಾಶಯಗಳು



ಭರದಲ್ಲಿ ಬರಲಿದೆ!
ಶೈಲಶ್ರೀ ಪ್ರೊಡಕ್ಷನ್ಸ್ ರವರ
ಹೆಮ್ಮೆಯ ಕಾಣಿಕೆ.
ಅ.ನ.ಕೃ ರವರ
ಅಮರಕೃತಿ
ಕಲಾವಿದರು
ರಾಜ್‌ಕುಮಾರ್
ಉದಯಕುಮಾರ್
ನರಸಿಂಹರಾಜು
ಅಶ್ವಥ್
ಭಾರತಿ.
ಪಂಡರೀಬಾಯಿ
ರೇವತಿ(ಜೂ)
ಮತ್ತು ನವನಟಿ
ಶೈಲಶ್ರೀ
ಸಂಧ್ಯಾರಾಗ
ನಿರ್ದೇಶನ
ಎ.ಸಿ.ನರಸಿಂಹಮೂರ್ತಿ
ಭಗವಾನ್
ಸಂಗೀತ
ಬಾಲಮುರಳಿಕೃಷ್ಣ ಜಿ.ಕೆ.ವೆಂಕಟೇಶ್
ಸಂಭಾಷಣೆ ಛಾಯಾಗ್ರಹಣ
ನರೇಂದ್ರಬಾಬು * ಬಿ.ದೊರೈರಾಜ್
ಹಳೇ ಮೈಸೂರು ರಾಜ್ಯ
ವೀನಸ್ ಪಿಕ್ಚರ್ಸ್
ಹಂಚಿಕೆ
ಉತ್ತರ ಕರ್ನಾಟಕಕ್ಕೆ
ಪ್ರಕಾಶ್ ಪಿಕ್ಚರ್ಸ್
ಹುಬ್ಬಳ್ಳಿ
ನಿರ್ಮಾಪಕರು
ಎ.ಸಿ.ನರಸಿಂಹಮೂರ್ತಿ
ಎ.ಪ್ರಭಾಕರರಾವ್



ನಾನು ಕಂಡ ಸಿಹಿ-ಕಹಿ

—ರೇವತಿ ಕಲ್ಯಾಣಕುಮಾರ

ನಾನು ಹಾಗೂ ನನ್ನ ಪತಿ "ಚಿಕ್ಕಮ್ಮ" ನಾಟಕವನ್ನಭಿನಯಿಸಲು ನಮ್ಮ ಕಂಪನಿಯೊಂದಿಗೆ ಮಂಗಳೂರಿಗೆ ಹೋಗಿದ್ದೆವು. ಹತ್ತು ದಿನಗಳು ಅಲ್ಲಿ ಕ್ಷಣಗಳಂತೆ ಕಳೆಯಿತು


ನಮ್ಮ ನಾಟಕ ಮಂಗಳೂರಿನಲ್ಲಿ ಜಯಭೇರಿ ಹೊಡೆಯಿತು ಪ್ರಕೃತಿಯ ಸೌಂದರ್ಯದೊಂದಿಗೆ ಸ್ನೇಹಿತರ ಮನೆಯ ಊಟ ತಿಂಡಿಗಳನ್ನು ಪ್ರತಿ ದಿನವೂ ಸವಿಯುತ್ತಿದ್ದೆವು

ನಮ್ಮ ಹಿರಿಯಣ್ಣನಂತಿರುವ ಸಿನಿಮಾ ನಟರಾಜ ಶ್ರೀ ಗಣಪತಿಭಟ್ಟರ ಮನೆಯ ಔತಣವಂತೂ ಮರೆಯಲಾರದ ಭೋಜನ.

ಮಂಗಳೂರಿನ "ಚರಮುರಿ" ನೆನೆದರೆ ನನ್ನ ನಾಲಿಗೆಯಲ್ಲಿ ಈಗಲೂ ನೀರೂರುತ್ತೆ. ಅಲ್ಲಿಯ ಹಲಸಿನಕಾಯಿ ಹಣ್ಣುಗಳಿಂದ ಮಾಡುವ ತಿಂಡಿಗಳ ರುಚಿಯಂತೂ ಹೇಳತೀರದು. ಎಲ್ಲದಕ್ಕಿಂತಲೂ ಮಿಗಿಲಾಗಿ ಆ ಜನಗಳ ಅಭಿಮಾನ, ಆದರ ಹೆಚ್ಚಿನದು.

ಒಂದು ದಿನ ನಮ್ಮ ಸ್ನೇಹಿತರೊಬ್ಬರು ಬೆಳಗ್ಗಿಯ ಉಪಹಾರಕ್ಕೆ ಆಹ್ವಾನಿಸಿದ್ದರು. ನನ್ನವರು ಮತ್ತು ನಮ್ಮ ತಂಡದಲ್ಲಿ ಕೆಲವರು ಅವರ ಮನೆಗೆ೯ ಗಂಟೆಗೆ ಹೋಗಿ ಸೇರಿದೆವು. ಮನೆಯ ಒಡೆಯರು ನಮಗೆ ನಗುನಗುತ್ತಾ ಸ್ವಾಗತ ಬಯಸಿದರು. ಪ್ರಶಾಂತವಾದ ವಾತಾವರಣದ ನಡುವೆ ಮುಗ್ಧ ಹೆಣ್ಣಿನಂತೆ ನಿಂತಿತ್ತು ಆ ಪುಟ್ಟ ಮನೆ. ಎಲ್ಲರೂ ಒಳಗೆ ನಡೆದರು. ನಾನು ಸುತ್ತಲೂ ನೋಡುತ್ತಾ ನಿಂತೆ... ತುಸು ದೂರದಲ್ಲಿ ಗುಡಿಸಲುಗಳು ಕಾಣಿಸಿದವು ಹುಡುಗರು ಕೆಲವರು ಗೋಡೆಯ ಮೇಲೆ ಕುಳಿತು ನಮ್ಮನ್ನೇ ದಿಟ್ಟಿಸಿ ನೋಡುತ್ತಿದ್ದರು. ನಾನು ಅಲ್ಲಿಯೇ ನಿಂತೆ. ಅಷ್ಟರಲ್ಲಿ ವಂದನ ಕೂಗಿ ಕರೆದಳು. ನಾನು ಒಳಗೆ ಹೋದೆ. ಮನೆ ಅಚ್ಚುಕಟ್ಟಾಗಿತ್ತು. ಉನ್ನತ ಅಭಿರುಚಿ ಇದ್ದ ನಮ್ಮ ಸ್ನೇಹಿತರು, ಅವರ ಇಷ್ಟಕ್ಕೆ ತಕ್ಕಂತೆ ಅದನ್ನು ಕಟ್ಟಿದ್ದರು.

ನಾನು ಪುಸ್ತಕಗಳನ್ನು ನೋಡುತ್ತಾ ವರಾಂಡದಲ್ಲಿ ಕುಳಿತೆ ಮಿಕ್ಕವರು ಹರಟೆ ಹೊಡೆಯುತ್ತಾ ನಗುತ್ತಾ ಒಳಗಡೆ ಇದ್ದರು. ಇದ್ದಕ್ಕಿದ್ದಂತೆ ನಾನು ತಲೆ ಎತ್ತಿ ನೋಡಿದೆ. ಮನೆಯ ಗೇಟಿನ ಬಳಿ ಕಬ್ಬಿಣದ ಸಲಾಕಿಗಳನ್ನು ಹಿಡಿದು ನಿಂತಿದ್ದರು ಮೂರು ಜನ ಹುಡುಗರು. ನಾನು ಓದುವುದನ್ನು ನಿಲ್ಲಿಸಿ ಅವರನ್ನೇ ನೋಡಿದೆ ಅವರ ಮುಖದಲ್ಲಿ ನಿರಾಶೆ ತುಂಬಿತ್ತು ಕಣ್ಣುಗಳಲ್ಲಿ ದೈನ್ಯ ಕಾಣುತ್ತಿತ್ತು ಹರಿದು ಹೋದ ಅಂಗಿಯಿಂದ ಎದೆಯ ಎಲುಬು ತೋರುತ್ತಿತ್ತು. ಬಾಡಿದ ಆ ಮುಖಗಳಲ್ಲಿ ನಿರ್ಮಲತೆ ಮಾತ್ರ ಜ್ಯೋತಿಯಂತೆ ಬೆಳಗುತ್ತಿತ್ತು ಪುಟ್ಟ ಕೈಗಳಿಂದ ಸಲಾಕೆ ಹಿಡಿದು, ತಲೆ ಓರೆ ಮಾಡಿ ನೋಡುತ್ತಾ ನಿಂತಿರುವ ಆ ಮುದ್ದು ಬಾಲಕನನ್ನು ನೋಡಿ ನನ್ನ ಹೃದಯದಲ್ಲಿ ಏಕೋ ಸಂಕಟವಾಯಿತು... ನಾನು ಮೆಲ್ಲನೆ ಎದ್ದೆ. ಅಷ್ಟರಲ್ಲಿ ರೇವತಿ ಬಂದು ತಿಂಡಿಗೆ ಕರೆದಳು. ನಾನು ಬಲವಂತದಿಂದ ಒಳಗೆ ಹೋದೆ ಎಲ್ಲರೊಡನೆ ಮಾತನಾಡಿ ನಗಬೇಕೆಂದು ಪ್ರಯತ್ನ ಪಟ್ಟೆ. ಆದರೆ ನನ್ನಿಂದಾಗಲಿಲ್ಲ ಸ್ನೇಹಿತರು ನಮ್ಮನ್ನು ತುಂಬಾ ಉಪಚಾರ ಮಾಡಿದರು. ಇಡ್ಲಿ, ವಡೆ, ಕೇಸರಿಭಾತ್, ದೋಸೆ, ಗುಲಾಬ್ ಜಾಮ್ ಎಲ್ಲಾ ಒಂದೊಂದಾಗಿ ಬಂದು ಮೇಜನ್ನು ಅಲಂಕರಿಸಿತು. ನಾನು ಸಿಹಿಯನ್ನು ತೆಗೆದುಕೊಂಡೆ. ಆದರೆ ಆ ಬಡ ಹುಡುಗರು ಗೇಟಿನ ಬಳಿ ನಿಂತಿರಬಹುದೂಂತ ನೆನೆಸಿದೊಡನೆ ಆ ಸಿಹಿ! ನನಗೆ ಕಹಿ! ಆಯಿತು. ನಂತರ ನಾನು ತಿಂಡಿ ತಿಂದಂತೆ ಅಭಿನಯಿಸಿ ಎಲ್ಲರೊಡನೆ ಎದ್ದು ಹಾಲಿಗೆ ಬಂದೆ ನನಗೆ ಆ ಹುಡುಗರೊಂದಿಗೆ ಹರಟಬೇಕೆಂದು ಆಸೆಯಾಯಿತು. ಯಾರಿಗೂ ತಿಳಿಯಕೂಡದೆಂದು ರಹಸ್ಯವಾಗಿ ವರಾಂಡದಲ್ಲಿ ಕಾಲಿಟ್ಟಾಗ ನನ್ನವರ ಧ್ವನಿ ಗಡುಸಾಗಿ ಕೇಳಿಸಿತು. "ಚಿ" "ಚಿ" ಎಲ್ಲಿಗಾದರೂ ಬಂದರೆ ನಗುತ್ತಾಯಿರೋದನ್ನ ಕಲಿ. ಒಬ್ಬಳಾಗಿ ಹೋಗುವುದನ್ನು ಮಿಕ್ಕವರು ತಪ್ಪು ತಿಳಿಯಬಹುದು" ನಾನು ದೀನತೆಯಿಂದ ಅವರನ್ನು ನೋಡಿದೆ. ಆದರೆ ಅವರು ನನ್ನ ಕಡೆ ನೋಡದೆ ಒಳಗೆ ಹೊರಟು ಹೋದರು. ನಾನು ಗೇಟಿನ ಕಡೆ ನೋಡಿದೆ. ಆ ಮುಗ್ಧ ಹುಡುಗರು ಅಲ್ಲಿಯೇ ನಿಂತಿದ್ದರು. ಎಳೆ ಬಿಸಿಲಲ್ಲೂ ಅವರ ಮುಖ ಕೆಂಪಾಗಿತ್ತು...ನಾನು ಮತ್ತೆ ಒಳಗೆ ಹೋದೆ. ಸ್ನೇಹಿತರು ರೇಡಿಯೋಗ್ರಾಂ ಹಾಕಿದರು. ಪಾಶ್ಚಾತ್ಯ ಸಂಗೀತ ಬಂದೊಡನೆ ಎಲ್ಲರೂ ಸಂತೋಷದಿಂದ ರಾಕ್ ಅಂಡ್ ರೋಲ್






ಆ ಹುಡುಗರ ಮುಖದಲ್ಲಿ ನಿರಾಶೆ ತುಂಬಿತ್ತು

ನೃತ್ಯ ಆರಂಭಿಸಿದರು. ನಾನು ನನ್ನ ವೇದನೆಯನ್ನು ಮರೆಯಲು ನನ್ನ ಗೆಳತಿಯರನ್ನು ನನ್ನ ಸೋದರರಂತಿರುವ ಶ್ರೀ ಶಿವರಾಮರವರನ್ನೂ ನೃತ್ಯ ಆಡಲು ಹುರಿದುಂಬಿಸಿದೆ. ಅವರು ಆನಂದದಿಂದ ಕುಣಿಯಲು ಆರಂಭಿಸಿದರು. ನಂದನಾ ಮತ್ತು ಶಿವರಾಮರ ನೃತ್ಯ ನೋಡಿ ಎಲ್ಲರೂ ಮೈಮರೆತು ನಿಂತಿದ್ದರು. ಬಳುಕಿ ಬಳುಕಿ ಆಡುತ್ತಿರುವ ಅವರಿಬ್ಬರನ್ನೂ ನೋಡುತ್ತ ಸ್ನೇಹಿತರು ಶಿಲೆಯಂತೆ ನಿಂತರು. ಅವರು ಕುಣಿದರು. ಎಲ್ಲರೂ ಕುಣಿಯಲು ಆರಂಭಿಸಿದರು. ಕುಣಿತ ಇಲ್ಲಿ ಸಂತೋಷದ ಕುಣಿತ. ಆದರೆ... ಅಲ್ಲಿ, ಗೇಟಿನ ಬಳಿ...ಬಡತನದ ಬೇಗೆ. ಇಲ್ಲಿ ನಗು ಅಲ್ಲಿ ಅಳು, ಇಲ್ಲಿ ಸಿಹಿ ಅಲ್ಲಿ ಕಹಿ. ಇಲ್ಲಿ ತಿನ್ನಲಾರದ ತಿಂಡಿಗಳು ಚೆಲ್ಲಿತ್ತು. ಅಲ್ಲಿ ತಿನ್ನಲು ಕೇಳುವುದಕ್ಕೂ ನಾಚಿ ನಿಂತಿದ್ದಾರೆ. ಆ ಪುಟ್ಟ ಬಡದೇವತೆಗಳು. ಓ ದೇವರೆ ನಿನಗೇಕೆ ಇಷ್ಟು ಪಕ್ಷಪಾತ. ಬಡತನ ಸಿರಿತನಗಳಿಲ್ಲದೆ ಇರಬಾರದೇ ಈ ಪ್ರಪಂಚದಲ್ಲಿ. ಆ ಹುಡುಗರೂ ಸಹ ಇಲ್ಲಿ ತಿಂಡಿ ತಿಂದು ಇಲ್ಲಿ ಕುಣಿದರೆ...ಇಲ್ಲ ಅವರಿಗೆ ಒಳಗೆ ಪ್ರವೇಶವೇ ಇಲ್ಲ. ಸಂತೋಷ ಅನುಭವಿಸಲು ಅವರಿಗೆ ಅರ್ಹತೆ ಇಲ್ಲ. ಈ ಹಣವಂತರ ಗುಂಪಿನಲ್ಲಿ. ಅವರು ಹಾಗೆಯೇ ಬಾಡುತ್ತಾ ಬೆಳೆಯಬೇಕು...ಸಾಕು ನಿಲ್ಲಿಸಿ ಎಂದು ಚೀರಿ ಹೇಳಬೇಕೆನ್ನಿಸಿತು ನನಗೆ. ಆದರೆ ನಾನು ಬಾಳುತ್ತಿರುವುದು ಈ ಸಮಾಜದಲ್ಲಿ ಬಾಳಲೇಬೇಕು. ಈ ಕಪಟ ಸಮಾಜದಲ್ಲಿ, ಈ ಕೃತ್ರಿಮ ಪ್ರೀತಿ ಸ್ನೇಹಗಳ ಮಧ್ಯದಲ್ಲಿ ನನ್ನಿಂದ ಅಲ್ಲಿ ಕುಳಿತುಕೊಳ್ಳಲು ಆಗಲೇ ಇಲ್ಲ...ನಾನು ಎದ್ದು ಧೈರ್ಯದಿಂದ ಹೊರಟು ಹೋದೆ. ಅಲ್ಲಿ ಏನು ತಿಳಿದುಕೊಳ್ಳುವರೋ ಎಂದು ನಾನು ಹಿಂಜರಿಯಲಿಲ್ಲ...ಗೇಟಿನ ಬಳಿ ಬಂದು ನೋಡಿದೆ. ಆಸಕ್ತಿಯಿಂದ ಪಾಶ್ಚಾತ್ಯ ಸಂಗೀತವನ್ನು ಕೇಳುತ್ತಿದ್ದ ಆ ಹುಡುಗರು ನನ್ನನ್ನು ಭೀತಿಯಿಂದ ನೋಡಿದರು...ಅವರನ್ನು ಹೊಡೆದು ಆಚೆ ತಳ್ಳಲು ಬಂದಿರಬಹುದೆಂಬ ಅಂಜಿಕೆಯಿರಬೇಕವರಿಗೆ...ನಾನು ಮೆಲ್ಲನೆ ನಕ್ಕು ಕೇಳಿದೆ..."ಹಾಡ್ತ ಚೆನ್ನಾಗಿದ್ಯೇ" ಪುಟ್ಟ ಹುಡುಗನೊಬ್ಬ ಅಚ್ಚರಿಯಿಂದ ನನ್ನನ್ನು ನೋಡಿದ... ಆದರೆ ಆ ಮೂವರೂ ಬಾಯಿಬಿಟ್ಟು ಮಾತಾಡಲಿಲ್ಲ...ನಾನು ಮೃದುವಾಗಿ ಕೇಳಿದೆ "ನಿನಗೆ ಕನ್ನಡ ಬರೋದಿಲ್ವೇ" ದೊಡ್ಡ ಹುಡುಗನಿಗೆ ಅಪಮಾನವಾಯ್ತೇನೋ. ಬಾಯಿ ತೆರೆದು ಹೇಳಿದ "ನನಗೆ ಕನ್ನಡ ಬರುತ್ತೆ" "ಇವನು ನಿನಗೇನಾಗಬೇಕು" ? ಆ ಹುಡುಗನ ಪಕ್ಕದಲ್ಲಿ ನಿಂತಿರುವ ನಾಲ್ಕು ವರುಷದ ಹುಡುಗನನ್ನು ತೋರ್‍ಸಿ ಕೇಳಿದೆ "ನನ್ನ ತಮ್ಮ" ಪ್ರೀತಿಯಿಂದ ಹೇಳಿ, ಮತ್ತೆ ಅವನೇ ಹೇಳಿದ. "ಇವನು ನನ್ನ ಸ್ನೇಹಿತ" ಆ ಸ್ನೇಹಿತ ನಾಚಿಕೆಯಿಂದ ಆ ಹುಡುಗನ ಬೆನ್ನು ಹಿಂದೆ ನಿಂತುಕೊಂಡ. "ನೀನು ಓದುತ್ತಾ ಇದ್ದೀಯಾ?" "ಊ...ನಾನು ಎರಡನೇ ಕ್ಲಾಸು ತಮ್ಮನಿಗೆ ಓದೋದಕ್ಕೆ ಬರೊಲ್ಲ... ಆದರೆ ಚೆನ್ನಾಗಿ ಕುಣೀತಾನೆ" ಹೆಮ್ಮೆಯಿಂದ ಹೇಳಿದ ಆ ಹುಡುಗ..."ಒಳಗಡೆ ಕುಣೀತಾಯಿದ್ದಾರೇನು" ಬೆನ್ನು ಹಿಂದೆ ಬಚ್ಚಿಟ್ಟುಕೊಂಡಿದ್ದ ಹುಡುಗ ಧೈರ್ಯದಿಂದ ಕೇಳಿದ. "ಊ..." ನೀವು ಕುಣಿಯೋದಿಲ್ವೇ" ನಾನು ಸಂತೋಷದಿಂದ ನಕ್ಕೆ. "ಇಲ್ಲ ನನಗೆ ಆ ಕುಣಿತ ಬರೋದಿಲ್ಲ" "ನಮಗೂ ಬರೋದಿಲ್ಲ" ಆ ಹುಡುಗ ತೃಪ್ತಿಯಿಂದ ಹೇಳಿದಾಗ ಮತ್ತಷ್ಟು ಜೋರಾಗಿ ನಕ್ಕೆ. "ಮಗೂ ನೀನು ತಿಂದಾಯ್ತೇ" ಆ ಹುಡುಗನನ್ನು ಮೃದುವಾಗಿ ತಬ್ಬಿ ಕೆನ್ನೆ ಸವರಿ ಕೇಳಿದೆ...ಆ ಮೂವರೂ ಮಾತಾಡಲಿಲ್ಲ. ಪುನಃ ನಾನೇ ಕೇಳಿದೆ "ಮನೇಲಿ ಏನೂ ತಿನ್ನಲಿಲ್ಲವೇ" ಅತಿ ಪ್ರಯಾಸದಿಂದ ಆ ಹುಡುಗ ಹೇಳಿದ. "ನಮ್ಮನೇಲಿ ತಿಂಡಿ ಮಾಡೋದಿಲ್ಲ"-ನನಗೆ ಒಳಗೆ ಚೆಲ್ಲಿರುವ ತಿಂಡಿಯು ನೆನಪಾಯ್ತು ಓಡಿ ಹೋಗಿ ತಂದು ಕೊಡಲೇ ಎನ್ನಿಸಿತು. ಆದರೆ...ಅದು ನನ್ನ ಮನೆ ಅಲ್ಲ...ನಾನು ಕ್ಷಣ ಯೋಚಿಸಿ ... "ಇಲ್ಲೇ ... ಇರಿ ... ಈಗ ಬರ್‍ತೀನಿ" ಎಂದು ಒಳಗೆ ಬಂದು ನಮ್ಮ ತಾಯಿಯ ಬಳಿ ಒಂದು ರೂಪಾಯಿ ತಗೊಂಡು ಓಡಿ ಅವರ ಬಳಿ ಹೋದೆ... "ತಗೋ...ನೀವು ಎಲ್ಲರೂ ತಿಂಡಿ ತಿನ್ನಿ"...ಆ ಹುಡುಗರು ಅತಿ ಆಶ್ಚರ್ಯದಿಂದ ನನ್ನನ್ನೇ ನೋಡಿದರು. ನಾನು ಆತ್ಮೀಯತೆಯಿಂದ ಆ ಪುಟ್ಟ ಮಗುವಿನ ಹರಿದುಹೋದ ಅಂಗಿಯ ಜೇಬಿನಲ್ಲಿ ರೂಪಾಯಿಯಿಟ್ಟೆ...ಆಗ ಅವರ ಮುಖಗಳಲ್ಲಿ ನಾನು ನೋಡಿದ ಸಂತೋಷ ಎಲ್ಲೂ ನೋಡಿರಲಿಲ್ಲ. ಆತ್ಮಕ್ಕೆ ತಂಪೆರಚುವ ಆ ಆನಂದ. ಬೇರಾವದರಲ್ಲೂ ಇಲ್ಲ...ಒಳಗೆ ಬಿರುಸಿನಿಂದ ಕುಣಿಯುತ್ತಿರುವ ಆ ನೃತ್ಯದಲ್ಲೂ ಇಲ್ಲ...ಇಲ್ಲಿ ಈ ಬಡ ಹುಡುಗರ ತೃಪ್ತಿಯಲ್ಲಿ ಹಿಮಾಲಯದಷ್ಟು ಸಂತೋಷವಿದೆ, ಸಾಗರದಷ್ಟು ಆನಂದವಿದೆ... ಅಷ್ಟರಲ್ಲಿ ನನ್ನವರು ಬಂದು ನೋಡಿದರು. ಈ ಹುಚ್ಚು ಹೆಂಡತಿಯ ಮನಸ್ಸು ಅರ್ಥವಾಯಿತೇನೋ..."ಹಾಗೆ ಇರು...ಅವರೊಂದಿಗೆ ನಿನ್ನ Photo ತೆಗೆಯುತ್ತೇನೆ" ಎಂದರು. ಅವರೊಡನೆ ನಾನು Photo ತೆಗೆಸಿಕೊಂಡಾಗ ಅವರು ಸ್ವರ್ಗವನ್ನೇ ನೋಡಿದಂತೆ ಹಿಗ್ಗಿದರು. ಅವರ ಆನಂದದಲ್ಲಿ ನಾನೂ ಭಾಗಿಯಾದೆ...ಒಳಗಿದ್ದ ಬಳಗ ಹೊರಗೆ ಬಂದೊಡನೆ ಆ ಹುಡುಗರು ಓಡಿಹೋದರು. ನಮ್ಮೆಲ್ಲರನ್ನೂ ಬೀಳ್ಕೊಡುತ್ತಾ ಸ್ನೇಹಿತರು ಹೇಳಿದರು "ಈ ದಿನವನ್ನು ನಾವು ಮರೆಯಲಾರೆವು"... ನಾನು...! ನನ್ನೊಳಗೇ ಹೇಳಿಕೊಂಡೆ "ನಿಜ, ನಾನೂ! ಈ ದಿನವನ್ನು ಮರೆಯಲಾರೆ" ನಾನು ಕಂಡ ಕಹಿ ಸಿಹಿಗಳನ್ನು ಹೇಗೆ ಮರೆಯಬಲ್ಲೆ?

ಜೇಬಿನಲ್ಲಿ ರೂಪಾಯಿ ಇಟ್ಟಾಗ—



ನಾನು ಮೆಚ್ಚಿಕೊಂಡ ನನ್ನ ಪಾತ್ರಗಳು

ಹರಿಣಿ

ಚಿತ್ರರಂಗದಲ್ಲಿ ಕಾಲಿಟ್ಟಾಗಿನಿಂದ ಇಂದಿನವರೆಗೆ ನಾನು ಸುಮಾರು ೪೦ ಚಿತ್ರಗಳಲ್ಲಿ ಅಭಿನಯಿಸಿದ್ದೇನೆ. ಆದರೆ ನಾನು ಮೆಚ್ಚಿದ ಪಾತ್ರಗಳು ಕೇವಲ ೪ ಅಥವಾ ೫ ಮಾತ್ರ. ಏಕೆ, ಇತರ ಚಿತ್ರಗಳಲ್ಲಿ ನಿಮ್ಮ ಪಾತ್ರವನ್ನು ನೀವೇಕೆ ಮೆಚ್ಚಿಲ್ಲ? ನೀವು ಮೆಚ್ಚದ ಪಾತ್ರಗಳಲ್ಲಿ ಏಕೆ ಅಭಿನಯಿಸಿದಿರಿ? ಮುಂತಾದ ಪ್ರಶ್ನೆಗಳನ್ನು ನೀವು ಕೇಳಬಹುದು. ಇಗೋ ಇಲ್ಲೇ ನನ್ನ ಉತ್ತರಗಳೂ ಇವೆ.

ನಾನು ಮೆಚ್ಚುವ ಪಾತ್ರಗಳಲ್ಲಿ ಮಾತ್ರ ಅಭಿನಯಿಸುವೆ ಎಂದು ಹಟ ಹಿಡಿದರೆ ಈಗಾಗಲೆ ಅಪರೂಪವಾಗಿರುವ ನನ್ನ ಚಿತ್ರಗಳು ಇನ್ನೂ ಅಪರೂಪವಾಗಬಹುದೋ ಎಂಬ ಭಯದಿಂದ ಕೆಲವು ಚಿತ್ರಗಳಲ್ಲಿ ಅಭಿನಯಿಸುತ್ತೇನೆ ಒಳ್ಳೇ ಸಂಸ್ಥೆ ಒಳ್ಳೇ ವೇತನದ ಆಕರ್ಷಣೆಯಿಂದಲೂ ಕೆಲವು ಚಿತ್ರಗಳಲ್ಲಿ ಅಭಿನಯಿಸುತ್ತೇನೆ

ಇನ್ನು ನಾನು ಮೆಚ್ಚಿದ ಪಾತ್ರಗಳನ್ನೂ ಅವುಗಳನ್ನು ಏಕೆ ಮೆಚ್ಚಿದೆ ಎಂಬುದನ್ನೂ ಹೇಳಲೇ?

ಈ ಸಾಲಲ್ಲಿ ಮೊದಲನೇಯದಾಗಿ 'ಸೌಭಾಗ್ಯ ಲಕ್ಷ್ಮೀ' ಚಿತ್ರದ 'ಲಕ್ಷ್ಮೀ' ಪಾತ್ರದ ಬಗ್ಗೆ ಹೇಳುತ್ತೇನೆ. ಆ ಚಿತ್ರದ ನಿರ್ಮಾಪಕ ನಿರ್ದೇಶಕರಾದ ಶ್ರೀ ವಿಠಲಾಚಾರ್ಯರು ಆ ಚಿತ್ರದ ಕಥೆಯನ್ನು ನನ್ನಲ್ಲಿ ಹೇಳಿದಾಗಲೇ ಅದು ನನಗೆ ತುಂಬಾ ಮೆಚ್ಚಿಗೆಯಾಯಿತು ಅಂತೆಯೇ ನಾನು ವಹಿಸಲಿದ್ದ ಪಾತ್ರದ ಬಗ್ಗೆ ಅಭಿಮಾನ ಮೂಡಿತು. ಆ ಚಿತ್ರವೂ ಅದರಲ್ಲಿನ ನನ್ನ ಪಾತ್ರವೂ ಯಶಸ್ವಿಯಾಗಬೇಕೆಂದು ಸಂಕಲ್ಪಿಸಿಕೊಂಡೆ.

ಇದರಿಂದ 'ಲಕ್ಷ್ಮೀ' ಪಾತ್ರ ನನ್ನ ಮನಸ್ಸಿನಲ್ಲಿ ಸೊಗಸಾಗಿ ಬೆಳೆಯಿತು. ಆ ಪಾತ್ರಕ್ಕೆ ಹೇಗೆಲ್ಲಾ 'ಜೀವ' ತುಂಬಬಹುದೆಂದು ಹಗಲು ರಾತ್ರಿ ಯೋಚಿಸಿದೆ. ಆ ಪಾತ್ರ ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯಬೇಕೆಂದು ಕನಸು ಕಂಡೆ!

ಚಿತ್ರೀಕರಣ ಸುರುವಾದ ಮೇಲೆ ಏಕಾಗ್ರತೆಯಿಂದ ಕೆಲಸ ಮಾಡಿದೆ ಇದಕ್ಕೆ ನಿರ್ದೇಶಕರಿಂದಲೂ ಇತರ ಕಲಾವಿದರಿಂದಲೂ ಒಳ್ಳೇ ಸಹಾಯ ದೊರಕಿತು. ಚಿತ್ರ ಬಿಡುಗಡೆಯಾದ ಮೇಲೆ ನನ್ನ ಕನಸು ನನಸಾಯಿತೆಂದು ನನಗೆ ತಿಳಿಯಿತು. ಇಂದಿಗೂ 'ಸೌಭಾಗ್ಯ ಲಕ್ಷ್ಮೀ'ಯ 'ಲಕ್ಷ್ಮೀ' ಎಷ್ಟೋ ಅಭಿಮಾನಿಗಳ ಮತ್ತು ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ಇದ್ದಾಳೆ.

ದಕ್ಷಿಣ ಭಾರತ ಚಿತ್ರಗಳಲ್ಲಿ ಮೊದಲ ಬಾರಿಗೆ ಕಪ್ಪು ಹುಡುಗಿಯಾಗಿ ಅಭಿನಯಿಸಿದವಳು ನಾನೇ ಎಂದು ಕಾಣುತ್ತೆ ಅದು 'ಕನ್ಯಾದಾನ' ಚಿತ್ರ ಎಂದು ನಿಮಗೂ ನೆನಪಿರಬಹುದು

ಈ ಚಿತ್ರದ ಕಥೆಯನ್ನು ಶ್ರೀ ಹುಣಸೂರ ಕೃಷ್ಣಮೂರ್ತಿಯವರು ಹೇಳಿ ಕೇಳಿದಾಗ, ಕಪ್ಪು ಹುಡುಗಿ ಪಾತ್ರವನ್ನು ನಿರ್ವಹಿಸಲು ಮೊದಲು ಯೋಚನೆ ಮಾಡಿದೆ. ಯಾಕೆಂದರೆ ತೆರೆಯ ಮೇಲೆ ಕರೀ ಹುಡುಗಿಯಾಗಿ ಚಿತ್ರ ಪ್ರೇಮಿಗಳಿಗೆ ಕಾಣಿಸಿಕೊಳ್ಳಬೇಕಲ್ಲಾ ಎಂಬ ಸಂಕೋಚದಿಂದ ಆದರೆ ನನ್ನ ತಂದೆಯವರಾದ ದಿವಂಗತ ಶ್ರೀ ಪಣಿಯಾದಿಯವರೂ ಶ್ರೀ ಹುಣಸೂರ ಅವರೂ ಆ ಪಾತ್ರದ ವೈಶಿಷ್ಟ್ಯವನ್ನು ನಾನಾ ಬಗೆಯಿಂದ ವಿವರಿಸಿದ ಮೇಲೆ ನಾನು ಆ ಪಾತ್ರದಲ್ಲಿ ಕಾಣಿಸಿಕೊಳ್ಳಲು ಒಪ್ಪಿದೆ. ಆ ಚಿತ್ರದ

ನಾಂದಿಯಲ್ಲಿ ನಾಯಕಿಯಾಗಿ —>



ಯಶಸ್ಸು ನಿಮಗೆ ಗೊತ್ತೇ ಇದೆ. ಆ ಚಿತ್ರದ ಮೂಲಕ ನನಗೆ ಇನ್ನೊಂದು ವಿಷಯವೂ ಮನವರಿಕೆಯಾಯಿತು. ಕಲಾವಿದರು ಬರೀ ತಮ್ಮ ರೂಪವನ್ನೇ ಮುಖ್ಯವೆಂದು ತಿಳಿಯದೇ ಅಭಿನಯಕ್ಕೂ ಪ್ರಾಮುಖ್ಯ ಕೊಡಬೇಕೆ? ಕುರೂಪಿಯಾದಾಗ ತನ್ನ ಅಭಿನಯ ಕೌಶಲ್ಯದಿಂದ ಪ್ರೇಕ್ಷಕರ ಮನ ತಣಿಸುವ ಕಲಾವಿದರು ಎಂದಿಗೂ ಇತರ ಬಗೆಯ ಪಾತ್ರಗಳಲ್ಲಿ ಶೋಭಿಸಬಲ್ಲರು ಎಂದು ನನ್ನ ಅಭಿಪ್ರಾಯ.

ಇದಾದ ನಂತರ 'ಮಂಗಳ ಗೌರಿ' ಎಂಬ ಚಿತ್ರದಲ್ಲಿ ದ್ವಿಪಾತ್ರ ವಹಿಸಿದೆ. ಅದರಲ್ಲಿನ 'ರಮಾ' ಎಂಬ ಖಳನಾಯಿಕೆ ಪಾತ್ರ ನನಗೆ ಮೆಚ್ಚಿಗೆಯಾಯಿತು. ರಾಜಕುಮಾರಿಗೆ ಬೇಕಾದ ಗಾಂಭೀರ್ಯವನ್ನೂ ತಾನು ಬಯಸಿದ್ದನ್ನು ಪಡೆಯಲೇಬೇಕೆಂಬ ಹಟವನ್ನೂ ನಾನು ತಕ್ಕಮಟ್ಟಿಗೆ ಚೆನ್ನಾಗಿಯೇ ಅಭಿನಯಿಸಿದ್ದೇನೆಂದು ನಂಬುತ್ತೇನೆ.

ಇನ್ನು 'ವಿಚಿತ್ರ ಪ್ರಪಂಚ' ಚಿತ್ರದ ಮುಗ್ಧ ಹುಡುಗಿ 'ರತ್ನ'ಳ ಪಾತ್ರ. ಮೂರ್ಖತಂದೆಯ 'ಸಾಧ್ವಿ' ಮಗಳಾಗಿ ನನ್ನ ಅಭಿನಯ ಚೆನ್ನಾಗಿತ್ತು 'ಆಶಾ ಸುಂದರಿ'ಯಲ್ಲೂ ನನ್ನ ಪಾತ್ರ ಚೆನ್ನಾಗಿತ್ತೆಂದು ನನ್ನ ಚಿತ್ರ ಪ್ರೇಮಿಗಳು ಕೆಲವರು ಹೇಳಿದ್ದರು... ಆದರೆ ನಾನು ಆ ಚಿತ್ರದ ಒಂದು 'ದೃಶ್ಯ'ವನ್ನೂ ನೋಡದೆ ಇರುವುದರಿಂದ ಹೆಚ್ಚಿಗೆ ಹೇಳಲಾರೆ.

ಇದಾದ ನಂತರ ನಾನು ಮೆಚ್ಚಿದ ನನ್ನ ಪಾತ್ರ 'ನಂದಾದೀಪ'ದ 'ಗೌರಿ'. ಕಷ್ಟದಲ್ಲೇ ಹುಟ್ಟಿ ಬೆಳೆದು ಮುಂದೆ ಸುಖದ ಖನಿಯನ್ನು ಕಾಣಲು ತವಕಿಸಿ. ಸೋತು, ಕೊನೆಗೆ ಅಪವಾದನೆಗೆ ಗುರಿಯಾಗಿ ಅದರಿಂದ ಬಿಡುಗಡೆಯಾಗಬೇಕೆಂದು ತವಕಿಸಿ, ಮರಣದ ಕ್ರೂರ ಕೈಗಳಿಗೆ ಬಿದ್ದ ಗೌರಿ;ಅವಳನ್ನು ನೆನಸಿಕೊಂಡರೆ ಇಂದೂ ನನ್ನ ಕಣ್ಣಲ್ಲಿ ನೀರು ತುಳುಕುತ್ತೆ.

'ಆನಂದ ಬಾಷ್ಪದ' 'ಲಕ್ಷ್ಮಿ'ಯ ಪಾತ್ರವೂ ನನಗೆ ಮೆಚ್ಚು. ಶ್ರೀ ನಾಗೇಂದ್ರರಾಯರ ಉತ್ತಮ ದಿಗ್ದರ್ಶನದಿಂದ ಆ ಪಾತ್ರಕ್ಕೆ ಕಳೆಬಂತು ಎಂದರೆ ಉತ್ಪ್ರೇಕ್ಷೆಯಾಗಲಾರದು. 'ಇದೇ ಮಹಾಸುದಿನ'ದ ನನ್ನ ಪಾತ್ರವೂ ಚೆನ್ನಾಗಿತ್ತೆಂದು ಕಾಣುತ್ತೆ. ಅದನ್ನೂ ನಾನು ಪೂರ್ತಿ ನೋಡದೇ ಇರುವದರಿಂದ ಹೆಚ್ಚು ವಿಮರ್ಶಿಸಲಾರೆ

ನನ್ನ 'ನಾಂದಿ'ಯಲ್ಲಿನ ಮೂಕಿ 'ಗಂಗಾ'ಳ ಪಾತ್ರವೂ ನನಗೆ ಮೆಚ್ಚುಗೆಯಾಗಿದೆ. ಆ ಚಿತ್ರವನ್ನು ನೋಡಿದವರಲ್ಲಿ ಕೆಲವರು ನಾನು ನಿಜವಾಗಿಯೂ ಮೂಕಿಯೇ ಎಂದು ಸಂದೇಹಪಟ್ಟರಂತೆ! ಈ ಸಹಜತೆಗೆ ಕಾರಣ ನಾನು ಹಲವು ಬಾರಿ ಕಿವುಡು ಮೂಕರ ಶಾಲೆಗೆ ಹೋಗಿ ಅವರೊಂದಿಗೆ ಕಾಲ ಕಳೆದುದು ಮಾತ್ರವಲ್ಲ. ಶ್ರೀ ಲಕ್ಷ್ಮೀನಾರಾಯಣ ಅವರ ಉತ್ತಮ ದಿಗ್ದರ್ಶನವೂ ಮುಖ್ಯ ಕಾರಣವಾಗಿತ್ತು.

ನಾನು ಅತಿಯಾಗಿ ಮೆಚ್ಚಿದ ಪಾತ್ರ ಯಾವುದು ಎಂದು ಕಲಾಭಿಮಾನಿಗಳಾದ ನೀವುಗಳು ಕೇಳಬಹುದು. ಅದಕ್ಕೆ ನನ್ನ ಉತ್ತರ "ಇನ್ನೂ ಯಾವುದೂ ಇಲ್ಲ" ಎಂಬುದೇ. ಅತೀ ಉತ್ತಮ ಪಾತ್ರ ಒಂದಕ್ಕಾಗಿ ನಾನೂ ಬಹಳ ವರ್ಷಗಳಿಂದ ಕಾಯುತ್ತಿದ್ದೇನೆ. ಅಂತಹ ಪಾತ್ರ ಒಂದು ನನಗೆ ದೊರೆತು, ಅದು ಚೆನ್ನಾಗಿ ಚಿತ್ರೀಕರಣವಾಗಿ, ಕರ್ನಾಟಕದಲ್ಲೆಲ್ಲಾ ಯಶಸ್ವಿಯಾಗಿ ರಾಷ್ಟ್ರದ ದೊಡ್ಡ ಪ್ರಶಸ್ತಿ ಒಂದು ದೊರಕಬೇಕು ಇದು ನನ್ನ ಆಶೆ. ಇದೇ ನನ್ನ ಮಹದಾಶೆ. ಇದು ಇಂದಲ್ಲ ಎಂದಾದರೂ ಕೈಗೂಡಲೇಬೇಕು. ಕೈಗೂಡುವುದು ಎಂಬ ಭರವಸೆಯೂ ನನಗಿದೆ.

ಕನ್ಯಾದಾನದಲ್ಲಿ ಕಪ್ಪುಹುಡುಗಿಯಾಗಿ ..



ನಾನು ಮೆಚ್ಚಿಕೊಂಡ ನನ್ನ ಪಾತ್ರಗಳು

ರಾಜಕುಮಾರ



"ಸಂತ ತುಕಾರಾಮ" ಚಿತ್ರದಲ್ಲಿ ಸಂತ ತುಕಾರಾಮನಾಗಿ...

"ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ" ಎಂದು ನನ್ನ ಪೂಜ್ಯ ಗುರುಗಳು ನಾಟಕ ಕಲೆಯ ವಿಷಯವಾಗಿ ನುಡಿದ ಮಾತು ನನಗೆ ಆಡಿಗಡಿಗೆ ಜ್ಞಾಪಕಕ್ಕೆ ಬರುತ್ತದೆ. ವಿಭಿನ್ನ ರುಚಿಯ ಜನಸಮುದಾಯಕ್ಕೆಲ್ಲ ರಸದೌತಣ ನೀಡಬಲ್ಲ ಕಲೆಯನ್ನು ಆರಾಧಿಸುವ ಸುಕೃತ ನಾಟಕರಂಗದಲ್ಲಿ ದುಡಿಯುತ್ತಿದ್ದ ನನಗೆ ಲಭ್ಯವಾಗಿ ಅನೇಕ ಕ್ಲಿಷ್ಟ ಸಮಸ್ಯೆಗಳ ಮಧ್ಯೆ ಸಮಾಧಾನ ನೀಡುತ್ತಿತ್ತು ನಾಟಕರಂಗ ನನಗೆ ಎಂದೂ ಸ್ಫೂರ್ತಿಯ

ಕೇಂದ್ರ. ನಾಟಕಗಳಲ್ಲಿ ನಾನು ಎಲ್ಲ ಪಾತ್ರಗಳನ್ನು ಮೆಚ್ಚಿ ಅಭಿನಯಿಸುತ್ತಿದ್ದೆ.

ಈಗ ಚಿತ್ರರಂಗ ನನ್ನನ್ನು ಮತ್ತೊಂದು ವಿಚಿತ್ರ ಕಲಾತ್ಮಕ ಜಗತ್ತಿಗೆ ಒಯ್ದಿದೆ. ಇದರಲ್ಲಿ ನಾಟಕದ ಅನಿರ್ವಚನೀಯ ಆನಂದಕ್ಕೆ ಎಡೆ ಇಲ್ಲ.

ಕೃತಕ ವ್ಯಾವಹಾರಿಕ ಸಂಪರ್ಕವೇ ಹೆಚ್ಚು ನಿಜವಾದ ನಟನಿಗೂ ಇಲ್ಲಿ ವ್ಯಾಪಾರೀ ಮನೋಭಾವದ ಸಂಕುಚಿತ ದೃಷ್ಟಿ ಉಂಟಾಗುತ್ತದೆ. 'ಸ್ಟಾರ್ಟ್-ಕಟ್"ಗಳ ಕಟ್ಟು ಕಟ್ಟಲೆಯಲ್ಲಿ ಸೀಮಿತವಾದ ಕಲಾವಿದನ ಸ್ವಾತಂತ್ರ್ಯ, ಪಕ್ಷಿಸಿನ ಸಿಂಹದ ಸ್ವಾತಂತ್ರ್ಯದಷ್ಟೇ ಬಾಧಿತವಾದದ್ದು ಇದರಲ್ಲೂ ಭಾವಾಭಿನಯಕ್ಕೆ ಪ್ರಾಶಸ್ತ್ಯವಿಲ್ಲದೇ ಇಲ್ಲ ಆದರೆ ಸೂತ್ರಧಾರನ ಕೀಲುಗೊಂಬೆ! ಅವನು ಆಡಿಸಿದಷ್ಟೇ ಆಡುವಂತೆ ನಡೆದುಕೊಳ್ಳಬೇಕಾಗುತ್ತದೆ ಭಾವಾವೇಶದಿಂದ ಅಭಿನಯಿಸುವಾಗಲೂ ಯಾವುದೋ ತಾಂತ್ರಿಕ ಅಡಚಣೆ, ಇಲ್ಲವೆ ಸೂತ್ರಧಾರರ ಸೂಚನೆ, ಸ್ಫೂರ್ತಿ ಭಂಗ ಮಾಡಬಹುದು.

'ಷಾಟ್' ವಿಭಜನೆಯ ಪ್ರಕಾರ ತೆಗೆಯಲಾಗುವ ಮಾತುಗಾರಿಕೆಯಲ್ಲಾಗಲೀ. ಅಭಿನಯದಲ್ಲಾಗಲೀ ಏಕಸೂತ್ರತೆ ಇರಲು ಪ್ರಯತ್ನಿಸುವುದು ಕಲಾವಿದನ ಶ್ರಮದಾನದ ನಿದರ್ಶನವಾಗಿದೆಯೇ ಹೊರತು ಕಲಾತ್ಮಕ ನಿರೂಪಣೆಯ ಫಲವಾಗಿಲ್ಲ. ಈ ಶ್ರಮದಲ್ಲೂ ಕಲೆಗಾರಿಕೆ ಹೊರಹೊಮ್ಮಿದರೆ ಅದು ಆ ಕಲಾವಿದನ ಪೂರ್ವಪುಣ್ಯ.



"ರಾಘವೇಂದ್ರ ಮಹಾತ್ಮೆ"ಯಲ್ಲಿ, ಗುರುರಾಘವೇಂದ್ರರ ಪಾತ್ರದಲ್ಲಿ

ಮಾರುಕಟ್ಟೆಗೆ ಬೇಕಾಗುವ ಸರಕುಗಳನ್ನು ತಯಾರಿಸುವ ನಿರ್ಮಾಪಕರಲ್ಲಿ ನಾವು ಕೇವಲ ಆರ್ಥಿಕ ತೃಪ್ತಿಗಾಗಿ ದುಡಿಯು ಬೇಕೇ ವಿನಾ ಆತ್ಮ ತೃಪ್ತಿಯಾಗುವ ಕಲಾಪ್ರದರ್ಶನಕ್ಕಲ್ಲ.

ನಾನು ಚಿತ್ರಪ್ರಪಂಚವನ್ನು ಪ್ರವೇಶಿಸಿದಂದಿನಿಂದ ಇಂದಿನ ವರೆಗೆ ಅಭಿನಯಿಸಿರುವ ಎಲ್ಲ ಬಗೆಯ ಪಾತ್ರಗಳನ್ನೂ ಕನ್ನಡ ಚಿತ್ರ ರಸಿಕರು ಮೆಚ್ಚಿದ್ದಾರೆಂದು ಅವರ ಪ್ರತಿಕ್ರಿಯೆಗಳಿಂದ ತಿಳಿದುಬರುತ್ತದೆ. ಇದಕ್ಕೆ ನಾನು ಆ ಜನತಾ ಜನಾರ್ದನನ್ನ ಎಷ್ಟು ವಂದಿಸಿದರೂ ಸಾಲದು. ಇದು ನಮ್ಮ ಜನ ನನ್ನಲ್ಲಿಟ್ಟಿರುವ ಅಭಿಮಾನದ ಪ್ರತೀಕ. ನನ್ನ ಭಾಗ್ಯ ವಿಧಾತರ ಕೃಪಾವಿಶೇಷ.

ಈ ಪಾತ್ರಾಭಿನಯಗಳಲ್ಲಿ ಕೆಲವು ಪಾತ್ರಗಳು ನನ್ನನ್ನು ವ್ಯಾಪಾರೀ ಜಗತ್ತಿನಿಂದ ಕಲಾತ್ಮಕ ಜಗತ್ತಿಗೆ ಒಯ್ದು ಚಿತ್ರ ರಂಗದಲ್ಲೂ ಕಲಾಮಾತೆಗೆ ಅಳಿಲು ಸೇವೆ ಮಾಡುವ ಸೌಭಾಗ್ಯ ದೊರಕಿಸಿದವು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ.

ನಾನು ಅಭಿನಯಿಸಿದ ಆ ಕೆಲವು ಪಾತ್ರಗಳೆಂದರೆ ರಣಧೀರ ಕಂಠೀರವ, ಸಂತತುಕಾರಾಮ, ಸರ್ವಜ್ಞಮೂರ್ತಿ ಹಾಗೂ ಮಂತ್ರಾಲಯ ಮಹಾತ್ಮೆಯ ಶ್ರೀ ರಾಘವೇಂದ್ರರ ಪಾತ್ರ

ರಣಧೀರ ಕಂಠೀರವರು ಧೀರೋದಾತ್ತ ನಾಯಕ. ಆತನ ಬಗ್ಗೆ ಮೈಸೂರು ಚರಿತ್ರೆಯಲ್ಲಿ ಓದಿದಾಗಲೆಲ್ಲ ನನಗೆ ರೋಮಾಂಚನವಾಗುತ್ತಿತ್ತು. ಆ ಪಾತ್ರವನ್ನು ಅಭಿನಯಿಸುವ ಅವಕಾಶ ದೊರೆತದ್ದು ನನ್ನ ಪುಣ್ಯವೆಂದೇ ನನ್ನ ಭಾವನೆ. ಕೆಸರಿನ ಕಮಲದಂತೆ ಸಂಸಾರದ ಕಲ್ಮಷಕ್ಕೆ ಅಂಟಿಯೂ ಪರಮಾತ್ಮನ ಸೇವೆಯಲ್ಲಿ ಪವಿತ್ರ ಪದ್ಮದಂತೆ ಉಳಿದ ಸಂತ ತುಕಾರಾಮ ಪಾತ್ರ ನನಗೆ ಮೆಚ್ಚಿಗೆಯಾಯಿತು.

ಅಗ್ನಿಯಂತೆ ಪ್ರಜ್ವಲಿಸಿ, ಜ್ಯೋತಿಯಂತೆ ಪ್ರಕಾಶಿಸಿದ ಸರ್ವಜ್ಞಮೂರ್ತಿಯ ಪಾತ್ರ ನನ್ನ ಮೆಚ್ಚಿನ ಮತ್ತೊಂದು ಪಾತ್ರ.

ಇವೆಲ್ಲಕ್ಕಿಂತಲೂ ನನ್ನನ್ನು ತನ್ನ ಮಂತ್ರಶಕ್ತಿಯಲ್ಲಿ ಲೀನನಾಗಿಸಿಕೊಂಡು ಕರುಣಾಳು ಬೆಳಕಿನಂತೆ ಮುನ್ನಡೆಸಿದ ಶ್ರೀ ರಾಘವೇಂದ್ರ ಗುರುವರ್ಯರ ಪಾತ್ರ ನನ್ನ ಕಲಾಜೀವನದ ಪರಮ ಭಾಗ್ಯವೆಂದು ಶ್ರೀಗುರುಗಳನ್ನು ಸ್ಮರಿಸಿ ಹೇಳುತ್ತೇನೆ.

ಇಂದಿನ ಕನ್ನಡ ಚಿತ್ರಗಳು

ವಿಜಯನಾರಸಿಂಹ



ತೂಗುದೀಪದಲ್ಲಿ ರಾಜಕುಮಾರ— ಲೀಲಾವತಿ



"ಸುಬ್ಬಾಶಾಸ್ತ್ರಿ"ಯಲ್ಲಿ ಒಂದು ದೃಶ್ಯ

ಕನ್ನಡ ಚಿತ್ರರಂಗ ವರ್ಷದಿಂದ ವರ್ಷಕ್ಕೆ ಪ್ರಗತಿಯನ್ನು ಯಾವ ಮಟ್ಟದಲ್ಲಿ ಸಾಧಿಸಿದೆ? ಎಂದರೆ ಸಿಗುವ ಉತ್ತರ ಒಂದೇ. ತಾಂತ್ರಿಕ ಮೌಲ್ಯಗಳಿಂದ ಎಂಬುದು ಇದೂ ಕೆಲವು ಚಿತ್ರಗಳಲ್ಲಿ ಮಾತ್ರ ಎಂದು ಸಂಕೋಚದಿಂದ ನುಡಿಯಬೇಕಾಗಿದೆ. ತಾಂತ್ರಿಕ ಮೌಲ್ಯಗಳು ಹೆಚ್ಚುವುದು ಪ್ರಗತಿಸೂಚಕವೇ ಆದರೂ ಚಿತ್ರದ ಆರ್ಥಿಕ ಯಶಸ್ಸಿಗೆ ಎಷ್ಟು ನೆರವಾಗಿದೆ? ಎನ್ನುವುದು ಮುಖ್ಯ ಪ್ರಶ್ನೆ. ಸುಸಂಸ್ಕೃತ ಪ್ರೇಕ್ಷಕರು ಮೆಚ್ಚುವ ತಾಂತ್ರಿಕ ಮೌಲ್ಯಗಳನ್ನು ಸಾಮಾನ್ಯ ಪ್ರೇಕ್ಷಕ ಮೆಚ್ಚಲಾರ ಅಥವಾ ಮೆಚ್ಚಿಕೊಳ್ಳುವ ಸಾಮರ್ಥ್ಯ ಪಡೆದಿರಲಾರ. ಸಾಮಾನ್ಯ ಪ್ರೇಕ್ಷಕನಿಗೆ ಮೆಚ್ಚಿಕೆಯಾಗದ ಚಿತ್ರಗಲ್ಲಾಪೆಟ್ಟಿಗೆ ತುಂಬಲಾರದು. ಇದು ಆರ್ಥಿಕ ಅತೃಪ್ತಿಗೆ ಕಾರಣವಾಗುತ್ತದೆ.

ಬಿಡುಗಡೆಯಾದ ಚಿತ್ರಗಳು

ಕಳೆದ ಜನವರಿಯಿಂದ ಬಿಡುಗಡೆಯಾಗಿರುವ ಚಿತ್ರಗಳಾದ ತೂಗುದೀಪ, ಎಂದೂ ನಿನ್ನವನೆ, ಮಮತೆಯ ಬಂಧನ, ಕಠಾರಿವೀರ, ಮಹಾಶಿಲ್ಪಿ, ಬದುಕುವದಾರಿ ದುಡ್ಡೇ ದೊಡ್ಡಪ್ಪ, ಪ್ರೇಮಮಯಿ, ದೇವಮಾನವ ಬಾಲನಾಗಮ್ಮ, ರಾಘವೇಂದ್ರ ಮಹಾತ್ಮೆ, ಸಂಗೊಳ್ಳಿ ರಾಯಣ್ಣ, ಸುಬ್ಬಾಶಾಸ್ತ್ರಿ ಲವ್ ಇನ್ ಬ್ಯಾಂಗಳೂರ್, ಕಿಲಾಡಿರಂಗ ಎಮ್ಮೆ ತಮ್ಮಣ್ಣ ಮುಂತಾದ ಚಿತ್ರಗಳಲ್ಲಿ ಎಷ್ಟು ಚಿತ್ರಗಳು ನಿರರ್ಥಕವಾದುವು? ಎಷ್ಟು ಚಿತ್ರಗಳು ಸಾರ್ಥಕವಾದುವು? ಈ ಪ್ರಶ್ನೆಯನ್ನು ನಿರ್ಮಾಪಕರೆದುರು ಇರಿಸಿದಾಗ ಸಪ್ಪೆಮೋರೆಗಳನ್ನೇ ಹೆಚ್ಚಾಗಿ ನೋಡಬೇಕಾಗುತ್ತದೆ.



"ಎಮ್ಮೆತಮ್ಮಣ್ಣ"ದಲ್ಲಿ ರಾಜಕುಮಾರ—ಭಾರತಿ

ಉತ್ತಮ ಛಾಯಾಗ್ರಹಣ, ಉತ್ತಮ ಶಬ್ದ ಗ್ರಹಣ, ಉತ್ತಮ ಸಂಕಲನ, ಉತ್ತಮ ಸಂಗೀತ, ಸಂಭಾಷಣೆ ಗೀತೆಗಳು ಇವೆಲ್ಲವೂ ಒಂದು ಕೆಟ್ಟ ಕತೆಯನ್ನು ಪ್ರೇಕ್ಷಕನಿಗೆ ಒಳ್ಳೆಯದನ್ನಾಗಿ ಮಾಡಿತೋರಿಸಲಾರವು. ಬದಲಾಗಿ ಅದರಲ್ಲಿನ ಕೆಟ್ಟತನವನ್ನು ಎತ್ತಿಹಿಡಿಯಬಲ್ಲವು ಇದರಿಂದ ಮತ್ತೊಂದು ಅಂಶವೂ ವ್ಯಕ್ತವಾಗುತ್ತದೆ. ಅದೇನೆಂದರೆ ಚಿತ್ರಕ್ಕೆ ಜೀವನಾಡಿ ಕತೆ ಎಂಬುದು. ನಮ್ಮಲ್ಲಿ ಉತ್ತಮಕತೆಗಳಿಗೆ ಮಾತ್ರ ಪ್ರೋತ್ಸಾಹ ಎಂಬುದು ಖಚಿತ.

ಎಂಥ ಚಿತ್ರಗಳು ಬರಬೇಕು?

ಈ ವರ್ಷದಲ್ಲಿ ಆರ್ಥಿಕ ಯಶಸ್ಸನ್ನು ಪಡೆದ ಚಿತ್ರಗಳೆಂದರೆ "ದುಡ್ಡೇ ದೊಡ್ಡಪ್ಪ" ಹಾಗೂ "ಬದುಕುವ ದಾರಿ" ಇದರಲ್ಲಿ ಒಂದು ಸ್ವತಂತ್ರ ಮತ್ತೊಂದು ಅನುವಾದ ಈ ಎರಡು ಚಿತ್ರಗಳಲ್ಲಿ "ದುಡ್ಡೇ ದೊಡ್ಡಪ್ಪ" ನೀತಿ ಪ್ರಧಾನಕತೆಯಾದರೂ ಮನರಂಜಿಸುವ ರಸಘಟ್ಟಗಳ ಚಿತ್ರ "ಬದುಕುವದಾರಿ" ಅಸಂಬದ್ಧ ಪ್ರಲಾಪವಾದರೂ ಮನರಂಜನೆಯ ಮೂಲಸೂತ್ರಗಳನ್ನು ತೃಪ್ತಿಪಡಿಸುವ ಚಿತ್ರ. ಬಿಡುಗಡೆಯಾದ ಈ ಎಲ್ಲ ಚಿತ್ರಗಳಲ್ಲೂ ನೀತಿ ಹಾಗು ಮನರಂಜನೆಯ ಸಾಮರಸ್ಯ ಬೇಕೆಂಬ ಅಂಶ ಸ್ಥೂಲವಾಗಿ ಪ್ರಕಟವಾಗಿದೆ.

ಪ್ರಗತಿಯಲ್ಲಿರುವ ಚಿತ್ರಗಳು

"ಸಂಧ್ಯಾರಾಗ", "ಬೆಳ್ಳಿಮೋಡ", "ಮೋಹಿನಿ ಭಸ್ಮಾಸುರ" "ಸತಿ ಸುಕನ್ಯಾ", "ಕನ್ನಿಕಾ ಪರಮೇಶ್ವರಿ'ಕಥಾ", "ಭಾಗೀರಥಿ", "ಪದವೀಧರ", "ಮರೆಯದ ಮನಸ್ಸು". "ಅನುರಾಧ", "ಮುದ್ದುಮೀನ", "ಸೋಡಿನ ಕಿಡಿ" ಇವೇ ಮುಂತಾದ ಚಿತ್ರಗಳು ಈಗ ಪ್ರಗತಿಯಲ್ಲಿವೆ.

ಸರ್ಕಾರದ ನೆರವು

ಪ್ರಗತಿಯಲ್ಲಿರುವ ಈ ಚಿತ್ರಗಳಲ್ಲಿ "ಮರೆಯದ ಮನಸ್ಸು", "ಮುದ್ದು ಮೀನ" ಮತ್ತು "ಸೋಡಿನ ಕಿಡಿ" ಮೈಸೂರ್ ರಾಜ್ಯದಲ್ಲಿ ತಯಾರಾಗುತ್ತಿವೆ ಈ ಚಿತ್ರಗಳ ತಯಾರಿಕೆ ಕನ್ನಡ ನಾಡಿನಲ್ಲಿ ತಯಾರಾಗುವ ಮೂಲ ಕಾರಣ ಸರ್ಕಾರದ ಮೂವತ್ತು ಸಾವಿರ ರೂಪಾಯಿಗಳ ನೆರವನ್ನು ಪಡೆಯುವುದೇ ಆಗಿದೆ. ಇದು ಸ್ತುತ್ಯ ಪ್ರಯತ್ನವೇ ಆದರೂ ಅನೇಕ ಸಾಧಕ ಬಾಧಕಗಳು ಈ ತಯಾರಿಕೆಗಳು ಬಿಡುಗಡೆಯಾದ ಮೇಲೆಯೇ ನಿರ್ಧರಿಸಬೇಕಾಗಿವೆ.

ಕನ್ನಡ ಚಿತ್ರರಂಗ ಸ್ವಪರಿಪೂರ್ಣವಾದ ಸ್ಟುಡಿಯೋ ಮತ್ತು ನಿರ್ಮಾಣ ಸೌಲಭ್ಯಗಳನ್ನು ಪಡೆದು, ಕನ್ನಡನಾಡಿನಲ್ಲೇ ಚಿತ್ರಗಳನ್ನು ಅಪವ್ಯಯವಿಲ್ಲದೆ ತಯಾರಿಸಿದರೆ ಹೆಚ್ಚು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ.

ಸರ್ಕಾರದ ಹೊಣೆ

ಸರ್ಕಾರ ಕನ್ನಡ ಚಿತ್ರರಂಗದ ಬಗ್ಗೆ ಆಸಕ್ತಿ ವಹಿಸಿರುವುದು ಸೂಕ್ತವೇ ಆಗಿದೆ. ಆದರೆ ಹೆಚ್ಚು ಸಹಕಾರಿಯಾಗಿ ಹಂಚಿಕೆ, ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರಗಳಿಗೆ ಪ್ರಾಧಾನ್ಯ ಇವುಗಳನ್ನು ಸುವ್ಯವಸ್ಥಿತಗೊಳಿಸಿದರೆ ಕನ್ನಡ ಚಿತ್ರರಂಗ ಎಲ್ಲ ವಿಧದಲ್ಲೂ ಆದರ್ಶವಾಗುತ್ತದೆ. ಕನ್ನಡ ನಾಡಿನ ಉಚ್ಚ ಸಂಸ್ಕೃತಿ, ಕಲಾವಿಕಾಸ, ಚಿತ್ರ ಮಾಧ್ಯಮದಿಂದ ಸಾಧಿತವಾಗುತ್ತದೆ. ಇದಕ್ಕಾಗಿ ಕನ್ನಡಿಗರೆಲ್ಲರ ದನಿಗಳು ಒಂದುಗೂಡಬೇಕಾಗಿವೆ.



"ನಾಂದಿ"ಯಲ್ಲಿ ಒಂದು ದೃಶ್ಯ

ನಮ್ಮ ಅಸಂಖ್ಯಾತ ಗ್ರಾಹಕರಿಗೆ ದೀಪಾವಳಿಯ ಶುಭಾಶಯಗಳು

ಕೆಂಚಾಂಬ ಟ್ರೇಡಿಂಗ್ ಕಂ.

ಮುಗ್ಗೆ, ಆಲೂರ ತಾಲೂಕ, ಹಾಸನ ಡಿಸ್ಟ್ರಿಕ್ಟ

ಬ್ರ್ಯಾಂಚ: ಸಂತೆಪೇಟೆ, ಹಾಸನ

ಶಾ. ವ್ಯಾಲೆಸ ಆ್ಯಂಡ್ ಕಂಪನಿ ಲಿಮಿಟೆಡ್

ಏಜಂಟರು.

ಪ್ರೊಪ್ರಾಯ್ಟರ:- ಕೆ. ಎಂ. ಹಿರೇಗೌಡ ಮತ್ತು

ಪಾಲುದಾರರು

ನಮ್ಮಲ್ಲಿ ನಕ್ಷತ್ರ ಗುರ್ತಿನ ಎಲ್ಲಾ ತರದ ರಸಾಯನಿಕ ಮಿಶ್ರಣ ಗೊಬ್ಬರಗಳು ಮತ್ತು ದನಗಳಿಗೆ ಬೇಕಾಗುವ ಮೇವು ವ ಕೋಳಿಗೆ ಬೇಕಾಗುವ ಮೇವುಗಳು ಸ್ಪ್ರೇಯರಗಳು ವ ಕ್ರಿಮಿನಾಶಕಗಳು ಸದಾಕಾಲ ಸಿಗುತ್ತೆ.

ಕೆಂಚಾಂಬ ಬ್ರ್ಯಾಂಡ ಕಂ.

ಕೆ. ಎ. ನಂಜಪ್ಪಗೌಡ, ಕೆ. ಎಸ್. ಮಲ್ಲಪ್ಪ ಮತ್ತು

ಪಾಲುದಾರರು

ಮುಗ್ಗೆ, ಆಲೂರ ತಾಲೂಕ ಹಾಸನ ಡಿಸ್ಟ್ರಿಕ್ಟ

ನಮ್ಮ ಕೆಂಚಾಂಬ ಟ್ರೇಡಿಂಗ್ ಕಂಪನಿ ಟ್ರಾನ್ಸ್‌ಪೋರ್ಟ ಪ್ರತಿನಿತ್ಯ ಸುರಕ್ಷಿತವಾಗಿ ಸರಕು ಸಾಗಾಣಿಕೆಗೆ ಸದಾ ಕಾಲ ತಮ್ಮ ಸೇವೆಗೆ ಸಿದ್ಧವಿದೆ.

ನಮ್ಮ ಶ್ರೀ ಕೆಂಚಾಂಬ ರೈಸ್ ಮಿಲ್‌ನಲ್ಲಿ ಸದಾಕಾಲ ಯೋಗ್ಯ ದರದಲ್ಲಿ ಭತ್ತವನ್ನು ಹೆಚ್ಚಿಗೆ ಇಳುವರಿಯಲ್ಲಿ ಅಕ್ಕಿ ತಯಾರ ಮಾಡಿ ಕೊಡುತ್ತೇವೆ. ಮತ್ತು ಹಿಟ್ಟನ್ನು ತಯಾರಿಸಲಾಗುತ್ತೆ.

ನಮ್ಮ ಲಾರಿ ಟ್ರಾನ್ಸಪೋರ್ಟ ಸದಾಕಾಲ ತಮ್ಮ ಸೇವೆಗೆ ಸಿದ್ಧವಿದೆ

ಪ್ರೊಪ್ರಾಯ್ಟರ:- **K. A. ನಂಜಪ್ಪಗೌಡ ಆ್ಯಂಡ್ ಬ್ರದರ್ಸ** ಕಾಫಿ ಪ್ಲಾಂಟರ ಬಳಾರಕೊಪ್ಪಲ ಮುಗ್ಗೆ ಎಸ್ಟೇಟ

Deepavali Greetings

Gram: **Sivashankar**
Phone: **116, 130**
Res: **451**

NPK FERTILISERS · DOUBLE HORSE BRAND · SHAMANUR SHIVASHANKRAPPA DAVANGERE

ಶ್ಯಾಮನೂರ ಶಿವಶಂಕರಪ್ಪ

"ಡಬ್ಬಲ್ ಹಾರ್ಸ್" ಬ್ರ್ಯಾಂಡಿನ

ಮಿಶ್ರಣ ಗೊಬ್ಬರಗಳ ತಯಾರಕರು.

ವಿಜಯಲಕ್ಷ್ಮಿ ರೋಡ, ದಾವಣಗೆರೆ

ಪಾರ್ಟನರ್ : ಶ್ಯಾಮನೂರ ಕಲ್ಲಪ್ಪ ಆ್ಯಂಡ್ ಸನ್ಸ್

ಕಲ್ಲೇಶ್ವರ ಇಂಡಸ್ಟ್ರೀಸ್

ರೈತಬಾಂಧವರಲ್ಲಿ ವಿನಂತಿ

ನಮ್ಮಲ್ಲಿ ತಯಾರಾಗುವ ಉತ್ತಮ ದರ್ಜೆಯ "ಡಬ್ಬಲ್ ಹಾರ್ಸ್" ಬ್ರ್ಯಾಂಡಿನ ಮಿಶ್ರಣ ಗೊಬ್ಬರಗಳನ್ನು ಉಪಯೋಗಿಸಿ ಹೆಚ್ಚು ಬೆಳೆ ಬೆಳೆಯಬೇಕಾಗಿ ವಿನಂತಿ.

ಹೊಸ ದೀಪಾವಳಿಯು ನಮ್ಮ ಗ್ರಾಹಕರಿಗೆ ಸುಖದ ಸುಗಂಧ ಬೀರಲಿ

Tel: **Sivashankar** Phone: **Shop 116**
Res: Ext Res ; **451**

Shamanur Kallppa & Sons

General Merchants & Commission Agents

Vijayalaxmi Road, Davangere City

Props :

Manjunath Express &
Kalleswar Express

Manufacturers :

Best Boora Suger Candy Kalpi

ಶ್ಯಾಮನೂರ ಕಲ್ಲಪ್ಪ & ಸನ್ಸ್

ಜನರಲ್ ಮರ್ಚಂಟ್ಸ್ ಮತ್ತು ಕಮಿಶನ್ ಏಜಂಟ್ಸ್,

ದಾವಣಗೆರೆ ಸಿಟಿ.

ದೀಪಾವಳಿಯ ಶುಭಾಶಯಗಳು

ಪಾವರಲೂಮು ಹಾಗೂ ಹ್ಯಾಂಡಲೂಮು ಕಾರಖಾನದಾರರಿಗೆ

ನಮ್ಮಲ್ಲಿ ಎಲ್ಲ ಬಗೆಯ ಮಿಲ್ ಸ್ಟೋರ್ಸ ಸಾಮಾನುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ ಉತ್ತಮ ಇಂಗ್ಲೀಷ ಧೋಡಾ, ಪಿಕರ್ಸ, ವಹಿಪೆಟ, ತಾರೀ, ಹಾಗೂ ಸೂತಿಸೆಟ್, ಕ್ಯಾನವಾಸ ಲೇದರ ಪಟ್ಟಾ ಹಾಗೂ ದೇಶಿ ಕಂಪನಿಯ ಪಾವರ ಮಗ್ಗದ ಸ್ಪೇರಪಾರ್ಟ, ಇಂಜನ ಮತ್ತು ವ್ಹಿ. ಬೆಲ್ಟ ಮಗ್ಗಕ್ಕೆ ಬರುವಂಥವು ದೊರೆಯುತ್ತವೆ.

ಒಮ್ಮೆ ಖರೀದಿ ಮಾಡಿ ಪರೀಕ್ಷಿಸಿರಿ.

ಜನತಾ ಮಿಲ್ ಸ್ಟೋರ್ಸ
ಈಚಲಕರಂಜಿ (ಜಿ. ಕೊಲ್ಹಾಪೂರ)

Janata Mill Stores
Ichalkaranji (Kolhapur)
Phone 140

ದೀಪಾವಳಿಯು ಸರ್ವರಿಗೂ ಸುಖಸಂಪದವನ್ನೀಯಲಿ !

ನವಕರ್ನಾಟಕದ ನವಯುವತಿಯರಿಗೆ ಒಂದು ಕಿವಿಮಾತು

ಬೆಡಗುಗಾತಿಯರ ಬೆಡಗನ್ನು ಬೆಳಗಿಸುವ ೮೦ ನಂಬರಿನ ಲೋಕಪ್ರಿಯವಾದ ಸ್ಕರ್ಟಬಾರ್ಡರಿನ ಪತ್ತಲುಗಳು ಸಿಗುತ್ತವೆ

ಭರಪೂರ ಉದ್ದ ಅಗಲತೆ, ಹೊಸ ಡಿಝಾಯಿನ್ ಹಾಗೂ ಪಕ್ಕಾ ಬಣ್ಣಗಳಿಗೆ

ನವಜೀವನ ಸಾಡಿ ವರ್ಕ್ಸ
ಈಚಲಕರಂಜಿ (ಜಿ ಕೊಲ್ಹಾಪೂರ)

NAVAJEEVAN SADI WORKS
Ichalkaranji (Kolhapur)

Office - Phone No. 67 Factory Phone No. **160**

ಸ್ತ್ರೀಯರ ಗಮನಕ್ಕೆ

ನಿಮಗಾಗಿ ಬೇಕಾಗುವ ೫೦ ಪತ್ತಲಗಳು ಹಾಗೂ ಆಧುನಿಕ ಮಾದರಿಯ ಸೀರೆಗಳು

೬೦ × ೬೦ ೪೯ × ೫೦
೯ × ೪೫. ೭ × ೪೦

ಕಪ್ಪು ಪ್ಲೇನ್
ಗ್ಯಾರಂಟಿ ಬಣ್ಣಗಳ ಸೀರೆಗಳು

ದೀಪಾವಳಿಯು ನಮ್ಮ ಗ್ರಾಹಕವೃಂದಕ್ಕೆ ಸುಖದಾಯಕವಾಗಲಿ !

ಶ್ರೀ ಕೃಷ್ಣ ಹ್ಯಾಂಡಲೂಮ್ ಇಂಡಸ್ಟ್ರೀಜ್
ಈಚಲಕರಂಜಿ (ಜಿ. ಕೊಲ್ಹಾಪೂರ)

Shri Krishna Handloom Industries
ICHALKARANJI (Kolhapur)



ಈ ದೀಪಾವಳಿಯು ಎಲ್ಲ ಗ್ರಾಹಕರಿಗೂ ಸುಖಪ್ರದವಾಗಲಿ !

ಕಾಮಿನಿಯರ ಒನಪು ಒಯ್ಯಾರಕ್ಕಾಗಿ ಒಳ್ಳೇ ಆಕರ್ಷಕ

೮೦ ನಂಬರಿನ ಮೀನಾ ಪತ್ತಲು

ಭರಪೂರ ಉದ್ದ ಅಗಲಕ್ಕೆ ಪಕ್ಕಾ ಬಣ್ಣ-ತಾಳಿಕೆ ಇವುಗಳಲ್ಲಿ ಮಿಗಿಲಾದದ್ದು

ವಿವೇಕಾನಂದ ಹ್ಯಾಂಡಲೂಮ್ ಇಂಡಸ್ಟ್ರೀಜ್ & ವೀವ್ಹಿಂಗ್ ಮಿಲ್ಸ

ಈಚಲಕರಂಜಿ .... (ಕೊಲ್ಹಾಪೂರ) .... ಫೋನ್: ೬೮

Vivekanand Handloom & Weaving Mills
Ichalkaranji .. (Kolhapur) .. Phone: 68

ನಮ್ಮ ಯಾವತ್ತೂ ಗ್ರಾಹಕರಿಗೂ ಹಿತೈಷಿಗಳಿಗೂ ಮಿತ್ರರಿಗೂ ದೀಪಾವಳಿಯು ಸುಖಪ್ರದವಾಗಲಿ?

KANAN DEVAN TEA

ಕೆ. ಎ. ಜೋಶಿ

ಪ್ರಿನ್ಸಿಪಲ್ ಹೋಲಸೇಲ ಡೀಲರ್


ಕಾನನ ದೇವನ ಚಹಾ
ಕೊಲ್ಹಾಪೂರ ಹಾಗೂ ರತ್ನಾಗಿರಿ
— ಜಿಲ್ಹೆಗಳಿಗೆ —

ಲಕ್ಷ್ಮೀರೋಡ್ — ಕೊಲ್ಹಾಪುರ
ಪೋ. ಬಾ. ನಂ. 2 * ಫೋ ನಂ. 261
ಟೆಲಿಗ್ರಾಂ KING TEA

ದೀಪಾವಳಿಯ ಶುಭಾಶಯಗಳು !



VIJAYA SWEET MART
Durgad Bail HUBLI. Phon 2917



Tel: Bharathi	Telephone: 217

ನಮ್ಮಲ್ಲಿ ಆಧುನಿಕ ಮಿಷನ್‌ಗಳಿಂದ ಡಬ್ಬಲ್

ಫ್ಲ್ಯಾಗ್ ಮಾರ್ಕ್

ಭಾರತಿ ಬ್ರ್ಯಾಂಡ್ ಹಂಚುಗಳೂ, ಬಾಗಿಲು ಕಿಟಕಿ ಫರ್ನಿಚರ್

ಮತ್ತು

ಪ್ಯಾಕಿಂಗ್ ಬಾಕ್ಸ್‌ಗಳೂ

ತಯಾರಾಗುತ್ತವೆ.

ನಮ್ಮ ಇಂಜನಿಯರಿಂಗ್ ವರ್ಕ್‌ಶಾಪ್‌ನಲ್ಲಿ

ಎಲ್ಲಾ ಮಿಷನ್‌ಗಳೂ ಮಿಷನ್ ಬಿಡಿಭಾಗಗಳನ್ನು

ರಿಪೇರಿ ಮಾಡುತ್ತೇವೆ

ವಿಚಾರಿಸಿರಿ:

ಭಾರತಿ ಟೈಲ್ ಫ್ಯಾಕ್ಟರಿ ಮತ್ತು ಸಾ ಮಿಲ್ಸ್


ಪೋಸ್ಟ್ ಬಾಕ್ಸ ನಂ. ೩

ಹಾಸನ

ಸರ್ವರಿಗೂ ದೀಪಾವಳಿಯ ಶುಭಾಶಯಗಳು

ದೀಪಾವಳಿಯು ನಮ್ಮ ಗ್ರಾಹಕ ವೃಂದಕ್ಕೆಲ್ಲ ಹರ್ಷದಾಯಕವಾಗಲಿ

ಮಹಾರಾಷ್ಟ್ರ ಸರಕಾರದಿಂದ ತಗಾಯಿ ಮೇಲೆ ಮಂಜೂರಾದ ಹಾಗು ಪರದೇಶಕ್ಕೆ ನಿರ್ಯಾತ ಮಾಡಲ್ಪಡುವ ಕೊಲ್ಹಾಪೂರದಲ್ಲಿ ಏಕಮೇವ



ಡೈಮಂಡ ವರ್ಟಿಕಲ್

ಎಂಜಿನುಗಳು ಹಾಗು

ಪಂಪಿಂಗ್ ಸೆಟ್ಟುಗಳು

೫ ಎಚ್. ಪಿ. ೧೫೦೦

ಆರ್. ಪಿ. ಎಂ.

ಉತ್ಪಾದಕರು : ಡೈಮಂಡ ಇಂಜಿನಿಯರಿಂಗ್ ವರ್ಕ್ಸ

ಶಿವಾಜಿ ಉದ್ಯಮ ನಗರ, ಕೊಲ್ಹಾಪೂರ

ಫೋನ : ೧೧೦೬	॥	ತಂತಿ : DEW

ದೀಪಾವಳಿಯ ಅಭಿನಂದನೆಗಳು

ಬೆಳಗಾವಿಯಲ್ಲಿ ಸರ್ವಶ್ರೇಷ್ಠ ಭವ್ಯ ಹಾಗು ಅತ್ಯಾಧುನಿಕ ನಿವಾಸ ಸ್ಥಳ

ಸತ್ಕಾರ

ಮಾರುತಿಗಲ್ಲಿ, ಬೆಳಗಾವಿ * ಫೋನ: ೫೪೫

ಊಟ-ಉಪಹಾರ ತಂಪಾದ ಪಾನಿಯಗಳು ಇತ್ಯಾದಿ-ಪರಿಪೂರ್ಣ

: ಸತ್ಯಮೇವ ಜಯತೇ :

Triveni Handloom Work

ICHALKARANJI (Kolhapur)

ಅಲ್ಪಾವಧಿಯಲ್ಲಿಯೇ

ಕನ್ನಡನಾಡಿನ ಮನೆಮಾತಾಗಿರುವ

ತ್ರಿವೇಣಿ ಪತ್ತಲಗಳು

ನಯನ-ಮನೋಹರವಾದ ಗ್ಯಾರಂಟೀ ಬಣ್ಣದ

ಭರಪೂರ ಉದ್ದಳತೆಯ

80X80 60X60, 80X60 ರ

ಪ್ಲೇನ್ ಪತ್ತಲಗಳ ಸ್ಪೆಶಾಲಿಸ್ಟರು:

ತ್ರಿವೇಣಿ ಹ್ಯಾಂಡಲೂಮ್ ವರ್ಕ್

ಇಚಲಕರಂಜಿ (ಜಿ ಕೊಲ್ಹಾಪುರ)

ನಮ್ಮ ಗ್ರಾಹಕವೃಂದಕ್ಕೆಲ್ಲ ದೀಪಾವಳಿಯು ಸುಖಪ್ರದವಾಗಲಿ !

ದೀಪಾವಳಿಯ ಹಾರ್ದಿಕ ಅಭಿನಂದನೆಗಳೊಂದಿಗೆ





ಸೇವನೆಯ ಮೊದಲು



ಸೇವನೆಯ ನಂತರ

ಹೋಮಿಯೋಪತಿಯಲ್ಲಿ ಜಯಗಳಿಸಿರಿ

ಅಂಚೆ ಶಿಕ್ಷಣ:— ಅಖಿಲ ಕರ್ನಾಟಕದಲ್ಲಿಯೇ ಹೋಮಿಯೋಪತಿ ವೈದ್ಯ ಶಾಸ್ತ್ರವನ್ನು ಅತಿ ದಕ್ಷತೆ, ವಿಸ್ತೃತವಾಗಿ ಬೋಧಿಸುತ್ತಿರುವ ಅದ್ವಿತೀಯ ಸಂಸ್ಥೆ. ಕನ್ನಡ ಭಾಷೆಯಲ್ಲಿಯೇ ಅಂಚೆ ಮೂಲಕ ಇದನ್ನು ಕಲಿತು ಡಾಕ್ಟರರಾಗಬಹುದು. ಇದು ವರೆಗೂ ಸಾವಿರಾರು ಮಂದಿ ನಮ್ಮ ಸಂಸ್ಥೆಯಲ್ಲಿ ಶಿಕ್ಷಣ ಪಡೆದವರು ಯಶಸ್ವಿಯಾಗಿ ವೈದ್ಯ ವೃತ್ತಿಯನ್ನು ನಡೆಸುತ್ತಿದ್ದಾರೆ

ಕ್ರಮ-ಶಿಕ್ಷಣ ತರಗತಿಗಳು:— ನಾಲ್ಕು ವರ್ಷಗಳ ಕ್ರಮ ಶಿಕ್ಷಣ ತರಗತಿಗಳು ಇದೀಗ ಪ್ರಾರಂಭವಾಗಿವೆ. S. S. L. C. ಉತ್ತೀರ್ಣರಾದವರು ಸೇರಲರ್ಹರು ಸೂಚಿ ಪತ್ರಕ್ಕೆ ಒಂದು ರೂಪಾಯಿ M. O. ಮಾಡಿರಿ

ಪ್ರತ್ಯಕ್ಷ ತರಬೇತಿ ತರಗತಿ:— ಅಂಚೆ ಮೂಲಕ ಹೋಮಿಯೋಪತಿ ಕಲಿತವರಿಗೆ 15 ದಿವಸಗಳು ನೇರವಾಗಿ ಶಿಕ್ಷಣ ಕೊಡಲಾಗುವದು. 13 ನೇ ತರಬೇತಿ ತರಗತಿ ಇದೇ ವರ್ಷ ಡಿಸೆಂಬರ್ 16 ರಿಂದ 30 ವರೆಗೂ ನಡೆಯುವದು ಹೆಚ್ಚಿನ ವಿವರಗಳಿಗೆ ಬರೆಯಿರಿ

ಆಸ್ಪತ್ರೆ:— ಪ್ರತ್ಯಕ್ಷ ತರಬೇತಿ ತರಗತಿಗೆ ಹಾಜರಾದವರಿಂದ ನಮ್ಮ ಸಂಸ್ಥೆಯ ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಚಿಕಿತ್ಸೆ ಮಾಡಿಸಲಾಗುವದು. ಈ ಬಗೆಯ ಸೌಲಭ್ಯ ಮತ್ತಾವುದೇ ಸಂಸ್ಥೆಯಲ್ಲಿ ಇರುವದಿಲ್ಲ

★ ದೀಪಾವಳಿಯ ಶುಭಾಶಯಗಳು ★

ಬಂಧು ಮಾಸ ಪತ್ರಿಕೆ:— ಹೋಮಿಯೋಪಥಿ ಜ್ಞಾನವನ್ನು ಅಧಿಕರಿಸಿಕೊಳ್ಳಲು ಉತ್ತಮ ಮಾರ್ಗದರ್ಶಿನಿ ಪ್ರತಿ ಮಾಸವೂ ವಿನೂತನ ಬಗೆಯ ಲೇಖನಗಳು

ವಾರ್ಷಿಕ ಚಂದಾ 5 ರೂ. ಮಾತ್ರ

ಪುಸ್ತಕಗಳು:— (ಕನ್ನಡಕ್ಕೆ ಅನುವಾದಿಸಲ್ಪಟ್ಟವುಗಳು)

	ಕ್ರಯ	ಅಂಚೆ ವೆಚ್ಚ
ಡಾ. ಡಾನಿಮನ್‌ರ ಆರ್ಗನಾನ್ ಆಫ್ ಮೆಡಿಸಿನ್—	6.00	1.00
ಜೀವರಸಾಯನ ಶಾಸ್ತ್ರ—	5.00	1.00
ತಾಯಿದ್ರವಗಳ ಗುಣಧರ್ಮ ಶಾಸ್ತ್ರ—	2.00	0.75
ತಲೆನೋವು ಮತ್ತು ಚಿಕಿತ್ಸೆ	0.50	0.25

(ಅಚ್ಚಿನಲ್ಲಿ ಲೀಡರ್ಸ್ ಇನ್ ಹೋಮಿಯೋಪತಿಥಿರಪ್ಯೂಟಿಕ್ಸ್)

ಔಷಧಗಳು:— ನಮ್ಮಲ್ಲಿ ಹೋಮಿಯೋಪತಿಯ ತಾಯಿದ್ರವಗಳು, ದ್ರವ ಮಾತ್ರೆಗಳು, ಜೀವರಸಾಯನ, ಲವಣಗಳು, ಟಾನಿಕ್‌ಗಳು, ಅಲ್ಲದೆ ಎಕಾನಾಮಿಕ್ ಹೋಮಿಯೋ ಫಾರ್ಮಸಿಯ ವಿಶೇಷ ತಯಾರಿಕೆಗಳೆಲ್ಲವೂ ಸುಯೋಗ್ಯ ಕ್ರಯಕ್ಕೆ ಲಭಿಸುವವು. ಹೋಮಿಯೋಪತಿ ವೈದ್ಯರಿಗೆ ಮಾತ್ರ ಉಚಿತವಾಗಿ ಕ್ರಯಪಟ್ಟಿ ಕಳುಹಿಸಲಾಗುವದು

ನಮ್ಮಲ್ಲಿ ಶಿಕ್ಷಣ ಪಡೆದು ನೀವೂ ಒಬ್ಬ ಉನ್ನತ ಡಾಕ್ಟರರಾಗಿರಿ.
ಹಳ್ಳಿಗಳಲ್ಲಿ ವೈದ್ಯರ ಕೊರತೆ ನೀಗಿಸಿ, ದೇಶಸೇವೆ ಮಾಡಿ.
ಹೋಮಿಯೋಪತಿಗೆ ಸಂಬಂಧಿಸಿದ ಸಕಲ ವಿವರಗಳಿಗೂ
ನಮ್ಮೊಂದಿಗೆ ವ್ಯವಹರಿಸಿರಿ.

ಡೈರೆಕ್ಟರ್
ಕರ್ನಾಟಕ ಹೋಮಿಯೋಪತಿ ಕಾಲೇಜ್,
(Govt. Regd.)
ಪೋಸ್ಟ್ ಬ್ಯಾಗ್ ನಂ. 4, ಶ್ರೀರಾಮಪುರ್
ಬೆಂಗಳೂರು—21

ದೀಪಾವಳಿಯ ಶುಭಾಶಯಗಳು



H. P. C. ಚಿತ್ರ ಮಂದಿರ

(ಮಲೆನಾಡಿನ ಭವ್ಯ ಚಿತ್ರ ಮಂದಿರ
ಬಾಲರಾಜ ಅರಸ್ ರಸ್ತೆ, ಶಿವಮೊಗ್ಗ

- ಎಲ್ಲಾ ತರಗತಿಯ ಸುಖಾಸನಗಳು.
- R. C. A. ಸೌಂಡ್ ಸಿಸ್ಟಮ್ ಇಂಪಾದ ಧ್ವನಿ
- ನಿರ್ಮಲ ವಾತಾವರಣ. ಇವು ನಿಮಗೆ ಉತ್ತಮ ಮನರಂಜನೆಯನ್ನೊದಗಿಸುತ್ತವೆ.

ಮಾಲೀಕರು :—

H. P. C. ಮೋಟಾರ್ ಸರ್ವಿಸಸ್ ಶಿವಮೊಗ್ಗ

- ಶಿವಮೊಗ್ಗ ಭದ್ರಾವತಿಗಳಿಗೆ ನೇರ ಸಂಪರ್ಕ ಕಲ್ಪಿಸುವ ಆಧುನಿಕ ಸಾರಿಗೆ ಸಂಸ್ಥೆ ಇದೊಂದೇ. ಶಿವಮೊಗ್ಗದಿಂದ ಬೀರೂರು, ಚಿಕ್ಕಮಗಳೂರು, ದಾವಣಗೆರೆ, ಕತ್ತಲಗೆರೆ, ಕುಂದೂರು ಮೊದಲಾದ ಪ್ರಮುಖ ಕೇಂದ್ರಗಳಿಗೆ ನೇರ ಸಂಪರ್ಕವಿರುತ್ತೆ, ಮುಂಚಿತವಾಗಿ ತಿಳಿಸಿದಲ್ಲಿ 'ಸ್ಪೆಷಲ್ ಬಸ್ ವ್ಯವಸ್ಥೆ ಮಾಡಲಾಗುತ್ತದೆ.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಪ್ರೆಸ್ಸಿನಲ್ಲಿ "ಲೋಕಶಿಕ್ಷಣ ಟ್ರಸ್ಟಿ"ನ ಪರವಾಗಿ ವಿ. ಯ. ಜತಾರ ಇವರು ಮುದ್ರಿಸಿ ಪ್ರಕಟಿಸಿದರು.

Licence No. 38 Licensed to post without prepayment
Registered with the Registrar of News Papers of India under No. 3558/57
Regd. No. BG

